ಅಂತರ್‌ರಾಷ್ಟ್ರೀಯ ಮಹಿಳಾ ವರ್ಷದ
ನೆನಪಿನ ವಿಶೇಷ ಸಂಚಿಕೆ

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

# ಸಾಧನೆ

ಸಂಪುಟ 4
ಸಂಚಿಕೆ 4
ಅಕ್ಟೋಬರ್ - ಡಿಸೆಂಬರ್ 1975

# ಸಾಧನೆ

## ಅಂತರ್‌ರಾಷ್ಟ್ರೀಯ ಮಹಿಳಾ ವರ್ಷದ ನೆನಪಿನ ವಿಶೇಷ ಸಂಚಿಕೆ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
**ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು**

**SADHANE:** Kannada Quarterly of the Bangalore University, Bangalore
Vol. 4 No. 4, October–December 1975

*Chief Editor:* Dr. G. S. Sivarudrappa



ವಾರ್ಷಿಕ ಚಂದಾ : ರೂ. 6–00
ರೂ. 4–00 (ವಿದ್ಯಾರ್ಥಿಗಳಿಗೆ)

ಪ್ರಕಾಶಕರು : ಕೆ. ಸಿ. ಶಿವಪ್ಪ
ಉಪ-ನಿರ್ದೇಶಕ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056

ಮುದ್ರಕರು :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560056

## ಪರಿವಿಡಿ

# ಮಹಿಳೆಯನ್ನು ಕುರಿತು

---

**ಆರ್. ಪೂರ್ಣಿಮಾ**

ಮಾನವ ಜನಾಂಗದ ಪ್ರಾರಂಭದ ದಿನಗಳಲ್ಲಿ ಒಟ್ಟಿಗೆ ಬದುಕುವ ಕಲ್ಪನೆಯೇ ಇರಲಿಲ್ಲವಾದ್ದರಿಂದ ಹೆಣ್ಣಿನ ಬಗ್ಗೆ ಪ್ರತ್ಯೇಕ ಭಾವನೆಗಳೇ ಇರಲಿಲ್ಲ. ಆಹಾರ ಹುಡುಕುವಿಕೆ, ಸ್ವರಕ್ಷಣೆ ಎರಡೇ ಮುಖ್ಯವಾಗಿದ್ದಾಗ ಮನುಷ್ಯರ ನಡುವೆ ಭಾವನಾತ್ಮಕ ಸಂಬಂಧಗಳೇ ಅಸ್ಪಷ್ಟವಾಗಿದ್ದವು. ಮುಂದೆ ಮಾನವ ಜನಾಂಗದ ಚರಿತ್ರೆ ವಿವಿಧ ಘಟ್ಟಗಳನ್ನು ಹಾದು ಬರುವಾಗ ಆ ಘಟ್ಟಗಳ ವಿಶಿಷ್ಟ ಲಕ್ಷಣಗಳಿಗೆ, ನಿಯಾಮಕ ಶಕ್ತಿಗಳಿಗೆ ಅನುಗುಣವಾಗಿ ವ್ಯಕ್ತಿಸಂಬಂಧಗಳೂ ಬದಲಾದವು. ಹೆಣ್ಣಿನ ಸ್ಥಾನಮಾನವನ್ನು ಕುರಿತು ಚಾರಿತ್ರಿಕವಾಗಿ ಚರ್ಚಿಸುವಾಗ ಈ ಅಂಶವನ್ನೇ ಆಧಾರವಾಗಿಟ್ಟುಕೊಳ್ಳಬೇಕು. ಏಕೆಂದರೆ, ಸಮಾಜವು ವಿವಿಧ ಘಟ್ಟಗಳಲ್ಲಿ ಬದಲಾಗುವಾಗ, ವ್ಯವಸ್ಥೆಯ ಸಕಲ ಲಕ್ಷಣಗಳನ್ನೂ ಮೈಗೂಡಿಸಿಕೊಂಡಿರುವ ಕುಟುಂಬವೇ ಬದಲಾವಣೆಗೆ ಬಿಂದುವಾಗುತ್ತದೆ. ಕುಟುಂಬದಲ್ಲಿ ಹೆಣ್ಣು ಒಂದು ಅಂಗವಾಗಿರುವುದರಿಂದ, ಅವಳನ್ನು ಕುರಿತ ಚರ್ಚೆಯು ಕುಟುಂಬ, ಸಮಾಜ, ಇವುಗಳ ಹಿನ್ನೆಲೆಯಲ್ಲಿ ನಡೆಯುವುದು ಹೆಚ್ಚು ವೈಜ್ಞಾನಿಕವೂ ಅರ್ಥಪೂರ್ಣವೂ ಆಗುತ್ತದೆ. ಸಮಾಜದ ಗತಿಸ್ಥಿತಿಗಳ ಬದಲಾವಣೆಗಳನ್ನು ಹೆಣ್ಣಿನ ಗತಿಸ್ಥಿತಿಗಳ ಬದಲಾವಣೆಗಳು ಪ್ರತಿಬಿಂಬಿಸುತ್ತವೆ ಎಂಬುದನ್ನು ಅನೇಕ ಪ್ರಗತಿಶೀಲ ಆಲೋಚನಕಾರರು ಒಪ್ಪಿಕೊಂಡಿದ್ದಾರೆ. ಮೊದಲು ಶ್ರಮವಿಭಜನೆ, ಶೋಷಣೆ, ದಬ್ಬಾಳಿಕೆ, ವರ್ಗಕಲಹ ನಡೆದಿರುವುದು ಗಂಡು ಹೆಣ್ಣುಗಳ ನಡುವೆಯೇ. ಮನುಷ್ಯ ಇನ್ನೊಬ್ಬ ಮನುಷ್ಯನ ಮೇಲೆ ದಬ್ಬಾಳಿಕೆ, ಶೋಷಣೆ ನಡೆಸುವುದಕ್ಕೆ ಪ್ರೇರಕವಾದ ಅಂಶಗಳು, ಅವಕಾಶಗಳೇ ಗಂಡು ಹೆಣ್ಣಿನಮೇಲೆ ಹಿಡಿತ ಸ್ಥಾಪಿಸುವುದಕ್ಕೂ ಮೂಲ ಕಾರಣಗಳಾಗಿವೆ. ಆದ್ದರಿಂದ ಒಂದು ಸಮಸ್ಯೆಯ ಕಾರಣಮೀಮಾಂಸೆ ಅನಿವಾರ್ಯವಾಗಿ ಇನ್ನೊಂದರದೂ ಆಗುತ್ತದೆ. ಮನುಷ್ಯ ಮನುಷ್ಯನ ನಡುವಿನ ಶೋಷಣೆಗೆ ಪರಿಹಾರವನ್ನು ತಾತ್ವಿಕವಾಗಿ ಹುಡುಕುವಾಗ ಹೆಣ್ಣಿನ ಶೋಷಣೆಯ ಸಮಸ್ಯೆಯ ಪರಿಹಾರವೂ ಪರೋಕ್ಷವಾಗಿ ದೊರಕುವ ಸಾಧ್ಯತೆಯಿದೆ.

ಗಂಡು ರಾಜಕೀಯ, ವರ್ಗ ಮತ್ತು ಧಾರ್ಮಿಕ ಶೋಷಣೆಗೆ ಒಳಗಾಗುತ್ತಾನೆ. ಹೆಣ್ಣು ಈ ಮೂರರ ಜತೆಗೆ ಗಂಡೂ ಸೇರಿ ನಾಲ್ಕು ಶೋಷಣೆಗಳಿಗೆ ಒಳಗಾಗುತ್ತಾಳೆ ಎನ್ನುವ ಮಾತು ನಮ್ಮ ಸಂದರ್ಭದಲ್ಲಿ ಅಕ್ಷರಶಃ ನಿಜವಾಗುತ್ತದೆ.

ಭಾರತೀಯ ಹೆಣ್ಣಿನ ಬಗ್ಗೆ ಚರ್ಚಿಸುವಾಗ, ಆರ್ಥಿಕ ಕಾರಣಗಳ ಜೊತೆಗೆ ಜಾತಿ ಮುಂತಾದ ಸಾಮಾಜಿಕ ವ್ಯವಸ್ಥೆಗಳೂ ಅವಳ ಶೋಷಣೆಯಲ್ಲಿ ಭಾಗವಹಿಸಿವೆ ಎಂಬುದನ್ನು ಗಮನಿಸಬೇಕು. ವ್ಯವಸ್ಥೆಯ ತಳಹದಿಯಾದ ಆರ್ಥಿಕತತ್ವವು ಅದರ ಮೇಲ್ಮೈರಚನೆಯನ್ನು ನಿರ್ದೇಶಿಸಿರುವುದಲ್ಲದೆ ಆ ಮೇಲ್ಮೈರಚನೆಯಲ್ಲೇ ಸ್ವತಃ ಸಂಭವಿಯಾದ ಪಿಡುಗುಗಳು ಹುಟ್ಟಿ ಒಟ್ಟು ವ್ಯವಸ್ಥೆಯನ್ನೇ ಇನ್ನೂ ಹದಗೆಡಿಸಿರುವುದು ಭಾರತೀಯ ಸಾಮಾಜಿಕ ರಚನೆಯ ದುರಂತವಾಗಿದೆ. ಇಂಥ ವ್ಯವಸ್ಥೆಯಲ್ಲಿ, ಸಾಮಾಜಿಕ ದೃಷ್ಟಿಕೋನದೊಡನೆ ಹೆಣ್ಣಿನ ಸ್ಥಾನವನ್ನು ಚಾರಿತ್ರಿಕ ಘಟ್ಟಗಳಲ್ಲಿ ಪರಿಶೀಲಿಸುವುದು ಅವಶ್ಯಕವಾಗುತ್ತದೆ.

ಮನುಷ್ಯನ ಚರಿತ್ರೆಯಲ್ಲಿ ಅವನ ಅಲೆಮಾರಿ ಜೀವನ ಮೊದಲ ಘಟ್ಟ. ಮನುಷ್ಯ ಗುಂಪುಗಳಲ್ಲಿ ಸಂಚರಿಸುವುದನ್ನು ಕಲಿತಾಗ ವೈಯಕ್ತಿಕ ಸಂಬಂಧಗಳು ಹೆಚ್ಚು ಸೂಕ್ಷ್ಮವಾದವು. ಆದರೆ ಯಾವುದೇ ಲೈಂಗಿಕ ಕಟ್ಟುಪಾಡುಗಳು ಇರಲಿಲ್ಲ. ಎಂದರೆ ವಿಶಿಷ್ಟವಾದ ವ್ಯಕ್ತಿಆಯ್ಕೆಯುಳ್ಳ ವಿವಾಹಸಂಸ್ಥೆಯ ಉಗಮವಾಗಿರಲಿಲ್ಲ. ಹುಟ್ಟಿದ ಮಗುವಿನ ಪ್ರತ್ಯಕ್ಷ ರಕ್ತಸಂಬಂಧಿ ತಾಯಿಯೊಬ್ಬಳೇ ಆಗಿದ್ದರಿಂದ ಸಂಬಂಧವನ್ನು ತಾಯಿಯ ಮೂಲಕವೇ ನಿರ್ದೇಶಿಸುವುದು ರೂಢಿಯಲ್ಲಿತ್ತು. ಮಕ್ಕಳಮೇಲೆ ತಾಯಿಗೆ ಮಾತ್ರ ಹಕ್ಕು ಇತ್ತು. ಈ ಮೂಲಕ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ರೂಢಿಗೆ ಬಂತು ಎಂದು ಸಮಾಜಶಾಸ್ತ್ರಜ್ಞರು ವಿವರಿಸುತ್ತಾರೆ. ಗರ್ಭಧಾರಣೆ, ಹೆರಿಗೆಗಳನ್ನು ನಿಸರ್ಗ ಹೆಣ್ಣಿನಪಾಲಿಗೆ ಕೊಟ್ಟಿರುವುದರಿಂದ ಮಕ್ಕಳ ಪಾಲನೆ ಪೋಷಣೆಗಳು ಸಹಜವಾಗಿ ಅವಳ ಭಾಗಕ್ಕೆ ಬರುವಂತಾಯಿತು. ನೈಸರ್ಗಿಕ ಕಾರಣಗಳಿಂದುಂಟಾದ ಸ್ತ್ರೀ ಪ್ರಾಧಾನ್ಯವನ್ನು ಮುಂದಿನ ಆರ್ಥಿಕ ತತ್ವದ ಉಗಮವು ಸಡಿಲಗೊಳಿಸಿತು.

ಎರಡನೆಯ ಹಂತದಲ್ಲಿ ಬೇಸಾಯ, ಪಶುಪಾಲನೆಗಳು ಆರಂಭವಾದಾಗ ಆರ್ಥಿಕತೆಯ ಉಗಮವಾಯಿತು. ಇವೆರಡೂ ಈವರೆಗೆ ಇಲ್ಲದಿದ್ದ ಹೊಸ ಸಾಮಾಜಿಕ ಬಾಂಧವ್ಯಗಳನ್ನು ರೂಪಿಸಿದವು ಎನ್ನಬಹುದು. ಪ್ರಾಣಿಗಳು ಇಡೀ ಬಣಕ್ಕೆ ಸೇರಿದ್ದುವು. ಅವು ಆಹಾರಕ್ಕೆ ಸಾಧನವೂ ಆಗಿದ್ದುವು. ಮನುಷ್ಯರ ಗುಂಪು ಒಂದುಕಡೆ ನೆಲೆ ನಿಲ್ಲಲು ಕಲಿತಾಗ ತಮಗೂ, ಪ್ರಾಣಿಗಳಿಗೂ ಅದೇ ಜಾಗದಲ್ಲೇ ಆಹಾರವನ್ನು 'ತಯಾರಿಸಿ' ಕೊಳ್ಳುವ ವಿಧಾನವನ್ನು ಕಂಡುಹಿಡಿಯಬೇಕಾಯಿತು. ನಿಲ್ಲಲು 'ಮನೆ'ಗಳನ್ನು ಕಟ್ಟಿಕೊಳ್ಳಬೇಕಾಯಿತು. ಮಾನವ ಜನಾಂಗದಲ್ಲಿ 'ಉತ್ಪಾದನೆ' ಮತ್ತು 'ಆಸ್ತಿ'ಯ ಮೊದಲ ಹಂತ ಇವುಗಳೇ ಎನ್ನಬಹುದು. ಉತ್ಪಾದನೆಗೆ ರೂಪಿಸಿಕೊಂಡ ಕೆಲವು ಆಯುಧಗಳು ಮೊದಲ ಉಪಕರಣಗಳಾದವು. ಆಗಲೇ ಇತಿಹಾಸದಲ್ಲಿ ಪ್ರಥಮ ಶ್ರಮವಿಭಜನೆ ನಡೆದದ್ದು. ಆಹಾರ ಸಂಗ್ರಹಣೆಯೂ ಅದಕ್ಕೆ ಬೇಕಾದ ಉಪಕರಣಗಳ ತಯಾರಿಕೆಯೂ ಪಶುಪಾಲನೆಯೂ

ಗಂಡಸಿನ ಪಾಲಿಗೆ ಬಂದರೆ, ಮಕ್ಕಳ ಪಾಲನೆ, ಆಹಾರ ಸಿದ್ಧಮಾಡುವುದು, ಆಹಾರ ಶೇಖರಣೆ ಹೆಂಗಸಿನ ಪಾಲಿಗೆ ಬಂದವು. ಉತ್ಪಾದನೆಯ ಸಾಧನಗಳಾದ ಎಲ್ಲ ಉಪಕರಣಗಳೂ ಗಂಡಸಿನ ಕೈಯಲ್ಲೇ ಉಳಿದವು ಎಂಬುದನ್ನು ಇಲ್ಲಿ ಗಮನಿಸ ಬಹುದು. ಮಾನವ ಇತಿಹಾಸದ ಮೊದಲಿಂದಲೂ ಉತ್ಪಾದನಾಕ್ರಿಯೆಯಲ್ಲಿ ಹೆಣ್ಣಿಗೆ ಭಾಗವಹಿಸಲು ಅವಕಾಶವಾಗಲಿಲ್ಲ. ಜೀವನಾಧಾರಗಳ ಸಾಧನಗಳೆಲ್ಲ ಗಂಡಸಿನ ಕೈಯಲ್ಲಿದ್ದುದರಿಂದ, ಸಂಪತ್ತು ಹೆಚ್ಚುತ್ತಬಂದಂತೆಲ್ಲ ಕುಟುಂಬ ವ್ಯವಸ್ಥೆಯಲ್ಲಿ ಗಂಡಸಿಗೆ ಹೆಚ್ಚು ಪ್ರಾಮುಖ್ಯ ಬಂದಿತು. ಆರ್ಥಿಕವಾಗಿ ಗಂಡಸಿಗೆ ಮನ್ನಣೆ ಸಿಕ್ಕಿತು.

ಆದರೆ ಸಾಮಾಜಿಕವಾಗಿ ತಾಯಿಹಕ್ಕು ಇನ್ನೂ ಉಳಿದಿತ್ತು. ಏಕಮುಖ ದಾಂಪತ್ಯದ ಉಗಮವಾಗಿರಲಿಲ್ಲವಾದ್ದರಿಂದ ಹುಟ್ಟಿದ್ದ ಮಕ್ಕಳ ತಂದೆಯ ನಿರ್ಧಾರ ಅಸಾಧ್ಯವಾಗಿ, ಅವರನ್ನು ತಾಯಿಯ ಸಂಬಂಧದಿಂದಲೇ ನಿರ್ದೇಶಿಸುವ ವಾಡಿಕೆಯಿತ್ತು. ಇದರಿಂದ ಆಸ್ತಿಯ ವಿಲೇವಾರಿ ಮಕ್ಕಳಲ್ಲಿ ನಡೆಯದೆ, ತಂದೆಯ ಅಥವಾ ತಾಯಿಯ ಬಂಧುಗಳಲ್ಲಿ ನಡೆಯುತ್ತಿತ್ತು. ಇದನ್ನು ತಪ್ಪಿಸಲು ಸಾಮಾಜಿಕ ಸಂಬಂಧಗಳ ಬದಲಾವಣೆ ಅನಿವಾರ್ಯವಾಯಿತು. ಇದಕ್ಕಾಗಿ ಏಕನಿಷ್ಠ ದಾಂಪತ್ಯವನ್ನು ಎಂದರೆ ಒಬ್ಬ ಹೆಂಗಸಿಗೆ ಒಬ್ಬನೇ ಗಂಡ ಇರುವಂಥ ಸಾಮಾಜಿಕ ಬಾಂಧವ್ಯವನ್ನು ರೂಢಿಗೆ ತರಲಾಯಿತು. ಇದರಿಂದ ಮಕ್ಕಳ ತಂದೆಯನ್ನು ಗುರುತಿಸುವುದು ಸುಲಭವಾಗಿ ಉತ್ತರಾಧಿಕಾರದ ಸಮಸ್ಯೆ ಬಗೆಹರಿಯಿತು. ಉತ್ಪಾದನೆ, ಆಸ್ತಿ ಶೇಖರಣೆಗಳ ಆರಂಭವು ಏಕನಿಷ್ಠವಿವಾಹ ಪದ್ಧತಿಯ ಉಗಮಕ್ಕೆ ಪ್ರೇರಕವಾಯಿತು. ಎಂದರೆ ಆರ್ಥಿಕತೆಯು ಆರಂಭವಾಗಿ ಸಾಮಾಜಿಕ ಸಂಬಂಧಗಳನ್ನು ನಿಯಂತ್ರಿಸುವ ಶಕ್ತಿಯನ್ನು ಪಡೆದುಕೊಂಡಿತು.

ಮಕ್ಕಳನ್ನು ತಂದೆಯ ಸಂಬಂಧದಿಂದ ಗುರುತಿಸಲು ಆರಂಭವಾದಾಗ, ಕುಟುಂಬವ್ಯವಸ್ಥೆಯಲ್ಲಿ ಮೊದಲೇ ಆರ್ಥಿಕವಾಗಿ ಮೇಲುಗೈಯಾಗಿದ್ದ ಗಂಡಸು ಸಾಮಾಜಿಕವಾಗಿಯೂ ಪ್ರಾಧಾನ್ಯಗಳಿಸುವುದು ಕಷ್ಟವಾಗಲಿಲ್ಲ. ಹೀಗಾಗಿ ಪಿತೃಪ್ರಧಾನ ಕುಟುಂಬವ್ಯವಸ್ಥೆ ರೂಪುಗೊಂಡಿತು. ಆರ್ಯರು ಭಾರತಕ್ಕೆ ಬಂದಾಗ ಅವರಲ್ಲಿ ಈ ವ್ಯವಸ್ಥೆಯೇ ಜಾರಿಯಲ್ಲಿತ್ತು. ಮಾತೃಪ್ರಧಾನ ಕುಟುಂಬದ ಇಳಿಮುಖವು ಸ್ತ್ರೀಯ ಮೊದಲ ಪರಾಜಯ ಎಂಬ ಮಾತು ನಿಜವಾದದ್ದು. ಗಂಡಸು ಮನೆಯಲ್ಲೂ ಅಧಿಕಾರ ವಹಿಸುವಂತಾಗಿ ಗಂಡಿನ ಸುತ್ತ ತಿರುಗುವ ಕುಟುಂಬ ವ್ಯವಸ್ಥೆಯ ನಿರ್ಮಾಣವಾಯಿತು.

ಆರ್ಥಿಕತತ್ವವೊಂದರ ಉಗಮ ಸಾಮಾಜಿಕ ಸಂಬಂಧಗಳನ್ನು ನಿರ್ದೇಶಿಸುತ್ತದೆ ಎನ್ನುವುದಕ್ಕೆ ಈ ಘಟ್ಟದಲ್ಲಿ ಇನ್ನೊಂದು ನಿದರ್ಶನವೂ ಸಿಗುತ್ತದೆ. ಮನುಷ್ಯ ತನಗೆ ಅಗತ್ಯವಾದುದಕ್ಕಿಂಥ ಹೆಚ್ಚಿನದನ್ನು ಉತ್ಪಾದಿಸಲು ಆರಂಭಿಸಿದಾಗ ಅವು

ಒಂದು ಕಡೆ ಸೇರುತ್ತಾ ಬಂದು ಹೊಸ ಆಸ್ತಿಯ ರೂಪ ತಾಳಿದವು. ಇವುಗಳ ಯಜಮಾನಿಕೆ ಗಂಡಸಿಗೆ ಸೇರಿದ್ದರಿಂದ ಅವನು ಅದರ ರಕ್ಷಣೆಗೆ ಉಪಾಯಗಳನ್ನು ಹುಡುಕಿದ. ಇದರ ಮೊದಲ ಬಲಿ ತಾಯಿಹಕ್ಕಿನ ನಿರ್ನಾಮ. ಆಸ್ತಿಗಳಿಕೆ ಆರಂಭವಾದಾಗ ಮನುಷ್ಯನ ದೈಹಿಕ ಶಕ್ತಿಗೆ ವಿನಿಮಯದ ಬೆಲೆ ಬಂದಿತು. ಉತ್ಪಾದನೆಯ ಉಪಕರಣಗಳನ್ನು ಹೊಂದಿದ್ದವನು ಈ ದೈಹಿಕ ಶಕ್ತಿಯನ್ನು ಕೊಂಡುಕೊಳ್ಳುವುದು ಆರಂಭವಾಯಿತು. ಜೀತಗಾರಿಕೆಯ ಮೊದಲಹಂತ ಇದೇ. ಮೊದಲು ಮನೆಯಲ್ಲಿ ಹೆಣ್ಣಿನ ಶಕ್ತಿಯನ್ನು ಕುಟುಂಬದ ರಕ್ಷಣೆಗಾಗಿ ಬಳಸಿಕೊಳ್ಳುತ್ತಿದ್ದ ಯಜಮಾನ ಬೇರೆಯವರ ಶಕ್ತಿಯನ್ನು ತನ್ನ ಹಿತಕ್ಕಾಗಿ ಬಳಸಿಕೊಳ್ಳಲು ಆರಂಭಿಸಿದ. 'ಉತ್ಪಾದನೆ'ಯು ಆಸ್ತಿಶೇಖರಣೆಯನ್ನೂ ತಂದೆಹಕ್ಕನ್ನೂ ಜೀತಗಾರಿಕೆಯನ್ನೂ ಒಟ್ಟಿಗೆ ಸೃಷ್ಟಿಸಿತು. ಮನುಷ್ಯ ತನ್ನ ಜೀವನಧಾರಣೆಗೆ ಅಗತ್ಯವಾದುದಕ್ಕಿಂಥ ಹೆಚ್ಚಾಗಿ ಉತ್ಪಾದಿಸುವುದನ್ನು ಉದ್ಯೋಗ ಮಾಡಿಕೊಂಡಾಗ, ಆ ವಲಯದಲ್ಲಿದ್ದ ಗಂಡಸು ಸರ್ವಾಧಿಕಾರ ಪಡೆದು ಹೆಣ್ಣು ಅವನಿಗೆ ಅಧೀನಳಾಗಿರುವಂತೆ ಆಯಿತು. ಕುಟುಂಬದಲ್ಲಿ, ಸಮಾಜದಲ್ಲಿ ಶೋಷಣೆ ಆರಂಭವಾಯಿತು.

ಆಸ್ತಿ, ಸಂಪತ್ತುಗಳು ಸಮಾಜದಲ್ಲಿ ನಿರ್ಮಾಣವಾದಾಗ ಅವುಗಳ ರಕ್ಷಣೆ ಮುಖ್ಯ ಸಮಸ್ಯೆಯಾಯಿತು. ಬಣಗಳ ನಡುವೆ ಅದಕ್ಕಾಗಿ ಕದನ ನಡೆಯದಂತೆ ಎಚ್ಚರಿಕೆ ವಹಿಸಬೇಕಾಯಿತು. ಇದಕ್ಕಾಗಿ ಹೊಸದೊಂದು ಹೊಣೆಗಾರಿಕೆ ಸೃಷ್ಟಿಯಾಯಿತು. ಆರ್ಥಿಕವಾಗಿ ಬಲಶಾಲಿಯಾದವನನ್ನು ರಕ್ಷಣೆಗಾಗಿ ನಿಯಮಿಸಿ, ಅದರೊಡನೆ ಪಡೆಗಳನ್ನು ಕಟ್ಟುವ ಅಗತ್ಯ ತಲೆದೋರಿತು. ಆರ್ಥಿಕತೆ ಮುನ್ನಡೆದಂತೆ ಅದರ ರಕ್ಷಣೆಗಾಗಿ ಹೊಸದೊಂದು ವರ್ಗ, ಶ್ರೀಮಂತ ಭೂಮಾಲೀಕರೊಂದಿಗೆ ಸಿದ್ಧವಾಯಿತು. ಇದು ಮುಂದೆ ಒಂದು ಸಾಮಾಜಿಕ ಸಂಸ್ಥೆಯಾಗಿ ಬೆಳೆಯಿತು. ಇಲ್ಲಿಗೆ ಸಮಾಜ ಅನಿವಾರ್ಯವಾಗಿ ಹಾದು ಬರಬೇಕಾಗಿದ್ದ ಒಂದು ಘಟ್ಟವನ್ನು ತಲುಪಿದಂತಾಯಿತು. ಈ ವೇಳೆಗಾಗಲೇ ಸಾಮಾಜಿಕ ಅಂತಸ್ತಿನಲ್ಲಿ ಎರಡನೇ ಸ್ಥಾನದಲ್ಲಿದ್ದ ಹೆಣ್ಣಿಗೆ ಬೆಳೆಯುತ್ತಿರುವ ಆರ್ಥಿಕವಲಯದಲ್ಲಿ ಪ್ರವೇಶವೇ ಸಿಗಲಿಲ್ಲ. ಈ ಘಟ್ಟದಲ್ಲಿ ಬೇಸಾಯವೇ ಉತ್ಪಾದನೆಯ ಮುಖ್ಯಸಾಧನವಾಗಿದ್ದರೂ ಅದಕ್ಕೆ ಪೂರಕವಾಗಿ ಅನೇಕ ರೀತಿಯ ವೃತ್ತಿಗಳು ಉಗಮಗೊಂಡವು. ನಮ್ಮ ದೇಶದಲ್ಲಿ ಮುಂದೆ ಇವೇ ಜಾತಿವ್ಯವಸ್ಥೆಗೂ ಅಡಿಗಲ್ಲಾದವೆಂದು ಹೇಳಲಾಗುತ್ತದೆ. ಉತ್ಪಾದನೆ ಹೆಚ್ಚಿದಂತೆಲ್ಲ ದೈಹಿಕ ಶಕ್ತಿಗೆ ವಿನಿಮಯದ ಬೆಲೆ ಬಂದು ಅದಕ್ಕೆ ಬೇಡಿಕೆ ಹೆಚ್ಚಾಯಿತು. ಕೆಲಸ ಮಾಡುವವರು ಭೂಮಾಲೀಕರು ಇವರ ನಡುವಿನ ಅಂತರ ಹೆಚ್ಚಾಯಿತು.

ಇದು ಮುಂದುವರೆದಂತೆ ಹೊಸನಾಗರಿಕತೆಯ ನಿರ್ಮಾಣವಾಯಿತು. ಉತ್ಪಾದನೆಯಾದ ವಸ್ತುಗಳ ವಿತರಣೆಗೆ ಹೊಸದೊಂದು ವರ್ಗ ಹುಟ್ಟಿಕೊಂಡಿತು.

ಇದರ ಮುಂದುವರಿಕೆಯೇ ಬಂಡವಾಳಶಾಹಿ ವ್ಯವಸ್ಥೆ. ಅತ್ಯಂತ ಶ್ರೀಮಂತ ಭೂಮಾಲೀಕರು, ಮಧ್ಯಸ್ಥಿಕೆದಾರರು ಈಗ ಹೊಸ ಆಕಾರಗಳನ್ನು ತಳೆದರು. ಈಗ ಹೆಣ್ಣಿನ ಸ್ಥಾನವೂ ಬದಲಾಯಿತು. ಬಂಡವಾಳದಿಂದ ಹೊಸಹೊಸ ಉದ್ಯಮಗಳು ಬೆಳೆದಂತೆಲ್ಲ ದುಡಿಯುವ ಕೈಗಳಿಗೆ ಬೇಡಿಕೆ ಹೆಚ್ಚಾಯಿತು. ಇದುವರೆಗೆ ಹೆಣ್ಣಿನ ಉತ್ಪಾದನಾ ಶಕ್ತಿಯ ಅರಿವೇ ಇರಲಿಲ್ಲ. ಅದು ಬದಲಾಗಿ ಹೆಣ್ಣಿನ ದುಡಿಯುವ ಶಕ್ತಿಗೂ ವಿನಿಯಮದ ಬೆಲೆ ಬಂದಿತು. ಮೊದಲು ಕುಟುಂಬ ವ್ಯವಸ್ಥೆಯಲ್ಲಿ ಮಾತ್ರ ಶೋಷಣೆಗೆ ಒಳಗಾಗಿದ್ದ ಹೆಣ್ಣು ಈಗ ಹೊರಗಿನ ಸಮಾಜ ವ್ಯವಸ್ಥೆಯಲ್ಲೂ ಪ್ರವೇಶಿಸಿ, ಅಲ್ಲಿ ದುಡಿಯುವುದರಿಂದ ಎರಡು ರೀತಿಯ ಶೋಷಣೆಗಳಿಗೆ ತುತ್ತಾದಳು ಎಂದು ಈ ಬದಲಾವಣೆಯನ್ನು ಅರ್ಥೈಸುವುದು ಸಮಂಜಸವಾಗಿದೆ. ಕುಟುಂಬದಲ್ಲಿನ ಮತ್ತು ವ್ಯವಸ್ಥೆಯಲ್ಲಿನ ಆರ್ಥಿಕ ಶಕ್ತಿಯ ಕೇಂದ್ರೀಕರಣ ಇದರಿಂದ ಒಂದಿಷ್ಟೂ ಬದಲಾಗಲಿಲ್ಲ ಎನ್ನುವುದನ್ನು ಗಮನಿಸಬೇಕು.

ಕುಟುಂಬದಲ್ಲಿ ಗಂಡಸಿನ ಪ್ರಾಬಲ್ಯ ಹೆಚ್ಚಾದಾಗ ಹೆಣ್ಣು ಮೂಲೆಗೊತ್ತರಿಸಲ್ಪಟ್ಟಳು. ಏಕನಿಷ್ಠ ವಿವಾಹ ಗಂಡಸಿಗೆ ಅನ್ವಯಿಸಲಿಲ್ಲ. ಮಕ್ಕಳ ವಂಶವನ್ನು ಗಂಡಸಿನ ಮೂಲಕ ನಿರ್ಧರಿಸುವುದು ಜಾರಿಗೆ ಬಂದದ್ದರಿಂದ ಗಂಡಸು, ತನ್ನ ಮಕ್ಕಳು ತನ್ನವೇ ಎಂದು ಖಚಿತ ಮಾಡಿಕೊಳ್ಳಲು ಹೆಂಡತಿಯ ಲೈಂಗಿಕ ಸ್ವಾತಂತ್ರ್ಯವನ್ನು ನಿರ್ಬಂಧಗೊಳಿಸಬೇಕಾಯಿತು. ಇದಕ್ಕಾಗಿ ಗಂಡನ ಬಗ್ಗೆ ಹೆಣ್ಣಿಗಿರುವ ಏಕನಿಷ್ಠೆಯನ್ನು ಪಾತಿವ್ರತ್ಯವೆಂದು ಹೆಸರಿಸಿ ಹೆಚ್ಚಾಗಿ ಆದರ್ಶೀಕರಿಸಲಾಯಿತು. ಮುಂದೆ ಇದೆಷ್ಟು ಅಗಾಧ ಮಾನ್ಯತೆಯನ್ನು ಪಡೆದುಕೊಂಡಿತೆಂದರೆ ಹೆಣ್ಣು ಸಮಾಜದಲ್ಲಿ ಗೌರವಾರ್ಹಳಾಗಬೇಕಾದರೆ ಇದು ಅತ್ಯವಶ್ಯಕ ಎನ್ನುವಂತಾಯಿತು. ಒಬ್ಬ ಹೆಣ್ಣಿಗೆ ಗಂಡನೊಬ್ಬನೇ ಆಗಬೇಕಾದ್ದರಿಂದ ಮುಂದೆ ಆ ಗಂಡ ಸತ್ತರೆ ಅವಳು ಹಾಗೇ ಜೀವನ ಸವೆಸಬೇಕಾದ ವೈಧವ್ಯ ಪದ್ಧತಿ ಜಾರಿಗೆ ಬಂದಿತು. ಅಷ್ಟೇ ಅಲ್ಲ, ಹೆಣ್ಣಿನ ನಿಷ್ಠೆಯನ್ನು ವೈಭವಿಸಿ, ಗಂಡ ಸತ್ತಮೇಲೆ ಬಾಳು ನಿಷ್ಫಲ ಎಂದುಕೊಂಡು ಸಹಗಮನ ಮಾಡುವುದನ್ನೂ ಕಲಿಸಲಾಯಿತು. ಈ ಸಾಮಾಜಿಕ ನಿರ್ಬಂಧಗಳನ್ನು ಅನಿವಾರ್ಯಗೊಳಿಸುವುದರಲ್ಲಿ ಹೆಣ್ಣಿನ ಆರ್ಥಿಕ ದುರ್ಬಲತೆ ಹೆಚ್ಚು ಸಹಾಯ ಮಾಡಿತು. ಇದು ಆದರ್ಶ, ಇದೇ ಪೂಜ್ಯತೆ ಎಂದು ಬೆನ್ನು ತಟ್ಟಿದಾಗ ಸ್ತ್ರೀಯರೂ ಇದನ್ನು ನಂಬಿ ಇದನ್ನೇ ಜೀವನದ ಪರಮಧ್ಯೇಯವನ್ನಾಗಿ ಮಾಡಿಕೊಂಡರು. ಪಾತಿವ್ರತ್ಯ, ವೈಧವ್ಯ, ಸಹಗಮನ ಇವೆಲ್ಲವೂ ಬರಿಯ ಶಬ್ದವ್ಯಾಮೋಹ, ಬರಿಯ ಶಬ್ದಜಾಲ ಎನ್ನುವ ಎಚ್ಚರವೂ ಕೂಡ ಬಾರದಂತೆ ಸಮಾಜ ವ್ಯವಸ್ಥೆ ಬಲಿಯಿತು. ಸಹಗಮನ, ವೈಧವ್ಯ ಇವುಗಳ ಸಾಮಾಜಿಕ ಹಿನ್ನೆಲೆ, ಕಾರಣಗಳನ್ನು ನಿಷ್ಠುರವಾಗಿ ಪರಿಶೀಲಿಸದೆ, ಈಗಲೂ ಅನೇಕ ಇತಿಹಾಸಕಾರರು ಇವುಗಳನ್ನು ಗೌರವದಿಂದ, ಗದ್ಗದ ಕಂಠದಿಂದ ಪ್ರಸ್ತಾಪಿಸುತ್ತಾರೆ.

ಆದರ್ಶದ ಅಮಲು ತಲೆಗೇರಿದಾಗ ಹೆಣ್ಣು ಇದನ್ನೇ ಜಗತ್ತಿನ ನಿಯಮವೆಂದು ಭಾವಿಸಿದಳು. ಯಾವ ಆರ್ಥಿಕ ಕ್ರಿಯೆಯಲ್ಲೂ ಭಾಗವಹಿಸದಿದ್ದ ಹೆಣ್ಣಿಗೆ ಮುಂದೆ ಯಾವ ಬೌದ್ಧಿಕ ಕ್ರಿಯೆಯಲ್ಲೂ ಪಾಲು ದೊರೆಯಲಿಲ್ಲ. ವಿದ್ಯಾರ್ಜನೆ ಹೆಣ್ಣಿಗೆ ಅನವಶ್ಯಕ ಎಂದುಕೊಂಡು ಅದರಿಂದಲೂ ಅವಳನ್ನು ದೂರವಿಟ್ಟರು. ಕೇವಲ ಗೌರವಿಸಲ್ಪಡುವ ಗೊಂಬೆಯಾದ ಹೆಣ್ಣು ಸ್ಪೃಶ್ಯಅಂತ್ಯಜಳಾಗಿ ಮಾರ್ಪಟ್ಟದ್ದರಲ್ಲಿ ಆಶ್ಚರ್ಯವೇನಿಲ್ಲ. ಸಮಾಜದ ಎಲ್ಲ ವ್ಯತ್ಯಾಸಗಳನ್ನು, ಸ್ಥಿತಿಗತಿಗಳನ್ನು ಇದೇ ಜಗತ್ತಿನ ಸತ್ಯ ಎಂದು ಪ್ರತಿಪಾದಿಸಲು ಹುಟ್ಟಿಕೊಂಡ ಎಲ್ಲ ಧರ್ಮಶಾಸ್ತ್ರಗಳೂ ಹೆಣ್ಣಿನ ಈ ಸ್ಥಾನವನ್ನು ಖಚಿತಗೊಳಿಸಲು ಸಹಾಯ ಮಾಡಿದವು. ಖಡಾಖಂಡಿತವಾಗಿ ಸ್ತ್ರೀಗೆ ಸ್ವಾತಂತ್ರ್ಯ ಕೊಡಬಾರದು ಎಂದು ಹೇಳಿ, ಇದರ ನಷ್ಟವನ್ನು ಮರೆಸಿ, ಆದರ್ಶೀಕರಿಸಲು ಎಲ್ಲಿ ನಾರಿಯರು ಪೂಜೆಗೊಳ್ಳುತ್ತಾರೋ ಅಲ್ಲಿ ದೇವತೆಗಳು ಸಂತೋಷಿಸುತ್ತಾರೆ ಇತ್ಯಾದಿ ಮಾತುಗಳು 'ಧರ್ಮಶಾಸ್ತ್ರ'ವಾಗಿ ಬಂದವು. ಇವುಗಳು ಅಧಿಕಾರ ವಾಣಿಯಿಂದ ಹೇಳಿದ್ದನ್ನು ಅಕ್ಷರಶಃ ಪಾಲಿಸಲಾಯಿತು. ಗಂಡನಿಂದಲೇ ಹೆಣ್ಣಿಗೆ ಸುಖಸಂತೋಷ, ಅವನಿಂದಲೇ ಅವಳ ಲೋಕ ಬೆಳಕಾಗಿರುವುದು ಎಂಬುದನ್ನು ಎಷ್ಟು ಸಾಧ್ಯತೆಗಳಲ್ಲಿ ಸ್ಥಾಪಿಸಬಹುದೋ ಅಷ್ಟೂ ಯತ್ನಗಳನ್ನೂ ನಡೆಸಲಾಗಿದೆ. 'ದೀರ್ಘಸುಮಂಗಲೀ ಭವ' ಎನ್ನುವ ಆಶೀರ್ವಚನವನ್ನೇ ತೆಗೆದುಕೊಳ್ಳಿ. ಈ ಹರಕೆ ಹೆಣ್ಣಿಗೆ. ಆದರೆ ಅದರ ಪರೋಕ್ಷ ಉದ್ದೇಶ ಗಂಡನಿಗೆ ಆಯುಸ್ಸು ಹೆಚ್ಚಲಿ ಎನ್ನುವುದು. ಹೆಣ್ಣು ಹೆಚ್ಚುದಿನ ಸಂತೋಷದಿಂದಿರಬೇಕಾದರೆ ಅವಳ ಗಂಡ ಹೆಚ್ಚು ದಿನ ಬದುಕಬೇಕು–ಇದು ಇಲ್ಲಿನ ಉದ್ದೇಶಿತಾರ್ಥ. ಹೆಣ್ಣಿಗೆ ಮದುವೆಯಲ್ಲಿ ತಾಳಿ ಕಟ್ಟುವುದು ಕೂಡ ಅವಳನ್ನು ತನ್ನ ಆಸ್ತಿ ಎಂದು ಗುರುತಿಸಿ ಪ್ರಭುತ್ವ ಸ್ಥಾಪಿಸುವುದಕ್ಕಾಗಿ ಗಂಡಸು ಇತ್ತೀಚೆಗೆ ರೂಪಿಸಿಕೊಂಡ ಸಂಕೇತ. ಹಣ, ವಿದ್ಯೆ, ಯುದ್ಧದ ಗೆಲುವು–ಗಂಡಸು ಸಂಪಾದಿಸಿ ಶೇಖರಿಸಿಕೊಳ್ಳಬೇಕಾದ ಇಂಥವಕ್ಕೆಲ್ಲ ಹೆಣ್ಣನ್ನೇ ಅಧಿದೇವತೆಯನ್ನಾಗಿ ಮಾಡಲಾಗಿದೆ. ಹೆಣ್ಣಿನಂತೆ ಇವುಗಳೂ ಕೂಡ ಗಂಡಿಗೆ 'ಒಲಿಯಬೇಕಾದ' ಆಸ್ತಿಗಳು ಎಂಬ ಕಲ್ಪನೆಯಿದೆ.

ಕುಟುಂಬದ, ಸಮಾಜದ ಉಸಿರಾಟಕ್ಕೆ ಮೂಲವಾದ ಆರ್ಥಿಕ ಉತ್ಪಾದನೆಯಿಂದ ಹೆಣ್ಣು ದೂರಳಾದ ಮೇಲೆ ಅವಳ ಬಗ್ಗೆ ಅನವಶ್ಯಕ ಆಸಕ್ತಿಗಳು ಹುಟ್ಟಿಕೊಂಡವು. ಅವಳನ್ನು ಕೇವಲ ಬಾಹ್ಯಸೌಂದರ್ಯದಿಂದ ಗುರುತಿಸುವುದು ಆರಂಭವಾಯಿತು. ಸಂಗೀತ, ನೃತ್ಯ ಇತ್ಯಾದಿಗಳೆಲ್ಲ ಹೆಣ್ಣಿನ ಕುಶಲ ಕಲೆಗಳಾದವು. ವಸ್ತ್ರಾಭರಣಗಳು, ಲಲಿತಕಲೆಗಳು ಇವೆಲ್ಲವೂ ಹೆಣ್ಣಿನ ಆಲೋಚನೆಯ ದಾರಿ ತಪ್ಪಿಸಿದವು. ರಾಜ್ಯ ಆಳಿದ ಕೆಲವರನ್ನು ಬಿಟ್ಟರೆ ಮಿಕ್ಕ ಹೆಂಗಸರೆಲ್ಲ ಇಷ್ಟರಲ್ಲೇ ಮುಳುಗಿರುವಂಥ ಪರಿಸರವನ್ನು ಸಮಾಜ ಯಶಸ್ವಿಯಾಗಿ ರೂಪಿಸಿತು.

ಚರಿತ್ರೆಯಲ್ಲಿ ಸ್ತ್ರೀಯರು ರಾಜ್ಯಭಾರಮಾಡಿರುವ ಅನೇಕ ಉದಾಹರಣೆಗಳು ಸಿಗುತ್ತವೆ. ಆದರೆ ಈ ಅವಕಾಶಗಳನ್ನು ಕೊಟ್ಟಿರುವುದು ವರ್ಣವ್ಯವಸ್ಥೆಯ ಮೇಲ್ತುದಿಯಲ್ಲಿರುವ ಬ್ರಾಹ್ಮಣರಲ್ಲ ಎಂಬುದನ್ನು ಗಮನಿಸಬೇಕು. ಒಂದೋ ಎರಡೋ ಅಪವಾದಗಳನ್ನು ಬಿಟ್ಟರೆ ಎಲ್ಲ ಸ್ತ್ರೀ ಆಡಳಿತಗಾರರೂ ಕೆಳವರ್ಣಕ್ಕೆ ಸೇರುತ್ತಾರೆ. ಕೈಲಿದ್ದ ಅಧಿಕಾರ ಮತ್ತು ಸಂಪತ್ತು ಅವರಿಗೆ ಸಾಮಾಜಿಕ ಭದ್ರತೆ ಮತ್ತು ಗೌರವಗಳನ್ನು ತಂದುಕೊಟ್ಟಿದೆ. ಹೀಗಾಗಿ ಅರಮನೆಯ ಸ್ತ್ರೀವರ್ಗ ಹೆಚ್ಚು ಸ್ವಚ್ಛಂದತೆಯನ್ನುಳಿಸಿಕೊಂಡದ್ದು ಉಂಟು. ತನ್ನ ಗಂಡನನ್ನು ತಾನೇ ಆಯ್ಕೆ ಮಾಡುವ ಅವಕಾಶ ಅರಮನೆಯ ಹೆಣ್ಣುಗಳಿಗೆ ಮಾತ್ರ ಇತ್ತು. ಆದರೆ ಈ ಸ್ವಯಂವರ ಸಮಾರಂಭಕ್ಕೆ ಬರುತ್ತಿದ್ದವರೆಲ್ಲ ಹೆಣ್ಣಿನ ತಂದೆಯ ರಾಜಕೀಯ ವಲಯಕ್ಕೆ ಸೇರಿದವರೇ! ಸಾಹಸದ ಪರೀಕ್ಷೆಗಳನ್ನು, ಬೌದ್ಧಿಕ ಸಮಸ್ಯೆಗಳನ್ನು ಕೊಟ್ಟು ಅವುಗಳಲ್ಲಿ ಗೆದ್ದವನನ್ನು ವರಿಸುವ ರಾಜಕುಮಾರಿಯರ ಕಥೆಗಳು ಹೇರಳವಾಗಿವೆ. ಇವೂ ಕೂಡ ಹೆಣ್ಣು ಆಸ್ತಿ, ಅವಳನ್ನು ಗೆದ್ದು ಸಂಪಾದಿಸಬೇಕು ಎಂಬ ಆಲೋಚನೆಯನ್ನೆ ಪ್ರತಿನಿಧಿಸುತ್ತವೆ. ಇಷ್ಟು ಬಿಟ್ಟರೆ, ರಾಜಕೀಯದಲ್ಲಿ ಹೆಣ್ಣು ಕಾಣಿಸಿಕೊಳ್ಳುವುದು ಯುದ್ಧಕ್ಕೆ ಕಾರಣಳಾಗಿ ಅಥವಾ ಶತ್ರುರಾಜರ ನಡುವೆ ಮೈತ್ರಿ ಸಾಧಿಸಲು ಮದುವೆ ಮಾಡಿಕೊಟ್ಟಾಗ ಅಥವಾ ತಾಜಮಹಲಿನಂಥ ಶ್ರೀಮಂತಿಕೆಯ ಅಟ್ಟಹಾಸಗಳ ನಿರ್ಮಾಣಕ್ಕೆ ನೆಪವಾಗಿ, ಅಷ್ಟೆ.

ಸತಿ ಮುಂತಾದ ಸಾಮಾಜಿಕ ದುಷ್ಟತೆಗಳ ವಿರುದ್ಧ ಪ್ರತಿಭಟನೆಗಳು ಇತ್ತೀಚಿನ ಚರಿತ್ರೆಯಲ್ಲಿ ಕಂಡುಬರುತ್ತವೆ. ಬಾಲ್ಯವಿವಾಹ, ಸಹಗಮನಗಳನ್ನು ವಿರೋಧಿಸಿ ರಾಜಾರಾಮ ಮೋಹನರಾಯ್ ಮುಂತಾದ ಸಮಾಜಸುಧಾರಕರು ಹೋರಾಡಿದ್ದಾರೆ. ಆದರೆ ಇವುಗಳ ಅಸ್ತಿತ್ವದ ಮೂಲಕಾರಣಗಳನೆಲ್ಲ ಅವರೆಲ್ಲರೂ ಮರೆತಿದ್ದರು. ಇದನ್ನು ಕೇವಲ ಸಾಮಾಜಿಕ ಸುಧಾರಣೆ ಎಂದಷ್ಟೆ ಪರಿಗಣಿಸಿದ್ದರು. ಆದ್ದರಿಂದ ಈ ಸಮಾಜ ಸುಧಾರಣೆ ಹಿಂದಿನ ಪರಂಪರೆಯ ಕೆಲವು ಪದ್ಧತಿಗಳಿಗೆ ಆದರ್ಶವಾದಿಗಳು ನಡೆಸಿದ ಪ್ರತಿಭಟನೆಯಾಗಷ್ಟೆ ಉಳಿದು ದಾರಿತಪ್ಪಿತು.

ವರ್ಗಸಮಾಜ ರೂಪುಗೊಳ್ಳುತ್ತಿರುವ ಸಮಯದಲ್ಲೇ ಭಾರತದಲ್ಲಿ ವರ್ಣವ್ಯವಸ್ಥೆಯೂ ಅಂಕುರಿಸಿತು. ಈ ವರ್ಗವರ್ಣಗಳ ಜ್ಯಾಮಿತಿಕೂಟದಲ್ಲಿ ಸ್ತ್ರೀ ಶೋಷಣೆಯು ಬಾಹ್ಯಲಕ್ಷಣಗಳಲ್ಲಿ ಭಿನ್ನವಾದರೂ ಅವುಗಳ ಒಟ್ಟು ಉದ್ದೇಶ ಒಂದೇ ಆಗಿದೆ. ವರ್ಗಗಳ ಆರ್ಥಿಕ ಸ್ಥಿತಿಗತಿಗಳು ಶೋಷಣೆಯ ದಿಕ್ಕನ್ನು ಬದಲಾಯಿಸಿವೆ. ಆರ್ಥಿಕವಾಗಿ ಮೇಲ್ತುದಿಯಲ್ಲಿರುವ ವರ್ಗದಲ್ಲಿ ಸ್ತ್ರೀಯರ ಉತ್ಪಾದನಾ ಶಕ್ತಿ, ಕ್ರಿಯಾ ಶಕ್ತಿಗಳು ಬೆಳಕಿಗೆ ಬರುವ ಅಗತ್ಯವೇ ಇರುವುದಿಲ್ಲ. ಮಧ್ಯಮ ವರ್ಗದ ಜನಕ್ಕೆ ಸಾಮಾಜಿಕ ಕಟ್ಟುಪಾಡುಗಳನ್ನು ಪಾಲಿಸುವ ಮನಸ್ಸಿದ್ದರೂ ಹಣದ ಅಗತ್ಯ ಸ್ತ್ರೀಯರನ್ನು ಉದ್ಯೋಗಕ್ಕೆ ಕಳಿಸುವಂತೆ ಪ್ರೇರೇಪಿಸುತ್ತದೆ. ಕೆಳವರ್ಗದ ಹೆಣ್ಣಿಗೆ

ಮಾತ್ರ ಇಂಥ ಆಯ್ಕೆ ಅವಕಾಶಗಳಿರುವುದೇ ಇಲ್ಲ. ಕುಟುಂಬದಲ್ಲಿ ಗಂಡಿಗೆ ಸಮನಾಗಿ ಅವಳೂ ದುಡಿಯಲೇಬೇಕಾದ್ದರಿಂದ ಸಾಮಾಜಿಕ ನಿರ್ಬಂಧಗಳನ್ನು ಅವಳು ಗಮನಿಸುವುದಿಲ್ಲ. ಇದರಿಂದ ಕುಟುಂಬದಲ್ಲೂ ಅವಳು ಮಿಕ್ಕವರ್ಗದ ಹೆಂಗಸರಿಗಿಂತ ಹೆಚ್ಚು ಪ್ರಾಧಾನ್ಯ ಪಡೆದಿರುತ್ತಾಳೆ. ಕುಟುಂಬದ ಸಮಸ್ಯೆಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳುತ್ತಾಳೆ.

ಕೆಳವರ್ಣದಲ್ಲೇ ಆರ್ಥಿಕವಾಗಿ ಮೇಲ್ಪುದಿಯಲ್ಲಿರುವ ಹೆಣ್ಣು ಸಾಮಾಜಿಕ ಭದ್ರತೆಯಿಂದಾಗಿ ಒಂದು ರೀತಿಯ ಸ್ವಾತಂತ್ರ್ಯವನ್ನು ಅನುಭವಿಸಿದರೆ, ಅದೇ ವರ್ಣದ ಆರ್ಥಿಕವಾಗಿ ಕೀಳುಮಟ್ಟದ ಹೆಣ್ಣು ತನ್ನ ಉತ್ಪಾದನಾಶಕ್ತಿಯ ಬಳಕೆಯಿಂದ ಸ್ವತಂತ್ರಳಾಗಿರುತ್ತಾಳೆ. ಆದರೆ ಆರ್ಥಿಕವಾಗಿ ಮೇಲಿರಲಿ, ಕೆಳಗಿರಲಿ ವರ್ಣವ್ಯವಸ್ಥೆಯಲ್ಲಿ ಮೇಲಿರುವ ಬ್ರಾಹ್ಮಣವರ್ಗ ಎಂದೂ ಹೆಣ್ಣನ್ನು ಅವಳ ಕ್ರಿಯಾಶೀಲತೆಯಿಂದ ಗುರುತಿಸಲಿಲ್ಲ. ಈ ವರ್ಗ ಹೆಣ್ಣಿನ ಬಗ್ಗೆ ಸದಾ ಸಂದೇಹವಿಟ್ಟಿದ್ದೇ ಅಲ್ಲದೆ, ಅದನ್ನು ತಾತ್ವಿಕವಾಗಿ ಸ್ಥಿರೀಕರಿಸಲು ಅಗತ್ಯವಾದ ಶಾಸ್ತ್ರ ನಿರ್ಮಾಣವನ್ನೂ ಮಾಡಿತು. ಆದರೆ ನಾಲ್ಕೂ ವರ್ಣಗಳಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ಬೌದ್ಧಿಕವಾಗಿ ಹೆಚ್ಚಾಗಿ ಮೂಲೆಗುಂಪಾದದ್ದು ಮಧ್ಯಮವರ್ಗದ ಹೆಣ್ಣು. ಎಲ್ಲದರಿಂದ ವಂಚಿತಳಾಗಿ ಈ ವರ್ಗದ ಹೆಣ್ಣು ಹೆಚ್ಚಾಗಿ ಮನೆಯ ದೇವರುಗಳನ್ನು ಮೂಢನಂಬಿಕೆಗಳನ್ನು ಆರಾಧಿಸುತ್ತಾ ಜಡಳಾದಳು. ಈಗಲೂ ಜಾತಿ, ದೇವರುಗಳಲ್ಲಿ ಹೆಚ್ಚು ಭಯ, ನೈಜಶ್ರದ್ಧೆ ಕಾಣಬರುವುದು ಮಧ್ಯಮವರ್ಗದಲ್ಲಿ, ಅದೂ ಬ್ರಾಹ್ಮಣ ಜಾತಿಯಲ್ಲಿ. ಮೇಲ್ವರ್ಗದವರಿಗೆ ಇವುಗಳೆಲ್ಲ ದೈನಂದಿನ ಆಡಂಬರವಾದರೆ ಕೆಳವರ್ಗದವರಿಗೆ ಅವು ಅನಗತ್ಯವೂ ಅಪ್ರಮುಖವೂ ಹೆಚ್ಚೆಂದರೆ ಆಪತ್ತಿನಲ್ಲಿ ಮೊರೆಹೋಗಲು ಆಶ್ರಯವೂ ಆದವು.

ತೀರ ಹತ್ತಿರದ ಸಾಮಾಜಿಕ ಘಟಕವಾದ ಕುಟುಂಬದಲ್ಲಿನ ಅನ್ಯಾಯಗಳನ್ನು ಪ್ರತಿಕ್ರಿಯೆಗಳಿಲ್ಲದೆ ಒಪ್ಪಿಕೊಂಡು ವೈಭವಿಸಿದ ಸಾಹಿತ್ಯದಲ್ಲಿ ವ್ಯವಸ್ಥೆಯ ಬಗ್ಗೆ ಪ್ರತಿಭಟನೆಯನ್ನು ಕಾಣುವುದು ದುಸ್ತರವೇ. ಸಾಹಿತ್ಯದ ಶ್ರೇಷ್ಠತೆಯನ್ನು ಅದು ಹೊತ್ತಿರುವ ಸಾಮಾಜಿಕ ಹೊಣೆಗಾರಿಕೆಯಿಂದ ನಿರ್ಧರಿಸ ಹೊರಟರೆ ಈ ಎಲ್ಲ ಸಾಹಿತ್ಯಗಳ ಹಣೆಬರೆಹವೂ ಒಂದೇ ಆಗುತ್ತದೆ. ಸಮಾಜದ ಬೆಳವಣಿಗೆಯ ವಿವಿಧ ಘಟ್ಟಗಳಲ್ಲಿ ಹೆಣ್ಣಿನ ಸ್ಥಾನಮಾನಗಳಲ್ಲಾದ ಬದಲಾವಣೆಗಳು, ಅದಕ್ಕಿದ್ದ ಆರ್ಥಿಕ ಸಾಮಾಜಿಕ ಕಾರಣಗಳು ಇವುಗಳನ್ನು ಮುಕ್ತದೃಷ್ಟಿಯಿಂದ ಪರಿಶೀಲಿಸದಿದ್ದಲ್ಲಿ ಇತಿಹಾಸಕಾರರು, ಸಮಾಜಶಾಸ್ತ್ರಜ್ಞರು ಸಾಹಿತಿಗಳು ಮುಂತಾದವರಿಂದ ಕೆಲವು ಭ್ರಮಾತ್ಮಕ ಹೇಳಿಕೆಗಳು ಹೊರಬರುತ್ತವೆ. ಹೆಣ್ಣು ಎಂದ ತಕ್ಷಣ ಸೀತೆ, ಸಾವಿತ್ರಿ, ಅನಸೂಯೆಯರನ್ನು ಜಪಿಸುವ ಮೂರ್ಖತನ ಒಂದು ಕಡೆ ಕಂಡರೆ, ಕಾಮ ನಮ್ಮ ಜೀವಂತಿಕೆಯ ಪರಮ ನಿದರ್ಶನ, ಆಗನೆಯುಪನನ್ನು ಬಯಸಿದ ಪಾಂಚಾಲಿ ನಮ್ಮ

ಜೀವಂತಿಕೆಯ ದ್ಯೋತಕ ಇತ್ಯಾದಿ ಮಾತುಗಳು ಅದರ ಇನ್ನೊಂದು ಮುಖ ವಾಗುತ್ತದೆ.

ಮಹಾಭಾರತವನ್ನು ಶ್ರೇಷ್ಠ ಕಾವ್ಯವೆಂದೋ, ಎರಡು ಬಣಗಳ ನಡುವೆ ನಡೆದ ಜಗಳವೆಂದೋ, ಕೃಷ್ಣಲೀಲಾರಂಗವೆಂದೋ ಭಾವಿಸುವುದಕ್ಕಿಂಥ, ಸಾಮಾಜಿಕ ಬದಲಾವಣೆಗಳು ಮೂರ್ತಗೊಳ್ಳುತ್ತಿದ್ದ ಒಂದು ಸಮಾಜದ ಸಂಕ್ರಮಣಾವಸ್ಥೆಯ ಒಂದು ಲಿಖಿತ ದಾಖಲೆಯನ್ನಾಗಿ ಗಣಿಸುವುದು ಮೇಲು. ಎಲ್ಲ ರೀತಿಯ ಸಾಮಾಜಿಕ ಬಾಂಧವ್ಯಗಳಿಗೂ ಅದರಲ್ಲಿ ಉದಾಹರಣೆಗಳಿವೆ; ಪರಸ್ಪರ ವಿರೋಧಗಳಿವೆ. ಇವೆಲ್ಲ ಬದಲಾಗುತ್ತಿರುವ ಸಮಾಜದಲ್ಲಿದ್ದ ಮಿಶ್ರತೆಯ ಪ್ರತೀಕಗಳಾಗುತ್ತವೆ. ಶಂತನುವಿಗೆ ಯೋಜನಗಂಧಿಯನ್ನು ಕೈಹಿಡಿಯಲು ಅಡ್ಡಬಾರದ 'ಕುಲ' ಕರ್ಣನನ್ನು ಆದರಿಸು ವಾಗ ಬರುತ್ತದೆ. ಕುಂತಿಗೆ ಮದುವೆಗೆ ಮೊದಲೇ ಮಗುವಾಗಿದ್ದರೂ ಸಮಾಜದಲ್ಲಿ ಗೌರವವಿರುತ್ತದೆ. ಪಾಂಡುವಿನ ಮರಣಾನಂತರ ಮಾದ್ರಿ 'ಸಹಗಮನ' ಮಾಡಿದರೆ, ಕುಂತಿ 'ವಿಧವೆ'ಯಾಗಿ ಉಳಿಯುತ್ತಾಳೆ. ಅಷ್ಟೇ ಅಲ್ಲ, ತನ್ನ ಮಕ್ಕಳ ಏಳಿಗೆಗಾಗಿ ಸದಾ ಪರಿತಪಿಸುತ್ತ ಅವರ ರಾಜಕಾರಣದಲ್ಲೂ ಭಾಗವಹಿಸುತ್ತಾಳೆ. ಎಲ್ಲರಿಂದ ಆದರ, ಮಾನ್ಯತೆಯನ್ನು ಪಡೆಯುತ್ತಾಳೆ. 'ಬಹುಪತಿತ್ವ' ದ್ರೌಪದಿಗೆ ಇದ್ದರೆ, ಪಾಂಡು, ಭೀಮ, ಅರ್ಜುನರಿಗೆ 'ಬಹುಪತ್ನಿತ್ವ' ಇದೆ. ಆದರೆ ಭೀಷ್ಮನೋ ಕಟ್ಟಾ ಬ್ರಹ್ಮಚಾರಿ. ಸವತಿಮಾತ್ಸರ್ಯದ ಸೋಂಕೇ ಇಲ್ಲದಿದ್ದರೂ ಓರಗಿತ್ತಿಯರ ನಡುವೆ ಮಾತ್ಸರ್ಯ ಇದ್ದು ಅದು ಅವರ ಮಕ್ಕಳಿಗೂ ಸಾಗುತ್ತದೆ. ಸ್ವಯಂವರ, ಕನ್ಯಾಪಹರಣ, ನಿಯೋಗ - ಎಲ್ಲ ವಿವಾಹಪದ್ಧತಿಗಳಿಗೂ ನಿದರ್ಶನಗಳಿವೆ. ಇವೆಲ್ಲ ಕ್ಕಿಂಥ ವಿಶಿಷ್ಟವಾದದ್ದು ಕೃಷ್ಣ - ದ್ರೌಪದಿಯರ ಸಂಬಂಧ. ಗಂಡು ಹೆಣ್ಣಿನ ಬೌದ್ಧಿಕ ಕೊಳುಕೊಡುಗೆಯನ್ನು ಇದು ಪ್ರತಿನಿಧಿಸುತ್ತದೆ. ಸಂಬಂಧಗಳಿಗೆ, ಪರಂಪರೆಗೆ, ಆದರ್ಶಕ್ಕೆ ಎಲ್ಲವೂ ವಿಧೇಯವಾಗಿವೆ. ರಾಮಾಯಣದಲ್ಲಂತೂ ಇಂಥ ವಿಧೇಯತೆಗಳು ಹೇರಳವಾಗಿವೆ. ನಮ್ಮ ಮುಕ್ಕಾಲುಭಾಗ ಸಾಹಿತ್ಯವೆಲ್ಲ ಇಂಥ ಒಂದಿಲ್ಲೊಂದು ವಿಧೇಯತೆಗಳ ಕಗ್ಗವಾಗಿದೆ.

ಹೆಣ್ಣನ್ನು ತನ್ನ ಆಶಯಗಳಿಗನುಗುಣವಾಗಿ ಮಾರ್ಪಡಿಸುತ್ತ ಅವಳು ತನ್ನ ಆಸ್ತಿಯ ಒಂದು ಭಾಗ ಎಂದು ಗಂಡು ಲೆಕ್ಕ ಹಾಕಲು ಆರಂಭಿಸಿದ್ದನು. ಈ ನಡೆದಾಡುವ ಆಸ್ತಿಯ ಕಲ್ಪನೆ ಸಾಹಿತ್ಯದಲ್ಲಿ ಕೂಡ ಸ್ಪಷ್ಟವಾಗಿದೆ. ಪಾಂಡವರು ಜೂಜಿನಲ್ಲಿ ರಾಜ್ಯ, ಕೋಶ ಮುಂತಾದ ಆಸ್ತಿಗಳ ಜತೆ ದ್ರೌಪದಿಯನ್ನೂ ಪಣವಾ ಗಿಟ್ಟರು. ಹೆಂಡತಿಯನ್ನು ಮಾರಿದ ಹರಿಶ್ಚಂದ್ರನನ್ನು ಅದರ ಸಾಮಾಜಿಕ ಹಿನ್ನೆಲೆಯ ಬಗ್ಗೆ ಆಲೋಚಿಸದೆ, ಸತ್ಯದ ಆದರ್ಶಕ್ಕಾಗಿ ಎಲ್ಲ ಕವಿಗಳೂ ಹೊಗಳುತ್ತಾರೆ. ಇದಕ್ಕೆ ಇನ್ನೂ ಉದಾಹರಣೆಗಳನ್ನು ಕೊಡಬಹುದು–ಶರಣ ಮಾದರಸನ ಶಿವಪೂಜೆಗಾಗಿ ಹೊನ್ನು ಒದಗಿಸಲು ತನ್ನ ಮಗಳನ್ನೇ ಒತ್ತೆಯಿಟ್ಟ ಬಡಭಕ್ತನ ಕಥೆ 15ನೇ

ಶತಮಾನದ ಕೃತಿಯಾದ 'ಪದ್ಮರಾಜಪುರಾಣ'ದಲ್ಲಿ ಬರುತ್ತದೆ. ತೀರ ಇತ್ತೀಚೆಗೆ, 19ನೇ ಶತಮಾನದಲ್ಲಿ ಕೂಡ ಬ್ರಾಹ್ಮಣನೊಬ್ಬನು ತನ್ನ 'ಅವಸರ ನಿಮಿತ್ತವಾಗಿ' ಹೊಲೆಯಾಳಿನ ಹೆಂಡತಿಯನ್ನು 'ಬುದ್ಧಿವಂತರು ಕಟ್ಟಿದ ಕ್ರಯ'ಕ್ಕೆ ಮಾರಿದ ಉಲ್ಲೇಖ ಸಿಗುತ್ತದೆ.

ಯಾವ ಭಾಷೆಯ ಯಾವ ಸಾಹಿತ್ಯದ ಆಂದೋಳನ, ಚಳುವಳಿಗಳೂ ಕೂಡ ಇಂಥ ತೀರ ನಿಕಟವಾದ ಸಾಮಾಜಿಕ ಘಟಕದ ಬಗ್ಗೆ ಗಂಭೀರವಾಗಿ ಆಲೋಚಿಸಿಲ್ಲ. ಎಲ್ಲ ಸಾಹಿತಿಗಳೂ ಪರಂಪರಾಗತವಾದ ಸಾಮಾಜಿಕ ಪದ್ಧತಿಗಳನ್ನು ಒಪ್ಪಿಕೊಂಡು ಅದನ್ನೇ ವೈಭವಿಸಿ ಹಾಡುತ್ತಾ ಹೊಣೆ ತಪ್ಪಿಸಿಕೊಂಡರು. ಇಡೀ ಸಾಹಿತ್ಯಕ್ಕೆ ಹೆಣ್ಣು ಕಾಣಿಸಿಕೊಳ್ಳುವುದು ವರ್ಣನಾರ್ಹವಾದ ವಸ್ತುವಾಗಷ್ಟೆ. ಎಲ್ಲ ಸಾಹಿತ್ಯದ ಎಲ್ಲ ಕವಿಗಳೂ ಹೆಣ್ಣನ್ನು ವರ್ಣಿಸಿ ವರ್ಣಿಸಿ ದಣಿದಿದ್ದಾರೆ. ಸಾಹಿತ್ಯದಲ್ಲಿ ಹೆಣ್ಣು ಕಾಣಿಸಿಕೊಳ್ಳುವುದು ಮನುಷ್ಯನ ಭಾವನಾತ್ಮಕ ಸಮಯಗಳಲ್ಲಿ ಎಂದರೆ ಪ್ರೇಮ ಪ್ರಣಯ ವಾತ್ಸಲ್ಯ ಮುಂತಾದ ಸನ್ನಿವೇಶಗಳಲ್ಲಷ್ಟೆ. ತಾಯಿಯರ ಬಗ್ಗೆ ಹೇಳುವಾಗಲಂತೂ ಕವಿಗಳ ಹೃದಯ ಕರಗಿಬಿಡುತ್ತದೆ. ಇಷ್ಟುಬಿಟ್ಟರೆ ಹೆಣ್ಣು ಇನ್ನಾವ ವಲಯದಲ್ಲೂ ಬದುಕಿಲ್ಲ. ಹೆಣ್ಣಿನ ಬೌದ್ಧಿಕ, ಮಾನಸಿಕ ವಲಯಗಳನ್ನು ಯಾವ ಕವಿಯೂ ಗುರುತಿಸಿಲ್ಲ. ಅವಳ ಬಾಹ್ಯ ಸೌಂದರ್ಯವಷ್ಟನ್ನೇ ವರ್ಣಿಸಿ ಮೆರೆಸುವ ಚಪಲ ಯಾವ ಕವಿಯನ್ನೂ ಬಿಟ್ಟಿಲ್ಲ. ಪ್ರಾಚೀನ ಕವಿಗಳ ಗಮನವೆಲ್ಲ ಅರಮನೆಯರ ಸ್ತ್ರೀಯರ ಕಡೆಗಷ್ಟೆ ಇದೆ. ವ್ಯಕ್ತಿತ್ವ ಏನನ್ನಾದರೂ ಸಾಧಿಸಬೇಕಾದರೆ ಹೆಣ್ಣಿನಿಂದ ದೂರವಿರಬೇಕು ಎಂಬ ಸುಳ್ಳು ಘೋಷಣೆಯನ್ನು ಎಲ್ಲ ಸಾಹಿತ್ಯದಲ್ಲೂ ಕಾಣಬಹುದು. ಹೆಣ್ಣು ಸಕಲ ಹೆಗ್ಗುರಿಗಳ ಗೋರಿ ಎನ್ನುವಂಥ ಅಪಾಯಕಾರಿ ದನಿ ಜನಾಂಗದ ಕಣ್ಣು ತೆರೆಸಿದ ಕವಿಗಳಲ್ಲೂ ಕೇಳಬಂದಿದೆ. ಹೆಣ್ಣನ್ನು ಸಾಮಾಜಿಕ ಬದಲಾವಣೆಯ ಚೌಕಟ್ಟಿನಲ್ಲಿಟ್ಟು ಅರ್ಥೈಸುವುದು ನಮ್ಮ ಸಾಹಿತಿಗಳಿಗೆ ತಿಳಿದಿಲ್ಲ ಎನ್ನುವುದು ಇದರ ಅರ್ಥವಷ್ಟೆ.

ಭಾರತದಲ್ಲಿ ಹುಟ್ಟಿ ಬೆಳೆದ ಯಾವ ಧರ್ಮವೂ ಯಾವ ಮತವೂ ಹೆಣ್ಣಿನ ಬಗ್ಗೆ ಭಿನ್ನವಾಗಿ ಆಲೋಚಿಸುವುದನ್ನು ಕಲಿಸಲಿಲ್ಲ. ಎಲ್ಲ ಧರ್ಮಗಳೂ ಹೆಣ್ಣನ್ನು ಮೋಹ, ಮಾಯೆ ಎಂದು ದೂರವಿರಿಸಿದರೂ, ನಾಲ್ಕು ವರ್ಣಾಶ್ರಮ ಧರ್ಮಗಳೂ ಒಂದಲ್ಲ ಒಂದು ಬಗೆಯಲ್ಲಿ ಸಂಸಾರಕ್ಕೆ ಅಂಟಿಕೊಂಡಿರುವುದನ್ನೆ ಹೇಳುತ್ತವೆ. ಬುದ್ಧನೂ ತನ್ನ ಸಂಘಕ್ಕೆ ಸ್ತ್ರೀಯರನ್ನು ಸೇರಿಸಿಕೊಳ್ಳಲು ಪ್ರಾರಂಭದಲ್ಲಿ ಅನುಮಾನಿಸಿದ. ಧರ್ಮದ ಅನುಯಾಯಿಗಳಾಗಲು, ಅದನ್ನು ಆಚರಿಸಲು, ವಿರಾಗಿಣಿಯರಾಗಲು ಅವಕಾಶವಿತ್ತೇ ಹೊರತು ಧರ್ಮದ ನಿರ್ದಿಷ್ಟ ಕ್ರಿಯೆಯಲ್ಲಿ ಸ್ತ್ರೀಯರಿಗೆ ಭಾಗವಿರಲಿಲ್ಲ. ಜೈನಧರ್ಮದಲ್ಲಿ ಹೆಣ್ಣುಜೀವ ಮುಕ್ತಿಪಡೆಯ ಬೇಕಾದರೆ ಅದು ಮತ್ತೆ ಗಂಡಾಗಿ ಹುಟ್ಟಬೇಕು. ವೈಷ್ಣವಧರ್ಮ ಹೆಣ್ಣನ್ನು

ಎಲ್ಲರಿಗಿಂತ ಕೀಳಾಗಿ ಕಾಣುತ್ತದೆ. ಹೆಣ್ಣನ್ನು ಬಾಹ್ಯ ವಿಷಯಗಳಿಂದ ಕಳಚಿ, ಅವಳಿಗೆ ಬೌದ್ಧಿಕವಾಗಿ ಮನ್ನಣೆ ನೀಡಿ, ಕ್ರಿಯಾಶಕ್ತಿಯನ್ನು ಗುರುತಿಸಿದ್ದು ಬಸವಣ್ಣನವರ ಕಾಲದಲ್ಲಿ ಮಾತ್ರ. ಮಿಕ್ಕ ಕಾರಣಗಳೇನೇ ಇರಲಿ, ಮಹದೇವಿಯಕ್ಕನನ್ನು ಶರಣೆಯೆಂದಷ್ಟೇ ಅಲ್ಲ, ಅನುಭವಮಂಟಪದ ಪ್ರಮುಖ ಅಂಗವನ್ನಾಗಿ ಕೂಡ ಸ್ವೀಕರಿಸಿದ್ದು ಮಹತ್ವದ ಅಂಶ. ಅನಾಮಧೇಯ ಹೆಂಗಸರಿಗೂ ಅಲ್ಲಿ ಶರಣೆಯರಾಗಲು, ವಚನಕಾರ್ತಿಯರಾಗಲು ಅವಕಾಶವಿತ್ತು.* ಆದರೆ ಈ ಸುಧಾರಣೆ ಕೇವಲ ವ್ಯಕ್ತಿಗತವಾಗಿ ಮಾತ್ರ ಉಳಿದು ಮುಂದೆ ವೀರಶೈವ ಸಮಾಜದಲ್ಲಿ ಯಾವ ಬದಲಾವಣೆಯನ್ನೂ ತರಲಿಲ್ಲ ಎಂಬುದನ್ನು ವಿಶೇಷವಾಗಿ ಗಮನಿಸಬೇಕು. ವೀರಶೈವ ಸಮಾಜವೂ ಹೆಣ್ಣನ್ನು ಪರಂಪರಾಗತ ರೀತಿಯಲ್ಲೇ ನಡೆಸಿಕೊಂಡು ಬಂದಿತು. ಆರ್ಥಿಕ ವ್ಯವಸ್ಥೆಯಿಂದ ದೂರವುಳಿದ ಒಂದು ಸಾಮಾಜಿಕ ಸುಧಾರಣೆಯ ಮಿತಿ ಎಷ್ಟೆಂಬುದು ವ್ಯಕ್ತವಾಗುತ್ತದೆ. ಧರ್ಮದ ಸಾಮಾಜಿಕ ಹೊಣೆಗಾರಿಕೆಯನ್ನು ಈ ಅಂಶಗಳು ನಿರ್ಧರಿಸುತ್ತವೆ. ನಿಜವಾದ ಇತಿಹಾಸಕಾರ, ನಿಜವಾದ ಸಮಾಜ ಶಾಸ್ತ್ರಜ್ಞ ಒಂದು ಧಾರ್ಮಿಕ ಚಳುವಳಿಯನ್ನು ಪ್ರಶ್ನಿಸಬೇಕಾಗಿರುವುದು ಇಂಥ ಘಟ್ಟಗಳಲ್ಲಿಯೇ.

ವ್ಯವಸ್ಥೆಯ ತಳಹದಿಯಾದ ಆರ್ಥಿಕ ತತ್ತ್ವವು ಸಾಮಾಜಿಕ ಸಂಬಂಧಗಳನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ ಎಂಬುದು ಈಗ ಸ್ಪಷ್ಟವಾಗುತ್ತದೆ. ದೇಶದಲ್ಲಿನ ಶೇಕಡಾ ಮೂವತ್ತು ವಿದ್ಯಾವಂತ ಸಂಖ್ಯೆಯಲ್ಲಿ ತೀರ ಕಡಿಮೆ ಪ್ರಮಾಣದಲ್ಲಿ ಹೆಂಗಸರಿದ್ದಾರೆ. ಹೆಣ್ಣಿನ ವಿಮೋಚನೆಗೆ ವಿದ್ಯಾಭ್ಯಾಸ ಮೊದಲ ಮೆಟ್ಟಿಲು ಎಂದು ಹೇಳಲಾಗುತ್ತದೆ. ಆದರೆ ಈ ವಿದ್ಯಾಭ್ಯಾಸದ ಗುರಿ ಯಾವುದು, ಶಿಕ್ಷಣದ ಹೆಸರಿನಲ್ಲಿ ಯಾವುದನ್ನು ತುಂಬಲಾಗುತ್ತಿದೆ ಎಂಬುದನ್ನು ಗಮನಿಸಬೇಕು. ಕೇವಲ ಅಕ್ಷರ ಜ್ಞಾನ ಏನನ್ನೂ ಸಾಧಿಸುವುದಿಲ್ಲ. ಸುಧಾರಣೆಯ ಹೆಸರಿನಲ್ಲಿ ಈಗ ಹೆಣ್ಣಿಗೆ ವಿದ್ಯಾಭ್ಯಾಸ, ಉದ್ಯೋಗಾವಕಾಶಗಳನ್ನು ಕೊಡಲಾಗುತ್ತಿದೆ. ಇದರ ನಿಜವಾದ ಉದ್ದೇಶ ಅವಳ ವಿಮೋಚನೆಯಲ್ಲ, ಅವಳನ್ನೂ ಸುಶಿಕ್ಷಿತ ಕಾರ್ಮಿಕಳನ್ನಾಗಿ ತಯಾರುಮಾಡುವುದು. ಮೊದಲು ಮನೆಯೊಳಗೆ ಇದ್ದು ಶೋಷಣೆ ಅನುಭವಿಸುತ್ತಿದ್ದ ಹೆಣ್ಣು ಈಗ ಹೊರಗೆ ಬಂದು ಆರ್ಥಿಕ ಶೋಷಣೆಗೂ ಒಳಗಾಗುತ್ತಿದ್ದಾಳೆ. ಈ ಇಬ್ಬಂದಿ ಶೋಷಣೆಯಿಂದ ಅವಳ ಸ್ಥಾನ ಸುಧಾರಿಸುವುದಿಲ್ಲ. ದುಡಿಯುವ ಎಲ್ಲ ಹೆಂಗಸರಿಗೂ ಆರ್ಥಿಕ ಸ್ವಾತಂತ್ರ್ಯ ಇದೆಯೆಂದು ಭಾವಿಸುವುದು ತಪ್ಪು. ಅಲ್ಲದೆ ಮನೆಯೊಳಗಿನ ಅವಳ ದೈಹಿಕ ಶ್ರಮ ಕುಟುಂಬದ

---

*ಹೆಣ್ಣು ಗಂಡಿನ ಭೇದವಿಲ್ಲದೆ ಆಧ್ಯಾತ್ಮಿಕ, ಸಾಮಾಜಿಕ ಸ್ವಾತಂತ್ರ್ಯಗಳನ್ನು ನೀಡಲು ಮನಸ್ಸು ಮಾಡಿರುವುದು ಇತಿಹಾಸದಲ್ಲಿ ಅಪರೂಪದ ಅಂಶ. ಈಗ ಈ ಆಧ್ಯಾತ್ಮಿಕ ಸ್ವಾತಂತ್ರ್ಯ ಕೇವಲ ಧರ್ಮಾಚರಣೆಯಲ್ಲಷ್ಟೇ ಉಳಿದಿದೆ.

ಅಥವಾ ಸಮಾಜದ ಆರ್ಥಿಕ ವಲಯದೊಳಗೆ ಸೇರವಾಗಿ ಬರುವುದಿಲ್ಲ. ಸಂಭಾವನೆಯಿಲ್ಲದ ಯಾವ ಶ್ರಮವೂ ಶ್ರಮವೇ ಅಲ್ಲ ಎಂದು ಆಧುನಿಕ ಅರ್ಥವಿಜ್ಞಾನ ಶ್ರಮವನ್ನು ವಿವರಿಸುತ್ತದೆ. ಮನೆಯ ಸುಖ ಸಂತೋಷಗಳು, ಮನೆಯ ಸದಸ್ಯರ ಕ್ಷೇಮ ಆರೋಗ್ಯಗಳೇ ಅವಳ ಶ್ರಮಕ್ಕೆ ಸಂಭಾವನೆ ಎಂದು ಹಿರಿಯರು ತಲೆ ಸವರಿದ್ದಾರೆ. ತೀರ ಮುಂದುವರಿದ ಸಮಾಜವಾದಿ ದೇಶಗಳಲ್ಲಿ ಕೂಡ ಮನೆ ಕೆಲಸವನ್ನು 'ವರ್ಕ್‌ಪಾಯಿಂಟ್'ಗಳಾಗಿ ಗಣಿಸುತ್ತಿಲ್ಲ. ಅಲ್ಲದೆ, ವಿದ್ಯಾವಂತ, ಉದ್ಯೋಗಸ್ಥ ಮಹಿಳೆಯರೂ ಕೂಡ ರಾಜಕೀಯ, ಸಾಮಾಜಿಕ ಕ್ಷೇತ್ರಗಳು ತಮ್ಮದಲ್ಲವೆಂದು ಭಾವಿಸುತ್ತಾರೆ. ಸಂಸಾರದ ಜವಾಬ್ದಾರಿ ತಮ್ಮ ನೈತಿಕ ಹೊಣೆಯೆಂದು ತಿಳಿಯುತ್ತಾರೆ. ಇಷ್ಟು ಬಿಟ್ಟರೆ, ಅವರನ್ನು ದಾರಿತಪ್ಪಿಸುವ ಹೇರಳವಾದ ವಿಷಯಗಳು ಅವರ ಆಲೋಚನೆಯನ್ನು ಕಸಿಯುತ್ತವೆ. ಆರ್ಥಿಕವಾಗಿ ಗಳಿಸುವ ಶಕ್ತಿ ಈಗ ಬಂದಿದ್ದರೂ ಪರಂಪರಾಗತವಾದ ಆಸಕ್ತಿಗಳನ್ನು ಮಹಿಳೆಯರು ಬಿಟ್ಟು ಕೊಟ್ಟಿಲ್ಲ. ಅಂತರ್ಗತವಾಗಿ ಹೆಣ್ಣು ಏನೂ ಬದಲಾಗಿಲ್ಲ. ಸಂಸ್ಕೃತಿಯ ರಕ್ಷಕಳು ತಾನೇ ಎಂದು ಹೆಣ್ಣು ಭಾವಿಸುತ್ತಾಳೆ; ಅವಳಿಗೆ ಹಾಗೇ ಹೇಳಲಾಗುತ್ತದೆ. ಎಲ್ಲೋ ಒಂದೆರಡು ಉದಾಹರಣೆಗಳನ್ನು ತೋರಿಸಿ ಮಹಿಳೆಯ ಮುನ್ನಡೆ ಆಗಿದೆಯೆಂದು ಭಾವಿಸುವುದು ತಪ್ಪಾಗುತ್ತದೆ. ಆ ಕ್ಷೇತ್ರಗಳಲ್ಲಿ ಮುನ್ನಡೆದಿರುವ ಸ್ತ್ರೀಯರು ಯಾವ ವರ್ಗವನ್ನು ಯಾವ ಉದ್ದೇಶವನ್ನು ಪ್ರತಿನಿಧಿಸುತ್ತಾರೆ ಎಂಬುದನ್ನು ಗಮನಿಸಬೇಕು.

ಉತ್ಪಾದನೆಯಲ್ಲಿ ಸ್ತ್ರೀಯರೂ ಭಾಗವಹಿಸಿದರೆ ಅವರು ಸ್ವತಂತ್ರರಾಗಿ ವಿಮೋಚನೆಪಡೆಯುತ್ತಾರೆ ಎನ್ನುವ ಮಾತು ಕೂಡ ಈಗ ಸುಳ್ಳಾಗಿದೆ. ಮೂಲಭೂತವಾದ ಆರ್ಥಿಕ ತಳಹದಿಯ ಬಗ್ಗೆ ಗಮನ ಹರಿಸದೆ, ಮೇಲು ಪದರದಲ್ಲಿ ಸುಧಾರಣೆಯನ್ನು ತರಬಯಸುವುದು ಅವೈಜ್ಞಾನಿಕವೂ, ವಿಫಲವೂ ಆಗುತ್ತದೆ. ಈ ವ್ಯವಸ್ಥೆಯಲ್ಲೇ ಸ್ತ್ರೀಯರ ಸ್ಥಾನಮಾನಗಳನ್ನು ಸುಧಾರಿಸಲು ಯೋಜನೆಗಳನ್ನು ಸೂಚಿಸುವ ಸಮಾಜ ಶಾಸ್ತ್ರಜ್ಞರು, ಆರ್ಥಿಕ ತಜ್ಞರು ಮೇಲಿನ ಸಂಗತಿಗಳನ್ನು ಗಮನಿಸುವುದು ಒಳ್ಳೆಯದು. ವೈಜ್ಞಾನಿಕವಾದ ತತ್ವದ ಆಧಾರವಿಲ್ಲದೆ ವಿಮೋಚನೆ ಮಾಡಲು ಹೊರಟ ಎಲ್ಲ ಸ್ತ್ರೀಚಳುವಳಿಗಳೂ ವಿಫಲವಾಗುವುದು ಆ ಕಾರಣದಿಂದಲೇ. ಈ ಸಂಗತಿಯನ್ನು ಗಮನಿಸದೆ ಪಾಶ್ಚಾತ್ಯದೇಶಗಳ ಚಳುವಳಿಯ ಮಾದರಿಯನ್ನನುಸರಿಸಿ ಸ್ತ್ರೀಸ್ವಾತಂತ್ರ್ಯ ಹೋರಾಟವನ್ನು ನಡೆಸುವುದು ಅಸಾಧುವಾಗುತ್ತದೆ. ಜಗತ್ತಿನ ಯಾವ ಮೂಲೆಯಲ್ಲಿ ಕ್ರಾಂತಿ ನಡೆದರೂ ಅದರ ಜತೆಗೇ ಸ್ತ್ರೀ ವಿಮೋಚನೆಯ ಸಮಸ್ಯೆಯೂ ಸೇರಿಕೊಂಡಿರುವುದನ್ನು ಗಮನಿಸಬಹುದು. ಇದು ಕ್ರಾಂತಿಯೊಳಗೆ ನಡೆಯಬೇಕಾದ ಕ್ರಾಂತಿ.

ಹೆಣ್ಣಿನ ಪರಂಪರೆಯನ್ನು ಗುರುತಿಸುವಾಗ ಅವಳ ಆಭರಣ, ವಸ್ತ್ರವಿನ್ಯಾಸಗಳ ಚರಿತ್ರೆಯನ್ನು ಬರೆಯದೆ, ಈ ಅಂಶಗಳನ್ನು ಗಮನಿಸುವುದು ಸೂಕ್ತವಾಗುತ್ತದೆ. ಹೆಣ್ಣಿನ ಸ್ಥಾನಮಾನಗಳನ್ನು ಕಲ್ಲಿನಲ್ಲಿ, ದೇವತೆಗಳ ಜಾತಕದಲ್ಲಿ ಹುಡುಕುವುದಕ್ಕಿಂಥ ಅವಳು ತಳೆಯಬೇಕಾದ ನಿಲುವುಗಳ ಬಗ್ಗೆ ಮಾತನಾಡುವುದು ಅಗತ್ಯವಾಗುತ್ತದೆ. ಇದೆಲ್ಲಕ್ಕಿಂಥ ಮುಖ್ಯವಾದುದು ಮಹಿಳೆಯರು ಬೆಳೆಸಿಕೊಳ್ಳಬೇಕಾದ ಜಾಗೃತ ರಾಜಕೀಯ ಪ್ರಜ್ಞೆ. ಮಹಿಳಾ ಸ್ವಾತಂತ್ರ್ಯ ಬೇರೆಯವರು ಕೊಡುವುದಕ್ಕಿಂಥ ಹೆಚ್ಚಾಗಿ ತಾವೇ ಸಂಪಾದಿಸಿಕೊಳ್ಳುವಂಥದ್ದು. ವ್ಯವಸ್ಥೆಯ ಬಗ್ಗೆ ಮೊದಲ ಪ್ರತಿಭಟನೆ ಹೆಣ್ಣಿನದೇ ಆಗಿಬಿಟ್ಟರೆ ಅದರ ಬದಲಾವಣೆ ಹೆಚ್ಚು ದೂರ ಉಳಿಯುವುದಿಲ್ಲ. ಇದೆಲ್ಲವೂ ಇಂದಿನ ಹೆಣ್ಣು ಸಾಂಸಾರಿಕ ಆಸಕ್ತಿಗಳಲ್ಲಿ ಮುಳುಗಿರುವುದರಿಂದ ಹೊರ ಬರುವುದನ್ನು ಅವಲಂಬಿಸಿದೆ. ನೈಸರ್ಗಿಕ ಅಗತ್ಯಗಳಿಗೆ ಬಿಟ್ಟರೆ ಮಿಕ್ಕ ವೈಯಕ್ತಿಕ ಅವಲಂಬನಗಳಿಲ್ಲವಾಗಬೇಕಾದರೆ ಎಲ್ಲ ಉತ್ಪಾದನಾ ಮೂಲಗಳನ್ನೂ ಗಂಡು ಹೆಣ್ಣುಗಳ ಭೇದವಿಲ್ಲದೆ ಬಳಸಿಕೊಳ್ಳುವ ವ್ಯವಸ್ಥೆಯ ನಿರ್ಮಾಣವಾಗಬೇಕು. ಆಗ ಹೆಣ್ಣಿನ ಬಗ್ಗೆ ಇರುವ ಎಲ್ಲ ಭ್ರಾಮಕ ಕಲ್ಪನೆಗಳೂ ಕಳಚಿಕೊಳ್ಳುತ್ತವೆ. ಇದು ನನ್ನ ತಲೆಮಾರು ಅಗತ್ಯವಾಗಿ ಯೋಚಿಸಬೇಕಾಗಿರುವ ವಿಷಯಗಳಲ್ಲೊಂದು.

# ಭಾರತದಲ್ಲಿ ಸಾಮಾಜಿಕ ಬದಲಾವಣೆ ಮತ್ತು ಮಹಿಳೆ

ಮೂಲ : ಎಂ. ಎನ್. ಶ್ರೀನಿವಾಸ್
ಅನು : ಟಿ. ಆರ್. ಶ್ಯಾಮಭಟ್ಟ

ಭಾರತ ಸಾಂಸ್ಕೃತಿಕವಾಗಿ ವೈವಿಧ್ಯಮಯ. ಆದ್ದರಿಂದ ಇಲ್ಲಿಯ 'ಸಾಮಾಜಿಕ ಬದಲಾವಣೆ ಮತ್ತು ಮಹಿಳೆ' ಎಂಬ ವಿಚಾರವಾಗಿ ಇದಮಿತ್ಥಂ ಎಂದು ಹೇಳುವುದು ಕಷ್ಟಸಾಧ್ಯ. ಹಳ್ಳಿ-ಪಟ್ಟಣಗಳಲ್ಲದೆ, ಇಲ್ಲಿ ಧರ್ಮ, ಪ್ರದೇಶ ಮತ್ತು ಜಾತೀಯ ಆಧಾರಗಳ ಮೇಲೆ ಸಾಕಷ್ಟು ವ್ಯತ್ಯಾಸಗಳಿವೆ. ಭಾರತೀಯ ಮಹಿಳೆ ಹೀಗೆ ಎಂದು ಹೇಳುವಾಗ ಅನೇಕ ಷರತ್ತುಗಳೊಂದಿಗೆ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಅಂತಹ ಹೇಳಿಕೆಯೇ ತಪ್ಪಾಗುತ್ತದೆ. ಎಂತಲೇ ಈ ಲೇಖನದಲ್ಲಿ ನಿರ್ದಿಷ್ಟವಾಗಿ ಸಮೂಹ ಅಥವಾ ಸಮೂಹ-ಸಮುಚ್ಚಯಗಳನ್ನು ಹೆಸರಿಸಿ ನನ್ನ ಅಭಿಪ್ರಾಯಗಳನ್ನು ಹೇಳಿದ್ದೇನೆ. ಇಷ್ಟಾದರೂ ನಾನು ಹೇಳುವುದಕ್ಕೆ ಕೆಲವು ಅಪವಾದಗಳು ಇದ್ದೇ ಇರುತ್ತವೆ ಎಂಬ ಅರಿವು ನನಗಿದೆ. ನಾನು ಹೆಸರಿಸುವ ಸಮೂಹ ಮತ್ತು ಸಮುಚ್ಚಯಗಳು ಅಷ್ಟಿಷ್ಟು ಅಸ್ಪಷ್ಟವಾಗಿವೆಯೆಂದು ನಾನು ಮೊದಲೇ ಹೇಳಬೇಕಾಗಿದೆ. ಸ್ಥೂಲವಾಗಿ ಮತ್ತು ತುಲನಾತ್ಮಕವಾಗಿ ನೋಡಿದಾಗ ನನ್ನ ಹೇಳಿಕೆಗಳು ಪ್ರಮಾಣಬದ್ಧವಾಗಿವೆ.

ಯಾವುದೇ ಸಮಾಜದ ಬಗೆಗೆ ಸತ್ಯಾಂಶಗಳನ್ನು ಕಂಡುಹಿಡಿಯುವುದು ಕಷ್ಟದ ಕೆಲಸ. ಭಾರತದಂತಹ ಸಂಕೀರ್ಣ ಹಾಗೂ ಪುರಾತನ ದೇಶವನ್ನು ಕುರಿತು ಹೇಳುವಾಗ ಈ ಕ್ಲಿಷ್ಟತೆ ಇನ್ನೂ ಅನೇಕ ಪಟ್ಟು ಹೆಚ್ಚುತ್ತದೆ. ಇಂದಿನ ಭಾರತಕ್ಕಿಂತ ಹಿಂದಿನ ಅಂದರೆ ಮಧ್ಯ ಮತ್ತು ಪ್ರಾಚೀನಕಾಲದ ಬಗೆಗೆ ಸತ್ಯಾಂಶಗಳನ್ನು ತಿಳಿಯುವುದು ಇನ್ನೂ ಕಷ್ಟ. ಹಿಂದಿನ ಸಾಹಿತ್ಯಿಕ ಕೃತಿಗಳ ಕಾಲ ನಿರ್ಣಯದ ತೊಂದರೆ ತಪ್ಪಿದ್ದಲ್ಲ. ಈ ಸಾಹಿತ್ಯದಲ್ಲಿ ಮಹಿಳೆಯರ ಬಗೆಗೆ ಬೇಕಾದಷ್ಟು ಮಾಹಿತಿ ದೊರಕುತ್ತದೆ. ಆದರೆ, ಇವುಗಳನ್ನು ಐತಿಹಾಸಿಕ ಆಧಾರಗಳೆಂದು ಪರಿಗಣಿಸುವುದು ಪೆದ್ದುತನವಾದೀತು. ಹಿಂದೂ ಕಾಯಿದೆ ಗ್ರಂಥಗಳ ಮಟ್ಟಿಗಂತೂ ಈ ಮಾತು ನಿಜ. ಅವುಗಳಲ್ಲಿನ ನಿಯಮಾವಳಿಗಳನ್ನು ಚಾರಿತ್ರಿಕ ಸಂಗತಿಗಳೆಂದು ಪರಿಗಣಿಸುವ ಪ್ರವೃತ್ತಿ ಇನ್ನೂ ಮುಂದುವರಿದುಕೊಂಡು ಬಂದಿದೆ. ಭಾರತೀಯ ಸಂವಿಧಾನ ಹಾಗೂ 1955ರ ಅಸ್ಪೃಶ್ಯತಾ ನಿವಾರಣಾ (ಅಪರಾಧಗಳ) ಕಾಯಿದೆಗಳಲ್ಲಿ ಅಸ್ಪೃಶ್ಯತೆ ಕಾನೂನು ಬಾಹಿರವೆಂದು ಸಾರಲಾಗಿದೆ. ಈ ಘೋಷಣೆಯ ಆಧಾರದ ಮೇಲೆ ಭಾರತದಲ್ಲಿ ಅಸ್ಪೃಶ್ಯತೆಯ ನಿವಾರಣೆಯಾಗಿದೆ ಎಂದು ಯಾರಾದರೂ ಒಬ್ಬ

ವಿದೇಶೀ ಪ್ರವಾಸಿ ಭಾವಿಸುವುದು ಎಷ್ಟು ಹಾಸ್ಯಾಸ್ಪದವೋ, ಶಾಸ್ತ್ರಗಳ ನಿಯಮಾವಳಿಗಳನ್ನು ಚಾರಿತ್ರಿಕ ಸಂಗತಿಗಳೆಂದು ಪರಿಗಣಿಸುವುದೂ ಅಷ್ಟೇ ಹಾಸ್ಯಾಸ್ಪದ. ಧರ್ಮಶಾಸ್ತ್ರಗಳ ವಿಚಾರ ಹೇಳುವುದಾದರೆ, ಶ್ರುತಿ, ಸ್ಮೃತಿಗಳೆರಡನ್ನೂ ಭಾರತೀಯ ಮಹಿಳೆಯ ಸ್ಥಾನಮಾನದ ಬದಲಾವಣೆಗೂ, ಬದಲಾವಣೆಯನ್ನು ವಿರೋಧಿಸುವುದಕ್ಕೂ ಉಪಯೋಗಿಸಲಾಗಿದೆ. ಇದರಿಂದ ಸಮಸ್ಯೆ ಇನ್ನಷ್ಟು ಜಟಿಲವಾಗಿದೆ. ಸಂಪ್ರದಾಯವಾದೀ ಹಿಂದೂಗಳು ಧರ್ಮಶಾಸ್ತ್ರಗಳ ಅದರಲ್ಲೂ ಮುಖ್ಯವಾಗಿ ಕಟ್ಟಾ ಸಂಪ್ರದಾಯವಾದಿಯಾದ ಮನುವಿನ ಮೇಲೆ ಆಣೆಯಿಟ್ಟು ಹೇಳಿದರೆ ಸುಧಾರಣಾವಾದಿಗಳು ವೇದಗಳನ್ನೇ (ಶ್ರುತಿ) ತಮ್ಮ ವಾದಪುಷ್ಟಿಗೆ ಬಳಸಿಕೊಂಡಿದ್ದಾರೆ.

ನಮ್ಮ ಲೋಕ ರೂಢಿಗಳೂ ಸತ್ಯವನ್ನು ಮರೆಮಾಚುವಂತೆ ಮಾಡಿವೆ. ಧರ್ಮಶಾಸ್ತ್ರಗಳಿಗಿಂತಲೂ ಇವು ಒಡ್ಡುವ ತೊಡಕುಗಳು ಇನ್ನೂ ಹೆಚ್ಚು. ಭಾರತದ ಹೆಚ್ಚಿನ ಭಾಗಗಳಲ್ಲಿ ಇರುವುದು ಪುರುಷ ಪ್ರಾಬಲ್ಯವಿರುವ ಸಮಾಜ. ಸ್ತ್ರೀಯಾದವಳು ಸದಾ ಗಂಡಸಿನ ಅಡಿಯಾಳಾಗಿ, ಅವಲಂಬಿಯಾಗಿ ಇರುವುದೇ ಭೂಷಣಪ್ರಾಯ ಎಂಬ ನಂಬಿಕೆ ಗಂಡಸರಲ್ಲಿದೆ. ಇದಕ್ಕೆ ಬೆಂಬಲವಾಗಿ ಅನೇಕ ಗಾದೆಗಳನ್ನೂ, ಜಾನಪದ ಕತೆಗಳನ್ನೂ ಉದಾಹರಿಸಬಹುದು. ಈ ಗಾದೆ–ಜನಪದ ಕತೆಗಳಲ್ಲಿ ಶತಶತಮಾನಗಳ ವಿವೇಕ ಅನುಭವಗಳು ಸಂಕ್ಷಿಪ್ತ ರೂಪದಲ್ಲಿ ಅಡಕವಾಗಿವೆ ಎಂಬ ನಂಬಿಕೆಯೂ ಇದೆ. ಆದರೆ ಭಾರತದ ವಿವಿಧ ಪ್ರದೇಶಗಳಲ್ಲಿ ಕ್ಷೇತ್ರಕಾರ್ಯ ನಡೆಸಿದ ಪ್ರತಿಯೊಬ್ಬನ ಅನುಭವವು ಈ ನಂಬಿಕೆಗಿಂತ ಭಿನ್ನವಾದದ್ದು. ಬಡ ಹಾಗೂ ನಿಮ್ನವೆಂದು ಹೇಳಲಾಗುವ ಜಾತಿಯ ಜನರಲ್ಲಿ ಪ್ರಚಲಿತವಿರುವ ಗಂಡಸು ಮತ್ತು ಹೆಂಗಸಿನ ನಡುವಣ ಸಂಬಂಧದ ರೀತಿಯು, ಮೇಲಿನವರೆಂದು ಹೇಳಲಾಗುವ ಜಾತಿಯ ಜನರಲ್ಲಿ ಇರುವುದಕ್ಕಿಂತ ಹೆಚ್ಚು ಸಮಾನತೆಯ ಆಧಾರದ ಮೇಲೆ ನಿಂತಂತೆ ಕಾಣುತ್ತದೆ. ಗಂಡಸರ ಮೇಲೆ ಪ್ರಾಬಲ್ಯಬೀರುವ ಹೆಂಗಸರು ಇರುವ ವಿಚಾರ ಸರ್ವ ವಿದಿತ. ಅದಲ್ಲದೆ ಗಂಡ-ಹೆಂಡಿರ ಸಂಬಂಧಕ್ಕೆ ಕಾಲದ ಒಂದು ಆಯಾಮವೂ ಇದೆ. ದಂಪತಿಗಳಿಗೆ ವಯಸ್ಸು ಹೆಚ್ಚುತ್ತಾ ಬಂದಂತೆ, ಗಂಡನು ಹೆಂಡತಿಯ ಮೇಲೆ ಹೆಚ್ಚು ಹೆಚ್ಚು ಅವಲಂಬಿತನಾಗುತ್ತಾ ಬರುತ್ತಾನೆ. ಇದರಿಂದ ಆಕೆಯ ಪ್ರಾಬಲ್ಯ ಹೆಚ್ಚುತ್ತಾ ಬರುತ್ತದೆ.

ಶೇಕಡಾ 70 ಕ್ಕಿಂತ ಹೆಚ್ಚು ಜನ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವ ಕೃಷಿ ದೇಶ ನಮ್ಮದು. ವ್ಯವಸಾಯ ಪ್ರಧಾನ ಕಸುಬು. ಇತರ ಕಸುಬುಗಳೆಲ್ಲ ಒಂದಲ್ಲ ಒಂದು ರೀತಿಯಿಂದ ಕೃಷಿಯಿಂದ ಬೆಂಬಲಿತವಾಗಿವೆ. ಕೃಷಿ ಒಂದು ಕೌಟುಂಬಿಕ ಕಸುಬು. ಮನೆಯ ಎಲ್ಲ ಸದಸ್ಯರೂ ವ್ಯವಸಾಯ ಮತ್ತು ಅದಕ್ಕೆ ಪೂರಕವಾದ ಚಟುವಟಿಕೆಗಳಲ್ಲಿ ನಿರತರಾಗಿರುತ್ತಾರೆ. ಗ್ರಾಮೀಣ ಭಾರತದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನವು ಕೃಷಿಯಿಂದ ನಾನಾ ವಿಧವಾಗಿ ಪ್ರಭಾವಿತವಾಗಿದೆ.

ಗ್ರಾಮೀಣ ಭಾರತದಲ್ಲಿ ಕೆಲಸಗಾರರ ಬೇಡಿಕೆ ವರ್ಷದ ಎಲ್ಲಾ ಕಾಲದಲ್ಲೂ ಒಂದೇ ಸಮ ಇರುವುದಿಲ್ಲ. ಉದಾಹರಣೆಗೆ, ನಾಟಿ ಮಾಡುವ, ಕಳೆ ಕೀಳುವ ಹಾಗೂ ಕಟಾವಿನ ಸಮಯಗಳಲ್ಲಿ ಕೆಲಸಗಾರರ ಅವಶ್ಯಕತೆ ಹೆಚ್ಚು. ಹೀಗೆ ಹೇಳುವಾಗ ನಾನು ದೇಶದಲ್ಲಿ ನೀರಾವರಿ ಸವಲತ್ತು ಇಲ್ಲದ ಖುಷ್ಕಿ ಜಮೀನು ಕೃಷಿಯನ್ನು ಮನಸ್ಸಿನಲ್ಲಿಟ್ಟು ಹೇಳುತ್ತಿದ್ದೇನೆ ವಿನಾ ಭತ್ತ ಮತ್ತು ಹಣದ ಬೆಳೆಗಳಾದ ಕಬ್ಬು, ಹೊಗೆಸೊಪ್ಪು ಅಥವಾ ಹತ್ತಿ ಬೆಳೆಯುವ, ನೀರಾವರಿ ಸವಲತ್ತು ಇರುವ ಪ್ರದೇಶಗಳ, ಇಲ್ಲವೇ ತೋಟಗಾರಿಕೆ ಅಥವಾ ಪ್ಲಾಂಟೇಷನ್ ಪ್ರದೇಶಗಳನ್ನಲ್ಲ. ಈ ಪ್ರದೇಶಗಳಲ್ಲಿ ಸಾಮಾನ್ಯ ಕಾಲದಲ್ಲೂ ಕೆಲಸಗಾರರ ಬೇಡಿಕೆ ಸಾಕಷ್ಟು ಇರಬಹುದು. ಅಲ್ಲೂ ಬೆಳೆ ಕಟಾವು ಮತ್ತು ಕಳೆ ಕೀಳುವ ಅವಧಿಗಳಲ್ಲಿ ಬೇಡಿಕೆ ಹೆಚ್ಚಾಗಬಹುದು.

ದುಡಿಮೆಯ ಬೇಡಿಕೆ ಅತಿ ಹೆಚ್ಚಿರುವ ಅವಧಿಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿರದ ಸ್ಥಿತಿವಂತ ಹಾಗೂ ಮೇಲು ಜಾತಿಯ ಹೆಂಗಸರ ಹೊರತು ಮಿಕ್ಕೆಲ್ಲ ಸಮರ್ಥ ಗಂಡಸರು, ಹೆಂಗಸರು ಕೆಲಸಕ್ಕೆ ಇಳಿಯುತ್ತಾರೆ. ಸಮಾಜದ ಕಡುಬಡವರ ಮನೆಗಳ ಹೆಂಗಸರು ಹೆಚ್ಚುವರಿ ಬೇಡಿಕೆಯ ದಿನಗಳಿಗಾಗಿ ಹಾತೊರೆಯುತ್ತಿರುತ್ತಾರೆ. ಯಾಕೆಂದರೆ ಅಷ್ಟಿಷ್ಟು ಪುಡಿಕಾಸು ಗಳಿಸಲು ಇದೇ ಪ್ರಶಸ್ತ ಸಮಯ. ಮಧ್ಯಮ ವರ್ಗದ ಹೆಂಗಸರು ಹೊಲ ಗದ್ದೆಗಳಲ್ಲಿ ಕೆಲಸಮಾಡುವವರಾದರೂ ನಗದು ಮಜೂರಿಯ ದೃಷ್ಟಿಯಿಂದ ಅಲ್ಲ. ಬದಲಾಗಿ ಪರಸ್ಪರ ಕೊಡು-ಕೊಳ್ಳುವ ಆಧಾರದ ಮೇಲೆ ಅವರು ದುಡಿಯುತ್ತಾರೆ. ನಗದು ಮಜೂರಿಗಾಗಿ ದುಡಿಯುವಂತೆ ಒಬ್ಬರು ಇನ್ನೊಬ್ಬರ ಹೊಲಗಳಲ್ಲಿ ವಿನಿಮಯದ ಆಧಾರದ ಮೇಲೆ ದುಡಿಯುವುದನ್ನು ಕೆಳಗಿನ ಸ್ಥಾನಮಾನದ ಸಂಕೇತವೆಂದು ಯಾರೂ ತಿಳಿಯುವುದಿಲ್ಲ.

ಗಂಡು ಹೆಣ್ಣುಗಳಿಗೆ ವಿಭಿನ್ನವಾದ ಶ್ರಮ ವಿಭಜನೆ ದೇಶದ ಉದ್ದಗಲದಲ್ಲೂ ನಾವು ಕಾಣುತ್ತೇವೆ. ಆದರೆ ಕೆಲವು ನಿರ್ದಿಷ್ಟ ಕಸಬುಗಳ ಬಗೆಗೆ ಈ ಪ್ರತ್ಯೇಕತೆ ಅತ್ಯಂತ ಸ್ಪಷ್ಟ. ಉದಾಹರಣೆಗೆ, ಉಳುವುದು ಗಂಡಸಿಗೇ ಮೀಸಲಾದ ಪ್ರತ್ಯೇಕ ಕಸಬು, ನಾಟಿ ಮಾಡುವುದು ಮುಖ್ಯವಾಗಿ ಹೆಂಗಸಿಗೇ ಮೀಸಲಾದ ಕೆಲಸ.

ನಗದು ಹಣಕ್ಕಾಗಿ ದುಡಿಯುವ ಹೆಂಗಸರು ದಿನಕ್ಕೆ ಸಾಧಾರಣ ಎಂಟು ತಾಸಿನಷ್ಟು ದುಡಿಯುತ್ತಾರೆ. ಅವರ ಕೆಲಸ ಹಗುರವಲ್ಲ. ರಣ ರಣ ಬಿಸಿಲಿನ ಬೇಗೆಯಲ್ಲಿ ಭಾರವಾದ ಬುಟ್ಟಿಗಳನ್ನು ಹೊತ್ತು ಸಾಗುವ ಅಥವಾ ಮಳೆಸುರಿಯುತ್ತಿರುವಾಗ ಇಲ್ಲವೇ ಹನಿಯಾಡುತ್ತಿರುವಾಗ ಬೆಳಗಿನಿಂದ ಸಂಜೆಯ ತನಕ ನಡು ಬಾಗಿಸಿ ನಾಟಿ ಮಾಡುವ ಕೆಲಸ ದೈಹಿಕವಾಗಿ ತುಂಬಾ ಶ್ರಮದಾಯಕವೆ. ಅವಳು ಮನೆಯ ಹೊರಗಡೆ ಎಷ್ಟೇ ದುಡಿಯಲಿ, ಆಕೆಗೆ ಮನೆಗೆಲಸದಿಂದ ವಿನಾಯಿತಿ ಇಲ್ಲ. ದಿನಕ್ಕೆರಡು ಬಾರಿ ಅಡಿಗೆ, ಮನೆ ಗುಡಿಸುವುದು, ಸಾರಿಸುವುದು, ಗೊಬ್ಬರ ಎತ್ತಿ ತಿಪ್ಪೆಗೆ ಹೊತ್ತು

ಸಾಗಿಸುವುದು ಇತ್ಯಾದಿ ಕೆಲಸ ಇದ್ದದ್ದೆ. ದುಡಿಮೆಗಾರ್ತಿ ಹೆಂಗಸಿನ ಜೀವನ ನಿಸ್ಸಂಶಯವಾಗಿ ಕಷ್ಟಕರವಾಗಿದ್ದರೂ, ಕುಟುಂಬದ ಹೊಣೆ ಹೊರುವುದರ ಜತೆಗೆ ಸಂಪಾದನೆಯನ್ನೂ ಮಾಡುತ್ತಿರುವುದರಿಂದ, ಆಕೆಗೆ ಕೆಲವು ಸ್ವಾತಂತ್ರ್ಯ ಅಥವಾ ಸವಲತ್ತುಗಳು ಇವೆ. ಮೇಲು ವರ್ಗದ ಮಹಿಳೆಯಂತೆ ಆಕೆ ಸದಾ ಮನೆಯ ಒಳಗೇ ಇರಬೇಕಾಗಿಲ್ಲ. ಆಕೆಗೆ ಹೆಚ್ಚು ಓಡಾಡಲು ಅವಕಾಶ, ಸ್ವಾತಂತ್ರ್ಯಗಳಿವೆ. ಕೆಲಸದ ವೇಳೆ ಆಕೆ ಇತರ ಹೆಂಗಸರ ಮತ್ತು ಗಂಡಸರ ಸಂಪರ್ಕಕ್ಕೆ ಬರುತ್ತಾಳೆ. ಸ್ಥಿತಿವಂತರ ಮನೆಯ ಅಮ್ಮಣ್ಣಿಗಳಂತೆ ಆಕೆಯ ವ್ಯವಹಾರ ಮನೆಗೇ ಸೀಮಿತವಲ್ಲ. ಬದಲಾಗಿ ಮನೆಯ ಹೊರಗಡೆಯೂ ಆಕೆ ಹೆಚ್ಚು ಜನರೊಂದಿಗೆ ವ್ಯವಹರಿಸುತ್ತಾಳೆ.

ನೈತಿಕ ನಿಯಮಗಳ ದೃಷ್ಟಿಯಿಂದ ನೋಡಿದಾಗಲೂ ನಾವು ಮೇಲು ಅಥವಾ ಕೀಳು ಎಂದು ಹೇಳಲಾಗುವ ಜಾತಿಗಳ ಹೆಂಗಸರಲ್ಲಿ ಕೆಲವು ಮುಖ್ಯ ವ್ಯತ್ಯಾಸಗಳನ್ನು ಕಾಣುತ್ತೇವೆ. ನಿಮ್ನ ಜಾತಿಯ ಹೆಂಗಸರಿಗೆ ಅನ್ವಯವಾಗುವ ನೀತಿ ನಿಯಮಗಳಲ್ಲಿ ಮಾನವೀಯತೆಯ ಅಂಶವನ್ನು ಹೆಚ್ಚಿನ ಪ್ರಮಾಣದಲ್ಲಿ ಕಾಣಬಹುದು. 1942ರಲ್ಲಿ ನಾನು ತಮಿಳುನಾಡಿನ ಮಧುರೈನಲ್ಲಿ ಕ್ಷೇತ್ರಾಧ್ಯಯನ ಮಾಡುತ್ತಿದ್ದೆ. ಅಲ್ಲಿ ಪಡೆದ ಒಂದು ಅನುಭವವನ್ನು ನಾನೆಂದೂ ಮರೆಯಲಾರೆ. ನಾನಿದ್ದ ಮನೆಯ ಮಾಲಿಯ ಹೆಂಡತಿಗೆ ತನ್ನ ಗಂಡನ ಜತೆ ಏಗಿ ಏಗಿ ಸಾಕಾಗಿತ್ತು. ಕೊನೆಗೊಂದು ದಿನ ತಾಳ್ಮೆ ಮೀರಿ ಹಾಕಿಕೊಂಡಿದ್ದ ತಾಳಿಯನ್ನು ಕಿತ್ತು ಅವನ ಮುಖಕ್ಕೆಸೆದಳು : "ನಿನ್ನ ಜತೆ ಏಗಿ ಏಗಿ ನನಗೆ ಸಾಕಾಗಿ ಹೋಗಿದೆ" ಎಂದು ಅಬ್ಬರಿಸಿದಳು. ಆತನಿಗೆ ಹೆಂಡತಿಯ ನಡತೆಯ ಮೇಲೆ ವಿನಾಕಾರಣ ಸಂಶಯವಿತ್ತು. ಹೆಂಡತಿ ಹೀಗೆ ಆತನಿಗೆ ಛೀಮಾರಿ ಹಾಕಿ ಹೋದಮೇಲೆ ಆತ ತನ್ನ ನೆಂಟರ ಹತ್ತಿರ ಹೋದ. ಆಕೆಯ ನೆಂಟರ ಮೂಲಕ ರಾಜಿ ಪಂಚಾಯಿತಿ ಮಾಡಿಸಿಕೊಡಿ ಎಂದು ಅಂಗಲಾಚಿದ. ಕೊನೆಗಂತೂ ರಾಜಿ ಆಯಿತು. ಇಕ್ಕಡೆಯವರ ಸಮ್ಮುಖದಲ್ಲಿ 'ನಾನು ಇನ್ನು ಮುಂದೆ ಸರಿಯಾಗಿ ನಡೆದುಕೊಳ್ಳುತ್ತೇನೆ' ಎಂದು ಆತ ಆಣೆ ತೆಗೆದುಕೊಂಡ ಮೇಲೇ ಈ ರಾಜಿ ಸಾಧ್ಯವಾಯಿತು.

ಧನ ಮತ್ತು ವಿದ್ಯೆಗಳಲ್ಲಿ ಒಂದು ಕುಟುಂಬ ಮುಂದುವರಿಯುತ್ತಿದೆ ಎಂದಿಟ್ಟುಕೊಳ್ಳೋಣ. ಆಗ ಅದರ ಸ್ಥಾನಮಾನ ಹೆಚ್ಚಾಗುತ್ತದೆ. ವಿಶೇಷವಾಗಿ ಪಡೆದ ಈ ಸ್ಥಾನಮಾನ ಕುಟುಂಬಕ್ಕೆ ದಕ್ಕಬೇಕಾದರೆ, ತಮ್ಮ ಜಾತಿಯ ಸ್ಥಾನಮಾನ ಹೆಚ್ಚಬೇಕು. ಜಾತಿಯ ಸ್ಥಾನಮಾನ ಹೆಚ್ಚಿದಾಗ, ಕುಟುಂಬ ಪಡೆದ ಸ್ಥಾನಮಾನಕ್ಕೆ ಅಂಗೀಕಾರದ ಮುದ್ರೆ ಬಿದ್ದಂತೆ. ಇದರ ಪರಿಣಾಮ ಅವರ ಜೀವನ ಮತ್ತು ವಿಧಿ-ಸಂಸ್ಕಾರಗಳ ಸಂಸ್ಕೃತಾನುಕರಣ. ಸಂಸ್ಕೃತಾನುಕರಣದ ಒಂದು ಕೆಟ್ಟ ಪರಿಣಾಮವೆಂದರೆ ಅದು ಹೇರುವ ತಾರತಮ್ಯ ನಿಯಮಾವಳಿ. ಹೆಂಗಸರು ತಮ್ಮ ಸ್ವಾತಂತ್ರ್ಯ ಕಳೆದುಕೊಂಡು ಗಂಡಸರಿಗೆ ಅಡಿಯಾಳಾಗಬೇಕಾಗುತ್ತದೆ. ಸಂಸ್ಕೃತಾನುಕರಣ ಮತ್ತು ಭೂಮಿ ಒಡೆ-

ತನದ ಸಿರಿವಂತಿಕೆಗಳು ಒಂದಕ್ಕೊಂದು ಸೇರಿಕೊಂಡು, ಮಹಿಳೆಯರ ಸ್ಥಾನಮಾನವನ್ನು ಕೆಳಮಟ್ಟಕ್ಕೆ ತರುತ್ತವೆ. ಅವರ ಚಲನವಲನದ ವ್ಯಾಪ್ತಿ ಕುಂದುತ್ತದೆ. ಮುಸಲ್ಮಾನರ ಪ್ರಾಬಲ್ಯವಿರುವ ಪ್ರದೇಶಗಳಲ್ಲಿ ಈ ಪ್ರಕ್ರಿಯೆಯೊಂದಿಗೆ ಬುರ್ಖಾ ಪದ್ಧತಿಯೂ ಸೇರಿ ಸ್ತ್ರೀಯರನ್ನು ಮೂಲೆಗುಂಪಾಗಿಸುತ್ತದೆ. ಗಂಡಸರ ಅಡಿಯಾಳಾಗುವ ಕ್ರಿಯೆ ಹೀಗೆ ಸಂಪೂರ್ಣಗೊಳ್ಳುತ್ತದೆ.

ಸ್ತ್ರೀ ಎಲ್ಲಾ ವಿಧದಲ್ಲೂ ಗಂಡಸಿಗೆ ಅಡಿಯಾಳಾಗಿ ಇರಬೇಕಾದದ್ದು ಸಂಸ್ಕೃತಾನುಕರಣ ತತ್ತ್ವದ ಒಂದು ಅವಿಭಾಜ್ಯ ಅಂಶ. ಧರ್ಮಶಾಸ್ತ್ರಕಾರ ಮನು ಇದನ್ನು ಸ್ಪಷ್ಟವಾಗಿ ಹೇಳಿದ್ದಾನೆ: ತನ್ನ ಜೀವನದ ಪ್ರತಿ ಹಂತದಲ್ಲೂ ಸ್ತ್ರೀ ಪುರುಷನಿಗೆ ಅವಲಂಬಿ ; ಮದುವೆಯವರೆಗೆ ತಂದೆಯ ಅಂಕೆಯಲ್ಲಿ, ಆಮೇಲೆ ಗಂಡನ ಕೈಕೆಳಗೆ, ಗಂಡ ತೀರಿಹೋದಮೇಲೆ ತನ್ನ ಗಂಡು ಮಕ್ಕಳ ತಾಬೆಯಲ್ಲಿ. ಹೆಂಡತಿಯು ಗಂಡನಿಗೆ ವಿಧೇಯಳಾಗಿ ಇರಬೇಕಾದ ಅಂಶಕ್ಕೆ ಅತಿ ಎನ್ನಿಸುವಷ್ಟರ ಮಟ್ಟಿಗೆ ಮಹತ್ವ ನೀಡಲಾಯಿತು. ಗಂಡನೇ ದೇವರು, ಯಜಮಾನ. ಆತನ ಅವಿರತ ಸೇವೆ, ಆತನನ್ನು ಸದಾ ಸಂತುಷ್ಟಿಯಲ್ಲಿ ಇರುವಂತೆ ಮಾಡುವುದು–ಎಲ್ಲ ಹೆಂಡಿರ ಅತ್ಯುಚ್ಚ ಧ್ಯೇಯ ಎಂದು ಸಾರಲಾಯಿತು. ಅವಳು ವಿಧೇಯಳಾಗಿ ಶುದ್ಧ ಚಾರಿತ್ರ್ಯಕ್ಕೆ ಹೆಸರಾಗಿ ಇರಬೇಕಾಗಿತ್ತು. ಇದಕ್ಕೆ ಪತಿಪರಾಯಣೆ ಅಥವಾ ಪತಿವ್ರತೆ ಎಂದು ಕರೆದರು. ಗಂಡ ದಾರಿ ತಪ್ಪಿದಾಗಲೂ ಹೆಂಡತಿಯ ಶ್ರದ್ಧೆ ಅಚಲವಾಗಿರಬೇಕಾಗಿತ್ತು. ತನ್ನ ಒಳ್ಳೆಯತನದಿಂದ ನಿರ್ವ್ಯಾಜ ಸೇವೆಯಿಂದ ಆತನನ್ನು ಉತ್ತಮನನ್ನಾಗಿ ಮಾಡುವುದು ಆಕೆಯ ಹೊಣೆ. ಆತನಿಗಿಂತ ಮೊದಲು ಸಾಯುವುದು, ಸುಮಂಗಲಿಯಾಗಿ ಸಾಯುವುದು, ಆಕೆಯ ಪರಮೋಚ್ಚ ಧ್ಯೇಯ. ಸುಮಂಗಲಿಯಾಗಿರುವಾಗ ಬರುವ ಸಾವು ಹಿಂದಿನ ಜನುಮದಲ್ಲಿ ಮಾಡಿದ ಸುಕೃತಗಳಿಗೆ ಸಾಕ್ಷಿ. ಹಾಗೆಯೇ ಹಿಂದಿನ ಜನುಮದ ಪಾಪದ ಪರಿಣಾಮವೇ ವೈಧವ್ಯ. ಸಾಮಾಜಿಕವಾಗಿ ಹಾಗೂ ಧಾರ್ಮಿಕ ವಿಧಿ ಸಂಸ್ಕಾರಗಳ ನೆಲೆಯಲ್ಲಿ ವಿಧವೆಯನ್ನು ತುಚ್ಛವಾಗಿ ಕಾಣಲಾಗುತ್ತಿತ್ತಲ್ಲದೆ, ಬಂಧು ಬಳಗದ ಕೈಯಲ್ಲಿ ಆಕೆ ಸಿಕ್ಕುಬಿದ್ದು ಅಭಿಮಾನಭಂಗಳಾಗಿ ಬಾಳು ಸವೆಸಬೇಕಾಗಿತ್ತು.

ಮಹಿಳೆಯರನ್ನು ಗುಲಾಮಗಿರಿಗೆ ಎಳೆಯುವುದರಲ್ಲಿ ಸಂಸ್ಕೃತಾನುಕರಣ ಒಂದು ಉತ್ತಮ ಪರಿಕರವಾಯಿತು. ಈ ಹೀನ ಸ್ಥಾನಮಾನ ಧಾರ್ಮಿಕ ವಿಧಿ ಸಂಸ್ಕಾರಗಳಲ್ಲಿ ವ್ಯಕ್ತವಾಯಿತು. ಆದರೂ ಹೆಂಡತಿಯು ಗಂಡನ ಅರ್ಧಾಂಗಿ ಎಂಬ ಕಲ್ಪನೆಯಿತ್ತು. ಆತ ಗಳಿಸಿದ ಧಾರ್ಮಿಕ ಪುಣ್ಯದಲ್ಲಿ ಆಕೆಗೆ ಸಮಪಾಲು ಎಂಬ ನಂಬಿಕೆ ಬೇರೆ. ಗಂಡ ಹೆಂಡಿರಿಬ್ಬರೂ ಸೇರಿಯೇ ಮನೆಯ ಧಾರ್ಮಿಕ ಕ್ರಿಯೆಗಳನ್ನು ಮಾಡಬೇಕಾಗಿತ್ತು. ಪವಿತ್ರ ನದಿಯಲ್ಲಿ ಸ್ನಾನಮಾಡುವಾಗ ಒಬ್ಬರೊಬ್ಬರ ಉತ್ತರೀಯಗಳನ್ನು ಗಂಟು ಹಾಕಿಕೊಳ್ಳುವ ಕ್ರಿಯೆ ಗಂಡ ಹೆಂಡಿರ ಐಕ್ಯದ

ದ್ಯೋತಕ. ಒಟ್ಟಿನಲ್ಲಿ ಆಕೆ ಗಂಡನ ಒಂದು ಅಂಗ. ಆದರೆ ಆ ಸ್ಥಾನ ಪಡೆಯುವುದಕ್ಕೆ ಆಕೆ ತೆರಬೇಕಾದ ಬೆಲೆ ಎಂದರೆ ಆತನ ಗುಲಾಮಳಾಗಿ ಬಾಳುವುದು.

ಸಂಪ್ರದಾಯಸ್ಥ ಭಾರತದಲ್ಲಿ ಮೇಲಿನ ಮತ್ತು ಮಧ್ಯಮ ಜಾತಿಗಳಲ್ಲಿ ಹುಡುಗಿಯರಿಗೆ ನೀಡುತ್ತಿದ್ದ ತರಬೇತಿಯ ಉದ್ದೇಶ– ಆಕೆಯನ್ನು ಉತ್ತಮ ಸೊಸೆಯನ್ನಾಗಿ ಮತ್ತು ಹೆಂಡತಿಯನ್ನಾಗಿ ಮಾಡುವುದಾಗಿತ್ತು. ಉತ್ತಮ ಹೆಂಡತಿಯನ್ನಾಗಿ ಮಾಡುವುದಕ್ಕಿಂತ ಉತ್ತಮ ಸೊಸೆಯನ್ನಾಗಿ ಮಾಡುವುದಕ್ಕೆ ಹೆಚ್ಚಿನ ಪ್ರಾಶಸ್ತ್ಯ. ಆಕೆಗೆ ಚೆನ್ನಾಗಿ ಅಡಿಗೆ ಮಾಡಲು ಬರಬೇಕು ; ಆಕೆ ಎಲ್ಲಾ ಮನೆಗೆಲಸಗಳಲ್ಲಿ ಪರಿಣತಿ ಪಡೆದಿರಬೇಕು. ಆಕೆ ಅತ್ತೆ ಹಾಕಿದ ಗೆರೆ ಮೀರ ಬಾರದು. ಮದುವೆಯಾದ ಮೊದಲನೆಯ ವರ್ಷದಲ್ಲಂತೂ ಗಂಡನಿಗಿಂತ ಅತ್ತೆ ಯದೇ ಕಾರುಬಾರು. ಇಷ್ಟೆಲ್ಲ ಇದ್ದರೂ ಅತ್ತೆ ಆಕೆಯನ್ನು ಚೆನ್ನಾಗಿ ನೋಡಿ ಕೊಳ್ಳುತ್ತಾಳೆಂಬ ಭರವಸೆ ಇರಲಿಲ್ಲ. ನಿರ್ದಾಕ್ಷಿಣ್ಯವಾಗಿ, ಕಟುವಾಗಿ ತೇಜೋವಧೆ ಮಾಡುವಂತೆ ಅತ್ತೆ ನಡೆದುಕೊಳ್ಳುತ್ತಿದ್ದುದೇ ಸಾಮಾನ್ಯ. ಅತ್ತೆ ಸೊಸೆಯನ್ನು ಹೀನಾಯವಾಗಿ ಕಾಣುವ ಬಗೆಗೆ ನಮ್ಮಲ್ಲಿ ಎಷ್ಟು ಜನಪದ ಕತೆಗಳಿಲ್ಲ ! (ಸೌರಾಷ್ಟ್ರದ ಕೆಲವು ಭಾಗಗಳಲ್ಲಿ ಸೊಸೆಯರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ಅನೇಕ ಎಂದು ವರದಿಗಳು ಬಂದಿವೆ.)

ಸೊಸೆ ತುಂಬಾ ಫಲವತ್ತಾಗಿ, ಧಾರಾಳವಾಗಿ ಮಕ್ಕಳನ್ನು ಹೆತ್ತು– ಮುಖ್ಯ ವಾಗಿ ಗಂಡು ಮಕ್ಕಳನ್ನು ಹೆತ್ತು– ಗಂಡನ ವಂಶಾಭಿವೃದ್ಧಿ ಮಾಡಬೇಕಾಗಿದ್ದಿತು. ಈ ದಿಶೆಯಲ್ಲಿ ಆಕೆ ವಿಫಲಳಾದರೆ ಆಕೆಯನ್ನು ಬದಿಗೊತ್ತಿ, ಇನ್ನೊಬ್ಬಳನ್ನು ಕೈಹಿಡಿಯುವ ಹಕ್ಕು ಗಂಡನದು.

ಮೇಲು ಜಾತಿಯ ಹಾಗೂ ಧನಿಕರ ಹೆಂಗಸರೊಂದಿಗೆ ಹೋಲಿಸಿದರೆ, ಕೆಳಗಿನ ಜಾತಿಯ ಮತ್ತು ಬಡವರ ಮನೆಗಳ ಹೆಂಗಸರು ಆರ್ಥಿಕವಾಗಿ ಹೆಚ್ಚು ಸ್ವತಂತ್ರರು. ದುಡಿಮೆ ಮಾಡಿ ಹಣ ಗಳಿಸುವವರು ಅವರಾದ್ದರಿಂದ ಅವರು ಗಂಡಂದಿರಿಗೆ ಅಷ್ಟಾಗಿ ಅಡಿಯಾಳಾಗಬೇಕಾಗಿಲ್ಲ. ಅವರ ಮಟ್ಟಿಗೆ ನೀತಿ ನಿಯಮಗಳಲ್ಲಿ ಅಷ್ಟು ಕಟ್ಟು ನಿಟ್ಟಿಲ್ಲ ; ಅವು ಏಕ ಪಕ್ಷೀಯವೂ ಅಲ್ಲ. ವಿಚ್ಛೇದದ ಹಕ್ಕು ಅವರಲ್ಲಿ ಇದ್ದೇ ಇತ್ತು. ಗಂಡ ಅಡ್ಡದಾರಿ ಹಿಡಿದಾಗ ಹಳ್ಳಿಯ ಸಾರ್ವಜನಿಕ ಅಭಿಪ್ರಾಯ ಮತ್ತು ಹತ್ತಿರದ ಸಂಬಂಧಿಗಳ ಮೊರೆ ಹೋಗುವುದು ಸದಾ ಸಾಧ್ಯವಿತ್ತು.

ಕಳೆದ ಕೆಲವು ದಶಕಗಳಲ್ಲಿ ಮಹಿಳೆಗೆ ಸಂಬಂಧಿಸಿದಂತೆ ಭಾರತದಲ್ಲಿ ಉಂಟಾದ ಬದಲಾವಣೆಯನ್ನು ಚರ್ಚಿಸುವುದಕ್ಕೆ ಹಿನ್ನೆಲೆಯಾಗಿ ಸಾಂಪ್ರದಾಯಿಕ ಭಾರತದಲ್ಲಿ ಸ್ತ್ರೀಯರ ಸ್ಥಾನಮಾನ ಹೇಗಿತ್ತು ಎಂಬುದರ ಜಿಜ್ಞಾಸೆ ಅಗತ್ಯವಾಯಿತು. ಭಾರತದ ಎಲ್ಲಾ ಭಾಗಗಳಲ್ಲಿ ಒಂದೇ ರೀತಿಯ ಬದಲಾವಣೆಯಂತೂ ಆಗಲೇ ಇಲ್ಲ.

ಪ್ರಾದೇಶಿಕ ಹಾಗೂ ಪ್ರತ್ಯೇಕ ವರ್ಗಗಳ ನಡುವೆ ವ್ಯತ್ಯಾಸಗಳು ಇದ್ದೇ ಇದ್ದವು. ಈ ಬದಲಾವಣೆಗಳು ಪ್ರಾರಂಭವಾದದ್ದು ನಮ್ಮ ದೇಶದ ಪ್ರಸಿದ್ಧ ರೇವುಗಳಾದ ಮುಂಬಯಿ, ಕಲ್ಕತ್ತಾ ಮತ್ತು ಮದರಾಸುಗಳಲ್ಲಿ. ಸಾಮಾನ್ಯವಾಗಿ ದೇಶದ ಒಳ ಭಾಗಗಳಿಗಿಂತ ತೀರ ಪ್ರದೇಶಗಳಲ್ಲಿ ಬದಲಾವಣೆ ಹೆಚ್ಚಿನ ಪ್ರಮಾಣದಲ್ಲಿ ಉಂಟಾಯಿತು. ಭಾರತದ ಹೃದಯವೆಂದು ಹೇಳಲಾಗುವ ಗಂಗಾ ಬಯಲು ಪ್ರದೇಶದಲ್ಲಿ ಆದ ಬದಲಾವಣೆ ಅತಿ ಕಡಿಮೆ. ಸಾಂಪ್ರದಾಯಿಕವಾಗಿ ಮೊಗಲರ ಪ್ರಾಬಲ್ಯವಿದ್ದದ್ದೂ ಇದೇ ಪ್ರದೇಶದಲ್ಲಿ. ಈ ವಲಯದಲ್ಲೇ ನಾವು ಬುರ್ಖಾ ಪದ್ಧತಿ ಮತ್ತು ಧಾರ್ಮಿಕವಾಗಿ ಮನ್ನಣೆ ಪಡೆದ ಬಹುಪತ್ನೀತ್ವಗಳಂತಹ ಸಂಸ್ಥೆಗಳು ಊರ್ಜಿತವಾಗಿ ಉಳಿದಿರುವುದನ್ನು ಕಾಣಬಹುದು. ಈ ಪ್ರದೇಶದ ಹಾಗೂ ಕರಾವಳಿ ನೆಲೆಗಳಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ಕುರಿತು ವ್ಯವಸ್ಥಿತ ಅಧ್ಯಯನ ನಡೆಸಿದಲ್ಲಿ ಕರಾವಳಿಯ ಮಹಿಳೆಯರು ವಿದ್ಯೆ, ವೃತ್ತಿ ಮತ್ತು ಇತರ ಆಧುನಿಕತೆಯ ಸೂಚ್ಯಂಕಗಳಲ್ಲಿ ಮುಂದುವರಿದಿರುವ ಅಂಶ ಹೊರಬೀಳಬಹುದೆಂದು ನನ್ನ ಭಾವನೆ.

ಮೇಲು ಜಾತಿಯ ಹಾಗೂ ಧನಿಕರ ಹೆಂಗಸರ ಸ್ಥಾನಮಾನದ ಅವನತಿಗೆ ಕಾರಣವಾದ ಸಂಸ್ಕೃತಾನುಕರಣದ ಕೆಲವು ಅಂಶಗಳಂತೆಯೇ ಪಾಶ್ಚಾತ್ಯೀಕರಣ (ಅಥವಾ ಆಧುನೀಕರಣ ಎನ್ನಲೂಬಹುದು) – ಮುಖ್ಯವಾಗಿ ಮೊದಲ ಹಂತಗಳಲ್ಲಿ–ಅವರ ಸ್ಥಾನಮಾನಕ್ಕೆ ಹೆಚ್ಚಿನ ಧಕ್ಕೆ ತಂದಿತು. ಪಾಶ್ಚಾತ್ಯೀಕರಣ, ನಗರ ಪ್ರದೇಶಗಳಿಗೆ ವಲಸೆ ಹೋಗುವುದಕ್ಕೆ ಉತ್ತೇಜನವಿತ್ತಿತು. ಗಂಡಸರಲ್ಲಿ ವಿದ್ಯಾಭ್ಯಾಸ ಹೆಚ್ಚಾದಂತೆ ಅವರು ಹೆಚ್ಚು ಹೆಚ್ಚು ಹೊಸ ಉದ್ಯೋಗಗಳಿಗೆ ಸೇರತೊಡಗಿದರು. ಇದರ ಜತೆ ಜತೆಗೇ ವರದಕ್ಷಿಣೆಯ ಸಂಸ್ಥೆ ಹೆಚ್ಚು ಹೆಚ್ಚು ಜನಪ್ರಿಯವಾಗತೊಡಗಿತು. ವರ ದಕ್ಷಿಣೆ ಮೊಬಲಗಿನ ಮೊತ್ತವೂ ಹೆಚ್ಚಿತು. ವರದಕ್ಷಿಣೆಯ ಜತೆ ಕೊಡಬೇಕಾಗಿದ್ದ ವಸ್ತುಗಳಲ್ಲಿ ಹೆಚ್ಚು ಹೆಚ್ಚು ಮೌಲ್ಯದ ವಸ್ತುಗಳೂ ಸೇರತೊಡಗಿದವು. ಪೇಟೆ ಪಟ್ಟಣಗಳಲ್ಲಿ ವಾಸಿಸುವ ಮಧ್ಯಮ ವರ್ಗದ ತಂದೆ–ತಾಯಂದಿರಿಗೆ ವರದಕ್ಷಿಣೆ ಎಂಬುದು ಒಂದು ಘೋರ ಪೀಡೆಯಾಗಿದೆ. ಹೆಣ್ಣು ಹುಟ್ಟಿದರೇ ದುರಂತ ಎಂದು ತಿಳಿಯುವಷ್ಟರಮಟ್ಟಿಗೆ ಈ ಪಿಡುಗು ಬೆಳೆದಿದೆ. ಮೊದಲು ಹುಡುಗಿ ಮೈನೆರೆಯುವ ಮೊದಲೇ ಸ್ವಜಾತೀಯ ವರನೊಬ್ಬನಿಗೆ ಕೊಟ್ಟು ಮದುವೆ ಮಾಡಬೇಕೆಂಬ ವಾಡಿಕೆಯಿತ್ತು. ನಾನು ಚಿಕ್ಕ ಹುಡುಗನಾಗಿದ್ದಾಗ ಜನಾಭಿಪ್ರಾಯದ ನಾಯಕರು ಹುಡುಗಿಯರ ಮದುವೆಯ ವಯಸ್ಸು ಎಷ್ಟಿರಬೇಕೆಂಬ ಬಗೆಗೆ ಬಿಸಿ ಬಿಸಿ ವಾದ ವಿವಾದದಲ್ಲಿ ತೊಡಗುತ್ತಿದ್ದುದು ನನಗಿನ್ನೂ ನೆನಪಿದೆ. ಸಂಪ್ರದಾಯಸ್ಥರು ಹುಡುಗಿಯರ ಮದುವೆಯನ್ನು 12 ಅಥವಾ 13 ವಯಸ್ಸಿನ ಒಳಗಾಗಿ ಮಾಡಬೇಕಾದುದು ನ್ಯಾಯ ಎಂದು ವಾದಿಸಿದರೆ, ಪುರೋಗಾಮಿಗಳು ಮದುವೆಯ

ವಯಸ್ಸು ಅದಕ್ಕಿಂತ ಹೆಚ್ಚಿನದಿರಬೇಕೆಂದು ವಾದ ಮಂಡಿಸುತ್ತಿದ್ದರು. ಸಂಪ್ರದಾಯವಾದಿಗಳು ತಮ್ಮ ವಾದದ ಪುಷ್ಟಿಗಾಗಿ ಸಹಜವಾಗಿಯೇ ಮನುವನ್ನು ಉದಾಹರಿಸುತ್ತಿದ್ದರೆ, ಪುರೋಗಾಮಿಗಳು ವೇದಗಳ ಪುರಾವೆ ಮುಂದಿಡುತ್ತಿದ್ದರು. ವೇದಗಳು ಧರ್ಮಶಾಸ್ತ್ರಗಳಿಗಿಂತ ಶ್ರೇಷ್ಠವೆಂದು ಅವರ ವಾದ. ವರದಕ್ಷಿಣೆಯ ಪಿಡುಗಿನ ದೆಸೆಯಿಂದ ಸ್ವಜಾತಿಯಲ್ಲಿ ಗಂಡು ಸಿಗದೆ ಅವಿವಾಹಿತೆಯರಾಗಿ ಉಳಿಯಬೇಕಾದ ಕನ್ಯೆಯರ ಚಿಂತಾಜನಕ ಪರಿಸ್ಥಿತಿಗಳೇ ಆಗ ಅನೇಕ ಕತೆಗಳ ಹಾಗೂ ನಾಟಕಗಳ ವಸ್ತುಗಳಾಗಿದ್ದವು.

ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿ ಈ ವರದಕ್ಷಿಣೆಯ ವ್ಯಾಧಿ ಮೊದಲು ಈ ಸಂಸ್ಥೆಯ ಸಂಪರ್ಕವೇ ಇಲ್ಲದ ಹೊಸ ಜನಸಮುದಾಯಗಳಿಗೂ ಹಬ್ಬಿತು. ಅದಕ್ಕೆ ಮುಖ್ಯವಾಗಿ ಎರಡು ಕಾರಣಗಳು : ಮೊದಲನೆಯದಾಗಿ, ಕೃಷಿಯೇ ಕುಲಕಸಬಾಗಿದ್ದ ಜಾತಿಗಳಲ್ಲಿ ಮತ್ತು ದಲಿತ ವರ್ಗಗಳಲ್ಲಿ ವಿದ್ಯಾಭ್ಯಾಸ ಹೆಚ್ಚು ಹೆಚ್ಚು ಜನಪ್ರಿಯವಾಗತೊಡಗಿದ್ದು ; ಎರಡನೆಯದಾಗಿ, ಇವರು ಮೇಲು ಜಾತಿಗಳವರ ನಡವಳಿಕೆ ಕ್ರಮಗಳನ್ನು ಅನುಸರಿಸಲು ತೊಡಗಿದ್ದು. ವರದಕ್ಷಿಣೆ ಮೇಲು ಜಾತಿಗಳ ಅನಿವಾರ್ಯ ಶಿಷ್ಟಾಚಾರವಾಗಿರುವುದನ್ನು ನಾವಿಲ್ಲಿ ಸ್ಮರಿಸಬಹುದು. ಉದಾಹರಣೆಗೆ, ಆಂಧ್ರ ಪ್ರದೇಶದ ಕೆಲವು ಕೃಷಿ ಸಮೃದ್ಧ ಭಾಗಗಳಲ್ಲಿ ಡಾಕ್ಟರ್, ಇಂಜಿನಿಯರ್ ಅಥವಾ ಐ. ಎ. ಎಸ್. ಸೇವೆಗೆ ಆಯ್ಕೆಯಾದ ಅಭ್ಯರ್ಥಿಗಳು ವರದಕ್ಷಿಣೆಯಾಗಿ ಒಂದು ಲಕ್ಷ ರೂಪಾಯಿ, ಒಂದು ಕಾರು, ಇತ್ಯಾದಿ ಇನ್ನೂ ಅನೇಕ ವಸ್ತುಗಳನ್ನು ಕೇಳುವುದು ವಾಡಿಕೆಯಾಗಿದೆ. ಮೆಡಿಕಲ್ ಕಾಲೇಜು ಒಂದಕ್ಕೆ ಪ್ರವೇಶ ಪಡೆದ ಅಭ್ಯರ್ಥಿ ಆ ಪ್ರವೇಶ ಗಿಟ್ಟಿಸಿಕೊಂಡ ಒಂದೇ ಆಧಾರದ ಮೇಲೆ 20 ಸಾವಿರ ರೂಪಾಯಿಗಳಷ್ಟು ಹಣ ಪಡೆಯುವುದು ಸಾಧ್ಯ. ಅವನು ಡಾಕ್ಟರ್ ಅಗಿ ಹೊರಬಿದ್ದಾಗ ಸಿಗಬಹುದಾದ ಐದನೇ ಒಂದು ಭಾಗ ಇದು. ಕಲ್ಕತ್ತಾದ ಕೊಳೆಗೇರಿಗಳಲ್ಲಿ ವಾಸಿಸುವ ಮೆಹ್ತಾರ ಮತ್ತಿತರರಲ್ಲೂ ಐನೂರರಿಂದ ಸಾವಿರದವರೆಗೆ ವರದಕ್ಷಿಣೆಯ ವ್ಯವಹಾರ ನಡದೇ ಇದೆ.

ಸತ್ವಯುತ ಆಹಾರ, ಬಟ್ಟೆಬರೆ, ಕುರ್ಚಿ ಮೇಜುಗಳಂತಹ ಅಗತ್ಯಗಳನ್ನು ಹತ್ತು ಇಪ್ಪತ್ತು ವರ್ಷಗಳ ಕಾಲ ಬದಿಗಿರಿಸಿ, ಜುಗ್ಗುತನ ತೋರಿಸಿ, ಮಗಳ ಮದುವೆಯ ಸಂದರ್ಭದಲ್ಲಿ ವರದಕ್ಷಿಣೆ ಕೊಡಲು ಹಣ ಕೂಡಿಡುವ ಎಷ್ಟೋ ತಂದೆ ತಾಯಂದಿರಿದ್ದಾರೆ. ತಮಿಳು ಬ್ರಾಹ್ಮಣರು ಮದುವೆಗೆಂದು ಸೀರೆ ಆಭರಣ ಕೊಳ್ಳುವುದಕ್ಕಾಗಿ ವರ್ಷಗಟ್ಟಲೆ ಹಾಲು ತರಕಾರಿಗಳಲ್ಲಿ ಕಡಿತಮಾಡಿಯಾದರೂ ಹಣ ಉಳಿಸುವುದುಂಟು. ಮಧ್ಯಮ ವರ್ಗದವರು ಮಾಡುವ ಉಳಿತಾಯದ ಪ್ರಯತ್ನದಲ್ಲಿ ಹೆಚ್ಚಿನ ಅಂಶ ವರದಕ್ಷಿಣೆ ಮತ್ತು ಮದುವೆಯ ಖರ್ಚು ನಿರ್ವಹಿಸುವುದಕ್ಕೆ ಹೋಗುತ್ತದೆ. ಇದನ್ನು ನಮ್ಮ ಯೋಜನಾಕರ್ತರು ಗಣನೆಗೆ ತೆಗೆದುಕೊಳ್ಳ

ಬೇಕಾಗಿದೆ. ಈ ಉಳಿತಾಯ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗುವುದಿಲ್ಲ ಎಂಬುದಂತೂ ಖಚಿತ. ವರದಕ್ಷಿಣೆಯ ವಿರುದ್ಧ ದೇಶ ಕೈಕೊಂಡ ಒಂದೇ ಒಂದು ಕಾರ್ಯಕ್ರಮವೆಂದರೆ, ಅದನ್ನು ನ್ಯಾಯಬಾಹಿರವೆಂದು ಸಾರುವ ಶಾಸನವನ್ನು ಅಂಗೀಕರಿಸಿದ್ದು. ಇದು ಕೇವಲ ಸಾಂಕೇತಿಕ ಕ್ರಿಯೆ; ನಿಷ್ಪ್ರಯೋಜಕ ಕೆಲಸ. ವರದಕ್ಷಿಣೆಯ ಪದ್ಧತಿಯನ್ನು ಶಾಸನ ಮಾತ್ರದಿಂದ ಎದುರಿಸಲು ಸಾಧ್ಯವಿಲ್ಲ. ಕಾರ್ಯರೂಪಕ್ಕೆ ತರುವ ಉದ್ದೇಶವಿಲ್ಲದ ಶಾಸನದಿಂದಲಂತೂ ಈ ಕೆಲಸ ಸುತರಾಂ ಸಾಧ್ಯವಿಲ್ಲ. (ನಮ್ಮ ಸಾಮಾಜಿಕ ಶರೀರಕ್ಕೆ ಅಂಟಿರುವ ಜಾಡ್ಯಗಳನ್ನು ಬರೀ ಸಾಂಕೇತಿಕ ನೆಲೆಯಲ್ಲಿ ಪರಿಹರಿಸುವ ಸೂತ್ರಗಳನ್ನು ಸೃಷ್ಟಿಸುವ ಅಸಾಧಾರಣ ಸಾಮರ್ಥ್ಯ ನಮ್ಮ ನಾಯಕತ್ವಕ್ಕಿದೆ. ಈ ಸಾಮರ್ಥ್ಯ ಎಂತಹ ಮೇಧಾವಿಗಳನ್ನೂ ಸೋಜಿಸುವಂತಾದ್ದು. ಜನಸಂಖ್ಯೆಯ ವಿಪುಲ ಬೆಳವಣಿಗೆಯನ್ನು ಹತೋಟಿಯಲ್ಲಿಡಲು ವಿವಾಹದ ಕನಿಷ್ಠ ವಯೋಮಿತಿಯನ್ನು 21ಕ್ಕೆ ಹೆಚ್ಚಿಸಲು ಶಾಸನ ರಚಿಸಬೇಕೆಂಬ ಯೋಚನೆ ಇದೆ. ಈ ಅರ್ಥಹೀನ ಯೋಜನೆಯ ಕುರಿತು ಏನೂ ಹೇಳಬೇಕಾದ ಅಗತ್ಯವಿಲ್ಲ.) ಅದರ ವಿರುದ್ಧ ಹೋರಾಡಬೇಕಾದರೆ ಪ್ರಬಲ ಸಾರ್ವಜನಿಕ ಅಭಿಪ್ರಾಯ ರೂಪುಗೊಳ್ಳಬೇಕು. ಆದರ್ಶವಾದೀ ಯುವಕ ಯುವತಿಯರು ವರದಕ್ಷಿಣೆಯನ್ನು ತೀವ್ರವಾಗಿ ವಿರೋಧಿಸಬೇಕು. ವರದಕ್ಷಿಣೆಯ ವಿವಾಹ ಸಂದರ್ಭಗಳಲ್ಲಿ ಮತಪ್ರದರ್ಶನಗಳನ್ನು ನಡೆಸಬೇಕು. ವರದಕ್ಷಿಣೆಯ ರದ್ದತಿಯೂ ಸೇರಿದಂತೆ ಅನೇಕ ಸಾಮಾಜಿಕ ಸುಧಾರಣೆಗಳನ್ನು ಕಾರ್ಯರೂಪಕ್ಕೆ ತರಲು ರಾಜಕೀಯ ಪಕ್ಷಗಳು ರಚನಾತ್ಮಕವಾದ ವಿಭಾಗಗಳನ್ನು ತೆರೆಯಬೇಕು. ಕೊನೆಯದಾಗಿ ವಿವಾಹ ಸಂದರ್ಭಗಳಲ್ಲಿ ಸಿಕ್ಕಾಪಟ್ಟೆ ಉಣಬಡಿಸಿ ದುಂದುವೆಚ್ಚ ಮಾಡುವುದನ್ನು ನಿಜವಾಗಿ ತಡೆಯಲು ಕೇಂದ್ರ, ರಾಜ್ಯ ಸರ್ಕಾರಗಳೆರಡೂ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಬೇಕು. ನಮ್ಮ ರಾಜಧಾನಿಯಲ್ಲೇ ಆವಶ್ಯಕ ಉದ್ಯಮಗಳಿಗೆ ವಿದ್ಯುತ್ ಸರಬರಾಜು ಕಡಿತ ಮಾಡಿರುವಾಗಲೂ ವಿವಾಹ ವಿಜೃಂಭಣೆಗಳಿಗೆ ಏಕಿಷ್ಟು ಧಾರಾಳವಾಗಿ ವಿದ್ಯುತ್ ಒದಗಿಸುತ್ತಾರೆ ಎಂದು ಆಶ್ಚರ್ಯವಾಗುತ್ತದೆ. ಮೇಲು ವರ್ಗದ ಜನರ ಮದುವೆಗಳೆಂದರೆ ರಸ್ತೆ ರಸ್ತೆಗಳನ್ನೇ ಬಂದ್ ಮಾಡುತ್ತಾರೆ. ಇದರಿಂದ ಗಂಟೆಗಟ್ಟಲೆ ಸಾರಿಗೆ ಅಸ್ತವ್ಯಸ್ತಗೊಳ್ಳುತ್ತದೆ.

ಉಚ್ಚ ಮತ್ತು ವಿದ್ಯಾವಂತ ಜಾತಿಗಳಲ್ಲಿ ಪ್ರಚಲಿತವಿರುವ ವರದಕ್ಷಿಣೆಗೂ, ಅವರ ಹುಡುಗಿಯರ ಪ್ರೌಢ ಶಿಕ್ಷಣಕ್ಕೂ ಸಂಬಂಧವಿದೆ. ತಮ್ಮ ಮಗಳಿಗೆ ಯೋಗ್ಯ ವರ ಸಿಗದಾಗ ಆಕೆಯ ವಿದ್ಯಾಭ್ಯಾಸ ಮುಂದುವರಿಸುವುದೇ ಉಚಿತವೆಂದು ತಂದೆ ತಾಯಂದಿರು ಭಾವಿಸುತ್ತಾರೆ. ಕಾಲಕ್ರಮೇಣ ಹುಡುಗಿಯರ ವಿವಾಹದ ವಯೋಮಿತಿ ಹೆಚ್ಚುವುದಕ್ಕೆ ಇದು ಕಾರಣವಾಯಿತು. ವಿದ್ಯಾವಂತ ಯುವಕರು ಅವಿದ್ಯಾವಂತರಿಗಿಂತ ವಿದ್ಯಾವಂತ ಯುವತಿಯರನ್ನೇ ಮದುವೆಯಾಗುವುದೇ ಯೋಗ್ಯವೆಂದು

ಭಾವಿಸತೊಡಗಿದರು. ಈಗ ನಮ್ಮ ಸಮಾಜದ ಕೆಲ ವರ್ಗಗಳಲ್ಲಿ ಹುಡುಗರಷ್ಟೇ, ಹುಡುಗಿಯರಿಗೂ ವಿದ್ಯಾಭ್ಯಾಸ ಅಗತ್ಯವೆಂಬ ತಿಳಿವಳಿಕೆ ಮೂಡಿದೆ. ಈ ಸಮಸ್ಯೆ ಇನ್ನಷ್ಟು ಹೆಚ್ಚು ಸಂಕೀರ್ಣವಾಗಿದೆಯೆಂದು ನನಗೆ ಗೊತ್ತು. ನಮ್ಮ ಸಮಾಜದ ಕೆಲವು ವಲಯಗಳಲ್ಲಿ – ಅದರಲ್ಲೂ ಮುಖ್ಯವಾಗಿ ಮೇಲು ಜಾತಿಗಳಲ್ಲಿ ಮತ್ತು ನಗರವಾಸಿ ಮಧ್ಯಮ ವರ್ಗಗಳಲ್ಲಿ - ಯುವತಿಯರ ವಿವಾಹ ವಯೋಮಿತಿ ಹೆಚ್ಚುವುದಕ್ಕೆ ವರದಕ್ಷಿಣೆಯೂ ಸೇರಿದಂತೆ ಇನ್ನೂ ಅನೇಕ ಸಂಕೀರ್ಣ ಅಂಶಗಳು ಮುಖ್ಯವಾಗಿ ಕಾರಣ ಎಂದು ನನ್ನ ನಂಬಿಕೆ. ಈ ವಲಯಗಳಲ್ಲಿ ಹುಡುಗಿಯರು ಮಾಮೂಲು ಪದ್ಧತಿಯೆಂಬಂತೆ ಕಾಲೇಜು, ವಿಶ್ವವಿದ್ಯಾಲಯಗಳ ಮೆಟ್ಟಲು ಹತ್ತುತ್ತಾರೆ ; ಪರೀಕ್ಷೆಗಳಲ್ಲೂ ಹೆಚ್ಚಿನವರು ಸಾಕಷ್ಟು ಚೆನ್ನಾಗಿಯೇ ಮಾಡುತ್ತಾರೆ. ನಮ್ಮ ಹುಡುಗರು ಯಾಕೆ ಇಷ್ಟು ಚೆನ್ನಾಗಿ ಓದುವುದಿಲ್ಲ ಎಂದು ನಮ್ಮ ಶಿಕ್ಷಣ ತಜ್ಞರು ಆಶ್ಚರ್ಯಪಡತೊಡಗಿದ್ದಾರೆ.

ಪಾಶ್ಚಾತ್ಯ ದೇಶಗಳಲ್ಲಿ ಉನ್ನತ ಹುದ್ದೆಗಳು ಹಾಗೂ ಅಧಿಕಾರದ ಸ್ಥಾನಗಳು ಗಂಡಸರಿಗೇ ಮೀಸಲು. ಸ್ತ್ರೀಯರಿಗೆ ಅಂತಹ ಸ್ಥಾನಗಳಿಗೆ ಬರಲು ಅವಕಾಶವೇ ಇಲ್ಲ. ಈ ದೃಷ್ಟಿಯಿಂದ ನೋಡಿದರೆ ಅವರ ವಿರುದ್ಧ ನಮ್ಮ ದೇಶದಲ್ಲಿ ಅಂತಹ ಭೇದ ಭಾವ ಇಲ್ಲದಿರುವುದು ಸಂತೋಷದ ವಿಚಾರ. ಐ.ಎ.ಎಸ್. ಮತ್ತು ಐ. ಎಫ್. ಎಸ್.ಗಳಿಗೆ ನಮ್ಮಲ್ಲಿ ನಿರಾತಂಕವಾಗಿ ಮಹಿಳೆಯರನ್ನು ನೇಮಿಸಿಕೊಳ್ಳುತ್ತಾರೆ. ಮಹಿಳಾ ಡಾಕ್ಟರ್‌ರು, ಅಧ್ಯಾಪಕರು, ಶಿಕ್ಷಣವೇತ್ತರು, ವಕೀಲರು, ವಾಣಿಜ್ಯೋದ್ಯಮಿಗಳು ಮತ್ತು ರಾಜಕಾರಣಿಗಳು ನಮ್ಮಲ್ಲಿ ಎಲ್ಲೆಲ್ಲೂ ಇದ್ದಾರೆ. ಸುಮಾರು ಒಂಭತ್ತು ವರ್ಷಗಳಿಂದ ನಮ್ಮನ್ನು ಮಹಿಳಾ ಪ್ರಧಾನಿ ಆಳುತ್ತಿದ್ದಾರೆ. ಇಬ್ಬರು ಮಹಿಳೆಯರು ಮುಖ್ಯ ಮಂತ್ರಿಗಳಾಗಿದ್ದಾರೆ. ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಅನೇಕ ಮಂದಿ ಮಹಿಳಾ ಮಂತ್ರಿಗಳಿದ್ದಾರೆ. ಅವರು ರಾಜ್ಯಪಾಲರ ರಾಯಭಾರಿಗಳ ಮತ್ತು ಶಾಸನ ಸಭೆಗಳ ಅಧ್ಯಕ್ಷಸ್ಥಾನಗಳನ್ನೂ ಅಲಂಕರಿಸಿದ್ದಾರೆ. ತಮ್ಮ ಉದ್ಧಾರವಾಗಬೇಕಾದರೆ ರಾಜಕೀಯ ಅಧಿಕಾರ ಪಡೆಯುವುದೇ ಖಚಿತವಾದ ಹಾಗೂ ತ್ವರಿತವಾದ ಮಾರ್ಗವೆಂದು ಭಾರತೀಯ ಮಹಿಳೆಯರು ಮನಗಂಡಿದ್ದಾರೆ. ವಿಶೇಷವೆಂದರೆ, ಗಂಡಸರು ಈ ಪ್ರವೃತ್ತಿಯನ್ನು ಅವರಿಗೆ ಅಸಹಜವೆಂದು ತಿಳಿಯದಿರುವುದು. ಮಹಿಳಾ ಸ್ವಾತಂತ್ರ್ಯ ಚಳುವಳಿ (Women's Lib Movement) ಏನೂ ಪ್ರಗತಿ ಸಾಧಿಸಲು ವಿಫಲವಾದುದಕ್ಕೆ ಒಂದು ಮುಖ್ಯ ಕಾರಣ, ನಮ್ಮ ಮಹಿಳೆಯರು ತಮ್ಮ ಭವಿಷ್ಯ ಪರಿವರ್ತಿಸಲು ಬೇಕಾದಷ್ಟು ರಾಜಕೀಯ ಅಧಿಕಾರವನ್ನು ಈಗಾಗಲೆ ಪಡೆದಿರುವುದು. ನಿಜವಾದ ಅಧಿಕಾರದ ಮುಂದೆ ಮಹಿಳಾ ಸ್ವಾತಂತ್ರ್ಯ ಚಳುವಳಿ ಒಂದು ಸವಕಲು ನಾಣ್ಯ.

ಇಷ್ಟೊಂದು ಸುಗಮವಾಗಿ ಇಲ್ಲಿಯ ಮಹಿಳೆಯರು ರಾಜಕೀಯಕ್ಕೆ ಇಳಿದದ್ದು ಮಹಾತ್ಮಾ ಗಾಂಧಿಯವರ ದೆಸೆಯಿಂದ. ಅವರು ರಾಜಕೀಯ ಕ್ರಾಂತಿಕಾರರು ಮಾತ್ರ ಆಗಿರಲಿಲ್ಲ, ಸಾಮಾಜಿಕ ಕ್ರಾಂತಿಕಾರರೂ ಆಗಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರನ್ನು ಸೇರಿಸಿಕೊಳ್ಳಲು ಅವರು ಹಿಂಜರಿಯಲಿಲ್ಲ. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಭಾರತೀಯ ಮಹಿಳೆಯರು ಕೆಚ್ಚಿದೆಯಿಂದ ಲಾಠಿ ಗುಂಡುಗಳ ಏಟುಗಳನ್ನು ಎದುರಿಸಿದರು ; ಸೆರೆಮನೆವಾಸವನ್ನೂ ಅನುಭವಿಸಿದರು. ದೇಶದ ಸ್ವಾತಂತ್ರ್ಯಕ್ಕಾಗಿ ಅವರು ಬಂಧಿತರಾಗುತ್ತಿದ್ದ ಘಟನೆಗಳ ಮಹತ್ವ ಸಾಮಾನ್ಯವಲ್ಲ ; ಮೊದಲ ಬಾರಿಗೆ ಭಾರತೀಯ ಮಹಿಳೆ ಶತಶತಮಾನಗಳಿಂದ ಬೆಳೆದುಬಂದ ರೂಢಿಯ ಹಿಡಿತದಿಂದ ಹಾಗೂ ಗಂಡಸರ ಆಶ್ರಯದಿಂದ ಮುಕ್ತಿಗೊಂಡುದರ ದ್ಯೋತಕ ಇವು. ಸಮಾಜದ ಉದ್ವೇಗಲಗಳಲ್ಲಿ ರಾಜಕೀಯ ಸ್ಪಂದನಗಳನ್ನು ಅವರು ಗ್ರಹಿಸತೊಡಗಿದರು, ಸಾಮಾಜಿಕ ಸುಧಾರಣೆಯ ತುರ್ತು ಆವಶ್ಯಕತೆಯನ್ನು ಮನಗಂಡರು. ಈ ಹಿನ್ನೆಲೆಯಲ್ಲಿ ನೋಡಿದಾಗ ಸ್ವತಂತ್ರ ಭಾರತದಲ್ಲಿ ಅವರು ಪ್ರಧಾನ ಹುದ್ದೆಗಳನ್ನು ಅಲಂಕರಿಸಿದ್ದು ಮತ್ತು ಗಂಡಸರು ಈ ದಿಸೆಯಲ್ಲಿ ಅವರಿಗೆ ತಡೆಯೊಡ್ಡದೇ ಇರುವುದು ಸಹಜವೇ ಆಗಿದೆ.

ಸರ್ಕಾರಿ ಕಚೇರಿಗಳಲ್ಲಿ, ವಿಶ್ವವಿದ್ಯಾಲಯ, ಕಾರ್ಖಾನೆ, ವ್ಯಾಪಾರೀ ಸಂಸ್ಥೆ ಬ್ಯಾಂಕುಗಳಲ್ಲಿ ನಮ್ಮ ವಿದ್ಯಾವಂತ ಮಹಿಳೆಯರು ಬಹುಸಂಖ್ಯೆಯಲ್ಲಿ ನೌಕರಿ ಮಾಡುತ್ತಿದ್ದಾರೆ. ದಿನೇ ದಿನೇ ಅತಿವೇಗದಿಂದ ಉಲ್ಬಣಿಸುತ್ತಿರುವ ಹಣದುಬ್ಬರದ ಈ ದುರ್ಭರ ದಿನಗಳಲ್ಲಿ ಒಂದು ಆದಾಯಕ್ಕಿಂತ ಎರಡು ಆದಾಯ ಉತ್ತಮ ಎಂಬ ಸತ್ಯ ಮಧ್ಯಮವರ್ಗದವರಲ್ಲಿ ಗೋಚರಿಸುತ್ತಾ ಇದೆ. ಇದರಿಂದ ಗಂಡ - ಹೆಂಡಿರ ಸಂಬಂಧದಲ್ಲಿ ಹೊಸ ಹೊಂದಾಣಿಕೆ ಅಗತ್ಯವಿದೆಯಾದರೂ ಇಬ್ಬರೂ ದುಡಿಯ ಬಯಸುತ್ತಾರೆ. ಮನೆಗೆಲಸಗಳಲ್ಲಿ ಗಂಡನೂ ಹೆಚ್ಚು ಹೆಚ್ಚಾಗಿ ಭಾಗವಹಿಸುತ್ತಾನೆ. ಅವನ ತಂದೆಯಾಗಿದ್ದರೆ ಅಂತಹ ಕೆಲಸ ತನ್ನ ಗೌರವಕ್ಕೆ ಕುಂದು ಎಂದು ಭಾವಿಸುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿದೆ. ಎಲ್ಲಾ ಮುಖ್ಯ ವಿಚಾರಗಳಲ್ಲಿ ಹೆಂಡತಿಯ ಅಭಿಪ್ರಾಯಗಳನ್ನು ಕೇಳಲಾಗುತ್ತದೆ. ಗಂಡ-ಹೆಂಡಿರ ಸಂಬಂಧ ಹೆಚ್ಚು ಹೆಚ್ಚು ಸಮಾನತೆಯ ಆಧಾರದ ಮೇಲೆ ನಿಲ್ಲತೊಡಗಿದೆ. ಇದರ ಜತೆಯಲ್ಲೇ ಮನೆಯ ಹಾಗೂ ಸುತ್ತಲಿನ ಸಾಮಾಜಿಕ ಜೀವನ ಹೆಚ್ಚು ಹೆಚ್ಚು ಲೌಕಿಕವಾಗತೊಡಗಿದೆ ; ಮಡಿ ಮೈಲಿಗೆಗಳ ಹಿಡಿತ ಸಡಿಲವಾಗತೊಡಗಿದೆ. ಆಹಾರ ಕ್ರಮದಲ್ಲಿ ಸಾಕಷ್ಟು ಬದಲಾವಣೆಯಾಗಿದೆ, ಆಗುತ್ತಿದೆ. ಮನೆಯಲ್ಲಿ ಮಾಡುವ ಧಾರ್ಮಿಕ ವಿಧಿಗಳು ಕಡಿಮೆಯಾಗತೊಡಗಿವೆ. ಬಹುಶಃ ದೇವಸ್ಥಾನ, ಮಠಗಳಲ್ಲಿ ಇವು ಅಧಿಕಗೊಳ್ಳುತ್ತಿರಬೇಕು.

ಆದರೆ ಬದಲಾವಣೆಗಳೆಲ್ಲ ವಿದ್ಯಾವಂತ, ಮಧ್ಯಮ ಹಾಗೂ ಉಚ್ಚ ವರ್ಗಗಳಿಗೆ ಮಾತ್ರ ಸೀಮಿತ, ಬಡವರ ಮನೆಬಾಗಿಲ ಕಡೆಗೆ ಈ ಬದಲಾವಣೆಗಳು ಇನ್ನೂ ತಲೆ ಹಾಕಿದಂತಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದಕ್ಕೆ ಇನ್ನೂ ವಿರೋಧವಿದೆ. ಬಡವರವುಟ್ಟಿಗೆ ಇದು ಸಹಸಾ ನಿಜ. ಎಲ್ಲಾ ಪ್ರದೇಶಗಳ ಬಡವರ್ಗಗಳ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡದಿದ್ದಲ್ಲಿ ನಮ್ಮ ಸಾಮಾಜಿಕ ಬದಲಾವಣೆ ಅಪೂರ್ಣವಾಗೇ ಉಳಿಯುತ್ತವೆ; ಕಣ್ಣೊರಸುವ ಕ್ರಿಯೆಯಾಗಿಯೇ ಉಳಿಯುತ್ತದೆ. ಒಬ್ಬ ಗಂಡಸಿಗೆ ನೀವು ವಿದ್ಯೆ ನೀಡಿದರೆ ನೀವು ಒಬ್ಬನಿಗಷ್ಟೇ ನೀಡಿದಂತೆ, ಆದರೆ ನೀವು ಅದನ್ನೇ ಒಬ್ಬ ಮಹಿಳೆಗೆ ನೀಡಿದರೆ ಇಡೀ ಕುಟುಂಬಕ್ಕಲ್ಲದೆ ಮುಂದಿನ ಪೀಳಿಗೆಗೂ ವಿದ್ಯೆ ನೀಡಿದಂತೆ–ಎಂದು ಹಿಂದಿನ ಸಮಾಜ ಸುಧಾರಕರು ಹೇಳುತ್ತಿದ್ದರು. ವಿದ್ಯಾಭ್ಯಾಸ ಅದರದೇ ಆದ ಕಿಮ್ಮತ್ತಿನ ಬಲದಿಂದ ಶ್ರೇಷ್ಠ, ಮಾತ್ರವಲ್ಲ–ಭಾರತೀಯ ಸಮಾಜದ ತ್ವರಿತ ಆಧುನೀಕರಣ, ಕುಟುಂಬ ಯೋಜನೆ ಮತ್ತು ಆರ್ಥಿಕ ಅಭಿವೃದ್ಧಿಗಳಿಗೆ ಉತ್ತಮ ಸಾಧನ. ಬದಲಾವಣೆ ಮತ್ತು ಅಭಿವೃದ್ಧಿಯಲ್ಲಿ ವಿದ್ಯಾಭ್ಯಾಸ ಒಂದು ಉತ್ತಮ ಬಂಡವಾಳ ಹೂಡಿಕೆಯೇ ಸೈ.

# ಒಂದು ಅನಿಸಿಕೆ

**ಶೈಲಜಾ ಉಡಚಣ**

ಮನೆಯ ಹೆಂಡತಿಯನ್ನು ಬಲವಾಗಿ
ಮುಚ್ಚಿಟ್ಟು ಬರುವ ಗಂಡ, ಹೊರಗೆ
ತನ್ನ ಕೋಟನ್ನೂ ಹಾಯಾಗಿ ಬಿಚ್ಚುತ್ತಾನೆ.
ಮುಚ್ಚಿಡುವ, ಕದ್ದು ಕುಡಿಯುವ
ಸಾಲು ಸುತ್ತಿನಲ್ಲಿ, ಅನಂತದ ಹಾಸು ಹೊಕ್ಕಿನಲ್ಲಿ,
ಕೈಯು ಕಿತ್ತು, ಕಾಲು ಸಿಕ್ಕಿಕೊಂಡ ಬೊಬ್ಬುಳಿಕೆ.
'ಕಂಚಗಾರನಿಗೆ ಕಾಲು, ಬಳೆಗಾರನಿಗೆ ಕೈಯಿ...'
ತಾನು ಗಂಡು–ಹೆಂಣು ಎಂಬುದನ್ನು ಮರೆವ
ಪ್ರಯಾಸದಲ್ಲಿದ್ದರೂ ಅಕ್ಕಪಕ್ಕದ ಕಣ್ಣುಗಳ ಬಂಣ
ಘಮ್ಮನೆ ಮೂಗಿಗೆ ಬಡಿದು ಮೈ ಮುದುಡು :
ತಾನೊಬ್ಬ ಮ್ಯಾಗ್ನೆಟ್ ಎಂಬ ಉಬ್ಬು,
ಹಾಲು–ನಾಲಗೆಗಳ ಸರಳ ಸಂಬಂಧಕ್ಕೆ
ಹಲವು ಪುರಾಣಗಳ ಪರ್ಯಾಯ ವ್ಯಾಖ್ಯಾನ.
ಯಾವುದಕ್ಕೆ ಎಂದು ಇಳಿವ ಮೊದಲೆ ಹಾಲು
ಹುಳಿಯಾದ ಅನುಭವ. ಮನಸ್ಸಿನ ಕಸರತ್ತು
ಇತಿ–ಮಿತಿ ನೆನೆದಂತೆ ಮಂಗನಿಂದ ಮನುಷ್ಯ
ನಾದದ್ದು ಎಂತಹ ಅನ್ಯಾಯ ಎಂಬ ನಿಟ್ಟುಸಿರು
ಕಡಿವಾಣದ ಕತೆ ತಿಳಿಯಲು ಕಮ್ಮಾರನ
ಜಾತಕಕ್ಕೆ ಇಳಿದಾಗ ಏರಿದ ಅಬ್ಬರಕ್ಕೆ, ಬೊಬ್ಬುಳಿಕೆ
ಏನೋ ಸಮಾಧಾನ, ಹಿಡಿತದಲ್ಲಿ ಬಂದ ತೂಕ
ಇದ್ದರೂ ಇರಬಹುದು ಬಚ್ಚಿಟ್ಟ ತನ್ನ–ಒಳಗೂ
ಚಡಪಡಿಕೆ ; ನೆನೆದಾಗ – ಕಸಿವಿಸಿ, ಕಳೆದು
ಕೊಂಡ ಭಣಭಣ : ಆಮೇಲೆ ನಿಧಾನವಾಗಿ ಮರುಕ.
ಒಳಗೆ–ಒಳಗೆ ನುಸುಳಿ ಜಾರುತ್ತಿರುವಂತೆ
ಅಪಯೋಜನೆಗೆ ಅಂಜಿಕೆ ; ಬಿಕ್ಕಳಿಕೆ.

ಮುದುಡಿ ಕುಳಿತ ಮುದ್ದು ಮಗು ಎಂಥ ಭೂತ
ವಾಗಿತ್ತು ಹೊರಗೆ ಎಂಬ ಆಶ್ಚರ್ಯ !
ಕಡ್ಡಿ ಗುಡ್ಡ ಮಾಡುವ, ಗುಡ್ಡ ಕಡ್ಡಿ ಮಾಡುವ
ರಾಹುಗಣ್ಣಿಗೆ ತಿಳಿ ಬೆಳಕು ಯಾವಾಗ ಎಂಬ ಪ್ರಶ್ನೆ.
ಕಾಲದ ಅಚ್ಚಿಗೆ ಅಣಿಯಾಗಿ ಮೊಂಡಾಗುತ್ತ
ತುಂಡಾಗುತ್ತ, ಬದುಕು ಬರುವ ರೀತಿ ಇಬ್ಬರಿಗೂ ಸಮ
ತುಸು ಏರುಪೇರು.
ಜಾಗೃತಿಯ ಹೆಸರಿನಲ್ಲೂ ಬರಿ ಜಾತ್ರೆ ಕಂಡು ದೂರ
ನಿಲ್ಲುವ ಹವ್ಯಾಸ. ತಾನು–ತನ್ನವಳು ದೇವತೆಗಳಲ್ಲ
ಪಂಚ ಭೂತಗಳ ಸಹಜಗುಣಕ್ಕೆ ಸಾವಿಲ್ಲ – ನಡುವೆ ಹುಟ್ಟಿದ
ಆತ್ಮ ತನ್ನ ಚಪಲತೆಗೆ (?) ಯಾವಾಗಲೂ
ಅನುಭಾವದ ಜೇನ ಸವಿಯನ್ನು ಹನಿಸುತ್ತ
ಸಮಾಧಾನದ ಹುಟ್ಟನ್ನು ಸಾರ್ಥಕಗೊಳಿಸಲು
ಬರುತ್ತದೆ.

❁

# ಕರ್ನಾಟಕದ ಮಹಿಳಾ ಶಿಕ್ಷಣ ಪರಂಪರೆ ಹಾಗೂ ಪರಿಸ್ಥಿತಿ*

**ಬಿ. ಶಶಿಧರ**

ಕರ್ನಾಟಕವು ಅನೇಕ ದೃಷ್ಟಿಗಳಿಂದ ವೈಶಿಷ್ಟ್ಯಮಯುವಾಗಿರುವುದಲ್ಲದೆ ಪುರಾತನವೂ ಆಗಿದೆ. ಇಲ್ಲಿನ ಶಿಕ್ಷಣ ಪರಂಪರೆಯೂ ಈ ವಾದಕ್ಕೆ ಅಪವಾದ ವಾಗಿಲ್ಲ. ಕರ್ನಾಟಕದ ಶಿಕ್ಷಣ ಪರಂಪರೆ ಹಲವಾರು ದೃಷ್ಟಿಗಳಿಂದ ಇಡೀ ಭಾರತದ ಶಿಕ್ಷಣ ಪದ್ಧತಿಗಿಂತ ಭಿನ್ನವಾದುದಲ್ಲ. ಆ ಪರಂಪರೆಯೊಡನೆಯೇ ಮೇಳೈಸಿಕೊಂಡು ಬರುವುದರ ಜೊತೆಗೆ ತನ್ನದೇ ಆದ ವೈಶಿಷ್ಟ್ಯತೆಯನ್ನೂ ಮೈಗೂಡಿಸಿಕೊಂಡು ಬೆಳೆದು ಬಂದಿದೆ.

ಕರ್ನಾಟಕದ ಶಿಕ್ಷಣ ಪರಂಪರೆ ಸುಮಾರು ಎರಡು ಸಾವಿರ ವರ್ಷಗಳಷ್ಟು ಪುರಾತನವಾದದ್ದು. ಲಭ್ಯವಾಗಿರುವ ಕೆಲವು ಪುರಾವೆಗಳ ನೆರವಿನಿಂದ ಪ್ರಾಚೀನ ಹಾಗೂ ಮಧ್ಯ ಕಾಲೀನ ಯುಗಗಳಲ್ಲಿ ಇಲ್ಲಿದ್ದ ಶಿಕ್ಷಣ ಪದ್ಧತಿಯನ್ನು ಸ್ಥೂಲವಾಗಿ ಚಿತ್ರಿಸಲು ಸಾಧ್ಯವಾಗಿದೆ. ಪುರಾತತ್ತ್ವ ಸಂಶೋಧಕರ ಈ ಅಮೂಲ್ಯ ಹಾಗೂ ಶ್ಲಾಘನೀಯ ಸಾಧನೆಯಿಂದಾಗಿ ಕರ್ನಾಟಕದ ರಾಜಕೀಯ ಇತಿಹಾಸ ವಾಸ್ತವವಾಗಿ ಸಾತವಾಹನರ ಕಾಲದಿಂದ ಪ್ರಾರಂಭವಾಗುವುದಾದರೂ, ಇಲ್ಲಿನ ವಿಶಿಷ್ಟವಾದ ಶಿಕ್ಷಣ ಪದ್ಧತಿ ಇದಕ್ಕೂ ಹಿಂದಿನ ಕಾಲದಿಂದ ಬೆಳೆದು ಬಂದಿದೆಯೆಂದು ನಿರೂಪಿಸ ಲಾಗಿದೆ.[1]

ವಾಸ್ತವವಾಗಿ ಕರ್ನಾಟಕದ ಶೈಕ್ಷಣಿಕ ಇತಿಹಾಸ ಇಷ್ಟು ಪುರಾತನವಾಗಿರುವು ದಾದರೂ ಇಲ್ಲಿದ್ದ ಮಹಿಳಾ ಶಿಕ್ಷಣ ವ್ಯವಸ್ಥೆಯ ಬಗ್ಗೆ ಅಷ್ಟೊಂದು ಪುರಾವೆಯೇನೂ ದೊರೆಯುವುದಿಲ್ಲ. ಕ್ರಿ. ಪೂ. ಮೂರನೆಯ ಶತಮಾನದಲ್ಲಿ ಅಥವಾ ಅದಕ್ಕೂ ಹಿಂದಿನ ಕಾಲದಲ್ಲಿ ಕರ್ನಾಟಕದಲ್ಲಿದ್ದ ಶಿಕ್ಷಣ ವ್ಯವಸ್ಥೆಯನ್ನು ಗುರುತಿಸುವುದು ಕಷ್ಟ. ವೈದಿಕ ಯುಗದಲ್ಲಿ ಸ್ತ್ರೀಯರು ವಿದ್ಯಾವತಿಯರಾಗಿದ್ದು ಪುರುಷರಿಗೆ ಸರಿಸಮನಾದ ಸ್ಥಾನಮಾನಗಳನ್ನು ಗಳಿಸಿದ್ದ ವಿಷಯ ಸರ್ವವಿದಿತವಾಗಿದೆ. ಮೈತ್ರೇಯಿ, ಗಾರ್ಗಿ ಯರ ಉದಾಹರಣೆ ಎಲ್ಲರಿಗೂ ಸಾಮಾನ್ಯವಾಗಿ ತಿಳಿದ ಅಂಶವಾಗಿದೆ. ಆದರೆ

---

*ಈ ಲೇಖನವನ್ನು ಬರೆಯಲು ಸ್ಫೂರ್ತಿ ಹಾಗೂ ಮಾರ್ಗದರ್ಶನ ನೀಡಿದ ಶ್ರೀ ಎಚ್. ಎಂ. ಮರುಳಸಿದ್ದಯ್ಯ ಅವರಿಗೆ ಲೇಖಕನ ಹೃತ್ಪೂರ್ವಕ ಕೃತಜ್ಞತೆಗಳು.

1 ಕನ್ನಡ ವಿಶ್ವಕೋಶ ಸಂಪುಟ-4, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–1972, ಪು. 138

ಧರ್ಮಶಾಸ್ತ್ರಗಳಲ್ಲಿ ಈ ಚಿತ್ರ ಸಂಪೂರ್ಣವಾಗಿ ಬದಲಾಗುತ್ತದೆ.[2] ಮನುಸ್ಮೃತಿಯು ಸ್ತ್ರೀ ವಿದ್ಯಾಭ್ಯಾಸದ ಮೇಲೂ, ಸ್ತ್ರೀ ಸ್ವಾತಂತ್ರ್ಯದ ಮೇಲೂ ವಜ್ರಾಘಾತ ವನ್ನುಂಟುಮಾಡಿತು. ಸ್ತ್ರೀಯು ಸ್ವಾತಂತ್ರ್ಯವಹಿಸಿ ಯಾವುದೇ ಕೆಲಸ ಮಾಡಬಾರ ದೆಂದೂ, ಆಕೆಗೆ ಕನ್ಯಾವಸ್ಥೆ ಮುಗಿಯುವದರೊಳಗೆ ವಿವಾಹ ಮಾಡಬೇಕೆಂದೂ ನಿಯಮಗಳನ್ನು ವಿಧಿಸಲಾಯಿತು. ಚಿದಾನಂದಮೂರ್ತಿಯವರು ಈ ಬಗ್ಗೆ ವ್ಯಾಖ್ಯಾನಿಸುತ್ತ ಸ್ಮೃತಿಗಳ ಹೇಳಿಕೆಯ ಕಾರಣದಿಂದಲೋ ಏನೋ ಪ್ರಾಚೀನ ಭಾರತದ ವಿಶ್ವವಿದ್ಯಾಲಯಗಳಲ್ಲಿ ಯಾವ ವಿದ್ಯಾರ್ಥಿನಿಯೂ ಅಧ್ಯಯನ ಮಾಡಿ ದಂತೆ ಕಂಡುಬರುವುದಿಲ್ಲ ಎಂದಿದ್ದಾರೆ. ಅವರು ಮುಂದುವರೆದು 'ಪ್ರಾಚೀನ ಕರ್ನಾ ಟಕದ ಸ್ತ್ರೀ ವಿದ್ಯಾಭ್ಯಾಸದ ಚಿತ್ರವು ಶೋಚನೀಯವಾದದ್ದು' ಎನ್ನುತ್ತಾರೆ.[3] ಪ್ರಾಯಶಃ ಪ್ರಾಚೀನ ಕರ್ನಾಟಕವೂ ಆಗ ಪ್ರಚಲಿತವಾಗಿದ್ದ ಭಾವನೆಗಳನ್ನು ಒಪ್ಪಿ ಕೊಂಡಿರಬಹುದು.

ಮುಂದೆ ಕ್ರಿ. ಪೂ. ನಾಲ್ಕನೆಯ ಶತಮಾನದಿಂದ ಏಳನೆಯ ಶತಮಾನದವರೆಗಿನ ಕಾಲದ ಶಿಕ್ಷಣ ಪದ್ಧತಿಯ ಬಗ್ಗೆ ವಿವರ ದೊರೆತರೂ ಸ್ತ್ರೀ ವಿದ್ಯಾಭ್ಯಾಸದ ಬಗ್ಗೆ ಏನೂ ತಿಳಿದು ಬರುವುದಿಲ್ಲ.[4] ಈ ಪರಿಸ್ಥಿತಿಗೆ ಅಂದಿನ ಸಾಮಾಜಿಕ ಪರಿಸರದಲ್ಲಿದ್ದ ಮೌಲ್ಯಗಳೇ ಕಾರಣವಿರಬೇಕು. ವಿದ್ಯಾರಂಭವನ್ನು ಸೂಚಿಸುವ ಉಪನಯನ ಸಂಸ್ಕಾರವನ್ನು ಸುಮಾರು 3 ನೆಯ ಶತಮಾನದ ಕಾಲದಲ್ಲೇ ಸ್ತ್ರೀಯರಿಗೆ ತಪ್ಪಿಸ ಲಾಯಿತು.[5] ಶೂದ್ರರಂತೆ ಸ್ತ್ರೀಯರೂ ವೇದ ಮಂತ್ರಗಳನ್ನು ಉಚ್ಚರಿಸುವುದಿರಲಿ, ಕೇಳುವುದಕ್ಕೂ ಅನರ್ಹರಾದರು. ಇದರೊಡನೆ ಬಾಲ್ಯವಿವಾಹದ ಪದ್ಧತಿಯೂ ಬೆಳೆದುಬಂದು ಸ್ತ್ರೀ ವಿದ್ಯಾಭ್ಯಾಸಕ್ಕೇ ಕೊಡಲಿಪೆಟ್ಟನ್ನು ಹಾಕಿತು. ಪ್ರಾಯಶಃ ಈ ಕಾರಣದಿಂದಲೋ ಏನೋ ಕನ್ನಡದ ಶಾಸನಗಳಲ್ಲೂ ಯಾವ ವಿದ್ಯಾರ್ಥಿನಿಯ ಅಥವಾ ಪಂಡಿತೆಯ ಹೆಸರೂ ಕಂಡುಬರುವುದಿಲ್ಲ.[6]

ಆದರೆ ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಸ್ತ್ರೀಯರ ಸಾಮಾಜಿಕ ಸ್ಥಾನ ಮಾನಗಳು ಗಣ್ಯವಾಗಿದ್ದುವು ಎಂಬುದಕ್ಕೆ ಅನೇಕ ನಿದರ್ಶನಗಳು ದೊರೆಯುತ್ತವೆ. ಈ ಬಗ್ಗೆ ಮರಿಯಪ್ಪಭಟ್ಟರು ಕ್ರಿ. ಶ. 700 ರಲ್ಲಿ ಕೂಡ ಸಸಿಮತಿಗಂತಿಯರಂಥ

---

2 ಚಿದಾನಂದಮೂರ್ತಿ, ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ–ಕ್ರಿ. ಶ. 450–1150 ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–1966 ಪು. 239

3 ಅದೇ, ಪು. 239

4 ಈ ಕಾಲದ ಶಿಕ್ಷಣ ಪದ್ಧತಿಯ ಬಗೆಗಿನ ವಿವರಕ್ಕೆ ನೋಡಿ–ಕನ್ನಡ ವಿಶ್ವಕೋಶ Op.cit.

5 Altekar, A.S. : The Position of Women in Hindu Civilisation from Prehistoric times to the Present day: Motilal Banarasi Dass, Delhi, 3rd edn. 1962, p. 16

6 ಚಿದಾನಂದಮೂರ್ತಿ, ಎಂ. Op. cit. ಪು. 240

ವರು ಮುಕ್ತಿಯನ್ನು ಪಡೆಯಲು ಗೋಂಪಿಯನ್ನಾಚರಿಸುತ್ತಿದ್ದುದನ್ನು ಉದಾಹರಿಸುತ್ತಾರೆ.[7] ಅನೇಕ ಕನ್ನಡ ಶಾಸನಗಳಲ್ಲಿ ಪ್ರಖ್ಯಾತರಾಗಿದ್ದ ಸ್ತ್ರೀಯರ ಹೆಸರುಗಳೂ ಕಂಡುಬರುತ್ತವೆ.[8] ಆದರೆ ಇವರು ಸಾಮಾನ್ಯವಾಗಿ ರಾಜಮನೆತನಗಳಿಗೆ ಸೇರಿದವರೋ ಅಥವಾ ಶ್ರೀಮಂತ ಕುಟುಂಬಗಳಿಗೆ ಸೇರಿದವರೋ ಆಗಿರುತ್ತಿದ್ದರು. 'ಸಾಮಾನ್ಯ ಸ್ತ್ರೀಯರು ವಿದ್ಯಾವತಿಯರಾಗುವ ವಿಷಯದಲ್ಲಿ ಸಮಾಜವು ಬಹುಮಟ್ಟಿಗೆ ಔದಾಸೀನ್ಯವನ್ನು ತೋರಿದೆ' ಎಂಬ ಮಾತನ್ನು ಉಲ್ಲೇಖಿಸಬಹುದು.[9]

ಪ್ರಾಚೀನ ಕರ್ನಾಟಕದಲ್ಲಿ ಜನಸಾಮಾನ್ಯರ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಯಾವ ಸೌಲಭ್ಯವಿತ್ತೆಂಬುದು ಗೊತ್ತಾಗಿಲ್ಲ. ಅರಸು ಮನೆತನದವರಿಗೋ, ಶ್ರೀಮಂತ ಕುಟುಂಬಗಳಿಗೋ ಸೇರಿದ ಸ್ತ್ರೀಯರಿಗೆ ಶಿಕ್ಷಣ ನೀಡಲು ನಿರ್ದಿಷ್ಟವಾದ ವ್ಯವಸ್ಥೆಯೊಂದಿತ್ತು. ಸಂಭಾವನೆ ಅಥವಾ ಕೊಡುಗೆಗಳನ್ನು ನೀಡುವುದರ ಮೂಲಕ ಈ ಉದ್ದೇಶಕ್ಕಾಗಿ ಅಧ್ಯಾಪಕರನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಇವರು ಆ ಹೆಣ್ಣುಮಕ್ಕಳಿಗೆ ಅಕ್ಷರವಿದ್ಯೆಯ ಜೊತೆಗೆ ಸಂಗೀತ, ನೃತ್ಯ, ಆಡಳಿತ ಜ್ಞಾನ ಇತ್ಯಾದಿ ವಿಷಯಗಳ ಬಗ್ಗೆಯೂ ಶಿಕ್ಷಣ ನೀಡುತ್ತಿದ್ದರು. ಕನ್ನಡ ವಿಶ್ವಕೋಶದಲ್ಲಿ ಈ ಕಾಲದಲ್ಲಿ "ಶಿಲಾಶಾಸನಗಳನ್ನು ಮಹಿಳೆಯರು ಬರೆಯುತ್ತಿದ್ದರೆಂಬ ಅಂಶ ಇತ್ತೀಚೆಗೆ ತಿಳಿದುಬಂದಿದೆ" ಎನ್ನಲಾಗಿದೆ.[10] ಆದರೆ ಯಾವ ಉದಾಹರಣೆಯೂ ಕಂಡುಬರುವುದಿಲ್ಲ. ಮಹಿಳಾ ಶಿಕ್ಷಣ ಸಂಸ್ಥೆಗಳು ಈ ಕಾಲದಲ್ಲೂ ಇದ್ದುವೇ ಎಂಬ ಪ್ರಶ್ನೆಗೆ ಸರಿಯಾದ ಉತ್ತರ ದೊರಕುವುದಿಲ್ಲ. ಪ್ರಾಯಶಃ ಹೆಣ್ಣುಮಕ್ಕಳಿಗೆ ಅವರವರ ಮನೆಗಳಲ್ಲಿಯೇ ಶಿಕ್ಷಣ ದೊರೆಯುತ್ತಿದ್ದಿರಬೇಕು. ದೀಕ್ಷಿತ್‌ರವರು ಇತ್ತೀಚೆಗೆ ಕಂಡುಬಂದಿರುವ ಜಲಸಂಗವಿ ಶಾಸನದ ಬಗ್ಗೆ ವಿವರಿಸುತ್ತ, ಅದು ಒಬ್ಬ ಮಹಿಳೆಯಿಂದ ಕೆತ್ತಲ್ಪಟ್ಟದ್ದು ಎನ್ನುತ್ತಾರೆ. ಈ ಶಾಸನದಲ್ಲಿ ಮಹಿಳೆಯೊಬ್ಬಳು ಬರೆಯುತ್ತಿರುವಂತೆ ತೋರಿಸಲಾಗಿದೆ. ಸುಂದರವಾದ ಲಿಪಿ ಮತ್ತು ಅದನ್ನು ಕೆತ್ತುವ ಕಲೆ ಮಹಿಳೆಯರ ವಿದ್ಯೆಯಲ್ಲಿ ಒಂದಾಗಿತ್ತು ಎಂದೂ ಅವರು ಅಭಿಪ್ರಾಯ ಪಡುತ್ತಾರೆ.[11] ಆದರೆ ಈ ಅಭಿಪ್ರಾಯಕ್ಕೆ ಯಾವ ಕಾರಣವನ್ನೇ ಆಗಲಿ ಅವರು ನೀಡುವುದಿಲ್ಲ. ಈ ಶಾಸನದ ಕಾಲದ ಬಗ್ಗೆಯೂ ಅವರು ತಿಳಿಸಿಲ್ಲ.

---

7 ಮರಿಯಪ್ಪ ಭಟ್ಟ ಎಂ. : ಕನ್ನಡ ಸಂಸ್ಕೃತಿ, ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ ನಿಯಮಿತ, ಬೆಂಗಳೂರು. 1967, ಪು. 29.

8 *Ibid.*, ಪು. 40-41 ಮತ್ತು ಚಿ. ಮೂ op-cit ಪು. 240-241.

9 ಚಿದಾನಂದ ಮೂರ್ತಿ ಎಂ. Op. cit. ಪು. 241.

10 ಕನ್ನಡ ವಿಶ್ವಕೋಶ, Op.cit. ಪು. 141.

11 ದೀಕ್ಷಿತ್ ಜಿ. ಎಸ್. 'ಶಿಕ್ಷಣ ಮತ್ತು ವಿಜ್ಞಾನ ಪ್ರಾಚೀನ ಕಾಲದಿಂದ ಕ್ರಿ. ಶ. 1200 ರ ವರೆಗೆ,'— ಕರ್ನಾಟಕದ ಪರಂಪರೆ. ಸಂ-1 ಮೈಸೂರು ರಾಜ್ಯಸರಕಾರ, ಬೆಂಗಳೂರು. 1970, ಪು. 421.

ಹೊಯ್ಸಳರ ಕಾಲದಲ್ಲಿ ಮಹಿಳೆಯರು ಸಾಹಿತ್ಯ ಮತ್ತು ಲಲಿತಕಲೆಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದರು. ಶಾಂತಲೆ ಸಕಳಕಳಾಗಮಗಳಲ್ಲಿಯೂ ಪ್ರವೀಣ ಳಾಗಿದ್ದಳು. ಆಕೆಯ ಪ್ರತಿಭೆಯನ್ನು ಶಾಸನಗಳು ಮುಕ್ತಕಂಠದಿಂದ ಹೊಗಳುತ್ತವೆ. ಹೀಗಿದ್ದರೂ ಜನಸಾಮಾನ್ಯ ಸ್ತ್ರೀಯರಿಗೆ ಲಭ್ಯವಿದ್ದ ವಿದ್ಯಾಭ್ಯಾಸದ ಕ್ರಮದ ಬಗೆಗೆ ಮಾಹಿತಿಯೇನೂ ದೊರೆಯುವುದಿಲ್ಲ. "ದೇವಸ್ಥಾನಗಳು, ಮಠಗಳು, ಜಾತ್ರೆ, ಉತ್ಸವ ಮುಂತಾದವುಗಳಲ್ಲಿ ಏರ್ಪಡಿಸುತ್ತಿದ್ದ ಪುರಾಣ ಶ್ರವಣ, ಹರಿಕಥೆ, ಶಿವಕಥೆ, ಧಾರ್ಮಿಕ ಪ್ರವಚನ, ನಾಟಕ ಪ್ರದರ್ಶನ ಇತ್ಯಾದಿಗಳ ಮೂಲಕವೇನೋ ಅವರಿಗೆ ಒಂದು ರೀತಿಯ ಶಿಕ್ಷಣ ದೊರಕುತಿತ್ತು" ಎಂದು ಅಭಿಪ್ರಾಯ ಪಡಲಾಗಿದೆ.[12]

ಇದೇ ರೀತಿ ಹನ್ನೊಂದನೆಯ ಶತಮಾನದಲ್ಲಿದ್ದ ಸ್ತ್ರೀ ಶಿಕ್ಷಣ ವ್ಯವಸ್ಥೆಯ ಬಗ್ಗೆಯೂ ನಿಖರವಾದ ಮಾಹಿತಿಯೇನೂ ಲಭ್ಯವಾಗಿಲ್ಲ. ಜೇಪೂರರು ಈ ಸಂಬಂಧ ದಲ್ಲಿ, "ಶಿಕ್ಷಣ ಮತ್ತು ಸಾಮಾಜಿಕ ಪ್ರಗತಿಪರ ಕಾರ್ಯಗಳಲ್ಲಿ ಸ್ತ್ರೀಯರೂ ಕೂಡ ಭಾಗ ವಹಿಸುತ್ತಿದ್ದರು" ಎಂದಿದ್ದಾರೆ.[13] ಆದರೆ ಈ ಬಗ್ಗೆ ಯಾವುದೇ ರೀತಿಯ ವಿವರಣೆ ಯಾಗಲೀ ಅಥವಾ ಸ್ಪಷ್ಟೀಕರಣವಾಗಲೀ ಅವರಿಂದ ದೊರೆಯುವುದಿಲ್ಲ.

ಆದರೆ ಹನ್ನೆರಡನೆಯ ಶತಮಾನದಲ್ಲಿ ಈ ಬಗೆಯ ಪರಿಸ್ಥಿತಿ ಸ್ವಲ್ಪ ಬದಲಾಗು ವುದನ್ನು ಕಾಣಬಹುದು. ಈ ಶತಮಾನದಲ್ಲಿ ಹೆಸರುವಾಸಿಯಾಗಿದ್ದ ಮಹಿಳೆಯೆಂದರೆ ಕಂತಿ. ಈಕೆಯೇ ಕನ್ನಡದ ಮೊದಲ ಕವಯಿತ್ರಿ. ಈಕೆ ಬಹುಶಃ ಕಲ್ಪಿತ ವ್ಯಕ್ತಿ ಎಂದು ಅನೇಕರು ಅಭಿಪ್ರಾಯ ಪಡುತ್ತಾರೆ.[14]

ಈ ಕಾಲದಲ್ಲಿ "ಸ್ತ್ರೀಯರು ಕೂಡ ವಾದದಲ್ಲಿ ಸ್ಪರ್ಧಿಸಿ ತಮ್ಮ ಶ್ರೇಷ್ಠತೆಯನ್ನು ಸ್ಥಾಪಿಸಬಹುದಾಗಿತ್ತು" ಎಂದು ಜೇಪೂರರು ಅಭಿಪ್ರಾಯಪಟ್ಟು ಕಂತಿ, ಅಕ್ಕಮಹಾ ದೇವಿಯರನ್ನು ಉದಾಹರಿಸುತ್ತಾರೆ. ಈ ಉದಾಹರಣೆಗಳು ವೈದಿಕಯುಗದಲ್ಲಿನ ಮೈತ್ರೇಯಿ, ಗಾರ್ಗಿಯರನ್ನು ನೆನಪಿಗೆ ತರುತ್ತವೆ.

ಸ್ಮೃತಿಗಳನ್ನೂ, ಕುಲೀನ ಸಮಾಜದ ಸಾಂಪ್ರದಾಯಿಕತೆಯ ಜಡ್ಡುವಾದವನ್ನೂ ಎದುರಿಸಿ ನಿಂತು ಸ್ತ್ರೀಯರ ವಿಷಯದಲ್ಲಿ ಉದಾರವಾಗಿ ವರ್ತಿಸಿದ ಖ್ಯಾತಿ ವೀರಶೈವ ಧರ್ಮದ್ದು. ಬಸವೇಶ್ವರರ ಕಾಲದಲ್ಲಿ ಸ್ಥಾಪಿತಗೊಂಡ ಅನುಭವಮಂಟಪವು ಸ್ತ್ರೀಯರಿಗೆ ಸಮಾಜದಲ್ಲಿ ಸೂಕ್ತ ಸ್ಥಾನಮಾನಗಳನ್ನು ಕಲ್ಪಿಸಿಕೊಡಲು ಶ್ರಮಿಸಿತು. ಅಲ್ಲಿನ ವಾದ-ವಿವಾದಗಳಲ್ಲಿ ಪುರುಷರೊಡನೆ ಸೆಣಸುವುದಷ್ಟೇ ಅಲ್ಲದೆ ಧರ್ಮಗ್ರಂಥ

---

12 ಕನ್ನಡ ವಿಶ್ವಕೋಶ Op.cit. ಪು. 142.

13 ಜೇಪೂರ್ ಎಸ್. ಎ. · ಕರ್ನಾಟಕ ಶೈಕ್ಷಣಿಕ ಇತಿಹಾಸ, ಸುದರ್ಶನಂ ಅಂಡ್ ಕಂಪೆನಿ ಬೆಂಗಳೂರು, 1971, ಪು. 96.

14 ಚಿದಾನಂದ ಮೂರ್ತಿ : Op.cit. ಪು. 241.

ಗಳನ್ನೂ ಅಭ್ಯಸಿಸಿ, ಸಾಹಿತ್ಯ ಕ್ಷೇತ್ರದಲ್ಲೂ ತಮ್ಮ ಹಿರಿಮೆಯನ್ನು ಸ್ತ್ರೀಯರು ಮೆರೆದರು. ಅಕ್ಕಮಹಾದೇವಿ ಮುಂತಾದವರ ಸಾಧನೆ ಸ್ಮರಣೀಯ.[15]

ಇಲ್ಲಿನವರೆಗಿನ ದಾಖಲೆಗಳಲ್ಲಿ ಎಲ್ಲಿಯೂ ಸ್ತ್ರೀ ಶಿಕ್ಷಣದ ಬಗ್ಗೆ ಪ್ರತ್ಯೇಕವಾಗಿ ನಮೂದಿಸಿರುವುದು ಕಂಡುಬರುವುದಿಲ್ಲ. ಆದರೆ 1343 ರಲ್ಲಿ ಉತ್ತರ ಕರ್ನಾಟಕ ದಲ್ಲಿ ಪ್ರವಾಸ ಮಾಡಿದ ಇಬ್ನ್ ಬತೂತ ಅಲ್ಲಿದ್ದ ಹೆಣ್ಣುಮಕ್ಕಳ ಶಿಕ್ಷಣ ವ್ಯವಸ್ಥೆಯ ಬಗ್ಗೆ ತಿಳಿಸುತ್ತಾ ಹೊನ್ನಾವರ ಪ್ರದೇಶದಲ್ಲಿ ಮುಸ್ಲಿಂ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಅನೇಕ ಶಾಲೆಗಳಿದ್ದುವು ಎನ್ನುತ್ತಾನೆ. ಅಲ್ಲಿ ಹೆಣ್ಣುಮಕ್ಕಳು ಆಸಕ್ತಿಯಿಂದ ಖುರಾನನ್ನು ಪಠಣ ಮಾಡುತ್ತಿದ್ದರಂತೆ.[16] ಪ್ರಾಯಶಃ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ದೊರೆಯುವ ಪ್ರಥಮ ದಾಖಲೆ ಇದು.[17]

ಈ ಕಾಲದಲ್ಲೂ ಸುಶಿಕ್ಷಿತ ರಾಜಕುಮಾರಿಯರ ಬಗೆಗಿನ ವಿವರ ದೊರೆಯು ತ್ತದೆ.[18] 1372ರಲ್ಲಿದ್ದ ಗಂಗಾದೇವಿಯ ಕೃತಿಗಳಾದ 'ಮಧುರಾ ವಿಜಯ', 'ವೀರ ಕಂಪಣರಾಯ ಚರಿತೆ' ಇತ್ಯಾದಿಗಳ ಅವಲೋಕನದಿಂದ ಈ ಕಾಲದಲ್ಲೂ ಸ್ತ್ರೀಯ ರಿಗೆ ಉನ್ನತ ಶಿಕ್ಷಣ ದೊರೆಯುತ್ತಿತ್ತು ಎಂದು ಭಾವಿಸಬಹುದು. ಆದರೆ ಇಲ್ಲೂ ಸಾಮಾನ್ಯ ಸ್ತ್ರೀಯರ ಬಗ್ಗೆ ಮಾಹಿತಿಯೇನೂ ದೊರೆಯದಿರುವುದನ್ನು ಗಮನಿಸ ಬಹುದು.

ಆದರೆ ಮಧ್ಯಯುಗೀನ ಕರ್ನಾಟಕದಲ್ಲಿ ಈ ಚಿತ್ರ ಸ್ವಲ್ಪ ಬದಲಾದಂತೆ ತೋರಿಬರುತ್ತದೆ. ಈ ಕಾಲದಲ್ಲಿ ಸ್ತ್ರೀಯರಿಗೆ ಶಿಕ್ಷಣವು ಸರಿಸಮಾನವಾಗಿ ದೊರೆಯು ತ್ತಿತ್ತು ಎನ್ನಲಾಗಿದೆ.[19] ರಾಜ ಕೇಸರಿವರ್ಮ (ಒಂದನೆಯ ಆದಿತ್ಯ)ನ ಕಾಲದಲ್ಲಿ ಆರಂದಿಮಂಗಲ ಎಂಬಲ್ಲಿಯೇ ಜೈನ ಮಠದಲ್ಲಿ 500 ಸ್ತ್ರೀ ವಿದ್ಯಾರ್ಥಿನಿಯರು ಇದ್ದರೆಂದು ಹೇಳಲಾಗಿದೆ.[20]

ಸಾಹಿತ್ಯ ಹಾಗೂ ಲಲಿತಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನಿತ್ತ ವಿಜಯ ನಗರದ ಕಾಲದಲ್ಲಿ ಸ್ತ್ರೀ ಶಿಕ್ಷಣವು ಪ್ರಗತಿಪಥಗಾಮಿಯಾದುದನ್ನು ಗಮನಿಸಬಹುದು. ಆ ಕಾಲದಲ್ಲಿ ದೇವದಾಸಿಯರು ಸಮಾಜ ಶಿಕ್ಷಣದ ಒಂದು ಮುಖ್ಯ ಅಂಗವಾಗಿದ್ದರು. ಅವರಿಗೆ ಸಮಾಜದಲ್ಲಿ ಗಣ್ಯ ಸ್ಥಾನಮಾನಗಳು ದೊರೆತಿದ್ದುವು. ನೃತ್ಯ ಶಿಕ್ಷಣವು

---

15 ಅಲ್ಲಿ ಪಾಲ್ಗೊಳ್ಳುತ್ತಿದ್ದ ಸ್ತ್ರೀಯರ ಬಗೆಗಿನ ವಿವರವನ್ನು ಜೇವೂರ್ Op. cit. ಪು. 129-135 ರಿಂದ ಪಡೆಯಬಹುದು.

16 ಕನ್ನಡ ವಿಶ್ವಕೋಶ, Op. cit. ಪು. 144

17 ಕರ್ನಾಟಕದ ಪರಂಪರೆ, Op. cit. ಪು. 420

18 *Ibid.* ಪು. 420-21

19 ಜೇವೂರ್ Op. cit. ಪು. 169

20 ಅದೇ, ಪು. 169

ಇವರಿಗೆ ದೊರೆಯುತಿತ್ತೆಂಬುವರಲ್ಲಿ ಸಂದೇಹವಿಲ್ಲ. ವಿಜಯನಗರದ ಕಾಲದಲ್ಲಿದ್ದ ಶಿಕ್ಷಣದ ಬಗ್ಗೆ ಜೇವೂರರು ಮ್ಯೂನಿಜನ ವರ್ಣನೆಯನ್ನು ಉಲ್ಲೇಖಿಸುತ್ತಾರೆ. "ಆ ಕಾಲದಲ್ಲಿ ಕುಸ್ತಿಯನ್ನಾಡಬಲ್ಲ ಹೆಂಗಸರೂ, ಜ್ಯೋತಿಷ್ಯ ಜ್ಞಾನವುಳ್ಳ ಹೆಂಗಸರೂ ಮತ್ತು ಒಳ್ಳೆಯ ಶಕುನ ಇಲ್ಲವೆ ಕಣಿ ಹೇಳುವವರೂ ಇದ್ದರು. ತಮ್ಮ ತಮ್ಮ ಮನೆಗಳಲ್ಲಿ ಗಳಿಕೆ ಬಳಕೆಯ ಲೆಕ್ಕವನ್ನಿಡಬಲ್ಲ ಸ್ತ್ರೀಯರೂ ಮತ್ತು ರಾಜ್ಯ ನಿಯಂತ್ರಣದ ಎಲ್ಲ ವರದಿಗಳನ್ನು ಬರೆದಿಡತಕ್ಕಂಥ ಸ್ತ್ರೀಯರೂ ಮತ್ತು ತಮ್ಮಲ್ಲಿಯ ಗ್ರಂಥಗಳನ್ನು ಬೇರೆ ಪ್ರಾಂತೀಯ ಗ್ರಂಥಗಳೊಡನೆ ತುಲನೆಮಾಡಿ ಪರಿಶೀಲಿಸುವಂತಹ ಕುಶಲೆಯರಾದ ಸ್ತ್ರೀಯರೂ ಇದ್ದರು."[21] ಇಷ್ಟೇ ಅಲ್ಲದೆ ರಾಜಕಾರಣದಲ್ಲೂ, ನ್ಯಾಯಶಾಸ್ತ್ರದಲ್ಲೂ ಪಾರಂಗತೆಯರಾದ ಸ್ತ್ರೀಯರೂ ಇದ್ದರು.

ಮೇಲಾಗಿ ಆ ಕಾಲದಲ್ಲಿ ನಾನಾ ತರಹದ ಶಿಕ್ಷಣಗಳು ದೊರಕುತ್ತಿದ್ದುವು. ಶಾರೀರಿಕ ಶಿಕ್ಷಣವೂ ಸಹ ಅವರಿಗೆ ದೊರಕುತ್ತಿತ್ತು.[22]

ವಿಜಯನಗರದ ಪತನಾನಂತರ ಈ ಕಾಲದಲ್ಲಿ ಹೆಸರುಪಡೆದ ಸ್ತ್ರೀಯರ ಹೆಸರನ್ನಾಗಲೀ, ಅವರಿಗೆ ದೊರೆಯುತ್ತಿದ್ದ ಶಿಕ್ಷಣದ ಬಗ್ಗೆಯಾಗಲೀ ನಿಖರವಾದ ಮಾಹಿತಿಯನ್ನು ಕಾಣುವುದು ಕಷ್ಟ. ಕಾಲ ಕಳೆದಂತೆ ಸ್ತ್ರೀ ಶಿಕ್ಷಣವು ಅಧೋಗತಿಯ ಮಾರ್ಗವನ್ನು ಕ್ರಮಿಸಲಾರಂಭಿಸಿತು. 18ನೆಯ ಶತಮಾನದ ಕೊನೆಯಲ್ಲಿ ಸ್ತ್ರೀ ಶಿಕ್ಷಣವು ಎಂತಹ ಅಧೋಗತಿಗೆ ಹೋಗಿ ಮುಟ್ಟಿತ್ತೆಂಬ ವಿಷಯ ಬ್ರಿಟಿಷರ ವರದಿಯೊಂದರಿಂದ ವ್ಯಕ್ತವಾಗುತ್ತದೆ. ಅದರಂತೆ ಬಳ್ಳಾರಿ ಜಿಲ್ಲೆಯ ಲಕ್ಷೋಪಲಕ್ಷ ವಿದ್ಯಾರ್ಥಿಗಳ ಸಮೂಹದಲ್ಲಿ ಕೇವಲ 60 ಮಂದಿ ವಿದ್ಯಾರ್ಥಿನಿಯರಿದ್ದರು. ಈ ಬಗ್ಗೆ ಜೇವೂರರು, "ಈ ಸಂಖ್ಯೆಯನ್ನು ಗಮನಿಸಿದರೆ ನಮ್ಮ ತಲೆ ಸಿಡಿದು ಬೀಳುವಂತಾಗುತ್ತದೆ. ಈ ಸಂಖ್ಯೆಯೇನೋ ಶಾಲೆಗೆ ಹೋಗತಕ್ಕ ವಿದ್ಯಾರ್ಥಿನಿಯರದಾಗಿರುವುದು ನಿಜ. ಆದರೆ ಕೌಟುಂಬಿಕ ಶಿಕ್ಷಣವು ಹಿಂದಿನ ಕಾಲದಲ್ಲಿ ದೊರೆಯುತ್ತಿದ್ದ ಪ್ರಮಾಣದಲ್ಲಿಯೂ ಕೊಡಲ್ಪಡುತ್ತಿರಲಿಲ್ಲ. ಸ್ತ್ರೀ ಶಿಕ್ಷಣವು ಒಂದು ಪಾಪದಾಯಕವೆಂಬಂತೆ ಭೀತಿದಾಯಕವಾಗಿತ್ತು" ಎಂದು ಅಭಿಪ್ರಾಯಪಡುತ್ತಾರೆ.[23]

ಸ್ತ್ರೀ ವಿದ್ಯಾಭ್ಯಾಸಕ್ಕೆ ಪುರುಷರು ಉತ್ತೇಜನ ಕೊಡದಿದ್ದರೂ ಅವರು ಅಡ್ಡಿಗಲ್ಲಾಗಿರಲಿಲ್ಲ. ಓದು ಕಲಿತ ಸ್ತ್ರೀಯರು ವಿಧವೆಯರಾಗುತ್ತಾರೆ ಎಂಬ ಅಂಧ ವಿಶ್ವಾಸ ಸ್ತ್ರೀಯರಿಂದಲೇ ಹೆಚ್ಚು ಪರಿಪೋಷಿತವಾಗಿತ್ತು ಎಂದೂ ಅವರು ಅಭಿಪ್ರಾಯಪಡುತ್ತಾರೆ. ಇದರೊಡನೆ ಅಕ್ಷರ ಕಲಿತ ಸ್ತ್ರೀಯರ ನೈತಿಕ ಪತನವಾಗದೆ ಇರಲಾರದೆಂಬ ಭ್ರಮೆಯೂ ಅಂದಿನ ಸಮಾಜದಲ್ಲಿತ್ತು. ಈ ಬಗೆಯ ಸಾಮಾಜಿಕ

---

21 ಅದೇ ಪು. 170

22 ವಿವರಗಳಿಗೆ ನೋಡಿ : ಜೇವೂರ್. ಅದೇ, ಪು. 170-171

23 ಅದೇ, ಪು. 248–9

ಪರಿಸರದಲ್ಲಿ ಬೆಳೆದ ಹೆಣ್ಣು ಮಕ್ಕಳು ಅಂದಿನ ಮೌಲ್ಯಗಳನ್ನೆದುರಿಸಿ ವಿದ್ಯಾವತಿಯರಾಗುವ ಎದೆಗಾರಿಕೆಯನ್ನು ತೋರಲಿಲ್ಲ. ಪ್ರಚಲಿತವಿರುವ ಸಾಮಾಜಿಕ ಮೌಲ್ಯಗಳನು ಎದುರಿಸುವುದು, ಸಂಪ್ರದಾಯದ ಲಕ್ಷ್ಮಣಗೆರೆಯನ್ನು ದಾಟುವುದು ಸುಲಭ ಸಾಧ್ಯವಾದ ಸಂಗತಿಯಲ್ಲ. ಆದರೂ ಈ ವಿಫಲತೆಯು ಮಹಿಳೆಯನ್ನು ಅಂಧ ಕೂಪಡೆಗೆ ತಳ್ಳಿತು ಎಂಬ ವಿಷಯದಲ್ಲಿ ಸಂದೇಹವಿಲ್ಲ.

ಈ ಅಂಧಕಾರದಿಂದ ಮಹಿಳೆಗೆ ವಿಮೋಚನೆಯಾದದ್ದು ಆಂಗ್ಲ ಶಿಕ್ಷಣದ ಅರುಣೋದಯವಾದಂದು. ಕರ್ನಾಟಕದಲ್ಲಿ ಆಂಗ್ಲ ಶಿಕ್ಷಣದ ಕ್ರಮವನ್ನು ಅವಲಂಬಿಸಿದ ಶಾಲೆಗಳನ್ನು ಮೊದಲಿಗ ತೆರೆದವರು ಕ್ರೈಸ್ತ ಮಿಶನರಿಗಳು. ಮುಂಬಯಿ ಕರ್ನಾಟಕದಲ್ಲಿ ಜನತಾ ಶಿಕ್ಷಣರಂಗಕ್ಕೆ ಸರ್ಕಾರವೇ ಮೊದಲು ಕೈ ಹಚ್ಚಿದ್ದರೂ, ಮೈಸೂರು ಹಾಗೂ ಮದರಾಸು ವಿಭಾಗಗಳಲ್ಲಿ ಹಾಗಾಗಲಿಲ್ಲ. ಕ್ರೈಸ್ತ ಮಿಶನರಿಗಳು ಸ್ವಮತ ಪ್ರಚಾರಕ್ಕಾಗಿಯೇ ಶಾಲೆಗಳನ್ನು ತೆರೆದಿದ್ದಾರೆಂಬ ವಿಷಯದ ಸಂಪೂರ್ಣ ಅರಿವಿದ್ದರೂ, ಅಲ್ಲಿನ ಪಾಠ ಪ್ರವಚನಗಳ ಕಹಿಯಂಶವನ್ನು ನುಂಗಿಕೊಂಡು ಹಿಂದೂ ಜನರು ಆ ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸಲಾರಂಭಿಸಿದರು. ಅವರ ಉದ್ದೇಶ ಈ ಶಿಕ್ಷಣದ ವ್ಯಾವಹಾರಿಕ ಪ್ರಯೋಜನದ ಲಾಭವನ್ನು ಪಡೆಯುವುದೇ ಆಗಿತ್ತು.

ಇಂತಹ ಪರಿಸ್ಥಿತಿಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು 1833ರಲ್ಲಿ ಆಂಗ್ಲ ಶಾಲೆಯೊಂದನ್ನು ತೆರೆದರು. ಇದು ಕರ್ನಾಟಕದ ಮೊದಲ ದೇಶೀ ಶಿಕ್ಷಣ ಸಂಸ್ಥೆ. ಆಂಗ್ಲ ಶಿಕ್ಷಣ ವ್ಯವಸ್ಥೆಯಲ್ಲಿ ಸ್ತ್ರೀಯರು ಶಿಕ್ಷಣ ಪಡೆಯಲಾರಂಭಿಸಿದ್ದು ಒಂದು ಆಸಕ್ತಿದಾಯಕವಾದ ಸಂಗತಿ. ಇದರೊಡನೆ ಮಿಶನರಿಗಳು ಸ್ತ್ರೀ ಶಿಕ್ಷಣದತ್ತ ಗಮನ ಹರಿಸಿದ್ದು ಒಂದು ವಿಶೇಷವಾದ ವಿಷಯ. ಈ ದಿಕ್ಕಿನಲ್ಲಿ ಪ್ರಥಮವಾಗಿ ಶ್ರಮಿಸಿದ ಖ್ಯಾತಿ ಲಂಡನ್ ಮಿಶನ್ನಿನವರದು. ಇವರು ಬಳ್ಳಾರಿಯಲ್ಲಿ ಇಂತಹ ಶಾಲೆಯೊಂದನ್ನು ತೆರೆದಿದ್ದರು. 1840ರಲ್ಲಿ ಇವರು ಬೆಂಗಳೂರಿನಲ್ಲಿ ಹೆಣ್ಣು ಮಕ್ಕಳ ಶಾಲೆಯೊಂದನ್ನು ತೆರೆದರು. ಈ ಶಾಲೆಗಳಿಗೆ ಮಧ್ಯಮವರ್ಗೀಯ ಸ್ತ್ರೀಯರಾರೂ ಹೋಗುತ್ತಿರಲಿಲ್ಲ. ಅನಾಥರಾದ ಇಲ್ಲವೇ ದೇಶೀ ಕ್ರಿಸ್ತೀಯರ ಹೆಣ್ಣು ಮಕ್ಕಳಿಗೆ ಅನ್ನ ಹಾಕುವ ಆಮಿಷ ತೋರಿಸಿ ಶಿಕ್ಷಣ ಕೊಡಬೇಕಾಗುತ್ತಿತ್ತು. ಈ ಶಾಲೆಗಳ ಮೇಲ್ವಿಚಾರಣೆ ಮಿಶನರಿಗಳ ಹೆಂಡಂದಿರದಾಗಿತ್ತು. ಈ ಶಾಲೆಗಳ ಮೇಲ್ವಿಚಾರಣೆಗೆ ಬೇಕಾಗುತ್ತಿದ್ದ ಆರ್ಥಿಕ ನೆರವನ್ನು ಬ್ರಿಟನ್ನಿನ ದಾತೃಗಳಿಂದ ಸಂಗ್ರಹಿಸುತ್ತಿದ್ದರು.[24]

---

24 ಶ್ರೀನಿವಾಸ ಹಾವನೂರ : ಹೊಸಗನ್ನಡದ ಅರುಣೋದಯ, ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು ವಿಶ್ವವಿದ್ಯಾನಿಲಯ, 1974. ಪು. 68.

ಈ ಶಾಲೆಗಳಿಗೆ ಹೆಚ್ಚು ಸಂಖ್ಯೆಯಲ್ಲಿ ಹೆಣ್ಣುಮಕ್ಕಳು ಹೋಗದಿರುವುದಕ್ಕೆ ಕಾರಣ ಸ್ವಯಂ ವೇದ್ಯ. ಗಂಡುಮಕ್ಕಳನ್ನು ಕಳುಹಿಸುವುದಕ್ಕೆ ಹಿಂದು ಮುಂದೆ ನೋಡುತ್ತಿದ್ದ ತಂದೆ ತಾಯಿಯರು ಇನ್ನು ಹೆಣ್ಣುಮಕ್ಕಳನ್ನು ಕಳುಹಿಸಲು ಮುಂದೆ ಬರುವುದು ಸಾಧ್ಯವಿತ್ತೆ ?

ಕರ್ನಾಟಕವಲ್ಲಿ ಮೊದಲು ಮಹಿಳಾ ಪಾಠಶಾಲೆಗಳು ಪ್ರಾರಂಭವಾದ ವರ್ಷದ ಬಗ್ಗೆ ಒಮ್ಮತವಿರುವಂತೆ ತೋರಿಬರುವುದಿಲ್ಲ. ಉತ್ತಂಗಿಯವರು 1832ರಲ್ಲಿ ವನಿತಾ ವಿದ್ಯಾಲಯವೆಂಬ ಮೊದಲ ಮಹಿಳಾಪಾಠಶಾಲೆ ಬೆಳಗಾಂನಲ್ಲಿ ಸ್ಥಾಪಿತವಾಯಿತೆಂದು ತಿಳಿಸುತ್ತಾರೆ.[25] ಆದರೆ ಇಂಪೀರಿಯಲ್ ಗೆಜೆಟಿಯರ್ 1840ರಲ್ಲಿ ಮಹಿಳಾ ಪಾಠಶಾಲೆಗಳು ಬೆಂಗಳೂರಿನಲ್ಲಿ ಸ್ಥಾಪಿತವಾದುದೆಂದು ತಿಳಿಸುತ್ತದೆ.[26] ಸುಮಾರು ಇದೇ ಸಮಯದಲ್ಲಿ ಹಿಂದೂಗಳು ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲೆಯೊಂದನ್ನು ಬೆಂಗಳೂರಿನಲ್ಲಿ ತೆರೆದರು. 1867ರ ವೇಳೆಗೆ 3 ಸರ್ಕಾರಿ ಶಾಲೆಗಳೂ, ಕೆಲವು ಸಹಾಯಧನ ಪಡೆಯುದ ಶಾಲೆಗಳೂ ಇದ್ದುವು. ಸರ್ಕಾರಿ ಹೆಣ್ಣುಮಕ್ಕಳ ಶಾಲೆಗಳ ಸಂಖ್ಯೆ 1869–70ರಲ್ಲಿ 5ಕ್ಕೂ, 1879–80ರಲ್ಲಿ 12ಕ್ಕೂ ಏರಿದವು.

ಈ ಕಾಲದಲ್ಲಿ ಸ್ತ್ರೀಯರು ಉನ್ನತ ಶಿಕ್ಷಣ ಪಡೆಯುವುದೇನೂ ಸುಲಭಸಾಧ್ಯದ ಸಂಗತಿಯಾಗಿರಲಿಲ್ಲ. 1875ರಲ್ಲಿ ಬೆಳಗಾಂವಿಯ ಪೋಸ್ಟ್‌ಮಾಸ್ಟರನ ಮಗಳೊಬ್ಬಳು ಮುಂಬಯಿ ವಿಶ್ವವಿದ್ಯಾಲಯದ ಮ್ಯಾಟ್ರಿಕ್ಯುಲೇಷನ್ ಪರೀಕ್ಷೆಗೆ ಕೂರಲು ಬಯಸಿ, ಅನುಮತಿಯನ್ನು ಕೋರಿದಳು.[27] ಆದರೆ ಸಿಂಡಿಕೇಟು ಅನುಮತಿಯನ್ನು ಕೊಡಲಿಲ್ಲ. ಕಾರಣವೇನು ಗೊತ್ತೆ ? ವಿಶ್ವವಿದ್ಯಾಲಯದ ನಿಯಮಗಳಲ್ಲಿ ಕೇವಲ ಅವನು, ಅವನ, ಅವನಿಗೆ ಎಂಬ ಪುಲ್ಲಿಂಗ ಶಬ್ದಗಳು ಮಾತ್ರ ಇದ್ದುವು ! ಸ್ತ್ರೀಲಿಂಗದ ಪದಗಳಾವುವೂ ಇರಲಿಲ್ಲ. ಇನ್ನು ಅನುಮತಿನೀಡುವುದಾದರೂ ಹೇಗೆ ? ಸ್ತ್ರೀ ವಿದ್ಯಾಭ್ಯಾಸದ ಬಗ್ಗೆ ಆಗ ಇದ್ದ ಧೋರಣೆಗೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ ?

ಈ ಮಧ್ಯೆ ಮೈಸೂರ ಅರಸರಿಗೆ ಮರಳಿ ರಾಜ್ಯಸೂತ್ರಗಳು ಲಭ್ಯವಾದವು. ಕ್ರಿ. ಶ. 1881ರಲ್ಲಿ ಚಾಮರಾಜರು ಪಟ್ಟಾಭಿಷಕ್ತರಾದನಂತರ ಸ್ತ್ರೀ ವಿದ್ಯಾಭ್ಯಾಸಕ್ಕೆ ಕೊಂಚ ಹೆಚ್ಚಿನ ಪ್ರೋತ್ಸಾಹ ದೊರೆಯಲಾರಂಭಿಸಿತು. ಅವರು ಅಧಿಕಾರ ಸೂತ್ರಗಳನ್ನು ವಹಿಸಿಕೊಂಡ ಮರು ವರ್ಷದಲ್ಲೇ ಮೈಸೂರಿನಲ್ಲಿ ಮಹಾರಾಣಿ ಗರ್ಲ್ಸ್

25 Hukkerikar, R. S. (ed.) : Karnataka Darsana, Bombay-21, Malabar Hill, 1955, p. 381

26 *Mysore Gazetteer, IV*. p. 573

27 ಶಾಲಿನಿ ರಾಮಚಂದ್ರ ಹೆಗಡೆ : ಮಹಿಳೆ ಮತ್ತು ಶಿಕ್ಷಣ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1975, ಪು. 17

ಹೈಸ್ಕೂಲು ಆರಂಭವಾಯಿತು. ಅರಮನೆಯ ಅಧಿಕಾರಿಯಾಗಿದ್ದ ಅಂಬಿಲ್ ನರಸಿಂಹಯ್ಯಂಗಾರರು ವಹಿಸಿದ ಆಸಕ್ತಿಯಿಂದಾಗಿ ಸ್ತ್ರೀ ವಿದ್ಯಾಭ್ಯಾಸ ವೃದ್ಧಿ ಗೊಂಡಿತು. ಅವರು ಹೆಣ್ಣುಮಕ್ಕಳಿಗಾಗಿಯೇ ಹಲವಾರು ಹೊಸ ಪುಸ್ತಕಗಳನ್ನು ಹೇಳಿ ಬರೆಸಿದರು.[28]

ಮಹಾರಾಣಿಯರ ಶಾಲೆಯು ಪ್ರಾರಂಭವಾದ ಹೊಸದರಲ್ಲಿ ಅದರ ಪ್ರವೇಶ ದ್ವಾರ ಎಲ್ಲರಿಗೂ ಮುಕ್ತವಾಗಿರಲಿಲ್ಲ. ಕೇವಲ ಉಚ್ಚ ಜಾತಿಯ ಕೋಮಿನವರಿ ಗಾಗಿ ಮೀಸಲಾಗಿದ್ದಿತು. ಕಾಲಕ್ರಮೇಣ ಕ್ರೈಸ್ತರಿಗೂ, ಇತರ ಜಾತಿಯ ಮಕ್ಕ ಳಿಗೂ ಪ್ರವೇಶಾವಕಾಶ ದೊರೆಯಲಾರಂಭಿಸಿತು. ಆದರೆ ಆ ಹೆಣ್ಣುಮಕ್ಕಳು ಗೌರವಸ್ಥ ಕುಟುಂಬಗಳಿಗೆ ಸೇರಿದವರಾಗಿರಬೇಕಾಗಿತ್ತು. 1891ರಲ್ಲಿ ಈ ಶಾಲೆ ಯನ್ನು ಸರ್ಕಾರವೇ ವಹಿಸಿಕೊಂಡಿತು.

ಇದೇ ಕಾಲದಲ್ಲಿ ಸ್ತ್ರೀಶಿಕ್ಷಣ, ವಿಧವಾವಿವಾಹ, ಬಾಲ್ಯವಿವಾಹ ಪದ್ಧತಿ, ಸಹಗಮನ ಇತ್ಯಾದಿ ವಿಷಯಗಳ ಬಗ್ಗೆ ಇಡೀ ದೇಶದಲ್ಲಿ ಚರ್ಚೆ ನಡೆಯಲಾರಂಭಿ ಸಿತ್ತು. ಈ ಸಮಯದಲ್ಲಿ ಸ್ತ್ರೀ ಶಿಕ್ಷಣದ ಆವಶ್ಯಕತೆಯ ಬಗ್ಗೆ ಪುಸ್ತಕವೊಂದು 1894ರಲ್ಲಿ ಪ್ರಕಟವಾಯಿತು. ಇದರ ಕರ್ತೃ ರೊದ್ದ ತಿರುಮಲರಾಯ. "ಪುರಾ ಣೇತಿಹಾಸಗಳಲ್ಲಿ ಭಾರತೀಯ ಸ್ತ್ರೀ ವಂದ್ಯಳೇನೊ ಅಹುದು. ಅದನ್ನು ನಂಬಿ ಮನ್ರೋ, ಮ್ಯಾಕ್ಸ್ ಮುಲ್ಲರ್ ಮುಂತಾದವರು ಹಾಡಿ ಹೊಗಳಿದ್ದಾರೆ. ಆದರೆ ವಸ್ತುಸ್ಥಿತಿ ಬೇರೆಯಿದೆ ಎಂಬುದನ್ನು ತೋರಿಸಲು ಈ ಪುಸ್ತಕ ಹುಟ್ಟಿತು. ದೈಹಿಕ ವಾಗಿ ಸ್ತ್ರೀಯು ಪುರುಷನಿಗೆ ಸಮಾನವೆಂಬುದನ್ನು ಹೇಳಿ, ಸ್ತ್ರೀ ಶಿಕ್ಷಣ ವಿರೋಧಿಗಳ ಮತವನ್ನು ಪರಿಣಾಮಕಾರಿಯಾಗಿ ಖಂಡಿಸಲಾಗಿದೆ. ಸ್ತ್ರೀಯು ವಿದ್ಯೆ ಕಲಿತರೆ ಕುಟುಂಬಕ್ಕೇಯೆ ಒಳಿತಾಗುವುದೆಂಬುದನ್ನು ತಿರುಮಲರಾಯನು ವಿವರಿಸಿದ್ದಾನೆ."[29]

ಕರ್ನಾಟಕದ ಆಡಳಿತ ನಿರ್ವಹಣೆಯ ಭಾರ ಹೊತ್ತಿದ್ದ ಅಧಿಕಾರಿಗಳೂ ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುತ್ತ ಬಂದಿದ್ದಾರೆ. ದಕ್ಷ ಆಡಳಿತಗಾರರೆಂದು ಖ್ಯಾತರಾದ ಸರ್ ಕೆ. ಶೇಷಾದ್ರಿ ಅಯ್ಯರ್ ಅವರು 1886ರಲ್ಲಿ ದಿವಾನರಾದಾಗ, ಸ್ತ್ರೀ ಶಿಕ್ಷಣದ ಬಗ್ಗೆ ಹೇಳುತ್ತಾ, "ಸ್ತ್ರೀಯರ ವಿದ್ಯಾಭ್ಯಾಸದ ಮಟ್ಟವನ್ನು ಹೆಚ್ಚಿಸಿ, ವಿಸ್ತರಿಸಿ, ರಾಷ್ಟ್ರ ಮಟ್ಟದಲ್ಲಿ ಅದನ್ನು ನಡೆಸಿ, ಜನತೆಯ ಅಭಿಮಾನಕ್ಕೆ ಒಳಪಡಿಸ ಬೇಕು" ಎಂದು ಅಭಿಪ್ರಾಯಪಟ್ಟರು.[30] ಇಂತಹವರ ಪ್ರೋತ್ಸಾಹದಿಂದ ಕರ್ನಾಟಕ

---

28 ಶ್ರೀನಿವಾಸ ಹಾವನೂರ, Op. cit. p. 74

29 ಶ್ರೀನಿವಾಸ ಹಾವನೂರ, Op. cit. ಪು. 472

30 ಸಂಪದ್ಗಿರಿರಾವ್, ಕೆ. : 'ಆಧುನಿಕ ವಿದ್ಯಾಭ್ಯಾಸ'–ಕರ್ನಾಟಕ ಪರಂಪರೆ, ಸಂ. 2, ಮೈಸೂರು ರಾಜ್ಯ ಸರಕಾರ, 1970, ಪು. 392

ದಲ್ಲಿ ಸ್ತ್ರೀ ವಿದ್ಯಾಭ್ಯಾಸ ಪ್ರಗತಿ ಪಥಗಾಮಿಯಾಯಿತು. ಸುಮಾರು 1895ರ ವೇಳೆಗೆ ಧಾರವಾಡದಲ್ಲಿ ಮಹಿಳಾ ಶೈಕ್ಷಣಿಕ ಕಾಲೇಜೊಂದು ಆರಂಭವಾಯಿತು.[31] 1902–03ರಲ್ಲಿ ಮೈಸೂರಿನ ಮಹಾರಾಣಿ ಹೈಸ್ಕೂಲನ್ನು ಕಾಲೇಜನ್ನಾಗಿ ವಿಸ್ತರಿಸಲಾಯಿತು.

ಕೇವಲ ಶಾಲಾ ಕಾಲೇಜುಗಳನ್ನು ತೆರೆಯುವುದರಲ್ಲಿ ಮಾತ್ರ ಸರ್ಕಾರ ಆಸಕ್ತವಾಗಿರಲಿಲ್ಲ. ವಿದ್ಯಾಭ್ಯಾಸ ಕೈಗೊಳ್ಳಲು ಹೆಣ್ಣುಮಕ್ಕಳನ್ನು ಪ್ರೋತ್ಸಾಹಿಸುವ ಸಲುವಾಗಿ 1902-03ರಲ್ಲಿ 2,736 ರೂ. ಒಟ್ಟು ಮೊತ್ತದ 30 ವಿದ್ಯಾರ್ಥಿ ವೇತನಗಳನ್ನು ನೀಡಿತು.

ಆದರೆ ಈ ಬಗೆಯ ವಿದ್ಯಾ ಸೌಲಭ್ಯಗಳನ್ನು ಸಮಾಜದ ವಿವಿಧ ಅಂತಸ್ತಿನವರೆಲ್ಲರೂ ಉಪಯೋಗಿಸಿಕೊಳ್ಳಲಿಲ್ಲ. ಸಮಾಜದಲ್ಲಿ ಉನ್ನತ ಸ್ಥಾನಮಾನಗಳನ್ನು ಗಳಿಸಿದ್ದವರೇ ಇಲ್ಲೂ ಮುಂದೆ ಬಂದರು. 1906ರಲ್ಲಿ ಮಹಾರಾಣಿ ಕಾಲೇಜಿನಿಂದ ಇಬ್ಬರು ಬ್ರಾಹ್ಮಣ ಸ್ತ್ರೀಯರು ಮಹಿಳಾ ಪದವೀಧರರಾದರು. ಅವರ ಈ ಸಾಧನೆ ಇಡೀ ದಕ್ಷಿಣ ಭಾರತಕ್ಕೇ ಪ್ರಥಮವಾದುದಾಗಿತ್ತು.[32] ಹಿಂದುಳಿದ ವರ್ಗಗಳಿಗೆ ಸೇರಿದ ಸ್ತ್ರೀಯರು ಈ ಬಗೆಯ ಅವಕಾಶಗಳನ್ನು ಉಪಯೋಗಿಸಿಕೊಳ್ಳಲು ಮುಂದೆ ಬರಲಿಲ್ಲ ಎಂಬುದನ್ನು ಗಮನಿಸುವುದು ಆವಶ್ಯಕ.

ಕಾಲ ಕಳೆದಂತೆ ಹೆಚ್ಚು ಹೆಣ್ಣುಮಕ್ಕಳು ಶಾಲೆಗಳನ್ನು ಸೇರಲಾರಂಭಿಸಿದರು. ತತ್ಪರಿಣಾಮವಾಗಿ 1910–11ರ ವೇಳೆಗೆ ಹೆಣ್ಣುಮಕ್ಕಳ ಶಾಲೆಗಳ ಸಂಖ್ಯೆ 294 ಕ್ಕೇರಿತು. ಈ ಶಾಲೆಗಳಲ್ಲಿ ಸುಮಾರು 17,093 ಮಂದಿ ಓದುತ್ತಿದ್ದರು. 1913 ರಿಂದಲೂ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣವು ಸರ್ಕಾರದ ನೀತಿಯಾಗಿದೆ. 1913ರ The Mysore Elementary Education Regulation–V—ಎಂಬ ಕಾಯಿದೆ 1914ರಲ್ಲಿ ಶಾಸನವಾಯಿತು. ಈ ಶಾಸನದ ಪರಿಣಾಮವೋ ಎಂಬಂತೆ 1915-16ರ ವೇಳೆಗೆ ಹೆಣ್ಣುಮಕ್ಕಳ 530 ಶಾಲೆಗಳು ತೆರೆಯಲ್ಪಟ್ಟಿದ್ದು, 41,035 ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದರು. ಅಂದರೆ ಈ ಸಮಯದಲ್ಲಿ ಶಾಲೆಗೆ ಹೋಗುವ ವಯಸ್ಸಿನ ವಿದ್ಯಾರ್ಥಿನಿಯರಲ್ಲಿ ಶೇಕಡಾ 9.7 ಮಂದಿ ವಿದ್ಯಾಭ್ಯಾಸದ ಸೌಲಭ್ಯವನ್ನು ಉಪಯೋಗಿಸಿಕೊಂಡಿದ್ದರು. ಈ ಪ್ರಮಾಣ 1921-22ರ ವೇಳೆಗೆ ಶೇಕಡಾ 12-47ಕ್ಕೆ ಏರಿತು. ಆಗ ಮೂರು ಪ್ರೌಢ ಶಾಲೆಗಳಿದ್ದವು. ಮೈಸೂರನ್ನು ಬಿಟ್ಟು ಉಳಿದ ಕೇಂದ್ರ

---

31 ಜವಳಿ ವಿ. ಕೆ. : "ಶಿಕ್ಷಣ ಆಧುನಿಕ ಕಾಲ–ಮುಂಬಯಿ ಕರ್ನಾಟಕ" ಕ. ಪ. 2, ಪು. 401

32 The Indian Economic Conference Hand-book-Mysore meeting, January, 1929, p. 155

ಗಳಿಂದ ದೇಶೀಯ ಎಲ್. ಎಸ್. (Vernacular Lower Secondary) ಪರೀಕ್ಷೆಯನ್ನು ಪಾಸುಮಾಡಿದ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ತುಮಕೂರಿನ ಎಂಪ್ರೆಸ್ ಹೆಣ್ಣುಮಕ್ಕಳ ಶಾಲೆ ಹಾಗೂ ಬೆಂಗಳೂರಿನ ಸರ್ಕಾರಿ ಹೆಣ್ಣುಮಕ್ಕಳ ಶಾಲೆಗಳನ್ನು ಪ್ರೌಢಶಾಲೆಗಳ ಮಟ್ಟಕ್ಕೆ ಏರಿಸಲಾಯಿತು. ಹೆಣ್ಣುಮಕ್ಕಳು ವಿದ್ಯಾಭ್ಯಾಸ ಮುಂದುವರಿಸಲು ಪ್ರೋತ್ಸಾಹ ನೀಡಲೋಸುಗ ಉದಾರವಾಗಿ ವಿದ್ಯಾರ್ಥಿವೇತನಗಳನ್ನು ನೀಡಲಾಯಿತು.

ಆದರೆ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಪ್ರಗತಿ ಸುಗಮವಾದ ಹಾದಿಯಲ್ಲೇ ಸಾಗಲಿಲ್ಲ ಕೆಲವು ಅಡಚಣೆಗಳು ಎದುರಾದುವು. ಇವುಗಳಲ್ಲಿ ಅಧ್ಯಾಪಕಿಯರನ್ನು ಪಡೆಯುವುದು ಪ್ರಮುಖವಾದ ಸಮಸ್ಯೆಯಾಗಿತ್ತು. ಈ ಸಮಸ್ಯೆ ಮೈಸೂರು ಮತ್ತು ಬೆಂಗಳೂರಿನಂತಹ ನಗರಗಳನ್ನುಳಿದು ಇತರೆ ಪ್ರದೇಶಗಳಲ್ಲಿ ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ತೀವ್ರವಾಗಿತ್ತು. ಈ ಸಮಸ್ಯೆಯ ಪರಿಹಾರಕ್ಕಾಗಿ ಪದವೀಧರೆಯರನ್ನು ಶಿಕ್ಷಕವೃತ್ತಿಗೆ ಆಕರ್ಷಿಸಲು ಆಕರ್ಷಣೀಯವಾದ ವೇತನವನ್ನು ಸೂಚಿಸಲಾಯಿತು. ಇದರೊಡನೆ ಅಧ್ಯಾಪಕವೃತ್ತಿಯ ತರಬೇತಿಗಾಗಿ ನಾರ್ಮಲ್ ಶಾಲೆ (Normal School) ಗಳನ್ನೂ ತೆರೆಯಲಾಯಿತು.

ದೂರದ ಸ್ಥಳಗಳಿಂದ ಬರುವ ವಿದ್ಯಾರ್ಥಿನಿಯರು ಪಡುತ್ತಿದ್ದ ಬವಣೆಯ ನಿವಾರಣೆಗಾಗಿ ವಿದ್ಯಾರ್ಥಿನಿಲಯಗಳನ್ನು ತೆರೆಯುವ ನಿರ್ಧಾರವನ್ನು ಕೈಗೊಳ್ಳಲಾಯಿತು. ಇದರಂತೆ ಮೈಸೂರಿನಲ್ಲಿ ಮಹಾರಾಣಿ ಕಾಲೇಜಿಗೆ ಹೊಂದಿಕೊಂಡಂತೆ ಒಂದು ವಿದ್ಯಾರ್ಥಿನಿಲಯವನ್ನು ಸ್ಥಾಪಿಸಲಾಯಿತು. ರಾವ್ ಬಹದ್ದೂರ್ ನರಸಿಂಹಯ್ಯಂಗಾರರು ಸ್ಥಾಪಿಸಿದ ಅಬಲಾಶ್ರಮವನ್ನು (ಇದನ್ನು ಮೊದಲು ವಿಧವಾಶ್ರಮವೆಂದು ಕರೆಯಲಾಗುತ್ತಿತ್ತು.) ಸರ್ಕಾರವೇ ವಹಿಸಿಕೊಂಡಿತು. ಇದರೊಡನೆ ಬಡ ಕುಟುಂಬಗಳ ವಿದ್ಯಾರ್ಥಿನಿಯರಿಗೆ ಉಚಿತ ಅನ್ನ, ವಸತಿಯ ಸೌಕರ್ಯವನ್ನು ಒದಗಿಸಿಕೊಡಲಾಯಿತು.

ಈ ಕಾಲದಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕಾಗಿ ಸರ್ಕಾರವು ಗಣನೀಯ ಪ್ರಮಾಣದಲ್ಲಿ ಖರ್ಚುಮಾಡುತ್ತಿತ್ತೆಂಬ ಅಂಶ ಗಮನಾರ್ಹ. 1920-21ರಲ್ಲಿ ಸರ್ಕಾರವು ಪ್ರತಿ ವಿದ್ಯಾರ್ಥಿನಿಗಾಗಿ ಖರ್ಚು ಮಾಡುತ್ತಿದ್ದ ಹಣ ಇತರೆ ರಾಜ್ಯಗಳಿಗೆ ಹೋಲಿಸಿದರೆ ಹೆಚ್ಚಾಗಿತ್ತು. ಈ ಅಂಶವನ್ನು ಕೋಷ್ಟಕ–1 ಇದರಿಂದ ತಿಳಿಯಬಹುದು.

ಇದರೊಡನೆ ಶಿಕ್ಷಣವನ್ನು ಸಾರ್ವತ್ರಿಕವಾಗಿ ಪ್ರಸಾರ ಮಾಡುವ ಉದ್ದೇಶಕ್ಕಾಗಿ ಗೃಹ ಶಿಕ್ಷಣದ (Home Education) ಕಾರ್ಯಕ್ರಮವನ್ನೂ ಪ್ರಾರಂಭಿಸಲಾಯಿತು. ಶಾಲೆಗಳಿಗೆ ಹೋಗಲಾಗದ ಸ್ತ್ರೀಯರ ಮನೆಬಾಗಿಲಿಗೇ ಶಿಕ್ಷಣವನ್ನು ಕೊಂಡೊಯ್ಯುವ ಕಾರ್ಯಕ್ರಮವಿದಾಗಿತ್ತು. ನಿವೃತ್ತಿ ಹೊಂದಿದ್ದ ಅಥವಾ ಶಿಕ್ಷಿತ ಮಹಿಳೆಯರ ನೆರವಿನಿಂದ ಮೊದಲೇ ಗೊತ್ತುಪಡಿಸಲಾದ ಸ್ಥಳಗಳಲ್ಲಿ ತರಗತಿಗಳನ್ನು

ಕೋಷ್ಟಕ 1

1920-21ರಲ್ಲಿ ಪ್ರತಿ ವಿದ್ಯಾರ್ಥಿನಿಗೆ ಖರ್ಚು ಮಾಡುತ್ತಿದ್ದ ಹಣದ ಪ್ರಮಾಣ

| ರಾಜ್ಯಗಳು | ಮೊತ್ತ | | |
|---|---|---|---|
| | ರೂ. | ಆ. | ಪೈ. |
| ಬಂಗಾಳ | 6 | 1 | 3 |
| ಬಿಹಾರ | 5 | 8 | 5 |
| ಅಸ್ಸಾಂ | 7 | 8 | 2 |
| ಮದ್ರಾಸ್ | 9 | 2 | 5 |
| ಮೈಸೂರು | 10 | 11 | 10 |

ನಡೆಸಲಾಗುತ್ತಿತ್ತು. ಮಹಿಳಾ ಮಂಡಲಿಗಳೇ ಈ ವ್ಯವಸ್ಥೆಯ ಉಸ್ತುವಾರಿಯನ್ನೂ ನೋಡಿಕೊಳ್ಳುತ್ತಿದ್ದುವು.

ಈ ಮೊದಲೇ ಸ್ತ್ರೀ ವಿದ್ಯಾಭ್ಯಾಸಕ್ಕೆ ಹಲವಾರು ಅಡೆತಡೆಗಳಿದ್ದುವು ಎಂದು ತಿಳಿಸಲಾಯಿತಷ್ಟೆ. ಅಧ್ಯಾಪಕಿಯರ ಕೊರತೆಯ ಸಮಸ್ಯೆಯೊಡನೆ ಇನ್ನಿತರ ಸಾಮಾಜಿಕ ಕಂಟಕಗಳೂ ಇದ್ದುವು. ಬಾಲ್ಯ ವಿವಾಹ ಪದ್ಧತಿ ಹೆಣ್ಣುಮಕ್ಕಳು ಹೆಚ್ಚು ವಿದ್ಯಾಭ್ಯಾಸ ಮಾಡದಂತೆ ಅಡ್ಡಿಯೊಡ್ಡುತ್ತಿತ್ತು. ಮೇಲಾಗಿ ಈ ಕಿಶೋರಿಯರ ಅಸೂಯಾಪರರಾದ ಚಿಕ್ಕ ವಯಸ್ಸಿನ ಗಂಡಂದಿರು ತಮ್ಮ ಪತ್ನಿಯರು ಹೆಚ್ಚು ಓದುವುದನ್ನು ಸಹಿಸುತ್ತಿರಲಿಲ್ಲವೆಂದೂ ಅಭಿಪ್ರಾಯಪಡಲಾಗಿದೆ.[33] ಸ್ತ್ರೀಯರ ಮೇಲೆ ಪುರುಷರ ದಬ್ಬಾಳಿಕೆಯ ನೀತಿ ಮೊದಲಿನಿಂದಲೂ ಬೆಳೆದು ಬಂದಂತಹದ್ದೇ ಆಗಿದೆ. ಆದರೆ ಇವರಲ್ಲಿ ಕೆಲವರು ವಿಶಾಲ ದೃಷ್ಟಿಯಿಂದ ಮದುವೆಯನಂತರ ತಮ್ಮ ಪತ್ನಿಯರು ವಿದ್ಯಾಭ್ಯಾಸ ಮುಂದುವರಿಸಲು ಅನುವು ಮಾಡಿಕೊಡುತ್ತಿದ್ದರು. ಇಂತಹವರ ಸಂಖ್ಯೆ ಅತ್ಯಲ್ಪವಾಗಿದ್ದಿತು.

ಇದರೊಡನೆ, ಪುರುಷರೇ (ಹೆಚ್ಚಾಗಿ) ಇರುತ್ತಿದ್ದ ಶಾಲೆಗಳಿಗೆ ಮದುವೆಯನಂತರ ತಮ್ಮ ಪತ್ನಿಯರನ್ನು ಅಥವಾ ಮಕ್ಕಳನ್ನು ಕಳುಹಿಸಲು ಹಿಂದೇಟು ಹಾಕುತ್ತಿದ್ದರು. ಮೇಲಾಗಿ ಅಧ್ಯಾಪಕ ವೃತ್ತಿಯನ್ನು ಬಿಟ್ಟರೆ ಇನ್ನಾವ ಉದ್ಯೋಗಾವಕಾಶ ಇಲ್ಲದಿದ್ದುದೂ ಸ್ತ್ರೀಯರು ವಿದ್ಯಾಭ್ಯಾಸದಲ್ಲಿ ಹೆಚ್ಚು ಆಸಕ್ತಿ ವಹಿಸದಿರಲು ಕಾರಣವಾಗಿತ್ತು. ಆದರೆ ಕಾಲ ಕಳೆದಂತೆ ಮಹಿಳೆಯರು ಉನ್ನತ ಪರೀಕ್ಷೆಗಳಿಗೆ ಹೆಚ್ಚು ಸಂಖ್ಯೆಯಲ್ಲಿ ಕುಳಿತುಕೊಳ್ಳಲಾರಂಭಿಸಿದರು. 1886–87ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಒಬ್ಬ ವಿದ್ಯಾರ್ಥಿನಿಯೂ ಕುಳಿತಿರಲಿಲ್ಲವಾದರೆ 1916–17ರಲ್ಲಿ 12 ಮಂದಿಯೂ, 1931–32ರಲ್ಲಿ 102 ಮಂದಿಯೂ ಕುಳಿತಿದ್ದರು.

33 Review of the Progress of Education in Mysore State during 1916–1917 to 1921-22, Govt. of Mysore, p. 52

ಉನ್ನತ ಶಿಕ್ಷಣ ಪಡೆದ ಮಹಿಳೆಯರು ಮಹಿಳಾ ಶಿಕ್ಷಣದ ಪ್ರಗತಿಯ ಬಗ್ಗೆ ಹೆಚ್ಚು ಆಸ್ಥೆ ವಹಿಸಲಾರಂಭಿಸಿದರು. 1926ರಲ್ಲಿ ಶ್ರೀಮತಿ ಮಿರ್ಜಾರವರ ಅಧ್ಯಕ್ಷತೆಯಲ್ಲಿ ಮೈಸೂರು ರಾಜ್ಯದ ಪ್ರಥಮ ಮಹಿಳಾ ಸಮ್ಮೇಳನ ಜರುಗಿತು. ಜಾತಿ, ಅಂತಸ್ತುಗಳ ಭೇದ ಭಾವವಿಲ್ಲದೆ ಅನೇಕ ಮಂದಿ ಸ್ತ್ರೀಯರು ಈ ಸಮ್ಮೇಳನ ದಲ್ಲಿ ಪಾಲ್ಗೊಂಡಿದ್ದರು. ಅನೇಕ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಬಗ್ಗೆ ಈ ಸಮ್ಮೇಳನ ಚರ್ಚಿಸಿತು. ಬುರ್ಖಾ ಪದ್ಧತಿ, ಸಹಶಿಕ್ಷಣ, ಹೆಣ್ಣುಮಕ್ಕಳ ಕಡ್ಡಾಯ ಪ್ರಾಥಮಿಕ ಶಿಕ್ಷಣ, ಹೆಣ್ಣು ಮಕ್ಕಳಿಗೆ ವೃತ್ತಿ ತರಬೇತಿ ಹಾಗೂ ಧಾರ್ಮಿಕ ಮತ್ತು ನೀತಿಶಿಕ್ಷಣ ಇತ್ಯಾದಿ ವಿಷಯಗಳು ಹಾಗೆ ಚರ್ಚಿಸಲಾದವುಗಳಲ್ಲಿ ಪ್ರಮುಖವಾದವು.

ನಾಡಿನಲ್ಲಿ ಸಮಾಜ ಸುಧಾರಣೆಗಾಗಿ ಶ್ರಮಿಸಿದ ಅನೇಕ ವ್ಯಕ್ತಿಗಳೂ ಸ್ತ್ರೀ ಶಿಕ್ಷಣದ ಬಗ್ಗೆಯೂ ತಮ್ಮ ಗಮನ ಹರಿಸಿದ್ದಾರೆ. ಅಂತಹವರಲ್ಲಿ ಹರ್ಡೇಕರ್ ಮಂಜಪ್ಪನವರು ಪ್ರಮುಖರು. ಸ್ತ್ರೀಯರ ಸ್ಥಿತಿಗತಿಗಳ ಸುಧಾರಣೆ ಆವಶ್ಯಕವೆಂದು ಮನಗಂಡ ಅವರು 'ಸ್ತ್ರೀ ನೀತಿ ಸಂಗ್ರಹ'ವೆಂಬ ಪುಸ್ತಕವೊಂದನ್ನು ಬರೆದರು. ಇದರಲ್ಲಿ ಸ್ತ್ರೀ ಶಿಕ್ಷಣದ ಆವಶ್ಯಕತೆಯನ್ನು ವಿವರಿಸುತ್ತಾ ಅವರು, "ರಾಷ್ಟ್ರ ಉನ್ನತ ಸ್ಥಿತಿಗೆ ಬರಬೇಕೆಂದು ಬಯಸುವವರು ಸ್ತ್ರೀ ವರ್ಗವನ್ನು ಎಳ್ಳಷ್ಟೂ ಉಪೇಕ್ಷಿಸ ಬಾರದು... ರಾಷ್ಟ್ರವು ಎಚ್ಚತ್ತ ಈ ಸಮಯದಲ್ಲಿ ಸ್ತ್ರೀ ಶಿಕ್ಷಣಕ್ಕಾಗಿಯೂ ಹೆಚ್ಚು ಪ್ರಯತ್ನಿಸುವುದು ದೇಶಸೇವಕರ ಮುಖ್ಯ ಕೆಲಸವಾಗಿಯೇ ಇದೆ" ಎಂದು ಅಭಿಪ್ರಾಯ ಪಟ್ಟರು.[34] ತಮ್ಮ ಪುಸ್ತಕದ ಮೂಲಕ ಹೆಣ್ಣುಮಕ್ಕಳಲ್ಲಿ ತಿಳಿವಳಿಕೆ ಹಾಗೂ ದೇಶಾಭಿಮಾನವನ್ನು ಮೂಡಿಸಲು ಅವರು ಪ್ರಯತ್ನಿಸಿದರು.

ಭಾರತ ಸ್ವತಂತ್ರವಾದ ನಂತರ ಕರ್ನಾಟಕದ ಶಿಕ್ಷಣರಂಗದಲ್ಲೂ ಗಣನೀಯ ವಾದ ಬದಲಾವಣೆ ಕಂಡುಬಂದಿದೆ. ಸಂವಿಧಾನದಲ್ಲಿ ಉಕ್ತವಾಗಿರುವ ನಿರ್ದೇಶಾತ್ಮಕ ಸೂತ್ರದ (Directive Principle) ಮಾರ್ಗದಲ್ಲಿ ನಡೆಯಲು ರಾಜ್ಯದ ಶಾಸನ ಸಭೆಯು 1961ರ ಮೇಸಲ್ಲಿ 'ಮೈಸೂರು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಕಾಯಿದೆ' ಯನ್ನು ಅಂಗೀಕರಿಸಿತು. ಇಡೀ ರಾಜ್ಯದಲ್ಲಿ 5 ವರ್ಷ 10 ತಿಂಗಳಿನಿಂದ 7ನೆಯ ವರ್ಷದವರೆಗಿನ ಮಕ್ಕಳ ಗಣತಿಯನ್ನು ಕೈಗೊಳ್ಳಲಾಯಿತು. ಇದರೊಡನೆ ಈ ಮಕ್ಕಳನ್ನು ಶಾಲೆಗೆ ಸೇರಿಸುವ ಯೋಜನೆಯನ್ನೂ ಕೈಗೊಳ್ಳಲಾಯಿತು. ಅದರಂತೆ ಎಣಿಕೆ ಮಾಡಲ್ಪಟ್ಟ ಹೆಣ್ಣುಮಕ್ಕಳ ಸಂಖ್ಯೆ 3,44,763 ಇದ್ದು ಶಾಲೆಗೆ ಸೇರಿದ ಹೆಣ್ಣುಮಕ್ಕಳ ಸಂಖ್ಯೆ 3,16,972 ಇತ್ತು. ಅಂದರೆ ಶೇಕಡಾ 91.9ರಷ್ಟು ಹೆಣ್ಣು

---

34 ಹಾಲಪ್ಪ ಗ.ಸ. : ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ ಮಂಜಪ್ಪ, ಹರ್ಡೇಕರ ಮಂಜಪ್ಪ ಸ್ಮಾರಕ ಗ್ರಂಥಮಾಲೆ, ಧಾರವಾಡ, 1966, ಪು. 753

ಮಕ್ಕಳು ಶಾಲೆಗೆ ಸೇರಿದರು. ಈ ಪ್ರಮಾಣವು ಬಾಲಕರ (ಶೇ. 94.8) ಪ್ರಮಾಣಕ್ಕಿಂತ ಸ್ವಲ್ಪ ಕಡಿಮೆಯಾಗಿತ್ತು.[35]

ಇನ್ನು ಮುಂದೆ ಶಿಕ್ಷಣದ ವಿವಿಧ ಹಂತಗಳಲ್ಲಿ ಮಹಿಳಾ ಶಿಕ್ಷಣದ ಪ್ರಗತಿ ಹೇಗಾಗಿದೆ ಎಂಬುದನ್ನು ಗಮನಿಸೋಣ.

**ಪ್ರಾಥಮಿಕ ಪೂರ್ವ (ನರ್ಸರಿ) ಶಿಕ್ಷಣ :**

ಕೋಷ್ಟಕ 2

ಪ್ರಾಥಮಿಕ ಪೂರ್ವ ತರಗತಿಗಳಲ್ಲಿನ ಮಕ್ಕಳ ಸಂಖ್ಯೆ[36]

| ವರ್ಷ | ಗಂಡು ಮಕ್ಕಳ ಸಂಖ್ಯೆ | ಹೆಣ್ಣು ಮಕ್ಕಳ ಸಂಖ್ಯೆ |
|---|---|---|
| 1956–57 | 3,122 | 2,771 |
| 1960–61 | 7,172 | 6,396 |
| 1965–66 | 19,379 | 16,436 |
| 1968–69 | 24,288 | 21,474 |
| 1971–72 | 34,625 | 29,252 |
| 1972–73 | 45,719 | 44,217 |

ಮೇಲಿನ ಕೋಷ್ಟಕದಿಂದ ಪ್ರಾಥಮಿಕ ಪೂರ್ವ ಶಿಕ್ಷಣದ ಹಂತದಲ್ಲಿ ಪ್ರಗತಿಯಾಗಿರುವುದನ್ನು ಗಮನಿಸಬಹುದು. ಮೇಲಾಗಿ ಈ ಹಂತದಲ್ಲಿ ಬಾಲಕರಿಗೂ, ಬಾಲಕಿಯರಿಗೂ ಸಂಖ್ಯಾ ಪ್ರಮಾಣದಲ್ಲಿ ಹೆಚ್ಚು ವ್ಯತ್ಯಾಸವಿಲ್ಲದಿರುವುದನ್ನು ಗಮನಿಸಬಹುದು. ಈ ಅಲ್ಪ ವ್ಯತ್ಯಾಸಕ್ಕೆ ಪ್ರಾಯಶಃ ಈ ವಯಸ್ಸಿನಲ್ಲಿ ಹೆಣ್ಣು ಮಕ್ಕಳು (ಗಂಡು ಮಕ್ಕಳೂ ಸಹ) ದೈಹಿಕವಾಗಿಯೇ ಅಲ್ಲದೆ ಹಣಗಳಿಕೆಯ ಸಾಮರ್ಥ್ಯದಲ್ಲಿಯೂ ದುರ್ಬಲರಾಗಿರುವುದು ಕಾರಣವಿರಬಹುದು. ಈ ದುರ್ಬಲತೆಯಿಂದಾಗಿ ತಂದೆ ತಾಯಿಯರು ಮಕ್ಕಳನ್ನು ದುಡಿಮೆಗೋ, ಮನೆ ಕೆಲಸಕ್ಕೋ ಉಪಯೋಗಿಸಿಕೊಳ್ಳಲು ಅಸಮರ್ಥರಾಗಿರುವುದು ಕಾರಣವಿರಬಹುದು. ಮೇಲಾಗಿ

35 Murughendrappa D. R. : Twentyfive years of Education in the State of Mysore-1947 to 1972, Mimeographed, p. 26

36 Frgs. based on A.C. Devegowda : (a) Progress of Education in Mysore State from 1956-57 to 1968-69, Govt. of Mysore p. 24 ; b) Educational Progress-A Statistical Brochure 1971 72, p. 5 and 1972-73, p. 8, Mimeographed.

ಚಿಕ್ಕ ವಯಸ್ಸಿನ ಮಕ್ಕಳನ್ನು ಶಾಲೆಗೆ ಕಳುಹಿಸಿ, ತಮ್ಮ ಕೈಬಿಡುವು ಮಾಡಿಕೊಳ್ಳುವ ಅಥವಾ ಅಪರ 'ಕೋಟಲೆ'ಗಳಿಂದ ಸ್ವಲ್ಪ ವಿರಾಮ ಪಡೆಯುವ ಉದ್ದೇಶವೂ ಕಾರಣವಿರಬಹುದು.

## ಪ್ರಾಥಮಿಕ ಶಿಕ್ಷಣ

ಕೋಷ್ಟಕ 3

ಪ್ರಾಥಮಿಕ ಶಾಲೆಗಳಲ್ಲಿನ ಮಕ್ಕಳ ಸಂಖ್ಯೆ (ಲಕ್ಷಗಳಲ್ಲಿ)[7]

| ವರ್ಷ | 1 ರಿಂದ 5ನೇ ತರಗತಿ | | 6 ರಿಂದ 7 (ಹಳೆಯ 8ನೇ) ತರಗತಿ | |
|---|---|---|---|---|
| | ವಿದ್ಯಾರ್ಥಿಗಳು | ವಿದ್ಯಾರ್ಥಿನಿಯರು | ವಿದ್ಯಾರ್ಥಿಗಳು | ವಿದ್ಯಾರ್ಥಿನಿಯರು |
| 1955-56 | 10.52 | 5.81 | 1.93 | 0.59 |
| 1960-61 | 13.61 | 8.07 | 2.62 | 1.01 |
| 1965-66 | 18.61 | 13.73 | 3.06 | 1.41 |
| 1970-71 | 20.03 | 14.91 | 3.78 | 1.92 |
| 1972-73 | 20.32 | 14.84 | 3.64 | 1.98 |

ಮೇಲಿನ ಕೋಷ್ಟಕದಿಂದ ಪ್ರಾಥಮಿಕ ತರಗತಿಗಳಲ್ಲೂ ಹೆಣ್ಣು ಮಕ್ಕಳ ಸಂಖ್ಯೆಯಲ್ಲಿ ಪ್ರಗತಿಯಾಗಿರುವುದನ್ನು ಗಮನಿಸಬಹುದು. ಈ ಹಿಂದೆ ತಿಳಿಸಿದ ನೋಂದಾಣಿಸಲ್ಪಟ್ಟ ಮಕ್ಕಳ ಸಂಖ್ಯೆಯಲ್ಲಿ ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ಸಂಖ್ಯೆಯಲ್ಲಿ ಅತ್ಯಲ್ಪ ವ್ಯತ್ಯಾಸವಿದ್ದುದು ಕಂಡುಬಂದಿತಷ್ಟೆ. ಆದರೆ ಇಲ್ಲಿ ಈ ವ್ಯತ್ಯಾಸ ಹೆಚ್ಚಾಗಿರುವುದನ್ನು ಗಮನಿಸಬಹುದು. ಈ ವ್ಯತ್ಯಾಸ 1 ರಿಂದ 4ನೆಯ ತರಗತಿಯಲ್ಲಿಗಿಂತ 6ರಿಂದ 7ನೆಯ ತರಗತಿಯ ಸಂಖ್ಯೆಯಲ್ಲಿ ಹೆಚ್ಚಾಗಿದೆ.

1955–56ರ ಸಂಖ್ಯೆಗಿಂತ 1972–73ರ ಸಂಖ್ಯೆಗಳಲ್ಲಿ ಆಗಿರುವ ಹೆಚ್ಚಳವನ್ನು ಕಂಡು ಸಮಾಧಾನಪಡುವಹಾಗಿಲ್ಲ. ಹೆಣ್ಣು ಮಕ್ಕಳು ಶಾಲೆಯನ್ನು ಸೇರುವಂತೆ ಮಾಡುವುದು ಎಷ್ಟು ತ್ರಾಸದಾಯಕವೋ, ಈ ಮಕ್ಕಳು ತಮ್ಮ ಮಾರ್ಗ ಮಧ್ಯದಲ್ಲಿಯೇ ಶಾಲಾ ಜೀವನಕ್ಕೆ ತಿಲಾಂಜಲಿ ಕೊಡದಂತೆ ಎಚ್ಚರ ವಹಿಸುವುದೂ ಅಷ್ಟೇ ಶ್ರಮದಾಯಕವಾದ ಸಂಗತಿಯಾಗಿದೆ. ಅಂದರೆ ಶಾಲೆಗೆ ಸೇರಿದ ಮಕ್ಕಳೆಲ್ಲರೂ ಆ ಹಂತವನ್ನು ಪೂರ್ಣ ಮಾಡುವುದಿಲ್ಲ. ಈ 'ನಷ್ಟ ಹಾಗೂ ಜಡತ್ವ' (Wastage and Stagnation) ಸಮಸ್ಯೆಯು ಗಂಭೀರ ಸ್ವರೂಪದ್ದು. ರಾಷ್ಟ್ರದ ಆರ್ಥಿಕ ಸ್ಥಿತಿಗತಿಗಳ ಮೇಲೂ ಈ ಸಮಸ್ಯೆ ಬೀರುತ್ತದೆ. ಈ ಸಮಸ್ಯೆಗೆ ಕಾರಣಗಳ ಅನ್ವೇಷಣೆಯನ್ನೂ, ಸಮಸ್ಯಾ ಪರಿಹಾರ ಮಾರ್ಗಗಳನ್ನೂ ಕುರಿತು ಶಿಕ್ಷಣತಜ್ಞರು ನಿರಂತರವಾಗಿ ಯೋಚಿಸುತ್ತಿದ್ದಾರೆ. ಕರ್ನಾಟಕದಲ್ಲಿ ಈ ಸಮಸ್ಯೆಯ ಚಿತ್ರವನ್ನು ಮುಂದಿನ ಕೋಷ್ಟಕದಿಂದ ಪಡೆಯಬಹುದು.

ಕೋಷ್ಟಕ 4

1 ರಿಂದ 5 ನೆಯ ತರಗತಿಗಳಲ್ಲಿ ಕಂಡು ಬರುವ ನಷ್ಟ ಹಾಗೂ ಜಡತ್ವದ ಪ್ರಮಾಣ[37]

| ಕಾಲ | ಬಾಲಕರು % | ಬಾಲಕಿಯರು % |
|---|---|---|
| 1956–57 ರಿಂದ 1961–62 | 64 | 77 |
| 1957–58 ರಿಂದ 1962–63 | 63 | 70 |
| 1958–59 ರಿಂದ 1963–64 | 64 | 74 |
| 1959–60 ರಿಂದ 1964–65 | 64 | 73 |
| 1960–61 ರಿಂದ 1965–66 | 63 | 72 |
| 1961–62 ರಿಂದ 1966–67 | 67 | 78 |
| 1962–63 ರಿಂದ 1967–68 | 68 | 78 |
| 1963–64 ರಿಂದ 1968–69 | 69 | 80 |

ಮೇಲಿನ ಕೋಷ್ಟಕದಿಂದ ಈ ಸಮಸ್ಯೆಯು ವರ್ಷಗಳು ಉರುಳಿದಂತೆ ತೀವ್ರತರವಾಗುತ್ತಿರುವುದನ್ನು ಗಮನಿಸಬಹುದು. ಈ ಏರಿಕೆ ಬಾಲಕಿಯರಲ್ಲಿ ಹೆಚ್ಚಾಗುತ್ತ ನಡೆದಿದೆ. 1963–64ರಲ್ಲಿ ಪ್ರಾಥಮಿಕ ಶಾಲೆಗೆ ಸೇರಿದವರಲ್ಲಿ 31 ಮಂದಿ ಹುಡುಗರೂ 20 ಮಂದಿ ಹುಡುಗಿಯರೂ 5ನೆಯ ತರಗತಿಯವರೆಗೆ ಹೋಗುತ್ತಾರೆ. ಅಂದರೆ ಅನೇಕ ಮಂದಿ ಅವಶ್ಯಕವಾದ ಶಿಕ್ಷಣವನ್ನು ಪಡೆಯುವ ಅವಕಾಶದಿಂದ ವಂಚಿತರಾಗುತ್ತಾರೆ. ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಯನ್ನು ತ್ಯಜಿಸುತ್ತಿರುವ ಅಂಶವನ್ನು ಮನಗಂಡ ಸರ್ಕಾರ ಅವರನ್ನು ಉತ್ತೇಜಿಸಲು ವಿಶೇಷ ವಿದ್ಯಾರ್ಥಿ ವೇತನಗಳನ್ನು ನೀಡಲು ಆರಂಭಿಸಿತು. ವಿದ್ಯಾರ್ಥಿನಿಯರಿಗಾಗಿ ಹಾಜರಾತಿ ವಿದ್ಯಾರ್ಥಿ ವೇತನ (Attendance Scholarship for Girls) ಎಂದು ರೂಪಿತವಾದ ಈ ಕಾರ್ಯಕ್ರಮದಡಿಯಲ್ಲಿ ವಿದ್ಯಾರ್ಥಿನಿಯರಿಗೆ ಪುಸ್ತಕ, ಸ್ಲೇಟು, ಬಟ್ಟೆ ಇತ್ಯಾದಿಗಳನ್ನು ಒದಗಿಸಲಾಗುತ್ತಿತ್ತು. ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಈ ಕಾರ್ಯಕ್ರಮಕ್ಕಾಗಿ 17 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಯಿತು. 1.5 ಲಕ್ಷ ಮಂದಿ ವಿದ್ಯಾರ್ಥಿನಿಯರು ಈ ಸೌಲಭ್ಯವನ್ನು ಪಡೆದರು. ಉತ್ತೇಜಕರ ಫಲಿತಾಂಶಗಳನ್ನು ಪಡೆದುದರಿಂದಲೋ ಏನೋ ಮೂರನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಈ ಉದ್ದೇಶಕ್ಕಾಗಿಯೇ 25 ಲಕ್ಷ ರೂ.ಗಳನ್ನು ಮಂಜೂರು ಮಾಡಲಾಯಿತು. ಆದರೂ ಈ ಸಮಸ್ಯೆ ಕಡಿಮೆಯಾಗಿಲ್ಲ ಎಂಬುದು ಗಮನಿಸಬೇಕಾದ ಅಂಶ. ಪ್ರಾಯಶಃ ಈ ಬಗೆಯ ಆಮಿಷಗಳು ವಿದ್ಯಾರ್ಥಿನಿಯರನ್ನು (ಅವರ ತಂದೆ ತಾಯಿಯರನ್ನು !) ಆಕರ್ಷಿಸುವಲ್ಲಿ ವಿಫಲವಾಗಿವೆ.

---

37 A. C. Devegowda. Opt. cit., p. 60.

## ಪ್ರೌಢ ಶಾಲಾಶಿಕ್ಷಣ

ಇತ್ತೀಚಿನ ವರ್ಷಗಳಲ್ಲಿ ಹೆಣ್ಣುಮಕ್ಕಳ ಪ್ರೌಢಶಾಲೆಗಳು ಹಾಗೂ ಸಹ ಶಿಕ್ಷಣವನ್ನು ನೀಡುವ ಶಾಲೆಗಳು ಸಂಖ್ಯೆಯಲ್ಲಿ ಹೆಚ್ಚಾಗಿರುವ ಕಾರಣದಿಂದಾಗಿ ಹೆಣ್ಣುಮಕ್ಕಳ ಸಂಖ್ಯೆಯೂ ಪ್ರೌಢ ಶಾಲೆಗಳಲ್ಲಿ ಹೆಚ್ಚಾಗುತ್ತಿರುವುದನ್ನು ಗಮನಿಸ ಬಹುದು. 1946–47ರಲ್ಲಿ ಪ್ರೌಢ ಶಾಲೆಗಳಲ್ಲಿ 4 ಸಾವಿರ ವಿದ್ಯಾರ್ಥಿನಿಯರಿದ್ದರೆ 1972–73ರಲ್ಲಿ 1.47 ಲಕ್ಷ ಇದ್ದರು. ಇದೇ ರೀತಿ S.S.L.C. (X std.) ಪರೀಕ್ಷೆ ಗಳಿಗೆ ಕೂರುವ ವಿದ್ಯಾರ್ಥಿನಿಯರ ಸಂಖ್ಯೆಯೂ ಹೆಚ್ಚಾಗಿರುವುದನ್ನು ಗಮನಿಸ ಬಹುದು. 1947ರಲ್ಲಿ 7,347 ಹುಡುಗರೂ, 1,097 ಹುಡುಗಿಯರೂ ಪರೀಕ್ಷೆ ಗಳಿಗೆ ಕುಳಿತಿದ್ದರೆ 1975ರಲ್ಲಿ 1,37,570 ಹುಡುಗರೂ 58,101 ಹುಡುಗಿಯರೂ ಪರೀಕ್ಷೆಗೆ ಕುಳಿತಿದ್ದರು.*

ಈ ಮೇಲೆ ಕಂಡುಬಂದ ಸಂಖ್ಯಾ ಪ್ರಮಾಣವಲ್ಲಿನ ಹೆಚ್ಚಳ ಕೇವಲ ಅಷ್ಟಕ್ಕೇ ಪರಿಮಿತವಾಗಿಲ್ಲ. ಈ ಹಿಂದೆ 1916-17ರಲ್ಲಿ ಕೇವಲ 12 ಮಂದಿ ಮಾತ್ರ S.S.L.C ಪರೀಕ್ಷೆಗೆ ಕುಳಿತಿದ್ದುದನ್ನು ಗಮನಿಸಲಾಯಿತಷ್ಟೆ. ಆಗ 6 ಮಂದಿ ತೇರ್ಗಡೆ ಹೊಂದಿದ್ದರು. ಹಾಗೆಯೇ ಇತ್ತೀಚಿನ ವರ್ಷಗಳಲ್ಲೂ ವಿದ್ಯಾರ್ಥಿನಿಯರು ಉತ್ತಮ ಫಲಿತಾಂಶಗಳನ್ನು ಗಳಿಸುತ್ತಿದ್ದಾರೆ.

**ಕೋಷ್ಟಕ 5**

S.S.L.C ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿನಿಯರ ಶೇಕಡಾ ಪ್ರಮಾಣ.

| ವರ್ಷ | ಶೇಕಡಾ ಪ್ರಮಾಣ |
|---|---|
| 1947 | 46.8 |
| 1956 | 51.5 |
| 1961 | 50.2 |
| 1970 | 42.3 |
| 1975 | 52.4 |

ಇತ್ತೀಚಿನ ವರ್ಷಗಳಲ್ಲಿ S.S.L.C ಪರೀಕ್ಷೆಯ ಫಲಿತಾಂಶ ಇಳಿಮುಖವಾಗುತ್ತ ಬರದಿದ್ದರೂ, (1975ನ್ನು ಬಿಟ್ಟು) ವಿದ್ಯಾರ್ಥಿನಿಯರ ಫಲಿತಾಂಶ ವಿದ್ಯಾರ್ಥಿಗಳ ಫಲಿತಾಂಶಕ್ಕಿಂತ ಉತ್ತಮವಾಗಿಯೇ ಇದೆ. ಹುಡುಗಿಯರದೇ ಮೇಲುಗೈ ಎಂಬು ದರಲ್ಲಿ ಸಂಶಯವಿಲ್ಲ.

---

* ಈ ಸಂಖ್ಯೆಯಲ್ಲಿ ಒಮ್ಮೆ ಅನುತ್ತೀರ್ಣರಾಗಿದ್ದವರು ಸೇರಿದ್ದಾರೆ.

ಪ್ರೌಢಶಾಲೆಯ ಹಂತದವರೆಗೆ ವಿದ್ಯಾರ್ಥಿನಿಯರ ಸಂಖ್ಯೆಯಲ್ಲಿ ಪ್ರಗತಿಯಾಗಿರುವುದನ್ನು ಈಗಾಗಲೇ ಗಮನಿಸಲಾಗಿದೆ. ಈ ಅಂಶಕ್ಕೆ ಕಾರಣಗಳು ಅನೇಕ ವಿವೆ. ಬಾಲ್ಯ ವಿವಾಹ ಪದ್ಧತಿ ಇನ್ನೂ ಗ್ರಾಮೀಣ ಪ್ರದೇಶದಲ್ಲಿ ಅಲ್ಪ ಸ್ವಲ್ಪ ಇರುವುದಾದರೂ, ಕಡಿಮೆಯಾಗುತ್ತ ಬಂದಿರುವುದು ಒಂದು ಮುಖ್ಯ ಕಾರಣವಾಗಿದೆ. ಮೇಲಾಗಿ, ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳೂ, ವಿದ್ಯಾವಂತ ಯುವತಿಯರನ್ನು ವಿವಾಹವಾಗುವ ಅಭಿಲಾಷೆ ತೋರುವ ಯುವಕರ ಸಂಖ್ಯೆ ಹೆಚ್ಚುತ್ತಿರುವುದೂ, ಉದ್ಯೋಗಾವಕಾಶಗಳು ಹೆಣ್ಣಿಗೆ ಹೆಚ್ಚಾಗುತ್ತಿರುವುದೂ ಈ ಪ್ರಗತಿಗೆ ಕಾರಣವಾಗಿವೆ. ಅಲ್ಲದೆ ಉನ್ನತ ವಿದ್ಯಾಭ್ಯಾಸವು ಉನ್ನತ ಸಾಮಾಜಿಕ ಹಾಗೂ ಆರ್ಥಿಕ ಮಟ್ಟವನ್ನು ಗಳಿಸಲು ಸಹಾಯಕವಾಗುವ ಅಂಶವನ್ನು ವಿದ್ಯಾರ್ಥಿನಿಯರೂ, ಅವರ ಪೋಷಕರೂ ಗಮನಿಸಿರುವುದರಿಂದಲೇ ಈ ಪ್ರಗತಿ ಸಾಧ್ಯವಾಗಿದೆ ಎಂದು ಊಹಿಸಬಹುದು.

ಆದರೆ ಮುಂದಿನ ಹಂತಗಳಲ್ಲಿ ವಿದ್ಯಾರ್ಥಿನಿಯರ ಸಂಖ್ಯೆಯಲ್ಲಿ ಕುಸಿತ ಉಂಟಾಗುವುದನ್ನು ಕಾಣಬಹುದು. ಉನ್ನತ ವಿದ್ಯಾಭ್ಯಾಸವನ್ನು ಪಡೆಯುವ ಅವಕಾಶ ಇನ್ನೂ ಅನೇಕ ಹೆಣ್ಣು ಮಕ್ಕಳಿಗೆ ದೊರೆತಿಲ್ಲ. ಸಾಮಾಜಿಕ ಪರಿಸರವೋ, ಆರ್ಥಿಕ ಅಡಚಣೆಗಳೋ, ಇಲ್ಲ ಹತ್ತಿರದಲ್ಲಿ ಉನ್ನತ ಶಿಕ್ಷಣವೀಯುವ ಸಂಸ್ಥೆಗಳು ಇಲ್ಲದಿರುವುದೋ ಈ ಕುಸಿತಕ್ಕೆ ಕಾರಣವಾಗುತ್ತವೆ. ಬಹಳಷ್ಟು ಮಂದಿ ಪ್ರೌಢ ಶಾಲಾ ಶಿಕ್ಷಣದ ನಂತರ ಗೃಹಿಣಿಯರಾಗುವುದೂ ಇದಕ್ಕೆ ಕಾರಣವಾಗಿದೆ.

**ಉನ್ನತ ಶಿಕ್ಷಣ** (Higher education)

1. **ಸಾಮಾನ್ಯ ಶಿಕ್ಷಣ** (General education)

1946–47 ರಲ್ಲಿ ಮಹಿಳೆಯರಿಗಾಗಿ ರಾಜ್ಯದಲ್ಲಿ ಕೇವಲ ಒಂದು ಕಾಲೇಜಿತ್ತು. 1971–72 ರಲ್ಲಿ ಈ ಸಂಖ್ಯೆ 20 ರಷ್ಟಾಗಿತ್ತು. ಆದರೂ ಈ ಸಂಖ್ಯೆ ವಿದ್ಯಾರ್ಥಿನಿಯರ ಸಂಖ್ಯೆಗೆ ಹೋಲಿಸಿದರೆ ಏನೇನೂ ಸಾಲದು ಎನ್ನಿಸುತ್ತದೆ. ಸಹಶಿಕ್ಷಣವನ್ನು ಒದಗಿಸುವ ಕಾಲೇಜುಗಳಿದ್ದರೂ ವಿದ್ಯಾರ್ಥಿನಿಯರ ಒಲವು ನಾನಾ ಕಾರಣಗಳಿಂದಾಗಿ ಮಹಿಳಾ ಕಾಲೇಜುಗಳ ಕಡೆಯೇ ಇದೆ. ಈ ವರ್ಷ (1975) ಪಿ.ಯು.ಸಿ.ಯ ಪ್ರವೇಶಕ್ಕಾಗಿ ಪರದಾಡುತ್ತಿದ್ದ ವಿದ್ಯಾರ್ಥಿನಿಯರ ಬಗ್ಗೆ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ವರದಿಯೇ ಈ ಅಂಶವನ್ನು ಪುರಸ್ಕರಿಸುತ್ತದೆ.[38]

ಸಾಮಾನ್ಯ ಶಿಕ್ಷಣವನ್ನು ಒದಗಿಸುವ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಗಮನಾರ್ಹವಾಗಿ ಏರಿದೆ. 1946–47 ರಲ್ಲಿ 2,370 ವಿದ್ಯಾರ್ಥಿಗಳು

---

38 ಪ್ರಜಾವಾಣಿ, ಬೆಂಗಳೂರು, 6-6-1975, ಪು. 1 ಮತ್ತು 7

ಓದುತ್ತಿದ್ದಾಗ ಕೇವಲ 276 ವಿದ್ಯಾರ್ಥಿನಿಯರು ಓದುತ್ತಿದ್ದರು. ಆದರೆ 1972–73 ರಲ್ಲಿ 52,578 ವಿದ್ಯಾರ್ಥಿಗಳೂ, 18,692 ವಿದ್ಯಾರ್ಥಿನಿಯರೂ ಇದ್ದರು. ವಿದ್ಯಾರ್ಥಿನಿಯರ ಸಂಖ್ಯೆ ಇಷ್ಟೊಂದು ಹೆಚ್ಚಾಗಿದ್ದರೂ, ಮಹಿಳಾ ಕಾಲೇಜುಗಳ ಸಂಖ್ಯೆ ಹೆಚ್ಚಾಗದಿರುವುದು ಆಶ್ಚರ್ಯಕರ ಸಂಗತಿಯಾಗಿದೆ. ಅವು ಕೇವಲ 24 ಇದ್ದವು.

## 2. ಸ್ನಾತಕೋತ್ತರ ವಿದ್ಯಾಭ್ಯಾಸ

ಇತ್ತೀಚಿನ ವರ್ಷಗಳಲ್ಲಿ ಸ್ನಾತಕೋತ್ತರ ತರಗತಿಗಳಲ್ಲೂ ವಿದ್ಯಾರ್ಥಿನಿಯರನ್ನು ಹೆಚ್ಚು ಸಂಖ್ಯೆಯಲ್ಲಿ ಕಾಣಬಹುದಾಗಿದೆ. 1955-56ರಲ್ಲಿ ಕೇವಲ 5 ಮಂದಿ ವಿದ್ಯಾರ್ಥಿನಿಯರಿದ್ದರೆ, 1956–57 ರಲ್ಲಿ ಏಳು ಮಂದಿಯೂ, 1972–73 ರಲ್ಲಿ 1503 ಜನರೂ ಇದ್ದರು.[39] ಈವರೆಗೆ ಗಮನಿಸಲಾಗಿರುವಂತೆ, ಈ ಹಂತದಲ್ಲೂ ವಿದ್ಯಾರ್ಥಿನಿಯರ ಸಂಖ್ಯೆಯು ವಿದ್ಯಾರ್ಥಿಗಳ ಸಂಖ್ಯೆಗಿಂತ ಕಡಿಮೆಯೇ ಇದೆ. ಇದೇ ವರ್ಷಗಳಲ್ಲಿ ಕ್ರಮವಾಗಿ 126, 168 ಮತ್ತು 5128 ಮಂದಿ ವಿದ್ಯಾರ್ಥಿಗಳಿದ್ದರು. ಈ ಅಂಕಿಗಳಲ್ಲಿ ಕಂಡುಬರುವ ತಾರತಮ್ಯ ಹೆಚ್ಚು ಮಂದಿ ಮಹಿಳೆಯರು ಉನ್ನತ ವ್ಯಾಸಂಗ ಪಡೆಯುತ್ತಿದ್ದಾರೆ ಎಂದು ಹುಯಿಲೆಬ್ಬಿಸುವವರಿಗೆ ಉತ್ತರವಾಗಬಲ್ಲುದು.

ಇನ್ನು ಮುಂದೆ ವೃತ್ತ್ಯಾತ್ಮಕ ವ್ಯಾಸಂಗ (Professional education) ನೀಡುವ ಕಾಲೇಜುಗಳಲ್ಲಿ ಮಹಿಳಾ ಶಿಕ್ಷಣದ ಸ್ಥಿತಿಗತಿಗಳ ಅವಲೋಕನ ಮಾಡೋಣ.

## 3. ಕೃಷಿ ವಿಶ್ವವಿದ್ಯಾಲಯ

1964-65 ರಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪಿತವಾದಂದಿನಿಂದ ಬಿ.ಎಸ್‌ಸಿ. (ಅಗ್ರಿ) ಪದವಿಯನ್ನು ಯಾವ ವಿದ್ಯಾರ್ಥಿನಿಯೂ ಪಡೆದಿಲ್ಲ. ಹಾಗೆಯೇ ಮೀನುಗಾರಿಕೆಯ ಕಾಲೇಜನ್ನೂ ಯಾವ ವಿದ್ಯಾರ್ಥಿನಿಯೂ ಪ್ರವೇಶಿಸಿಲ್ಲ. ಆದರೆ ಪಶು ವೈದ್ಯಕೀಯ ಕಾಲೇಜನ್ನು ಅತ್ಯಲ್ಪ ಸಂಖ್ಯೆಯಲ್ಲಾದರೂ ವಿದ್ಯಾರ್ಥಿನಿಯರು ಪ್ರವೇಶಿಸಿರುವುದನ್ನು ಗಮನಿಸಬಹುದು. 1964-65 ರಲ್ಲಿ ನಾಲ್ಕು ಮಂದಿ ವಿದ್ಯಾರ್ಥಿನಿಯರಿದ್ದರೆ, 65–66 ರಲ್ಲಿ 7 ಮಂದಿಯೂ, 68-69 ರಲ್ಲಿ ಮೂವರೂ, 72-73 ರಲ್ಲಿ ಹನ್ನೊಂದು ಮಂದಿಯೂ ವ್ಯಾಸಂಗ ಮಾಡುತ್ತಿದ್ದರು.[40]

---

39 a) Figures based on Murughendrappa, D. R. Op. cit. p. 70

b) Statistical Brochure 1972–73 Op. cit. p. 35

40 Murughendrappa, D. R. Op. cit. p. 66.

ಈ ಕ್ಷೇತ್ರದಲ್ಲಿ ವಿದ್ಯಾರ್ಥಿನಿಯರು ಆಸಕ್ತಿ ವಹಿಸಿಲ್ಲವೆಂಬ ವಿಷಯ ಮೇಲಿನ ಅಂಕಿ ಅಂಶಗಳಿಂದ ವೇದ್ಯವಾಗುತ್ತದೆ.

### 4. ವಾಣಿಜ್ಯ ಶಿಕ್ಷಣ

ಇತ್ತೀಚೆಗೆ ಮಹಿಳೆಯರನ್ನು ಆಕರ್ಷಿಸುತ್ತಿರುವ ಕ್ಷೇತ್ರವಿದು. ಸ್ವತಂತ್ರವಾದ ವಾಣಿಜ್ಯ ಕಾಲೇಜುಗಳಲ್ಲಿ 1950–51 ರಲ್ಲಿ ಇಬ್ಬರು ವಿದ್ಯಾರ್ಥಿನಿಯರಿದ್ದರೆ 1971–72 ರಲ್ಲಿ 497 ಮಂದಿಯಿದ್ದರು. ಆದರೆ ಆರ್ಟ್ಸ್ ಮತ್ತು ಕಾಮರ್ಸ್ ಕಾಲೇಜುಗಳಲ್ಲಿ ಕಾಮರ್ಸ್ ಶಿಕ್ಷಣ ಪಡೆಯುತ್ತಿದ್ದವರ ಸಂಖ್ಯೆ ಮೇಲಿನ ಸಂಖ್ಯೆಗಿಂತ ಹೆಚ್ಚಾಗಿದೆ. 1968–69 ರಲ್ಲಿ ಈ ಬಗೆಯ ಕಾಲೇಜುಗಳಲ್ಲಿ 551 ಮಂದಿಯಿದ್ದರೆ 1971–72 ರಲ್ಲಿ 1,131 ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದರು. 1972–73 ರಲ್ಲಿ 11 ಮಂದಿ ಎಂ.ಕಾಂ. ತರಗತಿಗಳಲ್ಲೂ, 883 ವಿದ್ಯಾರ್ಥಿನಿಯರು ಬಿ.ಕಾಂ. ತರಗತಿಗಳಲ್ಲೂ, 1104 ಜನರು ಪಿ.ಯು.ಸಿ. ತರಗತಿಯಲ್ಲೂ ವಾಣಿಜ್ಯ ಶಿಕ್ಷಣವನ್ನು ಪಡೆಯುತ್ತಿದ್ದರು.

ವಾಣಿಜ್ಯ ಶಿಕ್ಷಣದ ನಂತರ ಬ್ಯಾಂಕು ಮುಂತಾದ ಎಡೆಗಳಲ್ಲಿ ಉದ್ಯೋಗ ಸಿಗುವ ಅವಕಾಶವಿರುವುದರಿಂದ ಹೆಚ್ಚು ಮಂದಿ ಈ ಶಿಕ್ಷಣದ ಕಡೆಗೆ ಆಕರ್ಷಿತರಾಗುತ್ತಿದ್ದಾರೆ.

### 5. ಕಾಯ್ದೆ-ಕಾನೂನು ಶಿಕ್ಷಣ

ಉಳಿದ ವೃತ್ತ್ಯಾತ್ಮಕ ಶಿಕ್ಷಣದ ಕಾಲೇಜುಗಳಿಗೆ ಹೋಲಿಸಿದರೆ ಈ ಶಿಕ್ಷಣ ಕ್ಷೇತ್ರವು ಅಲ್ಪಸಂಖ್ಯೆಯಲ್ಲಿ ವಿದ್ಯಾರ್ಥಿನಿಯರನ್ನು ಆಕರ್ಷಿಸಿದೆ. 1948–49 ರಲ್ಲಿ 5 ಮಂದಿ ವ್ಯಾಸಂಗ ಮಾಡುತ್ತಿದ್ದರೆ 1970–71 ರಲ್ಲಿ 177 ಜನ ವಿದ್ಯಾರ್ಥಿನಿಯರಿದ್ದರು. ಆದರೆ 1972-73 ರಲ್ಲಿ ಪರಿಸ್ಥಿತಿ ಸುಧಾರಿಸಿದಂತೆ ಕಂಡುಬರುತ್ತದೆ. ಆಗ 374 ಜನ ವಿದ್ಯಾರ್ಥಿನಿಯರಿದ್ದರು. ಈ ಸಂಖ್ಯೆಯಲ್ಲಿ ಬೆಂಗಳೂರು ನಗರದಲ್ಲೆ 240 ಮಂದಿ ಅಧ್ಯಯನ ಮಾಡುತ್ತಿದ್ದರು. ಅಂದರೆ ಇನ್ನುಳಿದ 8 ಕಾಲೇಜುಗಳಲ್ಲಿ ಎಷ್ಟು ಅಲ್ಪ ಸಂಖ್ಯೆಯಲ್ಲಿ ವಿದ್ಯಾರ್ಥಿನಿಯರಿದ್ದರು ಎಂಬುದನ್ನು ಕಲ್ಪಿಸಿಕೊಳ್ಳಬಹುದು.

### 6. ಶಿಕ್ಷಣ ಕ್ಷೇತ್ರ

ಈ ಮೊದಲಲ್ಲೇ ತಿಳಿಸಲಾಗಿರುವಂತೆ ಮಹಿಳೆಯರನ್ನು ಉದ್ಯೋಗಕ್ಕೆ ಆಹ್ವಾನಿಸಿದುದೇ ಶಿಕ್ಷಣ ರಂಗ. ಟಿ.ಸಿ.ಎಚ್. ಮತ್ತು ಟಿ.ಸಿ.ಎಲ್. ತರಗತಿಗಳಲ್ಲಿ 1947-48 ರಲ್ಲಿ 176 ಮಂದಿ ವಿದ್ಯಾಭ್ಯಾಸ ಮಾಡುತ್ತಿದ್ದರೆ 1972-73 ರಲ್ಲಿ 5 347 ಮಂದಿ ವ್ಯಾಸಂಗ ಮಾಡುತ್ತಿದ್ದರು.

ಅದೇ ಬಿ. ಎಡ್. ಪದವಿ ತರಗತಿಗಳಲ್ಲಿ 1947-48 ರಲ್ಲಿ 15 ಮಂದಿ ವ್ಯಾಸಂಗ ಮಾಡುತ್ತಿದ್ದರೆ 1972–73 ರಲ್ಲಿ 1077 ಮಂದಿ ಅಧ್ಯಾಪಕ ವೃತ್ತಿಗಾಗಿ ತರಬೇತಿ ಹೊಂದುತ್ತಿದ್ದರು. ಇದೇ ವರ್ಷದಲ್ಲಿ 30 ಮಂದಿ ಎಂ. ಎಡ್. ಪದವಿಯ ತರಗತಿಗಳಲ್ಲೂ ಅಧ್ಯಯನ ಮಾಡುತ್ತಿದ್ದರು.

## 7. ಇಂಜಿನಿಯರಿಂಗ್ ಶಿಕ್ಷಣ

ಈ ಕ್ಷೇತ್ರಕ್ಕೆ ಮಹಿಳೆ ಬಹಳಷ್ಟು ತಡವಾಗಿಯೇ ಕಾಲಿಟ್ಟಿದ್ದಾಳೆ. 1956-57 ರಲ್ಲಿ ಕೇವಲ ಇಬ್ಬರು ಇಂಜಿನಿಯರಿಂಗ್ ತರಗತಿಗಳಲ್ಲಿದ್ದರೆ 1971-72 ರಲ್ಲಿ ಈ ಸಂಖ್ಯೆ 54ರಷ್ಟಿತ್ತು. ಆದರೆ 1972-73ರಲ್ಲಿ ದಿಢೀರ್ ಕುಸಿತವನ್ನು ಕಾಣಬಹುದು. ಆಗ ಕೇವಲ 11 ಮಂದಿ ಈ ತರಗತಿಗಳಲ್ಲಿದ್ದರು. ಇದಕ್ಕೆ ಬಹುಶಃ ಕಾರಣಗಳು ಅನೇಕ. ಈ ಕ್ಷೇತ್ರದ ಬಗ್ಗೆ ಮಹಿಳೆಗಿರುವ ಮನೋಭಾವ ಮುಖ್ಯ ಕಾರಣವಿರಬೇಕು. ಮೇಲಾಗಿ ಈ ಬಗೆಯ ಶಿಕ್ಷಣಕ್ಕೆ ತನಗೆ ಅರ್ಹತೆಯಿಲ್ಲವೆಂಬ ಮಹಿಳೆಯ ಕಲ್ಪನೆಯೂ ಕಾರಣವಿರಬಹುದು.

## 8. ವೈದ್ಯಕೀಯ ಶಿಕ್ಷಣ

ಮಹಿಳೆ ತನ್ನ ಮೈ ಚಳಿಯನ್ನು ಬಿಟ್ಟು ಪ್ರವೇಶಿಸಿರುವ ಕ್ಷೇತ್ರವೆಂದರೆ ವೈದ್ಯಕೀಯ ರಂಗ. 1946–47ರಲ್ಲಿ 42 ಮಂದಿ ವ್ಯಾಸಂಗ ಮಾಡುತ್ತಿದ್ದರೆ 1972–73ರಲ್ಲಿ 1,798 ಮಂದಿ ಈ ತರಗತಿಗಳಲ್ಲಿದ್ದರು. ಈ ಕ್ಷೇತ್ರದಲ್ಲಿನ ಸಂಖ್ಯಾ ಹೆಚ್ಚಳಕ್ಕೆ ಸಮಾಜದಲ್ಲಿ ಮಹಿಳಾ ವೈದ್ಯರಿಗಿರುವ ಗಣ್ಯ ಸ್ಥಾನಮಾನ, ಕೆಲಸ ಸಿಗುವ ಖಾತರಿ, ಆಕರ್ಷಣೀಯವಾದ ವರಮಾನ ಇತ್ಯಾದಿ ಅಂಶಗಳು ಕಾರಣವಾಗಿವೆ. ಆದರೂ ವಿದ್ಯಾರ್ಥಿಗಳ ಸಂಖ್ಯೆಗೆ ಹೋಲಿಸಿದರೆ ವಿದ್ಯಾರ್ಥಿನಿಯರ ಸಂಖ್ಯೆ ಸರಿಪ್ರಮಾಣದಲ್ಲೇನೂ ಇಲ್ಲ. ಮಹಿಳಾ ಜನಸಂಖ್ಯೆಗೆ ಹೋಲಿಸಿ ನೋಡಿದರೂ ಮಹಿಳಾ ವೈದ್ಯರ ಸಂಖ್ಯೆ ಆವಶ್ಯಕತೆಗಿಂತ ಕಡಿಮೆಯೇ ಇದೆ.

ಇದುವರೆಗೆ ಕರ್ನಾಟಕದಲ್ಲಿ ಶಿಕ್ಷಣದ ವಿವಿಧ ಹಂತಗಳಲ್ಲಿ ಮಹಿಳೆಯು ಮುನ್ನಡೆದಿರುವ ರೀತಿಯನ್ನು ಗಮನಿಸಲಾಯಿತು. 1946-47 ಅಥವಾ ಇನ್ನಾವುದೇ ವರ್ಷಕ್ಕೆ 1972–73ರ ಅಂಕಿ ಅಂಶಗಳನ್ನು ಹೋಲಿಸಿ ನೋಡುವುದಾದರೆ ವಿದ್ಯಾರ್ಥಿನಿಯರ ಸಂಖ್ಯೆಯಲ್ಲಿ ಹೆಚ್ಚಾಗಿರುವುದನ್ನು ಕಾಣಬಹುದು. ಆದರೆ ಇಷ್ಟಕ್ಕೇ ತೃಪ್ತರಾಗಿ ಮಹಿಳಾ ಶಿಕ್ಷಣ ಮುನ್ನಡೆದಿದೆ ಎಂದು ಅರಿತರೆ ತಪ್ಪಾಗುವ ಸಂಭವವಿದೆ. ಈ ಬಗೆಯ ಹೋಲಿಕೆಯಲ್ಲೂ ವಿದ್ಯಾರ್ಥಿಗಳ ಸಂಖ್ಯೆಗೂ ವಿದ್ಯಾರ್ಥಿನಿಯರ ಸಂಖ್ಯೆಗೂ ಅಜಗಜಾಂತರ ವ್ಯತ್ಯಾಸವಿರುವುದನ್ನು ಅಂಕಿ ಅಂಶಗಳ ನೆರವಿನಿಂದ ನಿರೂಪಿಸಬಹುದು. ಆದರೆ ಮಹಿಳಾ ವಿದ್ಯಾಭ್ಯಾಸದ ಪ್ರಗತಿಯು

ಮಹಿಳಾ ಜನಸಂಖ್ಯೆಯು ಪ್ರಗತಿಗೆ ತಕ್ಕಂತೆ ಆಗಿದೆಯೇ ಎಂಬ ಪ್ರಶ್ನೆಯನ್ನು ಇಲ್ಲಿ ಉತ್ತರಿಸುವುದು ಅತ್ಯವಶ್ಯಕವೂ ಅಲ್ಲದೆ ಸೂಕ್ತವೂ ಕೂಡ.

ಈ ಉದ್ದೇಶಕ್ಕಾಗಿ 1961 ಹಾಗೂ 1971ರ ಜನಸಂಖ್ಯಾ ಗಣತಿಯನ್ನು ತೆಗೆದುಕೊಳ್ಳೋಣ.

**ಕೋಷ್ಟಕ 6**

**1961 ಹಾಗೂ 1971 ರಲ್ಲಿದ್ದ ಮಹಿಳಾ ಜನಸಂಖ್ಯೆ, ವಿದ್ಯಾವಂತ ಸ್ತ್ರೀಯರ ಸಂಖ್ಯೆ ಹಾಗೂ ಶೇಕಡಾ ಪ್ರಮಾಣ.**

| ಪ್ರದೇಶ | ವರ್ಷ | ಮಹಿಳೆಯರು | ಅಕ್ಷರಸ್ಥ ಮಹಿಳೆಯರು | ಶೇಕಡಾ |
|---|---|---|---|---|
| 1. ಪಟ್ಟಣ ಪ್ರದೇಶಗಳಲ್ಲಿ | 1961 | 2,513,230 | 808,429 | 32·17 |
| | 1971 | 3,399,402 | 1,414,349 | 41·60 |
| 2. ಗ್ರಾಮೀಣ ಪ್ರದೇಶಗಳಲ್ಲಿ | 1961 | 9,032,619 | 829,728 | 9·19 |
| | 1971 | 10,927,712 | 1,589,415 | 14·54 |
| 3. ಒಟ್ಟು ರಾಜ್ಯದಲ್ಲಿ | 1961 | 11,545,849 | 1,638,157 | 14·18 |
| | 1971 | 14,327,114 | 3,003,764 | 20·85 |

ಮೇಲಿನ ಕೋಷ್ಟಕದಿಂದ ಕರ್ನಾಟಕದಲ್ಲಿ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿರುವ ಅಕ್ಷರಸ್ಥ ಮಹಿಳೆಯರ ಸಂಖ್ಯೆಯನ್ನು ತಿಳಿಯಬಹುದು. ಜನಸಂಖ್ಯೆಯು 1961 ಮತ್ತು 1971 ರ ನಡುವಣ ಅವಧಿಯಲ್ಲಿ ಹೆಚ್ಚಿರುವಂತೆ ಅಕ್ಷರಸ್ಥ ಮಹಿಳೆಯರ ಸಂಖ್ಯೆಯೂ ವೃದ್ಧಿಯಾಗಿದೆ. ರಾಜ್ಯದಲ್ಲಿನ ಸ್ತ್ರೀ ಸಾಕ್ಷರತಾ ಪ್ರಮಾಣ ಇಡೀ ರಾಷ್ಟ್ರದಲ್ಲಿನ ಪ್ರಮಾಣಕ್ಕಿಂತ ಸ್ವಲ್ಪ ಹೆಚ್ಚಾಗಿದೆ. ರಾಷ್ಟ್ರದ ಸಾಕ್ಷರತಾ ಪ್ರಮಾಣ 1961 ರಲ್ಲಿ 12·9% ಹಾಗೂ 1971 ರಲ್ಲಿ 18·47% ರಷ್ಟು ಇದ್ದಿತು.[41] ಆದರೆ ರಾಷ್ಟ್ರದ ಇತರ ರಾಜ್ಯಗಳಿಗೆ ಹೋಲಿಸಿದರೆ ಈ ಪ್ರಮಾಣ ಕಡಿಮೆಯೇ ಇದೆ. ಇತರ ಕೆಲವು ರಾಜ್ಯಗಳಲ್ಲಿ 1971 ರಲ್ಲಿ ಸ್ತ್ರೀ ಸಾಕ್ಷರತಾ ಪ್ರಮಾಣ ಹೀಗಿದ್ದಿತು. ಗುಜರಾತ್ 24.56 ; ಕೇರಳ 53·9 ; ಮಹಾರಾಷ್ಟ್ರ 25·97 ; ಪಂಜಾಬ್ 25·25 ; ತಮಿಳುನಾಡು 26·83.

ಮೇಲಿನ ಕೋಷ್ಟಕದಲ್ಲಿ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿನ ಸ್ತ್ರೀ ವಿದ್ಯಾವಂತರ ಸಂಖ್ಯೆಯಲ್ಲಿ ವ್ಯತ್ಯಾಸವಿರುವುದನ್ನು ಗಮನಿಸಬಹುದು. ರಾಷ್ಟ್ರದ

41 Mascarenhas, M. M. : *Population Education for Quality of Life*, Family Welfare Centre, Bangalore–1974, p. 332

ಮಟ್ಟದಲ್ಲೂ ಈ ಪರಿಸ್ಥಿತಿಯನ್ನು ಕಾಣಬಹುದು. 1971ರಲ್ಲಿ ರಾಷ್ಟ್ರದ ಗ್ರಾಮೀಣ ಸ್ತ್ರೀಯರ ಸಾಕ್ಷರತಾಪ್ರಮಾಣ 8.54 ಮತ್ತು ಪಟ್ಟಣಗಳಲ್ಲಿ ಸ್ತ್ರೀ ಸಾಕ್ಷರತಾ ಪ್ರಮಾಣ 34.51 ಇದ್ದಿತು.[42] ಕರ್ನಾಟಕದಲ್ಲಿ ಇದೇ ಪ್ರಮಾಣವು ಕ್ರಮವಾಗಿ 14.54 ಮತ್ತು 41.6 ಇತ್ತು. ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳ ಇಷ್ಟೊಂದು ವ್ಯತ್ಯಾಸವಿರುವುದು ಅಭಿವೃದ್ಧಿಯ ದ್ಯೋತಕವಲ್ಲ. ಮೇಲಾಗಿ ಈ ಬಗೆಯ ಅಂತರ ಕ್ಷೇಮಕರವೂ ಅಲ್ಲ. ಅಂಧ ವಿಶ್ವಾಸಗಳು ಹೆಚ್ಚು ಪ್ರಭಾವಯುತ ವಾಗಿರುವ, ಸಾಮಾಜಿಕ ಸಮಸ್ಯೆಗಳು ಹೇರಳವಾಗಿರುವ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯ ಸ್ಥಿತಿಗತಿಯು ಉದ್ಧಾರವಾಗಬೇಕು. ಗ್ರಾಮೀಣ ಮಹಿಳೆ ಈಗಿರುವ ಸ್ಥಿತಿಯಲ್ಲೇ ಮುಂದುವರೆದರೆ ರಾಷ್ಟ್ರದ ಅನೇಕ ಯೋಜನೆಗಳು ಫಲಕಾರಿಯಾಗದೆ ಹಾಗೆಯೇ ಕಾಗದದ ಮೇಲೆ ಉಳಿಯಬೇಕಾಗಿ ಬರುತ್ತದೆ. ಉದಾಹರಣೆಗೆ, ಜನ ಸಂಖ್ಯಾ ಸ್ಫೋಟದ ಸಮಸ್ಯೆಯನ್ನೆದುರಿಸುತ್ತಿರುವ ಈ ನಾಡಿನಲ್ಲಿ ವಿದ್ಯಾವಂತ ಸ್ತ್ರೀಯರಿಗಿರುವ ಮಕ್ಕಳ ಸಂಖ್ಯೆ ಕಡಿಮೆ.[43] ಅಂದರೆ, ಸ್ತ್ರೀ ವಿದ್ಯಾಭ್ಯಾಸದ ಮಟ್ಟ ಹೆಚ್ಚಿದಂತೆ ಈ ಸಮಸ್ಯೆ ಕಡಿಮೆಯಾಗುವ ಸಂಭವವಿದೆ. ಜನಸಂಖ್ಯೆಯಲ್ಲಿ ಪುರುಷರ ಸಂಖ್ಯೆಗಿಂತ ಹೆಚ್ಚಾಗಿದ್ದರೂ, ವಿದ್ಯಾವಂತರ ಸಂಖ್ಯೆಯಲ್ಲಿ ಸ್ತ್ರೀಯರು ಕಡಿಮೆ ಇರುವುದನ್ನು ಗಮನಿಸಿದರೆ, ಜನಸಂಖ್ಯಾ ಹೆಚ್ಚಳದಷ್ಟು ವಿದ್ಯಾಭ್ಯಾಸದಲ್ಲಿ ಪ್ರಗತಿ ಯಾಗಿಲ್ಲ. ಈ ಅಂಶವನ್ನು ಸಂಬಂಧಿಸಿದವರೆಲ್ಲರೂ ಗಮನಿಸಬೇಕಾದದ್ದು ಅವಶ್ಯಕ. ಸಂಚಿಯ ಹೊನ್ನಮ್ಮ ಹೇಳಿದಂತೆ ಇನ್ನೂ ಹೆಣ್ಣೆಂದರೆ ಮೂಗೆಳೆಯುವ ತಂದೆ ತಾಯಿಯರಿರುವುದೇ ಈ ಸಮಸ್ಯೆಗೆ ಕಾರಣವಾಗಿರಬಹುದು. ಆದರೆ ಸ್ತ್ರೀ ವಿದ್ಯಾ ಭ್ಯಾಸದಲ್ಲಾಗುವ ಪ್ರಗತಿ ಇಡೀ ದೇಶದ ಪ್ರಗತಿಗೆ ಸಹಾಯಕ ಎಂಬ ಸರ್ವಕಾಲೀನ ಸತ್ಯವನ್ನು ಯಾವುದೇ ರಾಜ್ಯವಾಗಲಿ, ರಾಷ್ಟ್ರವಾಗಲಿ, ಜನಾಂಗವಾಗಲಿ ಅರಿ ಯುವುದು ಅತ್ಯವಶ್ಯಕ. ಸ್ತ್ರೀಯರು ಹೆಚ್ಚು ವಿದ್ಯಾವಂತರಾದಷ್ಟೂ ಪುರುಷರಿಗೆ ಪ್ರತಿಸ್ಪರ್ಧಿಗಳಾಗುತ್ತಾರೆ ಎಂಬ ಪುರುಷರ ಭಾವನೆ ಉತ್ಪ್ರೇಕ್ಷೆಯಿಂದ ಕೂಡಿದ್ದು ಎಂಬ ವಿಷಯ ಉದ್ಯೋಗಗಳಲ್ಲಿರುವ ಸ್ತ್ರೀಯರ ಪ್ರಮಾಣವನ್ನು ಗಮನಿಸಿದರೆ ಅರಿವಾಗುತ್ತದೆ. ಇದರೊಡನೆ ವಿದ್ಯಾವಂತರಾದ ಸ್ತ್ರೀಯರೂ ತಮಗೆ ದೊರೆತ ಸದವಕಾಶವನ್ನು ಅರಿತು, ತಮ್ಮದೇ ಆದ ಕಲ್ಪನಾ ಲೋಕಗಳಲ್ಲಿ ವಿಹರಿಸುವುದನ್ನು

42 *Ibid*, p. 332

43 'It has also been found that husbands' edn. level has little or no effect on fertility. For reducing fertility it is necessary that women are more educated' in *Family Planning and the Status of Women in India*, Report of a seminar, Central Institute of Research and Training in Public Co-operation. New Delhi. 1972, p. 76

ಬಿಟ್ಟು ಇಡೀ ಸ್ತ್ರೀ ಸಮುದಾಯದ ಒಳಿತಿಗಾಗಿ ಪ್ರಯತ್ನಿಸಬೇಕು. ವಿದ್ಯಾವಂತ ಸ್ತ್ರೀಯರ ಬಗ್ಗೆ ಸಮಕಾಲೀನ ಸಮಾಜದಲ್ಲಿ ಪ್ರಚಲಿತವಿರುವ ತಪ್ಪು ಕಲ್ಪನೆಗಳನ್ನು ತೊಡೆಯಲು ಗೌರವ ಸ್ಥಾನ–ಮಾನಗಳನ್ನು ಗಳಿಸಲು ಶ್ರಮಪಡಬೇಕು.

ಮೇಲಾಗಿ ಇಂದಿನ ಜೀವನವೆಚ್ಚ ಹೆಚ್ಚುತ್ತಲೇ ಇರುವಂತಹ ಸಂದರ್ಭದಲ್ಲಿ ಸಂಸಾರವೆಚ್ಚವನ್ನು ಸರಿದೂಗಿಸಲು ಮಹಿಳೆಯೂ ಅನಿವಾರ್ಯವಾಗಿ ದುಡಿಯಬೇಕಾಗುತ್ತಿರುವ ಸಂದರ್ಭಗಳೂ ಇವೆ. ದುಡಿಯುವ ಮಹಿಳೆಗೆ ಹಾದಿಯೇನೂ ಸುಗಮವಾಗಿಲ್ಲ. ಮಹಿಳೆಯ ಕ್ಷೇತ್ರ ಮನೆಯೋ ಅಥವಾ ದುಡಿಮೆಯೋ ಎಂಬುದರ ಬಗ್ಗೆ ಚರ್ಚೆ ಸಾಗಿಯೇ ಇದೆ. ಮಹಿಳೆ ದುಡಿಯಲಿ ದುಡಿಯದಿರಲಿ ಆಕೆ ಗೃಹಿಣಿಯಾಗಿ ನಿರ್ವಹಿಸಬೇಕಾದ ಅಗತ್ಯವಾದ ಕಾರ್ಯಗಳಿವೆ. 'ಮಕ್ಕಳ್ ಸ್ಕೂಲ್ ಮನೇಲಲ್ವೆ', 'ತಾಯಿಯೇ ಮಕ್ಕಳ ಮೊದಲ ಗುರು' ಎಂಬ ಮಾತುಗಳು ಜನಸಾಮಾನ್ಯರಿಗೂ ತಿಳಿದಂತಹವು.

ಮಗುವಿನ ಸರ್ವತೋಮುಖವಾದ ಬೆಳವಣಿಗೆಯಲ್ಲಿ ತಾಯಿ ತನ್ನ ಜವಾಬ್ದಾರಿಯನ್ನು ಅರಿತು, ತನ್ನ ಪಾತ್ರವನ್ನು ವಹಿಸಬೇಕು. ತಾಯಿಯ ವಿದ್ಯಾಭ್ಯಾಸದ ಮಟ್ಟ ಮಗುವಿನ ಬೆಳವಣಿಗೆಯ ಮೇಲೂ ವಿವಿಧ ರೀತಿಯಲ್ಲಿ ಬೀರುತ್ತದೆ. ಆದರೆ ವಿದ್ಯಾಭ್ಯಾಸವು ಎಲ್ಲ ಸಮಸ್ಯೆಗಳಿಗೂ ರಾಮಬಾಣವೆಂದು ಭಾವಿಸಲಾಗದು. ಅದು ಹಿಂದೆಂದೂ ಎಲ್ಲ ಸಮಸ್ಯೆಗಳನ್ನೂ ಪರಿಹರಿಸಿಲ್ಲ. ಮುಂದೆಯೂ ಪರಿಹರಿಸಲಿಕ್ಕಿಲ್ಲ. ಬದಲಾಗಿ ಹೊಸ ಸಮಸ್ಯೆಗಳನ್ನು ತಂದೊಡ್ಡಿದೆ, ತಂದೊಡ್ಡಬಹುದು. ಆದರೆ ಈ ಆಧುನಿಕ ಸಮಾಜದಲ್ಲಿ ಜ್ಞಾನ ಹಾಗೂ ಕೌಶಲ್ಯಗಳು ಅತ್ಯವಶ್ಯಕ. ಮಹಿಳೆಯಾಗಲೀ, ಪುರುಷನಾಗಲೀ ಈ ಆವಶ್ಯಕ ಜ್ಞಾನವನ್ನು ರೂಢಿಸಿಕೊಳ್ಳಬೇಕು. ಎಲ್ಲರೂ ಶಾಲೆಗಳು ನೀಡುವ ಜ್ಞಾನವನ್ನು ಕಲಿಯಬೇಕೆಂಬುದು ಇದರ ಅರ್ಥವಲ್ಲ. ಆದರೆ ಆವಶ್ಯಕತೆಗೆ ತಕ್ಕ ಜ್ಞಾನವನ್ನು ಔಪಚಾರಿಕ (Formal) ವಾಗಿಯಾಗಲಿ ಅಥವಾ ಅನೌಪಚಾರಿಕ (Informal) ವಾಗಿಯಾಗಲಿ ಗಳಿಸುವುದು ಮುಖ್ಯ.

ಹೆಣ್ಣುಮಕ್ಕಳು ಗೃಹಕೃತ್ಯದ ಸಮಸ್ಯೆಗಳಿಂದ ವಿದ್ಯಾಭ್ಯಾಸವನ್ನು ಮುಂದುವರಿಸಲಾಗಿರುವುದನ್ನು ಈಗಾಗಲೇ ಗಮನಿಸಲಾಗಿದೆ. ಯಾವುದಾದರೂ ಸೂಕ್ತ ವಿಧಾನದಿಂದ ಇವರು ಕುಟುಂಬದ ಉತ್ತಮ ಸದಸ್ಯರಾಗುವಂತೆ ಮಾಡುವುದು ಯಾವುದೇ ಶಿಕ್ಷಣ ಕಾರ್ಯಕ್ರಮದ ಮೂಲ ಉದ್ದೇಶವಾಗಬೇಕು. ಹಾಗಾದಲ್ಲಿ ಮಾತ್ರ ಸಮಾಜದ ವಿವಿಧ ಸ್ತರಗಳಲ್ಲಿ ಮಹಿಳೆಯ ಪ್ರಗತಿ ಸಾಧ್ಯವಾದೀತು.

# ಅಧ್ಯಾತ್ಮ ಮತ್ತು ಮಹಿಳೆ

**ಜಗದ್ಗುರು ಮಾತೆ ಮಹಾದೇವಿ**

ಅಂತರ ರಾಷ್ಟ್ರೀಯ ಮಹಿಳಾ ವರ್ಷವಿದು. ಮನುಕುಲದ ಅರ್ಧಭಾಗವಾದ ಮಹಿಳೆಯರ ವಿವಿಧ ರೀತಿಯ ಅಭಿವೃದ್ಧಿಯನ್ನು ಸಾಧಿಸಲೋಸುಗ ವಿಶ್ವದಾದ್ಯಂತ ವ್ಯಾಪಕ ಯೋಜನೆಯನ್ನು ಹಮ್ಮಿಕೊಂಡಿರುವ ಸಂವತ್ಸರ. ಸ್ತ್ರೀ ಸ್ವಾತಂತ್ರ್ಯ ಚಳುವಳಿಯ ನಾಯಕಿ ಗ್ಲೋರಿಯಾ ಸ್ಟೀನೆಮ್‌ರವರು ಹೇಳುತ್ತಾರೆ: "ಅಂತರ ರಾಷ್ಟ್ರೀಯ ಪುರುಷವರ್ಷ ಎಂಬುದು ಇಲ್ಲ ಎಂಬ ಸಂಗತಿಯನ್ನು ನೆನೆದಾಗ ಮಹಿಳಾ ವರ್ಷದ ಇಡೀ ಕಲ್ಪನೆ ನಮಗೆ ಸ್ಪಷ್ಟವಾಗುತ್ತದೆ..." ಈ ಹೇಳಿಕೆ ಧ್ವನಿಸುತ್ತದೆ– 'ಸ್ತ್ರೀ ಕುಲವು ಅನೇಕ ಕ್ಷೇತ್ರದಲ್ಲಿ ಹಿಂದುಳಿದಿದೆ, ಶೋಷಣೆಗೆ ಒಳಗಾಗಿದೆ, ಉತ್ಥಾನಗೊಳ್ಳಲು ಹಂಬಲಿಸುತ್ತಿದೆ' ಎಂಬುದನ್ನು. ಎಷ್ಟು ಸೋಜಿಗಪೂರ್ಣವಲ್ಲವೇ ? ಜನ್ಮವಿತ್ತ ಮಾತೆಯಾಗಿ, ಒಡಹುಟ್ಟಿದ ಸೋದರಿಯಾಗಿ, ಕೈವಿಡಿದ ಮಡದಿಯಾಗಿ, ಬಾಳಿನ ಸುಖ-ದುಃಖಗಳಲ್ಲಿ ಸಮಭಾಗಿ ಸತಿಯಾಗಿ, ಜೀವನದಲ್ಲಿ ಸೋತು ಹತಾಶನಾದಾಗ ಧೈರ್ಯದ ಊರುಗೋಲು ನೀಡುವ ಬಂಧುವಾಗಿ, ತಪ್ಪಿದಲ್ಲಿ ತಿದ್ದುವ ಮಾರ್ಗದರ್ಶಿಯಾಗಿ, ಮನೆಗೆ ಮಂಗಳ ಮುಂಬೆಳಕಾಗುವ ಸೊಸೆಯಾಗಿ, ವೈವಿಧ್ಯಮಯ ಪಾತ್ರವನ್ನು ನಿರ್ವಹಿಸುವ, ಪುರುಷ ಜೀವನದ ಅವಿಭಾಜ್ಯ ಅಂಗವಾಗಿ ನಿಲ್ಲುವ, ಸಮಾಜ-ರಾಷ್ಟ್ರಗಳ ನಿರ್ಮಾಣದಲ್ಲಿ ಉಪಯುಕ್ತ ಪಾತ್ರವನ್ನು ಪೂರೈಸುವ ಸ್ತ್ರೀಕುಲ ಹಿಂದುಳಿದಿದೆಯೆ ? ಸ್ತ್ರೀ ಕುಲವನ್ನು ಪುರುಷ ಪ್ರಪಂಚ ಹಿಂದಕ್ಕೆ ತಳ್ಳಿದೆಯೆ ? ಹಾಗಾದರೆ ಆಕೆ ಮುಂದೆ ಬರಬೇಕಾದರೆ ಅದರಲ್ಲಿ ಧರ್ಮ–ಅಧ್ಯಾತ್ಮಗಳ ಪಾತ್ರವೇನು ಎಂಬುದನ್ನು ವಿವೇಚಿಸುವುದು ಪ್ರಸ್ತುತ ಲೇಖನದ ಉದ್ದೇಶ.

**ಧರ್ಮ–ಅಧ್ಯಾತ್ಮ**

ವೈಜ್ಞಾನಿಕ ಸಂಶೋಧನೆಗಳು ದಿನದಿನಕ್ಕೆ ಅಧಿಕವಾಗುತ್ತ ಬದುಕಿನ ಬಹುಭಾಗವನ್ನು ಅವು ಆಕ್ರಮಿಸಿಕೊಳ್ಳುತ್ತ ಇರುವ ಈ ಕಾಲದಲ್ಲಿ ಧರ್ಮದ ಪ್ರಭಾವವು ದಿನದಿನಕ್ಕೆ ಕ್ಷಯಿಸುತ್ತಲಿದೆ ಎಂದು ತೋರಿಕೆಗೆ ಅನ್ನಿಸಿದರೂ ವಾಸ್ತವಿಕವಾಗಿ ಧರ್ಮದ ಪ್ರಭಾವ ಇಂದಿಗೂ ಸಮಾಜವನ್ನು ಆಳುವುದನ್ನು ನಾವು ಮನಗಾಣಬಹುದಾಗಿದೆ. 'ದೇವರು ಸುಳ್ಳು, ಪಾಪ–ಪುಣ್ಯಗಳೆಂಬವು ಭ್ರಮೆ, ಮುಕ್ತಿಯೆಂಬುದೊಂದು ಕಲ್ಪನೆ, ಪೂಜೆಯು ಅಫೀಮು' ಇತ್ಯಾದಿಯಾಗಿ ಸಮಾಜದಲ್ಲಿ ಶುದ್ಧ ನಾಸ್ತಿಕನಾಗಿ ವಾದಿಸುವ ಮನುಷ್ಯನೇ ವೈಯಕ್ತಿಕ ಪ್ರಸಂಗಗಳಲ್ಲಿ 'ಇದು ಆಷಾಢ ಮಾಸ, ಮಗನಿಗೆ ಹೆಣ್ಣು

ನೋಡಲು ಶುಭ ಸಮಯವಲ್ಲ; ಇಂದು ಅಮವಾಸ್ಯೆ, ಪ್ರಯಾಣ ಸಲ್ಲದು' ಎಂದು ಪಾಲಿಸುವುದನ್ನು ಕಾಣುತ್ತೇವೆ. "ದೇವರು ಸ್ವಯಂ ಕಲ್ಪಿತ ಭ್ರಮೆ..." ಎಂದೆಲ್ಲ ಭಾಷಣಗೈದು ಚಪ್ಪಾಳೆಯನ್ನು ಘನ ಪ್ರಮಾಣದಲ್ಲಿ ಹೊಂದುವವನು ತನ್ನ ಮನೆಯಲ್ಲೇ ಒಂದು ಕೋಣೆಯನ್ನು ದೇವರ ಕೋಣೆಯೆಂದು ಹೆಸರಿಸಿ, ವಿವಿಧ ಪಟಗಳನ್ನು-ಗೊಂಬೆಗಳನ್ನು ಸಂಗ್ರಹಿಸಿ ಮ್ಯೂಸಿಯಮ್‌ನಂತೆ ಮಾಡಿ ಪೂಜಿಸುವ ಉದಾಹರಣೆಗಳೂ ಉಂಟು. ಹೀಗೆ ಧರ್ಮವು (ಇವುಗಳನ್ನು ಸಮಂಜಸವಾಗಿ ಕರೆಯಬೇಕಾದರೆ ಮೂಢ ನಂಬಿಕೆ ಎನ್ನಬಹುದೇ ಹೊರತು ಧರ್ಮವೆಂದಲ್ಲ ! ನಿಜವಾದ ಧರ್ಮ ಮತ್ತು ಅಧ್ಯಾತ್ಮಗಳ ಸ್ವರೂಪವೇ ಬೇರೆ !) ಪ್ರತ್ಯಕ್ಷ, ಪರೋಕ್ಷವಾಗಿಯಾದರೂ ಸಮಾಜವನ್ನು ತನ್ನ ಹಿಡಿತದಲ್ಲಿರಿಸಿಕೊಂಡಿದೆ ಎಂದರೆ ಉತ್ಪ್ರೇಕ್ಷೆಯೇನಾಗದು.

ಧರ್ಮ, ಅಧ್ಯಾತ್ಮಗಳೆಂಬ ನಾಮಪದಗಳನ್ನು, ಧಾರ್ಮಿಕತೆ–ಅಧ್ಯಾತ್ಮಿಕತೆ ಎಂಬ ಗುಣವಾಚಕ ಪದದ್ವಯಗಳನ್ನು ಜನಸಾಮಾನ್ಯರು ಸಮಾನಾರ್ಥದಲ್ಲಿ ಬಳಸುತ್ತಾರೆ. ಆದರೆ ಪದಗಳ ವಾಚ್ಯಾರ್ಥ, ಅವುಗಳ ಅನ್ವಯಾರ್ಥಗಳ ಆಳಕ್ಕೆ ಇಳಿದರೆ ಎರಡರ ನಡುವೆ ಅಂತರವಿರುವುದನ್ನು ಕಾಣುತ್ತೇವೆ. ಇದು ವಿರೋಧಾತ್ಮಕ ಅಂತರವಲ್ಲ, ಪರಸ್ಪರ ಪೂರಕವಾದ ವ್ಯತ್ಯಾಸ. 'ಧರ್ಮ'–ಇದು ಬಹುಮುಖ ಕ್ಷೇತ್ರಗಳನ್ನು ವ್ಯಾಪಿಸಿಕೊಳ್ಳುವ ಪದ. ಅಧ್ಯಾತ್ಮವು ಏಕಮುಖವಾದ ತತ್ತ್ವವೊಂದನ್ನು ಪ್ರತಿಪಾದಿಸುವ ಚಟುವಟಿಕೆ. 'ಧೃ' ಎಂಬ ಮೂಲಧಾತುವಿನಿಂದ ಉತ್ಪತ್ತಿಯಾಗಿರುವ 'ಧರ್ಮ' ಪದವು "ಧಾರಣಾತ್ ಧರ್ಮಮ್ ಇತ್ಯಾಹುಃ" ಎಂಬ ವ್ಯಾಖ್ಯೆಯಿಂದ ಧರಿಸುವುದು, ಎತ್ತಿ ಹಿಡಿಯುವದು ಧರ್ಮ ಎಂಬರ್ಥವನ್ನು ಸ್ಫುರಿಸುವುದು. ಇದನ್ನು ಅನ್ವಯಿಸಿ ಹೀಗೆ ವಿವರಿಸಬಹುದು: 'ಯಾವ ತತ್ತ್ವಸಮುಚ್ಚಯವು ವ್ಯಕ್ತಿಯನ್ನು-ಸಮಾಜವನ್ನು, ವ್ಯಷ್ಟಿಯನ್ನು-ಸಮಷ್ಟಿಯನ್ನು ಸುವ್ಯವಸ್ಥಿತವಾಗಿ, ಸುಂದರವಾಗಿ ಎತ್ತಿಹಿಡಿಯಬಲ್ಲದೋ, ರಕ್ಷಿಸಬಲ್ಲದೋ ಅದುವೇ ಧರ್ಮ'. 'ಧರ್ಮೋ ರಕ್ಷತಿ ರಕ್ಷಿತಃ' ಎಂಬಲ್ಲಿ ಸಹ 'ಯಾವುದನ್ನು ನಾವು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುವುದೋ ಅದೇ ಧರ್ಮ' ಎಂಬ ಅರ್ಥವನ್ನು ನೀಡುವುದು. [ಅಂದಾಗ ಧರ್ಮದ ನಿಜವಾದ ಕರ್ತವ್ಯವು ಎತ್ತಿಹಿಡಿಯುವುದು, ಉತ್ಥಾನಿಸುವುದು, ರಕ್ಷಿಸುವುದು ಎಂದು ಧಾರ್ಮಿಕರು ಒಪ್ಪಿಕೊಂಡಾಗ, ಯಾವುದು ಪತನಿಸುವುದೋ, ಶೋಷಿಸುವುದೋ, ಜನಾಂಗವನ್ನು ಮೇಲು-ಕೀಳೆಂದು ವಿಭಜಿಸಿ ಹೊರಗೆ ಹಾಕುವುದೋ ಅದು ಧರ್ಮವೇ ಅಲ್ಲ ಎಂಬುದನ್ನೂ ಅವರು ಒಪ್ಪಿಕೊಳ್ಳಲೇಬೇಕಾಗುತ್ತದೆ.]

ವ್ಯಕ್ತಿ-ಸಮಾಜಗಳನ್ನು, ವ್ಯಷ್ಟಿ-ಸಮಷ್ಟಿಗಳನ್ನು ಉತ್ಥಾನಿಸುವ, ಪರಿವರ್ತನೆ ಮಾಡುವ ಸಾಮರ್ಥ್ಯ ಬರಬೇಕಾದರೆ ಧರ್ಮಕ್ಕೆ ಸರಿಯಾದ ಮೂಲಭೂತ ಸಿದ್ಧಾಂತಗಳಿರಬೇಕು. ಜಗತ್ತಿನ ಎಲ್ಲ ಧರ್ಮಗಳನ್ನು ತೆಗೆದುಕೊಂಡಾಗ ಎಲ್ಲವುಗಳ ನಡುವೆ

ಕೆಲವು ಸಾಮ್ಯವಿರುವ ಮತ್ತು ಅತಿ ಅವಶ್ಯಕವಾಗಿ ಅನಿವಾರ್ಯವಾಗಿ ಇರುವ ತತ್ತ್ವ ಗಳನ್ನು ಕಾಣುತ್ತೇವೆ. ಇವುಗಳ ಅವಶ್ಯಕತೆ ಎಷ್ಟೆಂದರೆ ಅವುಗಳಿಲ್ಲದಿದ್ದರೆ ಆಗ ಆ ತತ್ತ್ವ ಸಮುಚ್ಚಯವು ಕೇವಲ ವಿಚಾರಾತ್ಮಕ ತತ್ತ್ವಜ್ಞಾನವೋ ತಾತ್ವಿಕ ಹಿನ್ನೆಲೆ ಯಿಲ್ಲದ ಮೂಢ ರೂಢಿಯೋ, ಜಾತಿ ಮತ ಪಂಥವೋ ಆಗಬಹುದು, ಧರ್ಮ ವೆನ್ನಿಸಿ ಕೊಳ್ಳಲಾರದು. ಈ ದೃಷ್ಟಿಯಿಂದ ಧರ್ಮದಲ್ಲಿ ದಶವಿಧ ಲಕ್ಷಣಗಳನ್ನು ಗುರುತಿಸ ಬಹುದು.

1. ಜೀವ-ಜಗತ್ತು-ಈಶ್ವರರ ಪರಸ್ಪರ ಸಂಬಂಧವನ್ನು ವಿವೇಚಿಸುವ ಸಿದ್ಧಾಂತ (Metaphysics).

2. ಈ ಸಿದ್ಧಾಂತವನ್ನು ಅಳವಡಿಸಿಕೊಳ್ಳಲಿಕ್ಕೆ ಒಂದು ಸಾಧನೆ (Yoga).

3. ಸಾಧನೆಯ ಮೂಲಕ ಸಿದ್ಧಾಂತವನ್ನು ಸಾಕ್ಷಾತ್ಕರಿಸಿಕೊಂಡ ಬಳಿಕ ಆಗುವ ಅನುಭವವನ್ನು ಹೇಳುವ ದರ್ಶನ (Mysticism).

4. ಈ ಧರ್ಮದ ಅನುಯಾಯಿಯಾಗಬೇಕೆನ್ನುವವನನ್ನು ಇಂಬಿಟ್ಟು ಕೊಳ್ಳುವ ದೀಕ್ಷಾ ಸಂಸ್ಕಾರ (Initiation).

5. ಈ ಸಮಾಜದ ಅನುಯಾಯಿಯಾದವನು ತನ್ನ ಮತ್ತು ಇತರ ಸಮಾಜ ದೊಡನೆ ಹೇಗೆ ಹೊಂದಿಕೊಂಡು ಬಾಳಬೇಕೆಂಬ ಸಮಾಜಶಾಸ್ತ್ರ (Sociology).

6. ಮಾನವನು ತನ್ನ, ಸಮಾಜದ, ರಾಷ್ಟ್ರದ, ಮಾನವ ಜನಾಂಗದ ಹಿತ ವನ್ನುಂಟುಮಾಡಬೇಕಾದರೆ ಯಾವ ನೀತಿಗಳನ್ನು ಅಳವಡಿಸಿಕೊಳ್ಳಬೇಕೆಂಬುದನ್ನು ಹೇಳುವ ನೀತಿಶಾಸ್ತ್ರ (Ethics).

7. ಸಮಾಜ-ರಾಷ್ಟ್ರಗಳ ಆರ್ಥಿಕಾಭಿವೃದ್ಧಿಯನ್ನು ಮಾಡಬಲ್ಲ ಅರ್ಥಶಾಸ್ತ್ರ (Economics).

8. ವಿಶಿಷ್ಟ-ಸಮಾಜ-ಜನಾಂಗಗಳನ್ನು ಪ್ರತ್ಯೇಕಮಾಡಿ ತೋರಿಸುವ ಸಂಸ್ಕೃತಿ (Culture).

9. ಮೇಲ್ಕಂಡ ಈ ಎಲ್ಲ ತತ್ತ್ವಗಳನ್ನು ಅಳವಡಿಸಿಕೊಂಡ ಐತಿಹಾಸಿಕ ಪರಂಪರೆ (Tradition).

10. ಸಮಗ್ರವಾಗಿ ಎಲ್ಲ ವಿಷಯಗಳನ್ನು ವಿವೇಚಿಸುವ ಸಾಹಿತ್ಯ (Litera-ture).

ಈ ಹತ್ತು ಲಕ್ಷಣಗಳು ಇರುವವೇ ಇಲ್ಲವೇ ಎಂದು ಅವಲೋಕಿಸಿ ನೋಡಿದರೆ ಆಗ ಒಂದು ತತ್ತ್ವಸಂಚಯವು ಧರ್ಮವೇ, ಅಲ್ಲವೇ ಎಂಬುದು ಸ್ಪಷ್ಟವಾಗಿ ತಿಳಿದುಬರುವುದು.

ಈ ಹತ್ತು ಲಕ್ಷಣಗಳನ್ನು ಒಳಗೊಂಡ ಪರಿಪೂರ್ಣ ಧರ್ಮವು ಮಾತ್ರವೇ ವ್ಯಕ್ತಿ-ಸಮಾಜಗಳನ್ನು ಸೈದ್ಧಾಂತಿಕ, ದಾರ್ಶನಿಕ, ಯೌಗಿಕ, ಪಾರಮಾರ್ಥಿಕ, ಸಾಮಾಜಿಕ, ನೈತಿಕ, ಆರ್ಥಿಕ, ಸಾಂಸ್ಕೃತಿಕ, ಸಾಂಪ್ರದಾಯಿಕ ಮತ್ತು ಸಾಹಿತ್ಯಕವಾಗಿ ಸಂಸ್ಕರಿಸಬಲ್ಲುದು. ಯಾವ ಒಂದು ಮುಖದ ಬೆಳವಣಿಗೆ ಮಾಡುವುದರಲ್ಲಿ ಧರ್ಮವು ಹಿಂದುಳಿದರೂ, ಅದು ನಾಮವಿಶೇಷದಿಂದ ಧರ್ಮ ಎನ್ನಿಸಿಕೊಂಡರೂ ಪರಿಪೂರ್ಣ ಧರ್ಮವೆನ್ನಿಸಿಕೊಳ್ಳಲಾರದು.

ಅಧ್ಯಾತ್ಮ—ಈ ಪದವೇ ಸೂಚಿಸುವಂತೆ ಅಧ್ಯಾತ್ಮವು ಆತ್ಮನಿಗೆ ಸಂಬಂಧಿಸಿದ ತತ್ತ್ವ, ಅಲೌಕಿಕ ವಿದ್ಯೆ. 'ಧರ್ಮ'ದಷ್ಟು ಹೊಣೆಹೊರುವ, ಬಹುಮುಖ ಕ್ಷೇತ್ರ ಗಳಲ್ಲಿ ಕಾರ್ಯಮಾಡುವ ತತ್ತ್ವವಾಗದೆ ಅಧ್ಯಾತ್ಮವು ವ್ಯಕ್ತಿಯ ಆಂತರಿಕ, ಏಕಮುಖ ಬೆಳವಣಿಗೆಯ ಕಡೆಗೆ ಗಮನವಿರಿಸಿ ಕಾರ್ಯಮಗ್ನವಾಗುವದು. ಆದ್ದರಿಂದಲೇ ಇದನ್ನು ಧರ್ಮ ವೃಕ್ಷದ ಕೊಂಬೆಗಳಲ್ಲೊಂದೆಂದು ಅನ್ನಬಹುದು. ಧಾರ್ಮಿಕತೆ ಆಧ್ಯಾತ್ಮಿಕತೆಗಳ ನಡುವೆ ಸೂಕ್ಷ್ಮ ವ್ಯತ್ಯಾಸವು ಇರುವ ಕಾರಣ ಅವುಗಳನ್ನು ಉಳ್ಳಂತಹ ವ್ಯಕ್ತಿಗಳನ್ನು ವಿಂಗಡಿಸುವಾಗ, ವಿಶ್ಲೇಷಿಸುವಾಗ ವಿಶೇಷ ಜಾಗರೂಕತೆ ಯಿಂದಿರಬೇಕಾಗುವುದು. ಒಬ್ಬ ಧಾರ್ಮಿಕ ಜೀವಿಯು ಆಧ್ಯಾತ್ಮ ಜೀವಿಯಾಗಿಲ್ಲದೇ ಇರಬಹುದು ; ಆದರೆ ಆಧ್ಯಾತ್ಮ ಜೀವಿಯು ಧಾರ್ಮಿಕನಾಗಿರಲೇ ಬೇಕು. ಅನೇಕ ವಿಷಯಗಳನ್ನು ಕಲಿಸುವ ಪದವಿಯ ತರಗತಿಯಂತೆ ಧರ್ಮವಾದರೆ, ಕೇವಲ ವಿಶೇಷ ವಿಷಯದ ಕಡೆಗೆ ಗಮನಕೊಡುವ ಸ್ನಾತಕೋತ್ತರ ತರಗತಿಯಂತೆ ಅಧ್ಯಾತ್ಮ. ಎಂ.ಎ. ಓದುವವನು ಬಿ.ಎ. ಪದವೀಧರನಾಗಿರಲೇ ಬೇಕಷ್ಟೆ.

ದೇವರೊಬ್ಬನಿದ್ದಾನೆ ಎಂದು, ಅಥವಾ (ದೇವರನ್ನೊಪ್ಪದ ಜೈನ, ಬೌದ್ಧ ಧರ್ಮಗಳಂತೆ) ಮುಕ್ತಿ ಪದವಿಯುಂಟೆಂದು, ಪಾಪ–ಪುಣ್ಯಗಳನ್ನು ಹೇಳುವ ಕರ್ಮ ಸಿದ್ಧಾಂತ ನಿಜವೆಂದು, ಮುಂತಾದ ನಂಬಿಗೆಗಳನ್ನು ಇರಿಸಿಕೊಂಡವನನ್ನ ಧರ್ಮವಂತ ನೆಂದರೆ, ಕೇವಲ ನಂಬಿಗೆ (belief) ಯನ್ನಷ್ಟೇ ಇರಿಸದೆ ಅಂತಹ ದೇವನ ಕಾರುಣ್ಯ ವನ್ನು ಪಡೆಯಬೇಕೆಂದೋ, ಮುಕ್ತಿಯನ್ನು ಹೊಂದಬೇಕೆಂದೋ ಉತ್ಕಟವಾಗಿ ಆಶಿಸುವ, ಹಂಬಲಿಸುವ. ನಿಷ್ಠೆಯಿಂದ ಪ್ರಯತ್ನಿಸುವವನನ್ನು ಆಧ್ಯಾತ್ಮ ಜೀವಿ ಎನ್ನಬಹುದು.

'ನೆರೆನಂಬೋ, ನೆರೆನಂಬೋ, ಧರಧುರವಿಲ್ಲದೆ ಸಾಮವೇದಿಗಳಂತೆ'[1]

ನಂಬಿದರೆ ಸಾಲದು, ನೆರೆ ನಂಬಬೇಕು. ಕೇವಲ ಭೀತಿಯ ತಳಹದಿಯ ಮೇಲೆ ಪಾಪ-ಪುಣ್ಯಕ್ಕಂಜಿ ದೇವನನ್ನು ನಂಬಿದರೆ ಆಗದು ; ಅವನು ತನ್ನ ಸರ್ವಸ್ವವೆಂದು ಅಚಲ

1 ಭಕ್ತಿ ಭಂಡಾರಿ ಬಸವಣ್ಣನವರ ವಚನಗಳು, ಪು. 149, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1968

ವಿಶ್ವಾಸ (faith) ತಾಳಬೇಕು. ಮೊದಲಿಗೆ ನಂಬಿ ಎಡರು-ತೊಡರುಗಳು ಬರುತ್ತಿದ್ದಂತೆಯೇ 'ಉದಾಸೀನದಿಂದ ಶರಣೆನ್ನುವ, ಅರೆಯಾಗುವ ಭಕ್ತಿಯನ್ನು ಹೊಂದಿರುವ, ದೇವರ ಕಾರುಣ್ಯದಲ್ಲಿ ಅವಿಶ್ವಾಸ ತಾಳುವವನನ್ನೂ ನಾವು ಧಾರ್ಮಿಕ ಎನ್ನುವುದಾದರೆ, 'ಉರಿ ಬರಲಿ, ಸಿರಿ ಬರಲಿ ಬೇಕು ಬೇಡೆನ್ನದೆ', 'ದೇವರನ್ನು ಮರೆಯದೆ, ಮಾನವರಿಗೆ ಕೈಚಾಚದೆ', 'ಚನ್ನಮಲ್ಲಿಕಾರ್ಜುನನು ಕರ ಕರ ಕಾಡಿ ನೋಡಿದಡೆ ಒಡಲನೂ ಪ್ರಾಣವನೂ ಎಡೆಮಾಡಬಲ್ಲ' ಧೈರ್ಯವನ್ನು ತಾಳಿ, 'ಶಿರ ಹರಿದರೇನು, ಕರುಳು ಕುಪ್ಪಳಿಸಿದಡೇನು, ದೇವನೇ ನನ್ನ ಸರ್ವಸ್ವ' ಎಂದು, ಶರಣಾಗತಿ ಭಾವನೆ ಹೊಂದಿ ಇರುವವನನ್ನು ನಿಸ್ಸಂಶಯಪೂರ್ವಕವಾಗಿ ಅಧ್ಯಾತ್ಮ ಜೀವಿಯೆನ್ನಬಹುದು. ಅಧ್ಯಾತ್ಮಿಕತೆಗೆ ಬೇಕಾದುದು ಕೇವಲ ನಂಬಿಗೆ (belief) ಯಷ್ಟೇ ಅಲ್ಲ, ಶರಣಾಗತಿಯುಕ್ತವಾದ ದೃಢ ವಿಶ್ವಾಸ (faith).

ಅನ್ನನೀಡುವವರಿಂಗೆ ಧ್ಯಾನವೆಸೆವಲೋಕ
ಅರ್ಥವ ಕೊಡುವವರಿಂಗೆ ಪಾಷಾಣವೆಸೆವ ಲೋಕ
ಹೆಣ್ಣು ಹೊನ್ನು ಮಣ್ಣು ಮೂರನೂ
ಕಣ್ಣಿನಲಿ ನೋಡಿ ಕಿವಿಯಲಿ ಕೇಳಿ
ಕೈಯಲಿ ಮುಟ್ಟಿ ಮಾಡುವ ಭಕ್ತಿ
ಸಣ್ಣವರ ಸಮಾರಾಧನೆಯಾಯಿತು
ತನ್ನನಿತ್ತು ತುಷ್ಟಿವಡೆವರನೆನಗೆ ತೋರಾ
ಶ್ರೀಗಿರಿ ಚನ್ನಮಲ್ಲಿಕಾರ್ಜುನಾ[2]

ಈ ವಚನದಲ್ಲಿ ಸ್ಫುರಿಸುವ ವಿಚಾರದಂತೆ, ತನ್ನದಾದ ವಸ್ತುಗಳನ್ನು ಕೊಟ್ಟು ಸಾರ್ಥಕ್ಯತೆ ಸಾಧಿಸಿದೆನೆಂದು ತೃಪ್ತಿಪಡುವವನು ಧರ್ಮವಂತ (religious) ನಾದರೆ, ತನ್ನನ್ನೇ ಕೊಟ್ಟು ತೃಪ್ತಿಹೊಂದುವವನು ಅಧ್ಯಾತ್ಮಜೀವಿ (spiritual being). ದಾನ ದತ್ತಿಗಳನ್ನು ಕೊಟ್ಟು, ನಂದಾದೀಪಗಳನ್ನು ಉರಿಸಿ, ಗುಡಿಯ ಹುಂಡಿಗಳಲ್ಲಿ ಕಾಣಿಕೆಯನ್ನು ಹಾಕಿ, ಗುಡಿ-ಗುಂಡಾರಗಳ ನಿರ್ಮಾಣಕ್ಕೆ ಸಹಾಯಮಾಡುವದು ಧರ್ಮವಂತಿಕೆ ಎನ್ನಿಸಿಕೊಳ್ಳುವುದಾದರೆ, ತನ್ನನ್ನೇ ದೇವರಿಗೆ ಎಡೆಮಾಡಿಕೊಂಡು, ಜ್ಞಾನದ ಹಣತೆಯನ್ನು ಹಚ್ಚಿಕೊಂಡು, ತನ್ನೊಡಲನ್ನೇ ಮೃಡನಿಗೆ ಗುಡಿಯನ್ನಾಗಿ ಮಾಡಲು ಹಂಬಲಿಸುವವನೇ ಅಧ್ಯಾತ್ಮಜೀವಿ.

ದೇವನು ಕೊಡುವ ವಸ್ತುಗಳಿಗಾಗಿ ಅವನನ್ನು ಆಶ್ರಯಿಸುವವರು ಅನೇಕರುಂಟು. ಇವರನ್ನು ಧಾರ್ಮಿಕರೆನ್ನುವದಾದರೆ ದೇವನೀಯುವ ವಸ್ತುಗಳಿಗಾಗಿ ಆಶ್ರಯಿಸದೇ ಅವನಿಗಾಗಿ ಆವನೊಲುಮೆಗಾಗಿ ಹಾತೊರೆಯುವವನೇ ಅಧ್ಯಾತ್ಮ ಜೀವಿ. ಲಗ್ನಮಾಡಿಕೊಂಡ ಸ್ತ್ರೀಯರೆಲ್ಲರನ್ನು ಗೃಹಿಣಿಯರೆಂದು, ಪತ್ನಿಯರೆಂದು

2 ಮಹಾದೇವಿಯಕ್ಕನ ವಚನಗಳು, 174, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1968

ಕರೆಯುವುದು ಸಹಜ. ಪತಿಯು ಕೊಡುವ ವಸ್ತ್ರ, ಆಭರಣ ಮುಂತಾದುವುಗಳಿಗಾಗಿಯೇ ಅವನನ್ನು ಪ್ರೇಮಿಸುತ್ತಿದ್ದರೆ ಸಾಂಪ್ರದಾಯಿಕವಾಗಿ ಅಂಥವಳನ್ನು 'ಸತಿ'ಯೆಂದು ಕರೆಯುಬಹುದು. ಕೇವಲ ವಸ್ತುಗಳ ಮೇಲೆ ಮಾತ್ರ ದೃಷ್ಟಿ ಇರಿಸದೆ ಪತಿಯು ಹೃದಯದ ಒಲುಮೆಯನ್ನು ಬಯಸಿ, ಹಿತಚಿಂತನೆ ಗೈಯುವವಳನ್ನು ಪ್ರತಿವ್ರತೆ, ನಿಷ್ಠಾವಂತ ಸತಿ ಎಂದು ಕರೆಯುತ್ತೇವಷ್ಟೆ. ಅದೇ ರೀತಿ ಧಾರ್ಮಿಕರ ಅಧ್ಯಾತ್ಮ ಜೀವಿಗಳ ನಡುವಣ ವ್ಯತ್ಯಾಸವಿದೆ. ನಿಜವಾದ ಅಧ್ಯಾತ್ಮ ಜೀವಿಗೆ ಸಂಪತ್ತು, ಅಧಿಕಾರ ಮುಂತಾದವುಗಳ ಕಡೆ ಗಮನವಿಲ್ಲ. ಕೇವಲ ಶಿವನೊಲುಮೆಯ ಕಡೆಗೆ ಮಾತ್ರ. ಅದನ್ನು ಪಡೆಯಲು, ಸಮುದ್ರದೊಳಗಣ ಸಿಂಪು ಸ್ವಾತಿಪನಿಗಾಗಿ ಬಾಯಿಬಿಡುವಂತೆ, ದೇವನಿಗಾಗಿ ಸಾಧಕ ಹಂಬಲಿಸುವನು[3]. ಏಕೆಂದರೆ ಅವನಿಗೆ, "ದೇವನನ್ನರಿತ ನರಕವೇ ಮೋಕ್ಷವಾಗಿ, ಅವನನ್ನರಿಯದ ಮುಕ್ತಿಯೇ ನರಕವಾಗಿ, ಅವನೊಲ್ಲದ ಸುಖವೇ ದುಃಖವಾಗಿ, ಅವನೊಲಿದ ದುಃಖವೇ ಪರಮ ಸುಖವಾಗಿ, ಶಿವನ ಬಂಧನವೇ ಆತ್ಯಂತಿಕ ಸ್ವಾತಂತ್ರ್ಯವಾಗಿ" ಕಾಣಬರುವುದು.[4]

ಹೀಗೆ ನಿಸ್ವಾರ್ಥವಾದ, ನಿರ್ಮಲವಾದ ದೈವೀ ಪ್ರೇಮವೇ ಭಕ್ತಿಯಾಗಿ, ಅಧ್ಯಾತ್ಮವಾಗಿ ಪರಿಣಮಿಸುವುದು. ಭಗವದ್ಗೀತೆಯು ಸಹ ಧಾರ್ಮಿಕರನ್ನು ಈ ದೃಷ್ಟಿಯಿಂದ ನಾಲ್ಕು ಪ್ರಕಾರವಾಗಿ ವಿಂಗಡಿಸುವುದು. 1. ಆರ್ತ 2. ಅರ್ಥಾರ್ಥಿ 3. ಜಿಜ್ಞಾಸು ಮತ್ತು 4. ಜ್ಞಾನಿ.

> ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋರ್ಜನ
> ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥[5]

ಸಂಕಟ ಎಡರುಗಳು ಬಂದಾಗ ಮಾತ್ರ ದೇವರನ್ನು ಸ್ಮರಿಸುವವರು ಆರ್ತರಾದರೆ, ಸದಾಕಾಲ ಅದು ಬೇಕು, ಇದು ಬೇಕು ಎಂದು 'ಬೇಕು'ಗಳಿಗಾಗಿ ಪೂಜಿಸುವ ಸಕಾಮಿಗಳು ಅರ್ಥಾರ್ಥಿಗಳು. ದೈವೀಕರುಣೆ, ಮೋಕ್ಷಾಪೇಕ್ಷೆಯಿಂದ ಸಾಧನೆಮಾಡುವವರು ಜಿಜ್ಞಾಸುಗಳಾದರೆ, ತಮ್ಮ ಆತ್ಮಾನಂದಕ್ಕಾಗಿ ಭಕ್ತಿ ಮಾಡುವವರು ಜ್ಞಾನಿಗಳು, ಮುಕ್ತಾತ್ಮರು. ಇವರು ನಾಲ್ವರನ್ನೂ ನಾವು ಧರ್ಮವಂತರೆಂದು ಕರೆದರೂ, ಜಿಜ್ಞಾಸು ಮತ್ತು ಜ್ಞಾನಿ ಇಬ್ಬರನ್ನು ಮಾತ್ರವೇ ಅಧ್ಯಾತ್ಮ ಜೀವಿಗಳು ಎನ್ನಬೇಕಾಗುತ್ತದೆ.

---

3 ಭಕ್ತಿ ಭಂಡಾರಿ ಬಸವಣ್ಣನವರ ವಚನಗಳು, 55, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1968

4 ಮಹಾದೇವಿಯಕ್ಕನ ವಚನಗಳು, 132, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1968

5 ಶ್ರಿಮದ್ ಭಗವದ್ಗೀತಾ ಅ 7, ಶ್ಲೋ. 16

ನಿಜವಾದ ಆಧ್ಯಾತ್ಮಿಕತೆ (genuine spirituality) ಮಾಡಬೇಕಾದುದು ಅಂತರಂಗ ಪರಿಶುದ್ಧಿಯನ್ನು ; ಇಲ್ಲವಾದರೆ ಆ ಧಾರ್ಮಿಕತೆ ಬೂಟಾಟಿಕೆ ಅನ್ನಿಸಿಕೊಳ್ಳುವುದು. ಇಂತಹ ಬೂಟಾಟಿಕೆಯು ಆಚರಣೆಗಳೇ ಧರ್ಮದ ಹೆಸರಿನಲ್ಲಿ ಹೇರಳವಾಗಿ ನಡೆಯುತ್ತಿರುವುದರಿಂದ ಅನೇಕ ವಿಚಾರವಂತರು ಧರ್ಮದ ಬಗ್ಗೆಯೇ ಜಿಗುಪ್ಸೆ, ಉದಾಸೀನ ತಾಳುವಂತಹ ಪರಿಸ್ಥಿತಿ ಒದಗುತ್ತಿದೆ. ಆದರೆ ದೋಷವಿರುವುದು ಧರ್ಮವನ್ನು ವಿಕೃತಗೊಳಿಸುವ ಅನುಸರಿಗಳಲ್ಲಿಯೇ ವಿನಾ ಶುದ್ಧ ತತ್ತ್ವದಲ್ಲಿ ಅಲ್ಲ ಎಂಬುದನ್ನೂ ವಿಚಾರವಂತರು ಮನಗಾಣಬೇಕು. ಸುಪ್ರಭಾತದಲ್ಲಿಯೇ ಎದ್ದು ಒದ್ದೆ ಮಡಿಯುಟ್ಟು, ಪಿಟಿ ಪಿಟಿ ಶ್ಲೋಕಗಳನ್ನು–ಮಂತ್ರಗಳನ್ನು ಪಠಿಸುತ್ತ, ಇರುವೆಗಳಿಗೆ ಸಕ್ಕರೆ-ರವೆಯನ್ನು, ಕಾಗೆಗಳಿಗೆ ಬ್ರೆಡ್ಡಿನ ಚೂರುಗಳನ್ನು, ಕೋತಿಗಳಿಗೆ ಹಣ್ಣುಗಳನ್ನು ಔದಾರ್ಯದಿಂದ ಹಾಕಿ, ಹತ್ತು ಗಂಟೆಯ ಹೊತ್ತಿಗೆಲ್ಲ ಚಕ್ರಬಡ್ಡಿ ವ್ಯವಹಾರ, ಕಾಳಸಂತೆ, ಕಲಬೆರಕೆ, ಲಂಚ ಮುಂತಾದವುಗಳಲ್ಲಿ ತೊಡಗಿದರೆ ಅದು ಅಧ್ಯಾತ್ಮಿಕತೆ ಎಂದೂ ಆಗದು. ಒಂದು ಕಡೆ ಗುಡಿ ಗುಂಡಾರಗಳಿಗೆ ಲಕ್ಷಾಂತರ ರೂಪಾಯಿಗಳ ದಾನವನ್ನು ನೀಡಿ, ಇನ್ನೊಂದು ಕಡೆ ಕಳ್ಳ ಸಾಗಾಣಿಕೆ ಮಾಡಿ ರಾಷ್ಟ್ರದ ಅರ್ಥವ್ಯವಸ್ಥೆಯನ್ನೇ ಅಸ್ತವ್ಯಸ್ತಗೊಳಿಸುವುದು ಅಧ್ಯಾತ್ಮಿಕತೆಯಲ್ಲ. ಮಾಡಬಾರದ ಸಾಮಾಜಿಕ, ರಾಷ್ಟ್ರೀಯ ಪಾಪಗಳನ್ನು (social and national sins) ಮಾಡಿ ಕಪ್ಪುಹಣ ಗಳಿಸಿ, ತೀರ್ಥ-ಕ್ಷೇತ್ರಗಳಿಗೆ ಹೋಗಿ ತಲೆಗೂದಲು ಕೊಟ್ಟು, ಹೊಂಡಗಳಲ್ಲಿ ಮುಳುಗು ಹಾಕಿ, ಹುಂಡಿಗಳಲ್ಲಿ ಸಾವಿರ ಸಾವಿರ ರೂಪಾಯಿಗಳ ಕಟ್ಟುಗಳನ್ನು ಎಸೆಯುವುದು ಎಂದಿಗೂ ಅಧ್ಯಾತ್ಮಿಕತೆಯಲ್ಲ, ಧರ್ಮಸಮ್ಮತವಲ್ಲ. ಏಕೆಂದರೆ ಅಧ್ಯಾತ್ಮದ ಭವನ ನಿಂತಿರುವುದು ನೈತಿಕತೆಯ ನೆಲೆಗಟ್ಟಿನ ಮೇಲೆ.

**ಕೊಳಲ ದನಿಗೆ ಸರ್ಪ ತಲೆದೂಗಿದಡೇನು**
**ಒಳಗಣ ವಿಷದ ಬಯಕೆ ಬಿಡದನ್ನಕ್ಕ ?**
**ಹಾಡಿದಡೇನು, ಕೇಳಿದಡೇನು**
**ತನ್ನಲುಳ್ಳ ಅವಗುಣ ಬಿಡದನ್ನಕ್ಕ ?**
**ಒಳಗನರಿದು ಹೊರಗೆ ಮರೆದವರ ನೀ**
**ಎನಗೆ ತೋರಯ್ಯಾ ಚನ್ನಮಲ್ಲಿಕಾರ್ಜುನಾ**[6]

ಅಧ್ಯಾತ್ಮದ ಕರ್ತವ್ಯವೆಂದರೆ ಅಂತರಂಗದ ನಿರ್ಮಲೀಕರಣವನ್ನು ಮಾಡುವುದು, ವ್ಯಕ್ತಿಯನ್ನು ಸುಜ್ಞಾನ, ಸದ್ಭಕ್ತಿ, ಸತ್ಕೃತಿ, ಸಮ್ಯಕ್ ಚಾರಿತ್ರ್ಯಗಳಿಂದ ಶೋಭಿಸುವಂತೆ ಮಾಡುವುದು.

---

6 ಮಹಾದೇವಿಯಕ್ಕನ ವಚನಗಳು, 149, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1968

**ಅಧ್ಯಾತ್ಮ–ಅನ್ವೇಷಣೆ**

ಇಲ್ಲಿಯ ತನಕ ಧಾರ್ಮಿಕತೆ-ಅಧ್ಯಾತ್ಮಿಕತೆಯ ವ್ಯತ್ಯಾಸಗಳನ್ನು, ಅಧ್ಯಾತ್ಮ ಜೀವಿಯ ಲಕ್ಷಣಗಳನ್ನು ಕುರಿತು ವಿವೇಚಿಸಿದ್ದಾಯಿತು. ಈಗ ಅಧ್ಯಾತ್ಮ ಎಂದರೇನು ಎಂಬುದಕ್ಕೆ ಬರೋಣ.

ಅಧ್ಯಾತ್ಮ–ಇದು ಪ್ರಮುಖವಾಗಿ "ಅಂತರಂಗ ಪ್ರಪಂಚ"ಕ್ಕೆ, 'ಆತ್ಮ'ನಿಗೆ ಸಂಬಂಧಿಸಿದ್ದು ; ಇದು 'ತತ್' (That)ನ ಅನ್ವೇಷಣೆ. ಮಾನವ ಜನಾಂಗದ ಇತಿಹಾಸವನ್ನು ಅವಲೋಕಿಸಿದರೆ ಅತ್ಯಂತ ಅವಿನಾಭಾವವಾಗಿ, ಹಾಸುಹೊಕ್ಕಾಗಿ ಜನಾಂಗದ ಪ್ರಗತಿಯೊಡನೆ ಧರ್ಮದ ಬೆಳವಣಿಗೆಯನ್ನು ಕಾಣುತ್ತೇವೆ. ಪ್ರಾರಂಭದಲ್ಲಿ ನಿಸರ್ಗದ ವಿವಿಧ ವಸ್ತುಗಳಲ್ಲಿ ಬಿಡಿ ಬಿಡಿಯಾಗಿ ಅಸಾಮಾನ್ಯ ಶಕ್ತಿಗಳನ್ನು ಕಲ್ಪಿಸುವ ಅಧಿಭೌತಿಕ ಪೂಜೆ (Animism) ಪ್ರಚಲಿತವಿದ್ದರೆ ಕಾಲಾನಂತರದಲ್ಲಿ ನಿಸರ್ಗದ ವಸ್ತುಗಳಲ್ಲಿ ದೇವತೆಗಳನ್ನು ಕಲ್ಪಿಸಿಕೊಳ್ಳುವ ಅಧಿದೈವಿಕ (Anthropomorphism) ಕಲ್ಪನೆ ಬಂದಿತು. ಈ ಪುರಾಣಯುಗದ ನಂತರ ಮಾನವನ ಬುದ್ಧಿಮಟ್ಟ ಹೆಚ್ಚಿದಾಗ, ಚಿಂತನ ಶೀಲತೆ ವೃದ್ಧಿಯಾದಾಗ ನಿಸರ್ಗದ ವಸ್ತುಗಳಲ್ಲಿ ಖಂಡಿತ ಖಂಡಿತವಾಗಿ ಜೀವವನ್ನು ಕಲ್ಪಿಸುವುದು, ವಿವಿಧ ದೇವತೆಗಳ ಕಲ್ಪನೆ ಅವನಿಗೆ ಸರಿ ಕಾಣಲಿಲ್ಲ. ಆಗ ಮಾನವನು ಬ್ರಹ್ಮಾಂಡದಲ್ಲೆಲ್ಲ ಒಂದು ಮಹಾಶಕ್ತಿ ಓತಪ್ರೋತವಾಗಿ, ಸರ್ವವ್ಯಾಪಕವಾಗಿ ಇರುವುದನ್ನು ಗ್ರಹಿಸಿ, ಅದು ತನ್ನಂತರಂಗದಲ್ಲೇ ಹುದುಗಿಕೊಂಡಿರುವುದನ್ನೂ ಗುರುತಿಸಿ, ಹೊರಮುಖವಾದ ದೃಷ್ಟಿಯನ್ನು ಒಳಮುಖ ಮಾಡಿಕೊಂಡು ತನ್ನೊಳಗೇ ಅರಸತೊಡಗಿದ. ಈ ಅನ್ವೇಷಣೆಯೇ ಅಧ್ಯಾತ್ಮ (spiritualism). "ಅನುಭಾವವೆಂಬುದು ಆತ್ಮವಿದ್ಯೆ; ಅನುಭಾವವೆಂಬುದು ತಾನಾರೆಂಬುದ ತೋರುವುದು ; ಅನುಭಾವವೆಂಬುದು ನಿಜ ನಿವಾಸದಲ್ಲಿ ಇರಿಸುವುದು..."[7] ಎಂಬ ಸ್ವತಂತ್ರ ಸಿದ್ಧಲಿಂಗೇಶ್ವರರ ಈ ವಚನದಲ್ಲಿ 'ಅಧ್ಯಾತ್ಮ' ಇದಕ್ಕೆ ಪರೋಕ್ಷವಾದ ವ್ಯಾಖ್ಯಾನವಿದೆ. ನಿಜವಾದ ಅನುಭೂತಿ, ಆನಂದಗಳಿಗೆ ಸಾಧನವಾಗುವ ಅಧ್ಯಾತ್ಮವು ಆತ್ಮವಿದ್ಯೆ; ತನ್ನ ನಿಜ ಸ್ವರೂಪವನ್ನು ತೋರಿಸಿಕೊಟ್ಟು ಮೂಲತಃ ತಾನು ಸತ್-ಚಿತ್-ಆನಂದರೂಪಿ, ಈಗಷ್ಟೇ ಸ್ಥಳಾಂತರಗೊಂಡಿದ್ದಾನೆ ಎಂಬುದನ್ನು ಮನವರಿಕೆ ಮಾಡಿಕೊಟ್ಟು, ತನ್ನ ಮೂಲ ಮಾತೃಸ್ಥಾನವಾದ ಪರಮಾತ್ಮನೊಂದಿಗೆ ಒಂದಾಗಿಸುವುದು.

ಆಂಬಿಗ ಚೌಡಯ್ಯನವರೂ ಅಷ್ಟೇ ಸಮರ್ಪಕವಾಗಿ ವ್ಯಾಖ್ಯಾನಿಸುತ್ತಾರೆ: "ಇದು ಆತ್ಮದ ಅನ್ವೇಷಣೆಯೇ ಸರಿ; ಆದರೆ ಆತ್ಮನನ್ನು ಅಡವಿಯಲ್ಲಿ ಕುಳಿತೇ

---

7 ಸ್ವತಂತ್ರ ಸಿದ್ಧಲಿಂಗೇಶ್ವರ ; ವಚನ ಸಾಹಿತ್ಯ ಸಂಗ್ರಹ : (ಸಂ) ಸಂ. ಶಿ. ಭೂಸನೂರುಮಠ ಪು. 4, 8. ಮೈಸೂರು ಸರ್ಕಾರ ವಿದ್ಯಾಭ್ಯಾಸ ಇಲಾಖೆ, 1965

ಅರಸಬೇಕೆಂದಿಲ್ಲ—ಅಲ್ಲಿ ದೊರೆಯಲು ಆತ್ಮವೇನೂ ಕಂಟಿಯಲ್ಲ. ಮಡುವಿನಲ್ಲಿ ನೀರಿನ ಮಟ್ಟದ ಕೆಳಗೆ ಹುದುಗಿಕೊಂಡು ಸಾಧನೆ ಮಾಡಿ ಅರಸಲು ಅದು ಮತ್ಸ್ಯ—ಮಂಡೂಕವಲ್ಲ. ಪರಯೋಗದಿಂದ ಒಡಲ ದಂಡಿಸಿದಡೆ ಕೂಲಿಕೊಡುವ ಒಡೆಯನಲ್ಲ; ಅಷ್ಟ ತನುವಿನೊಳಗೆ, ಈ ಒಡಲು—ಮನಸ್ಸುಗಳ ಗರ್ಭದಲ್ಲೇ ನೆಲದ ಮರೆಯ ನಿಧಾನದಂತೆ 'ಅವಿತು'ಕೊಂಡಿರುವ ಆತ್ಮನನ್ನು ಇಲ್ಲಿಯೇ ಅರಸಿ, ಕಂಡುಕೊಳ್ಳಬೇಕು."[8]

ಕಟ್ಟಿಗೆಯ ಗರ್ಭದಲ್ಲಿ ಅಡಗಿರುವ ಬೆಂಕಿಯಂತೆ, ನೊರೆಹಾಲಿನಲ್ಲಿ ಹುದುಗಿಕೊಂಡಿರುವ ತುಪ್ಪದಂತೆ, ಎಳ್ಳಿನಲ್ಲಿ ಅವಿತುಕೊಂಡಿರುವ ಎಣ್ಣೆಯಂತೆ, ಮಗುವಿನಲ್ಲಿ ಅವ್ಯಕ್ತವಾಗಿರುವ ಕಾಮದಂತೆ, ಗುಪ್ತ—ಸುಪ್ತವಾಗಿ ಆತ್ಮವು ನೆಲೆಸಿದೆ. ಪ್ರಕೃತಿ-ಪ್ರಾಣಗಳ ಆವರಣದಲ್ಲಿ ಬಂಧಿತವಾಗಿರುವ ಆತ್ಮವು ಕತ್ತಲೆಯ ಗರ್ಭದಲ್ಲಿ ಬೆಂಕಿ ಹುದುಗಿಕೊಂಡಷ್ಟು ಚೋದ್ಯದ ತತ್ತ್ವವಾಗಿದೆ. ಕಣ್ಣಿನಲ್ಲಿ ಕಣ್ಣಾಗಿ, ಕಿವಿಯಲ್ಲಿ ಕಿವಿಯಾಗಿ, ಪ್ರಾಣಕ್ಕೆ ಪ್ರಾಣವಾಗಿ ಬಹುರೂಪಿ ಚೈತನ್ಯವಾದ ಆತ್ಮವು ತನ್ನೊಳಗಿರುವಾಗ, ಇಲ್ಲಿ ಅದನ್ನು ಅರಸುವ ಮಹಾವಿದ್ಯೆಯೇ ಅಧ್ಯಾತ್ಮ! ಅದನ್ನು ಶ್ರೀ ಷಣ್ಮುಖ ಶಿವಯೋಗಿಗಳು ಬಹು ಸುಂದರ ದಾರ್ಶನಿಕ ಭಾಷೆಯಲ್ಲಿ ಹೇಳುತ್ತಾರೆ :

> ಎನ್ನ ತನುವಿನ ಮರೆಯಲ್ಲಿರ್ದ ಚಿನುಮಯನ ಅರಸುವ ಬನ್ನಿರೇ.
> ಎನ್ನ ಮನದ ಮರೆಯಲ್ಲಿರ್ದ ಮಹಾಘನವಸ್ತುವ ಹುಡುಕುವ ಬನ್ನಿರೇ.
> ಎನ್ನ ಪ್ರಾಣದ ಮರೆಯಲ್ಲಿರ್ದ ಪರಬ್ರಹ್ಮವೆಂಬ ಅಖಂಡೇಶ್ವರನ ನೋಡುವ ಬನ್ನಿರೇ.[9]

**ಅಧ್ಯಾತ್ಮಕ್ಕೆ ಮಹಿಳೆ ಅರ್ಹಳೇ ?**

ತಾತ್ತ್ವಿಕವಾದ, ಬಹು ಸೂಕ್ಷ್ಮ ವ್ಯತ್ಯಾಸಗಳು ಧರ್ಮ—ಅಧ್ಯಾತ್ಮಗಳಲ್ಲಿ ಇದ್ದರೂ ರೂಢಿಯಲ್ಲಿ ಎರಡನ್ನೂ ಏಕೀಕರಿಸಿ ಮಾತನಾಡುವುದು ಸಹಜವಾಗಿದೆ. ಒಟ್ಟಾರೆ ಅವೆರಡೂ ಸಂಕೇತಿಸುವುದೂ ಆತ್ಮಾನ್ವೇಷಣೆಯನ್ನು ಮತ್ತು ಗುರಿಯಾಗಿರಿಸಿಕೊಳ್ಳುವುದು ಆತ್ಮ—ಪರಮಾತ್ಮ ಸಾಕ್ಷಾತ್ಕಾರವನ್ನೇ. ಹೀಗಿರುವಾಗ ಇಂತಹ ಅಧ್ಯಾತ್ಮ ವಿದ್ಯೆಗೆ ಮಹಿಳೆ ಅರ್ಹಳೆ ? ಮತ್ತು ಅಂತಹ ವಿದ್ಯೆ ಆಕೆಗೆ ಅವಶ್ಯಕವೇ ? ಎಂಬುದನ್ನೀಗ ವಿಶ್ಲೇಷಿಸೋಣ.

ಬಹುಪಾಲು ಧರ್ಮಗಳು ವಿವಿಧ ಕಾರಣಗಳನ್ನು ನೀಡಿ ಮಹಿಳೆಯನ್ನು ಕಪ್ಪು ಬಣ್ಣದಲ್ಲಿ ಚಿತ್ರಿಸಿ ಕೀಳಾಗಿ ಕಂಡಿವೆ. ಮಾನವ ಕುಲವನ್ನೇ ಸಮಗ್ರವಾಗಿ ಉತ್ಥಾನಿಸುವ ಸಂಕಲ್ಪವುಳ್ಳ ಧರ್ಮವೇ ಸ್ತ್ರೀಯನ್ನು ಕೆಳಗಿಳಿಸಿರುವುದನ್ನು ಕಾಣುತ್ತೇವೆ.

---

8 ಅಂಬಿಗ ಚೌಡಯ್ಯ ; ವಚನ ಸಾಹಿತ್ಯ ಸಂಗ್ರಹ, ಪು. 4. ವ. 7. ಮೈಸೂರು ಸರ್ಕಾರ ವಿದ್ಯಾಭ್ಯಾಸ ಇಲಾಖೆ, 1965

9 ವಚನ ಸಾಹಿತ್ಯ ಸಂಗ್ರಹ, ಪು. 84 : ವ. 24. (ಸಂ) ಸಂ. ಶಿ. ಭೂಸನೂರು ಮಠ. ಪ್ರ : ಮೈಸೂರು ಸರ್ಕಾರ ವಿದ್ಯಾಭ್ಯಾಸ ಇಲಾಖೆ. ಬೆಂಗಳೂರು, 1965

ಕ್ರೈಸ್ತಧರ್ಮದಂತಹ ವಿಶ್ವವ್ಯಾಪಕ ಧರ್ಮ ಸಹ ಪರಿಪೂರ್ಣ ಸಮಾನತೆಯನ್ನು ನೀಡಿಲ್ಲ. ದೀಕ್ಷಾಸಂಸ್ಕಾರ (Baptism) ಪಡೆದುಕೊಂಡು ತಾನು ಭಕ್ತಳಾಗಿ ಸಾಧನೆ ಮಾಡುವ ಅವಕಾಶ ಕ್ರೈಸ್ತಸ್ತ್ರೀಗೆ ಉಂಟೇ ವಿನಾ, ತಾನೂ ಗುರುವಾಗಿ (Priest and Bishop) ಅನ್ಯರಿಗೆ ದೀಕ್ಷೆ ನೀಡುವ ಗುರುತ್ವದ ಹಕ್ಕು ಆಕೆಗಿಲ್ಲ. ಅನಿವಾರ್ಯ ಪ್ರಸಂಗದಲ್ಲಿ ಅಂದರೆ ಯಾರಾದರೂ ಪ್ರಾಣಬಿಡುವ ಸಂದರ್ಭದಲ್ಲಿ ಪಾದ್ರಿ ಸಿಗದಿದ್ದಾಗ, ಸ್ತ್ರೀಯು ಧಾರ್ಮಿಕ ಕಾರ್ಯಮಾಡಬಹುದು. ಆದರೆ ವೇದಿಕೆಯ ಮೇಲೆ ನಿಂತು ಅನುಗ್ರಹಿಸಲಾರಳು. ಮಾತ್ರವಲ್ಲ, ಬೈಬಲ್‌ನ ಕೆಲವು ಭಾಗಗಳನ್ನು ಸಾರ್ವಜನಿಕವಾಗಿ ಪಠಿಸಬಹುದಾದರೂ, ಸಮಗ್ರವಾಗಿ ಬೈಬಲ್‌ಅನ್ನು ಸಾರ್ವಜನಿಕವಾಗಿ ಪಠಿಸುವುದಕ್ಕೆ ಆಸ್ಪದ ಇಲ್ಲದಿರುವುದನ್ನು ಆಚರಣೆಯಲ್ಲಿ ಕಾಣುತ್ತೇವೆ. ಇಷ್ಟೇ ಅಲ್ಲ, ಪುರುಷನ (ಆಡಮ್)ನ ಪಾಪಕ್ಕೆ, ಪತನಕ್ಕೆ ಸ್ತ್ರೀಯೇ (ಈವ್) ಕಾರಣವೆಂದೂ ಭಾವಿಸುವುದಲ್ಲದೆ, ಅದಕ್ಕಾಗಿ ಆಕೆ ಇಂದಿಗೂ ಪ್ರಾರ್ಥನಾ ಸಭೆಗೆ ಹೋಗುವಾಗ ತಲೆತಗ್ಗಿಸಿಕೊಂಡು, ತಲೆಮೇಲೆ ಮುಸುಕೆಳೆದುಕೊಂಡೇ ಪ್ರವೇಶಿಸಬೇಕು. (ಇದಕ್ಕೆ ಎರಡು ಬಗೆಯ ವಿವರಣೆ ನೀಡುತ್ತಾರೆ. 1. ಪುರುಷನಿಗಿಂತ ಒಂದು ಮೆಟ್ಟಿಲು ಸ್ತ್ರೀ ಕೆಳಗಾದ ಕಾರಣ ಆಕೆ ತಲೆ ತಗ್ಗಿಸಬೇಕು. 2. ಇದನ್ನು ಒಪ್ಪದವರು, ಗುರು ದೇವರಿಗೆ ಗೌರವ ನೀಡಲು ತಲೆಯನ್ನು ತಗ್ಗಿಸಿ ಮುಸುಗು ಹಾಕಿಕೊಳ್ಳುತ್ತಾರೆ, ಎನ್ನುತ್ತಾರೆ. ಮೊದಲನೆಯ ವ್ಯಾಖ್ಯೆಯೇ ನಿಜವಿದ್ದಲ್ಲಿ ಸ್ತ್ರೀಯ ಬಗ್ಗೆ ತಿರಸ್ಕಾರವುಂಟೆಂದು, ಸಮತೆ ಇಲ್ಲವೆಂದು ನಿರ್ಧರಿಸಬೇಕಾಗುತ್ತದೆ. ಎರಡನೆಯದೇ ಸರಿಯಾದಲ್ಲಿ ಅದು ಕೇವಲ ಸಾಮಾಜಿಕ ನೀತಿಯೇ ವಿನಾ ಸೈದ್ಧಾಂತಿಕ ತಿರಸ್ಕಾರವಲ್ಲ ಎಂದು ನಿರ್ಣಯಿಸಬೇಕಾಗುತ್ತದೆ. ಒಟ್ಟಾರೆ ಹೇಳುವುದಾದರೆ– ಕ್ರೈಸ್ತಸಮಾಜವೂ ಪರಿಪೂರ್ಣ ಧಾರ್ಮಿಕ ಸಮಾನತೆ ಕೊಟ್ಟಿಲ್ಲವೆಂದೇ ಇಂದಿಗೂ ಪಾದ್ರಿಯಾಗುವ ಹಕ್ಕಿಗಾಗಿ ಪಾಶ್ಚಿಮಾತ್ಯ ದೇಶಗಳಲ್ಲಿ ಹತ್ತಾರುವರುಷಗಳಿಂದ ಸ್ತ್ರೀಯರು ಚಳುವಳಿ ಮಾಡುತ್ತಲೇ ಇದ್ದಾರೆ.

ಕ್ರೈಸ್ತ ಸಮಾಜದ ಸ್ತ್ರೀಯರಿಗೆ ಧಾರ್ಮಿಕ ಸಮಾನತೆ ಸಿಗದಿದ್ದರೂ ಕಡೆಗೆ ಸಾಮಾಜಿಕ ಸ್ವಾತಂತ್ರ್ಯವಾದರೂ ಉಂಟು. ಮುಸ್ಲಿಂ ಮಹಿಳೆಯರಿಗೆ ಪುರುಷರೊಡನೆ ಪ್ರಾರ್ಥನಾ ಸಭೆಗಳಲ್ಲಿ ಭಾಗವಹಿಸುವ ಅವಕಾಶವಾಗಲಿ, ಘೋಷಾಪದ್ಧತಿಯಿಂದ ಪೂರ್ಣ ಬಿಡುಗಡೆಯಾಗಲೀ ದೊರೆತಿಲ್ಲ. ಆಧುನಿಕ ಶಿಕ್ಷಣದಿಂದ ಈಗೀಗ ಸಡಲುತ್ತಿದೆ ಎಂಬುದೂ ಸತ್ಯಸಂಗತಿಯಾಗಿದೆ.

ವೈದಿಕ ಧರ್ಮವಂತೂ 'ಶೂದ್ರ'ವರ್ಗದಲ್ಲಿ ಹೆಣ್ಣನ್ನು ಸೇರಿಸಿ, "ಹೆಣ್ಣು ಮಾಯೆ, ಮುಕ್ತಿಗೆ ಅನರ್ಹಳು, ಅಧ್ಯಾತ್ಮಕ್ಕೆ ಬಾಧಕ, ಗುರಿಮುಟ್ಟಲು ಅಸಮರ್ಥಳು" ಎಂದು ತ್ವರಿತವಾಗಿ ನಿರ್ಣಯಿಸಿತು. ಇದನ್ನು ಸಮರ್ಥಿಸಲು ಕೆಲವು ಹೇಳಿಕೆಗಳನ್ನು ಕೊಡಬಹುದು.

1. ಪಿತಾರಕ್ಷತಿ ಕೌಮಾರೇ ಭರ್ತಾರಕ್ಷತಿ ಯೌವ್ವನೇ
ರಕ್ಷಂತಿ ಸ್ಥಾವಿರೇ ಪುತ್ರ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ॥

ಮನುಸ್ಮೃತಿ. ಅ. 9. ಶ್ಲೋ. 3 [10]

'ಕುಮಾರಿಯಾಗಿದ್ದಾಗ ತಂದೆಯು, ಯೌವನದಲ್ಲಿ ಪತಿಯು, ಮುಪ್ಪಿನಲ್ಲಿ ಮಕ್ಕಳೂ ರಕ್ಷಿಸುವರಾದ ಕಾರಣ ಸ್ತ್ರೀಯು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ,' ಹೀಗೆ ಸಮಾಜ–ಶಾಸ್ತ್ರಗಳು ಸಹ ಸ್ವಾತಂತ್ರ್ಯಾಪಹರಣಕ್ಕೆ ಪ್ರಯತ್ನಿಸಿದವು. ಈ ಶ್ಲೋಕಕ್ಕೆ ಹೊಸ ವಿವರಣೆಯನ್ನು ನೀಡುವ ವಿದ್ವಾಂಸರು ಹೇಳುತ್ತಾರೆ : "ಈ ಶ್ಲೋಕದಲ್ಲಿ ಮನುಮಹರ್ಷಿ ಸ್ತ್ರೀಯ ಬಗ್ಗೆ ತಿರಸ್ಕಾರ ತೋರಿಸಿಲ್ಲ; ಅನುಕಂಪವನ್ನು ವ್ಯಕ್ತಿ ಮಾಡಿದ್ದಾನೆ. ಸ್ತ್ರೀಯು ಸ್ವಾಭಾವಿಕವಾಗಿ ಅಬಲೆಯಾದ್ದರಿಂದ ಆಕೆಯನ್ನು ಕೌಮಾರ್ಯದಲ್ಲಿ ತಂದೆಯು, ಯೌವನದಲ್ಲಿ ಪತಿಯು, ವೃದ್ಧಾಪ್ಯದಲ್ಲಿ ಪುತ್ರರು ರಕ್ಷಿಸಬೇಕು. ಆದ್ದರಿಂದ ಆಕೆಗೆ ಸ್ವಾತಂತ್ರ್ಯದ ಅವಶ್ಯಕತೆಯಿಲ್ಲ."

ಎರಡನೆಯ ವಿವರಣೆಯಲ್ಲಿ ಸ್ತ್ರೀಯ ಅಬಲತ್ವದಲ್ಲಿ ಅನುಕಂಪ, ರಕ್ಷಿಸುವ ಔದಾರ್ಯಗಳು ಧ್ವನಿತವಾಗಿವೆ ಎಂಬುವುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಅರ್ಥ ವಾಗದೆ ಇರುವ, ಪರಿಹಾರವಾಗದ ಸಂಶಯ ಇದು–ಮಹಾಶಾಸ್ತ್ರಕಾರನಾದ, ಅಪಾರ ಭಾಷಾಪ್ರೌಢಿಮೆಯ ಮನುವು 'ಅವಶ್ಯಕತೆ ಇಲ್ಲ" ಎಂದು ಬರೆಯುವದನ್ನು ಬಿಟ್ಟು 'ನ...ಅರ್ಹತಿ' ಎಂದೇಕೆ ಪ್ರಯೋಗಿಸಿದ ? ಏಕೆಂದರೆ 'ಅರ್ಹತೆ-ಇಲ್ಲ' ಮತ್ತು 'ಅವಶ್ಯಕತೆ ಇಲ್ಲ' ಎಂಬ ಎರಡು ಪ್ರಯೋಗಗಳು ಅಜಗಜಾಂತರ ವ್ಯತ್ಯಾಸದಿಂದ ಕೂಡಿವೆ. ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎನ್ನುವ ಮಾತಿನಲ್ಲಿ ಒಂದು ಬಗೆಯ ತಿರಸ್ಕಾರ ಧ್ವನಿಸುತ್ತಿದೆ. ಮನುಮಹರ್ಷಿಯು ಸ್ತ್ರೀಗೆ ಸ್ವಾತಂತ್ರ್ಯದ ಅವಶ್ಯಕತೆ ಇಲ್ಲ ಎಂದಿದ್ದರೆ ಅದು ಒಂದು ಬಗೆಯ ವರವಾದೀತು ; ಆದರೆ ಅರ್ಹಳಲ್ಲ ಎಂದಾಗ ಸ್ತ್ರೀಗೆ ಅದೊಂದು ಶಾಪವಾಗದೆ ?

2. ಹೀಗೆ ಬದುಕಿನಲ್ಲಿ ಸ್ವಾತಂತ್ರ್ಯಾಪಹರಣವಾಯಿತಷ್ಟೇ ಅಲ್ಲ, ಆಕೆಯ ಭಾವನೆಗಳನ್ನು, ಮನೋವ್ಯಥೆಯನ್ನು ಗಮನಿಸಲಾರದಷ್ಟು ಸಮಾಜವು ಮೊಂಡಾ ಯಿತು.

ವಿಶೀಲಃ ಕಾಮವೃತ್ತೋ ವಾ ಗುಣೈರ್ವಾ ಪರಿವರ್ಜಿತಃ ।
ಉಪಚರ್ಯ ಸ್ತ್ರೀಯಾ ಸಾಧ್ವ್ಯಾ ಸತತಂ ದೇವವತ್ಪತಿಃ ॥

ಮನುಸ್ಮೃತಿ. ಅ. 5. ಶ್ಲೋ. 154.

"ತನ್ನ ಪತಿ ಗುಣಹೀನನಾಗಿದ್ದರೂ, ಕಾಮುಕನಾಗಿದ್ದರೂ, ಸದ್ಗುಣರಹಿತನಾಗಿ ದ್ದರೂ ಸತಿ ಅವನನ್ನು ದೇವರೆಂದೇ ಭಾವಿಸಬೇಕು."

---

10 ಮನುಸ್ಮೃತಿಯ ಅನೇಕ ಆವೃತ್ತಿಗಳಿವೆ. ಸಮಾಜ ಪುಸ್ತಕಾಲಯ, ಧಾರವಾಡ ಇವರ 1969 ನೆಯ ವರ್ಷದ ಪ್ರಥಮ ಮುದ್ರಣ ಹೆಚ್ಚು ಲಭ್ಯವಿದೆ.

3. ಮನುಷ್ಯ ಕುಲದ ಒಂದಂಗವಾದ ಸ್ತ್ರೀಗೆ ಪೂಜಾ ಸ್ವಾತಂತ್ರ್ಯ, ವ್ರತಾಚರಣೆಯ ಅವಕಾಶಗಳು ಸಹ ನಿರಾಕರಿಸಲ್ಪಟ್ಟವು.

ನಾಸ್ತಿ ಸ್ತ್ರೀಣಾಂ ಪೃಥಗ್ಯಜ್ಞೋನ ವ್ರತಂ ನಾಪ್ಯುಪೋಷಣಂ
ಪತಿಂ ಶುಶ್ರೂಷತೇ ಯೇನ ತೇನ ಸ್ವರ್ಗೇ ಮಹೀಯತೇ ॥

ಮ. ಸ್ಮೃ. ಅ. 5. ಶ್ಲೋ. 155

"ಸ್ತ್ರೀಗೆ ಪ್ರತ್ಯೇಕವಾದ ಯಜ್ಞ, ಸಂಸ್ಕಾರವಿಧಿ ಅಥವಾ ಉಪವಾಸ ಯಾವುದೂ ಇಲ್ಲ. ತನ್ನ ಪತಿಸೇವೆಯಿಂದ ಆಕೆ ಸ್ವರ್ಗದಲ್ಲಿ ಉನ್ನತ ಸ್ಥಾನ ಪಡೆಯುತ್ತಾಳೆ." ಏನಿದ್ದರೂ ಪತಿಯ ನೆರಳಾಗಿ ಅವನ ಮೂಲಕವೇ ಏನೆಲ್ಲವನ್ನು ಸಾಧಿಸಬೇಕಾದ ಪರಿಸ್ಥಿತಿ ಹೇರಲ್ಪಟ್ಟಿತು. ಹೀಗೆ ಪರಂಪರಾಗತವಾಗಿ ಹೆಣ್ಣಿಗೆ ತಿರಸ್ಕಾರವೇ ಬಳುವಳಿಯಾಗಿ ಬಂದಿತು. ಮನುವಿನ ವಿಚಾರ ಒತ್ತಟ್ಟಿಗಿರಲಿ, ಅಂದಿನ ಕಾಲಮಾನ, ಸಾಮಾಜಿಕ ಪರಿಸರ, ಆಂತರಿಕ ಸಂಘರ್ಷಗಳ ಒತ್ತಡಕ್ಕೆ ಸಿಕ್ಕಿ ಅವನು ಹೇಳಿರುವ ನೆಂದೇ ಇರಿಸಿಕೊಳ್ಳೋಣ. ಆದರೆ ಇಂದಿಗೂ ಅನೇಕರು 'ಸಂಸ್ಕಾರ, ಸ್ವಾತಂತ್ರ್ಯಗಳಿಗೆ ಸ್ತ್ರೀ ಅನಧಿಕಾರಿ' ಎಂದೇ ಅನ್ನುವವರಿದ್ದಾರೆ. ಆದ್ದರಿಂದ ಎಲ್ಲ ಶಾಸ್ತ್ರಾಧಾರ ಗಳನ್ನೂ ಬದಿಗಿಟ್ಟು ನಾವೀಗ ವೈಚಾರಿಕ ಪ್ರಜ್ಞೆಯಿಂದ ಪರಿಶೀಲಿಸೋಣ, ಆಕೆ ನಿಜವಾಗಿಯೂ ಧರ್ಮ ಸಂಸ್ಕಾರಕ್ಕೆ ಅನರ್ಹಳೇ ?–ಎಂಬ ಬಗ್ಗೆ.

ಅಧ್ಯಾತ್ಮ ಮಾರ್ಗದಲ್ಲಿ ಸಲ್ಲಲು ಸ್ತ್ರೀಯು ಅನರ್ಹಳು ಎಂಬುದಕ್ಕೆ ಪ್ರಾಕೃತಿಕ, ಶಾರೀರಿಕ, ಮಾನಸಿಕ ಮೂರು ಕಾರಣಗಳನ್ನು ಮುಂದಿಸುವರು.

1. ನಿಸರ್ಗವು ಸ್ತ್ರೀ–ಪುರುಷರಿಗೆ ಬೇರೆ ಬೇರೆ ಕರ್ತವ್ಯ ಪಾಲನೆ, ಜಗ ದ್ವ್ಯಾಪಾರದ ಚಲನೆಗಾಗಿ ಕೆಲವು ನಿರ್ಬಂಧಗಳನ್ನು ಹಾಕಿ, ವ್ಯತ್ಯಾಸಗಳನ್ನು ಸೃಷ್ಟಿಸಿದೆ. ಇವುಗಳನ್ನು ನಿಷ್ಕಲ್ಮಶ ವಿಮರ್ಶಾದೃಷ್ಟಿಯಿಂದ ನೋಡಿದರೆ ಈ ನಿಸರ್ಗ ನಿರ್ಮಿತ ವ್ಯತ್ಯಾಸಗಳು ಬದುಕಿಗೆ ಪೂರಕವಾಗಿವೆಯೇ ಹೊರತು ಮಾರಕ ವಾಗಿಲ್ಲ; ಸಾಧಕವಾಗಿಯೇ ವಿನಾ ಬಾಧಕವಾಗಿಲ್ಲ. ದೈಹಿಕ ಶಕ್ತಿಯಲ್ಲಿ ಸ್ವಲ್ಪ ದುರ್ಬಲಳಾದ ಸ್ತ್ರೀಯನ್ನು ಶತಶತಮಾನಗಳಿಂದ ಆಳಿದ ಪುರುಷಕುಲ ಈ ಕೆಲವು ವ್ಯತ್ಯಾಸಗಳಿಗಾಗಿ ಅವಳನ್ನು ಧರ್ಮಸಂಸ್ಕಾರದಿಂದ ವಂಚಿತಳನ್ನಾಗಿ ಮಾಡಿದೆ.

ಉದಾಹರಣೆಗೆ ರಜೋಕ್ರಿಯೆ. ಪ್ರತಿಮಾಸಕ್ಕೊಮ್ಮೆ ರಜೋಕ್ರಿಯೆಗೆ ಈಡಾಗುವಳೆಂದು ಸ್ತ್ರೀಯನ್ನು ಶೂದ್ರವರ್ಗದಲ್ಲಿ ಸೇರಿಸಿ ಧರ್ಮದೀಕ್ಷೆಯಿಂದ ದೂರವಿಡಲಾಗಿದೆ. (ಎಲ್ಲ ಧರ್ಮಗಳಲ್ಲಿ ಅಲ್ಲ, ಕೆಲವು ಧರ್ಮಗಳಲ್ಲಿ ಮಾತ್ರ). ಯಾವ "ಹೊಲೆಗಂಡದಲ್ಲಿದೆ ಪಿಂಡದ ನೆಲೆಗೆ ಆಶ್ರಯವಿಲ್ಲವೋ", ಮಾನವನ ಜನನಕ್ಕೆ ಸಾರ್ಥ್ಯತೆ ಇಲ್ಲವೋ, ಅಂತಹ ರಜೋಕ್ರಿಯೆಗಾಗಿ ಸ್ತ್ರೀಯನ್ನು ಮಲಿನಳೆಂದು, ಧರ್ಮ ಸಂಸ್ಕಾರಕ್ಕೆ ಅನರ್ಹಳೆಂದು ಅನ್ನುವುದು ಅಜ್ಞಾನ ಮತ್ತು ದಾರ್ಷ್ಟ್ಯದ ಮಾತಲ್ಲವೆ ? ಅಂತೆಯೇ ಸರ್ವಜ್ಞನು ಮಾರ್ಮಿಕವಾಗಿ ಹೇಳುವನು :

ಮುಟ್ಟುಗಂಡವಳನ್ನು ಮುಟ್ಟಲೊಲ್ಲರು ನೋಡಾ
ಮುಟ್ಟು ತಡೆದು ತಾ ಹುಟ್ಟಿದಾ ದೇಹವನು
ಮುಟ್ಟುತಿಹರೇಕೆ ಸರ್ವಜ್ಞ ॥

ಯಾವಾಗ ರಜಸ್ಸು ಕಾಣಿಸುವುದೋ ತಕ್ಷಣವೇ ಆಕೆಗೆ ಸೂತಕದ ಹೊರೆ ಹೇರಿ ಸಂಪ್ರದಾಯಬದ್ಧ ಸಮಾಜವು ಹೊರಗಿರಿಸುವುದು. ಆದರೆ ಅದೇ ರಜಸ್ಸು ತಡೆದು ಪಿಂಡವಾಗಿ, ಕೂಸು ಜನ್ಮಿಸಿದಾಗ ಆ ಕೂಸನ್ನು ಮಲಿನವೆನ್ನದೆ ಮುಟ್ಟುವರಷ್ಟೆ! "ಸ್ತ್ರೀಗೆ ಆ ಕಾಲದಲ್ಲಿ ವಿಶ್ರಾಂತಿ ಬೇಕಾಗುವ ಕಾರಣ ಆಕೆಗೆ ಪೂರ್ಣ ವಿಶ್ರಾಂತಿ ನೀಡಲು ಹೊರಗಿರಿಸಲಾಗುವುದು" ಎಂದು ಆಧುನಿಕ ಪ್ರಕ್ರಿಯೆಯಲ್ಲಿ ಸಮರ್ಥಿಸಿಕೊಳ್ಳುವರು. ಈ ಔದಾರ್ಯದ ಕೃತಿಗೆ ಸಂತೋಷಪಡಲು ಅಭ್ಯಂತರವೇನಿಲ್ಲ. ಸ್ತ್ರೀ ಕೀಳೆಂಬ ತಿರಸ್ಕಾರವಿಲ್ಲದೆ ವಿಶ್ರಾಂತಿಯನ್ನು ಕೊಡುವುದಿದ್ದರೆ ಬೇಡವೆನ್ನಲು ಸಿದ್ಧರಾಗುವವರಾರು ? ಆದರೆ ಹೊರಗೆ ಕೂರಿಸಿ ಎತ್ತಿ ಎತ್ತಿ ತಟ್ಟೆಗೆ ಅನ್ನ ಹಾಕುವುದು, ಮುಟ್ಟದೆ ಮಾರು ದೂರ ಓಡಾಡುವುದು, ಆ ವಿಶಿಷ್ಟ ಕಾಲಾವಧಿಯಲ್ಲಿ ನೆರಳುಬಿದ್ದರೆ ಮಾಲೀನ್ಯ ಎನ್ನುವುದೂ ಔದಾರ್ಯವೇ ಎಂಬುದು ವಿಚಾರ ಮಾಡತಕ್ಕದ್ದು. ಇದೊಂದೇ ಕಾರಣಕ್ಕಾಗಿ ಸ್ತ್ರೀಯಳನ್ನು ಮಲಿನಳು, ಸಂಸ್ಕಾರಬಾಹಿರಳು ಎನ್ನದಿದ್ದರೆ ಅಂಥ ವಿಚಾರವಂತರು ಹೆಣ್ಣು ಮಕ್ಕಳಿಗೆ ಕೂಡ ಪುರುಷರಿಗಿರುವಷ್ಟೇ ಸಮಾನದ ಧರ್ಮದೀಕ್ಷೆ, ಮಂತ್ರ ಸಂಸ್ಕಾರ ಕೊಡಬಲ್ಲರೇ ? ಯಾವ ಒಂದು ಕ್ರಿಯೆ ಸೃಷ್ಟಿಯ ಚಕ್ರ ಉರುಳಲು ಅತ್ಯಂತ ಅವಶ್ಯಕವೋ, ನಿಸರ್ಗಕ್ಕೆ ವರವೋ, ಯಾವ ಒಂದು ಸ್ತ್ರೀಯ ಕಷ್ಟ ಸಹಿಷ್ಣುತೆ-ತ್ಯಾಗಗಳಿಂದ ಪ್ರಜೋತ್ಪತ್ತಿಯಾಗುವುದೋ ಅಂತಹುದಕ್ಕಾಗಿ ಆಕೆಯನ್ನು ಗೌರವಿಸುವ ಬದಲು, ಧರ್ಮದೀಕ್ಷಾ ಬಾಹಿರಳನ್ನಾಗಿ ಮಾಡುವುದು ಅಮಾನವೀಯತೆಯಲ್ಲವೆ ?

ಈ ದೃಷ್ಟಿಯಲ್ಲಿ ಸ್ತ್ರೀಕುಲದ ಅಭೀಪ್ಸೆ, ಘನತೆಯನ್ನು ಬಹಳ ಔದಾರ್ಯ, ಅನುಕಂಪಗಳಿಂದ ಅರ್ಥಮಾಡಿಕೊಂಡವರು ಹನ್ನೆರಡನೆಯ ಶತಮಾನದ ಕನ್ನಡ ನಾಡಿನ ಶರಣರು. ಅವರು ಹೊಲೆಯನ್ನು (ರಜಸ್ಸು) ಹೊಲೆ (ಕೊಳೆ) ಎಂದರೇ ವಿನಾ ಅಪವಿತ್ರತೆ ಎನ್ನಲಿಲ್ಲ.[11] ಇದು ಧರ್ಮಸಂಸ್ಕಾರನೀಡಲು, ಮಹಿಳೆಗೆ ಮುಕ್ತಿ ಪಡೆಯಲು ಆತಂಕವೆಂದೂ ಭಾವಿಸಲಿಲ್ಲ. ಕಾರಣವೆಂದರೆ ಶರಣರ ದೃಷ್ಟಿಯಲ್ಲಿ ಸ್ವಚ್ಛತೆ ಬೇರೆ. ಶುದ್ಧತೆ ಬೇರೆ. ರೈತನು ಸಗಣಿಯನ್ನು ಮುಟ್ಟಿದಾಗ ಕೈಯು ಕೊಳೆಯಾಗುವುದು, ಅಪವಿತ್ರವಾಗದು. ಕೊಳೆ, ಹೊಲಸು ಶರೀರಕ್ಕೆ ಅಂಟುವಂತಹುದು, ಭೌತಿಕ ಜಲದಿಂದ ತೊಳೆದರೆ ಹೋಗುವಂತಹುದು. ಪರಧನ, ಪರಸ್ತ್ರೀಯರನ್ನು ಬಯಸಿದರೆ, ಸ್ವೀಕರಿಸಿದರೆ ಅದು ಅಪವಿತ್ರತೆ, ಅಶುದ್ಧತೆ.

---

11 ಚನ್ನಬಸವಣ್ಣನವರ ವಚನಗಳು. 390 : (ಸಂ.) ಆರ್. ಸಿ. ಹಿರೇಮಠ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1971

ಕೈಯಲ್ಲಿ ಕೊಳೆ ಕಾಣದಿದ್ದರೂ ಆತ್ಮನನ್ನು ಭವಕ್ಕೆ ಎಳೆಯುವದು. ಇದನ್ನು ಯಾವ ನೀರಿನಿಂದಲೂ ತೊಳೆಯಲು ಸಾಧ್ಯವಿಲ್ಲ (ಪಶ್ಚಾತ್ತಾಪದ ಕಣ್ಣೀರನ್ನು ಬಿಟ್ಟು). ಅಸ್ವಚ್ಛ ಕೈಯನ್ನು ತೊಳೆದು ಪೂಜಿಸಿದರೆ ದೇವನು ಪೂಜೆಯನ್ನು ಸ್ವೀಕರಿಸಿದರೂ, ಅಪವಿತ್ರವಾದ ಶೋಷಕ ಕೈಯಿಂದ ಸ್ವೀಕರಿಸಲಾರ. ಏಕೆ ?

1. ಕೋಪಿ ಮಜ್ಜನಕ್ಕೆರೆದರೆ ರಕ್ತದ ಧಾರೆ, ಪಾಪಿ ಹೂವನೇರಿಸಲು ಮಸೆದ ಆಯುಧದ ಗಾಯ.[12]

2. ಒಬ್ಬರ ಮನವ ನೋಯಿಸಿ, ಮತ್ತೊಬ್ಬರ ಮನೆಯ ಘಾತಕ ಮಾಡಿ ಗಂಗೆಯಲ್ಲಿ ಮುಳುಗಿದಡೆ ಏನಾಗುವುದು ? ಆದ್ದರಿಂದ ಮನವ ನೋಯಿಸದೆ, ಮನೆಯ ಘಾತಕವ ಮಾಡದವನೇ ಪರಮಪಾವನ.[13]

ಈ ತತ್ತ್ವದ ಪ್ರಕಾರ ಸ್ತ್ರೀಯು ರಜಸ್ವಲೆಯಾದಾಗ ಅಸ್ವಚ್ಛ, ಅಶುಚಿಯಾಗುವಳೇ ವಿನಾ ಅಪವಿತ್ರಳಲ್ಲ. ಮಿಂದು ಶುಚಿಯಾಗಿ ದೇವನನ್ನು ಪೂಜಿಸಲು ಸಾಧ್ಯವಿದೆ. ಆದ್ದರಿಂದ ಪ್ರಕೃತಿ ದತ್ತವಾಗಿ ರಜೋಕ್ರಿಯೆಗೆ ಒಳಗಾಗುವ ಕಾರಣ ಧರ್ಮಬಾಹಿರಳು ಎನ್ನುವುದು ಅಸಾಧುವು. 'ಅನೀತಿವಂತಳಾದ ಸ್ತ್ರೀಗೆ ದೈವೀ ಕಾರುಣ್ಯ ಸಾಧ್ಯವಿಲ್ಲ' ಎಂದರೆ ಅದಕ್ಕೊಂದು ಅರ್ಥವಿದೆ. ಅಂಥ ಪ್ರಸಂಗದಲ್ಲೂ ಆಕೆ ಪಶ್ಚಾತ್ತಾಪಪಟ್ಟು ದೇವನಡಿಗೆ ಶರಣಾದರೆ ದೈವೀ ಕಾರುಣ್ಯ, ಪುನರುದ್ಧಾರ ಸಾಧ್ಯ.

2. ಎರಡನೆಯದಾದ ಶಾರೀರಿಕ ಕಾರಣವೆಂದರೆ, "ಸ್ತ್ರೀಯು ಸ್ವಭಾವತಃ ಅಬಲೆ, ದುರ್ಬಲಳು ; ಮಾನಸಿಕ ಸ್ಥೈರ್ಯ ಅಷ್ಟಾಗಿ ಇಲ್ಲದವಳು, ಅಧ್ಯಾತ್ಮ ಪಥದಲ್ಲಿ ಪೂರೈಸಲಾರಳು" ಎಂಬ ಭಾವನೆ. ನಿಸರ್ಗವೃಕ್ಷದ ಎರಡು ಫಲಗಳಾದ ಪುರುಷ-ಸ್ತ್ರೀಯರಲ್ಲಿ ಪ್ರಕೃತಿಜನ್ಯವಾಗಿ, ಶಾರೀರಿಕವಾಗಿ ಸ್ತ್ರೀಯು ಪುರುಷನಿಗಿಂತ ದುರ್ಬಲಳು. ಆದರೆ ಈ ಶಾರೀರಿಕ ಅಬಲತ್ವ ಪುರುಷನಿಗಿಂತ ಸ್ತ್ರೀಯು ಅಧ್ಯಾತ್ಮದಲ್ಲಿ ಮುಂದೆಹೋಗಲು ಯಾವ ರೀತಿಯಲ್ಲೂ ಆತಂಕಕಾರಿಯಾಗದು. ಶಾರೀರಿಕ ಬಲದ ಮೇಲೆಯೇ ಶ್ರೇಷ್ಠತ್ವವನ್ನು ಅಳೆಯುವುದಾದರೆ ಕುದುರೆ, ಆನೆ, ಪಸುಗಳು ಪುರುಷನಿಗಿಂತ ಶ್ರೇಷ್ಠವಾದಾವು ! ಮಾನಸಿಕ ಸ್ಥೈರ್ಯ, ತಾಳ್ಮೆಯ ದೃಷ್ಟಿಯಿಂದ ನೋಡಿದಾಗ ಸ್ತ್ರೀಯು ಪುರುಷನಿಗಿಂತ ಎಷ್ಟೂ ಕಡಿಮೆಯಾಗಳು. ಸ್ವಭಾವತಃ ಆಕೆ ಸಹನಾಶೀಲಳು, ಮೃದುಹೃದಯಿ, ತ್ಯಾಗಮಯಿ. ಅಂತೆಯೇ ಗಾಂಧೀಜಿ ಹೇಳುತ್ತಾರೆ :

---

12 ಬಸವಣ್ಣನವರ ವಚನಗಳು, 649 : (ಸಂ) ಆರ್. ಸಿ. ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1968.

13 ಸಿದ್ಧರಾಮೇಶ್ವರರ ವಚನಗಳು : (ಸಂ) ಆರ್. ಸಿ. ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

"ಸ್ತ್ರೀಯನ್ನು ಅಬಲೆ ಎನ್ನುವುದು ಒಂದು ಅಪಮಾನಕರ ಮಾತೇ ಸರಿ ; ಅದು ಮಹಿಳೆಯರಿಗೆ ಪುರುಷ ಎಸಗಿರುವ ಒಂದು ಅನ್ಯಾಯ. ಶಕ್ತಿಯ ಅರ್ಥ ಕೇವಲ ಪಾಶವಿಕ ಶಕ್ತಿ ಎನ್ನುವುದಾದರೆ, ಆಗ ಸ್ತ್ರೀ ನಿಜವಾಗಿಯೂ ಪುರುಷನಷ್ಟು ಪಶು ಪ್ರಾಯಳಲ್ಲ. ಆದರೆ ಶಕ್ತಿಯ ಅರ್ಥ ನೈತಿಕ ಶಕ್ತಿ ಎನ್ನುವುದಾದರೆ, ಆಗ ಸ್ತ್ರೀ ಪುರುಷನಿಗಿಂತ ಆಗಾಧ ಮೇಲ್ಮೆಯುವಳೆನಿಸುತ್ತಾಳೆ. ಆಕೆಯಲ್ಲಿ ಹೆಚ್ಚು ಅಂತ ರ್ಬೋಧೆಯಿಲ್ಲವೆ ? ಆಕೆ ಹೆಚ್ಚು ಆತ್ಮತ್ಯಾಗ ಪರಳಲ್ಲವೆ ? ಆಕೆ ಹೆಚ್ಚು ಸಹನಾ ಶಕ್ತಿಯಿಂದಲೂ, ಹೆಚ್ಚು ಧೈರ್ಯದಿಂದಲೂ ಕೂಡಿಲ್ಲವೆ ? ಆಕೆಯ ನೆರವಿಲ್ಲದೆ ಪುರುಷ ಏನನ್ನೂ ಮಾಡಲು ಸಾಧ್ಯವಿಲ್ಲ. ಅಹಿಂಸೆಯು ನಮ್ಮ ಬಾಳಿನ ಧರ್ಮ ವಾದರೆ, ಭವಿಷ್ಯವು ಮಹಿಳೆಗೇ ಮೀಸಲು."[14]

ಬದುಕಿನ ಆಘಾತಗಳನ್ನು ಸಹನೆಯಿಂದ, ತ್ಯಾಗದಿಂದ ಎದುರಿಸುವ ಸಾಮರ್ಥ್ಯ ವನ್ನು ಮಹಿಳೆಯರಲ್ಲಿ ಕಾಣುತ್ತೇವೆ. ಅಂತೆಯೇ ಹಳ್ಳಿಗರ ಗಾದೆಯೊಂದು ಹೇಳು ತ್ತದೆ, 'ಗುಡ್ಡದಂತಹ ತಂದೆಗಿಂತ, ಕಡ್ಡಿಯಂತಹ ತಾಯಿ ಲೇಸು'. ಇಲ್ಲಿ ಮಾತೃ ಶಕ್ತಿಯ ಮಹಿಮೆ ಸ್ಫುಟವಾಗಿದೆ.

3. "ಸ್ತ್ರೀಯು ಮಾಯೆ, ಅಧ್ಯಾತ್ಮಬದುಕಿನಲ್ಲಿ ಬಾಧಕ. ಪತನಕ್ಕೆ ಆದಿ ಕಾರಣಳು" ಎಂಬ ಭಾವನೆ ಧಾರ್ಮಿಕ ರಂಗದಲ್ಲಿ ಪ್ರಚಲಿತವಿದೆ. ಹೆಣ್ಣು, ಮಣ್ಣು, ಹೊನ್ನು ತ್ರಿವಿಧ ವಿಘ್ನಗಳು ಎಂಬ ಜೋಡಣೆಯಲ್ಲಿ ಮೇಲ್ಕಂಡ ಭಾವನೆ ಸ್ತ್ರೀಯ ಬಗ್ಗೆ ಇರದಿದ್ದರೆ 'ಹೆಣ್ಣು' ಇದರ ಬದಲಿಗೆ 'ಪುರುಷ' ಎಂದು ಬಳಸುವ ಸಂಭವ ಇರುತ್ತಿತ್ತು. ಸ್ತ್ರೀಯಷ್ಟೇ ಮಾಯೆಯೆ ? ಅಹುದೆಂದವರು ಬಹಳ ಮಂದಿ. ಕಾರಣ ವೆಂದರೆ ಸಾಧನೆಯಲ್ಲಿ ತೊಡಗಿ ಮಾನಸಿಕ ವಿಪ್ಲವಗಳನ್ನು ಎದುರಿಸಿದವರು ಬಹು ಪಾಲು ಪುರುಷರು. ತಮ್ಮ ಮನದ ದೌರ್ಬಲ್ಯ ಅಧಿಕವಾದಾಗ ಬಹುಶಃ ಸ್ತ್ರೀಯು ಬಹುದೊಡ್ಡ ಪ್ರಲೋಭನೆ (temptation) ಯಾಗಿರಬೇಕು. ಆದರೆ ಇವರು ತಮ್ಮಂತರಂಗದ ದೌರ್ಬಲ್ಯದತ್ತ ಬೆರಳುತೋರದೆ, ತಮ್ಮ ಅಂತರಾವಲೋಕನ ಮಾಡಿಕೊಳ್ಳದೆ ಸ್ತ್ರೀಯನ್ನು ದೂರಿದರು. ಮಹಿಳಾ ಕುಲದ ಬಗ್ಗೆ ಅಪಾರ ಅನು- ಕಂಪ, ಗೌರವ, ವೈಚಾರಿಕ ಪ್ರಜ್ಞೆ ಇದ್ದಂತಹ ಶರಣರು ಇದನ್ನು ಅಲ್ಲಗಳೆದರು. ಹೆಣ್ಣು, ಹೊನ್ನು, ಮಣ್ಣು ಮಾಯೆಯೆಂದು ಹೊರಗಣ ವಸ್ತುಗಳ ಬಗ್ಗೆ ದೂರದೆ "ತನ್ನ ಮನದ ಮುಂದಣ ಆಸೆಯೇ ಮಾಯೆ" ಎಂದು ತಮ್ಮ ಅಂತರಂಗವನ್ನು ಶೋಧಿಸಿಕೊಳ್ಳಲೆತ್ನಿಸಿದರು. "ಇಟ್ಟಿಯ ಹಣ್ಣು ತಿಂದ ನರಿಯು ಸೃಷ್ಟಿಯೇ ತಿರು ಗಿತು" ಎಂದು ಆರೋಪಿಸುವಂತೆ, ಕಾಮಾಲೆಯಾದವನು ಜಗತ್ತನ್ನೇ ಪೀತವರ್ಣ ವೆಂದು ಆಕ್ಷೇಪಿಸುವಂತೆ, ದೃಷ್ಟಿದೋಷವನ್ನು ಸೃಷ್ಟಿದೋಷವೆನ್ನುವದು ತಪ್ಪಲ್ಲವೆ ? ಮಾಯೆತನ ಹೊರಗೆಲ್ಲೂ ಇಲ್ಲ, ಅದು ತನ್ನ ಮನದ ಕಣ್ಣಿಗೆ ಸುತ್ತಿಕೊಂಡ ಪೊರೆ

---

14 ಗಾಂಧೀಜಿ ; "ಮಹಿಳೆಯರು", ಪ್ರ : ಗಾಂಧೀಸ್ಮಾರಕ ನಿಧಿ, ಮೈಸೂರು, ಪು. 5, 1960

ಯಾವ ಕಾರಣ, ವಿಶ್ವಗತವಲ್ಲ-ಮನೋಗತ. ಇದರಿಂದ ಆವೃತನಾದ ವ್ಯಕ್ತಿಗೆ ತನ್ನ ವಿರುದ್ಧ ಲಿಂಗದ (opposite sex) ವ್ಯಕ್ತಿ ಮಾಯೆಯಾಗುವುದು ಸಹಜವೇ? ಪರಿಪಕ್ವ ಸ್ಥಿತಿ ಪಡೆದಿರದ ಸಾಧಕನಿಗೆ ಸ್ತ್ರೀಯು ಮಾಯೆಯಾಗಿ ತೋರುವುದು, ಪರಿಣಮಿಸುವುದು ಎಷ್ಟು ವಾಸ್ತವಿಕ ಸತ್ಯವೋ, ಅಪರಿಪಕ್ವ ಸಾಧಕಗಳಿಗೆ ಪುರುಷನೂ ಅದೇ ರೀತಿಯ ಮಾಯೆಯೇ. ಆದ್ದರಿಂದ ಪುರುಷತ್ವದ ಭಾವ, ಅಹಂ, ಶರೀರಾಭಿಮಾನವಳಿದ ಶರಣನಿಗೆ, ಸ್ತ್ರೀತ್ವದ ಲಜ್ಜೆ, ಕೀಳರಿಮೆ, ಅಧೈರ್ಯ, ಕಾಯಭಾವ ವಳಿದ ಶರಣೆಗೆ ಮಾಯೆಯು ಕಾಟವೇ ಇರದು. ಇದನ್ನು ಸ್ವ-ಅನುಭವದಿಂದ ಕಂಡುಕೊಂಡ, ಸ್ತ್ರೀಕುಲಪ್ರತಿನಿಧಿಯಾದ ವೈರಾಗ್ಯಮೂರ್ತಿ ಅಕ್ಕಮಹಾದೇವಿ ಹೀಗೆ ಹೇಳುವಳು :

> ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು,
> ಸ್ತ್ರೀಯ ಮುಂದೆ ಮಾಯೆ ಪುರುಷನೆಂಬ ಅಭಿಮಾನವಾಗಿ ಕಾಡುವುದು...
> ಚೆನ್ನಮಲ್ಲಿಕಾರ್ಜುನನೊಲಿದ ಶರಣಂಗೆ
> ಅಮಾಯೆಯಿಲ್ಲ, ಮರಹಿಲ್ಲ, ಅಭಿಮಾನವೂ ಅಲ್ಲ[15]

ಶಾಸ್ತ್ರಗಳು- ಮೂಢ ಸಂಪ್ರದಾಯವು ಕಟ್ಟಿರುವ ಪೂರ್ವಾಗ್ರಹ ಪೀಡಿತ ದೋಷೈಕ ದೃಷ್ಟಿಕೋನದ ಬಣ್ಣದ ಕನ್ನಡಕವನ್ನು ತೆಗೆದಿರಿಸಿ, ವಿವೇಕ-ವಿಮರ್ಶೆಯಿಂದ ಕೂಡಿದ ವೈಚಾರಿಕ ದೃಷ್ಟಿಯಿಂದ ನೋಡಿದರೂ ನಮಗನ್ನಿಸುವುದು—ವಿಶ್ವಾಮಿತ್ರನ ಬದುಕಿನ ಬಟ್ಟೆಯಲ್ಲಿ ಇದಿರಾದ ಮೇನಕೆ, ಪ್ರಭುದೇವರ ಪಾರಮಾರ್ಥ ಪಥದಲ್ಲಿ ಅಡ್ಡಬಂದ ಮಾಯಾದೇವಿಯರಂತಹವರು ಪುರುಷ ಸಾಧಕರಿಗೆ ಮಾಯೆಯರಾದರೆ, ವಾಸವಿಯ ಜೀವನದಲ್ಲಿ ಬಂದ ವಿಷು ವರ್ಧನ, ಅಕ್ಕಮಹಾದೇವಿಯ ಗುರಿಗೆ ಎಡರಾಗಿ ಬಂದ ಕೌಶಿಕನಂತಹವರು ಸ್ತ್ರೀಸಾಧಕಿಯರಿಗೆ ಮಾಯೆಯೆ! ಅಂದಾಗ ಕೇವಲ ಸ್ತ್ರೀಕುಲಕ್ಕೆ ಮಾಯೆತನದ ಆರೋಪವು ಅಪಚಾರಾತ್ಮಕವಲ್ಲವೇ ?

**ಸ್ತ್ರೀತ್ವ ಮುಕ್ತಿಗೆ ಬಾಧಕವೆ ?**

ದೈವೀಸೃಷ್ಟಿಯ ಎರಡು ಕೊಂಬೆಗಳಾದ ಸ್ತ್ರೀ-ಪುರುಷರಲ್ಲಿ ಪ್ರಮುಖ ವ್ಯತ್ಯಾಸ ಇದ್ದರೆ ಅದು ಕೇವಲ ಶರೀರ ರಚನೆ ಮತ್ತು ಶಾರೀರಕ ವಿಶೇಷ ಕ್ರಿಯೆಗಳಲ್ಲಿ. ಮುಕ್ತಿಯಲ್ಲಿ ಮುಖ್ಯ ಪಾತ್ರವಹಿಸುವುದು ಆತ್ಮವೇ ವಿನಾ ಅಂಗವಲ್ಲ. ಸೇಶ್ವರವಾದಿ ಧರ್ಮಗಳ (Theistic Religions) ಆತ್ಯಂತಿಕ ಗುರಿ ಪರಮಾತ್ಮನೊಡನೆ ಜೀವಾತ್ಮನ ಸಮರಸ. ಸತ್-ಚಿತ್-ಆನಂದ-ನಿತ್ಯ-ಪರಿಪೂರ್ಣವಾದ ಪರಮಾತ್ಮನಿಂದ ಹೊರಹೊಮ್ಮಿದ ಅಂಶವಾದ ಜೀವಾತ್ಮನೂ ಅದೇ ಸ್ವರೂಪದವನು. ಪಿಂಡಾಂಡ (Body) ಗತ ಆತ್ಮನು, ಬ್ರಹ್ಮಾಂಡಗತ ಪರಮಾತ್ಮನು—

---

15 ಮಹಾದೇವಿಯಕ್ಕನ ವಚನಗಳು, 308. ಹಿಂದಿನದೇ.

ಈರ್ವರೂ ಸ್ವರೂಪದಲ್ಲಿ ಒಂದೇ, ಗಾತ್ರದಲ್ಲಿ ಮಾತ್ರ ಬೇರೆಯಾಗಿದ್ದಾರೆ. ಜೀವಾತ್ಮನು ತನ್ನನ್ನು ಸುತ್ತುವರಿದ ಪಂಚಕೋಶಗಳನ್ನು ಸಾಧನೆಯಿಂದ ಕಳಚುತ್ತ ಪರಿಶುದ್ಧಾತ್ಮನಾಗಿ, ಪರಮಾತ್ಮನೊಡನೆ ಬೆರೆಯುವನು. ಆದ್ದರಿಂದ ಶರೀರವು ಹೆಣ್ಣಿನದಿರಲಿ, ಗಂಡಿನದಿರಲಿ—"ಸಪ್ತಧಾತುಸಮಂ ಪಿಂಡಂ ಸಮಯೋನಿ ಸಮುದ್ಭವಂ। ಆತ್ಮ ಜೀವ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ ?" ಎಂಬ ಉಕ್ತಿಯಂತೆ, ದೈವೀ ಮಿಲನಕ್ಕೆ ಬಾಧಕವಾಗದು. ಆತ್ಮವು ಹೆಣ್ಣೂ ಅಲ್ಲ, ಗಂಡೂ ಅಲ್ಲ ; ಬ್ರಾಹ್ಮಣವೂ ಅಲ್ಲ, ಶೂದ್ರವೂ ಅಲ್ಲ. ಅಸ್ಪೃಶ್ಯವೂ ಅಲ್ಲ ; ಶುದ್ಧ ಪರಂಜ್ಯೋತಿ ಮಾತ್ರ. ಅದನ್ನು ಬಹು ಮಾರ್ಮಿಕವಾಗಿ ದೇವರ ದಾಸಿಮಯ್ಯನವರು ಹೇಳುತ್ತಾರೆ :

ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವ ಆತ್ಮನು ಹೆಣ್ಣೂ ಅಲ್ಲ
ಗಂಡೂ ಅಲ್ಲ ಕಾಣಾ ರಾಮನಾಥ.[16]

ಈಗಾಗಲೇ ನಾನು ಹಿಂದೆ ಉದ್ಧರಿಸಿರುವಂತೆ, ಅನೇಕರು ವ್ಯಕ್ತಿಗತವಾಗಿ ಮತ್ತು ಶಾಸ್ತ್ರಾಧಾರದ ಮೇಲೆಯೇ "ಸ್ತ್ರೀಗೆ ನೇರವಾಗಿ ಪೂಜಿಸುವ, ಅಧ್ಯಾತ್ಮ ಸಾಧನೆ ಮಾಡುವ ಅವಶ್ಯಕತೆ ಇಲ್ಲ. ಪತಿಯು ಮಾಡುವನು, ಅವನ ಸೇವೆ ಮಾಡಿದುದೇ ಆದರೆ ಆಕೆಗೂ ಅವನ ಮೂಲಕ ಸ್ವರ್ಗ ಪ್ರಾಪ್ತಿ" ಎನ್ನುವರು. ಸ್ತ್ರೀಗೆ ಸ್ವತಂತ್ರ ಸಂಸ್ಕಾರ- ಸಾಧನೆಗಳ ಅವಶ್ಯಕತೆಯೇ ಇಲ್ಲ ಎಂಬ ಭಾವ ಇಲ್ಲಿ ವ್ಯಕ್ತವಾಗುವುದಷ್ಟೇ. "ಪರಮಾತ್ಮನೆಂಬ ಮೂಲವಾರಿಧಿಯಿಂದ ಹೊಮ್ಮಿದ ಆತ್ಮರುಗಳೆಂಬ ಹನಿಗಳಿಗೆ ಮೂಲವಾರಿಧಿಯನ್ನು ಸೇರದೆ ತೃಪ್ತಿಯಿಲ್ಲ; ಅಲ್ಲಿಯ ತನಕ ಅಂತರಾತ್ಮವು ಸತತವಾಗಿ ಹಂಬಲಿಸುತ್ತದೆ" ಎಂಬ ಮೂಲಸಿದ್ಧಾಂತವೊಂದನ್ನು ಸಾಮಾನ್ಯವಾಗಿ ಸೇಶ್ವರವಾದಿ ಧರ್ಮಗಳು ಒಪ್ಪುತ್ತವೆ. ಅಂದಾಗ ಸ್ತ್ರೀಯರ ಆತ್ಮಕ್ಕೂ ಆ ಹಂಬಲ ಇರದೆ ? ಸ್ವಾಭಾವಿಕವಾಗಿ ಆ ಹಂಬಲವಿದ್ದೇ ಇರುವುದು ಎಂದೊಪ್ಪಿದರೆ ಆಕೆಯು ಸ್ವತಂತ್ರವಾಗಿ ಪ್ರಯತ್ನಮಾಡುವ ಅವಶ್ಯಕತೆಯು ಇರುವುದು ಎಂದೊಪ್ಪಬೇಕಷ್ಟೆ.

ಶರಣರ ದೃಷ್ಟಿಯಲ್ಲಿ ಪ್ರತಿಯೊಬ್ಬರಿಗೆ ಅವಶ್ಯಕತೆ ಇದೆ; ಮಾತ್ರವಲ್ಲ "ಒಬ್ಬರು ಮಾಡಿದ ಸಾಧನೆಯ ಫಲ ಇನ್ನೊಬ್ಬರಿಗೆ ಬರದು. ಪ್ರತಿಯೊಬ್ಬರೂ ನೇರವಾಗಿ, ಸ್ವತಂತ್ರವಾಗಿ ಪ್ರಯತ್ನಿಸಬೇಕು." "ನೆಟ್ಟನೇ ಪೂಜಿಸಿ ಭವಗೆಡಬೇಕು,

16 ದೇವರ ದಾಸಿಮಯ್ಯನ ವಚನಗಳು, 111 : (ಸಂ) ಡಾ. ಎಲ್. ಬಸವರಾಜು, ಪ್ರ : ಗೀತಾ ಬುಕ್ ಹೌಸ್, ಮೈಸೂರು, 1970

ಆತ್ಮಾನಂದ ಹೊಂದಬೇಕು." ಇದನ್ನು ಸಮರ್ಪಕ ಉದಾಹರಣೆಗಳ ಮೂಲಕ ವಿವರಿಸುವರು.

ತನ್ನಾಶ್ರಯದಲ್ಲಿ ರತಿ ಸುಖವನು, ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ ?
ತನ್ನ ಲಿಂಗಕ್ಕೆ ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ?[17]

ಇಂತಹ ಪ್ರಗತಿಪರ ದೃಷ್ಟಿಕೋನ, ವಿಶಾಲ ವಿಚಾರಗಳು ಇದ್ದುದರಿಂದೇ ಅನುಭವ ಮಂಟಪವು ಅಪೂರ್ವ ಶರಣೆಯರನ್ನು, ವಚನಕಾರ್ತಿಯರನ್ನು, ಮುಕ್ತಾತ್ಮರನ್ನು ಅಪಾರ ಸಾಹಿತ್ಯದೊಡನೆ ಜಗತ್ತಿಗೆ ನೀಡಲು ಸಮರ್ಥವಾಯಿತು.

ಪ್ರತಿಭೆ ಯಾವ ವ್ಯಕ್ತಿಯ ಸೀಮಿತ ಸೊತ್ತಲ್ಲ; ಸದವಕಾಶ ಸಿಕ್ಕಾಗ ಸುಪ್ತ ಪ್ರತಿಭೆಯರಳಲು ಸಾಧ್ಯ. ಎಂತಹ ಸಾರಯುಕ್ತ ಬೀಜವಿದ್ದರೂ ಅದು ಮೊಳೆತು ವೃದ್ಧಿಯಾಗಲು ಫಲವತ್ತಾದ ಭೂಮಿ, ಕಾಲಕಾಲಕ್ಕೆ ನೀರು, ಸೂರ್ಯಕಿರಣಗಳು, ಸತ್ವಯುತ ಗೊಬ್ಬರ—ಇವು ಬೇಕು. ಇಲ್ಲದಿದ್ದರೆ ಬೀಜವು ಜೊಳ್ಳಾಗುವುದು, ಕೊಳೆಯುವುದು ಅಥವಾ ಮೊಳೆತ ಬಳಿಕವೂ ಕಮರಿಹೋಗುವ ಸಾಧ್ಯತೆಯುಂಟು. ಸ್ತ್ರೀಯಿರಲಿ-ಪುರುಷನಿರಲಿ ಅವರಲ್ಲಿ ಅವ್ಯಕ್ತ ಪ್ರತಿಭೆಯಿದ್ದರೆ ಅದಕ್ಕೆ ಸದವಕಾಶದ ಭೂಮಿ, ಸೂಕ್ತ ಶಿಕ್ಷಣದ ನೀರು, ಸಮಂಜಸ ಪರಿಸರದ ರವಿಕಿರಣ, ಸತ್ವಯುತ ಸಾಧನೆಯ ಗೊಬ್ಬರ ಒದಗಿದಲ್ಲಿ, ಆ ಪ್ರತಿಭೆ ವಿಕಸಿಸಿ ಪೂರ್ಣವಾದ ಫಲವನ್ನು ಕೊಡಲು ಸಾಧ್ಯ. ಇಲ್ಲವಾದರೆ ಆ ವ್ಯಕ್ತಿಯ ಪ್ರಗತಿಯೂ ಆಗದು. ಅವರಿಂದ ಸಮಾಜಕ್ಕೆ ಉಪಯುಕ್ತ ಸೇವೆಯೂ ಸಲ್ಲದು. ಎಲ್ಲ ಎಡರುಗಳನ್ನು ಜಯಿಸಿ ಮುಂದೆಬರುವ ಸಾಮರ್ಥ್ಯವಿದ್ದವರು ಬೆರಳ ಮೇಲೆಣಿಸುವಷ್ಟು ಮಂದಿ ಸೂಕ್ತ ಅವಕಾಶವನ್ನು ಕಲ್ಪಿಸಿದಾಗ ಪ್ರೋತ್ಸಾಹ ಪಡೆದು ಮುಂದೆ ಬರುವವರು ಬಹಳಷ್ಟು ಜನ. ಭಾರತದ ಇತಿಹಾಸದಲ್ಲಿ ಮೈತ್ರೇಯಿ, ಗಾರ್ಗೇಯಿ, ಚಂದನಾ, ಶುಕಾಬೇಮ, ಭಾರತಿ ಮುಂತಾದ ಹಲವಾರು ಪ್ರತಿಭಾವಂತ ತತ್ತ್ವಜ್ಞಾನಿ ಮಹಿಳೆಯರು ಆಗಿಹೋಗಿರುವರು. ಅಂದಿನ ಸಾಮಾಜಿಕ ಒತ್ತಡದಲ್ಲಿ ಅವರು ಮುಂದೆ ಬಂದುದು ಸಾಮಾನ್ಯ ಸಾಧನೆಯೇನಲ್ಲ; ಆದರೆ ಇದೆಲ್ಲವೂ ವೈಯಕ್ತಿಕ ಪ್ರಗತಿಯಾಯಿತು. ಅದೇ ಹನ್ನೆರಡನೆಯ ಶತಮಾನದಲ್ಲಿ ಕ್ರಾಂತಿಕಾರಿ ಸಮಾಜ ಸುಧಾರಕರಾದ ಬಸವಣ್ಣನವರು ಅನುಭವ ಮಂಟಪ ಕಟ್ಟಿ, ಜಾತಿ ಲಿಂಗ ವರ್ಗ ವರ್ಣಭೇದವಿಲ್ಲದೆ ಇಂಬಿಟ್ಟುಕೊಂಡು, ಧರ್ಮ ಸಂಸ್ಕಾರ ನೀಡಿ, ವಾಕ್-ವಿಚಾರ-ಆಚಾರ ಸ್ವಾತಂತ್ರ್ಯಗಳನ್ನು ಒದಗಿಸಿ ಕೊಟ್ಟ ಕಾರಣ ಅನೇಕ ಸಾಮಾನ್ಯ ಸ್ತ್ರೀಯರು ಸಹ ಉತ್ತಮ ವಿಚಾರವೇತ್ತರು,

---

17 ಬಸವಣ್ಣನವರ ವಚನಗಳು, 183. ಒಂದೆ ಕೊಟ್ಟಾಗಿದೆ.

ಸಾಹಿತಿಗಳು ಆದುದನ್ನು ಕಾಣುತ್ತೇವೆ. ಶತಶತಮಾನಗಳಿಂದ ನಮ್ಮ ದೇಶ ಪಡೆಯು ಲಾರದಷ್ಟು ಶರಣೆಯರನ್ನು ಹತ್ತಾರು ವರ್ಷಗಳಲ್ಲಿ ಕನ್ನಡ ನಾಡು-ನುಡಿಗಳು ಪಡೆದವು. ಏಳುನೂರ ಎಪ್ಪತ್ತು ಶರಣರಲ್ಲಿ ಅರವತ್ತು ಮಂದಿ ಶರಣೆಯರಿದ್ದು, ಅವರಲ್ಲಿ ಮೂವತ್ತು ಜನರು ಸಾಹಿತ್ಯದ ಸಂದೇಶವನ್ನು ಕೊಟ್ಟುಹೋದುದನ್ನು ಗಮನಿಸಿದರೆ ಕನ್ನಡನಾಡಿನದು ಎಂತಹ ಕ್ರಾಂತಿ ಎಂದು ಸೋಜಿಗವಾಗದಿರದು.

"ಸ್ತ್ರೀಗೆ ಪ್ರಕೃತಿ ರಚನೆಯಿಂದಲೇ ಕೆಲವು ದೈಹಿಕ ನ್ಯೂನತೆಗಳೂ, ಮಾನಸಿಕ ಅಸಾಮರ್ಥ್ಯಗಳೂ ಬಂದಿರುತ್ತವೆ. ರಜೋಮಾಲಿನ್ಯ ಸೂತಿಕಾ ಮಾಲಿನ್ಯಾದಿ ಗಳು ಕಾಯಿಕ ತಪಸ್ಸಿಗೆ ಭಂಗ ತರುತ್ತವೆ; ಮನಸ್ಸನ್ನು ಕ್ಷೋಭೆಗೊಳಿಸುತ್ತವೆ... ಸ್ತ್ರೀ ಮನಸ್ಸಿಗೆ ಏಕಾಗ್ರ ಭಕ್ತಿ ಗಂಡಸಿಗಿಂತ ಹೆಚ್ಚು ದುರ್ಲಭ..." ಎಂದು ಈಗಿನ ಅನೇಕರು ಸಹ ಅಭಿಪ್ರಾಯ ತಾಳಿದ್ದಾರೆ.[18] ಆದರೆ ಇದು ನಿಜಕ್ಕೂ ಸಮರ್ಥನೀಯ ವಲ್ಲ. ಪಾರಮಾರ್ಥ ಪಥದಲ್ಲಿ ಅನೇಕ ಯೋಗಗಳಿವೆಯಷ್ಟೆ. ಅವುಗಳಲ್ಲಿ ಭಕ್ತಿ ಯೋಗ, ಜ್ಞಾನಯೋಗ, ಮಂತ್ರಯೋಗ, ಲಯಯೋಗ, ರಾಜಯೋಗ, ಇವೆಲ್ಲ ಕ್ಕಿಂತಲೂ ಬಹುಕಷ್ಟಕರವಾದುದು ಕುಂಡಲಿನಿ ಯೋಗ. ಚಕ್ರ ಭೇದನವಂತಹ ಕ್ಲಿಷ್ಟಕರ ಸಿದ್ಧಿಯನ್ನು ಅದು ಸಾಧಿಸುತ್ತದೆ. ಇಂತಹ ಕಷ್ಟಕರ ಸಿದ್ಧಿಯನ್ನು ಶರಣೆಯರು ಹೊಂದಿದ್ದರೆಂದಾಗ ಮೇಲಿನ ಆಕ್ಷೇಪಣೆ ಸರಿಯಾದೀತೆ ? ಬಸವಣ್ಣ ನವರೇ ಸ್ವತಃ ಹೇಳಿದ್ದಾರೆ :

> ಭೃಕುಟಿಯ ಹಿಡಿದು ನಿಟಿಲ ನಯನನ ಬೆರೆದಳು ಅಕ್ಕಮಹಾದೇವಿ
> ಶಿಖಾಚಕ್ರವಿಡಿದು ಶಿವನ ಬೆರೆದಳು ಅಕ್ಕನಾಗಾಯಿ.
> ಪಶ್ಚಿಮ ಚಕ್ರವಿಡಿದು ಪರಮನಾದಳು
> ಕೂಡಲ ಸಂಗನ ಮರುಳು ಮಗಳು ನೀಲಲೋಚನೆ, ಚನ್ನಬಸವಣ್ಣಾ ![19]

ಮಾನವನ ಪರಿಸರ, ವೈಜ್ಞಾನಿಕ ದೃಷ್ಟಿಕೋನ, ವಿಚಾರದ ಓಘಗಳು ಬದಲಾ ದಂತೆ ಧಾರ್ಮಿಕ ಮೌಲ್ಯಗಳೂ ಬದಲಾಗುವುದು ಅವಶ್ಯವಿದೆ. ವೈಜ್ಞಾನಿಕ ಕ್ಷೇತ್ರದಲ್ಲಿ ಸಂಶೋಧನೆಗಳು ಸಿದ್ಧಪಡಿಸಿದ್ದನ್ನು ಆಧುನಿಕ ಬುದ್ಧಿ ಅನುಮೋದಿಸು ತ್ತಿರುವಂತೆ, ಧಾರ್ಮಿಕ ರಂಗದಲ್ಲಿಯೂ ನೂತನ ವಿಚಾರಗಳು ಸುಳಿಯಬೇಕೇ ವಿನಾ ಅದೇ ಪರಂಪರಾಗತ ಶಿಥಿಲ ನಂಬುಗೆಗಳನ್ನು ಕಪಿಮುಷ್ಟಿಯಿಂದ ಹಿಡಿಯಲು ಧಾರ್ಮಿಕರು ಉತ್ಕಟ ಪ್ರಯತ್ನಮಾಡಬಾರದು.

---

18 "ಶ್ರೀಮದ್ ಭಗವದ್ಗೀತಾ ತಾತ್ಪರ್ಯ "ಎಂಬ ಗ್ರಂಥದಲ್ಲಿ ಅಧ್ಯಾಯ 9. ಶ್ಲೋಕ 32ಕ್ಕೆ ಶ್ರೀ ಡಿ. ವಿ. ಜಿ. ಯವರು ಬರೆದ ವ್ಯಾಖ್ಯಾನದಿಂದ ಆರಿಸಿಕೊಳ್ಳಲಾಗಿದೆ. ಪು. 340. ಪ್ರ : ಕಾವ್ಯಾಲಯ, ಮೈಸೂರು. ಪ್ರಥಮ ಮುದ್ರಣ, 1966

19 ಬಸವಣ್ಣನವರ ಷಟ್‌ಸ್ಥಲದ ಹೆಚ್ಚಿನ ವಚನಗಳು, ವ. 1357. ಹಿಂದೆ ಕೊಡಲಾಗಿದೆ.

**ಆಧುನಿಕ ಯುಗದಲ್ಲಿ ಮಹಿಳೆಗೆ ಅಧ್ಯಾತ್ಮ ಬೇಕೆ ?**

ಆಧುನಿಕ ಶಿಕ್ಷಣದ ಪ್ರಭಾವ ಜಾಸ್ತಿಯಾದಂತೆ, ಪಾಶ್ಚಿಮಾತ್ಯ ಪ್ರಪಂಚದ ಅರ್ಥರಹಿತ, ಅಂಧಾನುಕರಣೆ (aping) ವೃದ್ಧಿಯಾದಂತೆ ಸ್ವತಃ ಹೆಣ್ಣು ಮಕ್ಕಳಲ್ಲಿಯೇ ಧರ್ಮ-ಸಂಸ್ಕೃತಿಗಳ ಬಗ್ಗೆ ನಿರಭಿಮಾನ, ನಿರಾಸಕ್ತಿ, ಕೆಲವೊಮ್ಮೆ ತಿರಸ್ಕಾರ ವ್ಯಕ್ತವಾಗುತ್ತಿವೆ. ಅಂತೆಯೇ ಇಂದು ಆರ್ಥಿಕ, ಶೈಕ್ಷಣಿಕ, ರಾಜಕೀಯ, ಸಾಮಾಜಿಕ ವಿವಿಧ ಸಮಾನತೆಗಾಗಿ ಚಳುವಳಿಮಾಡುವ ವಿದ್ಯಾವಂತೆಯರು ಧಾರ್ಮಿಕ ಸಮಾನತೆಗಾಗಿ ಹೋರಾಡುತ್ತಿಲ್ಲ. ಇವೆಲ್ಲಕ್ಕಿಂತಲೂ ಕಷ್ಟಕರ ಧಾರ್ಮಿಕ ಸಮಾನತೆಯನ್ನು ಪಡೆಯುವುದು ಎಂಬ ಅರಿವು ಬಹು ಜನಕ್ಕಿಲ್ಲ. ಅದನ್ನು ಪಡೆದುಕೊಳ್ಳುವುದರಲ್ಲಿ ತಮ್ಮ ಹಿರಿಮೆ–ಗರಿಮೆಗಳಿವೆ ಎಂಬ ಪ್ರಜ್ಞೆ ಮೂಡಿಲ್ಲ. ಸಿರಿಮಾವೋ ಬಂಡಾರನಾಯಿಕೆ, ಇಂದಿರಾಗಾಂಧಿ, ಗೋಲ್ಡಾ ಮೇಯರ್, ಎಲಿಜಬೆತ್ ಮುಂತಾದವರು ರಾಜಕೀಯದಲ್ಲಿ ಅತ್ಯುನ್ನತ ಸ್ಥಾನಕ್ಕೆ ಏರಿದ್ದರೂ ಪುರುಷರಿಂದ ಪ್ರತಿಭಟನೆ ಇಲ್ಲ. ಶೈಕ್ಷಣಿಕ ಪ್ರಪಂಚದಲ್ಲಿ ಯಾವ ಪದವಿಯನ್ನೇ ಹೊಂದಲಿ ವಿರೋಧವಿರದು. ಆರ್ಥಿಕವಾಗಿ ಎಷ್ಟೇ ಮುಂದೆ ಹೋದರೂ ಅಸಹನೆ ಇಲ್ಲ. ಆದರೆ ಗುರುವಾಗಲಿಕ್ಕೆ, ಪೋಪ್ (ಜಗದ್ಗುರು) ಆಗಲಿಕ್ಕೆ ಪ್ರಯತ್ನಿಸಿದರೆ ಸಾಕು, ಉಗ್ರ ಪ್ರತಿಭಟನೆಯನ್ನು ಎದುರಿಸಬೇಕಾಗುವುದು. ಪೋಪ್ ಆಗುವುದು ಒತ್ತಟ್ಟಿಗಿರಲಿ ಅನ್ಯರಿಗೆ ದೀಕ್ಷೆಕೊಡಬಲ್ಲ ಗುರುತ್ವ (priesthood) ಪಡೆಯಲಿಕ್ಕೆ ಹತ್ತಾರು ವರ್ಷಗಳಿಂದ ಕ್ರೈಸ್ತ ಸ್ತ್ರೀಯರು ಹೋರಾಡುತ್ತಿದ್ದರೂ ಇನ್ನೂ ಯಶಸ್ವಿಯಾಗಿಲ್ಲ. (ಹೆಮ್ಮೆಯ ಮತ್ತು ಸ್ತುತ್ಯ ಸಂಗತಿಯೆಂದರೆ ಕನ್ನಡ ನಾಡಿನ ಶರಣ ಧರ್ಮವು ಈ ಸಮಾನತೆಯನ್ನು ಹನ್ನೆರಡನೆಯ ಶತಮಾನದಲ್ಲೇ ಘೋಷಿಸಿ ಸ್ತ್ರೀಗೆ ದೀಕ್ಷೆ ಹೊಂದಿ ತಾನು ಭಕ್ತಳಾಗುವ ಮತ್ತು ಗುರುವಾಗಿ ಅನ್ಯರನ್ನು ಅನುಗ್ರಹಿಸುವ ಎರಡೂ ಹಕ್ಕುಗಳನ್ನು ಕೊಟ್ಟಿದೆ. ಆದರೆ ನಾನೀಗ ಪ್ರಸ್ತಾಪಿಸುತ್ತಿರುವುದು ಇಡೀ ಮಹಿಳಾ ಸಮುದಾಯವನ್ನು ಕುರಿತು ಎಲ್ಲ ಧರ್ಮಗಳೂ ಈ ಸಮಾನತೆಯನ್ನು ಕೊಡುವಂತಾಗಬೇಕು.)

ಇತ್ತೀಚೆಗೆ ಹೆಣ್ಣುಮಕ್ಕಳಲ್ಲಿ ವಿಲಕ್ಷಣ ದೃಷ್ಟಿಕೋನ ಬೆಳೆದು, ವಿಚಿತ್ರ ಆದರ್ಶಗಳು ಕಣ್ಣೆದುರು ನಿಲ್ಲುತ್ತಿವೆ. ಮನಸ್ಸಿಗೆ ಬಂದಂತೆ ತಿರುಗಬೇಕು ; ಅಂಗಾಂಗ ಪ್ರದರ್ಶನವಾಗುವಂತೆ ವೇಷಭೂಷಣ ಧರಿಸಬೇಕು; ಅನ್ಯರ ಮನಸ್ಸು ವಿಕಾರಗೊಳ್ಳುವಂತೆ ಅಲಂಕರಿಸಿಕೊಳ್ಳಬೇಕು ; ಯಾವ ಕಟ್ಟುಪಾಡುಗಳಿಲ್ಲದೆ ತರುಣರೊಡನೆ ಅಲೆಯಬೇಕು ; 'ಗೃಹಿಣಿಯ ಕರ್ತವ್ಯ, ಪತಿಯ ಸೇವೆ, ಮಕ್ಕಳ ಪಾಲನೆ-ಪೋಷಣೆ, ಹಿರಿಯರ ರಕ್ಷಣೆ ಇವೆಲ್ಲ ಅನಾಗರಿಕರ, ಅವಿದ್ಯಾವಂತರ, ಕಟ್ಟುಪಾಡುಗಳು. ಇವುಗಳನ್ನು ದಾಟಿನಿಂತರೆ ಮಾತ್ರ ಮಹಿಳೆ ಸಂಪೂರ್ಣ ಸ್ವತಂತ್ರಳು.' ಇಂತಹ ಸ್ವತಂತ್ರ (!) (ಅಲ್ಲ-ಅತಂತ್ರ) ಸಮಾಜ ನಿರ್ಮಾಣವಾಗಬೇಕೆಂದು ಹಲವಾರು

ಸ್ತ್ರೀಯರ ಅಭೀಪ್ಸೆ, ಅದಕ್ಕಾಗಿ ಹೋರಾಟಕೂಡ! ಇದು ನಿಜಕ್ಕೂ "ಸ್ವಾತಂತ್ರ್ಯವಲ್ಲ, ಸ್ವೇಚ್ಛೆ; ಬದುಕಿಗೆ ಸಹಾಯಕಾರಿಯಲ್ಲ, ಅಪಾಯಕಾರಿ" ಎಂದು ದೃಢವಾಗಿ ಹೇಳಬಹುದು. ಹೆಣ್ಣು ಪ್ರಕೃತಿದತ್ತವಾದ ತನ್ನತನ ಮರೆಯದೆ ಸಮಾಜ-ಜಗತ್ತುಗಳಿಗೆ ಹುಣ್ಣಾಗದೇ ಕಣ್ಣಾಗಿ, ನೀತಿಯ ನೆಲೆಗಟ್ಟಿದ ಮೇಲೆ ಬಾಳನ್ನು ರೂಪಿಸಿಕೊಳ್ಳಬೇಕು. ನಿಜವಾದ ಸ್ವಾತಂತ್ರ್ಯವೆಂದರೆ-ಸುಪ್ತಶಕ್ತಿಗಳು, ಪ್ರತಿಭೆಗಳು ಪೂರ್ಣವಾಗಿ ವಿಕಸನಗೊಂಡು ಬೆಳಗಲಿಕ್ಕೆ ಇರುವ ಸದವಕಾಶ. ಕಲೆ, ಸಾಹಿತ್ಯ, ಸಂಗೀತ, ಶಿಕ್ಷಣ, ವಿಜ್ಞಾನ, ಧರ್ಮ–ಈ ಎಲ್ಲ ರಂಗಗಳಲ್ಲಿ ಪ್ರಚಂಡ ಸಾಧನೆಮಾಡಿ ಸ್ತ್ರೀಯು ಬಹುಮುಖವಾಗಿ ಮುಂದೆಬರಲಿ, ಹೋರಾಡಲಿ, ತನ್ನ ಸಮ್ಯಕ್ ಕೃತಿಯಿಂದ ಅಮರವಾಗಲಿ. ಅದು ತನಗೂ ಕೀರ್ತಿದಾಯಕ, ಸ್ತ್ರೀ ಕುಲಕ್ಕೆ ಕಿರೀಟ ಪ್ರಾಯ. ಇದು ಬಿಟ್ಟು ಯಾವೊಂದು ಕ್ಷೇತ್ರದಲ್ಲಿ ಸಾಹಸ ಪೂರ್ಣವಾಗಿ ಪ್ರಗತಿ ಸಾಧಿಸುವ ಛಲ, ಉತ್ಸಾಹ ತೋರದೆ ಕೇವಲ ವಿಲಾಸ-ವಿಷಯಾಸಕ್ತಿಯ ಸಾಕಾರವಾಗಿ ಗಂಡುಹುಡುಗರೊಡನೆ ಅಲೆದು, ಸಿನೆಮಾ ಮಂದಿರಗಳಲ್ಲಿ ಸುಗ್ಗಿ ಬಣ್ಣದ ಚಿಟ್ಟೆಗಳಂತೆ ಹಾರಾಡಿ, "ಮದುವೆ ಬೇಡ; ನಾನು ಗಂಡನ ಕೈ ಕೆಳಗೆ ಇರಲು ಇಷ್ಟಪಡುವುದಿಲ್ಲ; ನೌಕರಿ ಮಾಡಿಕೊಂಡು ಸ್ವಂತ ಕಾಲಮೇಲೆ ನಿಲ್ಲುವೆ" ಎಂದು ಅಹಂಕಾರದಿಂದ ಚಟಪಟಿಸಿದರೆ ಇದು ಸ್ವಾತಂತ್ರ್ಯವಲ್ಲ. ತನ್ನ ಹೆಣ್ತನದ ಅರಿವು, ಕರ್ತವ್ಯಗಳನ್ನು ಮರೆತು ತಾತ್ಕಾಲಿಕ ಆವೇಶದಿಂದ, ಸ್ವೇಚ್ಛೆಯಿಂದ ವರ್ತಿಸಿದರೆ ಕಾಲಾನಂತರ ಆಕೆಯ ಬದುಕು, ದೀಪದ ಸುತ್ತಲೂ ಕೆಲವು ನಿಮಿಷಕಾಲ ಉತ್ಸಾಹ ಪೂರ್ಣವಾಗಿ ಆತುರ–ಆವೇಶಗಳಿಂದ ಸುತ್ತಿ, ನಂತರ ರೆಕ್ಕೆಯುದುರಿ ಬಿದ್ದು, ನಿಸ್ಸಹಾಯಕವಾಗಿ ಒದ್ದಾಡುವ ಪತಂಗದಂತೆ ಅತ್ಯಂತ ನಿಸ್ಸಹಾಯಕ, ನಿರಾಶಾದಾಯಕ ಆಗುವುದು.

ಈ ಬಗೆಯ ಚಪಲ ಮನೋವೃತ್ತಿ, ವಿಷಯಾಸಕ್ತ ಬದುಕಿಗೆ ಕಾರಣಗಳೆಂದರೆ "ಭೌತಿಕ ಸುಖ (material pleasure) ವೊಂದೇ ನಿಜವಾದ ಸುಖ; ಹಣವಿದ್ದರೆ ಅದನ್ನು ಕೊಳ್ಳಬಹುದು," ಎಂಬ ನಂಬುಗೆ. ಅಪರಿಪಕ್ವ ವಿಚಾರಧಾರೆ, ಜೀವನಾನುಭವದ ಕೊರತೆ [ಸಾಧಿಸಬಹುದಾದ ಎಲ್ಲ ಪ್ರಗತಿ ಸಾಧಿಸಿ, ನಿರಾಶಾವಾದ (pessimism) ಅಂಚಿನಲ್ಲಿದ್ದು ಭೌತಿಕ ಭೋಗಗಳಲ್ಲಿ ಸುಖಕಾಣದೆ ಪಾಶ್ಚಿಮಾತ್ಯರನೇಕರು ಪರಿತಪಿಸುತ್ತಿದ್ದಾರೆ. ಚಂದ್ರನ ಬೆಳಗಿಗೆ ಚಕೋರವು, ರವಿಯ ಬರವಿಗೆ ಅಂಬುಜವು ಹಾತೊರೆಯುವಂತೆ ಪಾಶ್ಚಿಮಾತ್ಯರು ಅಧ್ಯಾತ್ಮಧಾರೆಗಾಗಿ ಕಾತರಿಸುತ್ತಲಿರುವ ಪರಿಸ್ಥಿತಿಯಲ್ಲಿ ಭಾರತೀಯರನೇಕರು ವಿಲಾಸವಾದ (hedonism)ದ ಕಡೆಗೆ ವಾಲತೊಡಗಿದ್ದಾರೆ.] ಇದರರ್ಥ ವೈಜ್ಞಾನಿಕ, ಆಧುನಿಕ ಪ್ರಗತಿ ಸಾಧಿಸದೆ, ಅವುಗಳಿಗೆ ಬೆನ್ನುತೋರಿ ಕೇವಲ ಜಪಮಣಿಹಿಡಿದು ಮಂತ್ರ ಜಪಿಸಲು ನಾನು ಸಲಹೆ ಸೂಚಿಸುತ್ತಿಲ್ಲ. ಪ್ರತಿಯೊಂದು ವಿದ್ಯೆಯಲ್ಲೂ ತನ್ನದೇ ಆದ ತಪಸ್ಸಿದೆ.

ಆದ್ದರಿಂದ ಆಯಾ ಕ್ಷೇತ್ರಗಳಲ್ಲಿ ತಾನು ಉನ್ನತ ಸಿದ್ಧಿಯನ್ನು ಪಡೆಯಬೇಕೆಂಬ ಗುರಿ ಇರಿಸಿಕೊಂಡು ಸಾಗುತ್ತ ನಾಡು-ನುಡಿಗಳಿಗೆ ಏನಾದರೂ ಕಾಣಿಕೆಯನ್ನು ಸಲ್ಲಿಸಬೇಕೆಂದು ಪ್ರತಿಯೊರ್ವನೂ ಸಂಕಲ್ಪಿಸಬೇಕು. ಅದು ಬಿಟ್ಟು ನಡೆವ ಹೆಣ, ಮಾತನಾಡುವ ಹೆಣದಂತೆ ಅರ್ಥರಹಿತವಾಗಿ ಕೇವಲ ಉಸಿರಾಡುವ ಗೊಂಬೆಯಂತೆ ಬದುಕಿದರೆ ಆಗದು. ಇಂದು ಮಾನವನಿಗೆ ಬೇಕಾಗಿರುವುದು ಕೇವಲ ಶಾರೀರಿಕ ಸುಖ-ಭೋಗಗಳು (material pleasures) ಅಷ್ಟೇ ಅಲ್ಲ, ಮಾನಸಿಕ ಸಂತೋಷ (mental happiness), ಹಾರ್ದಿಕ ಆತ್ಮಾನಂದಗಳು (bliss) ಬೇಕು. ಮಾನವನು ಶಾರೀರಿಕ ಪ್ರಾಣಿ ಮಾತ್ರವಲ್ಲ; ಮಾನಸಿಕ, ಬೌದ್ಧಿಕ, ಹಾರ್ದಿಕ ವಿವಿಧ ಮುಖಗಳುಳ್ಳ ವ್ಯಕ್ತಿ. ಆಯಾ ಕ್ಷೇತ್ರಗಳನ್ನು ಹದಮಾಡಿ ವಿಶಿಷ್ಟ ಬೆಳಸನ್ನು ಪಡೆಯಬೇಕಾದರೆ ಮಾನವನಿಗೆ ವೈಚಾರಿಕ (cognitive), ಭಾವುಕ (conative) ಮತ್ತು ಕ್ರಿಯಾತ್ಮಕ (active) ಎಲ್ಲ ಸಂಸ್ಕಾರಗಳು ಬೇಕು. ಇಂದ್ರಿಯಾನಂದ, ಬೌದ್ಧಿಕಾನಂದ, ಆತ್ಮಾನಂದ ಮೂರನ್ನು ಉಂಡಾಗ ಬದುಕು ನೆಮ್ಮದಿಯ ನೆಲೆಯಾಗುವುದು.

ವಿಜ್ಞಾನ-ಲಲಿತಕಲೆ-ಧರ್ಮ, ಇವು ಮೂರೂ ಸತ್ಯ-ಸುಂದರ-ಶಿವದ ಸಾಕ್ಷಾತ್ಕಾರಕ್ಕೆ ಅವಶ್ಯಕವೇ! ಯಾವುದೊಂದನ್ನು ಹಿಡಿದವರು ಇನ್ನೊಂದನ್ನು ಅಲ್ಲಗಳೆಯಬೇಕಿಲ್ಲ; ಆದರೆ ಈ ಮೂರನ್ನೂ ಬಿಟ್ಟು ಇಂದ್ರಿಯ ಭೋಗಗಳ ಕೈ ಗೊಂಬೆಯಾದರೆ ತನಗಾಗಲಿ-ಸಮಾಜಕ್ಕಾಗಲಿ ಉಪಯೋಗವಿಲ್ಲ. ಬದುಕು ಸಮಗ್ರವಾಗಬೇಕಾದರೆ ವಿಜ್ಞಾನ ಕೊಡುವ ವಿಭಜನಾತ್ಮಕ (analytic) ದೃಷ್ಟಿಕೋನ, ಲಲಿತಕಲೆಗಳು ನೀಡುವ ಸಂಯೋಜನಾತ್ಮಕ (synthetic) ದೃಷ್ಟಿಕೋನ, ಸುಜ್ಞಾನ-ಧರ್ಮಗಳು ನೀಡುವ ದೈವೀ ದೃಷ್ಟಿಕೋನ (divine outlook) ಮೂರೂ ಬೇಕು...ಮೂರೂ ಇಲ್ಲದ ವಿಲಾಸಮಯ ದೃಷ್ಟಿಕೋನ ಮಾತ್ರ ಮನುಕುಲಕ್ಕೆ ಶಾಪವಾದ ಕಾರಣ, ಅದು ಬೇಡ.

ಧರ್ಮ–ಸಂಸ್ಕಾರಗಳ ಅವಶ್ಯಕತೆಯನ್ನು ಇನ್ನಷ್ಟು ಪುಷ್ಟೀಕರಿಸಲು ಮತ್ತೊಂದು ದೃಷ್ಟಾಂತವನ್ನು ನೀಡಬಹುದು. ಜೀವನವನ್ನು ಒಂದು ಪಯಣ ಎನ್ನೋಣ. ಅಂದಾಗ ಅದಕ್ಕೊಂದು ಗುರಿ ಮತ್ತು ವಿಶಿಷ್ಟ ಪಥ ಇರಲೇಬೇಕಲ್ಲವೆ. ಹಾಗಿದ್ದಾಗ ಗುರಿ ಮತ್ತು ಮಾರ್ಗಗಳ ಸ್ಪಷ್ಟವಾದ ಅರಿವು ಪಥಿಕನಿಗೆ ಇರಬೇಕು. ಇಲ್ಲವಾದರೆ ಪ್ರಯಾಣ ಅವ್ಯವಸ್ಥಿತವಾಗದೇ ಇರದು. ಉದಾಹರಣೆಗೆ ಪ್ರವಾಸಿಕನೊರ್ವ ಬೆಂಗಳೂರು ನಗರಕ್ಕೆ ಬಂದಿರುವನೆಂದು ಭಾವಿಸೋಣ. ಅವನಿಗೆ ನಗರವನ್ನು ದರ್ಶಿಸುವುದಕ್ಕೆ ಕೇವಲ ಕೆಲವೇ ದಿವಸಗಳ ಕಾಲಾವಧಿ ಇದೆ. ಆದ್ದರಿಂದ ಆ ವಿಶಿಷ್ಟ ಕಾಲಾವಧಿಯಲ್ಲಿ ಅವನು ನೋಡಬೇಕಾದ ಪ್ರಮುಖ ಸ್ಥಳಗಳನ್ನು ನೋಡಬೇಕು. ಅದಕ್ಕಾಗಿ ಅವನು ಪ್ರೇಕ್ಷಣೀಯ ಸ್ಥಳಗಳ ಪಟ್ಟಿಮಾಡಿಕೊಂಡು, ತನ

ಗಿರುವ ಕಾಲಾವಕಾಶಕ್ಕೆ ತಕ್ಕಂತೆ ನೋಡುವ ಯೋಜನೆ ಮಾಡಬೇಕು. ಹಾಗೆ ಮಾಡದೆ ತನಗೆ ತೋಚಿದಂತೆ ಸಾಗಿ, 'ದಾರಿಯಲ್ಲಿ ಸಿಕ್ಕಿದವುಗಳನ್ನು ನೋಡಿದರೆ ಆಯಿತು' ಎಂದು ಸಂದರ್ಶಿಸಲು ಹೊರಟರೆ ತಿಂಗಳುಗಟ್ಟಳೆ ಕಳೆದರೂ ಬೃಹತ್ತಾದ ನಗರವನ್ನು ನೋಡಲಾರ. ಮಾತ್ರವಲ್ಲ ಅನೇಕ ಸಲ ನೋಡಬೇಕಾದುದನ್ನೇ ಬಿಟ್ಟು ಅನವಶ್ಯಕವಾದುದನ್ನೇ ನೋಡಿರುವನು. ಹಾಗೆಯೇ ಬದುಕಿನ ಬಟ್ಟೆಯಲ್ಲಿ ನೂರಾರು ಕವಲು ದಾರಿಗಳು ಸಿಗುವಾಗ, ಸರಿಯಾದ ಗುರಿಯನ್ನು ಪೂರ್ವಭಾವಿಯಾಗಿ ಯೋಜಿಸಿಕೊಂಡು ಅದನ್ನು ಮುಟ್ಟುವ ಸರಿಯಾದ ಪಥ ಹಿಡಿಯಬೇಕು. ಅಂತಹ ಪಥವನ್ನು ನಿರ್ಣಯಿಸುವ, ಸೂಚಿಸುವ ದಿಕ್ಸೂಚಿ–'ಧರ್ಮ–ಅಧ್ಯಾತ್ಮ'ಗಳು. ಮುಗಿಲು ಕರಗಿ ಬಿದ್ದ ನೀರು ಎರಡು ದಂಡೆಗಳ ಮಧ್ಯೆ ವ್ಯವಸ್ಥಿತವಾಗಿ ಹರಿದಾಗ ಮಾತ್ರ ನದಿಯಾಗಿ ರೂಪುಗೊಂಡು ಗುರಿಮುಟ್ಟುವಂತೆ ಲೌಕಿಕ-ಪಾರಮಾರ್ಥ ವೆರಡರ ನಡುವೆ ಸಮತೋಲನಾತ್ಮಕವಾಗಿ ಹರಿದಾಗ ಮಾತ್ರ ಬದುಕು ಗುರಿಮುಟ್ಟಲು ಸಾಧ್ಯ. ಆಧ್ಯಾತ್ಮವೆಂದರೆ ಲೌಕಿಕತೆ-ಪ್ರಾಪಂಚಿಕ ಕರ್ತವ್ಯಗಳಿಂದ ವಿಮುಖ ಮಾಡಿ ಕರೆದೊಯ್ಯುವ ವಿದ್ಯೆ ಎಂದು ಭಾವಿಸಬೇಕಾಗಿಲ್ಲ. "ಹೇಗಾದರೂ ಬದುಕುವುದು ಬೇಡ, ಹುಟ್ಟಿದ್ದೇವಲ್ಲಾ ಅಂತ ಬದುಕುವುದಿಲ್ಲ; ಸತ್ತಿಲ್ಲವಿನ್ನೂ ಎಂದು ಜೀವಿಸುವು ದಿಲ್ಲ. ವಿಶಿಷ್ಟ ಗುರಿಯನ್ನು ಕಣ್ಣೆದುರಿಗಿರಿಸಿಕೊಂಡು ಉತ್ಸಾಹಪೂರ್ಣವಾಗಿ ಆದರ್ಶಯುಕ್ತವಾಗಿ ಬದುಕುವುದು ಹೇಗೆ ಎಂಬುದನ್ನು ಕಲಿಸುವ ಕಲೆ" ಎಂದು ಸ್ಪಷ್ಟವಾಗಿ ಹೇಳಬಹುದು. ಹಲಸಿನ ಹಣ್ಣು ಬಹು ರುಚಿ; ಆದರೆ ತೊಳೆ ವಿಪರೀತ ಅಂಟು. ಅದಕ್ಕಾಗಿ ಹಣ್ಣನ್ನು ಬಿಸುಡಬೇಕೆ? ಎಣ್ಣೆಯನ್ನು ಕೈಗೆ ಸವರಿಕೊಂಡು ತೊಳೆಯನ್ನು ಬಿಡಿಸಬೇಕು. ಅದೇ ಪ್ರಕಾರ ವಿವಿಧ ಸಮಸ್ಯೆ, ಕಷ್ಟ ಕೋಟಲೆ, ವೈಯಕ್ತಿಕ-ಸಾರ್ವತ್ರಿಕ ಸಂಘರ್ಷಗಳ ಮಧ್ಯೆ ನೆಮ್ಮದಿಯ ತೊಳೆಯನ್ನು ಸ್ಥಿತಪ್ರಜ್ಞೆಯ ಸವಿಯನ್ನು ರುಚಿಸಬೇಕಾದರೆ ಅಧ್ಯಾತ್ಮದ ಎಣ್ಣೆಯನ್ನು ಸವರಿ ಕೊಳ್ಳಬೇಕು.

ದಿನದಿನಕ್ಕೆ ಮಾನವನ ಬದುಕು ಕ್ಲಿಷ್ಟಕರವಾಗುತ್ತಲಿದ್ದು, ಸಾಮಾಜಿಕ, ಆರ್ಥಿಕ ಒತ್ತಡಗಳಿಂದ, ಆಘಾತಗಳಿಂದ ಮುಖ್ಯವಾಗಿ ಮಹಿಳೆಯ ಬಾಳು ಹಲ ವಾರು ಸಮಸ್ಯೆಗಳ ಸಮರಾಂಗಣವಾಗುತ್ತಲಿದೆ. ಪರಿಣಾಮವಾಗಿ ಕೋಮಲ ಹೃದಯಿಯಾದ ಆಕೆ ನಿರಾಶಾವಾದದ ಸುಳಿಯಲ್ಲಿ ಸಿಕ್ಕಿ ಜರ್ಜರಿತಳಾಗುವ, ಮನೋ ರೋಗಿಯಾಗುವ, ಭ್ರಮಾಧೀನೆಯಾಗುವ ಪ್ರಸಂಗಗಳು ಅಧಿಕವಾಗುತ್ತಲಿವೆ. ಇಂತಹ ಪರಿಸರದಲ್ಲಿ ಅಧ್ಯಾತ್ಮವು ಬೆಂದ ಹೃದಯಕ್ಕೆ ಉತ್ತಮವಾದ ಮದ್ದಾಗ ಬಲ್ಲುದು. ವರದಕ್ಷಿಣೆ, ಆರ್ಥಿಕ ವಿಪ್ಲವದ ಪರಿಸ್ಥಿತಿಯ ತಾಕಲಾಟಕ್ಕೆ ಸಿಕ್ಕಿ ಅವಿವಾಹಿತರಾಗಿ ಉಳಿಯುವ ಅನೇಕ ಮಹಿಳೆಯರ ಬಾಳನೌಕೆ ನಿರಾಶೆಯ ಹೆಬ್ಬಂಡೆಗೆ ಬಡಿದು ನಾಶವಾಗುವಾಗ ನಿಜವಾದ ಧ್ಯಾನ, ಜಪಗಳು ಅವರನ್ನು

ಉಳಿಸಬಲ್ಲವು. ಅಕ್ಕಮಹಾದೇವಿಯಂತೆ ಶರಣಸತಿಯಾಗಿ ದೇವಪತಿಗೆ ಶರಣಾಗಿ, ಅವನ ಕಾರುಣ್ಯಕ್ಕಾಗಿ ಹಂಬಲಿಸುವ ಅಭೀಪ್ಸೆ ಬದುಕಿಗೆ ಒಂದು ತಿರುವನ್ನು, ಆಶ್ವಾಸನೆಯನ್ನು, ಆತ್ಮವಿಶ್ವಾಸವನ್ನು ಕೊಡಬಲ್ಲದು. ''ನನಗಾಗಿ ಯಾರೂ ಇಲ್ಲ'' ಎಂಬ ನಿರಾಶೆಯ ಭಾವ ಹೋಗಿ, ''ನನಗಾಗಿ ಪರಮಾತ್ಮನಿದ್ದಾನೆ'' ಎಂಬ ಆಶ್ವಾಸನೆಯ ಭಾವ ಉದ್ದೀಪನಗೊಳ್ಳುವುದು. ''ಚನ್ನಮಲ್ಲಿಕಾರ್ಜುನಾ ಆತ್ಮ ಸಂಗಾತಕ್ಕೆ ನೀನೆನಗುಂಟು'' ಎಂಬ ಅಚಲ ವಿಶ್ವಾಸವೇ ಅಕ್ಕಮಹಾದೇವಿಗೆ ಅಪಾರ ಧೈರ್ಯನೀಡಿ ಕಾಡುಮೇಡುಗಳಲ್ಲಿ ನಿರ್ಭಯವಾಗಿ ಸಂಚರಿಸುವ ಬದುಕಿನ ಬಟ್ಟೆಯಲ್ಲಿ ವಿಘ್ನಗಳನ್ನೆದುರಿಸುವ ಎದೆಗಾರಿಕೆ ನೀಡಿತು. ನ್ಯಾಯಾನ್ಯಾಯಗಳನ್ನು ತೂಗಿ ನೋಡುವ, ಪಾಪ-ಪುಣ್ಯಗಳಿಗಾಗಿ ಶಿಕ್ಷಿಸುವ-ರಕ್ಷಿಸುವ ಜಗನ್ನಿಯಾಮಕ ಪರಮಾತ್ಮನಿದ್ದಾನೆ ಎಂಬ ನಂಬಿಗೆ, ಅವನು ರಕ್ಷಿಸುವನು ಎಂಬ ಧೈರ್ಯವು ಒಂದು ಬಗೆಯ ಸ್ಥಿತಪ್ರಜ್ಞತ್ವವನ್ನು ತಂದುಕೊಟ್ಟು, ಉತ್ಸಾಹದಿಂದ ಗುರಿ ಮುಟ್ಟಲು ಸ್ಫೂರ್ತಿ ನೀಡುತ್ತದೆ.

**ಅಧ್ಯಾತ್ಮ ಮತ್ತು ಉದಾತ್ತೀಕರಣ**

ಪ್ರತಿ ಮಾನವನಲ್ಲಿ ನಿಸರ್ಗದತ್ತವಾದ ಇಂದ್ರಿಯ ಶಕ್ತಿಯಿದೆ. ಅದು ತಗ್ಗಿದ್ದಲ್ಲಿ ಹರಿದುಹೋಗುವ ನೀರಿನಂತೆ, ಸಾಮಾನ್ಯವಾಗಿ ಅಧೋಮುಖವಾಗಿಯೇ ಪ್ರವಹಿಸಿ ತೃಪ್ತಿ ಹೊಂದಬಯಸುವುದು. ತೃಪ್ತಿಯಾಗದಿದ್ದಾಗ ದಮನಿಸಲ್ಪಟ್ಟು (suppression) ಅನೇಕ ವಿಕಾರಗಳಿಗೆ ಕಾರಣವಾಗುವುದು. ಅಂತರ್ಮುಖಿ (introvert) ಪ್ರವೃತ್ತಿಯುವರಲ್ಲಿ ಚಿತ್ತ ಭ್ರಮಣಕ್ಕೆ, ಬಹಿರ್ಮುಖಿ (extrovert) ಪ್ರವೃತ್ತಿಯುವರಲ್ಲಿ ಅನ್ಯರ ಮೇಲೆ ದೌರ್ಜನ್ಯಕ್ಕೆ ಕಾರಣವಾಗುವುದು. ಅದಕ್ಕೆಂದೇ ಸಿಗ್ಮೆಂಡ್ ಫ್ರಾಯಿಡನಂತಹ ಮನೋವಿಜ್ಞಾನಿ, "ಆದಿಕಾಮವನ್ನು (Libido) (ಇಲ್ಲಿ ಆದಿಕಾಮವೆಂದರೆ ಒಂದೇ ವಿಷಯಕ್ಕೆ ಸೀಮಿತವಾಗದೆ ನೈಸರ್ಗಿಕ ಹುಟ್ಟು ಗುಣದ ಒತ್ತಡ ಸಮಗ್ರವಾಗಿ ಸೇರ್ಪಡೆಯಾಗುವುದೆಂದು ಬಹು ಜನರ ಅಭಿಪ್ರಾಯ) ಹತ್ತಿಕ್ಕಬಾರದು, ಉಪಯೋಗಿಸಿಕೊಳ್ಳಬೇಕು (utilisation)" ಎಂದು ಹೇಳುವನು. ನಿಜ, ಅನಿವಾರ್ಯ ಒತ್ತಡಗಳಿಗೆ ಸಿಕ್ಕಿ ಅದು ಉಪಯೋಗವಾಗದಿದ್ದಾಗ, ಅಥವಾ ಎರಡಕ್ಕೂ ಇಚ್ಛೆ ಇಲ್ಲದಿರುವ ಸಂಯಮ ಜೀವಿಗಳಿಗೆ ಅವನು ಕೊಡುವ ಪರಿಹಾರ ವೇನು ? ಇಂತಹ ಪ್ರಸಂಗದಲ್ಲಿ ಅಧ್ಯಾತ್ಮವು ಮಾರ್ಗವನ್ನು ತೋರುತ್ತದೆ-ಇಂದ್ರಿಯ ಶಕ್ತಿಯನ್ನು ದೈವೀಮುಖಿವಾಗಿ ಉದಾತ್ತೀಕರಿಸಲು ! (sublimation). ಇದಕ್ಕೆ ಉದಾಹರಣೆಯಾಗಿ ಶರಣ ಜೀವನವನ್ನು ತೋರಿಸಬಹುದು. "ಇಂದ್ರಿಯ ನಿಗ್ರಹವ ಮಾಡಿದರೆ (suppression) ಹೊಂಗುವವು ದೋಷಂಗಳು" ಎಂದು ಹೇಳಿ, "ಎನಗುಳ್ಳುದೊಂದು ಮನ ಅದು ನಿಮ್ಮಲ್ಲಿ ಒಡವೆರೆದ ಬಳಿಕ ಎನಗಿನ್ನಾವ ಭಯವಿಲ್ಲ ಕಾಣಾ ಚನ್ನಮಲ್ಲಿಕಾರ್ಜುನಾ" ಎಂಬಲ್ಲಿ ಇಂದ್ರಿಯಗಳನ್ನು ವಾಹನವಾಗಿ ಮಾಡಿ

ಕೊಂಡು ಆಡುವ ಮನಸವನ್ನು ಉದಾತ್ತೀಕರಿಸುವ ಪ್ರಯತ್ನವಿದೆ. ಕಾಮವು ಪ್ರೇಮವಾಗಿ ಪರಿವರ್ತನೆಗೊಂಡು, ದೇವನಲ್ಲಿ ಭಕ್ತಿಯಾಗಿ ಉದಾತ್ತೀಕರಣ ಹೊಂದುವದು. 'ವಾತ್ಸಲ್ಯ' ಎಂಬೊಂದು ಹುಟ್ಟುಗುಣವನ್ನೇ ತೆಗೆದುಕೊಳ್ಳೋಣ. ತನಗೆ ಮಕ್ಕಳಾದರೆ ಉಪಯೋಗೀಕರಣ ; ಆಕಸ್ಮಿಕವಾಗಿ ಆಗದಿದ್ದರೆ ಅನ್ಯರ ಮಕ್ಕಳನ್ನು ದ್ವೇಷಿಸುವುದು, ಮಕ್ಕಳಿದ್ದವರನ್ನು ಕಂಡು ಕರುಬುವುದು, ಅಥವಾ ಒಳಗೇ ಕೊರಗಿ ಹತಾಶರಾಗುವುದು ದಮನ ; ಆಗದಿದ್ದಾಗಲೂ ಸಹ ಜಗತ್ತಿನ ಎಲ್ಲ ಮಕ್ಕಳು ತನ್ನ ಮಕ್ಕಳೆಂದು, ಎಲ್ಲರೂ ತನ್ನವರೆಂದು ಭಾವಿಸಿ ಸಂತೃಪ್ತಿ ಆಗಿರುವುದು ಉದಾತ್ತೀಕರಣ.

ವಿಧವೆಯರ ಸಮಸ್ಯೆಯನ್ನು ತೆಗೆದುಕೊಳ್ಳೋಣ : ಬಾಲವಿಧವೆಯರು ಮರಳಿ ಮದುವೆಯಾದರೆ ಉಪಯೋಗೀಕರಣ, ಸ್ವಯಂ ಇಚ್ಛೆಯಿಂದ ಘನವಾದ ಗುರಿಯನ್ನು ಇರಿಸಿಕೊಂಡು ಅದರಲ್ಲಿ ತನ್ನ ಆಕಾಂಕ್ಷೆ, ಚಿತ್ತಗಳನ್ನು ತೊಡಗಿಸಿ ಉನ್ನತವಾದುದನ್ನು ಸಾಧಿಸುವುದು ಉದಾತ್ತೀಕರಣ, ಮನದಲ್ಲೇ ಪರಿತಾಪಪಟ್ಟು ಕೊರಗಿ ಮರುಗಿದರೆ ದಮನ. ಉದಾತ್ತೀಕರಣ ; ಅತ್ಯುತ್ತಮ ಸಾಧನೆಯಾದರೂ ಒತ್ತಾಯದಿಂದ ಅದನ್ನು ಹೇರಲು ಬರುವಂತಿಲ್ಲ, ಅವರೇ ಸಂತೋಷದಿಂದ ಸ್ವೀಕರಿಸಬೇಕು. ಹಾಗೆ ಸ್ವೀಕರಿಸಬೇಕಾದರೆ ಅಭಾಗಿನಿಯರಿಗೆ ಸೂಕ್ತ ಶಿಕ್ಷಣ ನೀಡಬೇಕು. ಮಗುವಿನ ಮುಂದೆ ಬಾಳೆಹಣ್ಣು, ಬೋಂಡ ಇಟ್ಟಾಗ ಅದು ಬೋಂಡವನ್ನು ಬಯಸುವುದು. ಆಗ ಎರಡರ ಒಳ್ಳಿತು-ಕೆಡಕನ್ನು ಮನಮುಟ್ಟುವಂತೆ ಮಗುವಿಗೆ ತಿಳಿಸಬೇಕು. ಆರಿಸಿಕೊಳ್ಳುವ ಪ್ರಜ್ಞೆ ಬಂದಾಗ ತನಗೆ ಬೇಕಾದ್ದನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ ನೀಡಬೇಕು. ಸ್ವಯಂ ಪ್ರೀತಿಯಿಂದ ಮಗುವು ಬಾಳೆಯ ಹಣ್ಣು ಆರಿಸಿದಾಗ ಅದಕ್ಕೂ ಸಂತೋಷ, ನೆಮ್ಮದಿ, ಆರೋಗ್ಯಕ್ಕೂ ಒಳ್ಳಿತಷ್ಟೆ. ಇದನ್ನೇ ಹಲವಾರು ಬಾಲವಿಧವೆಯರ ಬದುಕಿಗೆ ಅನ್ವಯಿಸಿ ನೋಡಬಹುದು. 'ಬದುಕಿನ ಸಾಮಾನ್ಯ ಸುಖಗಳಿಂದ ವಂಚಿತರಾದೆವಲ್ಲ' ಎಂದು ಕೊರಗುವಂತಹವರಿಗೆ ಬಲವಂತವಾಗಿ ಕೇಶಮುಂಡನ ಮಾಡಿದರೆ ಮನಸ್ಸಿನ ಆಸೆಗಳ ಮುಂಡನವೂ ಆಗಿದೆಯೆಂಬುದು ಸಾಧ್ಯವಿಲ್ಲ. ಅದರ ಬದಲಿಗೆ ವಿಧಾಯಕವಾಗಿ ಬದುಕನ್ನು ದೈವೀಕರಿಸುವ ಸೂತ್ರವನ್ನು ಅವರು ಕಲಿಯಲು ಶಿಕ್ಷಣ ನೀಡಬೇಕು. 'ವಿಧಿ ಕೊಟ್ಟ ಶಾಪ' ಎಂದು ತಮ್ಮ ವೈಧವ್ಯದ ಬಗ್ಗೆ ಹಳಿದುಕೊಳ್ಳುವ ಅನೇಕರು ಸೂಕ್ತ ಶಿಕ್ಷಣದನಂತರ "ಇದು ಶಿವನಿತ್ತ ವರ" ಎಂದು ಭಾವಿಸಿ, ವೇಳೆಯನ್ನೆಲ್ಲ ಉತ್ತುಂಗ ವ್ಯಕ್ತಿತ್ವ ಸಾಧನೆಗೆ ಬಳಸಿಕೊಳ್ಳಲು ಸಾಧ್ಯವಿದೆ. ಮೀರಾಬಾಯಿ, ಗಣಿತ ಶಾಸ್ತ್ರಜ್ಞ ಭಾಸ್ಕರಾರ್ಯನ ಮಗಳು ಲೀಲಾವತಿ ಇದಕ್ಕೆ ಜ್ವಲಂತ ಉದಾಹರಣೆಗಳು. ಜಗತ್ತಿನಲ್ಲಿ ಅವಿವಾಹಿತೆಯರು ಸಹಸ್ರಾರು ಮಂದಿ ಕಾಲನ ಗರ್ಭದಲ್ಲಿ ಮೂಡಿ ಅಳಿದುಹೋಗಿರಬಹುದು. ಆದರೆ ಅವರಲ್ಲಿ ಅಕ್ಕಮಹಾದೇವಿ, ಅಂಡಾಳ್‌ರಂತಹ ವಿರಾಗಿಣಿಯರು ಎಷ್ಟು

ಮಂದಿ ? ಅವಿವಾಹಿತ ಬದುಕನ್ನು ವೈರಾಗ್ಯದ ಬದುಕಾಗಿ ಉದಾತ್ತೀಕರಿಸಿಕೊಂಡ ಕಾರಣ ಅವರು ಅಮರರಾದರು. ಮಕ್ಕಳಿಲ್ಲದೆ ಇರುವ ಸಹಸ್ರಾರು ಜನ ಇರುವರು; ಅವರಲ್ಲಿ ಕೆಲವರು ಮಾತ್ರ ಎಷ್ಟೋ ಅನಾಥರಿಗೆ ತಾಯಿ-ತಂದೆಯರಾಗಿ ಆಶ್ರಯ ನೀಡುತ್ತಾರೆ. ಇವೆಲ್ಲವೂ ಉದಾತ್ತೀಕರಿಸಿಕೊಂಡ ಬದುಕುಗಳು. ಹರಿವ ನೀರಿಗೆ ಅಣೆಕಟ್ಟು ಕಟ್ಟಿ, ದೂರದ ಕ್ಷೇತ್ರಗಳಿಗೆ ಹರಿಸಿ ಸಮೃದ್ಧವಾದ ಬೆಳೆಸನ್ನು ಹೊಂದುವಂತೆ, ಪ್ರಕೃತಿದತ್ತ ಇಂದ್ರಿಯ ಶಕ್ತಿಗೆ ಮನೋಸ್ಥೈರ್ಯದ ಅಣೆಕಟ್ಟು ಕಟ್ಟಿ, ಸೌಹಾರ್ದ ಭಾವನೆಯ ನಾಲೆ-ಕಾಲುವೆಗಳನ್ನು ಸೃಜಿಸಿ ಬದುಕನ್ನು ದೈವೀಕರಿಸಿ (Divinisation)ದರೆ ಅವರಿಂದ ಲೋಕಕ್ಕೆ ಸಲ್ಲುವ ಕಾಣಿಕೆ ಅಪಾರ, ಅಮರ.

**ಉಪಸಂಹಾರ**

ಇಂದು ಮಹಿಳೆಯರ ಉದ್ಧಾರವು ಸರ್ವಾಂಗೀಣವಾಗಿ ಆಗಬೇಕಾದರೆ ನಾವು ಅವರ ಬಾಹಿರಂಗಿಕ ಅಭಿವೃದ್ಧಿಯ ಬಗ್ಗೆ ಚಿಂತಿಸಿದರೆ ಸಾಲದು. ಆಂತರಂಗಿಕ ಉತ್ಥಾನದ ಬಗ್ಗೆಯೂ ವಿಚಾರ ಮಾಡಬೇಕು. ಹೀಗೆ ಉದ್ಧಾರ-ಉತ್ಥಾನಗಳೆರಡನ್ನು ಸಾಧಿಸಬೇಕಾದರೆ ಎರಡು ಬಗೆಯ ಅರಿವು ಸಮಾಜದಲ್ಲಿ ಮೂಡಬೇಕಾಗಿದೆ ; ಒಂದು ಪುರುಷ ಸಂಕುಲದಲ್ಲಿ, ಇನ್ನೊಂದು ಸ್ತ್ರೀ ಸಮೂಹದಲ್ಲಿ. "ಸ್ತ್ರೀಯರೆಂದರೆ ಪಾಪಯೋನಿಜರು, ಕೀಳು, ಆಳಿಸಿಕೊಳ್ಳಲಷ್ಟೇ ಅರ್ಹರು" ಎಂಬ ಪೂರ್ವಾಗ್ರಹಪೀಡಿತ, ಮೂಢ ದೃಷ್ಟಿಯ, ಕ್ಷುಲ್ಲಕ ಮನೋಭಾವದ ಬಣ್ಣದ ಕನ್ನಡಕ ತೆಗೆದು ಸೌಜನ್ಯದಿಂದ ಕಾಣಬೇಕು. ಎರಡನೆಯದಾಗಿ ಸಮಾನ ಭಾವವನ್ನು ಮತ್ತು ಗೌರವ ಪೂರ್ಣ ದೃಷ್ಟಿಯನ್ನು ಸ್ತ್ರೀ ಕುಲದ ಬಗ್ಗೆ ಬೆಳೆಸಿಕೊಳ್ಳಬೇಕು. 'ಸಮಾಜದ ಎರಡು ಗಾಲಿಗಳಂತೆ ಸ್ತ್ರೀ-ಪುರುಷರು. ಆದಕಾರಣ ಗಾಲಿಗಳು ಇಜ್ಜೋಡಾದರೆ ಗಾಡಿ ಒಪ್ಪಾರೆಯಾಗುವಂತೆ, ಉರುಳುವಂತೆ ಸಮಾಜದಲ್ಲಿ ಈರ್ವರೂ ಸಮ ಪ್ರಮಾಣದಲ್ಲಿ ಬೆಳೆಯದಿದ್ದರೆ ಪ್ರಗತಿ ಕುಂಠಿತವಾಗುವುದು. ಆದ್ದರಿಂದ ಈರ್ವರೂ ಸಮನಾಗಿ ಬೆಳೆಯಲಿ' ಎಂಬ ಸುಸಂಸ್ಕೃತ, ಸಮಾನತೆಯ ದೃಷ್ಟಿಯನ್ನು ತಾಳಬೇಕು. 'ಎಲ್ಲಿ ಸ್ತ್ರೀಯು ಪೂಜ್ಯತೆ ಹೊಂದುತ್ತಾಳೋ ಅಲ್ಲಿ ದೇವತೆಗಳು ನೆಲೆಸಿರುವರು,' ಎಂಬ ಮನು ಶಾಸ್ತ್ರೋಕ್ತಿಯಂತೆ ಸ್ತ್ರೀಯ ಬಗ್ಗೆ ಅಪಾರ ಗೌರವ ವ್ಯಕ್ತಪಡಿಸಬೇಕು. ಪಾಶ್ಚಿಮಾತ್ಯರಲ್ಲಿ ಆಕೆಯ ಬಗ್ಗೆ ಸಮಾನತೆಯ ಭಾವ ಹೆಚ್ಚಾಗಿದ್ದರೆ ಭಾರತೀಯರಲ್ಲಿ ಪೂಜ್ಯ ಭಾವವಿದೆ. ಇವೆರಡೂ ಒಂದೊಂದು ದುಷ್ಪರಿಣಾಮ ಮಾಡಿವೆ. ಸಮತೆಯ ಹೆಸರಿನಲ್ಲಿ ಒಂದೆಡೆ ಸ್ವೈರ ವೃತ್ತಿ ಬೆಳೆಯುತ್ತಿದ್ದರೆ, ಇಲ್ಲಿ 'ಮಾತೃ ದೇವೋಭವ' ಎಂದೂ ಕೂಡ ಆಕೆಯನ್ನು ಧರ್ಮ ಸಂಸ್ಕಾರ ನೀಡದೆ ಇರಿಸಲಾಗಿದೆ. ಹೀಗೆ ಮಾಡದೆ, ಗಂಡು ಮಕ್ಕಳಂತೆ ಹೆಣ್ಣು ಮಕ್ಕಳಿಗೂ ಅಧ್ಯಾತ್ಮ ಶಿಕ್ಷಣ ಕೊಟ್ಟು, ಧರ್ಮ ಸಂಸ್ಕಾರದಿಂದ ಬಾಳಿನಲ್ಲಿ ಭರವಸೆ ನೀಡಿ, ಕೀಳರಿಮೆ (inferiority complex) ತೊಡೆದು ಹಿರಿಯರು ಆತ್ಮ ವಿಶ್ವಾಸವನ್ನು ಉದ್ದೀಪಿಸಬೇಕು.

ಇಂತಹ ಸದವಕಾಶ ಸ್ವೀಕರಿಸಿ, ಸ್ಫೂರ್ತಿಪಡೆದು ಸ್ತ್ರೀಯು ಸಹ ತನ್ನ ಸುಪ್ತ ಪ್ರತಿಭೆಯನ್ನು ಗುರುತಿಸಿಕೊಂಡು ಅದರ ವಿಕಾಸಕ್ಕಾಗಿ ಯತ್ನಿಸಬೇಕು. ದಿಟ್ಟತನದ ಹೆಸರಿನಲ್ಲಿ ಉದ್ಧಟತನ ಬೆಳೆಸಿಕೊಳ್ಳದೆ, ಸ್ವಾತಂತ್ರ್ಯದ ಕೂಗಿನಲ್ಲಿ ಸ್ವೇಚ್ಛೆಗೆ ಬಲಿಯಾಗದೆ, ಸ್ವಾಭಿಮಾನದ ಸೋಗಿನಲ್ಲಿ ಅಹಂಭಾವಕ್ಕೆ ವಶವಾಗದೆ ವಿಧಾಯಕ ವಾಗಿ ಆಂತರಿಕ ವ್ಯಕ್ತಿತ್ವದ ಬೆಳವಣಿಗೆ ಮಾಡಿಕೊಳ್ಳಬೇಕು. ಕೇವಲ ಅಲಂಕಾರ, ಹರಟೆ, ಆಡಿಕೊಳ್ಳುವಿಕೆ, ಅರ್ಥವಿಲ್ಲದ ಅಲೆದಾಟ, ಅವಿವೇಕದ ಕರ್ತವ್ಯ ಚ್ಯುತಿ ಇವುಗಳಿಂದ ಮಹಿಳೆಯು ತನ್ನನ್ನು ತಾನೇ ದೂರವಿರಿಸಿಕೊಂಡು, ಬುದ್ಧಿಗೆ ಹೊಸ ಆಹಾರವಿತ್ತು ಸ್ವತಂತ್ರ ವಿಚಾರಸಾಮರ್ಥ್ಯಗಳಿಸಿಕೊಂಡು ಸಾಹಿತ್ಯ, ಕಲೆ, ಧರ್ಮ, ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಛಲ-ನಿಷ್ಠೆಗಳಿಂದ ಮುಂದುವರಿದುದೇ ಆದರೆ ನಾವು ಕರ್ತಾರನ ಕಮ್ಮಟವಾದ ಮರ್ತ್ಯವನ್ನು ಬಿಟ್ಟು ಬೇರೆಲ್ಲೂ ಸ್ವರ್ಗಕ್ಕಾಗಿ ಅಲೆಯಬೇಕಿಲ್ಲ. ಸುಂದರ ವ್ಯಕ್ತಿಗೆ ಉತ್ತಮ ಅಲಂಕಾರ ಮಾಡಿದಂತೆ, ದೇವನ ದಾನವಾದ ಈ ಸೃಷ್ಟಿಯನ್ನು ಸದ್ಗುಣಗಳಿಂದ ಶೃಂಗರಿಸಿದರೆ ಅದು ಅಪಾರ ಸುಖ-ಶಾಂತಿಮಯವಾಗುವುದೆಂದು ಸ್ಪಷ್ಟವಾಗಿ ಹೇಳಬಹುದು.

# ಗಣಿ

**ಅಜಿತಾ**

ಸ್ವರ್ಗಕ್ಕೆ ಬೇಲಿ
ನರಕದ ದಾರಿ
ನಿನ್ನ ರಕ್ತ ನಿನಗೆ ಕೊಟ್ಟ
ಹೆಸರು.
ಆಸೆಗಳ ಗೋರಿ
ತಪದ ನೇಣು
ಹೀಗೆ ಏನೇನೋ
ಕರೆದರು ನಿನ್ನ
ರೋಸಿ ಸಾಯಲಿಲ್ಲ
ಎದ್ದು ಒದೆಯಲೂ ಇಲ್ಲ
ಪಗಡೆ ಚಟಕ್ಕೆ
ಒತ್ತೆ ಇಟ್ಟು, ಬತ್ತಲೆಗೆ
ತಲೆ ಇಳಿಸಿ, ಸತ್ಯವನು
ಗೂಟಕ್ಕೆ ಕಟ್ಟಿ
ಅಜರಾಮರರು
ಸೂರ್ಯನಾಣೆ.
ಗಾಳಿ ತುಂಬಿದ ಚಂಡು
ಮುಂಡಾಡದೆ ಬಿಟ್ಟಾಗ
ಹಲವು ಅಂಗಳದಲ್ಲಿ ಬೆಳಗಿದ ವಜ್ರ
ನಿನ್ನಲ್ಲು ಬೆರೆತ,
ಕಲ್ಲಾದೆ – ಪುಣ್ಯಾತ್ಮನ
ಶಾಪಕ್ಕೆ, ತಪದ ಕೂಪಕ್ಕೆ.
ಅಫೀಮು ನಾಲಿಗೆಯಲ್ಲಿ
ಕೇಕೆ ಹಾಕಿದ ಗಂಡು,
ಊರೂರು ಸುತ್ತಿ ನಿನ್ನ ಮಾರಿ
ಸತ್ಯ ಉಳಿಯಿತು ಎಂದ.
ರಂಗು ರಂಗಿನ ಬಾವುಟ
ನಿನ್ನ ತಲೆಗೆ

ಕೊಂಬು ಕಹಳೆಗಳೆಲ್ಲ
ಜೊತೆಗೆ
ಭ್ರುಮೆಯು ಕೂಪದಲಿ
ಕಲ್ಲಾದ ಬಿಳಿಕೂದಲಿಗೆ
ನಾಚಿ ಮಿಂಚು ಸುಳಿದಾಗ,
ಮನ ಮಿಡುಕಿ, ತೊಡೆ
ಕುಣಿಯಿತು ; ಕರುಳು
ತಲೆ ಕಡಿಯಿತು.
ತೀಟೆ ತೀರದ ಶರಣ
ಹುಡುಗಿ ಇಲ್ಲದೆ ಮಲಗ
ಕರೆಗೊಪ್ಪಿ ಒಳಸೇರಿದೆ
ಹೆಸರಬಲೆ – ಮುಗಿಲಿನುದ್ದ.
ಬುದ್ಧ ಮುಳಿದು
ಬಿದ್ದ ; ಕೊಡಲಿಲ್ಲ
ಜಾಗ ನಿನಗೆ.
ಆಗ, ಈಗ ಅದೇ ಮಾತು
ನೀನು ವಿಷ, ಅಫೀಮು, ಹೆಂಡ.
ಕೇಳುತ್ತಲೇ ಇದ್ದಿ
ಯಾರೂ ಕದ್ದರು ನಿನ್ನ
ಬುದ್ಧಿ ?
ಚಕ್ಕಳದಲ್ಲೇ ಚಕ್ಕಾಬಾರ
ಚಿನ್ನದಲ್ಲೇ ಚಮತ್ಕಾರ
ಚಂದ್ರ, ಮಲ್ಲಿಗೆಯಲ್ಲೇ
ಮುದುಡಿತು ನಿನ್ನ ಮೂಳೆ.
ನಿನ್ನ ಕಣ್ಣು ಒಡೆದಿದೆ
ಬಣ್ಣ ಮಾಸಿದೆ, ಆದರೂ
ಬದುಕಿದ್ದೀಯೆ !
ನಿನ್ನೆ – ಇಂದು ಹೀಗೆಯೇ
ಕಳ್ಳು ಕುಡಿಸಿದ್ದು ನಿನಗೆ
ನಿದ್ದೆ ತಿಳಿದೆದ್ದು
ಬೇಲಿ ಕಿತ್ತೆಸೆದು
ಬರಬಾರದೇ
ಹೊರಗೆ.

# ಕರ್ನಾಟಕದ ಕೆಲವು ರಾಣಿಯರು

**ಹು. ಕಾ. ಜಯದೇವ್**

"ನಿತ್ಯಂ ನಿವಾಸತೇ ಲಕ್ಷ್ಮೀಃ ಕನ್ಯಕಾಸು ಪ್ರತಿಷ್ಠಿತಾ" (ಕನ್ಯೆಯರು ಸಂಪತ್ತಿನ ಆಗರ), "ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ" (ಎಲ್ಲಿ ಸ್ತ್ರೀಯರು ಗೌರವಿಸಲ್ಪಡುತ್ತಾರೊ ಅಲ್ಲಿ ದೇವತೆಗಳು ಸಂತುಷ್ಟಿಯನ್ನು ಪೊಂದುತ್ತಾರೆ), "ಮಾತೃ ದೇವೋಭವ" (ತಾಯಿಯೆ ದೈವ) ಇಂತಹ ಆರ್ಯೋಕ್ತಿಗಳನ್ನು ಕೇಳಿದಾಗ ಯಾರಿಗೆ ತಾನೆ ಸಂತೋಷವಾಗುವುದಿಲ್ಲ. ಸಿ ೀಗೆ ಸಮಾಜದಲ್ಲಿ ಕೊಟ್ಟ ಸ್ಥಾನಮಾನಗಳನ್ನು ಕಂಡು ಯಾರಿಗೆ ಹೆಮ್ಮೆ ಆಗುವುದಿಲ್ಲ. ಆದರೆ ಈ ಸಂತೋಷ, ಹೆಮ್ಮೆ ಕ್ಷಣಿಕವಾದುದು. ಏಕೆಂದರೆ ಯಾವ ಸಮಾಜ ಸ್ತ್ರೀಗೆ ಅತ್ಯುಚ್ಚ ಸ್ಥಾನವನ್ನು ಕೊಟ್ಟಿದ್ದಿತೊ ಅದೇ ಸಮಾಜ ಸ್ತ್ರೀಯನ್ನು ಅವಳ ಸ್ಥಾನಮಾನಗಳಿಂದ ಕೆಳಕ್ಕೆ ತಳ್ಳಿ, ಅವಳ ಎಲ್ಲ ಸೌಲಭ್ಯಗಳನ್ನು ಕಿತ್ತುಕೊಂಡುದೇ ಅಲ್ಲದೆ "ನಸ್ತ್ರೀ ಸ್ವಾತಂತ್ರ್ಯ ಮರ್ಹತಿ" (ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ) ಎಂದು ಹೇಳಿ ಅವಳು ಬಾಲ್ಯದಲ್ಲಿ ತಂದೆಯ ಆಶ್ರಯದಲ್ಲಿಯೂ, ಯೌವನದಲ್ಲಿ ಪತಿಯ ಆಶ್ರಯದಲ್ಲಿಯೂ ಮುಪ್ಪಿನಲ್ಲಿ ಮಗನ ರಕ್ಷಣೆಯಲ್ಲಿಯೂ ಇರಬೇಕೆಂದು ಸಾರಿತು. ಸ್ತ್ರೀ ಅಧ್ಯಾತ್ಮದ ಹಾದಿಯಲ್ಲಿ ಒಂದು ಅಡಚಣೆ ಎಂದು ಭಾವಿಸಲಾಯಿತು.

ವೇದಗಳ ಕಾಲದಲ್ಲಿ ಪುರುಷರಷ್ಟೇ ಸ್ವಾತಂತ್ರ್ಯವನ್ನನುಭವಿಸಿದ ಜ್ಞಾನಿಗಳೂ, ದಾರ್ಶನಿಕರೂ, ಮಂತ್ರದ್ರಷ್ಟಾರರೂ ಇದ್ದಂತಹ ಸ್ತ್ರೀಯರ ಅವನತಿ ಕಾಲಕ್ರಮೇಣ ಏಕಾಯಿತು, ಹೇಗಾಯಿತು ? ಇದಕ್ಕೆ ವಿದ್ವಾಂಸರ ಊಹೆ ಈ ರೀತಿ ಇದೆ : ಆರ್ಯ ದ್ರಾವಿಡರ ಸಂಬಂಧ ಪರಸ್ಪರ ವಿವಾಹಗಳ ಮೂಲಕ ದೃಢವಾಗುತ್ತಾ ಬಂದಂತೆ ಸ್ತ್ರೀಯ ಸ್ಥಾನಮಾನ ಕೆಳಕ್ಕಿಳಿಯುತ್ತಾ ಬಂದಿತು. ಕ್ರಮೇಣ ಸ್ತ್ರೀ ವೇದಾಭ್ಯಾಸಕ್ಕೆ ಅನರ್ಹಳು ಎನ್ನಿಸಿಕೊಂಡಳು. ವೇದಾಭ್ಯಾಸ ನಿಂತಕಾರಣದಿಂದಾಗಿ ಆಕೆಗೆ ಬಾಲ್ಯದಲ್ಲಿಯೆ ವಿವಾಹಮಾಡುವ ಪದ್ಧತಿ ರೂಢಿಯಲ್ಲಿ ಬಂದಿತು. ಗಂಡ ಸತ್ತ ಮೇಲೆ ಮತ್ತೆ ಮದುವೆಯಾಗುವ ಅವಕಾಶವನ್ನು ಆಕೆಗೆ ತಪ್ಪಿಸಲಾಯಿತು. ಹೀಗೆ ವೇದಗಳ ಕಾಲದಲ್ಲಿ ಪ್ರಪಂಚದ ಯಾವುದೇ ಸಮಾಜವು ತನ್ನ ಸ್ತ್ರೀಯರಿಗೆ ಕೊಡದಿದ್ದ ಸ್ಥಾನಮಾನಗಳನ್ನು, ಸ್ವಾತಂತ್ರ್ಯವನ್ನು ಅನುಭವಿಸಿದ ಆರ್ಯ ಸ್ತ್ರೀಯು ಕ್ರಿ. ಶ. 9 ನೆಯ ಶತಮಾನದ ವೇಳೆಗೆ ತನ್ನ ಎಲ್ಲ ಸ್ಥಾನಮಾನಗಳನ್ನೂ ಸ್ವಾತಂತ್ರ್ಯವನ್ನೂ

ಕಳೆದುಕೊಂಡಿದ್ದರೂ ಅದರ ಪರಿವೆಯೇ ಇಲ್ಲದೆ, ಕೂಪ ಮಂಡೂಕದಂತೆ, ತಾನು ಇದ್ದ ಸ್ಥಿತಿಯಲ್ಲಿಯೆ ತೃಪ್ತಿಯನ್ನು ಹೊಂದಿದ್ದಳು.

ಕ್ರಿ. ಶ. 9 ನೆಯ ಶತಮಾನದ ವೇಳೆಗೆ ಬ್ರಾಹ್ಮಣರಲ್ಲಿ ಸ್ತ್ರೀಯರಿಗೆ ವಿದ್ಯಾಭ್ಯಾಸದ ಹಕ್ಕು ತಪ್ಪಿಹೋಗಿ ಬಾಲ್ಯವಿವಾಹ ಪದ್ಧತಿ ಜಾರಿಗೆ ಬಂದಿತ್ತು. ಬ್ರಾಹ್ಮಣರಲ್ಲಿ ಆದ ಈ ಬದಲಾವಣೆಯು ಉಳಿದ ವರ್ಣತ್ರಯಗಳ ಮೇಲೆ ಅಷ್ಟಾಗಿ ಆದಂತೆ ಕಾಣುವುದಿಲ್ಲ. ಅದರಲ್ಲಿಯೂ ಕ್ಷತ್ರಿಯರ ಮೇಲೆ ಆದಂತೆ ಕಾಣುವುದಿಲ್ಲ. ಕರ್ಹಾಡದ ಶಿಲಾಹಾರ ಚಂದಲದೇವಿ ಆರನೆಯ ವಿಕ್ರಮಾದಿತ್ಯನನ್ನು ಸ್ವಯಂವರದಲ್ಲಿ ವರಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ವಿಜಯನಗರದ ಕಾಲದಲ್ಲಿ ಬಂದಿದ್ದ ವಿದೇಶಿ ಪ್ರವಾಸಿಗರಾದ ಪಾಯೆಸ್ ಮತ್ತು ನ್ಯೂನಿಜ್ ಅವರ ಹೇಳಿಕೆಗಳಿಂದ ರಾಜರೊಂದಿಗೆ ರಾಣಿಯರೂ ಯುದ್ಧರಂಗಕ್ಕೆ ತೆರಳುತಿದ್ದುದು ತಿಳಿದುಬರುತ್ತದೆ. (ರಾಷ್ಟ್ರಕೂಟರ ಮೂರನೆಯ ಗೋವಿಂದ ಮತ್ತು ಗುಂಡಮಬ್ಬೆಯರ ಮಗನಾದ ಅಮೋಘ ವರ್ಷ ನೃಪತುಂಗನು ಹುಟ್ಟಿದುದು, ಗೋವಿಂದನು ಉತ್ತರದ ದಿಗ್ವಿಜಯದಿಂದ ಹಿಂದಿರುಗುತ್ತಿದ್ದಾಗ, ವಿಂಧ್ಯೆಯ ಬಳಿಯಲ್ಲಿ.) ಬಹುಶಃ ರಾಣಿಯರಿಗೆ ಸೈನಿಕ ಶಿಕ್ಷಣವನ್ನು ಕೊಡುತ್ತಿದ್ದರೆಂದು ಕಾಣುತ್ತದೆ. ಪುರುಷರು ಮಾಡುವ ಎಲ್ಲ ಕೆಲಸಗಳನ್ನು ಸ್ತ್ರೀಯರೂ ಅರಮನೆಯ ಒಳಗಡೆ ಮಾಡುತ್ತಿದ್ದರು. ಕತ್ತಿ, ಗುರಾಣಿಗಳನ್ನು ಹಿಡಿದು ಕಾದಾಡಬಲ್ಲವರಾಗಿದ್ದರು. ಮಲ್ಲಯುದ್ಧವೂ ಅವರಿಗೆ ಗೊತ್ತಿದ್ದಿತು. ಅಶ್ವ ಸವಾರಿಗಳಲ್ಲಿ ನಿಪುಣೆಯರಾಗಿರುತ್ತಿದ್ದರು. ಸೈನಿಕ ಶಿಕ್ಷಣದಂತೆಯೆ ಸಂಗೀತ, ನರ್ತನ, ಚಿತ್ರಕಲೆ, ಕಾವ್ಯಾಲಂಕಾರಗಳಲ್ಲಿಯೂ ಅವರಿಗೆ ಶಿಕ್ಷಣವನ್ನು ಕೊಡಲಾಗುತ್ತಿತ್ತು. ಅಂತಃಪುರದ ವ್ಯವಹಾರಗಳ ಲೆಕ್ಕಪತ್ರಗಳನ್ನಿಡುವುದು ಅವರಿಗೆ ಗೊತ್ತಿತ್ತು. ಇಂಥ ವೈವಿಧ್ಯಮಯವಾದ ಶಿಕ್ಷಣದಿಂದ ರಾಣಿಯರು ರಾಜರಿಗೆ ರಾಜಕಾರ್ಯದಲ್ಲಿ ಸಲಹೆಗಳನ್ನು ಕೊಡಬಲ್ಲವರಾಗಿದ್ದರು. ಸಂದರ್ಭ ಒದಗಿಬಂದರೆ ಆಡಳಿತವನ್ನು ನಡೆಸಬಲ್ಲವರಾಗಿದ್ದರು. ಹಾಗೆ ಸನ್ನಿವೇಶ ಸಂದರ್ಭಗಳಿಂದಾಗಿ ಆಡಳಿತ ನಡೆಸಿ ಮಿಂಚಿದ ಕೆಲವೇ ರಾಣಿಯರ ಸ್ಥೂಲ ಪರಿಚಯ ಮುಂದಿದೆ.

* * * *

ಶಾತವಾಹನರ ಮೂಲ, ಹೆಸರಿನ ಉಗಮ ಇತ್ಯಾದಿಗಳ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಆದರೂ ಬಹುತೇಕ ವಿದ್ವಾಂಸರು ಶಾತವಾಹನ ರಾಜರ ಹೆಸರುಗಳು ಕನ್ನಡದ ಹೆಸರುಗಳನ್ನು ಹೋಲುತ್ತವೆಂದು, ಶಾತವಾಹನರ ಮೂಲ ಸ್ಥಳವಾದ ಶಾತಾಹನಿರಟ್ಟ (ಶಾತವಾಹನ ರಾಷ್ಟ್ರ)ವು ಕನ್ನಡನಾಡಿನಲ್ಲಿರುವುದರಿಂದಲೂ, ಶಾತವಾಹನರನ್ನ ಕನ್ನಡಿಗರೆಂದೇ ಇಲ್ಲಿ ಪರಿಗಣಿಸಲಾಗಿದೆ. ಶಾತವಾಹನರು ಪಿತೃಪ್ರಧಾನವಾದ ಸಮಾಜಕ್ಕೆ ಸೇರಿದವರು. ಆದರೂ ನಮ್ಮ ಹೆಸರಿನ

ಮುಂದೆ ತಮ್ಮ ಮಾತೆಯರ ಹೆಸರನ್ನು ಸೇರಿಸಿಕೊಳ್ಳುತ್ತಿದ್ದರು (ಉದಾ : ಗೌತಮೀ ಪುತ್ರ, ವಾಶಿಷ್ಠೀ ಪುತ್ರ...). ರಾಣಿಯರು ಆಡಳಿತದಲ್ಲಿ ಪಾಲ್ಗೊಳ್ಳುತ್ತಿದ್ದುದನ್ನು ಇದು ಸೂಚಿಸುತ್ತದೆ. ಮೊದಲನೆಯ ಶಾತಕರಣಿಯ ಮರಣಾನಂತರ ಅವನ ರಾಣಿ **ನಾಯನಿಕ (ನಾಗನಿಕ)**, ತನ್ನ ಅಪ್ರಾಪ್ತ ವಯಸ್ಸಿನ ಮಕ್ಕಳು, ವೇದಸಿರಿ ಮತ್ತು ಸತಿಸಿರಿ, ಅವರ ಪರವಾಗಿ ರಾಜ್ಯಭಾರ ನಡೆಸಿದಳು. ತನ್ನ ಪುತ್ರನ ಸಾಧನೆಯನ್ನು ಬಣ್ಣಿಸುವುದಕೋಸ್ಕರ ನಾಸಿಕದಲ್ಲಿ ಒಂದು ಶಾಸನವನ್ನು ಬರೆಸಿದಳು.

ಇಮ್ಮಡಿ ಪುಲಿಕೇಶಿಯ ಎರಡನೆಯ ಮಗನಾದ ಚಂದ್ರಾದಿತ್ಯನಿಗೆ **ವಿಜಯ ಭಟ್ಟಾರಿಕೆ** ಎಂಬ ರಾಣಿಯಿದ್ದಳು. ತನ್ನ ಪತಿ ಊರಿನಲ್ಲಿ ಇಲ್ಲದಿದ್ದಾಗ ಇವಳು ಕೆಲವು ಕಾಲ ರಾಜ್ಯಭಾರ ನಡೆಸಿದಂತೆ ತೋರುತ್ತದೆ. ಮುಂದೆ ಈಗಿನ ಸಾವಂತ ವಾಡಿ ಪ್ರದೇಶವನ್ನು ಮಾಂಡಳಿಕಳಾಗಿ ಆಳಿದಳು. ಈಕೆ ಕಾಳಿದಾಸಾದಿಗಳಿಗೆ ಸಮಾನವಾದ ಕವಿತಾಶಕ್ತಿಯನ್ನು ಹೊಂದಿದ್ದವಳು. ತನ್ನನ್ನು "ನೀಲೋತ್ಪಲದಲ ಶ್ಯಾಮಾಂ ವಿಜ್ಜಿಕಾಂ" ಎಂದೂ 'ಸರಸ್ವತಿ ಕಾರ್ನಾಟೀ ವಿಜಯಾಂಕಾ' ಎಂದೂ ಕರೆದು ಕೊಂಡಿದ್ದಾಳೆ. ''ಕರ್ಣಾಟ ರಾಜಪ್ರಿಯಾ' ಎಂದು ತನ್ನನ್ನು ಕರೆದುಕೊಂಡಿರುವ ಇವಳ ಕೃತಿ "ಕೌಮುದೀ ಮಹೋತ್ಸವ" ಎಂಬ ಐತಿಹಾಸಿಕ ಸಂಸ್ಕೃತಕಾವ್ಯ. ರಾಜಶೇಖರ ಇವಳನ್ನು ಕರ್ಣಾಟೀ ಎಂದು ಕರೆದಿದ್ದಾನೆ.

ಚೋಳಕುಲ ಪ್ರಳಯನೂ ಸಾಹಸಭೀಮನೂ ಆದ ಕಲ್ಯಾಣದ ಚಾಲುಕ್ಯ ಸತ್ಯಾಶ್ರಯ ಇರಿವ ಬೆಡಂಗನ ಸಹೋದರ ದಶವರ್ಮನ ಮಗಳು **ಅಕ್ಕಾದೇವಿ.** ಹಾನಗಲ್ಲ ಕದಂಬ ಮಹಾಮಂಡಲೇಶ್ವರನಾದ ಜಯಸಿಂಹನನ್ನು ಈಕೆ ಮದುವೆ ಯಾಗಿದ್ದಳು. ಜಯಸಿಂಹನ ಮರಣಾನಂತರ ಅಪ್ರಾಪ್ತ ವಯಸ್ಕರಾದ ತನ್ನ ಮಕ್ಕಳು ಮಯೂರವರ್ಮನ ಪರವಾಗಿ, ಅವನ ಮರಣಾನಂತರ ಎರಡನೆಯ ಮಗನಾದ ತೈಲ ಅಥವಾ ತೋಯಿಮದೇವನ ಪರವಾಗಿ ರಾಜ್ಯಭಾರ ಮಾಡಿದಳು. ತೋಯಿಮದೇವ ಪ್ರೌಢವಯಸ್ಕನಾದ ಮೇಲೂ ಆಡಳಿತದಲ್ಲಿ ಅವನಿಗೆ ಅಕ್ಕಾದೇವಿ ನೆರವಾಗುತ್ತಿದ್ದಳು. ಅಕ್ಕಾದೇವಿಯ ಸಹೋದರನಾದ ಎರಡನೆಯ ಜಯಸಿಂಹನು ಅಕ್ಕಾದೇವಿಯನ್ನು ಕಿಸುಕಾಡು–70ರ ಮಂಡಳಿಕನನ್ನಾಗಿ ನೇಮಿಸಿಕೊಂಡಿದ್ದ. ಇದಲ್ಲದೆ ಆಕೆ ತೊರಗೆರೆ–6, ಮಾಸವಾಡಿ–140, ಪಾನುಗಲ್–500 ಮತ್ತು ಬನವಾಸಿ–1200 ನಾಡುಗಳಿಗೆ ಕೂಡುರಾಣಿಯಾಗಿದ್ದಳು. ತನ್ನ ಸಹೋದರ ಎರಡನೆಯ ಜಯಸಿಂಹನ ರಾಜಕಾರ್ಯಗಳಲ್ಲಿ ಈಕೆ ನೆರವಾಗುತ್ತಿದ್ದಳು. ಈ ಎರಡನೆಯ ಜಯಸಿಂಹ ಚೋಳರ ಜೊತೆಯಲ್ಲಿ ಯುದ್ಧದಲ್ಲಿ ತೊಡಗಿದ್ದಾಗ ಬಂಡೆದ್ದ ಗೋಕಾಗೆಯ ಕೋಟೆಯ ಅಧಿಪತಿ ಬರಮನನ್ನು ಸದೆಬಡಿದವಳು ಅಕ್ಕಾ-ದೇವಿ. ಸುಮಾರು ಮೂವತ್ತು ವರ್ಷಕ್ಕೂ ಹೆಚ್ಚಾಗಿ ಈಕೆ ಮಾಂಡಳಿಕಳಾಗಿದ್ದಳು. ತನ್ನ ಸಹೋದರ ಐದನೆಯ ವಿಕ್ರಮಾದಿತ್ಯನ ನೆನಪಿಗಾಗಿ ವಿಕ್ರಮಪುರವನ್ನು ಕಟ್ಟಿ

ಸಿದಳು. ವಿಕ್ರಮಪುರ ಬಹುಕಾಲ ಇವಳ ನೆಲೆಬೀಡಾಗಿದ್ದುದರಿಂದ ಅದನ್ನು ಅರಸಿಯ ಬೀಡು ಎಂಬುದಾಗಿ ಕರೆಯುತ್ತಿದ್ದರು. ಈಕೆಗೆ 'ಗುಣದ ಬೆಡಂಗಿ', 'ಏಕವಾಕ್ಯೆ', 'ರಣಭೈರವಿ' ಮುಂತಾದ ಬಿರುದುಗಳಿದ್ದುವು.

ಕಲ್ಯಾಣದ ಚಾಲುಕ್ಯ ತ್ರೈಲೋಕಮಲ್ಲ ಒಂದನೆ ಸೋಮೇಶ್ವರನ ಪಟ್ಟದ ರಾಣಿ **ಮೈಳಲದೇವಿ**. ಇವಳ ಕೈಕೆಳಗಿನ ಅಧಿಕಾರಿ ಇವಳ ಸೂಚನೆಯಂತೆ ಚಿಲ್ಲಾಕಾಚಾರ್ಯನೆಂಬ ಶೈವ ಓಜನಿಗೆ ದತ್ತಿಯನ್ನು ಬಿಟ್ಟುಕೊಟ್ಟುದಾಗಿ ತಿಳಿದು ಬರುತ್ತದೆ. ತಿಳುವಳ್ಳಿಯ ಶಾಸನದಿಂದ ಇವಳ ಕೈಕೆಳಗಿನ ಆ ಅಧಿಕಾರಿಯ ಹೆಸರು ಚಟ್ಟಿಮಯ್ಯ ಎಂಬುದಾಗಿ ತಿಳಿದುಬರುತ್ತದೆ. ರಾಜಾದಿತ್ಯನನ್ನು ಕೊಂದ ಮಹಾಮಂಡಲೇಶ್ವರ ಪೆರ್ಮಾಳ ಮಾರರಸ (ಮಾರರಸ ಅಥವಾ ಮಾರಪೆರ್ಮಾಳದೇವ) ಈಕೆಯ ಅಂಕಕಾರನಾಗಿದ್ದನು. ಕ್ರಿ.ಶ. 1053ರ ಒಂದು ಶಾಸನದಿಂದ ಈಕೆ ಬನವಾಸಿ ನಾಡನ್ನು ಆಳುತ್ತಿದ್ದುದು ತಿಳಿದುಬರುತ್ತದೆ. ಈಕೆಗೆ ಅಂತಃಪುರ ಮುಖಮಂಡನೆ, ದಾನ ಚಿಂತಾಮಣಿ ಮುಂತಾದ ಬಿರುದುಗಳಿದ್ದುವು.

ಕಲ್ಯಾಣದ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಮಗಳು **ಮೈಳಲದೇವಿ** (ಮೇಲೆ ಹೇಳಿದ ಮೈಳಲದೇವಿಯಿಂದ ಭಿನ್ನಳಾದವಳು ಈಕೆ). ಈಕೆ ಧೀರೆ. ಗೋವೆಯ ಕದಂಬ ಜಯಕೇಶಿ (ಕ್ರಿ. ಶ. 1126-47) ಯನ್ನು ಮದುವೆಯಾಗಿದ್ದಳು. ಹಲಸಿಗೆ – 12,000 ವನ್ನು ವಿಕ್ರಮಾದಿತ್ಯನು ಜಯಕೇಶಿಗೆ ಉಡುಗೊರೆಯಾಗಿ ಕೊಟ್ಟಿದ್ದನು. ಮೈಳಲದೇವಿ ತನ್ನ ಪತಿಯೊಡನೆ ಸ್ಥಾನಕುಂದೂರು ನಾಡನ್ನು ಆಳುತ್ತಿದ್ದಳು. ಧಾರವಾಡ – ಹುಬ್ಬಳ್ಳಿ ಪ್ರದೇಶಗಳ ಮೇಲೆ ಆಕೆಗೆ ಅಧಿಕಾರವಿತ್ತು. ಧಾರವಾಡ ತಾಲ್ಲೂಕಿನ ಗೂಗಿಕಟ್ಟಿಯಲ್ಲಿರುವ ಕೇಶವ ದೇವಾಲಯವನ್ನು ಕಟ್ಟಿಸಿದವಳು ಈಕೆ. ಕಲಘಟಗಿ ಬಳಿಯ ದುಮಗಳ್ಳಿಯ ಮೈಳಲೇಶ್ವರ ಮಂದಿರ ಈಕೆಯ ಹೆಸರಲ್ಲಿದೆ. ಸೌರಾಷ್ಟ್ರದ ಸೋಮನಾಥನಲ್ಲಿ ಈಕೆಗೆ ಭಕ್ತಿ. ಸೋಮನಾಥನ ದೈನಂದಿನ ಪೂಜೆಗಾಗಿ ಕಾಕನೂರು ಗ್ರಾಮವನ್ನು ದತ್ತಿಯಾಗಿ ಕೊಟ್ಟಿದ್ದಳು. ಧರ್ಮಪರಾಯಣೆಯಾದ ಈಕೆ ಸ್ಥಾನಕುಂದೂರಿನಿಂದ ಮೂವತ್ತು ವರ್ಷಗಳಿಗೂ ಹೆಚ್ಚುಕಾಲ ಆಳಿದಳು.

ವಿಷ್ಣುವರ್ಧನನ ಅನೇಕ ರಾಣಿಯರಲ್ಲಿ **ಬೊಮ್ಮಲದೇವಿಯೂ** ಒಬ್ಬಳು. ಈಕೆ ದಕ್ಷ ಆಡಳಿತಗಾರಳೂ, ವಿದ್ಯಾಪಕ್ಷಪಾತಿಯೂ, ಧರ್ಮಪರಾಯಣೆಯೂ, ಅಶ್ವವಿದ್ಯಾನಿಪುಣೆಯೂ ಆಗಿದ್ದಳು. ಬಹುಶಃ ಸೈನಿಕ ಶಿಕ್ಷಣವೂ ಈಕೆಗೆ ದೊರೆಕಿತ್ತು ಎಂದು ಕಾಣುತ್ತದೆ. ಆಸುಂಡಿ–500, ನೀರಗುಂದ–300 ಮುಂತಾದ ಪ್ರದೇಶಗಳನ್ನು ಈಕೆ ಆಳುತ್ತಿದ್ದಳು. ಎರಕಗವುಂಡ ಎಂಬಾತ ಇವಳ ಕೈಕೆಳಗೆ ಕೀಸೂರು, ಹಾರುವನ ಹಳ್ಳಿಗಳ ನಾಳಪ್ರಭುವಾಗಿದ್ದನು. ಈಕೆ ನೀರಗುಂದದಲ್ಲಿ ಒಂದು

ಅಗ್ರಹಾರವನ್ನು ಸ್ಥಾಪಿಸಿದಳು. ನಾಗಮಂಗಲದ ಶಂಕರನಾರಾಯಣ ದೇವಾಲಯ ವನ್ನು ಜೀರ್ಣೋದ್ಧಾರ ಮಾಡಿಸಿದಳು. ಅರಸೀಕೆರೆಯ ಬಳಿ ಇವಳ ಹೆಸರಿನಲ್ಲಿ ಒಂದು ಅಶ್ವ ಶಿಕ್ಷಣ ಶಾಲೆಯಿತ್ತು. ಈಕೆಗೆ ಅಶ್ವಗಳ ಬಗ್ಗೆ, ಅಶ್ವದಳದ ಬಗ್ಗೆ ವಿಶೇಷವಾದ ಆಸಕ್ತಿಯಿತ್ತು. ವಿಷ್ಣುವರ್ಧನನ ದಿಗ್ವಿಜಯ ಯಾತ್ರೆಗಳಲ್ಲಿ ಈಕೆ ಅವನ ಜೊತೆಯಲ್ಲಿರುತ್ತಿದ್ದಳು. 'ಪಾನುಂಗಲ್' ನೆಲೆವೀಡಿನಲ್ಲಿ ಈಕೆ ವಿಷ್ಣು ವರ್ಧನನ ಜೊತೆಯಲ್ಲಿ ಇದ್ದಂತೆ ಶಾಸನಗಳಿಂದ ತಿಳಿದುಬರುತ್ತದೆ.

ಇಮ್ಮಡಿ ಬಲ್ಲಾಳನ ರಾಣಿಯರಲ್ಲಿ **ಉಮಾದೇವಿಯು** ರಾಜ್ಯದ ಆಡಳಿತದ ವಿಚಾರದಲ್ಲಿ ತೀವ್ರವಾದ ಆಸಕ್ತಿಯನ್ನು ವಹಿಸುತ್ತಿದ್ದಳು. ಈಕೆ ಸಾಮ್ರಾಜ್ಯದ ಒಬ್ಬ ಹಿರಿಯ ಅಧಿಕಾರಿಯ ಮಗಳು. ಶಾಸನವೊಂದು ಬಲ್ಲಾಳನನ್ನು "ಉಮಾ ಕಾಮಿನೀ ಜೀವಿತೇಶ್ವರ" ಎಂದು ಕರೆದಿದೆ. ಉಮಾದೇವಿಯನ್ನು "ಗೀತವಾದ್ಯ ನೃತ್ಯ ಚತುರೆ", "ವೀರಬಲ್ಲಾಳನ ಸರ್ವಾಂಗ ಸುಂದರಿಯಪ್ಪ ಪಿರಿಯರಸಿ" ಎಂದು ಶಾಸನಗಳು ಕರೆದಿವೆ. ಕಲ್ಯಾಣದ ನಾಲ್ಕನೆ ಸೋಮೇಶ್ವರನು ಉತ್ತರದಿಂದ ಸೇವುಣರ ಮತ್ತು ದಕ್ಷಿಣದಿಂದ ಹೊಯ್ಸಳರ ದಾಳಿಯನ್ನು ಎದುರಿಸಲಾರದೆ ಬನವಾಸಿಗೆ ಹಿಂತೆಗೆದ ಮೇಲೆ ಕಲ್ಯಾಣದ ಚಾಲುಕ್ಯರ ಸಾಮಂತರಾಗಿದ್ದ ಬೆಳಗು ವರ್ತಿಯ ಸಿಂಧರು ಹೊಯ್ಸಳರಿಗೆ ತಲೆಬಾಗದೆ ಪ್ರತಿಭಟಿಸಿ ನಿಂತರು. ಅವರಿಗೆ ಸೇವುಣರ ಬೆಂಬಲವಿತ್ತು. ಇಮ್ಮಡಿ ಬಲ್ಲಾಳ ಸೇವುಣರ ಮೇಲೆ ಯುದ್ಧಕ್ಕೆ ಹೋಗಿದ್ದಾಗ ಹೊಯ್ಸಳರ ಮೇಲೆ ಬಂದೆದ್ದ ಬೆಳಗುವರ್ತಿಯ ಸಿಂಧವಂಶದ ಮಲ್ಲಿದೇವನನ್ನು ಉಮಾದೇವಿಯು ಅವನ ರಾಜಧಾನಿಯಾದ ಬೆಳಗುವರ್ತಿಯಲ್ಲೇ ಸೋಲಿಸಿ ಶರಣಾಗುವಂತೆ ಮಾಡಿದಳು. ಉಮಾದೇವಿಯ ಈ ಸಾಹಸವನ್ನು ಶಾಸನವೊಂದು ಕೊಂಡಾಡಿದೆ.

ಅಹ್ಮದ್‌ನಗರದ ಹುಸೇನ್ ನಿಜಾಂಷಾರ ಪುತ್ರಿ **ಚಾಂದ್‌ಬೀಬಿ.** ಬಿಜಾಪುರದ ಅಲಿ ಆದಿಲ್‌ಷಾನೊಂದಿಗೆ ಮದುವೆಯಾಗಿತ್ತು. ಅಲಿ ಆದಿಲ್‌ಷಾ ತೀರಿಕೊಂಡಾಗ ಅವನ ಸೋದರ ಪುತ್ರ ಎರಡನೆಯ ಇಬ್ರಾಹಿಂಗೆ ಪಟ್ಟವಾಯಿತು. ಆವರೆ ಇಬ್ರಾಹಿಂ ಕೇವಲ ಒಂಬತ್ತು ವರ್ಷದ ಬಾಲಕನಾಗಿದ್ದುದರಿಂದ ರಾಜ್ಯದ ಆಡಳಿತವನ್ನು ರಾಜ್ಯ ರಕ್ಷಕಿಯಾದ ಚಾಂದ್‌ಬೀಬಿಯೆ ನೋಡಿಕೊಂಡಳು. ಪ್ರಧಾನ ಮಂತ್ರಿಯನ್ನು ಕೊಂದು ರಾಜನಾಗಬಯಸಿದ್ದ ಸೇನಾನಿ ಕಿಶ್ವರ್‌ಖಾನನನ್ನು ರಾಜ್ಯದಿಂದ ಓಡಿ ಹೋಗುವಂತೆ ಮಾಡಿದಳು. ಅನಂತರ ಬಂದೆದ್ದ ಇಸ್ಮಾಯಿಲ್ ಎಂಬ ರಾಜಪುತ್ರ ನನ್ನು ನಿಗ್ರಹಿಸಿದಳು. ಹೀಗೆ ರಾಜ್ಯವನ್ನು ನಿಷ್ಕಂಟಕವನ್ನಾಗಿ ಮಾಡಿ ಅದನ್ನು ಎರಡನೆಯ ಇಬ್ರಾಹಿಂಗೆ ವಹಿಸಿ ತನ್ನ ತೌರಾದ ಅಹ್ಮದ್‌ನಗರಕ್ಕೆ ಹಿಂತಿರುಗಿದಳು. ಅಲ್ಲಿ ಅಧಿಕಾರಕ್ಕಾಗಿ ನಡೆಯುತ್ತಿದ್ದ ಒಳಜಗಳವನ್ನು ಹತ್ತಿಕ್ಕಿ ತಾನೇ ಅಧಿಕಾರದ ಸೂತ್ರಗಳನ್ನು ಕೈಗೆ ತೆಗೆದುಕೊಂಡು ಅಹ್ಮದ್‌ನಗರದ ಮೇಲೆ ನಡೆದ ದಾಳಿಯನ್ನು

ಎದುರಿಸಿದಳು. ಹೀಗೆ ಚಾಂದ್‌ಬೀಬಿ ತನ್ನ ಧೈರ್ಯ, ಸಾಹಸ ಮತ್ತು ಆಡಳಿತ ಸಾಮರ್ಥ್ಯಗಳಿಂದಾಗಿ ಭಾರತದ ಇತಿಹಾಸದಲ್ಲಿ ಒಂದು ಗಣ್ಯಸ್ಥಾನವನ್ನು ಪಡೆದಿದ್ದಾಳೆ.

ಪುತ್ತಿಗೆಯಿಂದ ಆಳುತ್ತಿದ್ದ ಜೈನ ರಾಜಮನೆತನದ ಒಂದು ಶಾಖೆ ಯಾವುದೋ ಕಾರಣದಿಂದ ಉಳ್ಳಾಲದಿಂದ ಆಳಲು ಆರಂಭಿಸಿತು. ಈ ಮನೆತನ ಅಳಿಯ ಸಂತಾನದ ಕಟ್ಟನ್ನು ಆಚರಿಸುತ್ತಿದ್ದ ಮನೆತನ. ಆದ್ದರಿಂದ ಸ್ತ್ರೀಯರೇ ಮನೆಯ ಯಜಮಾನಿಯರಾಗುತ್ತಿದ್ದರು - ರಾಣಿಯರಾಗುತ್ತಿದ್ದರು. ಹದಿನಾರನೆಯ ಶತಮಾನದ ಮಧ್ಯದಲ್ಲಿ **ಅಬ್ಬಕ್ಕದೇವಿ (ಅಂಬಿಕಾದೇವಿ)** ರಾಣಿಯಾದಳು. ಆ ಕಾಲದಲ್ಲಿ ಕರಾವಳಿ ಪ್ರದೇಶದಲ್ಲಿ ಪೋರ್ತುಗೀಸರು ಪ್ರಬಲರಾಗಿದ್ದರು. ಪೋರ್ತುಗೀಸರು ಉಳ್ಳಾಲವನ್ನು ಸುಲಿದು ಮಂಗಳೂರಿನಲ್ಲಿ ಒಂದು ಕೋಟೆಯನ್ನು ಕಟ್ಟಿ ಅಲ್ಲಿ ನೆಲೆ ನಿಂತರು. ಚೌಟವಂಶದ ರಾಣಿಯಾದ ಅಬ್ಬಕ್ಕದೇವಿ ದೂರದೃಷ್ಟಿಯಿಂದ, ಬಂಗ ಮನೆತನದೊಡನೆ ವಿರಸವಿದ್ದರೂ, ಬಂಗ ಮನೆತನದ ರಾಜ ಕಾಮರಾಯನನ್ನು ಮದುವೆಯಾದಳು. ಆದರೂ ಅಬ್ಬಕ್ಕದೇವಿ ಮತ್ತು ಕಾಮರಾಯರ ನಡುವಣ ವಿರಸ ಕಡಿಮೆಯಾಗಲಿಲ್ಲ. ಅಬ್ಬಕ್ಕದೇವಿ ಮತ್ತು ಕಾಮರಾಯರಿಗೆ ಒಂದು ಹೆಣ್ಣು ಮಗುವಾದ ಮೇಲೆ ಈ ವಿರಸ ಮತ್ತಷ್ಟು ಹೆಚ್ಚಾಯಿತು. ಈ ಎರಡು ಮನೆತನಗಳ ನಡುವಣ ದ್ವೇಷವನ್ನು ಕಡಿಮೆ ಮಾಡಲು ಅಬ್ಬಕ್ಕ ಮತ್ತು ಕಾಮರಾಯರ ಮಗಳಾದ **ಕಿರಿಯ ಅಬ್ಬಕ್ಕ** ಕಾಮರಾಯನ ಸೋದರಳಿಯನಾದ ಬಂಗರಾಜ ಲಕ್ಷ್ಮಪ್ಪರಸನನ್ನು ಮದುವೆಯಾದಳು. ಇವರಿಬ್ಬರ ನಡುವೆ ಯಾವುದೋ ಕಾರಣಕ್ಕಾಗಿ ಹುಟ್ಟಿಕೊಂಡ ವಿರಸ ಹೆಮ್ಮರವಾಗಿ ಲಕ್ಷ್ಮಪ್ಪರಸ ಬೈಲಂಗಡಿಯಿಂದ ಆಳುತ್ತಿದ್ದ ಮೂಲ ಮನೆತನದ ರಾಣಿ ಶಂಕರದೇವಿಯನ್ನು ಮದುವೆಯಾದನು. ಕಿರಿಯ ಅಬ್ಬಕ್ಕ ಇದನ್ನು ಗಮನಿಸದೆ ಉಳ್ಳಾಲದಿಂದ ತನ್ನ ರಾಜ್ಯವನ್ನು ಹಿಂದಿನಂತೆಯೆ ಆಳುತ್ತಿರಲು ಲಕ್ಷ್ಮಪ್ಪರಸ ಪೋರ್ತುಗೀಸರ ನೆರವಿನಿಂದ ಅಬ್ಬಕ್ಕಳನ್ನು ಬಗ್ಗುಬಡಿಯಲು ಯತ್ನಿಸಿದ. ಆಗ ಅಬ್ಬಕ್ಕ ಕೆಳದಿಯ ವೆಂಕಟಪ್ಪನ ನೆರವಿನಿಂದ ಬಂದ ಕುತ್ತನ್ನು ನಿವಾರಿಸಿಕೊಂಡಳು. ಪೀತ್ರೊಡೆಲೆವಲೆ ಎಂಬ ವಿದೇಶಿ ಪ್ರವಾಸಿ ಕಿರಿಯ ಅಬ್ಬಕ್ಕಳ ಕಾರ್ಯದಕ್ಷತೆಯನ್ನು ಮುಕ್ತಕಂಠದಿಂದ ಹೊಗಳಿದ್ದಾನೆ. ಹಿರಿಯ ಅಬ್ಬಕ್ಕದೇವಿಯ ದೂರದೃಷ್ಟಿಯೂ, ಕಿರಿಯ ಅಬ್ಬಕ್ಕದೇವಿಯ ಸ್ವಾಭಿಮಾನವೂ ಪ್ರಶಂಸಾರ್ಹವಾದುವು.

ಸೋದೆಯ ರಾಜಮನೆತನದ ರಾಜಪುತ್ರಿ **ಮಲ್ಲವ್ವ** ಬೆಳವಡಿಯ ಈಶಪ್ರಭುವಿನ ಮಡದಿ. ಬೆಳವಡಿ ಬಿಜಾಪುರಕ್ಕೆ ಸಾಮಂತವಾಗಿದ್ದ ಒಂದು ಚಿಕ್ಕ ದೇಸಗತಿ. ಈಶಪ್ರಭು ಆದಿಲ್‌ಷಾನ ವಿರುದ್ಧ ಬಂಡೆದ್ದು 'ಹಿಂದವೀ ಸ್ವರಾಜ್ಯ' ಸ್ಥಾಪನೆಯಲ್ಲಿ ತೊಡಗಿದ್ದ ಶಿವಾಜಿಯ ಸ್ನೇಹವನ್ನು ಬೆಳೆಸಬೇಕೆಂದಿದ್ದ. ಈ ವಿಷಯವನ್ನು

ತಿಳಿಯುವ ಶಿವಾಜಿ ಜಿಂಜಿ, ತಂಜಾವೂರು, ಬೆಂಗಳೂರುಗಳಿಂದ ಹಿಂದಿರುಗಿ ಬರುತ್ತಿದ್ದಾಗ ಅವನ ಸೇನಾನಿ ದಾದಾಜಿ ಬೆಳವಡಿಯ ಮೇಲೆ ದಾಳಿಮಾಡಿದ, ಇದರಿಂದ ಈಶಪ್ರಭು ದಿಗ್ಭ್ರಮೆಗೊಂಡರೂ ಮತ್ತೆ ಚೇತರಿಸಿಕೊಂಡು ಕೋಟೆಯ ಬಾಗಿಲುಗಳನ್ನು ಭದ್ರಪಡಿಸಿ ದಾಳಿಯನ್ನು ಯಶಸ್ವಿಯಾಗಿ ಎದುರಿಸಿದ. ಯುದ್ಧ ಮಧ್ಯದಲ್ಲಿ ಈಶಪ್ರಭು ಮರಣಹೊಂದಿ ಬೆಳವಡಿಯ ಸೈನಿಕರಲ್ಲಿ ಗೊಂದಲವುಂಟಾಗಿ ಮರಾಠ ಸೈನಿಕರು ಕೋಟೆಯನ್ನು ಹತ್ತಿ ಒಳಗೆ ಬಂದ ಸಂದರ್ಭದಲ್ಲಿ, ಈಶಪ್ರಭುವಿನ ಮಡದಿ ಮಲ್ಲವ್ವ ಸೈನ್ಯದ ಮುಂದಾಳುತನವನ್ನು ವಹಿಸಿ ಸೈನಿಕರನ್ನು ಹುರಿದುಂಬಿಸಿ ಮರಾಠ ಸೈನಿಕರನ್ನು ಕೋಟೆಯಿಂದ ಹೊರಗಟ್ಟಿ ಕೋಟೆಯ ಬಾಗಿಲುಗಳನ್ನು ಭದ್ರಪಡಿಸಿದಳು. ಹೀಗೆ ಹೆಂಗಸೊಬ್ಬಳಿಂದ ಅಪಮಾನಿತನಾದ ಶಿವಾಜಿ ಮುತ್ತಿಗೆಯನ್ನು ತೆಗೆಯದೆ ಇರಲು, ಕೋಟೆಯ ಒಳಗಡೆ ಅನ್ನಾಹಾರಾದಿಗಳು ಮುಗಿಯುವವರೆಗೂ ಹೋರಾಡಿ ಅನಂತರ ಕೋಟೆಯ ಬಾಗಿಲುಗಳನ್ನು ತೆರೆದು ಪ್ರಾಣವಿರುವವರೆಗೂ ಹೋರಾಡುವ ನಿಶ್ಚಯದಿಂದ ಮರಾಠ ಸೈನಿಕರ ಮೇಲೆ ಬಿದ್ದಳು. ಆದರೆ ಹೀಗೆ ಹೋರಾಡುತ್ತಿರುವಾಗ ಸೈನಿಕರಿಗೆ ಸೆರೆಸಿಕ್ಕಿದಳು. ಶಿವಾಜಿಗೆ ತನ್ನ ತಪ್ಪಿನ ಅರಿವಾದ ಮೇಲೆ ಮಲ್ಲವ್ವನಲ್ಲಿ ಕ್ಷಮಾಪಣೆಯನ್ನು ಕೇಳಿ ಅವಳ ಅಪ್ರಾಪ್ತ ಪುತ್ರನ ರಕ್ಷಕನಾಗಿರಲು ಒಪ್ಪಿಕೊಂಡ. ಯಾದವಾಡದ ದೇವಾಲಯವೊಂದರಲ್ಲಿ ಶಿವಾಜಿ ರಾಣಿಯ ಪುತ್ರನಿಗೆ ತಾನು ರಕ್ಷಕನೆಂದು ಸೂಚಿಸಿ ಹಾಲೂಡುತ್ತಿರುವ ದೃಶ್ಯದ ಉಬ್ಬುಶಿಲ್ಪವೊಂದು ಇಂದಿಗೂ ಇದೆ. ಚಿಕ್ಕ ದೇಸಗತಿ ಬೆಳವಡಿಯ ಮಲ್ಲವ್ವಳ ಪರಾಕ್ರಮ ಸ್ಥೈರ್ಯಗಳಿಗೆ ಸ್ಮಾರಕ, ಆ ಶಿಲ್ಪ !

ಕೆಳದಿಯ ಹಿರಿಯ ಸೋಮಶೇಖರ ನಾಯಕನ ಮಡದಿ **ಚೆನ್ನಮ್ಮಾಜಿ** ಕೋಟಿಪುರದ ಸಿದ್ದಪ್ಪಸೆಟ್ಟರ ಕುವರಿ. ಮದುವೆಯಾದ ತರುಣದಲ್ಲೆ ವ್ಯಸನಾಸಕ್ತನಾದ ಸೋಮಶೇಖರ ಜಿನ್ನೊಪಂತನ ನೇತೃತ್ವದಲ್ಲಿ ಬಂದ ವಿಜಾಪುರದ ದಂಡಿಗೆ ಸೋತು ಸತ್ತುಹೋದನು. ಸ್ವಾರ್ಥಿಗಳು ಈ ಸಂದರ್ಭವನ್ನು ಉಪಯೋಗಿಸಿಕೊಳ್ಳಲು ಯತ್ನಿಸಿದರು. ಇಂತಹ ಸನ್ನಿವೇಶದಲ್ಲಿ ಎದೆಗುಂದದೆ ಚೆನ್ನಮ್ಮಾಜಿ ಪರಿಸ್ಥಿತಿಯನ್ನು ಎದುರಿಸಿದಳು. ದುಷ್ಟರ ಸಂಚುಗಳು ಒಂದೂ ನಡೆಯದೆ ಅವಳನ್ನು ರಾಣಿಯೆಂದು ಅವರು ಮಾನ್ಯಮಾಡಬೇಕಾಯಿತು. ಭುವನಗಿರಿ ದುರ್ಗದಲ್ಲಿ ಅವಳಿಗೆ ಪಟ್ಟ ಕಟ್ಟಿದರು. ತನ್ನ ರಾಜ್ಯದ ಮೇಲೆ ಏರಿಬಂದ ಮಹಮದೀಯರು, ಮೈಸೂರರಸರು, ತುಳುವರು ಮತ್ತು ಇತರರನ್ನು ಬಾಹುಬಲದಿಂದಲೂ, ಬುದ್ಧಿ ಬಲದಿಂದಲೂ ನಿವಾರಿಸಿದಳು. ಇಂತಹ ಯುದ್ಧಗಳಲ್ಲಿ ಒಮ್ಮೆ ಶಿವಾಜಿ ನೆರವನ್ನಿತ್ತಿದ್ದ. ಮೈಸೂರರಸರ ವಿರುದ್ಧ ಬಾಣಾವರದಲ್ಲಿ ಶಿವಾಜಿಯ ಮಗನಾದ ಸಾಂಭಾಜಿ ಇವಳ ಜೊತೆಯಲ್ಲಿ ಕಾದಿದ್ದ. ಔರಂಗಜೇಬನು ಶಿವಾಜಿಯ ಮಗನಾದ ರಾಜಾರಾಮನನ್ನು ಅಟ್ಟಿಸಿಕೊಂಡು ಬಂದಾಗ, ತಾನು ಔರಂಗಜೇಬನಿಗೆ ಸಾಟಿಯಲ್ಲವೆಂದು ತಿಳಿದಿದ್ದೂ, ಮಂತ್ರಿ ಸೇನಾಧಿ

ಪತಿಗಳು ಬೇಡವೆಂದರೂ, ಹಿಂದೆ ಶಿವಾಜಿ ಮತ್ತು ಸಾಂಭಾಜಿ ಅವರಿಂದ ತಾನು ಪಡೆದಿದ್ದ ಉಪಕಾರವನ್ನು ನೆನೆದು ರಾಜಾರಾಮನಿಗೆ ರಕ್ಷಣೆಯನ್ನು ಕೊಟ್ಟು ತನ್ನ ರಾಜ್ಯದಿಂದ ಹೊರಕ್ಕೆ ಸುರಕ್ಷಿತವಾಗಿ ಕಳುಹಿಸಿಕೊಟ್ಟು, ಸಿಟ್ಟಿನಿಂದ ಮೇಲೆ ಬಿದ್ದ ಔರಂಗಜೇಬನ ಸೈನ್ಯವನ್ನು ಹೊಡೆದೋಡಿಸಿದಳು. ಪೋರ್ಚುಗೀಸರೊಂದಿಗೆ ಒಪ್ಪಂದ ಮಾಡಿಕೊಂಡು ಅವರು ಚಂದಾವರ್, ಹೊನ್ನಾವರ, ಭಟ್ಕಳ ಮತ್ತು ಕಲ್ಯಾಣಪುರ-ಗಳಲ್ಲಿ ಚರ್ಚುಗಳು ಮತ್ತು ಕಾರ್ಖಾನೆಗಳನ್ನು ಕಟ್ಟಲು ಅನುಮತಿಕೊಟ್ಟಳು. ತನ್ನ ಆಡಳಿತದ ಕಾಲದಲ್ಲಿ ಅಗ್ರಹಾರಗಳನ್ನು ಸ್ಥಾಪಿಸಿದಳು, ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿದಳು, ಮಠಗಳನ್ನು ಕಟ್ಟಿಸಿದಳು. ರಾಜ್ಯದ ಉತ್ತರಾಧಿ ಕಾರಿಯನ್ನಾಗಿ ಬಸಪ್ಪನಾಯಕನನ್ನ ದತ್ತು ತೆಗೆದುಕೊಂಡಳು. ಹೀಗೆ ಚೆನ್ನಮ್ಮಾಜಿ ಕೆಳದಿಯ ಚರಿತ್ರೆಯಲ್ಲಿ ತನ್ನ ಶೌರ್ಯ–ಸಾಹಸಗಳಿಂದಾಗಿ, ಪ್ರಜಾಹಿತಕರವಾದ ಧರ್ಮಕಾರ್ಯಗಳಿಂದಾಗಿ, ವ್ಯವಹಾರ ಚಾತುರ್ಯದಿಂದಾಗಿ ಅಜರಾಮರಳಾಗಿದ್ದಾಳೆ.

ಮೈಸೂರು ಸಂಸ್ಥಾನವು ಹೈದರಾಲಿ ಮತ್ತು ಟಿಪ್ಪು ಇವರ ವಶವಾದಾಗ ಚಿಕ್ಕ ಕೃಷ್ಣರಾಜ ಒಡೆಯರ ರಾಣಿ **ಮಹಾರಾಣಿ ಲಕ್ಷ್ಮಮ್ಮಣ್ಣಿ** ಅವರು ಮರಳಿ ರಾಜ್ಯ ವನ್ನು ಒಡೆಯರ ಸಂತತಿಗೆ ಪಡೆದುಕೊಡಬೇಕೆಂದು ಬಹುವಾಗಿ ಶ್ರಮಿಸಿದರು. ಅವರು ಚತುರರೂ, ಧೀರರೂ, ರಾಜತಂತ್ರ ನಿಪುಣರೂ ಆಗಿದ್ದರು. ಹಿಡಿದ ಕೆಲಸವನ್ನು ಮಾಡಿಯೇ ತೀರಬೇಕೆಂಬ ಛಲ ಅವರಲ್ಲಿತ್ತು. ನಾಲ್ಕನೇ ಮೈಸೂರು ಯುದ್ಧದಲ್ಲಿ ಟಿಪ್ಪೂಸುಲ್ತಾನ್ ಮಡಿದಮೇಲೆ ಆಂಗ್ಲ ಕಂಪನಿಯ ಆಡಳಿತದೊಂದಿಗೆ ಸಹಾಯಕ ಸೈನ್ಯ ಪದ್ಧತಿಗೆ ಸಹಿಹಾಕಿ ತಮ್ಮ ದತ್ತುಪುತ್ರ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಗೆ ಅರಸೊತ್ತಿಗೆಯನ್ನು ಮರಳಿ ಪಡೆದುಕೊಟ್ಟರು. ಮುಮ್ಮಡಿ ಕೃಷ್ಣರಾಜ ಒಡೆಯರು ಆಗ ಕೇವಲ ಐದು ವರ್ಷದ ಬಾಲಕರಾಗಿದ್ದುದರಿಂದ ಮಹಾರಾಣಿ ಲಕ್ಷ್ಮಮ್ಮಣ್ಣಿ ಅವರೆ, ಹೈದರ್ ಮತ್ತು ಟಿಪ್ಪು ಬಳಿಯಲ್ಲಿ ದಿವಾನ ರಾಗಿದ್ದ ಪೂರ್ಣಯ್ಯನವರ ನೆರವಿನೊಂದಿಗೆ ಆಡಳಿತವನ್ನು ನಡೆಸಿಕೊಂಡು ಹೋದರು.

ಕಿತ್ತೂರ ದೇಸಗತಿಯ ಹನ್ನೊಂದನೆ ದೇಸಾಯಿಯಾದ ಮಲ್ಲಸರ್ಜನಿಗೆ ರುದ್ರವ್ವ ಮತ್ತು **ಚೆನ್ನವ್ವ** ಎಂಬಿಬ್ಬರು ಹೆಂಡತಿಯರು. ಚೆನ್ನವ್ವ ಕಾಗತಿ ದೇಸಾಯಿಯರ ಮಗಳು. ಪೇಶ್ವೆಗಳು ಮತ್ತು ಆದಿಲ್‌ಷಾಗಳ ಅನಂತರ ಬ್ರಿಟಿಷರ ಮಾನ್ಯತೆಯನ್ನು ಕಿತ್ತೂರ ದೇಸಗತಿ ಪಡೆದಿತ್ತು. ಮಲ್ಲಸರ್ಜನ ತರುವಾಯ ರುದ್ರವ್ವನ ಹಿರಿಯ ಮಗ ಶಿವಲಿಂಗರುದ್ರಸರ್ಜ ಅಥವಾ ಬಾಪೂಸಾಹೇಬ ಏಳೆಂಟು ವರ್ಷ ಕಿತ್ತೂರನ್ನು ಆಳಿ ಕ್ಷಯರೋಗದಿಂದ ಮರಣಹೊಂದಿದನು. ಅವನ ತಮ್ಮಂದಿರಿಬ್ಬರು ಅವನಿಗಿಂತ ಮುಂಚೆಯೇ ತೀರಿಕೊಂಡಿದ್ದರು. ಆದ್ದರಿಂದ ಶಿವಲಿಂಗರುದ್ರಸರ್ಜನ ಅವಸಾನಕಾಲದಲ್ಲಿ ಒಬ್ಬ ದತ್ತುಪುತ್ರನನ್ನು ತೆಗೆದುಕೊಳ್ಳ

ಲಾಯಿತು. ಆ ವೇಳೆಗೆ ಕಿತ್ತೂರಿನಲ್ಲಿಯೆ ಪಕ್ಷ ಪ್ರತಿಪಕ್ಷಗಳು ಹುಟ್ಟಿಕೊಂಡಿದ್ದುದರಿಂದ ಧಾರವಾಡಿದ ಪೊಲಿಟಿಕಲ್ ಏಜೆಂಟ್ ಥ್ಯಾಕರೆಗೆ ದತ್ತುಪುತ್ರ ಸ್ವೀಕಾರ ಅಸಿಂಧುವೆಂದು ದೂರುಗಳು ಹೋದವು. ಇಂತಹದೇ ಸಮಯಕ್ಕಾಗಿ ಕಾಯುತ್ತಿದ್ದ ಥ್ಯಾಕರೆ ಈ ವಿಷಯ ಇತ್ಯರ್ಥವಾಗುವವರೆಗೆ ತಾವು ನೇಮಿಸಿದ ಅಧಿಕಾರಿಯ ಮುಖಾಂತರ ಆಡಳಿತ ನಡೆಯಬೇಕೆಂದು ಹೇಳಿದ. ಚೆನ್ನವ್ವ ಈ ಸಲಹೆಯನ್ನು ತಿರಸ್ಕರಿಸಿದಳು. ಇದರ ಪರಿಣಾಮವಾಗಿ ಯುದ್ಧವಾಯಿತು. ಯುದ್ಧದಲ್ಲಿ ಬ್ರಿಟಿಷರು ಸೋತರು. ಚೆನ್ನವ್ವ ತನಗೆ ಸೆರೆಸಿಕ್ಕಿದ್ದ ಬ್ರಿಟಿಷರ ಮಕ್ಕಳನ್ನು ಸೌಜನ್ಯದಿಂದ ಕಂಡು ಹಿಂದಕ್ಕೆ ಕಳುಹಿಸಿಕೊಟ್ಟಳು. ಚೆನ್ನವ್ವನ ಸೌಜನ್ಯದಿಂದ ಸುಪ್ರೀತನಾದ ಥ್ಯಾಕರೆ ಸಂಧಾನಕ್ಕಾಗಿ ಬರುತ್ತಿದ್ದಾಗ ಅಮಟೂರು ಬಾಳಪ್ಪನೆಂಬುವನ ಗುಂಡೆಗೆ ಬಲಿಯಾದ. ಮತ್ತೆ ಯುದ್ಧವಾಯಿತು. ಕ್ಯಾಪ್ಟನ್ ಬ್ಲಾಕ್, ಇಲಿಯಟ್, ಸ್ಟೀವನ್ಸನ್ ಮೊದಲಾದ ಬ್ರಿಟಿಷ್ ಅಧಿಕಾರಿಗಳು ಯುದ್ಧದಲ್ಲಿ ಸತ್ತರು. ಆಗ ದಕ್ಷಿಣ ಭಾಗದ ಕಮಿಷನರ್ ಆಗಿದ್ದ ಚಾಪ್‌ಲಿನ್ ಎಂಬುವನು ಹೆಚ್ಚು ಸೈನ್ಯದೊಂದಿಗೆ ಕಿತ್ತೂರನ್ನು ಮುತ್ತಲು ಹೊರಟ. ಆ ವೇಳೆಗೆ ಕಿತ್ತೂರಿನಲ್ಲಿ ಅಂತಃಕಲಹ ಆತ್ಮಘಾತುಕ ಪುಟ್ಟವನ್ನು ಮುಟ್ಟಿ ಚೆನ್ನವ್ವನ ನೆಚ್ಚಿನ ಬಂಟರಾದ ಕನ್ನೂರು ಮಲ್ಲಪ್ಪ, ಕಲ್ಲೂರ ಮಲ್ಲಪ್ಪ ಎಂಬುವರ ಕೊಲೆಯಾಯಿತು. ಆದರೂ ಎದೆಗೆಡದೆ ಚಾಪ್‌ಲಿನ್ನನನ್ನು ಎದುರಿಸುತ್ತಿದ್ದಾಗ ಚಾಪ್‌ಲಿನ್ನನಿಂದ ಆಮಿಷಕ್ಕೊಳಗಾದ ದ್ರೋಹಿಗಳು ಮದ್ದು ನಿಷ್ಪ್ರಯೋಜಕವಾಗುವಂತೆ ಮಾಡಿದರು. ಚೆನ್ನವ್ವ ಕೋಟೆಯ ಬಾಗಿಲನ್ನು ತೆರೆದು ಬ್ರಿಟಿಷರನ್ನು ಮುಖಾಮುಖಿ ಎದುರಿಸಿ ಹೋರಾಡುತ್ತಿದ್ದಾಗ ಸೆರೆಸಿಕ್ಕಿದಳು. ಸೆರೆಸಿಕ್ಕಿದ ಚೆನ್ನವ್ವನನ್ನು ಬೈಲಹೊಂಗಲದ ಸೆರೆಮನೆಯಲ್ಲಿ ಇಟ್ಟಿದ್ದರು. ಸ್ವಾಭಿಮಾನಿಯಾದ ಚೆನ್ನವ್ವ ಸಿಪಾಯಿದಂಗೆಯೆಂದು ಕರೆಯುವ ಮೊದಲ ಸ್ವಾತಂತ್ರ್ಯಯುದ್ಧಕ್ಕಿಂತ ಮೂವತ್ತು ವರ್ಷಕ್ಕೂ ಮೊದಲೆ ಬ್ರಿಟಿಷರ ವಿರುದ್ಧ ಹೋರಾಡಿದ್ದಳು. ಅವಳಿಗೆ ಸಕಾಲದಲ್ಲಿ ಕೊಲ್ಹಾಪುರದ ಛತ್ರಪತಿಯಿಂದ ನೆರವು ದೊರಕಿದ್ದರೆ, ವಿಶ್ವಾಸದ್ರೋಹ ಆಗದಿದ್ದರೆ ಬಹುಶಃ ಯುದ್ಧದ ಫಲಿತಾಂಶ ಬೇರೆಯೆ ಆಗುತ್ತಿತ್ತೊ ಏನೊ ? ಅವಳು ಹತ್ತಿಸಿದ ಸ್ವಾತಂತ್ರ್ಯದ ಕಿಡಿ ನಂದದೆ ಜ್ವಾಜ್ವಲ್ಯಮಾನವಾಯಿತು ಎಂಬುದು ಹೆಮ್ಮೆಯ ಸಂಗತಿ. ಹದಿನೆಂಟನೆಯ ಶತಮಾನದ ಕೊನೆಯ ಭಾಗದಲ್ಲಿ ಟಿಪ್ಪುಸುಲ್ತಾನನು 19ನೆಯ ಶತಮಾನದ ಆದಿ ಭಾಗದಲ್ಲಿ ಕಿತ್ತೂರಿನ ಚೆನ್ನವ್ವನೂ ಬ್ರಿಟಿಷರ ವಿರುದ್ಧ ಹೋರಾಡಿದರೆಂಬುದು ಕನ್ನಡಿಗರಿಗೆ ಅಭಿಮಾನದ ವಿಷಯ.

ಚಾಮರಾಜೇಂದ್ರ ಒಡೆಯರು ಸತ್ತಮೇಲೆ ಅವರ ರಾಜಕುಮಾರ ನಾಲ್ಮಡಿ ಕೃಷ್ಣರಾಜ ಒಡೆಯರು ಪ್ರಾಪ್ತವಯಸ್ಸಿಗೆ ಬರುವವರೆಗೂ ಎಂಟು ವರ್ಷಗಳವರೆಗೆ ರಾಜಪ್ರತಿನಿಧಿಯಾಗಿ ವಾಣೀವಿಲಾಸ ಸನ್ನಿಧಾನದ **ಕೆಂಪರಾಜಮ್ಮಣ್ಣಿಯವರು**

ಆಳಿದರು. ಅವರು ದಕ್ಷರೂ ದೂರದರ್ಶಿಗಳೂ ಆಗಿದ್ದರು. ದಿವಾನ್ ಶೇಷಾದ್ರಿ ಐಯ್ಯರ್ ಮತ್ತು ಅಪರ ಸಲಹಾಸಮಿತಿಯ ನೆರವಿನಿಂದ ಜವಾಬ್ದಾರಿಯುತ ಆಡಳಿತ ನಿರ್ವಹಿಸಿ ಜನರ ಮೆಚ್ಚುಗೆ ಪಡೆದರು. ಕೆಂಪರಾಜಮ್ಮಣ್ಣಿಯವರು ಆಡಳಿತ ನಡೆಸಿದ ಎಂಟು ವರ್ಷಗಳ ಅವಧಿಯಲ್ಲಿ ಮೈಸೂರು ಸಂಸ್ಥಾನ ಗಣನೀಯವಾಗಿ ಪ್ರಗತಿಯನ್ನು ಹೊಂದಿತು. ಭೂಗರ್ಭ ಶೋಧನೆಯ ವಿಭಾಗದ ಸ್ಥಾಪನೆ, ವ್ಯವಸಾಯ ಇಲಾಖೆಯ ಆರಂಭ, ಮಾರೀಕಣಿವೆ ಜಲಾಶಯ ಪೂರ್ಣವಾದುದು, ಶಿವನ ಸಮುದ್ರದಲ್ಲಿ ವಿದ್ಯುದುತ್ಪಾದನಾಕಾರ್ಯ, ಬೀರೂರು–ಶಿವಮೊಗ್ಗಾ ರೈಲು ಮಾರ್ಗದ ಆರಂಭ, ಮಲ್ಲೇಶ್ವರಂ ಮತ್ತು ಬಸವನಗುಡಿ ಬಡಾವಣೆಗಳ ಪ್ರಾರಂಭ ಮುಂತಾದ ಅಭಿವೃದ್ಧಿ ಕಾರ್ಯಗಳು ಈ ಕಾಲದಲ್ಲಿ ಆಯಿತು. ಅಲ್ಲದೆ ಹೊಸ ಪ್ರಜಾಪ್ರತಿನಿಧಿ ಸಭೆ ರೂಪುಗೊಂಡಿದ್ದು ಈ ಕಾಲದಲ್ಲಿಯೆ. ಭಾರತದಲ್ಲಿ ಮೈಸೂರು ಪ್ರಗತಿಪರ ರಾಜ್ಯವೆಂದು ಕರೆಯಲ್ಪಡಲು ಕೆಂಪರಾಜಮ್ಮಣ್ಣಿಯವರೂ ಕಾರಣರು.

* * * *

ಕರ್ಣಾಟಕವನ್ನು ಆಳಿದ ಕೆಲವು ರಾಣಿಯರ ಸಮೀಕ್ಷೆಯಿಂದ ಈ ತೀರ್ಮಾನಕ್ಕೆ ಬರಬಹುದು : ಏನೆಂದರೆ, ಅರಸಿಯರಿಗೆ ಅರಸೊತ್ತಿಗೆಯಲ್ಲಿ ತುಂಬ ಗೌರವವಿದ್ದಿತು. ಅವರು ಅರಸನಿಗೆ ಸಮವಾದ ಸ್ಥಾನವನ್ನು ಉಪಭೋಗಿಸುತ್ತಿದ್ದರು. ರಾಜ್ಯದ ಕಾರ್ಯಕಲಾಪಗಳಲ್ಲಿ ಬಹುಮಟ್ಟಿಗೆ ಭಾಗವಹಿಸುತ್ತಿದ್ದರು. ವಿವೇಕದಿಂದಲೂ ಸಮತೆಯಿಂದಲೂ ನ್ಯಾಯದಿಂದಲೂ ಆಡಳಿತವು ನಡೆಯುವಂತೆ ಪತಿಗೆ ನೆರವಾಗುತ್ತಿದ್ದರು. ಕೆಲವರು ಒಳ್ಳೆಯ ಮಂತ್ರಾಲೋಚಕರಾಗಿದ್ದರು. ಕೆಲವರು ಸ್ವತಂತ್ರವಾಗಿ, ಕೆಲವರು ಅರಸನ ಜೊತೆಯಲ್ಲಿ ಆಳುವವರಾಗಿದ್ದರು. ಕರ್ಣಾಟಕದ ಅರಸಿಯರಿಗೆ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿಯಿದ್ದಿತು.

ಆದರೆ ಮೇಲೆ ಹೇಳಿದ ತೀರ್ಮಾನ ಅಥವಾ ನಿರ್ಣಯ ಕೇವಲ ಕೆಲವೇ ರಾಣಿಯರಿಗೆ ಸೀಮಿತವಾಗಿದ್ದಿತು ಎಂಬುದನ್ನೂ, ಆಕಸ್ಮಿಕವಾಗಿ ಸಂದರ್ಭ ಸನ್ನಿವೇಶಗಳು ಒದಗಿಬಂದುದರಿಂದ ಆ ಕೆಲವರಾದರೂ ಮಿಂಚಿ ಪ್ರಜ್ವಲಿಸಿದರೆಂಬುದನ್ನೂ ಯಾರೂ ಮರೆಯುವ ಹಾಗಿಲ್ಲ. ಅಂದರೆ ಸರಿಯಾದ ಅವಕಾಶ, ಸನ್ನಿವೇಶ, ಸಂದರ್ಭಗಳು ಒದಗದೆ, ಒದಗಿದರೂ ತಕ್ಕ ಸಿದ್ಧತೆಯಿಲ್ಲದೆ ಎಷ್ಟೋ ಜನ ರಾಣಿಯರು ಚರಿತ್ರೆಯಲ್ಲಿ ಅಜ್ಞಾತರಾಗಿಯೆ ಉಳಿದುಹೋಗಿದ್ದಾರೆ.

ಈಗ ಕಾಲ ಬದಲಾಗಿದೆ. ಸಮಾಜದ ಅರ್ಧದಷ್ಟಿರುವ ಸ್ತ್ರೀಯರು ಪುರುಷರ ಅನುಗ್ರಹದಿಂದ ಮೇಲೆ ಬರಬೇಕಾಗಿಲ್ಲ. ಸ್ತ್ರೀಯರು ಪುರುಷರ ಸಮಸಮಕ್ಕೆ ನಿಂತು ಕೆಲಸ ಮಾಡಬೇಕಾಗಿದೆ. ತೊಟ್ಟಿಲನ್ನು ತೂಗುವ ಕೈ ಖಡ್ಗವನ್ನೂ ಹಿಡಿಯಬಲ್ಲದು ; ನಾಡನ್ನೂ ಆಳಬಲ್ಲದು. ಇತಿಹಾಸದಲ್ಲೂ ವರ್ತಮಾನ ಕಾಲದಲ್ಲೂ ಇದಕ್ಕೆ

ಬೇಕಾದಷ್ಟು ಉದಾಹರಣೆಗಳಿವೆ. ಇದುವರೆಗೆ ಕವಿಗಳಿಂದ ಅಬಲೆ, ಕೋಮಲೆ ಎಂದು ವರ್ಣಿತಳಾಗಿರುವ ಸ್ತ್ರೀ ಸಮಯ ಬಂದರೆ ಸಬಲೆಯಾಗಬಲ್ಲಳು, ದುರ್ಗಿಯಾಗ ಬಲ್ಲಳು, ಕಾಳಿಯಾಗಬಲ್ಲಳು. ಆದ್ದರಿಂದ ಪುರುಷರೂ ಕೂಡ ಸ್ತ್ರೀ ಬಂಡೆದ್ದು ತನ್ನ ಹಕ್ಕನ್ನು ಪಡೆಯುವ ಮುನ್ನ ಸಹಜವಾಗಿ ಸ್ತ್ರೀಯರಿಗೆ ಸಿಗಬೇಕಾದ ಸ್ಥಾನಮಾನ ಗಳನ್ನೂ ಅವಕಾಶಗಳನ್ನೂ ಕೊಟ್ಟು ಪುರುಷವರ್ಗದ ಮಾನವನ್ನು ಉಳಿಸಿಕೊಳ್ಳ ಬೇಕಾಗಿದೆ.

ಅಂತರ ರಾಷ್ಟ್ರೀಯ ಮಹಿಳಾವರ್ಷವಾದ ಈ ವರ್ಷದಲ್ಲಿಯಾದರೂ ಪುರುಷ ಸ್ತ್ರೀಗೆ ಸಹಜವಾಗಿ ಸಿಗಬೇಕಾದ ಸ್ಥಾನಮಾನಗಳನ್ನು ಅವರು ಪಡೆದುಕೊಳ್ಳಲು ನೆರವಾಗಲಿ. ಸ್ತ್ರೀಯರೂ ತಮ್ಮಷ್ಟೇ ಸಮರ್ಥರು ಎಂದು ಈ ಲೇಖನದಿಂದ ಪುರುಷರಿಗೆ ಮನವರಿಕೆಯಾದರೆ ಸಾಕು.

**ಆಧಾರ ಗ್ರಂಥಗಳು**

1. ದೇಸಾಯಿ ಪಾಂಡುರಂಗರಾಯರು : ಕನ್ನಡನಾಡಿನ ಮಿಂಚಿದ ಮಹಿಳೆಯರು
2. ಡಾ॥ ಸೂರ್ಯನಾಥ ಕಾಮತ್ : ಕರ್ನಾಟಕದ ವೀರ ರಾಣಿಯರು
3. Srinivasa Ritti : Some Women Administrators of Medieval Karnataka
4. Dr. P. B. Desai : A History of Karnataka

# ಕರ್ನಾಟಕದ ನೃತ್ಯ ಕಲಾವಿದೆಯರು

**ಯು. ಎಸ್. ಕೃಷ್ಣರಾವ್**

ಸೃಷ್ಟಿ ವೈಚಿತ್ರದಲ್ಲಿ ಸ್ತ್ರೀಯು ಸುಮನೋಹರವಾದ, ಸುಲಲಿತವಾದ, ಸುಶೀಲವಾದ, ಸುಪ್ರಿಯವಾದ ಒಂದು ವ್ಯಕ್ತಿ. ಆದ್ದರಿಂದಲೇ ಈ ಜಗತ್ತಿನ ಕವಿವರ್ಯರೆಲ್ಲರೂ ಸ್ತ್ರೀಯರನ್ನು ವಿಧವಿಧವಾಗಿ ವರ್ಣಿಸಿ ಕೊಂಡಾಡಿರುವುದು. ಸ್ತ್ರೀಯರ ಮುಖರೇಖೆ, ಅಂಗಸೌಷ್ಠವ, ಹಾವಭಾವ — ನಡೆನುಡಿ, ಮಿನುಗುವ ಕಣ್ಣುಗಳು, ಇವೆಲ್ಲವೂ ಅವರ ಸೌಂದರ್ಯದ ಪತಾಕೆಗಳು. ಅವರು ಬಯಸುವುದು ಸುಂದರ ಜೀವನ. ಅವರು ಲಾಲಿಸುವುದು ಸುಂದರ ಎಳೆ ಚಿಗುರುಗಳು. ಅವರ ಉಪಾಸನೆ ಸೌಂದರ್ಯೋಪಾಸನೆ. ಇಂಥ ಜಗತ್ತಿನಲ್ಲಿ ಸ್ತ್ರೀಗೆ ಪುರುಷರ ಬೆಂಬಲ, ಸಹಾನುಭೂತಿ, ಸಹೃದಯತೆ, ಸಾಮರಸ್ಯ ಅತ್ಯಗತ್ಯ. ಈ ಸ್ತ್ರೀ ಪುರುಷರ ಸಮ್ಮಿಲನದಿಂದಲೇ ಉದ್ಭವಿಸುವುದು ಲಲಿತಕಲೆಗಳು.

ನೃತ್ಯವು ಸಹಜವಾಗಿ ಸ್ತ್ರೀಯರಿಗೆಂದೇ ಇರುವ ಲಲಿತಕಲೆ. ಅದರಲ್ಲೂ ನಾಟ್ಯಶಾಸ್ತ್ರದಲ್ಲಿ ವರ್ಣಿಸಿರುವ ನರ್ತಕಿ ಓರ್ವಳು ಬ್ರಹ್ಮನು ಅವಳಿಗೆ ಕೊಟ್ಟಿದ್ದ ಸುಂದರ ಅಂಗ ಸೌಷ್ಠವದಿಂದ ಮತ್ತು ಅದನ್ನು ತನ್ನಂತೆ ಬಳಸಿಕೊಳ್ಳಬಲ್ಲ ಸಾಮರ್ಥ್ಯದಿಂದ ನೃತ್ಯಕಲೆಯನ್ನು ಕರಗತ ಮಾಡಿಕೊಂಡು, ತನ್ನ ನೃತ್ಯ ಪ್ರದರ್ಶನದಿಂದ ಎಲ್ಲರ ಮನಸ್ಸನ್ನೂ ಸೂರೆ ಮಾಡಬಲ್ಲಳು. ನೃತ್ಯಮಾಡಿ ಮನುಷ್ಯನ ಅಥವಾ ದೇವರ ಮನಸ್ಸನ್ನು ಗೆದ್ದುಕೊಂಡಂಥ ನರ್ತಕಿಯರ ದೃಷ್ಟಾಂತಗಳು ಬೇಕಾದಷ್ಟಿವೆ. ಅನಾದಿ ಕಾಲದಿಂದಲೂ ನಮ್ಮ ಹಿಂದೂದೇಶದಲ್ಲಿ ನೃತ್ಯಕಲೆಯು–ಇದೊಂದೇ ಕಲೆಯೆಂದೂ, ಇದು ಸ್ತ್ರೀಯರಿಂದ ಪ್ರದರ್ಶಿಸಲ್ಪಟ್ಟ ಕಲೆಯೆಂದೂ, ಮನವೋಹಕ ಕಲೆಯೆಂದೂ, ಒಂದು ಅಲೌಕಿಕ ದೈವಿಕ ಕಲೆಯೆಂದೂ ಪ್ರಸಿದ್ಧವಾಗಿದೆ. ಇದರ ದೃಷ್ಟಾಂತಗಳನ್ನು ನಾವು ಶಾಸನದಿಂದಲೂ ಮತ್ತು ಚರಿತ್ರೆಯಿಂದಲೂ ತಿಳಿದುಕೊಳ್ಳಬಹುದು.

ನಮ್ಮ ಕರ್ನಾಟಕದಲ್ಲಿ ಅನೇಕಾನೇಕ ನೃತ್ಯ ವಿಶಾರದೆಯರು ಜನಿಸಿ, ಅದನ್ನು ಬೆಳೆಸಿ, ನರ್ತಿಸಿ ಆಹ್ಲಾದವನ್ನುಂಟುಮಾಡಿ ಉನ್ನತ ಕೀರ್ತಿಯನ್ನು ಪಡೆದು ಕಣ್ಮರೆಯಾಗಿದ್ದನ್ನು ನಾವು ಚರಿತ್ರೆಯಲ್ಲಿ ಕಾಣಬಹುದು. ಕ್ರಿ. ಶ. 800 ರಿಂದ 1100 ರ ನಡುವಿನ ಅವಧಿಯು ರಾಷ್ಟ್ರಕೂಟರ ಹಾಗೂ ಚಾಳುಕ್ಯರ ಕಾಲದಲ್ಲಿ ನರ್ತಕಿಯರು ದೇವಾಲಯಗಳಲ್ಲಿ ನರ್ತಿಸಿ ಸಕಲ ಜನಸಮೂಹವನ್ನು ರಂಜಿಸುವುದರ ಮೂಲಕ ದೇವಕಾರ್ಯಗಳು ವಿಜೃಂಭಣೆಯಿಂದ ನೆರವೇರಲು ನೆರವಾಗುತ್ತಿದ್ದರು. ಕಲ್ಯಾಣದ

ಚಾಲುಕ್ಯರ ಕಾಲವಲ್ಲಿ (ಕಿ. ಶ. 1100–1200) ಕಲಚೂರ್ಯ ಸೋವಿದೇವನ ರಾಣಿಯಾದ ಸವಳಾದೇವಿಯು ಕ್ರಿ. ಶ. 1174ರಲ್ಲಿ ತನ್ನ ನರ್ತನದಿಂದ ತನ್ನ ಪ್ರಜೆಗಳಿಗೂ ಮತ್ತು ಇತರ ಆಹ್ವಾನಿತರಿಗೂ ಆಹ್ಲಾದವನ್ನುಂಟು ಮಾಡಿದ್ದಳಂತೆ. ತ್ರಿಭುವನ ಮಲ್ಲ ಮಲ್ಲಿದೇವ ಚೋಳ ಮಹಾರಾಜನ ರಾಣಿಯಾದ ಲಕ್ಷ್ಮೀದೇವಿಯೂ ಸಹ ತನ್ನ ನೃತ್ಯದಿಂದ ಜನಸಮೂಹವನ್ನು ಮುಗ್ಧಗೊಳಿಸುತ್ತಿದ್ದಳಂತೆ. ವಿಷ್ಣುವರ್ಧನ ಹೊಯ್ಸಳರಾಜನ ರಾಣಿಯಾದ ಶಾಂತಲಾದೇವಿಯ ನೃತ್ಯಪ್ರತಿಭೆ ಪ್ರತಿಯೊಬ್ಬ ಕನ್ನಡಿಗನಿಗೂ ಗೊತ್ತಿರುವಂಥದು. ಬೇಲೂರು-ಹಳೇಬೀಡುಗಳಿಗೆ ಹೋದ ಪ್ರವಾಸಿಗರು ಶಾಂತಲೆಯ ಕಲಾಪ್ರೌಢಿಮೆ ಮತ್ತು ಕಲಾಭಿಮಾನವನ್ನು ಕೇಳದೇ ಇರುವುದಿಲ್ಲ.

ಇನ್ನು ವಿಜಯನಗರದ ವೈಭವ! ಅಂದಿನ ಆ ರಾಜರುಗಳ ಸಂಭ್ರಮ, ಅವರು ಕಲೆಗಳಿಗೆ ಇತ್ತ ಪ್ರೋತ್ಸಾಹ, ಅವರ ಠೀವಿ ಗಾಂಭೀರ್ಯ–ಇವೆಲ್ಲವೂ ಚರಿತ್ರೆಯ ಮೂಲಕ ನಮ್ಮ ಚಿತ್ತಪಟಲದ ಮೇಲೆ ಅಚ್ಚೊತ್ತಿವೆ. ಈ ಕಾಲದ ರಾಜರು ತಮ್ಮ ರಾಣಿಯರಿಗೂ, ತಮ್ಮ ಕುಮಾರಿಯರಿಗೂ ಶ್ರೇಷ್ಠ ನೃತ್ಯಕಲಾವಿದರಿಂದ ಶಿಕ್ಷಣ ಕೊಡಿಸಿರುವುದಷ್ಟೇ ಅಲ್ಲದೆ, ಕಲಾವಿದರನ್ನು ತುಂಬುಮನಸ್ಸಿನಿಂದ ಪ್ರೋತ್ಸಾಹಿಸುತ್ತಿದ್ದರು. ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ಲಕ್ಷ್ಮೀನಾರಾಯಣ ಎಂಬ ನೃತ್ಯಾಚಾರ್ಯರು 'ಅಭಿನವಭರತ' ಎಂಬ ಬಿರುದಿಗೆ ಪಾತ್ರರಾದರು. ಇವರ 'ಸಂಗೀತ ಸೂರ್ಯೋದಯ' ಎಂಬ ಗ್ರಂಥರತ್ನ ಬಹಳ ಪ್ರಸಿದ್ಧವಾದುದು. ಅವರು ಆಸ್ಥಾನ ನೃತ್ಯಾಚಾರ್ಯರಾಗಿದ್ದುಕೊಂಡು ನೃತ್ಯಕಲೆಯನ್ನು ವಿಶಿಷ್ಟರೀತಿಯಲ್ಲಿ ಬೆಳಸಿದರು.

ಅಂತೂ ಹಿಂದಿನ ಕಾಲದಲ್ಲಿ ರಾಜಮಹಾರಾಜರುಗಳಿಂದ ನೃತ್ಯಕಲೆಗೆ ಸೂಕ್ತ ಪ್ರೋತ್ಸಾಹ ದೊರಕುತ್ತಿದ್ದಿತು ಎಂಬುದು ಬಹಳ ಸತ್ಯ ಸಂಗತಿ. ಆದರೆ ಕ್ರಮೇಣ ಇಂಗ್ಲೀಷರ ಪ್ರಾಬಲ್ಯ ಅಧಿಕವಾದಂತೆ ನಮ್ಮ ನೃತ್ಯಕಲೆಯ ಅವನತಿ ಪ್ರಾರಂಭವಾಯಿತೆನ್ನಬೇಕು. ನೃತ್ಯ ಒಂದು ಹೀನ ವೃತ್ತಿ–ಎನ್ನುವ ಬ್ರಿಟಿಷ್ ಸರ್ಕಾರದ ಧೋರಣೆ ನೃತ್ಯಕಲೆಯನ್ನು ಬದಿಗೊತ್ತಿತು. ಅವರ ನಿರ್ಗಮನದ ನಂತರ ನೃತ್ಯಕಲೆ ಮತ್ತೆ ಚೇತರಿಸಿಕೊಂಡು ಒಂದು ಧ್ಯೇಯ, ಒಂದು ಹುರುಪನ್ನು ಸಂಪಾದಿಸಿಕೊಂಡಿತು. ಆದ್ದರಿಂದ ಮತ್ತೆ ಜನಮನದಲ್ಲಿ ನೃತ್ಯ ಒಂದು ಕಲೆ, ಒಂದು ವ್ಯಾಸಂಗಯೋಗ್ಯ ವಿಷಯ, ಒಂದು ಪ್ರೌಢ ವಿದ್ಯೆ–ಎಂಬ ಭಾವನೆ ರೂಪುಗೊಂಡಿತು. ಇತ್ತೀಚೆಗೆ ಈ ಕಲೆ ನಮ್ಮ ದೇಶದ ಭವ್ಯ ಸಂಸ್ಕೃತಿಯ ನೆಳಲಿನಲ್ಲಿ ಬೆಳೆದು, ಸುಸಂಸ್ಕೃತದಿಂದ ಅಭ್ಯಸಿಸಲ್ಪಟ್ಟು, ಅವರ ಅಭಿಮಾನಕ್ಕೆ ಪಾತ್ರವಾಗಿ, ಅಸಮಾನ ಖ್ಯಾತಿ ಹೊಂದಿ, ಜಗತ್ತಿನಾದ್ಯಂತ ಪ್ರಚಲಿತವಲ್ಲಿದೆ.

ಕೈದಾಳ, ಹಳೇಬೀಡು, ಬೇಲೂರು ಮತ್ತು ಸೋಮನಾಥಪುರ ಮುಂತಾದ ಸ್ಥಳಗಳಲ್ಲಿನ ದೇವಾಲಯಗಳಲ್ಲಿ ಕೆತ್ತಿರುವಂಥ ನೃತ್ಯಭಂಗಿಗಳು ಶಾಸ್ತ್ರೀಯವಾಗಿರು

ವುದು ಮಾತ್ರವಲ್ಲ, ಹೃದಯಂಗಮವಾಗಿದ್ದು ಎಲ್ಲರ ಮನಸ್ಸನ್ನೂ ಸೆಳೆಯುತ್ತವೆ. ಇವುಗಳನ್ನು ರಚಿಸಿದ ಶಿಲ್ಪಿಗಳ ಕಲಾಪ್ರೌಢಿಮೆಗೆ ಇವು ಸಾಕ್ಷಿಯಾಗಿ ನಿಂತಿವೆ. ಸಕಲ ನೃತ್ಯ ವಿಧಾನಗಳಿಗೆ ಸಂಕೇತ ಪ್ರಧಾನವಾದ ಅರ್ಥ ಮುದ್ರೆಗಳಿಂದ ಬರುತ್ತದೆ. ದೇವಾಲಯಗಳ ಆವರಣಗಳಲ್ಲಿ ಕೆತ್ತಿರುವ ನಾಟ್ಯಸರಸ್ವತಿ, ನಟರಾಜಮೂರ್ತಿ, ನಾಟ್ಯಗಣಪತಿ, ನಾಟ್ಯಕೃಷ್ಣ-ಇವೆಲ್ಲವೂ ನಮ್ಮ ನೃತ್ಯಕಲೆಯ ಹೆಮ್ಮೆಯ ಶಾಸನಗಳು. ಈ ಕೃತಿಗಳನ್ನು ಕಲ್ಲಿನಲ್ಲಿ ಮಾಡಿಸಿ ಜೀವತುಂಬಿದ ಆ ವ್ಯಕ್ತಿಗಳು ಇವತ್ತಿಗೂ ಯಾರು ಎಂದು ನಮಗೆ ಖಚಿತವಾಗಿ ಗೊತ್ತಿಲ್ಲದಿದ್ದರೂ ಅವರು ಅಭಿನಂದನಾರ್ಹರು. ಅಂದಿನ ಆ ವ್ಯಕ್ತಿಗಳು ತಮ್ಮ ಪ್ರತಿಭೆಯ ಪ್ರದರ್ಶನವನ್ನು ದೇವತಾರಾಧನೆಯೆಂದು ತಿಳಿದು ತಮ್ಮ ವೈಯಕ್ತಿಕತೆಗೆ ಹೆಚ್ಚು ಮಹತ್ವ ಕೊಡಲಿಲ್ಲ. ಆಧುನಿಕ ಪ್ರಪಂಚದಲ್ಲಿ ಕಲ್ಲಿನ ಅಥವಾ ಲೋಹದ ನಟರಾಜ ಮೂರ್ತಿಯನ್ನು ಸ್ವಗೃಹಗಳಲ್ಲಿ ಇಟ್ಟುಕೊಂಡಿರುವುದು ಇಂದಿನ ಪಾಶ್ಚಾತ್ಯ ಹಾಗೂ ಪೌರ್ವಾತ್ಯರಲ್ಲಿ ಪ್ರತಿಷ್ಠೆಯ ಹಾಗೂ ಹೆಮ್ಮೆಯ ಸಂಗತಿ. ನಟರಾಜನ ನೃತ್ಯವಿಗ್ರಹ ಭಾರತೀಯ ದರ್ಶನ ಶಾಸ್ತ್ರದತ್ತ ಶಿಲ್ಪಿಗಿರ ಬೇಕಾದ ಜ್ಞಾನದ ಪರಿಚಯ ಮಾಡಿಕೊಡುತ್ತದೆ. ಪರಮಸತ್ಯದ ಪಂಚಕ್ರಿಯೆಗಳು ಮತ್ತು ಮಾಯಾಜಗತ್ತಿನ ನಿರೂಪಣೆಯಾದ ನಟರಾಜನ ವಿಗ್ರಹದ ಒಂದು ಬಲಗೈ ಡಮರುಗ ಸೃಷ್ಟಿಯನ್ನೂ, ಇನ್ನೊಂದು ಬಲಗೈ ಅಭಯ ಹಸ್ತ ಸ್ಥಿತಿಯನ್ನೂ, ಎಡಗೈ ಅಗ್ನಿ ಲಯವನ್ನೂ, ಇದೇ ಭಂಗಿ ಮಾಯೆಯನ್ನೂ, ಮತ್ತು ಎತ್ತಿದ ಎಡ ಗಾಲಿನ ಹೆಬ್ಬೆರಳು ಮೋಕ್ಷವನ್ನೂ ಸೂಚಿಸುತ್ತವೆ. ಅಲ್ಲದೆ ಹಾರಾಡುತ್ತಿರುವ ಗುಂಗುರು ಕೂದಲು ಜೀವನದ ಚಲನೆಯನ್ನೂ, ಸುತ್ತುಕೊಂಡಿರುವ ಸರ್ಪಗಳು ಧರ್ಮಬಂಧನ ಹಾಗೂ ನಿಸ್ಸಹಾಯಕತೆಯನ್ನೂ, ಬಲಕಿವಿಯ ತಾಲಕ ಮತ್ತು ಎಡ ಕಿವಿಯ ಬೆಂಡೋಲೆ ಜೀವನದ ಚಕ್ರದಲ್ಲಿ ಮಿಲನವಾದ ಪ್ರಕೃತಿ–ಪುರುಷ ಸಂಬಂಧ ವನ್ನೂ, ಹರಿಯುವ ಗಂಗೆ ಬಾಳಿನ ಅನಂತ ಪ್ರವಾಹವನ್ನೂ, ಅರ್ಧಚಂದ್ರ ಜೀವನ ದಲ್ಲಿರುವ ಧರ್ಮ, ಜ್ಞಾನ, ಸುಂದರತೆಯನ್ನೂ, ಅಪಸ್ಮಾರನೆಂಬ ರಾಕ್ಷಸನನ್ನು ತುಳಿಯುತ್ತಿರುವ ಬಲಗಾಲು ದುಷ್ಟ ನಿಗ್ರಹವನ್ನೂ ಸೂಚಿಸುತ್ತವೆ.

ನೃತ್ಯ ಕಲಾವಿದರು ಅನುಪಮ ಯಶಸ್ಸು ಮತ್ತು ಅಸಾಧಾರಣ ಸಿದ್ಧಿ ಪಡೆದಿರುವುದು ಶೃಂಗಾರ ರಸ ಅಭಿನಯದಲ್ಲಿ ಎಂದರೆ ಉತ್ಪ್ರೇಕ್ಷೆಯಾಗಲಾರದು. ಮಾನವನ ಮಾನಸಿಕ ಪ್ರಪಂಚದ ಹತ್ತು ಹಲವಾರು ವೈವಿಧ್ಯಗಳ ವೈಚಿತ್ರ್ಯಗಳನ್ನು ವ್ಯಕ್ತ ಪಡಿಸಲು ಈ ಮಾಧ್ಯಮ ಬಹುಮಟ್ಟಿಗೆ ನೆರವಾಗುತ್ತದೆ. ಶೃಂಗಾರರಸವು ದೈವಿಕ, ಭವ್ಯ, ಉದಾತ್ತ, ಸರಸ, ಕಾಮುಕ, ಐಹಿಕ, ವಿಲಾಸಿಕ, ಅಸಭ್ಯ–ಮೊದಲಾದ ರೀತಿ ಗಳಿಂದ ಕೂಡಿದೆ. ಈ ರಸವು ಅಭಿನಯಿಸಲು ಸೂಕ್ತವಾಗಿದ್ದು ನೃತ್ಯ ಕಲಾವಿದರ ಅತ್ಯಂತ ಪ್ರೀತಿಯ ವಿಷಯವಾಗಿದೆ.

ಧಾರ್ಮಿಕ ಅಂಗವಾಗಿ 'ನೃತ್ಯಂ-ಗೀತಂ-ವಾದ್ಯಂ' ಎಂಬುದಾಗಿ ಅರ್ಪಿತ ಗೊಳ್ಳುತ್ತಿದ್ದ ನಾಟ್ಯಸೇವೆ ದೇವದಾಸಿಯರಿಂದ ನಡೆಯುತ್ತಿತ್ತು. ಈ ನಾಟ್ಯಸೇವೆ ಹೊಯ್ಸಳರ ಕಾಲದಲ್ಲಿ ಕರ್ನಾಟಕದ ವಿಜಯನಗರ ರಾಜರ ರಾಜಾಶ್ರಯದಲ್ಲಿ ಶೃಂಗಾರ ಪ್ರಾಮುಖ್ಯವಾಗಿ ರಾಜಿಸತೊಡಗಿತು. ಆದರೆ ದಕ್ಷಿಣ ಭಾರತದಲ್ಲಿ ಅಷ್ಟೇ ವರ್ಚಸ್ಸಿನಿಂದ ಕೂಡಿ ಭೂಮಂಡಲಾಧೀಶರಾಗಿದ್ದ ತಿರುವಾಂಕೂರು ಮತ್ತು ತಂಜಾವೂರು ಪ್ರಾಂತ್ಯದ ಅರಸರೂ ಕೂಡ ಭರತನಾಟ್ಯ ಕಲೆಯ ಬಗ್ಗೆ ಅಪಾರ ಅಭಿಮಾನ ತೋರಿದರು. ಭಕ್ತಿ ಭಾವದ ಮೇಲೆ ತಮಿಳರಸರು ಹೆಚ್ಚಿನ ಆಸ್ಥೆ ವಹಿಸಿದುದರಿಂದ ಪ್ರಾಯಶಃ ವರ್ಣಗಳು, ತಿಲ್ಲಾನಗಳು ಮತ್ತು ಶಬ್ದಂಗಳು ಕನ್ನಡ ಮೂಲವನ್ನು ಅನುಸರಿಸದೆ ಮಿಕ್ಕ ದಕ್ಷಿಣ ಭಾಷೆಗಳ ಕೃತಿ ಮತ್ತು ಸಂಸ್ಕೃತಿಯನ್ನು ಹೋಲಿದವು. ಕನ್ನಡ ಭಾಷೆಯಲ್ಲಿ ಪದಗಳನ್ನು ಅಭಿನಯಿಸುತ್ತಾರಾದರೂ ನಮ್ಮ ನಾಡಿನಲ್ಲಿ ಪ್ರಚಾರಕ್ಕೆ ಕನ್ನಡ ಭಾಷೆಯ ವರ್ಣಗಳು ರೂಢಿಗೆ ಬಂದಿಲ್ಲ.

ಕನ್ನಡ ನಾಡಿನ ನಾಟ್ಯ ಸಂಪ್ರದಾಯ ಬಹಳ ಕಾಲದಿಂದ ದೇವದಾಸಿಯರ ಮಡಿಲಲ್ಲಿ ಉಳಿದು, ಬೆಳೆದು ಬಂದಿದೆ. ಇವರ ಪರಂಪರೆ ಕೂಡ ವಿಜಯನಗರ ಸಾಮ್ರಾಜ್ಯ ಉನ್ನತಿ, ಅವನತಿಯ ಜೊತೆ ಸಂಲಗ್ನಗೊಂಡು, ವಿಜಯನಗರದ ಅವನತಿಯ ನಂತರ ನಮ್ಮಲ್ಲಿನ ಅನೇಕ ನಾಟ್ಯ ಕಲಾವಿದರು, ನಾಟ್ಯಾಚಾರ್ಯರು ತಂಜಾವೂರು ನಾಯಕರ ಆಶ್ರಯ ಪಡೆದರು. ಒಂದು ಚಾರಿತ್ರಿಕ ಆಧಾರದ ಪ್ರಕಾರ ಕ್ರಿ. ಶ. 1561 ರಿಂದ ಕ್ರಿ. ಶ. 1614 ರವರೆಗೆ ರಾಜ್ಯವನ್ನಾಳಿದ ಅಚ್ಯುತನಾಯಕನೆಂಬ ಅರಸನೊಬ್ಬನು ಸುಮಾರು 500 ನೃತ್ಯ-ವೃತ್ತಿ ಕಲಾವಿದರಿಗೆ ವಸತಿಯನ್ನೂ, ಜೀವನಾಧಾರಕ್ಕೆಂದು ಜಮೀನನ್ನೂ ಒದಗಿಸಿದ್ದನೆಂದು ತಿಳಿದುಬರುತ್ತದೆ.

ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನೃತ್ಯಕಲೆಗೆ ಒಳ್ಳೆಯ ಪ್ರೋತ್ಸಾಹ ದೊರಕಿತು. ಕ್ರಿ. ಶ. 1860 ರಿಂದ ಕ್ರಿ. ಶ. 1881ರ ವರೆಗೆ ಕಲೆಗೆ ಉತ್ತೇಜನ ತುಸು ಕಡಿಮೆಯಾಗಿತ್ತೆನಿಸಿದರೂ ದಿ. ಚಾಮರಾಜ ಒಡೆಯರು ಪಟ್ಟಕ್ಕೆ ಬಂದಮೇಲೆ ಪುನಃ ಸಂಗೀತ ನೃತ್ಯಕಲೆಗೆ ರಾಜಾಶ್ರಯ ದೊರಕಿತು. ಸ್ವತಃ ತಾವೇ ಕಲಾವಿದರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಈ ಬೆಂಬಲ ಉನ್ನತ ರೀತಿಯಲ್ಲಿತ್ತು. ಮಹಾರಾಜರು ನೋಡಲು ಯೋಗ್ಯತೆ ಪಡೆದ ಪ್ರತಿಭಾವಂತ ನರ್ತಕಿಯರನ್ನೇ ರಾಜದರಬಾರುಗಳಿಗೆ ಕರೆತಂದು ಪ್ರದರ್ಶನ ಏರ್ಪಡಿಸುತ್ತಿದ್ದ ಕಾರಣ ನೃತ್ಯಕಲೆಯ ಅಂತಸ್ತು ಉಚ್ಚಮಟ್ಟದಲ್ಲಿಯೇ ಇತ್ತು. ಆ ದಿನದ ಅನೇಕ ಮಂದಿ ನಾಟ್ಯ ಕಲಾಭ್ಯಾಸಿಗಳಲ್ಲಿ ಕಲಾ ಸರಸ್ವತಿಯ ಅನುಷ್ಠಾನ, ಆವಾಹನೆ, ಆರಾಧನೆಗಳು ಬಲವಾಗಿರದೆ ಅವರ ಕಲಾಮಂತಿಕೆಯಲ್ಲಿ ಸೌಜನ್ಯದ ಮೆರಗು ಮರೆಯಾಗಿ ಆಡಂಬರ ಮೆರೆದಾಡತೊಡಗಿತು. ಆದರೆ ಕಳೆದ ಶತಮಾನದಲ್ಲಿ ಮೈಸೂರು ರಾಜ್ಯದಲ್ಲಿ ಭರತ

ನಾಟ್ಯ ಸಂಪ್ರದಾಯ ಪೀಠ ಪ್ರಾವಿತ್ರ್ಯತೆಯ ದೃಷ್ಟಿಯಿಂದಲೋ ಏನೋ ಅಕಳಂಕ ವಾಗಿದ್ದಿತೆಂದು ತಿಳಿದುಬರುತ್ತದೆ.

ಮೈಸೂರು, ಬೆಂಗಳೂರು, ಮುಳಬಾಗಿಲು, ಕಡೂರು, ಟಿ. ನರಸೀಪುರ ಮುಂತಾದ ಸ್ಥಳಗಳಲ್ಲಿ ಸಾಂಪ್ರದಾಯಿಕ ಭರತನಾಟ್ಯ ವಿದ್ಯೆಯಲ್ಲಿ ಸಾಕಷ್ಟು ಪ್ರಾವೀಣ್ಯತೆಪಡೆದು ಹೆಸರುವಾಸಿಯಾದ ದೇವದಾಸೀ ಪಂಗಡದವರು ದೇವಸ್ಥಾನಗಳಆಶ್ರಯ ಪಡೆದು ಜೀವಿಸುತ್ತಿದ್ದರು. ಈ ದೇವದಾಸೀ ಪಂಗಡದವರಿಗೆ ಸ್ಥಳೀಯ ಶ್ರೀಮಂತ ರಿಂದಲೂ ಜಮೀನುದಾರರಿಂದಲೂ ಮತ್ತು ಕಲೋಪಾಸಕರಿಂದಲೂ ಪ್ರೋತ್ಸಾಹ ಸಿಗುತ್ತಿತ್ತು. ಅವರಿಗೆ ಭರತನಾಟ್ಯ ಕಲೆಯ ಸಾಂಪ್ರದಾಯಿಕ ಕಲಾರಾಧನೆಗೆ ಸಾಕಷ್ಟು ಪ್ರೋತ್ಸಾಹದ ಜೊತೆಗೆ ಅಭ್ಯಾಸ ಮತ್ತು ಸಂಗೀತ ಕಲೆಯ ಪಾಠವೂ ಆಗುತ್ತಿದ್ದ ಕಾರಣ ಈ ಕಲಾವಿದೆಯರು ಪ್ರಜ್ಞಾಶಾಲೀ ಪಂಗಡಕ್ಕೆ ಸೇರಿದವರೆಂದೆನಿಸಿ ಕೊಳ್ಳುತ್ತಿದ್ದರು. ಈ ದೇವದಾಸಿ ಪಂಗಡದ ಪ್ರಭಾವ ಸಮಾಜದ ಎಲ್ಲಾ ವರ್ಗಗಳ ಮೇಲೂ ಬೀರಿದ್ದಿತು. ಈ ದೈವಿಕ ಭಾವನೆಯಿಂದ ಕೂಡಿದ ಭರತನಾಟ್ಯವು ದಿನಗಳು ಕಳೆದಂತೆ ಮಾನವ ಷಡ್ವೈರಿಗಳಿಗೆ ಬಲಿಯಾಗಿ ಅಧೋಗತಿಗೆ ಇಳಿಯಿತು. ಆದರೆ ಕಲೆಯೇ ಕಾಯಕ, ಜೀವನ ಎಂದು ಭಾವಿಸಿದ ಹಲವಾರು ಕಲಾವಿದೆಯರು ಮೈಸೂರು, ಮುಳಬಾಗಿಲು, ಕಡೂರು ಮುಂತಾದ ಕಡೆಗಳಲ್ಲಿ ಗುರುಕುಲವಾಸಮಾಡಿ ಕಲೆಯನ್ನು ತಮ್ಮ ಮನೆಗಳ ಸೊತ್ತಾಗಿ ಉಳಿಸಿಕೊಂಡರು. ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ, ಮೈಸೂರಿನ ಮುಖ್ಯ ಪಟ್ಟಣಗಳ ದೇವಾಲಯಕ್ಕೆ ಸಂಬಂಧಿಸಿದ ಅನೇಕ ದೇವದಾಸಿಯರು, ಅವರ ನೃತ್ಯಗುರುಗಳ ಕಲೆಯನ್ನು ಕಾಪಾಡಿಕೊಂಡರು. ಈ ಸಾಲಿಗೆ ಸೇರಿದ ಘನ ವಿದ್ವಾಂಸರಾದ ಪನಕೇಸರಿ ವೆಂಕಟಸುಬ್ಬ ಭಟ್ಟರು ಶ್ರೇಷ್ಠ ಗುರು ಗಳೆಂದು ವಿಶೇಷ ಗೌರವ ಪಡೆದರು.

ಕರ್ನಾಟಕ ರಾಜಮಹಾರಾಜರುಗಳು ತಮ್ಮ ಅರಮನೆಗಳಲ್ಲಿ ಭರತ ನಾಟ್ಯಕ್ಕೆ ಕೊಟ್ಟ ಪ್ರೋತ್ಸಾಹ, ಎಲ್ಲರಿಗೂ ತಿಳಿದ ವಿಷಯ. ಪನಕೇಸರಿ ವೆಂಕಟಸುಬ್ಬ ಭಟ್ಟರ ಶಿಷ್ಯರು ಈ ಕಲೆಯನ್ನು ಪ್ರೌಢಿಮೆಯಿಂದ ಸಾಧಿಸಿ, ಪ್ರದರ್ಶಿಸಿ, ಕಲೆಗೆ ಹುರುಪನ್ನು ಕೊಟ್ಟರು. ನಂತರ ಬಂದ ಕವೀಶ್ವರ ಗಿರಿಯಪ್ಪ, ಕಾಶಿಗುರು, ಅಮೃತಪ್ಪ, ಅಪ್ಪಯ್ಯ, ದಾಸಪ್ಪ ಮೊದಲಾದ ವಿದ್ವಾಂಸರು ಅರಸರ ಆಶ್ರಯದಲ್ಲಿ ಅಸಾಧಾರಣ ಸಾಧನೆ ಮಾಡಿದರು. ಕಲೆಯೇ ಜೀವನ, ಕಲೆಯೇ ದೇವರು ಎಂದು ಕೀರ್ತಿ ಪಡೆದ ಕಲಾವಿದೆ, ದಾಸಪ್ಪನವರ ಕುವರಿ ಜಟ್ಟಿ ತಾಯಮ್ಮನವರು.

ಜಟ್ಟಿ ತಾಯಮ್ಮನವರು ಸುಬ್ಬರಾಯಪ್ಪನವರಿಂದ 'ನೃತ್ಯ' ವಿಭಾಗವನ್ನು ಅಭ್ಯಸಿಸಿ ತದನಂತರ ಕವೀಶ್ವರ ಗಿರಿಯಪ್ಪ ಮತ್ತು ಚಂದ್ರಶೇಖರ ಶಾಸ್ತ್ರಿಯವರಿಂದ 'ಅಭಿನಯ'ವನ್ನು ಕಲಿತರು. ಅಭಿನವ 'ಕಾಳಿದಾಸ' ಎಂದು ಹೆಸರುವಾಸಿಯಾದ

ವಿದ್ವಾನ್ ಕರಿಬಸಪ್ಪ ಶಾಸ್ತ್ರಿಗಳು ತಾಯಮ್ಮನವರಿಗೆ ಪಾಠವನ್ನು ಮುಂದುವರಿಸಿದರು. ಸಂಸ್ಕೃತ ಮತ್ತು ಕನ್ನಡದಲ್ಲಿ ಪಾಂಡಿತ್ಯ, ನೂರಾರು ಪದಗಳೂ, ಜಾವಳಿಗಳೂ ಲೀಲಾಜಾಲವಾಗಿ ಅಭಿನಯ ಮಾಡುವ ಚಾತುರ್ಯ ಹೊಂದಿದ ಜಟ್ಟಿ ತಾಯಮ್ಮನವರಿಗೆ ಶ್ರೀ ಜಯಚಾಮರಾಜ ಒಡೆಯರು, 'ನಾಟ್ಯ ಸರಸ್ವತಿ' ಎಂಬ ಬಿರುದನ್ನು ದಯಪಾಲಿಸಿದರು.

ನಾಟ್ಯ ಸರಸ್ವತಿ ಜಟ್ಟಿ ತಾಯಮ್ಮನವರ ಶಿಷ್ಯಂದಿರಾದ ಶ್ರೀಮತಿ ವೆಂಕಟಲಕ್ಷಮ್ಮನವರು ಸುಮಾರು ಮೂವತ್ತು ವರ್ಷಗಳಿಂದ ಮೈಸೂರಿನಲ್ಲಿ ಕಲಾಸೇವೆಯನ್ನು ಮಾಡುತ್ತಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಅಂಗವಾದ ಲಲಿತ ಕಲಾ ಕಾಲೇಜಿನಲ್ಲಿ ನೃತ್ಯ ಅಧ್ಯಾಪಕರಾಗಿ ವೆಂಕಟಲಕ್ಷಮ್ಮನವರು ಅನೇಕ ನೃತ್ಯ ಕಲಾವಿದರಿಗೆ ತರಪೇತುಕೊಟ್ಟು ನೃತ್ಯ ಕಲೆಯನ್ನು ಶ್ರದ್ಧೆಯಿಂದ ಮುಂದುವರಿಸಿದ್ದಾರೆ. ಇವರು ಅಭಿನಯದಲ್ಲಿ ಅಗ್ರಗಣ್ಯರು. ಅನುಭವಸ್ಥರು ಹಾಗೂ ಅದ್ವಿತೀಯರು. ಇವರ ಕಲಾ ಪ್ರೌಢಿಮೆಯನ್ನು ಮೆಚ್ಚಿ ಹಿಂದಿನ ಮೈಸೂರು ರಾಜರು ಇವರಿಗೆ 'ಆಸ್ಥಾನ ವಿದುಷಿ'ಯನ್ನಾಗಿ ನೇಮಕ ಮಾಡಿಕೊಂಡಿದ್ದರು ; ಅಲ್ಲದೆ ಶ್ರೀಮತಿಯವರಿಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿಯೂ ಸಿಕ್ಕಿದೆ. ಇತ್ತೀಚೆಗೆ ಇವರು ಲಲಿತ ಕಲಾ ಕಾಲೇಜಿನಿಂದ ನಿವೃತ್ತಿ ಹೊಂದಿ ಅವರ ಕಾರ್ಯಗಳನ್ನು ಮೊಮ್ಮಗಳಾದ ಶಕುಂತಲಾ ಅವರಿಗೆ ನಿರ್ವಹಿಸಿ ಕೊಟ್ಟಿದ್ದಾರೆ.

ಬೆಂಗಳೂರು ನಗರದಲ್ಲಿ ಶ್ರೀ ಕೋಲಾರ ಪುಟ್ಟಪ್ಪನವರು ಪ್ರಖ್ಯಾತ ನಾಟ್ಯ ಗುರುಗಳಾಗಿ ನಾಗರತ್ನ, ವರಾಲು ಮುಂತಾದವರನ್ನು ತರಬೇತು ಮಾಡಿ ಶ್ರೇಷ್ಠ ಕಲಾವಿದೆಯರನ್ನಾಗಿ ಮಾಡಿದರು. ರಾಜಾಶ್ರಯ ಪಡೆದ ಇನ್ನೊಬ್ಬ ಕಲಾವಿದೆ ಚಂದ್ರವದನಮ್ಮ ; ಭಾವಾಭಿನಯದಲ್ಲಿ ಆ ಕಾಲದಲ್ಲಿ ಇವರಿಗೆ ಯಾರೂ ಸರಿಸಮರಿರಲಿಲ್ಲ ಎಂದು ಪ್ರತೀತಿ. ನೃತ್ಯ ಕಲೆಯಲ್ಲಿ ಹಾಗೂ ಸಂಗೀತದಲ್ಲಿ ಈಕೆ ಪ್ರವೀಣೆ. ನಾಟ್ಯ ಗುರುಗಳಾದ ಅಮೃತಪ್ಪ ಮತ್ತು ಅಪ್ಪಯಪ್ಪನವರಿಂದ ಪಾಠವನ್ನು ಕಲಿತ ಪುಟ್ಟದೇವಮ್ಮ ಮತ್ತು ಆಕೆಯ ಮಗಳು ಚಿಕ್ಕದೇವಮ್ಮ ಕೂಡ ಅರಮನೆಯ ಪ್ರೋತ್ಸಾಹ ಪಡೆದ ಕಲಾವಿದೆಯರು.

ನಾಟ್ಯ ಸರಸ್ವತಿ ಜಟ್ಟಿ ತಾಯಮ್ಮನವರಲ್ಲಿ ಶಿಕ್ಷಣ ಪಡೆದವರಲ್ಲಿ ಇನ್ನೊಬ್ಬ ಕಲಾವಿದೆ ಶ್ರೀಮತಿ ಎಸ್. ಸುಂದರಮ್ಮನವರು. ಸಂಗೀತ ಮನೆತನದಲ್ಲಿ ಹುಟ್ಟಿದ್ದ ಶ್ರೀಮತಿಯವರು ಬಾಲ್ಯದಿಂದಲೂ ನೃತ್ಯ ಕಲೆಯಲ್ಲಿ ಆಸಕ್ತಿ ತೋರಿಸಿ ಕಲಾ ಶಿಕ್ಷಣ ಪಡೆದು ಹೆಸರುವಾಸಿಯಾದರು. ವಿದ್ವನ್ಮಣಿಗಳಾದ ಶ್ರೀ ಲಕ್ಷ್ಮೀದಾಸರು ಮತ್ತು ಶ್ರೀ ಎಂ. ಎಲ್. ಶಿವರಾಮಯ್ಯನವರ ಸಂಗೀತ ಅಭ್ಯಾಸ ಜೊತೆಗೆ ಈ ಕಲಾವಿದೆಯ ನೃತ್ಯಾಭ್ಯಾಸ ಜರುಗಿತು. ಇವರ ರಂಗಪ್ರವೇಶವು ನಂಜನಗೂಡಿನಲ್ಲಿ ಜರುಗಿದ

ಲಲಿತ ಕಲಾ ಸಮ್ಮೇಳನದಲ್ಲಿ ನಡೆದು, ಇವರು ವಿದ್ವಜ್ಜನರ ಮೆಚ್ಚುಗೆಯನ್ನೂ ರಜತ ಪದಕವನ್ನೂ ಹಾಗೂ ಯೋಗ್ಯತಾ ಪತ್ರವನ್ನೂ ಪಡೆದರು. ಆಗ ಸುಂದರಮ್ಮನವರಿಗೆ ಕೇವಲ ಹನ್ನೊಂದು ವರ್ಷ ವಯಸ್ಸು. ವರ್ಷಗಳು ಕಳೆದಂತೆ ಶ್ರೀಮತಿಯವರಿಗೆ ಕೀರ್ತಿಮಾಲೆಯೇ ಲಭ್ಯವಾಗುತ್ತಾ ಬಂದಿದೆ. 1948ರಲ್ಲಿ ಮೈಸೂರು ನಗರದಲ್ಲಿ ನಡೆದ ಅಖಿಲಭಾರತ ವಿದ್ಯಾ ಸಮ್ಮೇಳನದಲ್ಲಿ ಈ ಕಲಾವಿದೆಯರು ಸುವರ್ಣ ಪದಕವನ್ನೂ ಪ್ರಶಸ್ತಿ ಪತ್ರವನ್ನೂ ಪಡೆದರು. ಕ್ರಮೇಣ ರಾಜಮರ್ಯಾದೆ ದೊರಕಿ ಆಸ್ಥಾನ ವಿದುಷಿಯಾದರು. ಇವರು ಮೈಸೂರಿನಲ್ಲಿ ಅನೇಕ ಸಂಸ್ಥೆಗಳಲ್ಲಿ ನೃತ್ಯ ಶಿಕ್ಷಣ ಕೊಡುತ್ತಿದ್ದಾರೆ.

ಅಸಾಮಾನ್ಯ ಸಾಧನೆಯಿಂದ ನೃತ್ಯ ಕಲೆಯನ್ನು ಕರಗತ ಮಾಡಿ ಪ್ರಖ್ಯಾತಿ ಹೊಂದಿದ್ದ ಇನ್ನೊಬ್ಬ ಕಲಾವಿದೆ ಶ್ರೀಮತಿ ಜೇಜಮ್ಮನವರು. ಶ್ರೀ ಅಮೃತಪ್ಪನವರ ಮೊಮ್ಮಗಳಾದ ಜೇಜಮ್ಮನವರು, ಅವರಿಂದ ನೃತ್ಯ ಶಿಕ್ಷಣ ಹೊಂದಿ ನಂತರ ಶ್ರೀಮತಿ ಗೌರಮ್ಮನವರಿಂದ ಹೆಚ್ಚಿನ ನೃತ್ಯಪಾಠ ಮಾಡಿಕೊಂಡರು. ವಂಶ ಪರಂಪರೆಯಾಗಿ ಬಂದ ನೃತ್ಯಕಲೆಯನ್ನು ಶ್ರದ್ಧಾ ಸಕ್ತಿಗಳಿಂದ ಬೆಳಸಿ ಜನರ ಮೆಚ್ಚುಗೆಗೆ ಪಾತ್ರರಾದರು. ಇಂದಿಗೂ ಇವರು ನೃತ್ಯ ಶಿಕ್ಷಣವನ್ನು ಮೈಸೂರಿನಲ್ಲಿ ಕೊಡುತ್ತಿದ್ದಾರೆ.

ಭರತ ನಾಟ್ಯ ಪರಂಪರೆಯಲ್ಲಿ 'ಭರತ ನಾಟ್ಯ ಕಲಾ ಕೋವಿದೆ' ಎಂದು ಬಿರುದುಗಳಿಸಿದ್ದ ಶ್ರೀಮತಿ ಚಂದ್ರಕಾಂತಮ್ಮನವರು ಒಂದು ವಿಶಿಷ್ಟ ದರ್ಜೆಯ ಕಲಾವಿದೆ. ವಿವಿಧ ಕಲೆಗಳ ವ್ಯಾಸಪೀಠವಾಗಿದ್ದ ತಿರುಮಕೂಡಲಿನಲ್ಲಿ ಜನಿಸಿದ ಚಂದ್ರಕಾಂತಮ್ಮನವರು ಬಾಲ್ಯದಿಂದಲೇ ನಾಟ್ಯಕ್ಕೆ ಮನಸೋತು ಕಲಾಭ್ಯಾಸವನ್ನು ಆರಂಭಿಸಿದರು. ಅಂದಿನ ಪ್ರಸಿದ್ಧ ನಾಟ್ಯಾಚಾರ್ಯರಾದ ಶ್ರೀ ಅರಣಿ ಶಾಮಣ್ಣನವರ ಸುಪುತ್ರ ವಿದ್ವಾನ್ ಅಪ್ಪಯ್ಯನವರು ಇವರಿಗೆ ಭರತ ನಾಟ್ಯ ಗುರುಗಳಾದರು. ನಂತರ ಆಸ್ಥಾನ ವಿದ್ವಾನ್ 'ಕಾಶೀ ಗುರು'ಗಳ ಬಳಿ 'ಅಭಿನಯ'ವನ್ನು ಕಲಿತರು. ಸುಪ್ರಸಿದ್ಧ ಕಲಾಶ್ರೀ ಬಿಡಾರಂ ಕೃಷ್ಣಪ್ಪನವರ ಶಿಷ್ಯರಾದ ಶ್ರೀ ಬಿ. ರಾಚಪ್ಪನವರ ಸಮ್ಮುಖದಲ್ಲಿ ಸಂಗೀತ ಜ್ಞಾನವನ್ನು ಸಂಪಾದಿಸಿದರು. ತಾಳ ಮತ್ತು ಲಯದಲ್ಲಿ ಪರಿಣತರಾದ ವಿದ್ವಾನ್ ತಿರುವಯ್ಯಾರ್ ಮತ್ತು ಸುಬ್ರಮಣ್ಯ ಅಯ್ಯರ್ ಅವರ ಬಳಿ ಲಯ ಶಾಸ್ತ್ರದಲ್ಲಿ ಶಿಕ್ಷಣವನ್ನು ಹೊಂದಿದರು. ನಾಲ್ವಡಿ ಕೃಷ್ಣರಾಜ ಅರಸರು ಇವರಿಗೆ 'ಆಸ್ಥಾನ ವಿದುಷಿ' ಪದವಿಯನ್ನು ನೀಡಿದರು.

ವೈಣಿಕ ವಿದುಷಿ ಮತ್ತು ನೃತ್ಯ ವಿಶಾರದೆಯಾದ ಶ್ರೀಮತಿ ಎಂ. ಸುಬ್ಬಮ್ಮನವರು ಕಲಾರಸಿಕರಿಂದಲೂ ಮತ್ತು ಪಂಡಿತರಿಂದಲೂ ಸಂಗೀತ ನೃತ್ಯದಲ್ಲಿ ಅಸಾಮಾನ್ಯರೆಂದು ಎನಿಸಿಕೊಂಡಿದ್ದಾರೆ. ಇವರ ನೃತ್ಯ ಶಿಕ್ಷಣ ಜಟ್ಟಿ ತಾಯಮ್ಮನವ

ರಿಂದ ನಡೆಯಿತು. ವಂಶ ಪರಂಪರೆಯಾಗಿ ಬಂದ ಸಂಗೀತ ನೃತ್ಯ ಕಲೆಗಳಲ್ಲಿ ಈ ಕಲಾವಿದೆಯರು ಅಸಾಮಾನ್ಯ ಪಾಂಡಿತ್ಯವನ್ನು ಪಡೆದರು. ಶ್ರೀಮತಿಯವರು ನಲವತ್ತು ವರ್ಷಗಳ ಕಾಲ ನಾಲ್ವಡಿ ಕೃಷ್ಣರಾಜರ ಆಸ್ಥಾನದಲ್ಲಿ 'ಆಸ್ಥಾನ ವಿದುಷಿ' ಯಾಗಿ ಮೆರೆದರು. ಇವರು ತಮ್ಮ ಕಲಾ ಪ್ರೌಢಿಮೆ ಮತ್ತು ಕಲೋಪಾಸನೆಯಿಂದ ಅನೇಕ ಬಿರುದುಗಳನ್ನು ಪಡೆದಿದ್ದಾರೆ.

ಸುಮಾರು ನಲವತ್ತು ವರ್ಷಗಳಿಂದ ನೃತ್ಯಕಲೆಯು ದೇವದಾಸಿಯರ ಕುಟುಂಬ ವನ್ನು ಬಿಟ್ಟು ಇತರ ಮನೆತನಗಳಿಗೆ ಬಂದಿದೆ. ಇಂತಹ ಮನೆತನದಿಂದ ಬಂದ ನೃತ್ಯ ಕಲಾವಿದೆ ಶ್ರೀಮತಿ ಶಾಂತಾರಾವ್. ಶಾಂತಾರಾವ್ ಮೊದಲು ಕಥಕ್ಕಳಿ ನೃತ್ಯ ಸಂಪ್ರ ದಾಯವನ್ನು ಸಾಂಗವಾಗಿ ಕಲಿತು ಪ್ರದರ್ಶಿಸಿ ಈ ಸಂಪ್ರದಾಯದ ಪ್ರಪ್ರಥಮ ಕಲಾವಿದೆಯೆಂದು ಪ್ರಖ್ಯಾತಿ ಹೊಂದಿದ್ದಾರೆ. ನಂತರ ದಿವಂಗತ ಮೀನಾಕ್ಷಿ ಸುಂದರಂ ಪಿಳ್ಳೆಯವರಿಂದ ಭರತನಾಟ್ಯವನ್ನು ಶಾಸ್ತ್ರೋಕ್ತವಾಗಿ ಕಲಿತು ಭಾರತದ ಎಲ್ಲಡೆಯಲ್ಲಿ ಶ್ರೇಷ್ಠವಾಗಿ ಪ್ರದರ್ಶಿಸಿ ಈ ಕಲೆಯ ಪುನರುತ್ಥಾನಕ್ಕೆ ಕಾರಣರಾಗಿದ್ದಾರೆ. ಕಥಕ್ಕಳಿಯು ತಾಂಡವಕ್ಕೆ ಪ್ರಾಶಸ್ತ್ಯವನ್ನು ಕೊಟ್ಟರೆ ಭರತನಾಟ್ಯವು ಲಾಸ್ಯಕ್ಕೆ ಪ್ರಾಮುಖ್ಯತೆ ಕೊಡುತ್ತದೆ ಎಂಬುದು ಕಲೋಪಾಸಕರಿಗೆ ತಿಳಿದ ವಿಷಯ. ಈ ಎರಡು ಕಲೆಗಳಲ್ಲಿ ಅಸಾಧಾರಣ ಶಿಕ್ಷಣ ಪಡೆದ ಶಾಂತಾರಾವ್, ನೃತ್ಯಕಲೆಯ ಪುನ ರೋದ್ಧಾರದಲ್ಲಿ ಬಹಳ ಶ್ರಮಪಟ್ಟು ಅಸಾಮಾನ್ಯ ಖ್ಯಾತಿ ಪಡೆದಿದ್ದಾರೆ. ಇವರು ಕೇರಳದ ಕಲಾಮಂಡಲಂದಲ್ಲಿ 'ಮೋಹಿನಿ ಆಟ್ಟಂ' ಎಂಬ ನೃತ್ಯ ಸಂಪ್ರಾದಾಯ ವನ್ನು ಕಲಿತು, ಇದನ್ನು ಪ್ರಪ್ರಥಮದಲ್ಲಿ ರಂಗಸ್ಥಳಕ್ಕೆ ತಂದು ಹೆಸರುವಾಸಿಯಾಗಿ ದ್ದಾರೆ. ಯಾವುದೇ ಸಂಪ್ರದಾಯವಾಗಲಿ ಅದನ್ನು ಮಲಿನ ಮಾಡದೇ ಶುದ್ಧವಾಗಿ ಅಭಿನಯಿಸುವ ಕಲಾವಿದೆಯೇ ಶಾಂತಾರಾವ್ : ಹಾಗೆಯೇ ಆಯಾ ಸಂಪ್ರದಾಯಕ್ಕೆ ತಕ್ಕ ವೇಷ ಭೂಷಣ ಉಡುಪು-ತೊಡವುಗಳನ್ನು ಉಪಯೋಗಿಸಿ ಭಾರತೀಯ ನೃತ್ಯ ಕಲೆಗಳಿಗೆ ಉನ್ನತ ಸ್ಥಾನವನ್ನು ಕಲ್ಪಿಸಿದ ನೃತ್ಯತಾರೆ-ಶಾಂತಾರಾವ್. ಇವರಿಗೆ ದೈವ ದತ್ತವಾದ ಶಾರೀರ ಸಂಪತ್ತು, ಮುಖ ಲಕ್ಷಣ, ಹಾಗೂ ನಾಟ್ಯಕ್ಕೆ ಬೇಕಾದ ಮೈಕಟ್ಟು ಇದೆ. ಈ ಕಲಾವಿದೆ ಇಡೀ ಜಗತ್ತನ್ನೆಲ್ಲ ಸುತ್ತಿ ನಮ್ಮ ನೃತ್ಯ ಕಲೆಗಳನ್ನು ಪರದೇಶಗಳಲ್ಲಿ ಪ್ರಸಾರಮಾಡಿದ್ದಾರೆ. ಇವರ ಕಲಾಸಕ್ತಿಯನ್ನು ಮೆಚ್ಚಿ ಮೈಸೂರು ಸಂಗೀತ ನಾಟಕ ಅಕಾಡೆಮಿ ಮತ್ತು ಕೇಂದ್ರ ಸಂಗೀತ ನಾಟಕ ಅಕಾಡೆಮಿಯವರು ಇವರಿಗೆ ಪ್ರಶಸ್ತಿಗಳನ್ನು ಕೊಟ್ಟಿದ್ದಾರೆ. ನೃತ್ಯಮಾತ್ರವಲ್ಲ, ಸಂಗೀತ, ಚಿತ್ರಕಲೆಯಲ್ಲೂ ಇವರಿಗೆ ಸಾಕಷ್ಟು ಪರಿಶ್ರಮವಿದೆ. ಇವರನ್ನು ನಿಜವಾಗಿಯೂ 'ಲಲಿತ ಕಲಾ ತಪಸ್ವಿನಿ' ಎಂದು ಕರೆಯಬಹುದು.

ತಮ್ಮ ತಮ್ಮ ನಾಡಿನ ಕಲೆಗಳನ್ನು ಅಲ್ಲಿನ ವಾಸಿಗಳು ಕಲಿತು ಪ್ರದರ್ಶಿಸು ವುದು ಸಹಜ. ಆದರೆ ಇತರ ನಾಡಿನ ಕಲೆಗಳಲ್ಲಿ ಆಸಕ್ತಿಹೊಂದಿ ಶ್ರಮಪಟ್ಟು ಅವು

ಗಳನ್ನು ಮುಂದಕ್ಕೆ ತರುವುದು ಅಪರೂಪ. ಉತ್ತರ ಭಾರತದ ಕಥಕ್ ನೃತ್ಯ ಸಂಪ್ರದಾಯವನ್ನು ಶಾಸ್ತ್ರೋಕ್ತವಾಗಿ ಕಲಿತು ಅದರಲ್ಲಿ ಪ್ರೌಢಿಮೆ ಪಡೆದ ನೃತ್ಯಕಲಾವಿದೆ ಮಾಯಾರಾವ್. ಕನ್ನಡ ತಾಯಿಯ ಮಗಳಾದ ಮಾಯಾರಾವ್ ಮೈಸೂರು ವಿಶ್ವವಿದ್ಯಾನಿಲಯದ ಬಿ. ಎ. ನಲ್ಲಿ ತೇರ್ಗಡೆ ಪಡೆದು ಸುಮಾರು ಮುವತ್ತು ವರ್ಷಗಳಿಂದ ಕಥಕನೃತ್ಯ ಮತ್ತು ಇತರ ನೃತ್ಯರೂಪಕಗಳಿಂದ ಕೂಡಿದ ಅನೇಕ ನೃತ್ಯನಾಟ್ಯರೂಪಕಗಳನ್ನು ನಿರೂಪಿದ್ದಾರೆ. 'ನಾಟ್ಯ ಸರಸ್ವತಿ'ಎಂಬ ಕಲಾ ಸಂಸ್ಥೆಯನ್ನಾರಂಭಿಸಿ 'ಕಲೆ ಮತ್ತು ಜೀವನ', 'ಮೋಹಿನಿ ಭಸ್ಮಾಸುರ', 'ಸೀತಾಪಹರಣ' ಮುಂತಾದ ನೃತ್ಯನಾಟಕಗಳನ್ನು ಪ್ರದರ್ಶಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಘಗಳ ಸಮ್ಮೇಳನ ಒಂದರಲ್ಲಿ ಇವರು ಉಪನಿಷತ್ತಿನ ಆಧಾರದ ಮೇಲೆ 'ಅನ್ನಂ ಬಹುಕುರ್ವೀತ' ಅಂದರೆ 'ಹೆಚ್ಚು ಆಹಾರ ಬೆಳೆ' ಎಂಬ ನೃತ್ಯರೂಪಕವನ್ನು ನಿರೂಪಿಸಿ ಪ್ರದರ್ಶಿಸಿ ರಾಷ್ಟ್ರದ ಗಮನವನ್ನು ಸೆಳೆದಿದ್ದಾರೆ. ಸಮಕಾಲೀನ ಸಾಮಾಜಿಕ ವಿಷಯಗಳನ್ನು ನೃತ್ಯರೂಪಕಮಾಡಿ ನಿರೂಪಿಸಿರುವುದು ಒಂದು ಪ್ರಥಮ ಪ್ರಯತ್ನ. ಮಾಯಾರಾವ್ 1954ರಲ್ಲಿ ಭಾರತ ಸರ್ಕಾರದ ವಿದ್ಯಾರ್ಥಿವೇತನ ಪಡೆದು ರಾಷ್ಟ್ರಖ್ಯಾತ ಕಥಕ್ ಗುರುಗಳಾದ ಶಂಭುಮಹಾರಾಜ ಮತ್ತು ಸುಂದರ ಪ್ರಸಾದ ಇವರಲ್ಲಿ ಶಿಕ್ಷಣ ಪಡೆದರು. ಭಾರತದಲ್ಲಿ ನೃತ್ಯ–ಸಂಯೋಜನಾತಂತ್ರ ಸಂಪ್ರದಾಯವನ್ನು(Choreography) ಭಾರತದಲ್ಲಿ ತರಲು ಶ್ರಮಿಸುತ್ತಿರುವ ಆದ್ಯ ಪ್ರವರ್ತಕಿಯಾಗಿದ್ದಾರೆ. ಇವರು 1961ರಲ್ಲಿ ನೃತ್ಯ–ಸಂಯೋಜನಾ ತಂತ್ರದಲ್ಲಿ ಹೆಚ್ಚು ಜ್ಞಾನವನ್ನು ಪಡೆಯಲು ಭಾರತಸರ್ಕಾರದ ವಿದ್ಯಾರ್ಥಿವೇತನ ಪಡೆದು ರಷ್ಯಾದಲ್ಲಿ ಎರಡು ವರ್ಷಗಳ ಕಾಲ ಇದ್ದು ಈ ಕ್ಷೇತ್ರದಲ್ಲಿ ವಿಶೇಷ ಪ್ರೌಡಿಮೆ ಗಳಿಸಿದರು. ರಷ್ಯಾದ ಲಾಟ್‌ವಿಯಾದ ರಾಜಧಾನಿ ರೀಗಾದಲ್ಲಿ ಒಂದು ನೂರುವರ್ಷದ ಭವ್ಯ ಪರಂಪರೆ ಹೊತ್ತ ರಂಗಮಂದಿರದ ನೃತ್ಯ ನಿಯೋಜಕರು ಮಾಯಾರಾವ್‌ರ ಸಹಾಯದಿಂದ ಮಹಾಕವಿ ಕಾಳಿದಾಸನ 'ಶಾಕುಂತಲ' ನೃತ್ಯನಾಟಕವನ್ನು ಪ್ರದರ್ಶಿಸಿದರು. ಈಗ ಶ್ರೀಮತಿ ಮಾಯಾರಾವ್ ಅವರು ನಾಟ್ಯಾ ಸ್ಕೂಲ್ ಆಫ್ ಕಾರಿಯೊಗ್ರಾಫಿ (Natya School of Choreography) ಯಲ್ಲಿ ಮುಖ್ಯ ನಿರ್ದೇಶಕರಾಗಿದ್ದಾರೆ. ನೃತ್ಯಪಂಗಡದವರೊಂದಿಗೆ ಭಾರತಾದ್ಯಂತ ನೃತ್ಯಪ್ರದರ್ಶನಗಳನ್ನು ಕೊಟ್ಟು, ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಯಶಸ್ವಿಯಾಗಿದ್ದಾರೆ.

ಬೆಂಗಳೂರು ನಗರದಲ್ಲಿ ದಿವಂಗತ ಶ್ರೀಮಾನ್ ಕೋಲಾರ ಪುಟ್ಟಪ್ಪನವರು ಕ್ರಿ.ಶ. 1945ರ ವರೆಗೆ ಪ್ರತಿಭಾನ್ವಿತ ಶಿಷ್ಯಂದಿರಿಗೆ ನೃತ್ಯ ಪಾಠವನ್ನು ಹೇಳಿಕೊಡುತ್ತಿದ್ದರು. ಇವರು ಕಂಚಿ ಹಾಗೂ ಪಂದನಲ್ಲೂರಿನಿಂದ ಬಂದ ಕಂಚಿ ಸದಾಶಿವಯ್ಯರೆಂಬ ನಾಟ್ಯಾಚಾರ್ಯರ ಶಿಷ್ಯಂದಿರು. ಕ್ರಿ. ಶ. 1910 ರಿಂದ 1935 ರವರಿಗೆ ನೃತ್ಯಕಲಾ ಸೇವಕರಿಗೆ ಕಷ್ಟ ನಿಷ್ಠುರಗಳು ಮತ್ತು ಕಲಂಕಗಳು ಒದಗಿತೆಂಬುದು

ಎಲ್ಲರಿಗೂ ತಿಳಿದ ವಿಷಯ. ಆದರೂ 1935 ರಿಂದ 1940ರ ವರೆಗೆ ಎಲ್ಲಾ ಕಷ್ಟಗಳನ್ನು ಸುಧಾರಿಸಿ ಕೋಲಾರ ಪುಟ್ಟಪ್ಪನವರು ಮೊಟ್ಟಮೊದಲು ಕುಲೀನ ಮನೆತನದವರಾದ ಅಂತರ ರಾಷ್ಟ್ರೀಯ ಖ್ಯಾತಿ ಪಡೆದ ಶ್ರೀ ರಾಮಗೋಪಾಲ ಮತ್ತು ಶ್ರೀ ಯು. ಎಸ್. ಕೃಷ್ಣರಾಯರಿಗೂ ಭರತನಾಟ್ಯವನ್ನು ಕೂಲಂಕಷವಾಗಿ ಹೇಳಿಕೊಟ್ಟರು. ನಂತರ ಅವರ ಪ್ರೇರಣೆಯಿಂದ ರಾಮಗೋಪಾಲರು, ಕೃಷ್ಣರಾಯರು ಮತ್ತು ಅವರ ಧರ್ಮಪ್ರತ್ನಿ, ಯು. ಕೆ. ಚಂದ್ರಭಾಗಾದೇವಿಯವರು ತಂಜಾವೂರಿಗೆ ಪಯಣ ಬೆಳೆಸಿ ದಿವಂಗತ ನಾಟ್ಯಕಲಾನಿಧಿ ಶ್ರೀಮಾನ್ ಪಂದನಲ್ಲೂರ ಮಿನಾಕ್ಷಿಸುಂದರಂ ಪಿಳ್ಳೆಯವರಿಂದ ಭರತ ನಾಟ್ಯವನ್ನು ಕಲಿತುಕೊಂಡರು. ಶ್ರೀ ಯು. ಎಸ್. ಕೃಷ್ಣರಾಯರ ಮತ್ತು ಶ್ರೀಮತಿ ಚಂದ್ರಭಾಗಾದೇವಿಯವರ ಅನುರೂಪ ದಾಂಪತ್ಯ ಅಪರೂಪ. ಇವರು ಅಂದಿನ ಸಮಾಜದ ನಿಷ್ಠುರಗಳಿಗೆ ತುತ್ತಾಗದೆ ಏಕ ಮನಸ್ಸಿನಿಂದ ಕಲಾಸೇವೆಗೆ ನಿರತರಾಗಿ ಹೆಸರುವಾಸಿಯಾದರು. ಪಡಕೋಣೆ ರಮಾನಂದರಾಯರು ಮತ್ತು ಅವರ ಪತ್ನಿ ಪಡಕೋಣೆ ನೇತಾದೇವಿಯರ (ಇಬ್ಬರೂ ಕನ್ನಡ ಸಾಹಿತಿಗಳು - ನಟರು - ಸಮಾಜ ಸೇವಕರು) ಪುತ್ರಿ ಚಂದ್ರಭಾಗಾ ದೇವಿಯರು ಚಿಕ್ಕಂದಿನಿಂದಲೂ ನೃತ್ಯ ಕಲೆಯಲ್ಲಿ ಆಸಕ್ತಿಯನ್ನು ತೋರಿಸಿ, ತಮ್ಮ ಸುಲಲಿತ ಸುಮನೋಹರ ಹಾವ ಭಾವ, ಅಭಿನಯ ಮತ್ತು ಆಕರ್ಷಣೀಯ ಕಾಲ್ಚಲನೆಗಳಿಂದ ಜನ ಸಾಮಾನ್ಯರ ಮತ್ತು ರಸಿಕರ ಮನಸ್ಸನ್ನು ಸಂತೋಷಗೊಳಿಸುತ್ತಿದ್ದರು. ಇವರ ಮೊದಲನೆಯ ನೃತ್ಯ ಗುರು ಸುಪ್ರಸಿದ್ಧ ಲೇಖಕ ಮತ್ತು ನೃತ್ಯ ಪಟು ಶಿವರಾಮ ಕಾರಂತರು. ಕಾರಂತರು ನಿರೂಪಿಸಿದ್ದ 'ಶುಭದತ್ತಾ', 'ಮೇಘ ಮಯೂರ' ಮುಂತಾದ ನೃತ್ಯ ನಾಟಕಗಳಲ್ಲಿ ಚಂದ್ರಭಾಗಾ ದೇವಿಯವರು ಭಾಗವಹಿಸಿ ಹೆಸರುವಾಸಿಯಾಗಿದ್ದರು. ಮದುವೆಯಾದ ಮೇಲೆ ಕೃಷ್ಣರಾಯರು ಮತ್ತು ಚಂದ್ರಭಾಗಾ ದೇವಿಯರು ಸಾವಿರಾರು ನೃತ್ಯ ಕಾರ್ಯಕ್ರಮಗಳನ್ನೂ ಮತ್ತು ನೃತ್ಯ ಉಪನ್ಯಾಸಗಳನ್ನೂ ಕೊಟ್ಟು, ಅಪರೂಪ ನೃತ್ಯ ದಂಪತಿಗಳು ಎಂದು ಖ್ಯಾತಿ ಪಡೆದಿದ್ದಾರೆ. ಅಂದಿನಿಂದ ಇದುವರೆವಿಗೂ ಅವರ ಧ್ಯೇಯ ನೃತ್ಯ, ನೃತ್ಯಾಭ್ಯಾಸ,ನೃತ್ಯಶಿಕ್ಷಣ ಹಾಗೂ ನೃತ್ಯದ ಅಭಿವೃದ್ಧಿ. ಇವರ ನೃತ್ಯ ಪ್ರೌಢಿಮೆಗೆ ಮೆಚ್ಚಿ 1965ರಲ್ಲಿ ಮೈಸೂರು ಸರ್ಕಾರ ಲಂಡನ್ನಿನ 'ಏಷ್ಯನ್ ಮ್ಯೂಸಿಕ್ ಸರ್ಕಲ್'ನ ಆಶ್ರಯದಲ್ಲಿ ನೃತ್ಯ ಕಲಿಸಲು ಮತ್ತು ನೃತ್ಯ ಕಾರ್ಯಕ್ರಮಗಳನ್ನು ಮಾಡಲು ಇಂಗ್ಲೆಂಡಿಗೆ ಕಳುಹಿಸಿದರು. ಅಲ್ಲಿ ಇವರು ಸಾರ್ವಜನಿಕರ, ರಸಿಕರ ಮತ್ತು ವಿಮರ್ಶಕರ ಮೆಚ್ಚುಗೆ ಪಡೆದು ಕನ್ನಡ ನಾಡಿಗೆ ಖ್ಯಾತಿ ತಂದರು. ಈ ದಂಪತಿಗಳು ಇಂಗ್ಲೆಂಡ್, ಐರ್ಲೆಂಡ್, ಪಶ್ಚಿಮ ಜರ್ಮನಿ ಬೆಲ್ಜಿಯಂ, ಸ್ವಿಟ್ಸರ್ಲೆಂಡ್, ಫ್ರಾನ್ಸ್ ಮೊದಲಾದ ನಾಗರಿಕತೆಯ ಶಿಖರ ಮುಟ್ಟಿದ ದೇಶಗಳಲ್ಲಿ ಭರತನಾಟ್ಯದ ಹಿರಿಮೆಯನ್ನೂ, ವೈಭವವನ್ನೂ ಪ್ರದರ್ಶನಗಳ ಮೂಲಕ, ಭಾಷಣಗಳ ಮೂಲಕ, ಟಿಲಿವಿಷನ್ ಕಾರ್ಯಕ್ರಮಗಳ ಮೂಲಕ ಪಾಶ್ಚಾತ್ಯ ರಸಿಕ ಜನರ ಮನವನ್ನು ಸೂರೆಗೊಂಡರು. ಇವರ ಲಂಡನ್ನಿನ ಮೊಟ್ಟ

ಮೊದಲನೆಯ ನೃತ್ಯ ಪ್ರದರ್ಶನವನ್ನು ನೋಡಿ ಸಂತೋಷಗೊಂಡ, ಅಂತರ ರಾಷ್ಟ್ರೀಯ ವಿಮರ್ಶಕರಾದ ಎ. ವಿ. ಕೋಟನ್ (A. V. Coton) 'ದಿ ಡೈಲಿ ಟೆಲಿಗ್ರಾಫ್'ದಲ್ಲಿ (*The Daily Telegraph*) ದೇವಿಯವರ 'ಮೋಹಿನಿ ರೂಪ' ನೃತ್ಯದ ವಿಷಯವಾಗಿ ಬರೆಯುತ್ತಾ ಅವರನ್ನು ಪಾಶ್ಚಾತ್ಯ ಶ್ರೇಷ್ಠ ನೃತ್ಯ ಕಲಾವಿದೆಯರಾದ ಉಲಿನೋವಾ, ಕಾರ್ಸಾವಿನಾ ಮತ್ತು ಮಾರ್ಗೊ ಫೋಂಟೇನ್ ಅವರೊಡನೆ ಹೋಲಿಸಿದ್ದಾರೆ. ಲಂಡನ್ನಿನಲ್ಲಿ ಎರಡು ವರ್ಷ ಅವಿಶ್ರಾಂತ ಕೆಲಸಮಾಡಿ ತಮ್ಮ ಪಾಶ್ಚಾತ್ಯ ಶಿಷ್ಯವೃಂದದ ನೆರವಿನಿಂದ "ಬುದ್ಧೋದಯ", "ರಾಣಿ ಶಾಂತಲಾ", "ಗೀತ ಗೋವಿಂದ" ಮತ್ತು "ಕಾಮದಹನ" ಎಂಬ ನಾಲ್ಕು ನೃತ್ಯ ನಾಟಕಗಳನ್ನು ರಚಿಸಿ ಪ್ರದರ್ಶಿಸಿ ಅಲ್ಲಿನ ರಸಿಕರನ್ನು ಮುಗ್ಧಗೊಳಿಸಿದ್ದಾರೆ. ಅನಂತರ ಅಮೆರಿಕೆಯಲ್ಲಿ ನಾಲ್ಕು ತಿಂಗಳು ಪ್ರವಾಸ ಕೈಗೊಂಡು ಕಲಾಸೇವೆ ಮಾಡಿದರು. ಅಲ್ಲಿಂದ ಪೂರ್ವ ದೇಶಗಳ ಸಂದರ್ಶನಮಾಡಿ ಹೊಂಕೊಂಗ್, ಬೆಂಕೊಕ್, ಸಿಂಗಪೂರ್ ಮತ್ತು ಕುವಲಾಲುಂಪೂರ್ ಪಟ್ಟಣಗಳಲ್ಲಿ ನೃತ್ಯ ಪ್ರದರ್ಶನ, ಭಾಷಣ, ಟೆಲಿವಿಷನ್ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಕೊಟ್ಟು ಬೆಂಗಳೂರಿಗೆ ಹಿಂತಿರುಗಿದರು. ನಾಟ್ಯದಂತೆಯೇ ಚಂದ್ರಭಾಗಾ ದೇವಿಯವರು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಬರವಣಿಗೆಯಲ್ಲಿ ಶ್ರಮ ಪಟ್ಟಿದ್ದಾರೆ. ತಮ್ಮ ವಿದೇಶ ಪ್ರವಾಸದ ಅನುಭವಗಳ ಆಧಾರದ ಮೇಲೆ ಇವರು 'ಗೆಜ್ಜೆಯ ಹೆಜ್ಜೆ ನುಡಿ' ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಈ ಪುಸ್ತಕಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರಕಿದೆ. ಶ್ರೀ ಮತ್ತು ಶ್ರೀಮತಿ ಕೃಷ್ಣರಾಯರು ತಮ್ಮ 'ಮಹಾಮಾಯಾ' ನೃತ್ಯಶಾಲೆಯಲ್ಲಿ ಭಾರತೀಯ ಅಲ್ಲದೆ, ಅನೇಕ ವಿದೇಶ ನಾಟ್ಯಾಭ್ಯಾಸಿಗಳಿಗೆ ನೃತ್ಯ ಶಿಕ್ಷಣ ಕೊಟ್ಟು ಮುಂದಕ್ಕೆ ತಂದಿದ್ದಾರೆ. ಚಂದ್ರಭಾಗಾದೇವಿಯವರು ಬೆಂಗಳೂರು ಕೇಂದ್ರದ ಭಾರತೀಯ ವಿದ್ಯಾ ಭವನದ ನೃತ್ಯಶಾಲೆಯಲ್ಲೂ ನೃತ್ಯಪಾಠವನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತಿದ್ದಾರೆ. ಶ್ರೀ ಯು. ಎಸ್. ಕೃಷ್ಣರಾವ್ ಮತ್ತು ಶ್ರೀಮತಿ ಚಂದ್ರಭಾಗಾದೇವಿಯವರಿಂದ ಭರತ ನಾಟ್ಯ ಶಿಕ್ಷಣ ಪಡೆದ ಕರ್ನಾಟಕ ಕಲಾವಿದೆಯರಲ್ಲಿ ವಿಧೇಯ ಮತ್ತು ಪ್ರಮುಖ ಶಿಷ್ಯೆ ಎಂದರೆ ಶ್ರೀಮತಿ ರಾಧಾ ಶ್ರೀಧರ. ಇವರು ಕೆಲವು ವರ್ಷಗಳ ಕಾಲ ಈ ನೃತ್ಯ ದಂಪತಿಗಳ ನೃತ್ಯ ಪೀಠದಲ್ಲಿ ತರಬೇತಿ ಪಡೆದು ಕಲೆಗೆ ಬೇಕಾದ ಪರಿಶ್ರಮ, ಏಕಾಗ್ರತೆ, ತನ್ಮಯತೆ, ಸ್ಫೂರ್ತಿ ಮತ್ತು ಜ್ಞಾನವನ್ನು ಪಡೆದಳು. ಅಲ್ಲದೆ ತನ್ನ ಗುರು ದಂಪತಿಗಳ ಸಂಗಡ ಅನೇಕ ನೃತ್ಯ ಪ್ರದರ್ಶನಗಳನ್ನು ಕೊಟ್ಟು ವಿಶಿಷ್ಟ ಅನುಭವ ಪಡೆದಳು. ಮದುವೆಯ ನಂತರ ಪತಿಯ ಬೆಂಬಲದಿಂದ ನೃತ್ಯರಂಗದಲ್ಲಿ ಮುಂದುವರೆದಳು, ಈ ಕಲಾವಿದೆ 1968 ರಲ್ಲಿ "ಶ್ರೀ ವೆಂಕಟೇಶ ನಾಟ್ಯ ಮಂದಿರ" ಎಂಬ ನಾಟ್ಯ ಶಾಲೆಯನ್ನು ಸ್ಥಾಪಿಸಿ ಅನೇಕ ಶಿಷ್ಯವೃಂದದವರಿಗೆ ನೃತ್ಯಪಾಠ ಹೇಳಿಕೊಡುತ್ತಿದ್ದಾಳೆ. ರಾಮಾಯಣ ಮುಂತಾದ ನೃತ್ಯರೂಪಕಗಳನ್ನು ನಿರೂಪಿಸಿ ಪ್ರದರ್ಶಿಸಿದ್ದಾಳೆ.

ಕ್ರಿ. ಶ. 1949 ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾದ ನೃತ್ಯಪೀಠ ಶ್ರೀ ಎಚ್. ಆರ್. ಕೇಶವ ಮೂರ್ತಿಯವರ 'ಕೇಶವ ನೃತ್ಯಶಾಲಾ'. ಇವರ ಮಕ್ಕಳಾದ ಕುಮಾರಿ ವಸಂತಲಕ್ಷ್ಮಿ ಮತ್ತು ಕುಮಾರಿ ಸುಮಿತ್ರ ದೇವಿಯವರು ಕರ್ನಾಟಕ ಸರ್ಕಾರದ ನೃತ್ಯ ಪರೀಕ್ಷೆಗಳಲ್ಲಿ, ವಿದ್ವತ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ಕುಮಾರಿ ವಸಂತಲಕ್ಷ್ಮಿ ಕೇಂದ್ರ ಸರ್ಕಾರದ ವಿದ್ಯಾರ್ಥಿವೇತನ ಪಡೆದು ಮದರಾಸಿನ ರುಕ್ಮಿಣಿ ಅರುಂಡೇಲ್ ಆಶ್ರಯದಲ್ಲಿನ ಅಡ್ಯಾರ್ ನೃತ್ಯಪೀಠದಲ್ಲಿ ಭರತನಾಟ್ಯ ಶಿಕ್ಷಣ ವನ್ನು ಮುಂದುವರಿಸಿ ಬೆಂಗಳೂರಿಗೆ ಹಿಂತಿರುಗಿದ್ದಾರೆ. ಕರ್ನಾಟಕ ಸರ್ಕಾರವು ಈ ಇಬ್ಬರು ಸೋದರಿಯರನ್ನು ಜಪಾನ್‌ದೇಶಕ್ಕೆ ನೃತ್ಯ ರಾಯಭಾರಿಗಳಾಗಿ ಕಳುಹಿ ಸಿದ್ದರು. ಕುಮಾರಿ ವಸಂತಲಕ್ಷ್ಮಿಯು ಕೇಶವ ನೃತ್ಯಶಾಲೆ ರಚಿಸಿದ 'ಮೇಘ ಸಂದೇಶ', 'ಪಾರ್ವತಿ ಕೊರವಂಜಿ', 'ಶ್ರೀ ಚನ್ನಕೇಶವ', 'ದಶಾವತಾರ', 'ನವರಸ ರಾಮಾಯಣ', 'ಪುರಂಧರಕೃಷ್ಣ', 'ಕೃಷ್ಣ ತುಲಾಭಾರ', 'ಪಂಚವಟಿ', ಮುಂತಾದ ನೃತ್ಯ ನಾಟಕಗಳ ರಚನೆ ಹಾಗೂ ಪ್ರಯೋಗಗಳಲ್ಲಿ ಭಾಗವಹಿಸಿ ಯಶಸ್ವಿಯಾಗಿದ್ದಾರೆ. ಈ ಕಲಾವಿದೆ ಬೆಂಗಳೂರಿನ ಬಾಲ ಭವನದಲ್ಲಿ ನೃತ್ಯ ಶಿಕ್ಷಕಿಯಾಗಿ ಈಗ ಕೆಲಸ ಮಾಡುತ್ತಿದ್ದಾರೆ.

ಬೆಂಗಳೂರಿನ ಇನ್ನೊಂದು ನೃತ್ಯಪೀಠವೆಂದರೆ ಕ್ರಿ. ಶ. 1972ರಲ್ಲಿ ಸ್ಥಾಪಿತ ವಾದ ಮೀನಾಕ್ಷಿ ಸುಂದರಂ ಪಿಳ್ಳೆ ಸ್ಕೂಲ್ ಆಫ್ ಭರತನಾಟ್ಯಂ. ಈ ಕೇಂದ್ರದಲ್ಲಿ ಸುಪ್ರಸಿದ್ಧ ದಿವಂಗತ ಮೀನಾಕ್ಷಿ ಸುಂದರಂ ಪಿಳ್ಳೆಯವರ ಮಗ ಶ್ರೀ ಪಂದನಲ್ಲೂರ್ ಮುತ್ತಯ್ಯ ಪಿಳ್ಳೆ ಮತ್ತು ಮೊಮ್ಮಕ್ಕಳಾದ ಶ್ರೀ ಕಿಟ್ಟಪ್ಪ ಪಿಳ್ಳೆ ಮತ್ತು ಶ್ರೀ ಗೋಪಾಲಕೃಷ್ಣ ಇವರು ಭರತನಾಟ್ಯವನ್ನು ಅನೇಕ ತರುಣ ಕಲಾವಿದೆಯರಿಗೆ ಹೇಳಿ ಕೊಡುತ್ತಿದ್ದಾರೆ. ಇದರ ನಿರ್ದೇಶಕರು ಶ್ರೀಮತಿ ಲೀಲಾ ರಾಮನಾಥನ್. ಶ್ರೀಮತಿ ಲೀಲಾ ರಾಮನಾಥನ್ ಅವರು ಚಿಕ್ಕಂದಿನಿಂದಲೂ ನೃತ್ಯಕಲೆಯಲ್ಲಿ ಆಸಕ್ತಿಪಟ್ಟು ಹಲವಾರು ನೃತ್ಯ ಗುರುಗಳಲ್ಲಿ ನೃತ್ಯ ಶಿಕ್ಷಣಪಡೆದರು. ಸುಪ್ರಸಿದ್ಧ ಕಲಾವಿದ ಶ್ರೀ ರಾಮಗೋಪಾಲರವರ ನೃತ್ಯಪಂಗಡದಲ್ಲಿ ಭಾಗವಹಿಸಿ ವಿದೇಶ ಪ್ರವಾಸಮಾಡಿ ಹೆಸರುವಾಸಿಯಾದರು. ಈ ನೃತ್ಯಕಲಾವಿದೆ ಭರತನಾಟ್ಯದ ಏಳಿಗೆಗಾಗಿ ಸತತ ದುಡಿಯುತ್ತಿದ್ದಾರೆ, ಹಾಗೂ ನೃತ್ಯದ ಮೇಲೆ ಉಪನ್ಯಾಸಗಳನ್ನು ಕೊಟ್ಟಿದ್ದಾರೆ; ಲೇಖನಗಳನ್ನೂ ಬರೆದಿದ್ದಾರೆ. ಇತ್ತೀಚೆಗೆ ಇವರ ನಿರ್ದೇಶನದಲ್ಲಿ 'ಬುದ್ಧ ಚರಿತಂ' ಎಂಬ ನೃತ್ಯನಾಟಕ ಪ್ರದರ್ಶಿಸಲಾಯಿತು. ಮೈಸೂರು ವಿಶ್ವವಿದ್ಯಾನಿಲಯದ ಪದವೀಧರೆಯಾದ ಲೀಲಾ ರಾಮನಾಥನ್‌ರವರು ನೃತ್ಯವೇ ಜೀವನದ ಧ್ಯೇಯ ವೆಂದು ನೃತ್ಯ ಪ್ರಚಾರ ಮಾಡುತ್ತಿದ್ದಾರೆ.

ಬೆಂಗಳೂರಿನ ಮತ್ತೊಂದು ಹೆಸರುವಾಸಿಯಾದ ಶ್ರೀ ವಿ. ಎನ್. ಕೌಶಿಕ್ ರವರ 'ಸನಾತನ ಕಲಾಕ್ಷೇತ್ರ'ದಲ್ಲಿ ನೃತ್ಯಕಲೆಯನ್ನು ಕಲಿತಿದ್ದ ಕಲಾವಿದೆಯರಲ್ಲಿ

ಪ್ರಸಿದ್ಧರಾದವರು ಶ್ರೀಮತಿ ಗೀತಾರಾವ್ ಮತ್ತು ಕುಮಾರಿ ಸಚಿದೇವಿಯವರು. ಇವರೂ ಕೂಡ ನೃತ್ಯದಲ್ಲಿ ಬಹಳ ಶ್ರಮಪಟ್ಟು ದುಡಿಯುತ್ತಿದ್ದಾರೆ.

ಅಂತೂ ನಮ್ಮ ಚೆಲುವಿನ ಕರ್ನಾಟಕದಲ್ಲಿ ಅನೇಕಾನೇಕ ನೃತ್ಯಕಲಾವಿದೆಯರು ಸಂಪ್ರದಾಯಕ ರೀತಿಯಲ್ಲಿ ಶಿಕ್ಷಣಪಡೆದು ಕಲಾಸೇವೆ ಮಾಡುತ್ತಿದ್ದಾರೆ. ಇವರ ಆಸಕ್ತಿ, ಶ್ರದ್ಧೆ, ಏಕಾಗ್ರತೆ, ಪರಿಶ್ರಮ ಮತ್ತು ಸತತ ಅಭ್ಯಾಸದಿಂದ ನೃತ್ಯಕಲೆಗೆ ಹೊಸ ಹುರುಪು ಬಂದಿದೆ. ನಮ್ಮ ದೇಶದಲ್ಲಿ ಇತ್ತೀಚೆಗೆ ನೃತ್ಯಕಲೆ ಅಭ್ಯಾಸ ಮತ್ತು ಪ್ರದರ್ಶನ ಬಹಳ ಮಟ್ಟಿಗೆ ಮುಂದುವರಿಯುತ್ತಿದೆ. ನೃತ್ಯಕಲೆಗೆ ಭವ್ಯ ಭವಿಷ್ಯವಿದೆ ಎಂಬುದು ನಿಶ್ಚಯ.

# ಕರ್ನಾಟಕದ ಮಹಿಳಾ ಕ್ರೀಡಾಪಟುಗಳು

**ಆರ್. ಜಿ. ವಿಜಯಸಾರಥಿ**

[ವಾಸ್ತವವಾಗಿ ಈ ಲೇಖನ ಸಂಶೋಧನೆಗೆ ಒಳ್ಳೆಯ ವಸ್ತುವಾಗಿ ಪರಿಣಮಿಸ ಬಹುದೇನೋ? ಒಲಂಪಿಕ್ ಪ್ರಖ್ಯಾತಿ ಬಂದಾಗಿನಿಂದ, ಅವೇರಿ ಬ್ರಂಡೇಜ್ ಮಹಿಳೆಯರಲ್ಲಿನ ಸ್ಪರ್ಧೆಗೆ ಹೆಚ್ಚು ಉತ್ತೇಜನ ಕೊಟ್ಟಾಗಲೇ ವಿಶ್ವಾದ್ಯಂತ ಮಹಿಳೆ ಯರು ಕ್ರೀಡೆಗಳಲ್ಲಿ ಭಾಗವಹಿಸುವುದರಲ್ಲಿ ಹೆಚ್ಚು ಜಾಗೃತರಾದರು. ಕರ್ನಾಟಕದಲ್ಲಿ ರಾಜ್ಯ ಹಾಗೂ ರಾಷ್ಟ್ರಮಟ್ಟದ ಒಲಂಪಿಕ್ ಅಥವಾ ಇತರೇ ಸ್ಪರ್ಧೆಗಳ ದೃಷ್ಟಿಯಿಂದ ಮಹಿಳೆಯರ ಸಾಧನೆಯನ್ನು ಕೆಲವೇ ದಿನಗಳಲ್ಲಿನ ಬೆಳವಣಿಗೆಯಿಂದ ಗಮನಿಸ ಬಹುದೇ ವಿನಃ ದಾಖಲೆಯಾಗದ ಮತ್ತಿತರ 'ದಾಖಲೆ'ಗಳ ಬಗ್ಗೆ ಪ್ರಯೋಗ ದೃಷ್ಟಿಯಿಂದ ಸಂಶೋಧನೆ ನಡೆಸಿಲ್ಲ. ಇಷ್ಟರಮಟ್ಟಿಗೆ ಹಾಗೂ ಪೂರ್ವಗ್ರಹವಿಲ್ಲದೇ ಮರೆತ ಕೆಲವಾರು ಹೆಸರುಗಳ ಮಟ್ಟಿಗಾದರೂ ನನ್ನ ಪರಿಮಿತಿಯನ್ನು ಒಪ್ಪಿಕೊಳ್ಳು ತ್ತೇನೆ].

1940 ರ ಆರಂಭದಲ್ಲಿಯೇ ಹದಿನಾಲ್ಕು ವರ್ಷಗಳ ಹುಡುಗಿಯೊಬ್ಬಳು ಹಲವಾರು ಗಂಟೆಗಳ ಕಾಲ ನೀರಿನಲ್ಲಿ ಈಜಿದ್ದು ಕರ್ನಾಟಕದ ಮಹಿಳಾ ಕ್ರೀಡಾಪಟುವಿನ ಸಾಧನೆಗೆ ನಾಂದಿಯಾಗಿತ್ತು. 1926 ರ ಮೇ ನಲ್ಲಿ ಜನಿಸಿದ ಬೈರಮ್ಮ ಪ್ರಖ್ಯಾತ ಈಜಾಟದ ತರಬೇತುದಾರರಾದ ಎಂ. ಮುನಿವೆಂಕಟಪ್ಪ ಹಾಗೂ ಶ್ರೀನಿವಾಸರಾಯರಲ್ಲಿ ಅವಿರತ ಪರಿಶ್ರಮದ ಅಭ್ಯಾಸಮಾಡಿ ತಮ್ಮ ಹನ್ನೊಂದನೆಯ ವಯಸ್ಸಿನಿಂದಲೇ ಡಾಲ್ಫಿನ್ ಕೂಟದ ಆಶ್ರಯದಲ್ಲಿ ಸುಮಾರು 8 ಗಂಟೆ, 10 ಗಂಟೆ, 12 ಗಂಟೆ, 15 ಗಂಟೆ ಹಾಗೂ 18 ಗಂಟೆಗಳ ಎಡಬಿಡದೆ ಈಜಾಟ ನಡೆಸಿ ಪ್ರಖ್ಯಾತಿಪಡೆದಿದ್ದರು. ಕೆಂಪಾಬುದಿಕೆರೆಯಲ್ಲಿ 1940 ರಲ್ಲಿ ಮಾಡಿದ ಅವರ ಸಾಧನೆ ಬಹು ದಿನಗಳವರೆವಿಗೂ ಬೆಂಗಳೂರಿನಲ್ಲಿ ಮನೆಮಾತಾಗಿದ್ದಿತು.

ಕರ್ನಾಟಕದ ಮಹಿಳೆಯರು ಬಾಲ್ ಬ್ಯಾಡ್ಮಿಂಟನ್‌ನಲ್ಲಿ ಮಾಡಿದ ಮೇರು ಮಟ್ಟದ ಸಾಧನೆ ದಂಗು ಬಡಿಸುವಂತದು. ಸುಮಾರು 19ವರ್ಷಗಳ ಕಾಲ ರಾಷ್ಟ್ರೀಯ ಮಟ್ಟದಲ್ಲಿ ಸಾರ್ವಭೌಮತ್ವವನ್ನು ಉಳಿಸಿಕೊಂಡು ಬಂದಿರುವ ಕರ್ನಾಟಕದ ಮಹಿಳೆ ಯರು ಯಾರೂ ಸೋಲಿಸಲಾಗದ ಸ್ಪರ್ಧಿಗಳಾಗಿದ್ದಾರೆ. ರಾಷ್ಟ್ರೀಯ ಬಾಲ್ ಬ್ಯಾಡ್ಮಿಂಟನ್‌ನಲ್ಲಿ ಆಡುವ ಎಲ್ಲಾ ಪಂದ್ಯಗಳಲ್ಲೂ ಪ್ರತಿಸ್ಪರ್ಧಿಗೆ ಒಂದು ಸೆಟ್ ವಿಜಯವನ್ನು ಬಿಟ್ಟುಕೊಡದೇ ನಿರ್ಣಾಯಕ ಹಂತದಲ್ಲಿಯೂ ಕೂಡ ಗೆಲ್ಲುತ್ತಿರುವುದು

ಮಹಿಳಾ ಕ್ರೀಡಾ ಪಂದ್ಯಗಳ ಸಾಮರ್ಥ್ಯದ ಕುರುಹಾಗಿದೆ. ರಾಜ್ಯದ ಕ್ರೀಡಾ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನು ಬರೆದ ಈ ದಾಖಲೆಗೆ ಬಹುಪಟ್ಟಿಗೆ ಕಾರಣ ರಾದವರು ಇಂದಿರಾ ಶ್ರೀನಿವಾಸಮೂರ್ತಿ ಹಾಗೂ ಜಯಮ್ಮ ಶ್ರೀನಿವಾಸನ್. ಮೊತ್ತಮೊದಲ ಬಾರಿಗೆ ಅಖಿಲ ಭಾರತ ಮಹಿಳಾ ಬ್ಯಾಡ್ಮಿಂಟನ್ ಸ್ಪರ್ಧೆಗಳು ನಡೆದದ್ದು 1955ರಲ್ಲಿ. ಆಗಿನ ಮೈಸೂರು ರಾಜ್ಯ ಪ್ರಶಸ್ತಿಯನ್ನು ಗೆದ್ದಿತು. ಸುಮಾರು ಹತ್ತು ವರ್ಷಗಳ ಕಾಲ ರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಿದ ಇಂದಿರಾ ಶ್ರೀನಿವಾಸಮೂರ್ತಿ 1964ರಲ್ಲಿ ಬ್ಯಾಡ್ಮಿಂಟನ್ ತಂಡದ ನೇತೃತ್ವವನ್ನು ವಹಿಸಿದ್ದರು. 1962 ರಿಂದ ಬ್ಯಾಡ್ಮಿಂಟನ್ ತಂಡ ಪ್ರತಿನಿಧಿಸುತ್ತಿರುವ ಜಯಮ್ಮ ಶ್ರೀನಿವಾಸನ್ 1968 ರಿಂದ ತಂಡದ ನಾಯಕಿಯಾಗಿದ್ದಾರೆ. ಈ ವರ್ಷ ಭದ್ರಾವತಿಯಲ್ಲಿ ನಡೆದ ರಾಷ್ಟ್ರೀಯ ಪಂದ್ಯಗಳಲ್ಲೂ ತಮ್ಮ ವಿಜಯ ಪಥವನ್ನು ಮುಂದುವರಿಸಿಕೊಂಡು ಬಂದ ಜಯಮ್ಮ ಶ್ರೀನಿವಾಸ್ ರಾಷ್ಟ್ರೀಯ ಕ್ರೀಡಾ ಪ್ರತಿಭೆಗೆ ಹೆಗ್ಗುರುತೆನಿಸಿದ 'ಅರ್ಜುನ' ಪ್ರಶಸ್ತಿಯನ್ನು ಗಳಿಸಿದ್ದಾರೆ. ಕರ್ನಾಟಕ ಮೊದಲಿನಿಂದಲೂ ಆಕ್ರಮಣ ಕಾರೀ ಆಟವನ್ನಾಡಿ ಎದುರಾಳಿಗೆ ಪಾಯಿಂಟು ಪಡೆಯಲು ಅವಕಾಶಕೊಡದೆ ಇರುವುದು ವಿಜಯಕ್ಕೆ ಕಾರಣವಾಗಿದೆ. ಸುಧಾ ಸೆಟ್ಲೂರ್ ಕೂಡ ಬಾಲ್ ಬ್ಯಾಡ್ಮಿಂಟನ್‌ನಲ್ಲಿ ರಾಷ್ಟ್ರೀಯ ಪಂದ್ಯಗಳನ್ನಾಡಿದ್ದಾರೆ.

ಇಂದಿರಾ ಶ್ರೀನಿವಾಸಮೂರ್ತಿಯವರು ಬ್ಯಾಡ್ಮಿಂಟನ್ ಅಲ್ಲದೆ ಟೆನಿಸ್ ಕ್ರೀಡೆಯಲ್ಲೂ ಕೂಡ ಪ್ರಶಸ್ತಿಗಳನ್ನು ಪಡೆದಿರುವುದು ಅವರ ವೈವಿಧ್ಯದ ಕ್ರೀಡಾ ಪ್ರತಿಭೆಯನ್ನು ತೋರಿಸುತ್ತಿದೆ. 1954 ರಾಜ್ಯಮಟ್ಟದ ಟೆನಿಸ್ ಪ್ರಶಸ್ತಿಪಡೆದ ಇಂದಿರಾ ಶ್ರೀನಿವಾಸಮೂರ್ತಿ ಅನೇಕ ಬಾರಿ ಡಬ್ಬಲ್ಸ್ ಟೆನಿಸ್ ಪ್ರಶಸ್ತಿಯನ್ನು ಗಳಿಸಿದ್ದಾರೆ. ಜಯಮ್ಮ ಶ್ರೀನಿವಾಸನ್ ತಮ್ಮ ಬಾಲ್ ಬ್ಯಾಡ್ಮಿಂಟನ್ ಪ್ರತಿಭೆ ಯನ್ನು ಪ್ರದರ್ಶಿಸುತ್ತಿರುವ ಜೊತೆಗೆ ಇತ್ತೀಚೆಗೆ ಹೆಚ್ಚಿನ ಅಭ್ಯಾಸಮಾಡಿ ರಾಜ್ಯ ಕೇರಂ ಚಾಂಪಿಯನ್ ಆಗಿದ್ದಾರೆ. ಇತ್ತೀಚಿಗೆ ಈ ಮದ್ರಾಸಿನಲ್ಲಿ ನಡೆದ ರಾಷ್ಟ್ರೀಯ ಕೇರಂ ಪಂದ್ಯಗಳಲ್ಲಿ ಅರ್ಧ ನಿರ್ಣಾಯಕ ಪಂದ್ಯದಲ್ಲಿ ಸುಮಾರು 270 ನಿಮಿಷಗಳ ಕಾಲ ಆಡಿ ಜಯಮ್ಮ ದಾಖಲೆ ಸ್ಥಾಪಿಸಿದ್ದಾರೆ. ಈ 'ಮಹತ್ವ'ದ ಕೇರಂ ಆಟದಿಂದಾಗಿ ಜಯಮ್ಮ ಅವರಿಗೆ ವೈಯಕ್ತಿಕ ಸ್ಪರ್ಧೆಗಳಲ್ಲಿ ಭಾಗವಹಿಸಲು ಈಗಾಗಲೇ ಕರೆಗಳು ಬಂದಿವೆ.

ಯುವಜನ ಛಾತ್ರ ಸಂಸ್ಥೆಗಳು ಪರ್ವತಾರೋಹಣ ಮುಂತಾದ ಸಾಹಸ ಕಾರ್ಯಗಳಿಗೆ ಉತ್ತೇಜನ ಕೊಟ್ಟಾಗ ಹಲವಾರು ಮಹಿಳೆಯರು ಹಿಮಾಲಯ ಶ್ರೇಣಿಯನ್ನು ಏರುವ ಸಾಹಸ ತೊಡಗಿದರು. ಕರ್ನಾಟಕ ಪರ್ವತಾರೋಹಣ ಸಂಸ್ಥೆಗಳು ಈ ಬಗ್ಗೆ ಹೆಚ್ಚಿನ ಆಸಕ್ತಿತೋರಿ ತರಬೇತಿ ಕೇಂದ್ರಗಳನ್ನು ತೆರೆದು ಹಲಮಂದಿಗೆ ತರಬೇತುಕೊಟ್ಟವು. ಭಾರತದ ಮೊತ್ತಮೊದಲ ಮಹಿಳಾ ಪರ್ವತಾ

ರೋಹಿ ತಂಡಕ್ಕೆ ಕರ್ನಾಟಕದಿಂದ ಆಯ್ಕೆಯಾದವರು ಉಷಾ ಸರ್ಪೇಸ್ಕರ್. ಸುಮಾರು ಹನ್ನೊಂದು ವರ್ಷಗಳ ಹಿಂದೆ ಹಿಮಾಲಯ ಪರ್ವತ ಶ್ರೇಣಿಗಳಿರುವ 22,490 ಅಡಿಗಳ ಎತ್ತರದ ಮೃಗಥಕ್ಷಿಣಿ ಶ್ರೇಣಿಯನ್ನು ತಲುಪಿದ ಅವರ ತಂಡವು ಭಾರತದ ಪರ್ವತಾರೋಹಣ ಚರಿತ್ರೆಯಲ್ಲಿ ಸ್ವರ್ಣ ಅಧ್ಯಾಯವನ್ನು ಪ್ರಾರಂಭಿಸಿತು.

ಕರ್ನಾಟಕದ ಟೆನಿಸ್ ಆಟಗಾರ್ತಿಯರು ರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಸಾಧನೆಗಳನ್ನು ಮಾಡಿರುವರಾದರೂ ಕ್ರೀಡೆಯು ಅಷ್ಟಾಗಿ ನಮ್ಮ ತರುಣಿಯರನ್ನು ಆಕರ್ಷಿಸದೇ ಇರುವುದಕ್ಕೆ ಹೆಚ್ಚಿನ ಖರ್ಚು ಹಾಗೂ ಇರಬೇಕಾದ ಪ್ರೋತ್ಸಾಹ ಸಿಗದೇ ಇರುವುದು ಕಾರಣವಾಗಿದೆಯೆನ್ನಬಹುದು. ಶ್ರೀಮತಿ ಶಾಂತಮಲ್ಲಪ್ಪನವರ ಸತತ ಪರಿಶ್ರಮದಿಂದಾಗಿ ಈ ಅಂತರ ರಾಷ್ಟ್ರೀಯ ಮಹಿಳಾ ವರ್ಷದ ಅಂಗವಾಗಿ ಅಖಿಲ ಭಾರತ ಮಹಿಳಾ ಟೆನಿಸ್ ಸ್ಪರ್ಧೆಗಳು ನಡೆದವು. ಈ ಸ್ಪರ್ಧೆಗಳಲ್ಲಿ ಅಪೂರ್ವವೆನಿಸಿದ್ದ ಆಟವಾಗಿದ್ದ 'ಚೆರಿ ಸುರೇಂದ್ರ-ರೋಹಿಣಿರಾನಡೆ'ಯವರ ನಡುವಿನ ಪಂದ್ಯ ಸುಮಾರು 150 ನಿಮಿಷಗಳ ಕಾಲ ನಡೆದು ಪ್ರತಿ ಘಳಿಗೆಯಲ್ಲು ಪ್ರೇಕ್ಷಕರಿಗೆ ರೋಮಾಂಚನ ತಂದುಕೊಡುತ್ತಿತ್ತಲ್ಲದೆ ಚೆರಿ ಸುರೇಂದ್ರ ಅವರ ಹಿಂದಿನ ಸಾಧನೆಗಳನ್ನು ಮೆಲುಕು ಹಾಕಲು ಅವಕಾಶ ಮಾಡಿಕೊಟ್ಟಿತು. ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗಲೇ ಟೆನಿಸ್ ಅಭ್ಯಾಸ ಮಾಡುತ್ತಾ ರಾಜ್ಯದ ಜೂನಿಯರ್ ಟೆನಿಸ್ ಚಾಂಪಿಯನ್ ಆಗಿದ್ದರು. ಬಾಲಕಿಯರ ವಿಭಾಗದಲ್ಲಿಯಲ್ಲದೇ ಮಹಿಳಾ ವಿಭಾಗದಲ್ಲೂ ಪ್ರಥಮ ಸ್ಥಾನ ಪಡೆದ ಚಿಟ್ಟಿಯಣ್ಣ 1962 ಮತ್ತು 1963 ರಲ್ಲಿ ಭಾರತದ ಹಾರ್ಡ್‌ಕೋರ್ಟ್ ಟೆನಿಸ್ ಚಾಂಪಿಯನ್ ಆದರು. ಪುನಃ 1963 ರಲ್ಲಿ ಏಷ್ಯನ್ ಚಾಂಪಿಯನ್‌ಷಿಪ್ ಗಳಿಸಿದ ಚೆರಿ ಚಿಟ್ಟಿಯಣ್ಣ ಭಾರತದ ಶ್ರೇಷ್ಠ ಟೆನಿಸ್ ಆಟಗಾರ್ತಿಯಾಗಿದ್ದರಲ್ಲದೆ ತಮ್ಮ ಸ್ಥಿರಚಿತ್ತದ ಪ್ರದರ್ಶನದಿಂದ ಹಲವು ಮಹತ್ವದ ಗೆಲವುಗಳನ್ನು ಭಾರತದ ಮೇಲ್ದರ್ಜೆಯ ಮಹಿಳಾ ಆಟಗಾರ್ತಿಯರ ವಿರುದ್ಧ ಪಡೆದಿದ್ದರು. ವೇಗದ (ಬ್ಯಾಕ್‌ಹ್ಯಾಂಡ್) ಹಿಂಗೈ ಹೊಡೆತ ಹಾಗೂ ಕಳಂಕರಹಿತ ಸರ್ವೀಸ್ ಅನ್ನು ತಮ್ಮ ಆಟದ ಮುಖ್ಯ ಅನುಕೂಲಗಳನ್ನಾಗಿ ಪಡೆದಿದ್ದ ಚೆರಿ ಚಿಟ್ಟಿಯಣ್ಣ ಈಗ ಚೆರಿ ಸುರೇಂದ್ರ ಆಗಿ ಹದಿನೆಂಟು ವರ್ಷಗಳಿಂದಲೂ ಟೆನಿಸ್ ಕ್ರೀಡೆಯನ್ನು ಮುಂದುವರಿಸಿಕೊಂಡು ಬಂದಿರುವುದು ಗಮನಾರ್ಹವಾಗಿದೆ. ಚೆರಿ ಸುರೇಂದ್ರರ ಸಾಧನೆಯನ್ನು ಮುಂದುವರೆಸಿಕೊಂಡು ಬಂದವರು ಉದಯಾಕುಮಾರ್. 1972–73ರಲ್ಲಿ ಅಖಿಲ ಭಾರತ ಟೆನಿಸ್ ಸಾರ್ವಭೌಮತ್ವವನ್ನೂ ಹಾಗೂ ಹಾರ್ಡ್‌ಕೋರ್ಟ್ ಪ್ರಶಸ್ತಿಯನ್ನೂ ಒಟ್ಟಾಗಿ ಗಿಟ್ಟಿಸಿದರು. 1966 ರಲ್ಲಿ ಮೈಸೂರು ರಾಜ್ಯದ ಜ್ಯೂನಿಯರ್ ಟೆನಿಸ್ ಚಾಂಪಿಯನ್ ಆಗಿದ್ದ ಉದಯಾಕುಮಾರ್ ದೆಹಲಿಯಲ್ಲಿ ನಡೆದ ಏಷ್ಯನ್ ಟೆನಿಸ್ ಚಾಂಪಿಯನ್‌ಷಿಪ್ ಪಂದ್ಯಗಳಲ್ಲಿ ಭಾಗವಹಿಸಿ ಕ್ವಾರ್ಟರ್ ಫೈನಲ್ ಹಂತವನ್ನು ತಲುಪಿದ್ದರು. ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿನಿ

ಯಾಗಿ 1966 ರಲ್ಲಿ ವಿಶ್ವವಿದ್ಯಾಲಯ ಟೆನಿಸ್ ಚಾಂಪಿಯನ್‌ಷಿಪ್ ಪಡೆದ ಉದಯಕುಮಾರ್ ಹಲವಾರು ವೈಯುಕ್ತಿಕ ಸ್ಪರ್ಧೆಗಳಲ್ಲಿ ವಿಜಯಿಯಾಗಿದ್ದಾರೆ. 1970 ರ ಬೌರಿಂಗ್ ಇನ್‌ಸ್ಟಿಟ್ಯೂಟ್ ಪಂದ್ಯಗಳಲ್ಲಿ ಪ್ರಶಸ್ತಿ ಗಿಟ್ಟಿಸಿ ರಾಜ್ಯದ ಅತ್ಯುತ್ತಮ ಆಟಗಾರ್ತಿಯೆಂದು ನಿರೂಪಿಸಿದರು. ದೇಜು ರವಿಮೂಲರವರು ಅನೇಕ ಡಬ್ಬಲ್ಸ್ ಪ್ರಶಸ್ತಿಗಳಿಸಿ ಕರ್ನಾಟಕದ ಟೆನಿಸ್ ವೃತ್ತಗಳಲ್ಲಿ ಹೆಸರಾಗಿದ್ದಾರೆ. ಬಾಲಕಿಯರಲ್ಲಿ ಕರ್ನಾಟಕದ ಸೂರಿ ಭರವಸೆಯನ್ನು ಕೊಡುತ್ತಾರೆ. ಇವರ ಇಬ್ಬರು ಸೋದರರು ಟೆನಿಸ್ ಆಡುತ್ತಿರುವುದರಿಂದ ಅಭ್ಯಾಸದ ದೃಷ್ಟಿಯಿಂದ ಭಾರೀ ಸಹಾಯಕವಾಗುತ್ತಿದೆ ಎಂದೆನಿಸಬಹುದು.

ಕೇವಲ ಎರಡು ವರ್ಷಗಳಿಂದೀಚೆಗೆ ಪ್ರಖ್ಯಾತವಾಗುತ್ತಿರುವ ಮಹಿಳಾ ಕ್ರಿಕೆಟ್‌ನಲ್ಲಿ ಕರ್ನಾಟಕದ ಪಾಲು ಕಡಿಮೆಯೇನಲ್ಲ. ದಕ್ಷಿಣವಲಯದ ಟೂರ್ನಿಯಲ್ಲಿ ತಮಿಳುನಾಡಿನಿಂದ ಪರಾಜಿತವಾದರೂ ಶಾಂತಾ ರಂಗಸ್ವಾಮಿ ತಂಡದ ಶ್ರೇಷ್ಠ ಆಲ್‌ರೌಂಡರ್ ಎಂದು ಪ್ರಶಂಸೆಗಳಿಸಿದ್ದರು. ಅವರ ಈ ಪ್ರತಿಭಾ ಪ್ರದರ್ಶನದಿಂದ ಅವರನ್ನು ದಕ್ಷಿಣ ವಲಯಕ್ಕೆ ಆಯ್ಕೆಮಾಡಿ ನಂತರ ಟೆಸ್ಟ್ ಕ್ರಿಕೆಟ್‌ಗೆ ಪ್ರತಿನಿಧಿಸುವ ಹಂತಕ್ಕೆ ಏರಿಸಲಾಯಿತು. ವಿಶ್ವದ ಶ್ರೇಷ್ಠ ಮಹಿಳಾ ತಂಡವಾದ ಆಸ್ಟ್ರೇಲಿಯಾ ತಂಡದ ವಿರುದ್ಧ ಮೂರು ಪಂದ್ಯಗಳು ಡ್ರಾ ಆಗಿ ಮುಕ್ತಾಯವಾಗಲು ಶಾಂತಾ ರಂಗಸ್ವಾಮಿಯವರ ಸರ್ವಾಂಗ ಪ್ರಬಲ ಆಟ ಕಾರಣವಾಯಿತೆನ್ನಬೇಕು. ಕರ್ನಾಟಕದ ಶಾಂತಾ ಅವರು ದ್ವಿತೀಯ ಟೆಸ್ಟ್‌ನಲ್ಲಿ 92 ರನ್ ಗಳಿಸಿದರಲ್ಲದೆ ಮೂರನೇ ಟೆಸ್ಟ್‌ನಲ್ಲಿ ಐದು ವಿಕೆಟ್ ಪಡೆದರು. ಉತ್ತಮ ಕ್ಷೇತ್ರ ರಕ್ಷಕರಾಗಿಯೂ ಮಿಂಚಿದ ಶಾಂತಾ ಕಳೆದ ಸರಣಿಯ ಅತ್ಯುತ್ತಮ ಆಟಗಾರ್ತಿ ಎಂದರೆ ತಪ್ಪಾಗಲಾರದು. ಇತ್ತೀಚೆಗೆ ಕ್ರಿಕೆಟ್ ಆಡಲು ಆರಂಭಿಸಿ ಉತ್ತಮ ಭರವಸೆಯಿತ್ತಿರುವ ರೂಪಲೇಖ ಕೂಡ ಸುಲಭವಾಗಿ ಸೋಲೊಪ್ಪದೆ ನಿರಂತರವಾಗಿ ದಿಟ್ಟ ಹೋರಾಟ ಪ್ರದರ್ಶಿಸುವ ಸರ್ವಾಂಗ ಪ್ರಬಲ ಆಟಗಾರ್ತಿಯಾಗಿದ್ದಾರೆ.

1972 ರ ರಾಷ್ಟ್ರೀಯ ಟೆನಿಕಾಯ್ಟ್ ಪ್ರಶಸ್ತಿಯನ್ನು ಪಡೆದ ಕರ್ನಾಟಕದ ಮಹಿಳಾ ತಂಡ ಅನೇಕ ವರ್ಷಗಳ ಸತತ ಪ್ರಯತ್ನದ ಸಿದ್ಧಿಯಲ್ಲಿ ಯಶಸ್ಸು ಪಡೆಯಿತು. ಹೈದರಾಬಾದ್‌ನಲ್ಲಿ ನಡೆದ ಈ ರಾಷ್ಟ್ರೀಯ ಪಂದ್ಯಗಳಲ್ಲಿ ಕರ್ನಾಟಕದ ಪರ ಉತ್ತಮ ಪ್ರದರ್ಶನವನ್ನಿತ್ತವರು ಬಿ. ಯು. ಸೀತಮ್ಮ ಹಾಗೂ ಕೆ. ವಿ. ಚೌಂಡಮ್ಮ. ಆದರೆ ಯಿಯೋಟ್‌ಮಲ್ಲಿನಲ್ಲಿ 1973 ರಲ್ಲಿ ನಡೆದ ರಾಷ್ಟ್ರೀಯ ಪಂದ್ಯಗಳಲ್ಲಿ ಹೆಚ್ಚು ಪೈಪೋಟಿಯಿಂದ ಕೂಡಿದ ಪಂದ್ಯದಲ್ಲಿ ಮಹಾರಾಷ್ಟ್ರದೊಡನೆ ನಿರ್ಣಾಯಕ ಪಂದ್ಯದಲ್ಲಿ ಕರ್ನಾಟಕ ಸೋಲಬೇಕಾಯಿತು. ಆದರೆ ಸೀತಮ್ಮ ಹಾಗೂ ಚೌಂಡಮ್ಮರ ಬಿರುಸಿನ ಹೊಡೆತಗಳು ಹಾಗೂ ವೇಗದ ಸರ್ವೀಸ್‌ನ ಆಟ ಮಾತ್ರ ಪ್ರಶಂಸೆ ಪಡೆಯಿತು. ಪುನಃ ಬಿ. ಈ. ಎಲ್. ಪರ ಆಡಿದ ಈ ಆಟಗಾರ್ತಿಯರು ಮದ್ರಾಸಿನ

ಐ. ಸಿ. ಎಫ್. ಟೂರ್ನಿಯಲ್ಲಿ ಗಮನಾರ್ಹವಾದ ಪ್ರದರ್ಶನವನ್ನಿತ್ತು ತಮಿಳುನಾಡಿನ ಕ್ರೀಡಾ ಪ್ರೇಮಿಗಳಿಂದಲೂ ಪ್ರಶಸ್ತಿಗಿಟ್ಟಿಸಿದರು. ನಾಗರತ್ನ ಹಾಗೂ ಪರಿಮಳಾ ಹಿಂದೆ ಕರ್ನಾಟಕದ ಪರ ರಾಷ್ಟ್ರೀಯ ಟೆನಿಕಾಯ್ಟ್ ಸ್ಪರ್ಧೆಗಳಲ್ಲಿ ಭಾಗಿಯಾಗಿದ್ದರು.

ಶ್ರೀಮತಿ ಸುಮನ್ ಶೆಣೈ ಹಾಗೂ ತ್ರಿಪುರ ವಿಶ್ವನಾಥ್ ಕರ್ನಾಟಕದ ಷಟಲ್ ಬ್ಯಾಡ್ಮಿಂಟನ್ ತಂಡದ ಅಸ್ತಿಭಾಗವಾಗಿದ್ದರು. ಮಹಿಳಾ ಸೇವಾ ಸಮಾಜದ 1963ರ ಬ್ಯಾಡ್ಮಿಂಟನ್ ಪ್ರಶಸ್ತಿ ಗಳಿಸಿದ ಸುಮನ್ ಶೆಣೈ ಬೆಂಗಳೂರಿನ ಮತ್ತಿತರ ಟೂರ್ನಿಗಳಲ್ಲಿ ಮಹತ್ವದ ವಿಜಯಗಳನ್ನು ಪಡೆದಿದ್ದರು. ತ್ರಿಪುರ ವಿಶ್ವನಾಥ್ ಅವರು 1966, 1967, 1968 ಹಾಗೂ 1969 ರಲ್ಲಿ ಎಂ. ಜಿ. ಎಸ್. ಟೂರ್ನಿಯಲ್ಲಿ ವಿಜಯ ಪಡೆದು 1965, 1966 ಹಾಗೂ 1967 ರಲ್ಲಿ ಐ. ಟಿ. ಐ. ನಡೆಸಿದ ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಪ್ರಶಸ್ತಿಗಳಿಸಿದರು. 1964 ರಲ್ಲಿ ಕರ್ನಾಟಕ ದಕ್ಷಿಣ ಭಾರತ ಷಟಲ್ ಬ್ಯಾಡ್ಮಿಂಟನ್ ಪ್ರಶಸ್ತಿ ಗಳಿಸಿದಾಗ ತ್ರಿಪುರ ವಿಶ್ವನಾಥ್‌ರ ಪ್ರತಿಭೆ ನಿಚ್ಚಳವಾಗಿ ಪ್ರದರ್ಶಿತವಾಯಿತು. ಮದ್ರಾಸ್ ಹಾಗೂ ಕೇರಳದ ವಿರುದ್ಧ ಸಿಂಗಲ್ಸ್‌ನಲ್ಲಿ ಜಯಶಾಲಿಗಳಾಗಿ ಡಬ್ಬಲ್ಸ್‌ನಲ್ಲಿ ಹೆಸರುಮಾಡಿದ್ದ ನಾರಿನ್ ಪಡುವಾ ಹಾಗೂ ಜೆಸ್ಸಿ ಅವರನ್ನು ಅಪ್ಪೆಯವರೊಡಗೂಡಿ 15–11, 15–6 ರ ಅಂತರದಿಂದ ಸೋಲಿಸಿದರು. ಭಾರತದ ಶ್ರೇಷ್ಠ ಷಟಲ್ ಆಟಗಾರ್ತಿಯಾದ ನಾರಿನ್ ಪಡುವಾ ಅವರನ್ನು 10–12, 11–5 ಹಾಗೂ 12–11 ರಿಂದ ಸೋಲಿಸಿದರು. ಕರ್ನಾಟಕವನ್ನು 1964ರಿಂದ ಪ್ರತಿನಿಧಿಸಿದ ತ್ರಿಪುರಾ ವಿಶ್ವನಾಥ್‌ರ ಪುತ್ರಿ ಪುಷ್ಪಾ ವಿಶ್ವನಾಥ್ ಹಾಗೂ ಶೋಭಾ ಶಿವಸ್ವಾಮಿ ಈಗ ಷಟಲ್ ಬ್ಯಾಡ್ಮಿಂಟನ್‌ನಲ್ಲಿ ಹೆಸರುಮಾಡುತ್ತಿದ್ದಾರೆ.

1974 ರ ಟೆಹರಾನ್ ಏಷ್ಯನ್ ಕ್ರೀಡೆಗಳಲ್ಲಿ ಭಾಗಿಯಾಗಿದ್ದ ಏಂಜಲ್ ಮೇರಿಯದು ಅನುಪಮ ಸಾಧನೆ. ಭಾಗವಹಿಸಿದ ಪ್ರಥಮ ರಾಷ್ಟ್ರೀಯ ಅಥ್ಲೆಟಿಕ್ಸ್‌ನಲ್ಲಿ ಸ್ವರ್ಣ ಪದಕ ಪಡೆದು ಸ್ವಲ್ಪ ದಿನಗಳನಂತರ ಹೊಸ ದಾಖಲೆ ಸ್ಥಾಪಿಸಿದ ಹಿರಿಮೆ ಏಂಜಲ್ ಮೇರಿಯವರದಾಗಿದೆ. 1974 ರ ಜೈಪುರದ ರಾಷ್ಟ್ರೀಯ ಅಥ್ಲೆಟಿಕ್ಸ್‌ನಲ್ಲಿ 1–54 ಮೀ. ಎತ್ತರ ಜಿಗಿದ ಏಂಜಲ್ ಮೇರಿ ಬೆಂಗಳೂರಿನಲ್ಲಿ ಟೆಹರಾನ್‌ನ ಏಷ್ಯನ್ ಕ್ರೀಡೆಗಳ ಆಯ್ಕೆ ನಡೆದಾಗ 1.62 ಮೀ. ಎತ್ತರ ಜಿಗಿದಿದ್ದರು. ಆರು ವರ್ಷಗಳ ಹಿಂದೆ ಟಿ. ಗೋಮೆಜ್‌ರ ದಾಖಲೆಯನ್ನು (1.57 ಮೀ.) ಈ ವರ್ಷದಲ್ಲಿ ಏಂಜಲ್ ಮೇರಿ ಮುರಿದಿದ್ದರು. ದಾವಣಗೆರೆಗೆ ಸೇರಿದ ಏಂಜಲ್ ಮೇರಿ ಕರ್ನಾಟಕದ ಪರ ಬ್ಯಾಸ್ಕೆಟ್ ಬಾಲ್ ಪಂದ್ಯಗಳಲ್ಲೂ ಆಡಿರುವುದಲ್ಲದೆ 1972 ರಲ್ಲಿ ದಕ್ಷಿಣ ಕೊರಿಯಾ ಪ್ರವಾಸ ಮಾಡಬೇಕಿದ್ದ ಭಾರತದ ಮಹಿಳಾ ತಂಡಕ್ಕೆ ಆಯ್ಕೆಯಾಗಿದ್ದರು. 1971 ರಿಂದ ಕರ್ನಾಟಕ ತಂಡದ ಬ್ಯಾಸ್ಕೆಟ್ ಬಾಲ್ ರಾಷ್ಟ್ರೀಯ ಪಂದ್ಯಗಳಲ್ಲಿ ಭಾಗವಹಿಸುತ್ತಿರುವ ಏಂಜಲ್ ಮೇರಿ ಅಥ್ಲೆಟಿಕ್ಸ್‌ನಲ್ಲಿಯೂ ಕೂಡ ಪ್ರಖ್ಯಾತರಾಗಿದ್ದಾರೆ.

ರಾಜ್ಯದ ಮಹಿಳಾ ಹಾಕಿ ಮುನ್ನಡೆಗೆ ಬ್ರಿಟೋ ಸೋದರಿಯರ ಕೊಡುಗೆ ಅಪಾರ. ಮೊಟ್ಟಮೊದಲಿಗೆ ರಾಜ್ಯ ಮಹಿಳಾ ಹಾಕಿ ಸಂಸ್ಥೆಯ ಕಾರ್ಯದರ್ಶಿಗಳಾಗಿ ದುಡಿದ ಶ್ರೀಮತಿ ಬ್ರಿಟೋ ಅವರ ಪುತ್ರಿ ಎಲ್ಲಿರಾ ಒಮ್ಮೆ ಆಟ ವೀಕ್ಷಿಸಲು ಮೈದಾನಕ್ಕೆ ತೆರಳಿದಾಗ ತೆರವಾದ ಸ್ಥಾನ ತುಂಬಲು ಕೇಳಿಕೆ ಬಂದಿತು. ಕೂಡಲೇ ಒಪ್ಪಿದ ಎಲ್ಲಿರಾ ಬ್ರಿಟೋ ಮುಂದೆ ಭಾರತದ ಹಾಕಿ ಆಟಗಾರ್ತಿಯರಲ್ಲಿ ಪ್ರಮುಖರಾಗಿ ಎದ್ದು ಕಾಣುವಂಥ ಸಾಧನೆ ಮಾಡುತ್ತೇನೆ ಎಂಬ ಕನಸು ಕೂಡ ಕಂಡಿರಲಿಲ್ಲ. ಆದರೆ ಅಂದಿನ ಆಟ ಇವರನ್ನು ಸೆಂಟ್ ಫ್ರಾನ್ಸಿಸ್ ಕ್ಸೇವಿಯರ್ ಶಾಲೆಯಲ್ಲಿ ಆಡುವಂತೆ ಹುರಿದುಂಬಿಸಿತು. 1956 ರಿಂದ ರಾಜ್ಯತಂಡವನ್ನು ಪ್ರತಿನಿಧಿಸುತ್ತಿದ್ದ ಎಲ್ಲಿರಾ ಬ್ರಿಟೋ 1960 ರಲ್ಲಿ ರಾಷ್ಟ್ರೀಯ ಪಂದ್ಯ ಏರ್ಪಟ್ಟಾಗ ರಾಜ್ಯದ ಮಹಿಳಾ ತಂಡದ ನಾಯಕರಾದರು. ಆ ಚೊಚ್ಚಲ ವರ್ಷದಲ್ಲಿ ನಾಯಕಿಯಾಗಿ ಅದ್ಭುತವಾದ ಪ್ರದರ್ಶನವನ್ನಿತ್ತುಎಲ್ಲರನ್ನು ದಿಂಗ್ಮೂಢರನ್ನಾಗಿಸಿದ ಎಲ್ಲಿರಾಬ್ರಿಟೋ ತಮ್ಮ ತಂಡಕ್ಕೆ ವಿಜಯ ತಂದರು. 1961 ರಲ್ಲಿ ಶ್ರೀಲಂಕಾ ಪ್ರವಾಸಕ್ಕೆ ಅಣಿಯಾದಾಗ ಪ್ರವಾಸೀ ಭಾರತ ತಂಡಕ್ಕೆ ಆಯ್ಕೆಯಾದ ಎಲ್ಲಿರಾ ಬ್ರಿಟೋ ತಮ್ಮ ಉತ್ತಮ ಆಟದಿಂದ ಐದೂ ಟೆಸ್ಟ್‌ಗಳನ್ನೂ ಗೆಲ್ಲುವಂತೆ ಮಾಡಿದರು. 1964 ರಲ್ಲಿ ಜಪಾನ್ ಮಹಿಳಾ ಹಾಕಿ ತಂಡ ಭಾರತದ ಪ್ರವಾಸ ಮಾಡಿದಾಗ ಕೂಡ ಭಾರತಕ್ಕೆ ಗೆಲವು ಕಟ್ಟಿಟ್ಟ ಬುತ್ತಿಯಾಯಿತು. 1965 ರಲ್ಲಿ ಇವರ ಸಾಧನೆಗೆ ಅರ್ಜುನ ಪ್ರಶಸ್ತಿಯನ್ನು ನೀಡಲಾಯಿತು. ಇವರ ಸೋದರಿಯರಾದ ರೀತಾ ಬ್ರಿಟೋ ಹಾಗೂ ಮೇರಿ ಬ್ರಿಟೋ ಕೂಡ ಇವರೊಡನೆ ರಾಜ್ಯ ತಂಡ ಹಾಗೂ ರಾಷ್ಟ್ರೀಯ ತಂಡಗಳಲ್ಲಿ ಭಾಗವಹಿಸಿ ಹಲವು ಮಹತ್ವದ ಗೆಲವುಗಳಿಗೆ ಕಾರಣರಾಗಿದ್ದಾರೆ.

ರಾಜ್ಯದ ಮಹಿಳಾ ತಂಡ ಕೊಕ್ಕೊದಲ್ಲಿ ಅಂತರ ರಾಜ್ಯ (ವಲಯ ಮಟ್ಟ)ದ ಪಂದ್ಯದಲ್ಲಿ ಹಲವಾರು ಬಾರಿ ವಿಜಯಿಯಾಗಿದ್ದರೂ ರಾಷ್ಟ್ರೀಯ ಪಂದ್ಯದಲ್ಲಿ ಪ್ರಶಸ್ತಿ ಗಳಿಸಿಲ್ಲ. ಆದರೇ ರಾಷ್ಟ್ರೀಯಮಟ್ಟದಲ್ಲಿ ಉತ್ತಮವಾಗಿ ಆಡಿ ಪ್ರಶಸ್ತಿಗಳಿಸಿದ ಆಟಗಾರರನ್ನು ಕರ್ನಾಟಕ ಒಳಗೊಂಡಿದೆ. 1965ರಲ್ಲಿ ಉಷಾ ಅನಂತರಾಮನ್ ಅವರು ಕಬ್ಬಡ್ಡಿ ಸಂಸ್ಥೆಯ ಝಾನ್ಸಿರಾಣಿ ಲಕ್ಷ್ಮಿಬಾಯಿ ಪ್ರಶಸ್ತಿಯನ್ನು ಗಳಿಸಿದ್ದಾರೆ. ವೇಗದ ಓಟ ಹಾಗೂ ಮಿಂಚಿನಂತ ಕಣ್ಣು ತಪ್ಪಿಸುವಿಕೆ ಹಾಗೂ ಪ್ರತಿಸ್ಪರ್ಧಿಯನ್ನು ಅತಿ ಶೀಘ್ರದಲ್ಲೇ ಹಿಡಿಯುವ ಕಲೆಯನ್ನರಿತ್ತಿದ್ದ ಉಷಾ ಅವರು ಕರ್ನಾಟಕ ರಾಷ್ಟ್ರೀಯ ಮಟ್ಟದಲ್ಲಿ ಅರ್ಧನಿರ್ಣಾಯಕ ತಲುಪುವಂತೆ ಮಾಡಿದ್ದಾರೆ. ಮೇರಿ ಯಂಪೆನ್ಜಿಸ್ ರಾಜ್ಯದ ಸ್ಪರ್ಧಿಯಾಗಿದ್ದರಲ್ಲದೆ ಭಾರತದಲ್ಲಿಯೇ ಏಕಮಾತ್ರ ಮಹಿಳಾ ತೀರ್ಪುಗಾರರಾಗಿದ್ದಾರೆ. ತುಮಕೂರಿನ ಕೆ ಉಮಾ ಹಾಗೂ ಕೆ.ಆರ್. ಉಮಾ ಈಗಲೂ ರಾಜ್ಯವನ್ನು ಪ್ರತಿನಿಧಿಸುತ್ತಿದ್ದಾರಲ್ಲದೆ ಕೊಕ್ಕೊ ಕ್ರೀಡೆಗಾಗಿ ರಾಜ್ಯ ಪ್ರಶಸ್ತಿಯನ್ನು ಗಳಿಸಿದ್ದಾರೆ.

ಮಹಿಳಾ ವಾಲಿಬಾಲ್ ಸ್ಪರ್ಧೆಗಳಲ್ಲಿ ಕರ್ನಾಟಕದ ಸಾಧನೆ ಪ್ರಮುಖವಾಗಿ ಕಾಣದಿದ್ದರೂ ಕೆಲವಾರು ಆಟಗಾರರು ರಾಷ್ಟ್ರೀಯ ಮಟ್ಟದಲ್ಲಿ ಹೆಸರುಪಡೆದಿದ್ದಾರೆ. ಕೇರಳ ಹಾಗೂ ಪಶ್ಚಿಮ ಬಂಗಾಳಕ್ಕೆ ಮಾತ್ರ ಸೀಮಿತವಾಗಿರುವ ಅಖಿಲ ಭಾರತ ಪ್ರಶಸ್ತಿಯನ್ನು ಕರ್ನಾಟಕದ ಮಹಿಳಾ ತಂಡ ಗಳಿಸಬೇಕಾದರೆ ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಪೈಪೋಟಿಯ ಮಟ್ಟ ಹೆಚ್ಚಾಗಬೇಕಾಗಿದೆ. ರೂಪಲೇಖಾ, ಸುಧಾ ಸೆಟ್ಲೂರ್ ಹಾಗೂ ವಿಜಯಲಕ್ಷ್ಮಿ ಮುಂತಾದವರನ್ನು ಪ್ರಥಮ ಶ್ರೇಣಿಯ ಆಟಗಾರರೆಂದು ನಿಶ್ಚಯವಾಗಿ ಕರೆಯಬಹುದಾಗಿದೆ.

ರಾಷ್ಟ್ರೀಯ ಪಂದ್ಯಗಳಲ್ಲಿ ನಿರ್ಣಾಯಕದವರೆವಿಗೂ ತಲುಪಿ ಉತ್ತಮವಾಗಿ ಆಡಿಕೂಡ ವಿಜಯದಿಂದ ವಂಚಿತರಾದ ದುರ್ದೈವಿಗಳೆಂದು ಕರ್ನಾಟಕದ ಬ್ಯಾಸ್ಕೆಟ್ ಬಾಲ್ ಪಟುಗಳನ್ನು ಕರೆಯಬಹುದಾಗಿದೆ. 1974ರಲ್ಲಿ ಮದ್ರಾಸಿನಲ್ಲಿ ನಡೆದ ರಾಷ್ಟ್ರೀಯ ಪಂದ್ಯಗಳಲ್ಲೂ ಹಾಗೂ ಒಮ್ಮೆ ದೆಹಲಿಯ ರಾಷ್ಟ್ರೀಯ ಪಂದ್ಯಗಳಲ್ಲಿ ಕರ್ನಾಟಕ ಪ್ರಶಸ್ತಿ ಗಳಿಸುವ ಕಡೆಯ ಮೆಟ್ಟಲವರೆವಿಗೂ ಏರಿತ್ತು. ಈ ಸಾಧನೆಗೆ ಮುಖ್ಯ ಕಾರಣ ನೀನಾ ಶ್ರೀನಿವಾಸನ್ ಹಾಗೂ ಗೀತಾ ಶ್ರೀನಿವಾಸನ್. ಈ ಇಬ್ಬರೂ ಸೋದರಿಯರು ಸ್ಥಿರಚಿತ್ತತೆಯ ಪ್ರದರ್ಶನದಿಂದ ಕರ್ನಾಟಕಕ್ಕೆ ಆಧಾರಸ್ಥಂಭದಂತಿದ್ದಾರೆ. ಕಳೆದ ವರ್ಷ ತಂಡದ ನಾಯಕಿಯಾಗಿದ್ದ ನೀನಾ ಶ್ರೀನಿವಾಸನ್ ಅವರು ಸ್ಪರ್ಧೆಗಳಲ್ಲಿ ಅತ್ಯುತ್ತಮ ಆಟಗಾರ್ತಿ ಎಂದು ಬಹುಮಾನ ಪಡೆದಿದ್ದಾರೆ. ಮೀನೂ ಮಾಚಯ್ಯ ಹಾಗೂ ಏಂಜಲ್ ಮೇರಿಯವರು ಕೂಡ ಉತ್ತಮ ಪ್ರದರ್ಶನದಿಂದ ಗಮನ ಸೆಳೆದಿದ್ದಾರೆ.

ಕಳೆದ ವರ್ಷವೇ ಪ್ರಾರಂಭವಾದ ಕರ್ನಾಟಕ ಹ್ಯಾಂಡ್‌ಬಾಲ್ ಸಂಸ್ಥೆ ಪ್ರಥಮ ವರ್ಷವೇ ರಾಷ್ಟ್ರೀಯ ಪಂದ್ಯಗಳಿಗೆ ಮಹಿಳಾ ತಂಡವನ್ನು ಆಯ್ಕೆಮಾಡಿದಾಗ ಅಚ್ಚರಿಪಟ್ಟವರಿಗ ಪರಿಣಾಮದಿಂದ ಮತ್ತು ಹೆಚ್ಚಿನ ಆಶ್ಚರ್ಯ ಕಾದಿತ್ತು. ಮೊದಲ ವರ್ಷವೇ ಕ್ವಾರ್ಟರ್ ಫೈನಲ್ ಹಂತ ತಲುಪಿದ ಕರ್ನಾಟಕದ ಮಹಿಳಾ ತಂಡ ಇನ್ನೂ ಹೆಚ್ಚಿನ ಬೆಳೆವಣಿಗೆ ತೋರಿಸಬಹುದಾದ ಆಟಗಾರರನ್ನು ಹೊಂದಿದೆ. ಮುಖ್ಯರಾದವರು ಗೌರಿ ಉತ್ತಯ್ಯ ಹಾಗೂ ಅನಿತಾ ಕುಟ್ಟಪ್ಪ. ಕರ್ನಾಟಕ ತಂಡ ಜೈಪುರ ರಾಷ್ಟ್ರೀಯ ಪಂದ್ಯಗಳಲ್ಲಿ ರಾಷ್ಟ್ರೀಯ ಸಾಫ್ಟ್‌ಬಾಲ್ ಪ್ರಶಸ್ತಿ ಗಳಿಸಿದ್ದನ್ನು ನೆನೆಸಿಕೊಳ್ಳಬಹುದು.

ಇಂದಿಗೂ ಟೇಬಲ್ ಟೆನಿಸ್ ವೃತ್ತಗಳಲ್ಲಿ ಹೆಚ್ಚಿನ ಚಟುವಟಿಕೆಯಿಂದ ತಮ್ಮ ಸೇವೆಯನ್ನು ಮುಂದುವರೆಸಿಕೊಂಡು ಬರುತ್ತಿರುವ ಉಷಾ ಸುಂದರರಾಜ್ ಟೇಬಲ್ ಟೆನಿಸ್ ಕ್ರೀಡೆಗಾಗಿ 1966ರಲ್ಲಿ ಅರ್ಜುನ ಪ್ರಶಸ್ತಿ ಗಳಿಸಿದ್ದರು. ಸುಮಾರು ಹತ್ತು ಬಾರಿ ರಾಜ್ಯಮಟ್ಟದ ಚಾಂಪಿಯನ್ ಆಗಿ ಹಲವಾರು ಬಾರಿ ರಾಷ್ಟ್ರೀಯ ಪ್ರಶಸ್ತಿ ಗಳಿಸಿರುವ ಉಷಾ ಸುಂದರರಾಜ್ ಭಾರತದ ಪರವಾಗಿ ಏಷ್ಯನ್ ಚಾಂಪಿಯನ್‌ಶಿಪ್

ನಲ್ಲಿ ಕೂಡ ಆಡುವ ಸಾಧನೆ ಮಾಡಿದ್ದಾರೆ. ಕಲಿಯುವ ಆಸಕ್ತಿಯಿಂದ ಆಟವಾಡಲು ಪ್ರಾರಂಭಿಸಿ ನಾಲ್ಕೈದು ತಿಂಗಳುಗಳಲ್ಲಿಯೇ ಕಠಿಣ ಪರಿಶ್ರಮದಿಂದ ಅಂತರ ರಾಜ್ಯ ಸ್ಪರ್ಧೆಗಳಲ್ಲಿ ವಿಜಯಿಯಾದ ಉಷಾ ಸುಂದರರಾಜ್ ರಾಜ್ಯಮಟ್ಟದ ಜೂನಿಯರ್ ಛಾಂಪಿಯನ್ ಆದರು. ಪುನಃ 1957ರಲ್ಲಿ ಕೊಲಂಬೋ ರಾಷ್ಟ್ರೀಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದ ಉಷಾ ಅಲ್ಲಿಯೂ ಜೂನಿಯರ್ ಚಾಂಪಿಯನ್ ಪ್ರಶಸ್ತಿ ಗಿಟ್ಟಿಸಿದರು. ಏಷ್ಯನ್ ಟೇಬಲ್ ಟೆನಿಸ್ ಸ್ಪರ್ಧೆಗಳಲ್ಲಿ ಭಾಗವಹಿಸಿದಾಗ ಅನೇಕರು ಇವರು ರಬ್ಬರ್ ಬ್ಯಾಟಿನಿಂದ ಆಡುತ್ತಿದ್ದುದನ್ನು ಕಂಡು ಆಶ್ಚರ್ಯಪಟ್ಟು ಅಷ್ಟರಲ್ಲೇ ಮಹತ್ತರ ಸಾಧನೆ ಮಾಡುತ್ತಿದ್ದುದನ್ನು ಕಂಡು ಮೂಗಿನ ಮೇಲೆ ಬೆರಳಿರಿಸಿದರಂತೆ. ಇತ್ತೀಚೆಗೆ ಕರ್ನಾಟಕದ ಪರ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವುದು ಕೆ. ಆರ್. ಸರಸ್ವತಿ. ರಾಜ್ಯ ಪ್ರಶಸ್ತಿಯನ್ನು ಗಳಿಸಿರುವ ಕೆ. ಆರ್. ಸರಸ್ವತಿ ಭಾರತದ ಪರವಾಗಿ ಜಪಾನ್‌ವಿರುದ್ಧ ಡಬ್ಬಲ್ಸ್ ಪಂದ್ಯದಲ್ಲಿ ಆಡಿದ್ದನ್ನು ನೆನೆಸಿಕೊಳ್ಳಬಹುದಾಗಿದೆ.

ಭಾರತದ ಸ್ಪ್ರಿಂಟ್ ಕ್ವೀನ್ (ವೇಗದ ಓಟದ ರಾಣಿ) ಎನಿಸಿಕೊಂಡ ನಿರ್ಮಲಾ ಉತ್ತಯ್ಯ ನೂರು ಮೀಟರ್ ಓಟದಲ್ಲಿ ದಾಖಲೆ ಸ್ಥಾಪಿಸಿದ್ದೇ ಅಲ್ಲದೇ ಸತತವಾಗಿ ಮೊದಲ ಸ್ಥಾನಗಳಿಸಿ ಹ್ಯಾಟ್ ಟ್ರಿಕ್ ಗಿಟ್ಟಿಸಿದ ಪ್ರಥಮ ಹಾಗೂ ಏಕಮಾತ್ರ ಭಾರತೀಯಳಾಗಿದ್ದಾರೆ. 1967ರಲ್ಲಿ ಕರ್ನಾಟಕ (4 × 100) ಮೀಟರಿನ ರಿಲೇ ಓಟದಲ್ಲಿ ಚಿನ್ನದ ಪದಕ ಗಳಿಸುವುದಕ್ಕೆ ಕಾರಣರಾದ 'ನಿಮ್ಮಿ' ದೆಹಲಿಯಲ್ಲಿ 1968 ರಲ್ಲಿ ನಡೆದ ರಾಷ್ಟ್ರೀಯ ಶಾಲಾ ಪಂದ್ಯಗಳಲ್ಲಿ 100 ಹಾಗೂ 200 ಮೀಟರಿನ ಓಟದಲ್ಲಿ ಭಾಗವಹಿಸಿ ದಾಖಲೆ ಸ್ಥಾಪಿಸಿದರು. ಆ ವರ್ಷದ ಅಂತರ ರಾಜ್ಯ ಸ್ಪರ್ಧೆಗಳಲ್ಲಿಯೂ ನಿಮ್ಮಿ ಮೊದಲ ಸ್ಥಾನ ಉಳಿಸಿಕೊಂಡರು. 1970ರ ರಾಷ್ಟ್ರೀಯ ಅಥ್ಲೆಟಿಕ್ಸ್‌ನಲ್ಲಿ 100 ಮೀಟರ್ ಓಟದಲ್ಲಿ ಪ್ರಥಮ ಸ್ಥಾನ ಪಡೆದ ನಿಮ್ಮಿ ಕೇವಲ 12.5 ಸೆಕೆಂಡ್‌ಗಳಲ್ಲಿ ಅದೇ ದೂರದ ಓಟವನ್ನು ಮರು ವರ್ಷವೇ ಮುಗಿಸಿದರು. 'ಅತ್ಯಂತ ವೇಗದ ಕ್ರೀಡಾಪಟು' ಎಂಬ ಪ್ರಶಂಸೆಯನ್ನು ನಿಮ್ಮಿಯವರು ಪಡೆದದ್ದು ಇದಕ್ಕಾಗಿಯೇ ಆದರೆ ಇದನ್ನು ಮೀರಿಸುವ ದಾಖಲೆಯೊಂದು ನಿರ್ಮಲಾ ಅವರಿಂದಲೇ 1972ರ ರಾಷ್ಟ್ರೀಯ ಪಂದ್ಯಗಳಲ್ಲಿ ಸ್ಥಾಪಿಸಲ್ಪಟ್ಟಿತು. ಕೊಟ್ಟಾಯಂನಲ್ಲಿ ನಡೆದ ಈ ರಾಷ್ಟ್ರೀಯ ಪಂದ್ಯಗಳಲ್ಲಿ 100 ಮೀಟರ್ ಓಟವನ್ನು ಪೂರೈಸಲು ನಿರ್ಮಲಾ ತೆಗೆದುಕೊಂಡ ಸಮಯ ಕೇವಲ 12.2 ಸೆಕೆಂಡ್‌ಗಳು. ಇದು ಹನ್ನೆರಡು ವರ್ಷಗಳಿಂದ ಜಾರಿಯಲ್ಲಿದ್ದ ಸ್ಟೆಫೀ ಡಿಸೋಜಾ ಸ್ಥಾಪಿಸಿದ ದಾಖಲೆಯನ್ನು ಮುರಿಯಲು ಕಾರಣವಾಯಿತು. ಅದೇ ಸ್ಪರ್ಧೆಯಲ್ಲಿ 200, 400 ಮೀಟರಿನ ಓಟದಲ್ಲಿ ಸುಲಭವಾಗಿ ಗೆದ್ದ ನಿಮ್ಮಿ ಕರ್ನಾಟಕ (4 × 100) ಮೀಟರ್ ರಿಲೇ ಓಟದಲ್ಲಿ ಗೆಲುವು ಸಂಪಾದಿಸುವುದಕ್ಕೆ ಕಾರಣರಾದರು. 1972ರ ಸೆಪ್ಟೆಂಬರ್

ನಲ್ಲಿ ಮೊದಲ ಎರಡು ಅಂತರ ರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾರತದ ಪರ 'ನಿಮ್ಮಿ' ಯವರು ಭಾಗವಹಿಸಿದ್ದರು. ಇಷ್ಟೆಲ್ಲಾ ಸಾಧನೆ ಮಾಡಿದಾಗ ಅವರ ವಯಸ್ಸು ಕೇವಲ ಹತ್ತೊಂಬತ್ತು. 1972 ನಿರ್ಮಲಾ ಅವರ ಜೀವನದಲ್ಲಿ ಮಹತ್ತರವಾದ ವರ್ಷವೆನ್ನುವುದಕ್ಕೆ ಪುರಾವೆಯಂತೆ ವರ್ಷದ ಕಡೆಯ ಡಿಸೆಂಬರ್ ತಿಂಗಳಲ್ಲಿ ನಡೆದ ಡೆಕ್ಕನ್ ಅಥ್ಲೆಟಿಕ್ ಕ್ಲಬ್ ಕೂಟದಲ್ಲಿ ಅವರು ನೂರು ಮೀಟರ್ ಓಟವನ್ನು ಕೇವಲ 12.0 ಸೆಕೆಂಡ್‌ಗಳಲ್ಲಿ ಪೂರೈಸಿದ್ದರು. ಇಷ್ಟೆಲ್ಲಾ ರಾಷ್ಟ್ರೀಯ ದಾಖಲೆಯನ್ನು ಸ್ಥಾಪಿಸಿದ್ದರೂ ಅವರು ವಿಶ್ವದಾಖಲೆಗಿಂತ ಒಂದು ಸೆಕೆಂಡ್‌ಗಳಷ್ಟು ಹಿಂದೆ ಬಿದ್ದಿದ್ದಾರೆ. 1973 ರ ಜನವರಿಯಲ್ಲಿ ನಡೆದ ಎರಡು ಕೂಟಗಳಲ್ಲಿ ನಿರ್ಮಲಾ ಅವರು ಕೇರಳದ ಭರವಸೆಯ ಕ್ರೀಡಾಪಟು ನ್ಯಾನಿರಾಧಾ ಅವರನ್ನು ಸೋಲಿಸಿ ಪ್ರಥಮ ಸ್ಥಾನವನ್ನು ಉಳಿಸಿಕೊಂಡರು. (ದುರ್ಗಾಪುರದ ರಾಷ್ಟ್ರೀಯ ಕೂಟ ಹಾಗೂ ಅಹಮದಾಬಾದಿನ ಅಂತರ ವಿಶ್ವವಿದ್ಯಾಲಯಗಳ ಕೂಟ). ಈ ವೇಗದ ರಾಣಿ ಕರ್ನಾಟಕದ ಪ್ರಸಿದ್ಧ ಕ್ರೀಡಾಪಟು ಪಿ. ಸಿ. ಪೊನ್ನಪ್ಪ ಅವರನ್ನು 1973 ರಲ್ಲಿ ಮದುವೆಯಾದರು.

ಕರ್ನಾಟಕಕ್ಕೆ 800 ಮೀಟರ್ ಓಟದಲ್ಲಿ ಜಲಜಾನಾಥನ್ ಅವರು ಪ್ರಶಸ್ತಿ ಗಿಟ್ಟಿಸುವುದಕ್ಕೆ ಕಾರಣವಾಗಿದ್ದಾರೆ. ಉತ್ತಮ ಕ್ರೀಡಾ ಪ್ರತಿಭೆಗೆ ಹಾಗೂ ನಡತೆ ಗಾಗಿ ಕೊಡತಕ್ಕ ದಸರಾ ಪ್ರಶಸ್ತಿಯನ್ನು ಗಳಿಸಿರುವ ಜಲಜಾನಾಥನ್ ಮನಿಲಾದಲ್ಲಿ ನಡೆದ ಏಷಿಯಾ ಅಥ್ಲೆಟಿಕ್ಸ್ ಕೂಟಕ್ಕೆ ಆಯ್ಕೆಯಾಗಿದ್ದರು. ಮದ್ರಾಸಿನಲ್ಲಿ ನಡೆದ ಅಥ್ಲೆಟಿಕ್ಸ್ ಕೂಟದಲ್ಲಿ 1500 ಮೀಟರ್ ಓಟವನ್ನು 4 ನಿ. 40 . 2 ಸೆಕೆಂಡ್‌ಗಳಲ್ಲಿ ಮುಗಿಸಿ 800 ಮೀಟರ್ ಓಟವನ್ನು 2 ನಿ. 14.2 ಸೆಕೆಂಡ್‌ಗಳಲ್ಲಿ ಮುಗಿಸಿದ್ದರು. ಕುರುಕ್ಷೇತ್ರದಲ್ಲಿ ಕ್ರಾಸ್‌ಕಂಟ್ರಿ 3 ಕಿ. ಮೀ. ಓಟದಲ್ಲಿ ಕೂಡ ಜಲಜಾನಾಥನ್ ಜಯ ಗಳಿಸಿದರು. ಈ ಸಾಧನೆಯನ್ನು ಕಂಡ ಭಾರತದ ಖ್ಯಾತ ಅಥ್ಲೆಟಿಕ್ ವಿಮರ್ಶಕ ರಣಜಿತ್ ಭಾಟಿಯಾ ಅವರು 'ಜಲಜಾ ನಿಶ್ಚಯವಾಗಿ ಅಥ್ಲೆಟಿಕ್ ರಂಗದಲ್ಲಿ ಭರವಸೆ ಕೊಡುವ ನಕ್ಷತ್ರವಾಗಿದ್ದಾರೆ. ಕೇವಲ 19 ವರ್ಷಗಳಲ್ಲಿಯೇ ಈಕೆ 1500 ಮೀ. ಓಟವನ್ನು 4 ನಿ. 40.2 ಸೆಕೆಂಡ್‌ಗಳಲ್ಲಿ ಮುಗಿಸಿರುವುದನ್ನು ಗಮನಿಸಿದರೆ ಈಕೆ ಏಷ್ಯನ್ ದಾಖಲೆಯನ್ನು ಮುರಿಯುವ ದಿನಗಳು ದೂರವಿಲ್ಲ ಎನ್ನಿಸುತ್ತದೆ' ಎಂದಿದ್ದರು. 1968 ರಲ್ಲಿ 800 ಮೀಟರ್ ಓಟವನ್ನು ರಾಜ್ಯ ಒಲಂಪಿಕ್ ಕೂಟ ದಲ್ಲಿ 2 ನಿ. 33.4 ಸೆಕೆಂಡ್‌ಗಳಲ್ಲಿ ಪೂರೈಸಿ ದಾಖಲೆ ಸ್ಥಾಪಿಸಿದಾಗ ಪ್ರಸಿದ್ಧಿಗೆ ಬಂದ ಜಲಜಾ ಜಲಂಧರ್‌ನಲ್ಲಿ ನಡೆದ ಅಂತರ ರಾಜ್ಯ ಅಥ್ಲೆಟಿಕ್ಸ್ ಕೂಟದಲ್ಲಿಯ ಈ ಓಟಗಳಲ್ಲಿ ದಾಖಲೆ ಸ್ಥಾಪಿಸಿದ್ದರು. ನಂತರ ಕೊಟ್ಟಾಯಂ ರಾಷ್ಟ್ರೀಯ ಪಂದ್ಯ ಗಳಲ್ಲಿಯೂ ತಮ್ಮ ಮೊದಲ ಸ್ಥಾನ ಉಳಿಸಿಕೊಂಡ ಜಲಜಾನಾಥನ್ ಲಕ್ನೋದಲ್ಲಿ ನಡೆದ ಅಖಿಲ ಭಾರತ ಅಥ್ಲೆಟಿಕ್ಸ್ ಕೂಟದಲ್ಲಿ ಭಾಗವಹಿಸಿದ್ದರು. ಈ ಎಲ್ಲಾ

ಸಾಧನೆಗಳನ್ನು ಜಲಜಾನಾಥನ್‌ರ ಉತ್ತಮ ನಡತೆಯನ್ನು ಕಂಡ ಅಥ್ಲೆಟಿಕ್ಸ್ ವ್ಯವಸ್ಥಾಪಕರು ದುರ್ಗಾಪುರ್ ಅಥ್ಲೆಟಿಕ್ ಕೂಟಕ್ಕಾಗಿ ಅವರನ್ನು ತಂಡದ ನಾಯಕಿಯನ್ನಾಗಿ ಆಯ್ಕೆ ಮಾಡಿದರು.

1971 ರಲ್ಲಿ ಅಹಮದಾಬಾದ್‌ನಲ್ಲಿ ನಡೆದ ಅಂತರ ರಾಜ್ಯ ಅಥ್ಲೆಟಿಕ್ಸ್ ಕೂಟದಲ್ಲಿ 5.40 ಮೀಟರ್‌ಗಳಷ್ಟು ದೂರ ನೆಗೆದು ಎರಡನೆಯ ಬಾರಿ ಲಾಂಗ್ ಜಂಪ್‌ನಲ್ಲಿ ಪ್ರಥಮ ಸ್ಥಾನ ಪಡೆದ ಐರಿನ್ ಸಲ್ಡಾನ ಕರ್ನಾಟಕ ಹಾಗೂ ಭಾರತದಲ್ಲಿ ಒಟ್ಟಿಗೆ ದಾಖಲೆ ಸ್ಥಾಪಿಸಿದ ಪ್ರಥಮ ಕನ್ನಡಿತಿಯಾಗಿದ್ದಾರೆ. ಕೇವಲ ಹದಿಮೂರು ವರ್ಷದವರಿದ್ದಾಗಲೇ ಬಾಲಕಿಯರ ಅಂತರ ರಾಜ್ಯ ಅಥ್ಲೆಟಿಕ್ಸ್‌ನಲ್ಲಿ 100 ಮೀ., 200 ಮೀ. ಹಾಗೂ ಲಾಂಗ್‌ಜಂಪ್‌ನಲ್ಲಿ ಪ್ರಶಸ್ತಿಗಳಿಸಿದ ಐರೆನ್ ಸಲ್ಡಾನ ಪ್ರೌಢಶಾಲಾ ಅಥ್ಲೆಟಿಕ್ಸ್‌ನಲ್ಲೂ ಈ ಎಲ್ಲಾ ವಿಭಾಗಗಳಲ್ಲೂ ಜಯಗಳಿಸಿ ದಾಖಲೆ ಸ್ಥಾಪಿಸಿದರು. ನೂರು ಮೀಟರ್ ಮುಗಿಸುವುದಕ್ಕೆ ಕೇವಲ 13 ಸೆಕೆಂಡ್‌ಗಳಷ್ಟೇ ತೆಗೆದುಕೊಂಡದ್ದು ಹಲವರನ್ನು ದಂಗುಬಡಿಸಿತೆನ್ನಬೇಕು. ಹದಿನಾರು ವರ್ಷದ ಒಳಗಾಗಲೇ ಅವರು ಪ್ರೌಢರಿಗಾಗಿದ್ದ ಲಾಂಗ್‌ಜಂಪ್‌ಗಾಗಿ ಭಾಗವಹಿಸುತ್ತಿದ್ದರಲ್ಲದೇ ಹೆಸರು ಮಾಡಿದ್ದ ರೈಲ್ವೆಯ ಕಿಂಕಾರಿದಾಸ್, ಹರ್‌ಪಾಲ್‌ಬ್ರಾರ್ ಅವರನ್ನು ಸೋಲಿಸಿದ್ದರು. ಈಗ ಅಥ್ಲೆಟಿಕ್ಸ್‌ನಲ್ಲಿ ಡೊರೋಥಿ ಮೆನ್ಜೀಸ್ ಹೆಸರು ಮಾಡುತ್ತಿದ್ದಾರೆ.

ಕರ್ನಾಟಕವು ವೈಯುಕ್ತಿಕವಾಗಿ ಕೆಲವಾರು ಉತ್ತಮ ಆಟಗಾರರನ್ನು ಪಡೆದಿದ್ದರೂ ಕೂಡ ಬಾಲ್ ಬ್ಯಾಡ್ಮಿಂಟನ್ ಕ್ರೀಡೆಯೊಂದನ್ನುಳಿದು ಮತ್ತಿತರ ಕ್ರೀಡೆಗಳಲ್ಲಿ ಹೇಳಿಕೊಳ್ಳುವಂತಹ ಸಾಧನೆ ಮಾಡಿಲ್ಲ. ಆದರೂ ಉತ್ತಮ ತರಬೇತುದಾರರನ್ನು ಹೊಂದಿರುವ ಕರ್ನಾಟಕ ಕ್ರೀಡಾಮಟ್ಟವನ್ನು ಸುಧಾರಿಸುವುದಕ್ಕೆ ಅವಿರತ ಪರಿಶ್ರಮ ಮಾಡಬೇಕಾಗಿದೆ. ದಕ್ಷಿಣವಲಯ ವಿಭಾಗದ ಎನ್. ಐ. ಎಸ್. ಈಗ ಬೆಂಗಳೂರಿಗೆ ಬಂದಮೇಲೇ ಕರ್ನಾಟಕದ ಮಹಿಳೆಯರು ಹೆಚ್ಚಿನ ರಾಷ್ಟ್ರೀಯ ದಾಖಲೆಗಳನ್ನು ಸ್ಥಾಪಿಸುವ ದಿನಗಳು ದೂರವಿಲ್ಲ ಎನ್ನಬಹುದು.

# ಜೈನಧರ್ಮ ಮತ್ತು ಮಹಿಳೆ

**ಕಮಲಾ ಹಂಪನಾ**

ಜೈನಧರ್ಮ ಭಾರತದ ಪುರಾತನ ಧರ್ಮಗಳಲ್ಲೊಂದು. ಮಾನವ ಜನ್ಮಕ್ಕೆ ಜೈನಧರ್ಮ ಕೊಟ್ಟಷ್ಟು ಪ್ರಾಶಸ್ತ್ಯವನ್ನು ಜಗತ್ತಿನ ಮತ್ತಾವ ಧರ್ಮವೂ ಕೊಟ್ಟಿಲ್ಲ. ಮಾನವನ ಮಾತು ಹಾಗಿರಲಿ, ದೇವತೆಗಳೂ ಕೂಡ ಮುಕ್ತರಾಗ ಬೇಕಾದರೆ ಮಾನವರಾಗಿಯೇ ಹುಟ್ಟಬೇಕೆಂದು ಜಿನಧರ್ಮ ಸ್ಪಷ್ಟವಾಗಿ ಸಾರಿದೆ. ಮಾನವ, ಮುಕ್ತಿಯ ಮೊದಲ ಮೆಟ್ಟಲೆಂಬುದನ್ನು ಈ ಧರ್ಮ ದೃಢವಾಗಿ ನಂಬಿದೆ. ತೀರ್ಥಂಕರನಾಗಬೇಕಾದರೂ ಆತ ಮಾನವನ ಮೂಲಕವೇ ಹಾಯಬೇಕು.

ಹೀಗೆ ಮಾನವ ಜನ್ಮ ದೊಡ್ಡದೆಂದು ಲೋಕಕ್ಕೆ ಶ್ರುತಪಡಿಸಿದ ಈ ಜೈನ ಧರ್ಮದಲ್ಲಿ ಮಹಿಳೆಯರಿಗೆ ಕೊಟ್ಟಿರುವ ಸ್ಥಾನಮಾನಗಳು ಪರಿಭಾವನಾರ್ಹವಾದ ಗಹನ ವಿಚಾರವಾಗಿದೆ. ದಿಗಂಬರ ಹಾಗೂ ಶ್ವೇತಾಂಬರ ಎಂಬ ಎರಡು ಪ್ರಧಾನ ಜೈನಧರ್ಮದ ಶಾಖೆಗಳಿಂದ, ಕೆಲವು ಸ್ತ್ರೀ ಪಾತ್ರಗಳನ್ನು ಆರಿಸಿಕೊಂಡು ನನ್ನ ಈ ಲೇಖನವನ್ನು ನಿರೂಪಿಸಲು ತೊಡಗಿದ್ದೇನೆ.

ಜೈನಧರ್ಮದಲ್ಲಿ ಬಹಳ ಹಿಂದಿನಿಂದಲೂ ಮಹಿಳೆಯರಿಗೆ ವಿಶೇಷವಾದ ಮಹತ್ವವನ್ನೂ ಹೆಚ್ಚಿನ ಗೌರವವನ್ನೂ ಕೊಟ್ಟಿರುವುದು ಕಂಡುಬರುತ್ತದೆ. ಉದಾಹರಣೆಗಾಗಿ ಒಂದೆರಡನ್ನು ಉಲ್ಲೇಖಿಸಬಹುದು. ಬೆಂಕಿ, ಆಕಸ್ಮಿಕ, ಲೂಟಿ ಮತ್ತು ದರೋಡೆ ಮುಂತಾದ ಸಂದರ್ಭಗಳಲ್ಲಿ ಮೊಟ್ಟ ಮೊದಲು ಮಹಿಳೆಯರನ್ನು ರಕ್ಷಿಸ ಬೇಕೆಂದು ಜೈನಧಾರ್ಮಿಕ ಗ್ರಂಥಗಳಲ್ಲಿ ಹೇಳಿಕೆಗಳಿವೆ. ತೀರ್ಥಂಕರರ ತಾಯಂದಿರಿಗೆ ಹೆಚ್ಚಿನ ಗೌರವ ಸಂದಿದೆ. ಜಿನನ ಜನನಿಯರು ತಮ್ಮ ಚಿಕ್ಕ ಮಕ್ಕಳಾದ ತೀರ್ಥಂಕರನನ್ನು ತೊಡೆಯ ಮೇಲೆ ಕೂಡಿಸಿಕೊಂಡಿರುವ ಕಲ್ಲಿನ ವಿಗ್ರಹಗಳನ್ನು ದೇಶದ ಹಲವು ಕಡೆಗಳಲ್ಲಿ ಕಾಣಬಹುದು. ಇಂಥ ವಿಗ್ರಹಗಳನ್ನು ಪೂಜಿಸುವುದೂ ಉಂಟು. ಈಗಲೂ ಆಬು, ಗಿರಿನಾರ, ಪಾಟನ್ ಮೊದಲಾದ ಕೆಲವು ಸ್ಥಳಗಳಲ್ಲಿ ಈ ಜಿನ–ಜನನಿಯರ ಮೂರ್ತಿಗಳಿಗೆ ವಿಶೇಷ ಪೂಜೆ ನಡೆಯುತ್ತದೆಂದು ತಿಳಿದು ಬರುತ್ತದೆ.

ಜೈನ ದಿಗಂಬರ ಸಂಪ್ರದಾಯದಲ್ಲಿ 'ಮಹಾಪುರಾಣ' ಮಾನ್ಯವಾದ ಪ್ರಮಾಣ ಗ್ರಂಥ. ಅದರ ಆಧಾರದಿಂದ, ಪುರುಷರಿಗೆ ಹೇಗೋ ಹಾಗೆಯೇ ಸ್ತ್ರೀಯರಿಗೂ ಲೌಕಿಕ ವಿದ್ಯಾಭ್ಯಾಸವು ಅಗತ್ಯ ಎಂಬುದನ್ನು ಕಾಣಬಹುದು. ಮೊದಲನೆಯ ತೀರ್ಥಂಕರನಾದ ಋಷಭದೇವನು ಗೃಹಸ್ಥನಾಗಿದ್ದ ಕಾಲದಲ್ಲಿ, ತನ್ನ ಗಂಡುಮಕ್ಕಳಿಗೆ

ವಿದ್ಯೆ ಕಲಿಸುವ ಮೊದಲು ತನ್ನ ಹೆಣ್ಣುಮಕ್ಕಳಿಗೆ ತಾನೇ ಅಕ್ಷರಗಳನ್ನೂ, ಗಣಿತ ವನ್ನೂ ಹೇಳಿಕೊಟ್ಟನಂತೆ. ಇಬ್ಬರು ಹೆಣ್ಣುಮಕ್ಕಳನ್ನು ಕರೆದು ತೊಡೆಯ ಮೇಲೆ ಕುಳ್ಳಿರಿಸಿಕೊಂಡು

ಇದಂ ವಪುರ್ವಯಶ್ಚೇದಮಿದಂ ಶೀಲಮನೀದೃಶಂ ।
ವಿದ್ಯಯಾ ಚೇದ್ವಿಭೂಷ್ಯೇತ ಸಫಲಂ ಜನ್ಮವಾಮಿದಂ ॥
ವಿದ್ಯಾವಾನ್ ಪುರುಷೇಲೋಕೆ ಸಮ್ಮತಿಂ ಯತಿಕೋವಿದೈಃ ।
ನಾರೀಚ ತದ್ವತೀ ಧತ್ತೇ ಸ್ತ್ರೀ ಸೃಷ್ಟೇರಗ್ರಿಮಾ ಪದಂ ॥

"ನಿಮ್ಮ ಈ ಶರೀರವೂ ಈ ವಯಸ್ಸೂ ಅಸಮಾನವಾದ ಈ ಶೀಲವೂ ವಿದ್ಯೆ ಯಿಂದ ಅಲಂಕೃತವಾದರೆ ನಿಮ್ಮ ಈ ಜನ್ಮವು ಸಫಲವಾಗುತ್ತದೆ. ಲೋಕದಲ್ಲಿ ವಿದ್ಯಾವಂತನಾದ ಪುರುಷನು ವಿದ್ವಾಂಸರುಗಳಿಂದ ಸನ್ಮಾನ ಪಡೆಯುತ್ತಾನೆ. ಅದರಂತೆಯೇ ವಿದ್ಯಾವತಿಯಾದ ಸ್ತ್ರೀಯೂ ಸ್ತ್ರೀ ಸೃಷ್ಟಿಯಲ್ಲಿ ಮೊದಲನೆಯ ಸ್ಥಾನವನ್ನು ಪಡೆಯುತ್ತಾಳೆ''.

ಆಮೇಲೆ

ವಿಭುಃ ಕರದ್ವಯೇನಾಭ್ಯಾಂ ಲಿಖನ್ನಕ್ಷರ ಮಾಲಿಕಾಂ ।
ಉಪಾದಿಶಲ್ಲಿಪಿಂ ಸಂಖ್ಯಾಸ್ಥಾನಂ ಚಾಂಕೈರನುಕ್ರಮಾತ್ ॥

'ಪ್ರಭುವು (ಋಷಭನಾಥನು) ತನ್ನ ಎರಡು ಕೈಗಳಿಂದಲೂ ಅಕ್ಷರ ಮಾಲಿಕೆ ಯನ್ನು ಬರೆದು, ಆ ಮಕ್ಕಳಿಗೆ ಲಿಪಿಯನ್ನೂ, ಒಂದು ಎರಡು ಮೊದಲಾದ ಅಂಕಿ ಗಳಿಂದ, ಕ್ರಮವಾಗಿ ಸಂಖ್ಯಾಸ್ಥಾನವನ್ನೂ ಉಪದೇಶ ಮಾಡಿದನು. ಹೀಗೆ ಗುರುವಿನ ಅನುಗ್ರಹದಿಂದ ವಿದ್ಯೆಗಳನ್ನು ನಿಃಶೇಷವಾಗಿ ವಶಪಡಿಸಿಕೊಂಡ ಆ ಇಬ್ಬರು ಕನ್ಯೆಯರೂ ಸರಸ್ವತಿಯ ಅವತಾರಕ್ಕೆ ಯೋಗ್ಯತೆಯನ್ನು ಪಡೆದರು.' ಹೀಗೆ ಋಷಭದೇವನು ತನ್ನ ನಲ್ಮೆಯ ಪುತ್ರಿಯರಾದ ಬ್ರಾಹ್ಮಿ ಮತ್ತು ಸುಂದರಿಯರಿಗೆ ಮೊದಲು ಲೌಕಿಕ ವಿದ್ಯೆಯನ್ನು ಹೇಳಿಕೊಟ್ಟು, ಅನಂತರ ಭರತ, ಬಾಹುಬಲಿ ಮೊದಲಾದ ಪುತ್ರರಿಗೆ ಇತರ ವಿದ್ಯೆಗಳನ್ನು ಹೇಳಿಕೊಡುತ್ತಾನೆ. ಇದು ಆದಿ ತೀರ್ಥಂಕರನು ಹೆಣ್ಣಿಗೆ ಕೊಟ್ಟ ಪ್ರಥಮ ಸ್ಥಾನ.

ಲೌಕಿಕವಾದ ವಿದ್ಯೆಗಳಲ್ಲಿ ಮಾತ್ರವಲ್ಲದೆ ಪಾರಲೌಕಿಕವಾದ ವಿದ್ಯೆಗಳಲ್ಲಿಯೂ ಸ್ತ್ರೀಗೆ ಪುರುಷನಂತೆಯೇ ಗಣ್ಯವಾದ ಸ್ಥಾನವುಂಟು ಎಂಬುದನ್ನು ತೀರ್ಥಂಕರನ 'ಸಮವ ಸರಣ' ಎಂಬ ಧರ್ಮಸಭೆಯ ವರ್ಣನೆಯಿಂದ ತಿಳಿಯಬಹುದು. ಆ ಮಂಟಪದ ಮೂರನೆಯ ಕೋಷ್ಠದಲ್ಲಿ ಆರ್ಯಿಕೆಯರು ಮತ್ತು ನರಸ್ತ್ರೀಯರು ಇರುತ್ತಾರೆ. ಇವರಲ್ಲಿ ಆರ್ಯಿಕೆಯರು ಸನ್ಯಾಸ ಧರ್ಮವನ್ನು ಆಚರಿಸುತ್ತಾರೆ. ಆದರೆ ಅವರು ಒಂದು ಮಟ್ಟದವರೆಗೆ ಮಾತ್ರ ಆಚರಿಸಬಹುದು. "ಸ್ವಭಾವದಿಂದ ಊರ್ಧ್ವ ಗಾಮಿಯಾದ ಜೀವ ತನ್ನ ಸಂಸಾರಾವಸ್ಥೆಯಿಂದ ಮುಕ್ತಿ ಪದವನ್ನು ಮುಟ್ಟ

ಬೇಕಾದರೆ ಅದು ಹದಿನಾಲ್ಕು ಗುಣಸ್ಥಾನಗಳೆಂಬ ಮೆಟ್ಟಲುಗಳನ್ನು ಏರಿ ದಾಟ ಬೇಕು. ಆದರೆ ಸ್ತ್ರೀ ದೇಹವನ್ನು ಪಡೆದ ಜೀವ, ಆ ಸ್ತ್ರೀ ದೇಹಕ್ಕೆ ಸಂಬಂಧಿಸಿದ ಕೆಲವು ನೈಸರ್ಗಿಕ ಧರ್ಮಗಳಿಂದಾಗಿ, ತಾನು ಸಂಪೂರ್ಣ ದಿಗಂಬರಾಚಾರವನ್ನು ನಡೆಸಲಾರದು. ಆದ್ದರಿಂದ ಇಂಥ ಜೀವ ಐದನೆಯ ಗುಣಸ್ಥಾನದಿಂದ ಆಚೆ ಏರಲಾರದು. ಆದ್ದರಿಂದಲೇ ಮಾಘಣಂದಿ ಆಚಾರ್ಯರು ತಮ್ಮ 'ಶಾಸ್ತ್ರಸಾರ–ಸಮುಚ್ಚಯ' ಎಂಬ ಗ್ರಂಥದಲ್ಲಿ ಮೇಲಿನದನ್ನೆಲ್ಲ ಸ್ಪಷ್ಟಪಡಿಸಿ, ಸ್ತ್ರೀಯರಿಗೆ ಮೋಕ್ಷ ಸಾಧ್ಯವಾಗದೆಂದೂ ಸಹ ಹೇಳಿದ್ದಾರೆ. ಆದರೆ ಅನೇಕ ಸ್ತ್ರೀಯರು ಸನ್ಯಾಸ ಧರ್ಮವನ್ನು ಸ್ವೀಕರಿಸಿ ಸಲ್ಲೇಖನ ಮೊದಲಾದವುಗಳನ್ನು ಆಚರಿಸಿ ಸ್ವರ್ಗಾಗ್ರವನ್ನೇರಿದುದನ್ನು ನಾವು ಜೈನ ಸಾಹಿತ್ಯದಲ್ಲಿ ಕಾಣಬಹುದು. ಅಲ್ಲದೆ ಗಂಡಾಗಲಿ ಹೆಣ್ಣಾಗಲಿ, ಧರ್ಮವಲ್ಲಿ ಧರ್ಮದಂತೆ ಧರ್ಮದಿಂದ ನಡೆದವರನ್ನು ಆ ಧರ್ಮವೇ ರಕ್ಷಿಸುತ್ತದೆ ಎನ್ನುತ್ತದೆ ಜೈನಧರ್ಮ."

ದಿಗಂಬರ ಪಂಥದ ಪ್ರಕಾರ ಹೆಣ್ಣಿಗೆ ಮೋಕ್ಷ ಸಿದ್ಧಿಸದು ಎಂದು ಹೇಳಿದರೆ, ಶ್ವೇತಾಂಬರ ಪಂಥದ ಪ್ರಕಾರ ಅದೇ ಹೆಣ್ಣಿಗೆ ಮೋಕ್ಷ ಸಿದ್ಧಿಸಿದೆ, ಎಂದು ಹೇಳಿದ್ದಾರೆ. ಮೊದಲನೆಯ ತೀರ್ಥಂಕರನಾದ ಋಷಭನಾಥನು ಮುಕ್ತಿ ಪಡೆಯುವುದಕ್ಕೆ ಮೊದಲೇ ಆತನ ಕೇವಲ ಜ್ಞಾನೋತ್ಪತ್ತಿಯ ವೈಭವವನ್ನು ಕಂಡ ಮಾತ್ರದಿಂದಲೇ ಆತನ ತಾಯಿಯಾದ ಮರುದೇವಿ ತಾವೂ ಕೇವಲ ಜ್ಞಾನವನ್ನು ಪಡೆದು ಅದೇ ಕ್ಷಣದಲ್ಲಿಯೇ ದೇಹತ್ಯಾಗಮಾಡಿ, ಮುಕ್ತಿಯನ್ನು ಪಡೆದರೆಂದು ಶ್ವೇತಾಂಬರರ ತ್ರಿಷಷ್ಟಿ ಲಕ್ಷಣ ಮಹಾಪುರುಷ ಚರಿತವು ಕೊಂಡಾಡುತ್ತದೆ.

ಈ ಪಂಥದಲ್ಲಿ ಹತ್ತೊಂಬತ್ತನೆಯ ತೀರ್ಥಂಕರರು 'ಮಲ್ಲಿ' ಎಂಬ ಒಬ್ಬ ಹೆಣ್ಣುಮಗಳು. ಹೆಣ್ಣಿಗೆ ಎಂಥ ಉಚ್ಚಸ್ಥಾನ ದೊರಕಿದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ನಿದರ್ಶನವಿಲ್ಲ. ತೀರ್ಥಂಕರತ್ವವನ್ನು ಪಡೆಯುತ್ತಿರುವ ಆ ಜೀವ ಹೆಣ್ಣು ಜೀವ, 'ಮಲ್ಲಿ' ಎಂಬ ಹೆಸರಿನ ರಾಜಕುಮಾರಿ. ಆಕೆಯ ಸೌಂದರ್ಯಕ್ಕೆ ಮರುಳಾಗಿ ದಂಡೆತ್ತಿ ಬಂದ ರಾಜಕುಮಾರರನ್ನು ಸಂದರ್ಶಿಸಿ, ಅವರಿಗೆ ದೇಹದ ನಶ್ವರತೆಯನ್ನು ಉಪದೇಶಿಸಿ, ತಾನೂ ಲೌಕಿಕದ ವಿಷಯದಿಂದ ಬಿಡುಗಡೆ ಹೊಂದಿ, ಅಜ್ಜಿಕೆಯಾದಳು. ಹಂತಹಂತವಾಗಿ ಸಿದ್ಧಿಯ ಮೆಟ್ಟಲನ್ನೇರಿ ತೀರ್ಥಂಕರತ್ವವನ್ನು ಪಡೆದಳು. ಜೈನ ಮಹಿಳೆಯ ಸಂಯಮ ಪೂರ್ಣವಾದ ಸ್ಥಿರ ಚಿತ್ರವನ್ನು ಇಲ್ಲಿ ಕಾಣಬಹುದು.

ದಿಗಂಬರ ಪಂಥದ ಪ್ರಕಾರ ಎಲ್ಲ ಸ್ತ್ರೀಯರಿಗೂ ಮೋಕ್ಷ ಉಂಟೆಂದು ವಾದಿಸುವುದಿಲ್ಲ. ಮುಕ್ತಿ ಕಷ್ಟ ಸಾಧ್ಯವಾದುದು. ಆದರೂ ಅದನ್ನು ಸ್ತ್ರೀಯರೂ ಸಾಧಿಸಬಲ್ಲರು ಎನ್ನುತ್ತಾರೆ. ಹೀಗೆ ಕಷ್ಟಸಾಧ್ಯವಾದುದನ್ನು ಸಾಧಿಸಿದವರಲ್ಲಿ ರಾಜೀಮತಿ ಪ್ರಸಿದ್ಧಳಾದವಳು. ಇಪ್ಪತ್ತೆರಡನೆಯ ತೀರ್ಥಂಕರನಾದ ನೇಮಿನಾಥ ಸ್ವಾಮಿಯನ್ನು ಆಕೆ ಮದುವೆಯಾಗಬೇಕಿತ್ತು. ಆದರೆ ಮದುವೆಗೆ ಹೋಗುತ್ತಿ-

ದ್ದಾಗಲೇ. ನೇಮಿನಾಥನಿಗೆ ವೈರಾಗ್ಯ ಉದಯವಾಗಿ ಯತಿಯಾದನು. ರಾಜೀಮತಿಗೂ ಇದರಿಂದ ವೈರಾಗ್ಯ ಹುಟ್ಟಿತು. ಆಕೆಯೂ ಅಜ್ಜಿಕೆಯಾಗಿ ತನ್ನ ಪತಿಯನ್ನು ಹಿಂಬಾಲಿಸಿ ತಪಸ್ಸಿನಲ್ಲಿ ತೊಡಗಿದಳು. ಅವರೀರ್ವರನ್ನೂ ಹಿಂಬಾಲಿಸಿ, ತಾನೂ ತಪಸ್ಸಿಗೆ ನಿಂತ ನೇಮಿನಾಥನ ತಮ್ಮ ರತ್ನನೇಮಿ, ಆತ್ಮನಿಗ್ರಹ ಸಾಲದೆ ಅತ್ತಿಗೆಯಲ್ಲಿ ಆಸಕ್ತನಾದನು. ಆಗ ರಾಜೀಮತಿ, ತನ್ನ ಮೈದುನನಿಗೆ ಧರ್ಮೋಪದೇಶಮಾಡಿ, ಆತನನ್ನು ತಿದ್ದಿದಳು. ತಾನೂ ಕಠಿಣ ತಪಸ್ಸುಮಾಡಿ ಮೋಕ್ಷಗಳಿಸಿದಳು. ಜೈನ ಧಾರ್ಮಿಕ ಗ್ರಂಥವಾದ ಉತ್ತರಾಧ್ಯಯನ ಸೂತ್ರದಲ್ಲಿ "ರಾಜೀಮತಿ-ರತ್ನನೇಮಿ" ಪ್ರಸಂಗ ಒಂದು ಸುಂದರ ಜಾನಪದ ಗೀತೆಯೆನಿಸಿದೆ. ಇದು ರಾಜೀಮತಿಯ ಪ್ರಾತಿವ್ರತ್ಯದ ಪೆಂಪನ್ನೂ, ಪರಿಶುದ್ಧ ಶೀಲದ ಹಿರಿಮೆಯನ್ನೂ ತೋರಿಸುತ್ತದೆ.

ಜೈನಧರ್ಮ ಗೃಹಸ್ಥ–ಗೃಹಿಣೀ, ಸನ್ಯಾಸಿ–ಸನ್ಯಾಸಿನಿ ಈ ನಾಲ್ಕು ಗುಂಪಿಗೂ ಹೆಚ್ಚಿನ ಮಹತ್ವ ಕೊಟ್ಟಿರುವುದಲ್ಲದೆ ಈ ಚತುರ್ವರ್ಣವನ್ನೂ ಸರಿಸಮಾನವಾಗಿ ಕಂಡಿದೆ. ಮಹಾವೀರನ ಸಮಕಾಲೀನಳೂ ಆತನ ಚಿಕ್ಕಮ್ಮನೂ ಆದ ಚಂದನಬಾಲೆ ಮಹಾವೀರನ ಮೊಟ್ಟ ಮೊದಲ ಸ್ತ್ರೀ ಅನುಯಾಯಿಯಾದಳು. ಆಕೆ ತನ್ನ ನೇತೃತ್ವ ದಲ್ಲಿ ಮುವ್ವತ್ತಾರು ಸಾವಿರ ಆರ್ಯಿಕೆಯರ ಸಂಘವನ್ನು ಸ್ಥಾಪಿಸಿ ಜೈನಧರ್ಮ ಪ್ರಚಾರಕ್ಕೆ ಹೊಸಶಕ್ತಿಯನ್ನು ತುಂಬಿದಳು. ಈ ಆರ್ಯಿಕೆಯರು ಕೇಶವಿಚ್ಛೇದನ ವನ್ನು ಮಾಡಿಕೊಳ್ಳಬೇಕಿತ್ತು. ಇವರಿಗೆ ಜೈನ ಧರ್ಮ ನಗ್ನತೆಯನ್ನು ವಿಧಿಸಿಲ್ಲ. ಬಿಳಿಯ ಬಟ್ಟೆಗಳನ್ನು ಹಾಕಿಕೊಳ್ಳಬೇಕು. ಬಟ್ಟೆಗಳನ್ನು ಬಿಸಿಲಲ್ಲಿ ಒಣಗಿಸಬಹುದು, ಆದರೆ ನೀರಿನಲ್ಲಿ ಹಾಕಿ ಒಗೆಯಕೂಡದು ಎಂಬ ನಿಯಮಗಳಿದ್ದುವು. ಈ ಅಜ್ಜಿಕೆಯರಿಗೆ ಅನೇಕ ಶಿಷ್ಯ ಶಿಷ್ಯೆಯರಿದ್ದರು. ಬಹುಶಃ ಇವರಿಗೆ ಪ್ರತ್ಯೇಕ ಮಠಗಳಿದ್ದುವು. ವಿಕ್ರಮಪುರದ ಜಿನಾಲಯದಲ್ಲಿ ಅಜ್ಜಿಕೆಯರು ಇದ್ದಂತೆ ಶಾಸನಗಳಿಂದ ತಿಳಿದು ಬರುತ್ತದೆ. ತಮಿಳುನಾಡಿನಲ್ಲಿ ಕಂತಿಯರ ಸಂಘಗಳೇ ಇದ್ದು ಅನೇಕ ದೊಡ್ಡ ಮಠಗಳಿಗೆ ಪ್ರಧಾನಾಧಿಕಾರಿಗಳಾಗಿದ್ದರೆಂದು ತಿಳಿಯುತ್ತದೆ. ಕಂತಿ, ಆರ್ಯಿಕೆ, ಅಜ್ಜಿಕೆ, ಅಜ್ಜಿ, ಸನ್ಯಾಸಿನಿ, ಪರಿವ್ರಾಜಿಕೆ–ಹೀಗೆ ಜೈನ ಸನ್ಯಾಸಿನಿಯರನ್ನು ನಾನಾ ಪರ್ಯಾಯ ಶಬ್ದಗಳಿಂದ ಹೆಸರಿಸಿದ್ದಾರೆ. ಆದರೂ ಇವುಗಳಲ್ಲಿ ಕಂತಿ, ಅಜ್ಜಿಕೆ ಎಂಬುದೇ ಹೆಚ್ಚು ರೂಢಿಯಲ್ಲಿರುವ ರೂಪಗಳು. ಕೌಶಾಂಬಿಯ ದೊರೆ ಶತಾನೀಕನ ತಂಗಿಯಾದ ಜಯಂತಿ ಮಹಾವೀರನ ಉಪನ್ಯಾಸವನ್ನು ಕೇಳುತ್ತಿದ್ದು ಆಧ್ಯಾತ್ಮಿಕ ಹಾಗೂ ಭೌತಿಕ ವಿಷಯಗಳನ್ನು ಚರ್ಚಿಸಿ, ತನ್ನ ರಾಜಭೋಗವನ್ನು ತ್ಯಜಿಸಿ ಅಜ್ಜಿಕೆಯಾದಳು.

ಹತ್ತನೆಯ ಶತಮಾನದ ಕನ್ನಡ ಗದ್ಯಗ್ರಂಥವಾದ ವಡ್ಡಾರಾಧನೆಯಲ್ಲಿ ಕಮಳಶ್ರೀ, ಬ್ರಹ್ಮಿಲೆ, ಗುಣಮತಿ, ಪ್ರಭಾವತಿ, ಸುದರ್ಶನ ಮೊದಲಾದ ಕಂತಿಯರ

ಗುಣಗಾನವಿದೆ. ಸುಮಾರು ಕ್ರಿ. ಶ. 700ರಲ್ಲಿ ರಚಿತವಾದ ಶ್ರವಣಬೆಳುಗೊಳದ ಶಾಸನ 26ರಲ್ಲಿ ಸಸಿಮತಿಗಂತಿಯರು ಮುಡಿಪಿದ ವಿವರ ಹೀಗೆ ವರ್ಣಿತವಾಗಿದೆ :

ನೆಱದಾದ ವ್ರತ-ಶೀಲ-ನೋಂಪಿ ಗುಣದಿಂ ಸ್ವಾಧ್ಯಾಯ ಸಂಪತ್ತಿನಿಂ
ಕಱಯಿಲ್ ನಲ್ತಪಧರ್ಮದಾ ಸಸಿಮತಿ ಶ್ರೀಗಂತಿಯರ್ ವಂದು ಮೇಲ್ ।
ಅಱದಾಯುಷ್ಯಮನೆಂತು ನೋಡೆನಗೆ ತಾನಿಂತೆಂದು ಕಟ್ವಪ್ಪಿನುಳ್
ತೊಱದಾರಧನೆನೋಂತು ತೀರ್ಥಗಿರಿಮೇಲ್ ಸ್ವರ್ಗಾಲಯಕ್ಕೇಱದಾರ್ ॥

ಇದೇ ಶ್ರವಣಬೆಳುಗೊಳದ 351ನೆಯ ಶಾಸನದಲ್ಲಿ (ಕಾಲ 1109) ದಿವಾಕರಣಂದಿಯ ಶಿಷ್ಯೆ ಶ್ರೀಮತಿ ಗಂತಿಯರು ಸನ್ಯಸನ ವಿಧಿಯಿಂದ ಮುಡಿಪಿದರೆಂಬ ಸಂಗತಿಯನ್ನು ಸ್ವಾರಸ್ಯವಾಗಿ ನಿರೂಪಿಸಿದೆ :

ಆಮುನಿ ದೀಕ್ಷೆಯಂ ಕುಡೆ ಸಮಗ್ರತಪೋನಿಧಿಯಾಗಿ ದಾನಚಿಂ
ತಾಮಣಿಯಾಗಿ ಸದ್ಗುಣಗಣಾಗ್ರಣಿಯಾಗಿ ದಯೂದಮ ಕ್ಷಮಾ ।
ಶ್ರೀಮುಖ ಲಕ್ಷ್ಮಿಯಾಗಿ ವಿನಯಾರ್ಣವ ಚಂದ್ರಿಕೆಯಾಗಿ ಸಂತತಂ
ಶ್ರೀಮತಿ ಗಂತಿಯರ್ ನೆಗಟ್ದರುರ್ವಿಯೊಳುರ್ವರೆ ಕೂರ್ತುಕೀರ್ತಿಸಲ್ ॥

ಅಂದಿನ ಜೈನ ಸಮಾಜದ ಮೇಲೆ ಯತಿಗಳಷ್ಟೇ ಈ ಸನ್ಯಾಸಿನಿಯರೂ ಗಾಢವಾದ ಪ್ರಭಾವವನ್ನು ಬೀರಿದರು ; ಅವರ ವರ್ಚಸ್ವೀ ವ್ಯಕ್ತಿತ್ವ ಅನುಪಮವಾಗಿತ್ತು. ಜೈನ ಕಂತಿಯರಲ್ಲಿ ವಿದ್ಯೆ, ಬುದ್ಧಿವಂತಿಕೆ, ಪಾಂಡಿತ್ಯ, ಶೀಲಸಂವರ್ಧನೆ, ತ್ಯಾಗ–ಮೊದಲಾದ ಉದಾತ್ತಗುಣಗಳಿಂದ ಶೋಭಿತರಾದ ಎಷ್ಟೋ ಜನರ ವಿವರ ಸಿಗುತ್ತದೆ. ಸ್ಥೂಲಭದ್ರನ ಏಳುಮಂದಿ ಸಹೋದರಿಯರಾದ ಯಕ್ಷ ಮೊದಲಾದವರು ಅದ್ಭುತ ಜ್ಞಾಪಕಶಕ್ತಿಯ ಕುರುಹಾಗಿದ್ದರು. ಕ್ರಿ. ಶ. 1ನೆಯ ಶತಮಾನದ ಆರ್ಯವ್ರಜನು ಆರು ವರುಷದ ಕಿಶೋರನಾಗಿರುವಾಗಲೇ ಜೈನ ಸನ್ಯಾಸಿಯರ ಬಳಿ ವಿದ್ಯಾಭ್ಯಾಸ ಮಾಡಿದನು. ಕಂತಿಯರ ಅನುಗ್ರಹದಿಂದ ಚೆನ್ನಾಗಿ ವಿದ್ಯೆಕಲಿತು ಹಿರಿಯ ವಿದ್ವಾಂಸನಾದನು.

ಆ ಸನ್ಯಾಸಿನಿಯರಲ್ಲೆಲ್ಲಾ ಯಾಕಿನಿ ಮಹತ್ತರಾ ಎಂಬುವಳು ಮಹಾ ವಿದುಷಿ. ಹರಿಭದ್ರಸೂರಿ ಎಂಬ ಬ್ರಾಹ್ಮಣ ಪಂಡಿತನು ತನ್ನನ್ನು ವಾದದಲ್ಲಿ ಯಾರು ಸೋಲಿಸುವರೋ ಮತ್ತು ಯಾರ ಪ್ರವಚನವನ್ನು ಅರ್ಥಮಾಡಿಕೊಂಡು ವಿವರಿಸಲು ತನಗೆ ಅಸಾಧ್ಯವಾಗುವುದೋ ಅಂಥವರನ್ನು ತನ್ನ ಗುರುವೆಂದು ಒಪ್ಪಿಕೊಳ್ಳುವುದಾಗಿ ತಿಳಿಸಿದನು. ಜೈನ ಕಂತಿಯಾದ ಯಾಕಿನಿ ಮಹತ್ತರಾ ಅವನನ್ನು ವಾದದಲ್ಲಿ ಸೋಲಿಸಿ ಜೈನಧರ್ಮಕ್ಕೆ ಪರಿವರ್ತಿಸಿದಳು. ಭಾರತೀಯ ಸಾಹಿತ್ಯಕ್ಕೂ, ಜೈನ ಧರ್ಮಕ್ಕೂ, ದೊರೆತಿರುವ ಹರಿಭದ್ರಸೂರಿಯ ಕಾಣಿಕೆಯ ಮೌಲ್ಯವನ್ನು ಅರ್ಥಮಾಡಿಕೊಂಡರೆ, ಅಂತಹ ಘನ ಪಂಡಿತನನ್ನೂ ಸೋಲಿಸಿದ ಯಾಕಿನಿಯ ಪಾಂಡಿತ್ಯದ ಘನತೆಯನ್ನೂ ಔನ್ನತ್ಯವನ್ನೂ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಹರಿಭದ್ರಸೂರಿ

ಸಂತೋಷದಿಂದ ಜೈನಧರ್ಮವನ್ನು ಸ್ವೀಕರಿಸಿದ್ದೇ ಅಲ್ಲದೆ ತನ್ನನ್ನು "ಯಾಕಿನಿ ಮಹತ್ತರಾಸೂನು" ಎಂದು ಕರೆದುಕೊಂಡಿದ್ದಾನೆ.

ಕ್ರಿ.ಶ. 905ರಲ್ಲಿ ಸರಸ್ವತೀ ಪ್ರತೀಕದಂತಿದ್ದ ಸಿದ್ಧರ್ಷಿಯು, 'ಉಪಮಿತಭವ ಪ್ರಪಂಚ ಕಥಾ' ಎಂಬ ಗ್ರಂಥವನ್ನು ಕುರಿತು ಉಪನ್ಯಾಸ ಮಾಡಿದಾಗ ಆ ಅಲಂಕಾರ ಗ್ರಂಥದ ಮೊಟ್ಟಮೊದಲ ಪ್ರತಿಯನ್ನು ಸಿದ್ಧಗೊಳಿಸಿದವಳು ಗುಣಸಾಧ್ವಿ ಎಂಬ ಜೈನಕಂತಿ. ಇದರಂತೆ ಕ್ರಿ.ಶ. 1118ರಲ್ಲಿ ಸಿದ್ಧರಾಜ ಜಯಸಿಂಹನ ಕಾಲದಲ್ಲಿ ಮಹಾನಂದ ಶ್ರೀ ಮಹತ್ತರಾ ಮತ್ತು ಗಣನಿವೀರಮತಿ ಎಂಬ ಇಬ್ಬರು ಕಂತಿಯರು ಜಿನಭದ್ರನ 'ವಿಶೇಷಾವಶ್ಯಕ ಭಾಷಾ' ಎಂಬ ಗ್ರಂಥಕ್ಕೆ ವಿವರವಾದ ಟೀಕೆಯನ್ನು ಬರೆಯಲು ಹೇಮಚಂದ್ರನಿಗೆ ಬಹುವಾಗಿ ಸಹಾಯಮಾಡಿದರು. ಕ್ರಿ.ಶ. 1150ರಲ್ಲಿ ಗುಣಸಮೃದ್ಧಿ ಮಹತ್ತರಾ ಎಂಬ ಕಂತಿ 'ಅಂಜನ ಸುಂದರೀ ಚರಿತ್ರ' ಎಂಬ ಪ್ರಾಕೃತ ಗ್ರಂಥವನ್ನು ರಚಿಸಿದಳು.

ಈವರೆಗೂ ಅಜ್ಜಿಕೆಯರಲ್ಲಿ ಕೆಲವರ, ಹಿರಿಯ ವ್ಯಕ್ತಿತ್ವವನ್ನು ಸ್ಥೂಲವಾಗಿ ಪರಿಶೀಲಿಸಿದ್ದಾಯಿತು. ಇನ್ನುಮುಂದೆ ಶ್ರಾವಿಕೆಯರಾಗಿ ದಿನನಿತ್ಯ ಜೀವನದಲ್ಲಿ ತಮ್ಮ ಅಮೂಲ್ಯಗುಣ-ಶೀಲಗಳಿಂದ ತಮ್ಮ ಹೆಸರನ್ನು ಶಾಶ್ವತಗೊಳಿಸಿಕೊಂಡಿರುವ ಕೆಲವರನ್ನು ಪರಿಚಯಿಸಿಕೊಳ್ಳಬಹುದು. ಕ್ರಿ.ಶ. ಎರಡನೆಯ ಶತಮಾನದ 'ಶಿಲಪ್ಪದಿ ಗಾರಂ' ಎಂಬ ತಮಿಳು ಕಾವ್ಯದಲ್ಲಿ ಸ್ತ್ರೀಯರ ಪಾತಿವ್ರತ್ಯದ ಹಿರಿಯ ಉದಾಹರಣೆ ಯಾಗಿ ಕೆಲವು ಕತೆಗಳನ್ನು ಕೊಟ್ಟಿದೆ. ಅವುಗಳಲ್ಲಿ ದಕ್ಷಿಣ ಭಾಗದ ಸ್ತ್ರೀಯರ ಕತೆಗಳಲ್ಲಿ ಕನ್ನಗಿಯ ಕತೆ ಬರುತ್ತದೆ. ಈ ಕತೆ ಜೈನಸ್ತ್ರೀಯ ಅಕಳಂಕ ಪತಿಭಕ್ತಿ ಮತ್ತು ಪತಿನಿಷ್ಠೆಯನ್ನು ಸಾರುವುದಾಗಿದೆ. ಇಂದಿಗೂ ಆಕೆಯನ್ನು ತಮಿಳರು ಪತಿವ್ರತಾದೇವಿಯೆಂದು ಪೂಜಿಸುತ್ತಾರೆ. ಸಿಲೋನಿನಲ್ಲಿ 'ಪತ್ತಿನಿದೇವಿ' ಎಂಬ ಹೆಸರಿನಿಂದ ಪೂಜೆಯನ್ನು ಇಂದಿಗೂ ಸ್ವೀಕರಿಸುತ್ತಿದ್ದಾಳೆ.

ರಾಜತಂತ್ರ ನಿಪುಣೆಯರನ್ನೂ, ವೀರಮಹಿಳೆಯರನ್ನೂ ಜೈನಧರ್ಮ ಒಳ ಗೊಂಡಿದೆ. ಶೀಲ ಸಂಪನ್ನೆಯೂ ರಾಜತಂತ್ರಜ್ಞಳೂ ಆದ ಮೃಗವತಿಯ ಪೌರುಷ ಮೆಚ್ಚುವಂತದ್ದಾಗಿದೆ. ಉಜ್ಜಯಿನಿಯ ದೊರೆಯಾದ ಪ್ರದ್ಯೋತನು ಮೃಗವತಿ ಯನ್ನು ಅಪಹರಿಸಲು ಕೌಶಾಂಬಿಯನ್ನು ಮುತ್ತಿಗೆ ಹಾಕಿದನು. ಯುದ್ಧ ನಡೆಯು ತ್ತಿದ್ದಾಗ ಮೃಗವತಿಯ ಪತಿ ಶತಾನೀಕ ಖಾಯಿಲೆಯಿಂದಾಗಿ ಮರಣಹೊಂದಿದನು. ಆದರೆ ಆಗ ರಾಜತಂತ್ರ ಚತುರೆಯಾದ ಮೃಗವತಿ ಪತಿಯನ್ನು ಕಳೆದುಕೊಂಡ ದುಃಖವನ್ನು ನುಂಗಿಕೊಂಡು ದೂರದೃಷ್ಟಿಯಿಂದ ರಾಜ್ಯದ ದೊರೆ ಅನಾರೋಗ್ಯ ದಿಂದ ಇರುವನೆಂದು ಮಾತ್ರ ಸುದ್ದಿ ಹಬ್ಬಿಸಿ, ತಾನೇ ಸೈನ್ಯದ ಮುಂದಾಳಾಗಿ ನಿಂತು, ಪ್ರದ್ಯೋತನನ್ನು ಗಡಿಯಿಂದ ಆಚೆಗೆ ಓಡಿಸಿದ ತರುವಾಯ ರಾಜ ಸತ್ತ ಸುದ್ದಿಯನ್ನು ಜನತೆಗೆ ತಿಳಿಸಿದಳು. ಆದರೆ ಆ ವೇಳೆಗೆ ಸೈನಿಕರಿಗೆ ಬಹಳ ಆಯಾಸವಾಗಿದ್ದುದರಿಂದ

ತಮ್ಮ ಮೇಲೆ ನುಗ್ಗಿ ಬರುತ್ತಿದ್ದ ಪ್ರದ್ಯೋತನ ಸೈನ್ಯವನ್ನು ತಡೆಯಲಾಗಲಿಲ್ಲ. ಆಗಲೂ ಮೃಗವತಿ ತುಂಬ ಕುಶಲತೆಯಿಂದ ತನ್ನ ರಾಜಧಾನಿಯ ಸುತ್ತ ಬಲವಾದ ಕೋಟೆಯನ್ನು ಕಟ್ಟಿ ತನ್ನ ಮಗನಿಗೆ ರಾಜ್ಯಪಟ್ಟವನ್ನು ಕಟ್ಟಿದರೆ, ಆಗ ತಾನು ಪ್ರದ್ಯೋತನ ಅಂತಃಪುರವನ್ನು ಪ್ರವೇಶಿಸುವುದಾಗಿ ಹೇಳಿಕಳುಹಿಸಿದಳು. ಆ ಒಪ್ಪಂದವಾದ ಮೇಲೆ ಅವಳು ಮಹಾವೀರನ ಸಭಾಮಂಟಪಕ್ಕೆ ಬಂದು, ಅಲ್ಲಿ ಕುಳಿತಿದ್ದ ಪ್ರದ್ಯೋತನ ಅಪ್ಪಣೆ ಪಡೆದು ಸನ್ಯಾಸಿನಿಯಾದಳು. ಪ್ರದ್ಯೋತನೂ ಮಹಾವೀರನ ಉಪದೇಶದ ಪ್ರಭಾವದಿಂದ ಪವಿತ್ರಾಂತಃಕರಣನಾಗಿ ತನ್ನ ಅಂತಃ ಪುರದ ಇನ್ನೂ ಹಲವು ಸ್ತ್ರೀಯರಿಗೆ ಮಹಾವೀರನಿಂದ ದೀಕ್ಷೆ ಕೊಡಿಸಿದನು.

ಕನ್ನಡನಾಡಿನಲ್ಲಿ ಜಿನಶಾಸನ ದೇವತೆಗಳಂತೆ ಬಾಳಿದ ಸಾವಿಯಬ್ಬೆ, ಜಕ್ಕಿಯಬ್ಬೆ, ಅಬ್ಬಕ್ಕದೇವಿ ಮೊದಲಾದ ಜೈನಸ್ತ್ರೀಯರ ಜೀವನವೂ ಮೃಗವತಿಯ ಜೀವನದಂತೆ ಉದ್ಬೋಧವಾಗಿದೆ. ಲೋಕವಿದ್ಯಾಧರನ ಮಡದಿಯಾದ ಸಾವಿಯಬ್ಬೆ ಪತಿಗೆ ಸಹಕರಿಸಿ, ಸಾಹಸದಿಂದ ರಣರಂಗದಲ್ಲಿ ಶತ್ರುಗಳೊಡನೆ ಹೋರಾಡಿ ವೀರಸ್ವರ್ಗವನ್ನು ಪಡೆದ ಸಂಗತಿಯನ್ನು ಕನ್ನಡ ನಾಡಿನ ಶಾಸನಗಳು ಹೆಮ್ಮೆಯಿಂದ ಸಾರಿವೆ :

ಶ್ರಾವಕ ಧರ್ಮದೊಳ್ ದೊರೆಯೆನಲ್ ಪೆಱರಿಲ್ಲೆನೆ ಸಂದ ರೇವತೀ
ಶ್ರಾವಕೀ ತಾನೆ ಸಜ್ಜನಿಕೆಯೊಳ್ ಜನಕಾತ್ಮಜೆ ತಾನೆ ರೂಪಿನೊಳ್ ।
ದೇವಕಿ ತಾನೆ ಪೆಂಪಿನೊಳರುಂಧರೆ ತಾನೆ ಜಿನೇಂದ್ರ ಭಕ್ತಿ ಸ
ದ್ಭಾವದೆ ಸಾವಿಯಬ್ಬೆ ಜಿನಶಾಸನ ದೇವತೆ ತಾನೆ ಕಾಣಿರೆ ॥

ರಾಷ್ಟ್ರಕೂಟರ ದೊರೆ ಎರಡನೆಯ ಕೃಷ್ಣನ ಕಾಲದಲ್ಲಿ ನಾಗರಖಂಡ ಎಪ್ಪತ್ತಕ್ಕೆ 'ನಾಲ್ಗಾವುಂಡ' ನಾಗಿ ಆಳುತ್ತಿದ್ದ ನಾಗಾರ್ಜುನನು ಕಾಲಾತೀತನಾಗಲು ಆತನ ಪತ್ನಿಯು 'ನಾಲ್ಗಾವುಂಡ' ಪದವಿಯನ್ನು ಸ್ವೀಕರಿಸಿ ಬಹು ಸಾಮರ್ಥ್ಯದಿಂದ ರಾಜ್ಯಭಾರ ಮಾಡಿದಳು. ಚೆಲುವೆಯೂ ಧೀರೆಯೂ ಆದ ಅವಳ ಸಾಮರ್ಥ್ಯವನ್ನು ವರ್ಣಿಸುವ ಪದ್ಯ ಹೀಗಿದೆ : 'ಉತ್ತಮ ಪ್ರಭುಶಕ್ತಿಯುಕ್ತೆ ಜಿನೇಂದ್ರ ಶಾಸನ ಭಕ್ತೆ ಕಾಂತ್ಯಾತ್ತ ವಿಭ್ರಮೆ ಜಕ್ಕಿಯಬ್ಬೆ ಸಮಂತು ನಾಗರಖಂಡಮೆಪ್ಪತ್ತುಮಂ ವಧು ವಾಗಿಯುಂ ನಿಜವೀರ ವಿಕ್ರಮಗರ್ಭದಿಂ ಪೆತ್ತವಂ ಪ್ರತಿಪಾಲಿಸುತೊಸದಿರ್ದ್ದಳ್..." ಈಕೆಯು ಸ್ತ್ರೀಯಾಗಿದ್ದರೂ ಬಹು ಧೈರ್ಯದಿಂದ ನಾಡನ್ನು ಆಳಿದಳೆಂದು ಶಾಸನವು ಹೊಗಳುತ್ತದೆ. ಕಡೆಗೆ ಅವಳು ಈ ಪ್ರಾಪಂಚಿಕ ಸುಖದಿಂದ ವಿಮುಖಳಾಗಿ ಸಲ್ಲೇಖನ ವ್ರತವನ್ನು ಸ್ವೀಕರಿಸಿದಳು.

ವಿದೇಶೀಯರಾದ ಪೋರ್ಚುಗೀಸರನ್ನು ಹೊಡದೋಡಿಸಲೆತ್ನಿಸಿದ 16ನೆಯ ಶತಮಾನದ ರಾಣಿ ಅಬ್ಬಕ್ಕದೇವಿ ಚೌಟರ ಚಿಗುರು, ಜೈನದೊರೆಯ ಮಡದಿ ಎಂಬು ದನ್ನು ನೆನಸಿಕೊಂಡರೆ ರೋಮಾಂಚನವಾಗುತ್ತದೆ. ಹೀಗೆ ಜೈನ ಸಾಮಂತ ಮಹಿಳಾ ಶಾಸಕಿಯರಲ್ಲಿ ಬಂಗ ವಂಶದಲ್ಲಿ ಶಂಕರ ದೇವಿ (1324–1349), ತಿರುಮಲಾದೇವಿ

(1582–1606) ಮತ್ತು ಬೈಲಂಗಡಿ ಮೂಲರ ವಂಶದಲ್ಲಿ ಸೋಮಲಾದೇವಿ ಮೊದಲಾದ ಜೈನ ಮಹಿಳೆಯರು ತುಂಬ ಪ್ರಸಿದ್ಧರು.

ಶಿವಮೊಗ್ಗ ಜಿಲ್ಲೆಯ ಹೊಂಬುಜವೆಂಬ ಸುಪ್ರಸಿದ್ಧ ಜೈನಕ್ಷೇತ್ರವನ್ನು ಸ್ಥಾಪಿಸಿದ ಜಿನದತ್ತರಾಯನ ವಂಶದವರು ಹಿರಣ್ಯಗರ್ಭನೆಂಬುವನ ಕಾಲದಲ್ಲಿ ಈಗಿನ ತೀರ್ಥಹಳ್ಳಿ ತಾಲ್ಲೂಕಿನ ಸಾಂತಳಿಗೆ ಎಂಬ ಪ್ರದೇಶವನ್ನು ವಶಪಡಿಸಿಕೊಂಡರು. ಆದರಿಂದ ಮುಂದೆ ಆ ವಂಶದವರಿಗೆ ಸಾಂತರ ವಂಶವೆಂದು ಹೆಸರು ಬಂದಿತು. ಈ ಹೆಸರಾಂತ ಸಾಂತರ ವಂಶದಲ್ಲಿ ಚಾಕಲದೇವಿ, ಕಾಳಲಾದೇವಿ ಮುಂತಾದ ಹಲವು ಜನ ವೀರ ಮಹಿಳೆಯರು ರಾಜ್ಯಭಾರ ಮಾಡಿದರು. ತುಂಬ ದಕ್ಷತೆಯಿಂದಲೇ ಈ ಜೈನ ಮಹಿಳೆಯರು ಆಳಿದುದಾಗಿ ಪ್ರತೀತಿಯಿದೆ. ಸಾಂತರವಂಶದ ಜೈನ ಸ್ತ್ರೀಯರು ರಾಜನೀತಿಯಲ್ಲಿ, ಸಾಹಿತ್ಯ ಸೇವೆಯಲ್ಲಿ ಸಾಕಷ್ಟು ಸುಪ್ರಸಿದ್ಧರು. ಅದರಲ್ಲಿಯೂ ವಿಶೇಷವಾಗಿ ವಿಕ್ರಮ ಸಾಂತರನ ಮಗಳಾದ ಚಂಪಾದೇವಿ ಎಂಬಾಕೆ ಪರಮಪಂಡಿತೆಯಾಗಿದ್ದಳೆಂದು ತಿಳಿದುಬರುತ್ತದೆ. ಅವಳಿಗೆ 'ಶಾಸನದೇವತೆ' ಎಂಬ ಬಿರುದೂ ಬಂದಿತ್ತು.

ತಾಯಿಯಾದವಳಿಗೆ ತನ್ನ ಮಗುವನ್ನು ತ್ಯಾಗಮಾಡುವುದು ಸುಲಭವಲ್ಲ. ಆದರೆ ಜೈನ ಮಹಿಳೆಯರು ಎಂಥ ತ್ಯಾಗಕ್ಕೂ ಸಿದ್ಧ. ಪಾಹಿನಿಯದು ಮಹಾತ್ಯಾಗ ಮಾಡಿದ ಉದಾತ್ತ ಪಾತ್ರ. ಜೈನಧರ್ಮದ ಗುರುವಾದ ಆಚಾರ್ಯ ಹೇಮಚಂದ್ರಾಚಾರ್ಯನನ್ನು ಪಾಹಿನಿ ಉದಾರವಾಗಿ ತ್ಯಾಗಮಾಡದಿದ್ದರೆ ಭಾರತಕ್ಕೆ ಅಂಥ ಒಬ್ಬ ವಿದ್ವಾಂಸ ತಪ್ಪಿಹೋಗುತ್ತಿದ್ದ.

ಉಳಿದ ಎಲ್ಲ ಧರ್ಮಗಳಿಗಿಂತ ಹೆಚ್ಚಾಗಿಯೇ ಜೈನಧರ್ಮ ಸ್ತ್ರೀಯರಿಂದ ಉಪಕೃತವಾಗಿದೆ. ಪೋಚಿಕಬ್ಬೆ ಎನ್ನುವವಳು ತನ್ನ ಸಮಸ್ತವನ್ನೂ ಜೈನಧರ್ಮಕ್ಕೆ ಮೀಸಲಿಟ್ಟು ಹಲವಾರು ಚೈತ್ಯಾಲಯಗಳನ್ನು ಮಾಡಿಸಿದಳು. ಅವಳ ಸಲ್ಲೇಖನ ವ್ರತವನ್ನು ನಿರೂಪಿಸುವುದು ರೋಮಾಂಚನವನ್ನು ತರುತ್ತದೆಂದು ಶಾಸನವು ವರ್ಣಿಸುತ್ತದೆ. ಅವರಲ್ಲಿ ಹಲವರು ಬಹು ಉದಾರಬುದ್ಧಿಯುಳ್ಳವರಾಗಿದ್ದರು. ಚಾಗಲದೇವಿ ಎಂಬಾಕೆಯು ಸ್ವತಃ ಜೈನಳಾಗಿದ್ದರೂ ಬಳ್ಳಿಗಾವೆಯಲ್ಲಿ ಚಾಗೇಶ್ವರವೆಂಬ ಶಿವಾಲಯವನ್ನು ಕಟ್ಟಿಸಿ ಹಲವಾರು ಬ್ರಾಹ್ಮಣರಿಗೆ ಕನ್ಯಾದಾನ ಮೊದಲಾದ ದಾನಗಳನ್ನು ಮಾಡಿದಳೆಂದು ತಿಳಿಯುತ್ತದೆ.

ಬಸದಿ, ಕೆರೆ, ಕಟ್ಟೆ, ಕಲ್ಯಾಣಿಗಳನ್ನು ಕಟ್ಟಿಸುವುದು ಇಲ್ಲವೆ ಜೀರ್ಣೋದ್ಧಾರ ಮಾಡುವುದು, ಕವಿಗಳಿಗೆ ಆಶ್ರಯವಿತ್ತು ಮಹಾಕಾವ್ಯಗಳನ್ನು ಬರೆಸುವುದು, ಇಲ್ಲವೆ ಪ್ರತಿ ಮಾಡಿಸುವುದು ಜೈನ ಸ್ತ್ರೀಯರ ಅನುಕರಣೀಯವಾದ ಆದರ್ಶ ಗುಣವಾಗಿದೆ. ಜೈನಧರ್ಮ, ಜೈನ ಸಂಸ್ಕೃತಿ, ಕಲೆಗಳಲ್ಲಿ ಜೈನ ಮಹಿಳೆಯರಿಗೆ ಬಹಳ ಹಿಂದಿನಿಂದಲೂ ಆಸಕ್ತಿ ಇರುವುದು ಕಾಣುತ್ತದೆ. ಇಂಥವರ ಹಿರಿಮೆಯನ್ನು ಶಿಲಾಶಾಸನ

ಗಳೂ, ಓಲೆಗರಿ ಗ್ರಂಥಗಳೂ ಇತರ ಸಾಹಿತ್ಯ ಕೃತಿಗಳೂ ಮುಕ್ತಕಂಠದಿಂದ ಹೊಗಳಿವೆ.

ದಕ್ಷಿಣ ಭಾರತದಲ್ಲಿ, ಅವರಲ್ಲಿಯೂ ಕರ್ನಾಟಕದಲ್ಲಿ ಬಸದಿ ಕಟ್ಟಿಸಿದ, ಕಾವ್ಯ ಬರೆಯಿಸಿದ, ಗ್ರಂಥಗಳನ್ನು ಪ್ರತಿ ಮಾಡಿಸಿದ ಉಲ್ಲೇಖಗಳು ಉಪಲಬ್ಧವಾಗಿವೆ. ತಿಪಟೂರಿನ ಶಾಸನದಲ್ಲಿ ಸತಿಹರ್ಯಲೆ ಸಮಾಧಿ ವಿಧಿಯಿಂದ ಮುಡಿಪಿದ ಸನ್ನಿವೇಶ ವನ್ನು ಸ್ವಾರಸ್ಯವಾಗಿ ವರ್ಣಿಸಲಾಗಿದೆ. ಅವಳ ಬರವನ್ನು ಕೇಳಿ ಅಮರಾವತಿ ಪುರದ ದೇವಿ ಸಂಕುಲವು ಸಮಿಾಪಿಸಿ ನೂಪುರವನ್ನೂ ಮುತ್ತಿನ ಹಾರವನ್ನೂ ಕಟಕ ಕೇಯೂರ, ವಜ್ರದುಂಗುರ ಹಾಗೂ ಮಾಣಿಕ್ಯದ ಓಲೆಯನ್ನು ತೊಡಿಸಿ ತಾವು ತಂದ ದೇವಲೋಕದ ವಿಮಾನವನ್ನು ಹತ್ತುವಂತೆ ಅವರು ಹರ್ಯಲೆಯನ್ನು ಪ್ರಾರ್ಥಿಸು ತ್ತಾರೆ :

ಏಱು ವಿಮಾನಂ ಬರೆ ಸುರಾಂಗನೆಯರ್ ನಳಿತೋಳ ನುಣ್ಬೊಗರ್ ।
ತೋಱುವಿನಂ ಮಹೋತ್ಸವದೆ ಸೇಸೆಯನಿಕ್ಕಿ ಸುರಾನಕಸ್ವನಂ ॥
ಮಿಾಱೆಘನಾಘನಧ್ವನಿಯನೆತ್ತಿದ ಸತ್ತಿಗೆ ಚಂದ್ರಬಿಂಬಮಂ !
ಬೀಱೆ ವಿಲಾಸದಿಂ ಪಿಡಿದು ಚಾಮರಮಿಕ್ಕೆ ಸಮಂತು ಪೊಕ್ಕಳಾ ।
ನೀಱೆ ಮಹಾನುಭಾವೆ ಸತಿ ಹರ್ಯಲದೇವಿ ಸುರೇಂದ್ರ ಲೋಕಮಂ ॥

ಐದು ಸಾಲಿನ ಈ ವೃತ್ತ ಕನ್ನಡ ಸಾಹಿತ್ಯದಲ್ಲಿ ಒಂದು ಅಪೂರ್ವ ವೃತ್ತ ವಾಗಿದೆ. ಇದರಲ್ಲಿ ನಿರೂಪಿತಳಾಗಿರುವ ಸತಿ ಹರ್ಯಲೆಯ ಜೀವನ ಒಂದು ಅಪೂರ್ವ ವೃತ್ತಾಂತವಾಗಿದೆ.

ಇದರಂತೆ ಶಾಂತಲಾದೇವಿ, ಅತ್ತಿಮಬ್ಬೆ, ಗುಂಡಮಬ್ಬೆ, ಸಾವಿಯಬ್ಬೆ, ಚಾಗಲ ದೇವಿ, ಚಟ್ಟಲದೇವಿ, ಬಾಚಲದೇವಿ ಏಚಲೆ ಮೊದಲಾದ ಹತ್ತಾರು ಜನ ಶ್ರೇಷ್ಠ ಗುಣಸಂಪನ್ನರೂ ಸತೀಸಾಧ್ವಿಯರೂ ಆದ ಜೈನ ಸ್ತ್ರೀ ರತ್ನಗಳ ಬಾಳಿನ ಮಹೋನ್ನತಿ ಯನ್ನು ಕನ್ನಡನಾಡಿನ ಎಲ್ಲ ಭಾಗಗಳ ಶಿಲಾಶಾಸನಗಳೂ ಆಚಂದ್ರಾರ್ಕ ಸ್ಥಾಯಿ ಯಾಗಿ ಸಾರಿ ಹೇಳುತ್ತಿವೆ.

ಹತ್ತನೆಯ ಶತಮಾನದ ಪೂರ್ವಭಾಗದಲ್ಲಿದ್ದ ಚಾಲುಕ್ಯ ಚಕ್ರವರ್ತಿ ಎರಡ ನೆಯ ದಂಡನಾಯಕನಾದ ಮಲ್ಲಪಯ್ಯನಿಗೆ ಅತ್ತಿಮಬ್ಬೆ ಮತ್ತು ಗುಂಡಮಬ್ಬೆ ಎಂಬಿಬ್ಬರು ಹೆಣ್ಣುಮಕ್ಕಳಿದ್ದರು. ಮಲ್ಲಪಯ್ಯ ವಿದ್ಯಾವಿಶಾರದನಾಗಿದ್ದನು. ಮಲ್ಲಪಯ್ಯ ತನ್ನ ಈ ಹೆಣ್ಣು ಮಕ್ಕಳಿಬ್ಬರನ್ನೂ ಚಾಲುಕ್ಯರ ಸೇನಾಧಿಪತಿಯಾಗಿದ್ದ ನಾಗದೇವನಿಗೆ ಕೊಟ್ಟು ಮದುವೆಮಾಡಿದನು. ಹೀಗಿರುವಾಗ, ಒಮ್ಮೆ ಕಾಳಗ ಒಂದರಲ್ಲಿ ನಾಗದೇವ ಮರಣಹೊಂದಿದನು. ಆಗ ಗುಂಡಮಬ್ಬೆ ತನ್ನ ಪತಿಯೊಡನೆ 'ಸತಿ' ಅಥವಾ ಸಹಗಮನ ಆಚರಿಸಿದಳು. ಜೈನ ಮಹಿಳೆ ಹೀಗೆ ಸಹಗಮನವನ್ನು ಆಚರಿಸುವುದು ಒಂದು ಅಪರೂಪ ಪ್ರಸಂಗವಾಗಿದೆ.

ಅತ್ತಿಮಬ್ಬೆ ತನ್ನ ಮಗ ಅಣ್ಣಿಗದೇವನನ್ನು ರಕ್ಷಿಸಲು 'ಸತಿ' ಆಚರಿಸದೆ ಉಳಿದಳು. ಅತ್ತಿಮಬ್ಬೆಗೆ ಬಾಲ್ಯದಿಂದಲೂ ಇದ್ದ ಜೈನಧರ್ಮದ ಆಸಕ್ತಿ-ಶ್ರದ್ಧೆ ದ್ವಿಗುಣಗೊಂಡಿತು. ಇಂದಿಗೆ ಸರಿಯಾಗಿ ಒಂದು ಸಾವಿರ ವರುಷದ ಹಿಂದೆ ಚಾಲುಕ್ಯ ರಾಜ್ಯದಲ್ಲಿ ಬಾಳಿ ಬೆಳಗಿದ ಮಹಾಸಾಧ್ವಿ ಅತ್ತಿಮಬ್ಬೆಯ ಭವ್ಯವಾದ ಬಾಳು ದಿವ್ಯವಾದ ಕಾವ್ಯವಾಗಿ ಮಹಾಕವಿ ರನ್ನನ ರಸದೊರತೆಯಾಗಿ ರೂಪಗೊಂಡಿದೆ, ಅವಳ ಪರಮ ಪವಿತ್ರವಾದ ಉದಾತ್ತ ಜೀವನದ ವಿವರಗಳು ಕವಿಯ ಪವಿತ್ರಾಂತಃಕರಣದಿಂದ ಹೊರಹೊಮ್ಮಿದೆ. ಆಕೆ ಕಾವ್ಯವನ್ನು ಬರೆಯದೆ ಇದ್ದರೂ ಮಹಾಕಾವ್ಯದ ಬಾಳನ್ನು ಬಾಳಿದಳು, ಬೆಳಗಿದಳು, ಆಳಿದಳು.

ಮಹಾಕವಿ ಪೊನ್ನನಿಂದ ರಚಿತವಾಗಿದ್ದ ಶಾಂತಿಪುರಾಣ ಕಾವ್ಯದ ಸಾವಿರ ಓಲೆ ಪ್ರತಿಗಳನ್ನು ಮಾಡಿಸಿ ಅದರ ಜೊತೆಗೆ ತೀರ್ಥಂಕರರ ಸಾವಿರ ಪ್ರತಿಮೆಗಳನ್ನೂ, ಆ ಪ್ರತಿಮೆಗಳನ್ನಿಡಲು ಸಾವಿರ ಮಂಟಪಗಳನ್ನೂ, ಸಾವಿರ ಜಯಘಂಟೆಗಳನ್ನೂ ಬಂಗಾರದಲ್ಲಿ ಮಾಡಿಸಿ ದಾನಮಾಡಿದಳು. ಇದರಿಂದ ದಾನಚಿಂತಾಮಣಿ ಅತ್ತಿಮಬ್ಬೆ ಎಂಬ ಶಾಶ್ವತ ಕೀರ್ತಿಗೆ ಪಾತ್ರಳಾದಳು. ಇದಲ್ಲದೆ ಮಹಾಕವಿ ರನ್ನನಿಂದ ಅಜಿತ ಪುರಾಣವನ್ನು ಬರೆಸಿದಳು. ರನ್ನ ತನ್ನ ಈ ಕಾವ್ಯದಲ್ಲಿ ಅತ್ತಿಮಬ್ಬೆಯ ಚರಿತವನ್ನು ಕುರಿತು 'ಅಳುರದು ಕೀರ್ತಿ ಮುಟ್ಟದು ವಿಷಾಹಿ ಮಹಾಸತಿಯಿರ್ದ ಮಂಡಲಂ ಬೆಳೆವುದು ಬೇಡಿದಂತೆ ಮಳೆಕೊಳ್ವುದೆನಿಪ್ಪ ಜಸಕ್ಕೆ ನೋಂತು ಭೂತಿಳಕ ಪವಿತ್ರೆಯುಂ ಗುಣಪವಿತ್ರೆಯನಾಸತಿಯಂ ಮಹಾಸತಿತಿಳಕೆಯನತ್ತಿಮಬ್ಬರಸಿಯಂ ಪೆಸರ್ಗೊಳ್ವುದು ಪುಣ್ಯಕಾರಣಂ ॥ ಎಂದು ಮುಕ್ತಕಂಠದಿಂದ ಕೊಂಡಾಡಿದ್ದಾನೆ. ಈ ಕೊಂಡಾಟ ಕೇವಲ ಕವಿಯ ಕೃತಜ್ಞತೆಯ ಕಾಣಿಕೆಯಷ್ಟೇ ಆಗಿರದೆ ಅತ್ತಿಮಬ್ಬೆಯ ಧವಳಕೀರ್ತಿಯನು ಸಾರುವ, ಅವಳ ಪರಮ ಪವಿತ್ರ ಶೀಲದ ಅಕಳಂಕತೆಯನ್ನು ಬಿತ್ತರಿಸುವ ಅನ್ಯಾದೃಶ ಜಯಘೋಷವಾಗಿದೆ. ಅತ್ತಿಮಬ್ಬೆ, ಜಗತ್ತಿನ ಸ್ತ್ರೀಯರ ಸಾಲಿನಲ್ಲಿ ಅಗ್ರಮಾನ್ಯಳಾಗಿ ಅಲಂಕರಿಸುವಾಕೆಯಾಗಿದ್ದಾಳೆ.

ಪ್ರಸಿದ್ಧ ಸೇನಾಧಿಕಾರಿ ಗಂಗರಾಜನ ಪತ್ನಿ ಅಕ್ಕಲೆ ವ್ಯಾಪಾರವಲ್ಲಿ ಸತ್ಯದಂತೆ, ಯುದ್ಧದಲ್ಲಿ ಜಯದೇವತೆಯಂತೆ ಇದ್ದಳು. 1118ರಲ್ಲಿ ಶ್ರವಣಬೆಳುಗೊಳದಲ್ಲಿ ಜಿನಾಲಯವನ್ನು ಕಟ್ಟಿಸಿ, ಅನ್ನ, ವಸತಿ, ಔಷಧಿ ಮತ್ತು ವಿದ್ಯಾದಾನಗಳನ್ನು ಮಾಡಿದಳು.

ಹೊಯ್ಸಳ ವಿಷ್ಣುವರ್ಧನನ ಮಹಾರಾಣಿ ಶಾಂತಲಾದೇವಿ ಲಾವಣ್ಯವತಿಯೂ ನೃತ್ಯಪ್ರವೀಣೆಯೂ, ಲಲಿತ ಕಲೋಪಾಸಕಳೂ ಆಗಿದ್ದಳು. ಕ್ರಿ. ಶ. 1123ರಲ್ಲಿ ಈಕೆ ಶ್ರವಣಬೆಳುಗೊಳದಲ್ಲಿ ಒಂದು ಬಸದಿ ಕಟ್ಟಿಸಿ, ಒಂದು ಉದ್ಯಾನವನ್ನು ಮಾಡಿಸಿ ಭಕ್ತಜನರ ನಿತ್ಯಪೂಜೆಗೋಸ್ಕರ ಒಂದು ಹಳ್ಳಿಯನ್ನೇ ದತ್ತಿಯಾಗಿ ಬಿಟ್ಟುಕೊಟ್ಟಳು, ಹತ್ತಾರು ಶಿಲಾಶಾಸನಗಳು ಈ ಜೈನ ಮಹಿಳೆಯಾದ ಶಾಂತಲಾದೇವಿಯು ಎಸಗಿದ

ಜೈನಧರ್ಮದ ಪ್ರಚಾರ ಕಾರ್ಯವನ್ನು ಪ್ರಶಂಸಿಸಿವೆ. ವಿಷ್ಣುವರ್ಧನ ಮತ್ತು ಶಾಂತಲೆಯರ ದಾಂಪತ್ಯವು ಆದರ್ಶದ ಚರಮಸೀಮೆಯನ್ನು ಮುಟ್ಟಿದ್ದಿತು. ಅವಳ ಪತಿಭಕ್ತಿ ವಿಷ್ಣುವರ್ಧನನ ಸಂಪೂರ್ಣ ವ್ಯಕ್ತಿತ್ವವನ್ನೇ ಆವರಿಸಿತ್ತು. ಇದಕ್ಕೆ ನಿದರ್ಶನವಾಗಿ ಒಂದು ಪದ್ಯವನ್ನು ನೋಡಬಹುದು :

'ಸತತಂ ನೋಟ್ಟೊಡೆ ಲಕ್ಷ್ಮೀದೇವತೆ ರಣ ವ್ಯಾಪಾರದೊಳ್ ಖೆಟ್ಗಿದೇ ।
ವತೆ ಬಿಣ್ಪಿಂದಮ ಭೂಮಿದೇವತೆ ಜನಕ್ಕೆಲ್ಲಂದದಿಂ ಪುಣ್ಯದೇ ।
ವತೆ ವಾಗ್ದೇವತೆ ವಿದ್ಯೆಯೊಳ್ ಸಕಲಕಾರ್ಯೋದ್ಯೋಗದೊಳ್ ಮಂತ್ರದೇ ।
ವತೆ ನಾಥಂಗೆನೆ ಶಾಂತಿದೇವಿಯನದಿನ್ನೇವಣ್ಣಿಪಂ ಬಣ್ಣಿಪಂ ॥

ತುಂಬು ಯೌವನದಲ್ಲಿ, ತನ್ನ ಕೀರ್ತಿಯ ಪರಾಕಾಷ್ಠೆಯಲ್ಲಿ ಶಾಂತಲೆಯು ಸನ್ಯಸನವಿಧಿಯನ್ನು ಅಂಗೀಕರಿಸಿ ಪ್ರಾಣತ್ಯಾಗ ಮಾಡಿದಳು. ಅತ್ತಿಮಬ್ಬೆಯ ಕಾರ್ಯಕ್ಷೇತ್ರವು ಧರ್ಮವಾದರೆ, ಶಾಂತಲೆಯ ಕಾರ್ಯಕ್ಷೇತ್ರವು ಮುಖ್ಯವಾಗಿ ಕಲೆಯಾಗಿತ್ತು. ಒಬ್ಬಳು ಗಂಡನ ಸಾವಿನ ನಂತರ 'ಮಹಾಸತಿ'ಯಾದರೆ ಮತ್ತೊಬ್ಬಳು ಮುತ್ತೈದೆಯಾಗಿಯೇ ಮಹಾಸತಿಯಾದಳು.

ಹೊಯ್ಸಳ ಮನೆತನದ ಪ್ರಸಿದ್ಧ ಬಲ್ಲಾಳನ ಆಸ್ಥಾನವನ್ನು ಬೆಳಗಿಸಿದ ಕೀರ್ತಿ ಕಂತಿಯದು. ಈಕೆಯ ಅಸ್ತಿತ್ವದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಕಂತಿ ಮತ್ತು ನಾಗಚಂದ್ರನಿಗೆ ಆಗಾಗ್ಗೆ ಕಾವ್ಯ ವಿಚಾರದಲ್ಲಿ ಸ್ಪರ್ಧೆ ನಡೆಯುತ್ತಿತ್ತು, ಕಂತಿ-ಹಂಪರ ಸಮಸ್ಯೆಗಳು ಕನ್ನಡಸಾಹಿತ್ಯದಲ್ಲಿ ಸ್ವಾರಸ್ಯವಾದ ಭಾಗವಾಗಿದೆ. ಅನೇಕ ವರ್ಷಗಳಾದ ಮೇಲೆ 1560ರಲ್ಲಿ ಇದ್ದ ಬಾಹುಬಲಿಯೆಂಬ ಕನ್ನಡದ ಕವಿ ಕಂತಿಯನ್ನು ಕುರಿತು 'ಅಭಿನವ ವಾಗ್ದೇವಿ'ಯೆಂದು ಕರೆದು ಮುಕ್ತಕಂಠದಿಂದ ಹೊಗಳಿದ್ದಾನೆ.

ಹೀಗೆ ಜೈನ ಮಹಿಳೆಯರು ದಾನಿಗಳಾಗಿ, ಅನನ್ಯ ಪತಿಭಕ್ತೆಯರಾಗಿ, ಕಂತಿಯರಾಗಿ, ತ್ಯಾಗಿಗಳಾಗಿ, ಆದರ್ಶ ಮಾತೆಯರಾಗಿ, ಮತೋದ್ಧಾರಕರಾಗಿ, ಧರ್ಮದೇವತೆಯರಾಗಿ, ಜಂಗಮ ಜಿನಶಾಸನದಂತೆ ಶೋಭಿಸಿ ಘನತೆ ಗೌರವಗಳಿಂದ ಲೋಕ ವಿಖ್ಯಾತರಾಗಿದ್ದಾರೆ. ಅವರ ಆದರ್ಶ ಗುಣಗಳ ಸಮೂಹ ಸಾರವನ್ನು ಕನ್ನಡದ ಕವಿಯೊಬ್ಬ ಹೀಗೆ ಬಣ್ಣಿಸಿದ್ದಾನೆ;

ಗುಣದೊಳ್ ರೂಪಿನೊಳ್ ಒಳ್ಪಿನೊಳ್ ಸೊಬಗಿನೊಳ್ ಶೃಂಗಾರದೊಳ್ ಸೌಮ್ಯ ಲ ।
ಕ್ಷಣದೊಳ್ ಪ್ರೇಮೆಯೊಳ್ ಓಜೆಯೊಳ್ ವಿಭವದೊಳ್ ಶಿಲಂಗಳೊಳ್ ಭೃತ್ಯ ಪೋ ।
ಕ್ಷಣದೊಳ್ ಭೋಗದೊಳಾರ್ಜಿನೊಳ್ ವಿಭೂತಿಯೊಳ್ ಕಾರುಣ್ಯದೊಳ್ ಪೋಲಿಸ ।
ಲ್ಕೆಣೆಯಾರ್ ಗೆಲ್ವ ಬೆಡಂಗಿಗೆಂದನುದಿನಂ ವಿದ್ವಜ್ಜನಂ ಬಣ್ಣಕುಂ ॥

## ಆಧಾರ ಗ್ರಂಥಗಳು ಮತ್ತು ಲೇಖನಗಳು


1. ಆದರ್ಶ ಜೈನ ಮಹಿಳೆಯರು : ವಿದ್ಯಾಭೂಷಣ ಶ್ರೀ ಕೆ. ಭುಜಬಲಿ ಶಾಸ್ತ್ರಿಗಳು
2. ಆದರ್ಶ ಜೈನ ಮಹಿಳೆಯರು : ಕಮಲಾ ಹಂಪನಾ
3. ಜೈನಪುರಾಣಗಳಲ್ಲಿ ಭವಾವಳಿ : ಜಿ. ಪಿ. ರಾಜರತ್ನಂ
4. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಡಾ॥ ಎಂ. ಚಿದಾನಂದ ಮೂರ್ತಿ
5. ಕಂತಿಯರು (ಲೇಖನ) 'ಆರತಿ'-ಕಮಲಾಹಂಪನಾ
6. ನುಡಿತೋರಣ (ಲೇಖನ) 'ದಾನ ಚಿಂತಾಮಣಿ'-ಕಮಲಾ ಹಂಪನಾ
7. ಶಾಸನ ಪದ್ಯಮಂಜರಿ ; ಆರ್. ನರಸಿಂಹಾಚಾರ್

# ಶಿವಶರಣೆಯರ ಕೆಲವು ವಚನಗಳು

ಎಸ್. ಶಿವಣ್ಣ

ಕನ್ನಡ ಸಾಹಿತ್ಯ ಚರಿತ್ರೆಯ ಇತಿಹಾಸದಲ್ಲಿ ಕ್ರಿ. ಶ. ಹನ್ನೆರಡನೆಯ ಶತಮಾನ ವಚನ ವಾಙ್ಮಯದ 'ಸುಗ್ಗಿ'ಯ ಕಾಲ. ಈ ಸುಗ್ಗಿಯ ಕಾಲದ ಆರಂಭದ ಕೃಷಿ ಚಟುವಟಿಕೆಗಳನ್ನು ಕ್ರಿ. ಶ. ಹನ್ನೊಂದನೆಯ ಶತಮಾನದ ಕಾಲಾವಧಿಯಲ್ಲಿ ಬಾಳಿ ವಚನಗಳನ್ನು ರಚಿಸಿದ ಡೋಹರ ಕಕ್ಕಯ್ಯ, ಜೇಡರ ದಾಸಿಮಯ್ಯ, ಚಂದಿಮರಸ ಮೊದಲಾದವರ ವಚನಗಳಲ್ಲಿ ಗುರುತಿಸಬಹುದಾಗಿದೆ. ಕ್ರಿ. ಶ. ಹನ್ನೆರಡನೆಯ ಶತಮಾನದಲ್ಲಿ ಪ್ರಭುದೇವ, ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮ ಮೊದಲಾದ ಅಸಂಖ್ಯಾತ ಶರಣರು ವಚನಗಳನ್ನು ರಚಿಸಿದಂತೆ ಮಹಾದೇವಿಯಕ್ಕ, ನೀಲಮ್ಮ, ರಾಯಮ್ಮ, ರಾಣಿಮಹಾದೇವಿ, ಸತ್ಯಕ್ಕ, ಲಿಂಗಮ್ಮ ಮೊದಲಾದ ಶಿವಶರಣೆಯರು ವಚನ ವಾಙ್ಮಯದ ಸೃಷ್ಟಿಯಲ್ಲಿ ತೊಡಗಿ ಆ ಪ್ರಕಾರದ ಸಾಹಿತ್ಯದ ವಿಸ್ತರಣೆಗೆ ಕಾರಣರಾದರು. ಮಹಾದೇವಿಯಕ್ಕನ ಸತಿ ಪತಿ ಭಾವದ ವಚನಗಳು, ಲಿಂಗಮ್ಮನ ಶಿವಯೋಗಸಾಧನೆ ವಚನೆಗಳು, ಅಕ್ಕಮ್ಮನ ಆಚಾರ ನಿಷ್ಠೆಯ ವಚನಗಳು, ಶಿವಶರಣೆಯರು ತಾಳಿದ ವೈಯಕ್ತಿಕ ನಿಲವಿನ ಪ್ರತೀಕಗಳಾಗಿ ಅಭಿವ್ಯಕ್ತಿಗೊಂಡಿವೆ.

ಹೀಗೆ ಅಭಿವ್ಯಕ್ತಿಗೊಂಡ ಶಿವಶರಣೆಯರ ವಚನಗಳ ಪ್ರಕಾಶನ ಈ ಶತಮಾನದಲ್ಲಿ ವಚನ ಪಿತಾಮಹ ಡಾ. ಫ. ಗು. ಹಳಕಟ್ಟಿ ಅವರಿಂದ ಮೊದಲಾಯಿತು. ಅವರು ಅನೇಕಾನೇಕ ಓಲೆ ಹಾಗೂ ಕಾಗದದ ಹಸ್ತ ಪ್ರತಿಗಳನ್ನು ಪರಿಶೀಲಿಸಿ ಅಲ್ಲಿನ ಶಿವಶರಣೆಯರ ವಚನಗಳನ್ನು ಶೋಧಿಸಿ, ಕ್ರೋಢೀಕರಿಸಿ ಮಹಾದೇವಿಯಕ್ಕ (1926),[1] ಲಿಂಗಮ್ಮ (1929) ಮತ್ತು ಸತ್ಯಕ್ಕ (1940) ಮೊದಲಾದವರ ವಚನ ಸಂಕಲನಗಳನ್ನು ಪ್ರಸಿದ್ಧಿಸಿದರು.

ಶ್ರೀ ಚೆನ್ನಮಲ್ಲಿಕಾರ್ಜುನರು 'ಸರ್ವ ಪುರಾತನರ ವಚನಗಳ ಕಟ್ಟು'ನಲ್ಲಿ ದೊರೆಯುವ ಶಿವಶರಣೆಯರ 'ಶೀಲ ಸಂಪಾದನೆಯ ವಚನ'ಗಳನ್ನು ಸದ್ಧರ್ಮದೀಪಿಕೆ (ಸಂಚಿಕೆ 54-5)ಯಲ್ಲಿ ಪ್ರಕಟಿಸಿದರು.

---

1 ಅಕ್ಕಮಹಾದೇವಿಯ ವಚನ ಸಂಕಲನಗಳನ್ನು ಕುರಿತ ಇತರ ಸಂಪಾದಕರ ಬಗೆಗೆ ಕನ್ನಡ ಗ್ರಂಥಸೂಚಿ, [ಮೂರನೆಯ ಸಂಪುಟ] ಪುಟ 160–161, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1974

ರಾಣಿ ಮಹಾದೇವಿಯ ವಚನಗಳನ್ನು ಶ್ರೀ ಜ. ಚ. ನಿ (1940) ಮತ್ತು ಪ್ರೊ. ಭೂಸನೂರಮಠ (ಉತ್ತಂಗಿಯವರೊಡನೆ) ಅವರು (1950) ಬೆಳಕಿಗೆ ತಂದರು. ನೀಲಲೋಚನೆ (= ನೀಲಮ್ಮ)ಯ ವಚನಗಳನ್ನು ಶ್ರೀ ಸಿ. ಕೆ. ಪರಶುರಾಮಯ್ಯ ಅವರು (1966) ಪ್ರಕಟಿಸಿದ್ದಾರೆ.

ಈ ಮೇಲಿನ ಎಲ್ಲ ಪ್ರಯತ್ನಗಳನ್ನು ಬಳಸಿಕೊಳ್ಳುವುದರೊಡನೆ ಅನೇಕ ಓಲೆ ಹಾಗು ಹಸ್ತ ಪ್ರತಿಗಳನ್ನು ಪರಿಶೀಲಿಸಿ ಡಾ. ಆರ್. ಸಿ. ಹಿರೇಮಠ ಅವರು "ಶಿವ ಶರಣೆಯರ ವಚನಗಳು" [ಸಮಗ್ರ ಸಂಪುಟ] ಎಂಬ ಬೃಹತ್ ಸಂಕಲನ ಪರಿಶೋಧಿತ ಕೃತಿಯನ್ನು (1968) ಪ್ರಕಾಶಪಡಿಸಿದ್ದಾರೆ.

ಕ್ರಿ. ಶ. 1969ರಲ್ಲಿ ಡಾ. ಎಸ್. ಎಮ್. ಹುಣಶಾಳ ಅವರು 36 ಶಿವಶರಣೆಯರ 153 ವಚನಗಳನ್ನೊಳಗೊಂಡ "ಶರಣೆಯರ ವಚನಗಳು" ಎಂಬ ಸಂಪಾದಿತ ಕೃತಿಯನ್ನು ಹೊರತಂದಿದ್ದಾರೆ.

ಡಾ॥ ಆರ್. ಸಿ. ಹಿರೇಮಠರ 'ಶಿವಶರಣೆಯರ ವಚನಗಳು' (ಸಮಗ್ರ ಸಂಪುಟ) ಕೃತಿಯಲ್ಲಿ ಉಲ್ಲೇಖವಾಗದ ಶಿವಶರಣೆಯರ ಹಲವಾರು ವಚನಗಳು ಉಪಲಬ್ಧವಿವೆ. ಸಂಶೋಧನೆ ಮುಂದುವರಿದಂತೆ ಇವುಗಳ ಸಂಖ್ಯಾ ಪ್ರಮಾಣ ಹೆಚ್ಚುವುದರಲ್ಲಿ ಸಂಶಯವಿಲ್ಲ. ಅವುಗಳಲ್ಲಿ ನನ್ನ ಗಮನಕ್ಕೆ ಬಂದಿರುವ ಕೆಲವು ವಚನಗಳನ್ನು ಆಕರಗಳೊಡನೆ ಈ ಕೆಳಗೆ ಕೊಡಲಾಗಿದೆ.

ಮಹಾದೇವಿಯಕ್ಕನ ವಚನ[2] :

ಜಂಗಮದ ಕೈ ಹೊಯಿದು (ಯ್ದು) ಹೊಯಿದು ನಕ್ಕು ಕೆಟ್ಟರಯ್ಯಾ !
ಸರಸದಲ್ಲಿ ಮುಟ್ಟಿ ಪೂಜಿಸುವರೆ ನಿಮಗೆ ಲಿಂಗವಿಲ್ಲ,
ಹುತ್ತಿನೊಳಗೆ ಕೈಯ್ಯನಿಕ್ಕೆ ಸರ್ಪದಷ್ಟವಾದರೆ ಮತ್ತೆ ಗಾರುಡವುಂಟೇ ?
ಚೆನ್ನಮಲ್ಲಿಕಾರ್ಜುನಾ !

ನೀಲಮ್ಮನ ವಚನ[3] :

ಮುಟ್ಟದ ಮುನ್ನ
ಗುರುವುಂಟು,
ಲಿಂಗವುಂಟು,

---

2 ಓಲೆ ಪ್ರತಿ ಆಧಾರಿತ, A Descriptive Catalogue of the Kannada Manuscripts in the Government Oriental Manuscripts Library, Madras, Vol. IV. No. 574 (p. 907), Ed. A. Shankaran (1946)

3 ನೋಡಿ : ಸಾಧನೆ, 4.2 (ಪು. 73), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು (1975)

ಜಂಗಮವುಂಟು,
ಪಾದೋದಕವುಂಟು,
ಪ್ರಸಾದವುಂಟು,
ಮುಟ್ಟಿದ ಬಳಿಕ—
ಗುರು[ವಿ]ಲ್ಲ
ಲಿಂಗ[ವಿ]ಲ್ಲ
ಜಂಗಮ[ವಿ]ಲ್ಲ
ಪಾದೋದಕ[ವಿ]ಲ್ಲ
ಪ್ರಸಾದ[ವಿ]ಲ್ಲ
ಸಂಗಯ್ಯನಲ್ಲಿ ಸ್ವಯ[ವಿ]ಲ್ಲ ಪರ[ವಿ]ಲ್ಲ.

ಗಜೇಶ ಮಸಣಯ್ಯಗಳ ಪುಣ್ಯ ಸ್ತ್ರೀ[4]

ಅಹುದು ಅಹುದು, ಲಿಂಗವಿಲ್ಲದ ಶಿಷ್ಯನ [ನು?] ಅರಿಯಿಸಬಲ್ಲ ಗುರುವು ಲಿಂಗವಿಲ್ಲದ [ಗುರುವು
ಲಿಂಗವಿಲ್ಲದೆ ಇದ್ದ ಗುರುವನರಿಯಬಲ್ಲ ಶಿಷ್ಯ,
ಶಿಷ್ಯನನರಿಯಬಲ್ಲ ಗುರು,
ಇವರಿಬ್ಬರ ಭೇದವ ನೀನೆ ಬಲ್ಲೆ
ಮಸಣಯ್ಯ ಪ್ರಿಯ ಗಜೇಶ್ವರಾ.

ಅಮುಗೆ ರಾಯಮ್ಮ[5]

ವಿಶ್ವಮಯ ರೂಪವಾಗಿ ಬಂದೆಯಯ್ಯಾ
ಭಕ್ತಿಗೆ ಎನ್ನ ಮನಕ್ಕೆ ಸಲೆ ನಿಂದ ನಿಲವು
ಅಮುಗೇಶ್ವರ ಲಿಂಗಕ್ಕೆ ಮಾಟವಾಯಿತ್ತು.

ಕಾಳವ್ವೆ (ಉರಿಲಿಂಗಪೆದ್ದಿಯ ಪುಣ್ಯ ಸ್ತ್ರೀ[6])

ಗುರುವಿದ್ದಂತೆ ಪರರಿಗೆ ನೀಡಬಹುದೇ ? ಮನೆಯ ಆಕಳು ಉಪವಾಸ ಇರಲಾಗಿ ಪರ್ವತಕ್ಕೆ ಸೊಪ್ಪೆಯ ಹೊರಬಹುದೇ ?–ಎಂಬ ಪರವಾದಿ ನೀ ಕೇಳು. ಗುರುವು ಶಿಷ್ಯಂಗೆ ಲಿಂಗವ ಕೊಟ್ಟು

4 (ಬಾಳೂರು ವಿರಕ್ತಮಠ ಸ್ವಾಮಿಗಳ ಪುಸ್ತಕದಿಂದ) 'ಸರ್ವಪುರಾತನರವಚನ', ಪು. 5, ಸಂ : ಚೆನ್ನಮಲ್ಲಿಕಾರ್ಜುನ (1959)

5 ಕರ್ಣಾಟಕ ಕವಿ ಚರಿತೆ (ಪ್ರಥಮ ಸಂಪುಟ)–ಆರ್. ನರಸಿಂಹಾಚಾರ್ಯ, ಪು. 196, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು (1961-ಪರಿಶೋಧಿತ ಮುದ್ರಣ)

6 ಈ ವಚನ, ಚೆನ್ನಪ್ಪ ಕವಿಯ ಯಕ್ಷಗಾನ ಕೃತಿ ''ಶರಣಲೀಲಾಮೃತ''ದಲ್ಲಿ 'ಉರಿಲಿಂಗ ದೇವರ ವಚನ' ಎಂಬ ಹೆಸರಿನಲ್ಲಿ ಉಲ್ಲೇಖಿಗೊಂಡಿದೆ. ಈ ವಚನವನ್ನು ಕನ್ನಡ ಅಧ್ಯಯನ ಕೇಂದ್ರ (ಬೆಂಗಳೂರು) ಸಂಗ್ರಹದಲ್ಲಿನ K.129 (ಗರಿ 204 ಮುಂಭಾಗ)ರ ಓಲೆ ಕೃತಿ ಯಿಂದ ಉದಾಹರಿಸಿದೆ. ಈ ವಚನಕ್ಕೆ ಸಿಗುವ ಪಾಠಾಂತರಗಳಿಗಾಗಿ ಶಿವಬಸವಸ್ವಾಮಿಗಳಿಂದ ಸಂಪಾದಿತವಾದ ''ಶರಣಲೀಲಾಮೃತ'' ಸಂಧಿ 25, ಪು. 590–91 (1955) ನೋಡಿ. (ಮೈಸೂರು ಮುದ್ರಣ)

ತಾನು ವ್ರತಗೇಡಿಯಾಗಿ ಹೋಗುವಲ್ಲಿ ಪರರ ಪಾದೋದಕ ಪ್ರಸಾದದಿಂದ ಪವಿತ್ರನಾದ ಕಾರಣ, 'ಪರರ ಕಂಡರೆ ತನ್ನಂತೆ ಕಾಣು' ಎಂದು ಗುರುವು ಹೇಳಿದ ವಾಕ್ಯವ ಮರೆದಿರಲ್ಲ. ಅಳಿಯ ಒಡೆಯರು, ಮಗಳು ಮುತ್ತೈದೆ, ಮನೆದೇವರಿಗೆ ಶರಣೆಂದರೆ ಸಾಲದೆ ಎಂಬ ಅನಾಚಾರಿಗಳ ಮಾತು ಅದಂತಿರಲಿ. ಜಂಗಮ ದೇವರ ಪ್ರಾಣವೆಂಬ ಭಕ್ತರು ಲಿಂಗ ಜಂಗಮದ ಕೈಯ್ಯ ಹುವ್ವ, ಹಣ್ಣು, ಕಾಯಿ, ಪತ್ರೆ ಹೊಗುವ ಬರುವ ಊಳಿಗವ ಕೊಂಬಾತ ಭಕ್ತನಲ್ಲ. ಅಲ್ಲಿ ಪೂಜೆಗೊಂಬಾತ ಜಂಗಮವಲ್ಲ. ಇವರು ನಾಯಕ ನರಕಕ್ಕೆ ಯೋಗ್ಯರಯ್ಯಾ. ಇವರಿಬ್ಬರ ಉರಿಲಿಂಗಪೆದ್ದಿಗಳರಸು ಒಲ್ಲನವ್ವಾ.

# ದೇವದಾಸಿ ಪದ್ಧತಿ

**ಬಿ. ಎಸ್. ವೆಂಕಟಲಕ್ಷ್ಮಿ**

ಮುಂಬಯಿಗೆ ಭೇಟಿ ನೀಡುವ ಸಂದರ್ಭ ಇತ್ತೀಚೆಗೆ ಒದಗಿತ್ತು. ನಾವು ತಲುಪ ಬೇಕಾದ ಸ್ಥಳಕ್ಕೆ ಕರೆದೊಯ್ಯುವ ಬಸ್ಸೊಂದು ಬಂದುನಿಂತಾಗ ನಗರವನ್ನು ತೋರಿಸಲು ನಮ್ಮೊಂದಿಗಿದ್ದ ಸ್ನೇಹಿತರು ಪಕ್ಕದವರೊಡನೆ ಪಿಸು ಮಾತನಾಡಿ, "ಮತ್ತೊಂದು ಬಸ್ಸಿಗೆ ಕಾಯೋಣ" ಎಂದು ಹೇಳುತ್ತಿರುವಷ್ಟರಲ್ಲೇ ನಾವೆಲ್ಲ ಅದನ್ನು ಏರಿಯಾಗಿತ್ತು. ಜನಭರಿತ ಮುಂಬಯಿ. ಜೋಡಿಸಿಟ್ಟ ಕಡ್ಡಿಪೊಟ್ಟಣಗಳಂತೆ ಕಾಣುತ್ತಿದ್ದ ಮನೆಗಳ ಸಾಲಿನ ಮಧ್ಯೆ ಹರಿದಿದ್ದ ಕಿರಿದಾದ ರಸ್ತೆಯಲ್ಲಿ ಬಸ್ಸು ಹಾದು ಹೋಗುತ್ತಿದ್ದಂತೆಯೇ ಮನೆಗಳ ಜಗಲಿಯ ಮೇಲೆ ಮೋಹಕ ಭಂಗಿಯಲ್ಲಿ ಅರೆಬೆತ್ತಲೆಯಾಗಿ ನಿಂತಿದ್ದ, ಕಿಟಕಿಯಲ್ಲಿ ಹಲ್ಲುಕಿರಿಯುತ್ತ ಹಣಿಕಿಕ್ಕುತ್ತಿದ್ದ ತರುಣಿಯರತ್ತ ನಮ್ಮ ಗಮನ ಹೋಯಿತು. ಹಿಂದಿನ ಸೀಟಿನಲ್ಲಿ ಕೂತ ಸ್ನೇಹಿತರು ಮತ್ತೆ ಪಿಸುಗುಟ್ಟುತ್ತಿದ್ದರು, "ಇದೇ ಮುಂಬಯಿಯ ರೆಡ್‌ಲೈಟ್‌ಜೋನ್. ಈ ಜಾಗಾನ ಪಾಸ್ ಆಗದ ಬೇರೆ ಬಸ್ನಲ್ಲಿ ಬಂದಿದ್ರೆ ಈ ಅವಲಕ್ಷಣಾನ ಅವಾಯ್ಡ್ ಮಾಡಬಹುದಿತ್ತು".

ಸ್ನೇಹಿತರು ಸಂಪ್ರದಾಯಸ್ಥರು. ಪೂಜೆ-ಜಪ-ತಪ ಇವಕ್ಕೆ ದಿನದ ಬಹುಪಾಲನ್ನು ಮೀಸಲಾಗಿಟ್ಟವರು. ಕಂಡ ಕಂಡ ದೇವರಿಗೆಲ್ಲ ಕೈಮುಗಿಯುತ್ತ ಅಡ್ಡ ಸಿಕ್ಕ ದೇವಾಲಯಗಳಿಗೆಲ್ಲ ಪ್ರದಕ್ಷಿಣೆ ಹೊಡೆಯೋ ಅವರನ್ನು, "ದೇವಾಲಯದಷ್ಟು ಪವಿತ್ರಸ್ಥಳವಿಲ್ಲ ಅಂತ ಕೊಚ್ಚಿಕೋತೀರಲ್ಲ ಈ ಸೂಳೆಗಾರಿಕೆ ಅಲ್ಲೇ ಮೊದಲು ಹುಟ್ಟಿಕೊಂಡಿದ್ದು" ಅಂತ ಛೇಡಿಸಬೇಕೆನಿಸಿತು. ಜಾತಿಯತೆ ಬೇರಿಗೆ ನೀರೆರೆದು ಪೋಷಿಸುವ ಪುರೋಹಿತಶಾಹಿ ಹಿಂದೊಮ್ಮೆ ವ್ಯಭಿಚಾರವನ್ನು ಪರೋಕ್ಷವಾಗಿ ಪ್ರಚೋದಿಸಿತು ಎಂಬುದನ್ನವರಿಗೆ ಅರುಹ ಬೇಕೆನಿಸಿತು, ಅಂತರರಾಷ್ಟ್ರೀಯ ಮಹಿಳಾ ವರ್ಷ, ಅದು ಇದು ಎಂದು ಹಾರಾಡುತ್ತವಲ್ಲ ಸಂಸ್ಥೆಗಳು, ಅವೇಕೆ ಭಾಷಣ-ಭಿತ್ತಿ-ಪ್ರತಿಗಳನ್ನು ಬದಿಗೆಸೆದು ಮಹಿಳೆಯರ ಚಾರಿತ್ರ್ಯಕ್ಕೆ ಮಾರಕವಾದ ವೇಶ್ಯಾವೃತ್ತಿಯ ಅಂತ್ಯಕ್ಕೆ ನಾಂದಿಯೆನಿಸುವ ಕ್ರಮವನ್ನು ತೆಗೆದುಕೊಳ್ಳಬಾರದು ಎಂದು ಕೂಗಾಡಬೇಕೆನಿಸಿತು.

ಕರ್ನಾಟಕ ರಾಜ್ಯ ಹಲವು ವಿಷಯಗಳಲ್ಲಿ ಮುಂದು. ಬೇರೆಲ್ಲ ಕ್ಷೇತ್ರಗಳ ಸಾಧನೆಯ ಬಗ್ಗೆ ಬಂಡಿಗಟ್ಟಲೆ ಸಾಹಿತ್ಯ ದೊರೆಕುವುದಿಲ್ಲವಾದರೂ ಬೊಂಬಾಯಿಗೆ ವೇಶ್ಯೆಯರಾಗಿ ವಲಸೆಹೋಗಿ, 'ರೆಡ್‌ಲೈಟ್' ವಲಯದಲ್ಲಿ ಅತ್ಯಂತ ಜನಪ್ರಿಯ

ರಾದವರಲ್ಲಿ ಕನ್ನಡ ಸ್ತ್ರೀಯರೇ ಅಧಿಕ ಎಂಬ ಸತ್ಯವನ್ನು ಎತ್ತಿಒಡಿಯುವಂತಹ ಬರವಣಿಗೆ ನಮ್ಮಲ್ಲಿ ಬಹುಕಡಿಮೆ. ಆದರೂ ಅಧ್ಯಯನವೊಂದಕ್ಕಾಗಿ ಬರೆಹಗಾರರಿಬ್ಬರು ಸಂದರ್ಶಿಸಿದ ಮುಂಬಯಿಯ ಮುನ್ನೂರೈವತ್ತು ವೇಶ್ಯೆಯರಲ್ಲಿ ಅರ್ಧಕ್ಕಿಂತಲೂ ಹೆಚ್ಚಿನವರು ಕರ್ನಾಟಕದವರು ಎಂಬುದು ಬೆಳಕಿಗೆ ಬಂದಿದೆಯೆಂಬುದು ಅಲ್ಲಗಳೆಯಲಾಗದಂತಹ ವಿಷಯ ;[1] ಬಿಜಾಪುರ, ಬೆಳಗಾವಿ, ಧಾರವಾಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು ಇಂದಿಗೂ 'ಸೂಳೆಯರನ್ನುತ್ಪಾದಿಸುವ' ಕೇಂದ್ರಗಳಾಗಿದ್ದು ಮುಗ್ಧ ತರುಣಿಯರನ್ನು ಮುಂಬಯಿಯ ವೇಶ್ಯವಾಟಿಕೆಗಳಿಗೆ ರವಾನಿಸುವುದೇ ಅನೇಕರ ವೃತ್ತಿಯಾಗಿದೆ ಎಂಬುದು ಮರೆಯಲಾಗದ ಅಂಶ. ಇತ್ತೀಚೆಗೆ ಪ್ರಕಟವಾಗಿರುವ ವರದಿಯೊಂದರನ್ವಯ ಕರ್ನಾಟಕ ಗಡಿಯಲ್ಲಿರುವ ಕಾಸರಗೋಡಿನಲ್ಲಿ ಮುಂಬಯಿ, ಕಲ್ಕತ್ತಾ ಮೊದಲಾದ ಶಹರುಗಳಲ್ಲಿನ ವೇಶ್ಯಾವಾಟಿಕೆಗಳನ್ನು ನಾಚಿಸುವಂತಹ ವ್ಯವಹಾರಗಳು ನಡೆಯುತ್ತಿವೆ ಎಂಬುದು ವಿಚಾರವಂತರನ್ನು ಕೆಣಕುವಂತಹ ಸಂಗತಿ. ಕುಟುಂಬ ಜೀವನವನ್ನು ನಡೆಸುವ ವೇಶ್ಯೆಯರು, ತಮ್ಮ ಸಂಪಾದನೆಗೆ ಪೂರಕವಾಗಿ ಹಣವನ್ನು ಗಳಿಸಲು ಈ ಉದ್ಯೋಗವನ್ನು ಹಿಡಿದಿರುವವರು, ಬೇಡಿಕೆಗನುಗುಣವಾಗಿ ಕಾಣಿಸಿಕೊಳ್ಳುವ ಕಾಲ್‌ಗರ್ಲ್‌ಗಳು ಹಾಗೂ ರಸ್ತೆಯ ಬದಿಯಲ್ಲೆ ವ್ಯವಹಾರ ನಡೆಸುವ ಇಪ್ಪತ್ತೈದಕ್ಕೂ ಹೆಚ್ಚು "ಬೀದಿ ಕನ್ಯೆ"ಯರು ಈ ಪುಟ್ಟ ನಗರದಲ್ಲಿದ್ದಾರೆ ಎನ್ನುವುದು ಇಂದು ಹಳೆತೆನಿಸಿರುವ ಸುದ್ದಿ.[2]

ಪದ್ಧತಿ–ಪರಂಪರೆ, ಅಂಧಶ್ರದ್ಧೆ–ಅನಗತ್ಯ ನಂಬುಗೆ ಇವುಗಳಿಗೆ ಪ್ರಸಿದ್ಧರು ನಾವು, ನಾಗರಿಕತೆಯ ಓಟಕ್ಕೆ ಅನುಸಾರವಾಗಿ ಓಡುತ್ತ ಹಳೆತನ್ನು ಕಳಚಿ ಹೊಸ ಸಿದ್ಧಾಂತಗಳನ್ನು ಆವಿರ್ಭವಿಸಿಕೊಳ್ಳುವಲ್ಲಿ ಮಿಕ್ಕೆಲ್ಲ ರಾಷ್ಟ್ರಗಳು ತೊಡಗಿರುವಾಗ್ಯೂ ಗತಕಾಲದ ಯಾವುದೋ ಪದ್ಧತಿಗಂಟಿಕೊಳ್ಳುವಲ್ಲೇ ತೃಪ್ತಿ ಕಂಡುಕೊಂಡಿರುವ ನಾವು ನಮ್ಮೆಲ್ಲ ಹಲವು ವಿಚಿತ್ರ ಕ್ರಿಯೆಗಳಿಗೆ ಕಾರಣವನ್ನು ಯಾವುದೋ ದೈವದ ಹಿರಿಮೆಯಲ್ಲಿ ಹುಡುಕುವುದುಂಟು. ಸಂಶೋಧನೆಗಳನ್ನಾಧರಿಸಿ ಸಮಸ್ಯೆಗಳನ್ನು ಬಿಡಿಸದೆ, ಸವಾಲುಗಳನ್ನೆಲ್ಲ ಸರಳೀಕರಿಸುವ ಮನೋಭಾವದ ನಾವು 'ಸೂಳೆಗಾರಿಕೆ' ಅಥವಾ 'ವೇಶ್ಯಾವೃತ್ತಿ'ಗೂ ದೈವೀಕ ಹಿರಿಮೆಯನ್ನು ಲೇಪಿಸಿರುವುದರಲ್ಲಿ ಅಚ್ಚರಿಯೇನಿಲ್ಲ.

ಪ್ರಾಚೀನ ನಾಗರಿಕತೆಯಲ್ಲಿ ಬೆಬಿಲೋನಿಯಾ, ಈಜಿಪ್ಟ್ ಮತ್ತು ಗ್ರೀಸ್ ದೇಶಗಳಲ್ಲಿ ಪ್ರಾಮುಖ್ಯತೆ ಪಡೆದಿದ್ದು, ಅಲೆಗ್ಸಾಂಡರನ ದಂಡಯಾತ್ರೆಯನಂತರ

1 S. D. Punekar and Kamala Rao : *A Study of Prostitutes in Bombay,* Lalvani Publishing House, p. 13

2 ಅಜ್ಞಾತ ಕಾಸರಗೋಡಿನ ರಾತ್ರಿ ರಾಣಿಯರು, ಉದಯವಾಣಿ ಮ್ಯಾಗಸಿನ್ ವಿಭಾಗ, ರವಿವಾರ 13-7-75, ಪು. vi ಮತ್ತು viii.

ಭಾರತದಲ್ಲಿ ಪ್ರಚಲಿತಗೊಂಡ ವೇಶ್ಯಾವೃತ್ತಿ ಕರ್ನಾಟಕದಲ್ಲಿ ಬೇರೂರಿದ್ದು ಕ್ರಿ. ಶ. ಹತ್ತನೆಯ ಶತಮಾನದ ನಂತರ 'ದೇವದಾಸಿ'ಯರೆಂಬ ಪಂಗಡವೊಂದು ಗಣನೀಯ ಸಂಖ್ಯೆಯಲ್ಲಿ ಇಲ್ಲಿ ಹುಟ್ಟಿಕೊಂಡಾಗ.[3] ಅಂದು ಹುಟ್ಟಿ ಇಂದು ಕೀಳಲಾರದಷ್ಟು ಆಳವಾಗಿ ಬೇರುಬಿಟ್ಟಿರುವ ಈ ಪದ್ಧತಿಯನ್ವಯ ಹಲವು ಕುಟುಂಬಗಳು ಹೆಣ್ಣು ಹುಟ್ಟಿದ ಕೂಡಲೆ ಕೈಗೊಳ್ಳಬೇಕಾದ ಮೊದಲ ನಿರ್ಧಾರ ಅವಳನ್ನು ಋತುವತಿಯಾಗುವ ಮೊದಲು ದೇವಾಲಯಕ್ಕೆ ಮೀಸಲಿಟ್ಟು ಅವಳನ್ನು 'ದೇವದಾಸಿ'ಯಾಗಿಸಬೇಕೆಂಬುದು. ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಕೆಲವು ಜಾತಿಗಳಲ್ಲಿ ತೀವ್ರವಾಗಿ ಪ್ರಚಲಿತವಾಗಿರುವ ಈ 'ಹರಕೆ'ಯನ್ನು ಪೂರೈಸುವುದಕ್ಕಿರುವ ಹಿನ್ನಲೆ, ದೇವರ ಶಾಪದಿಂದ ತಪ್ಪಿಸಿಕೊಳ್ಳಲು ಕುಟುಂಬದಲ್ಲಿನ ಒಬ್ಬಳು ಸದಸ್ಯೆ ದೇವರಿಗಾಗಿಯೇ ಜೀವಿಸುತ್ತ ಅವಿವಾಹಿತಳಾಗಿಯೇ ಉಳಿಯಬೇಕು ಎಂಬುದಿದ್ದರೂ ಇರಬಹುದು ; ಹಿರಿಯರಿಗುಂಟಾದ ಜಡ್ಡನ್ನು ಹೋಗಿಸಿಕೊಳ್ಳಲೆಂದಿರಬಹುದು ; ಗಂಡು ಮಕ್ಕಳನ್ನು ಹುಟ್ಟಿಸುವಂತೆ ದೇವರನ್ನು ಸಂಪ್ರೀತಗೊಳಿಸುವುದೂ ಆಗಿರಬಹುದು. ಅದು ಕುಟುಂಬದ ಹಿರಿಯನೊಬ್ಬನ ಅಂತಿಮ ಆಸೆಯಾಗಿರಲೂ ಬಹುದು. ಪ್ರತಿ ಕುಟುಂಬದಲ್ಲೂ 'ಯಲ್ಲಮ್ಮ'ನ ಜ್ಯೋತಿಯುರಿಸಲು ಒಬ್ಬಳು 'ಜೋಗಿತಿ' ಅಗತ್ಯವೆನ್ನುವುದಿರಬಹುದು. ಈ ಪದ್ಧತಿಯನ್ನು ಉಳಿಸಿ ಬೆಳೆಸಿಕೊಂಡು ಬರುವುದು ಅನಿವಾರ್ಯವೆಂಬ ಕಲ್ಪನೆಗಿರುವ ಹಿನ್ನಲೆ, ಈ ಸಂಪ್ರದಾಯವನ್ನು ಮುರಿಯಬಯಸುವವರಿಗೆ ಅನಾಹುತವಾಗುವುದೆಂಬ ನಂಬಿಕೆ.[4] ಕೆಲವೊಮ್ಮೆ ಮುಪ್ಪಿನ ಕಾಲದಲ್ಲಿ ತಮಗೆ ಮಗಳೇ ಆಶ್ರಯದಾತಳಾಗಲೆಂದು ಗಂಡು ಮಕ್ಕಳಿಲ್ಲದ ತಂದೆತಾಯಿಗಳು ತಮಗಿರುವ ಮಗಳನ್ನು ದೇವದಾಸಿ ಸ್ಥಾನಕ್ಕೆ ದೂಡುವುದುಂಟು. ಅಂತೂ ಕರ್ನಾಟಕದ ಈ ಸ್ಥಳಗಳಲ್ಲಿ ದೇವದಾಸಿಯರು ಪ್ರಭಾವಯುತರಾಗಿ ಬಾಳುತ್ತಿರುವ ಪಂಗಡ. ತಮ್ಮ ಸೋದರನಷ್ಟೇ ಕುಟುಂಬದಲ್ಲಿ ಪ್ರಾಮುಖ್ಯತೆಯನ್ನು ಹೊಂದಿದ್ದು ಪಿತ್ರಾರ್ಜಿತ

---

3 Sinha, S. N. and Basu N. K. : *History of Prostitution in India*, The Bengal Social Hygiene Association, Calcutta, 1933, p. 74

4 ನಿದರ್ಶನ : 'ಎಲ್ಲು' ಪುಟ್ಟ ಬಾಲಕಿ-ಅಜ್ಜಿಯೊಡನೆ ಯಲ್ಲಮ್ಮನ ದೇವಾಲಯಕ್ಕೆ ಹೋದಾಗ, ಅವಳು ದೇವತೆಗೆ ನಮಸ್ಕರಿಸಲು ನಿರಾಕರಿಸುತ್ತಾಳೆ, "ಯಲ್ಲಮ್ಮ ಅಥವಾ ಯಾರೂ ನನಗೆ ಕಾಣಿಸರು. ಕಲ್ಲಿಗೆ ನಾನು ನಮಸ್ಕರಿಸಲಾರೆ" ಎಂದು ಬಾಲಕಿಯೆಂದಾಗ ಕೋಪಗೊಂಡ ಅಜ್ಜಿ ಅವಳನ್ನು ಬಲಾತ್ಕರಿಸುತ್ತಾಳೆ. ಅನಂತರ, ಒಂದೆರಡು ದಿನಗಳಲ್ಲಿ ಬಾಲಕಿಗೆ ಕಣ್ಣುಬೇನೆ ತಗುಲಿ ಅದು ಗುಣವಾಗದಾಗ ಅಜ್ಜಿ ಎಲ್ಲುವಿನ ಧೋರಣೆಯಿಂದಾಗಿಯೇ, ದೇವತೆ ಶಾಪ ವಿತ್ತಿದ್ದಾಳೆಂದು ಭಾವಿಸಿ ಅದನ್ನು ಪರಿಹರಿಸಲು 'ಎಲ್ಲು'ವನ್ನು ದೇವದಾಸಿಯಾಗಿಸುತ್ತಾಳೆ. (S. D. Punekar and Kamala Rao : *A Study of Prostitutes in Bombay*, p. 16)

ಆಸ್ತಿಯಲ್ಲಿ ಹಕ್ಕನ್ನು ಸ್ಥಾಪಿಸಿಕೊಳ್ಳುವುದಲ್ಲದೆ ತಮ್ಮ ತಂದೆಯ ಅಂತ್ಯಕ್ರಿಯೆ ಮತ್ತು ಶ್ರಾದ್ಧವನ್ನು ಮಾಡುವ ಹಕ್ಕು ತಮಗುಂಟೆಂದು ಹೇಳಿಕೊಳ್ಳುವ ಈ ಗುಂಪು ತನ್ನ ಗಾತ್ರವನ್ನು ಮಾತ್ರ ಹೆಚ್ಚಿಸಿಕೊಳ್ಳುತ್ತ ಹೋಗಿರುವುದಲ್ಲದೆ, ದೇವದಾಸಿ ಸಂಪ್ರದಾಯವಿರದ ಕುಟುಂಬಗಳ ಹೆಣ್ಣುಮಕ್ಕಳನ್ನೂ ತನ್ನ ವರ್ತುಲದೊಳಕ್ಕೆ ಎಳೆದುಕೊಂಡಿದೆ.

ಹೆಣ್ಣನ್ನು 'ದೇವದಾಸಿ'ಯಾಗಿಸುವುದು ಈ ಕುಟುಂಬಗಳಿಗೆ ಸಂತಸದ ಸಂದರ್ಭ. ದೇವಾಲಯದಲ್ಲೋ ಇಲ್ಲವೇ ಮನೆಯಲ್ಲೋ ನಡೆಯುವ ಈ 'ಶುಭಮುಹೂರ್ತ'ದಲ್ಲಿ ತಮ್ಮ ಮಗಳಿಗಾಗಿ ಹೆಚ್ಚು ಬೆಲೆ ತೆರುವವನಿಗಾಗಿ ತಂದೆತಾಯಿಗಳ ಅರೆಸಾಟ. ಬಂಧು ಬಾಂಧವರ ಸಮಕ್ಷಮದಲ್ಲಿ ಈ ಉದ್ದೇಶಕ್ಕಾಗಿ ಮುಂಬರುವ ಪುರುಷ ಅವಳಿಗೆ ಉಡಿತುಂಬಿಸಿ (ತೆಂಗಿನಕಾಯಿ, ಅಕ್ಕಿ, ಹೂವನ್ನು ಸೀರೆಯ ಸೆರಗಿಗೆ ತುಂಬಿಸುವುದು) ಅವಳ ಹಣೆಗೆ ಮಂಗಳದ್ರವ್ಯಗಳನ್ನಿಟ್ಟು ಹೊಸಬಟ್ಟೆ ಹಣವನ್ನು ನೀಡಿದೊಡನೆ ಅವನು ಅವಳ ಯಜಮಾನ. ಅವಳ ಜೀವನಾವಶ್ಯಕತೆಗಳನ್ನು ಪೂರೈಸುವುದು ಅವನ ಕರ್ತವ್ಯವಾದರೂ ಕ್ರಮೇಣ ಅವನು ಅವಳಲ್ಲಿ ಆಸಕ್ತಿ ಕಳೆದುಕೊಂಡಾಗ ದೇವದಾಸಿಯಾದ ಅವಳು ಸಾರ್ವಜನಿಕ ಸ್ತ್ರೀಯಾಗಲು ಯಾವ ಕಾಯಿದೆ–ಕಟ್ಟಲೆಯೂ ಅಡ್ಡಿಬರುವುದಿಲ್ಲ. (ಕರ್ನಾಟಕದಲ್ಲಿ ಇಷ್ಟು ಜನಜನಿತವಾಗಿರುವ 'ದೇವದಾಸಿ' ಪದ್ಧತಿ ಭಾರತದಲ್ಲಿ ಉಗಮವಾದ ಬಗ್ಗೆ ಸ್ಪಷ್ಟ ಪುರಾವೆಗಳಿಲ್ಲ. ವೇದ ಸಾಹಿತ್ಯದಲ್ಲಿ ಆಸ್ಥಾನ ಸ್ತ್ರೀಯರು ಹಾಗೂ ಸಮಾಜದಲ್ಲಿ ಅವರ ಸ್ಥಾನದ ಬಗ್ಗೆ ಉಲ್ಲೇಖವಿದ್ದರೂ ಆ ಕಾಲದಲ್ಲಿ ಧಾರ್ಮಿಕ ವೇಶ್ಯಾವೃತ್ತಿಯಿದ್ದಿತೆಂಬುದಕ್ಕೆ ಯಾವ ಆಧಾರವೂ ದೊರೆತಿಲ್ಲ. "ಪ್ರಾಚೀನ ಭಾರತದಲ್ಲಿ ಆಸ್ಥಾನ ಸ್ತ್ರೀಯರ ಸ್ಥಾನಮಾನಗಳ ಬಗ್ಗೆ ಬೌದ್ಧ ಸಾಹಿತ್ಯ ಮತ್ತು ಅರ್ಥಶಾಸ್ತ್ರದಲ್ಲಿ ವಿವರಗಳಿದ್ದರೂ ಈ ಗ್ರಂಥಗಳಲ್ಲಿ ದೇವಾಲಯದೊಡನೆ ಅವರಿಗಿದ್ದ ಸಂಬಂಧವನ್ನು ಕುರಿತ ವಿವರಗಳಿಲ್ಲ. ಮಹಾಭಾರತದಲ್ಲಿ ದೇವವೇಶ್ಯೆಯರು ಅಥವಾ ದೇವಕನ್ನಿಕೆಯರನ್ನು ಕುರಿತು ಹೇಳಿದ್ದರೂ ಅವರು ದೇವಾಲಯಕ್ಕೆ ಸಂಬಂಧಿಸಿದ್ದರೋ ಇಲ್ಲವೇ ಯಾತ್ರಾರ್ಥಿಗಳಿಗಾಗಿ ತೀರ್ಥಕ್ಷೇತ್ರಗಳಲ್ಲಿ ಇರುತ್ತಿದ್ದರೋ ಎಂಬುದು ಅಸ್ಪಷ್ಟ. ಆದರೆ ಹ್ಯೂಯನ್‌ತ್ಸಾಂಗನ ಕಾಲದ ಹೊತ್ತಿಗೆ–ಕ್ರಿ. ಶ. ಏಳನೇ ಶತಮಾನ—ಈ ಪದ್ಧತಿ ಬಲವಾಗಿ ಬೇರೂರಿತ್ತೆಂಬುದಕ್ಕೆ ಮುಲ್ತಾನ ಮುಂತಾದ ಸ್ಥಳಗಳಲ್ಲಿನ ಸೂರ್ಯ ದೇವಾಲಯಗಳಲ್ಲಿ ಚೀಣಾದ ಈ ಯಾತ್ರಿಕ ಹಲವಾರು ನರ್ತಕಿಯರನ್ನು ಭೇಟಿ ಮಾಡಿದ್ದುದೇ ಸಾಕ್ಷಿ[5]).

ಹತ್ತನೇ ಶತಮಾನದಲ್ಲಿ ಆರ್ಯರಿಗೂ ಪೂರ್ವದಲ್ಲಿದ್ದ ಮಾತೃಪೂಜೆ ಅಥವಾ ಶಕ್ತಿ ಇಲ್ಲವೇ ತಂತ್ರ ವಿದ್ಯೆ ಜನಪ್ರಿಯವಾಗಿ, ದೈವೀಕ ಹಿನ್ನೆಲೆಯಿರುವ 'ದೇವದಾಸಿ'

---

5 Thomas P. : *Indian Women Through the Ages*, Asia Publishing House, Bombay, 1964, p. 231

ಪದ್ಧತಿ ದೇವಾಲಯಗಳ ಹಿನ್ನೆಲೆಯಲ್ಲಿ ಬೆಳೆದುಬಂದದ್ದು, ದೇವಮಾತೆಗಾಗಿ ಅವಳ ವಿವಿಧ ಸಾಹಸಗಳನ್ನು ತೋರಿಸುವ ಹೊಸ ದೇವಸ್ಥಾನಗಳು ಹುಟ್ಟಿಕೊಂಡಾಗ. ಬಿರುಸಿನಿಂದ ಜರುಗಿದ ಈ ಧಾರ್ಮಿಕ ಪ್ರಸಾರದ ಸಂದರ್ಭದಲ್ಲಿ ಆದಿಶಕ್ತಿಯ ಸ್ವರೂಪಿ ಯಾದ ಯಲ್ಲಮ್ಮನ ದೇವಾಲಯಗಳು ಉತ್ತರ ಕರ್ನಾಟಕದಾದ್ಯಂತ ಹಾಗೂ ಮಹಾ ರಾಷ್ಟ್ರದ ಸೆರಗಿನಲ್ಲಿದ್ದ ಪ್ರದೇಶಗಳಲ್ಲಿ ತಲೆಯೆತ್ತಿ ಅವುಗಳಲ್ಲೆಲ್ಲ ಮುಖ್ಯವಾಗಿದ್ದ ಸೌಂದತ್ತಿಯಲ್ಲಿನ ದೇವಾಲಯ ಆದಿಶಕ್ತಿಯನ್ನು ಕುರಿತ ಪ್ರಮುಖ ಗ್ರಂಥವಾದ ದೇವಿಭಾಗವತದಲ್ಲಿ ಉಲ್ಲೇಖವಾಗಿರುವ 'ಶಕ್ತಿ ಸ್ಥಾನಗಳಲ್ಲಿ' ಒಂದಾಯಿತು.[6] ದೇವಾ ಲಯಗಳ ಸ್ಥಾಪನೆ ಹೆಚ್ಚುತ್ತ ಹೋದಂತೆ ಧರ್ಮ ಹಾಗೂ ವೇಶ್ಯಾವೃತ್ತಿಯ ಮಧ್ಯೆ ಸಂಪರ್ಕ ಬೆಳೆದು, ದೇವದಾಸಿಯರು ಅಥವಾ ದೇವಾಲಯ ಸ್ತ್ರೀಯರು ಗಣನೀಯ ಸ್ಥಾನವನ್ನಾಕ್ರಮಿಸಿಕೊಂಡರು, ದೇವಾಲಯದಲ್ಲಿ ಪ್ರಚಲಿತವಾಗಿದ್ದ ಪದ್ಧತಿಯನ್ವಯ ಯಲ್ಲಮ್ಮ ದೇವಾಲಯಗಳು ದೇವದಾಸಿಯರನ್ನು ಪೂರ್ಣ ಸಂಖ್ಯೆ ಯಲ್ಲಿ ಹೊಂದಿದವು. ಅನೇಕ ಬಾಲಕಿಯರು ಹಲವಾರು ಕಾರಣಗಳಿಗಾಗಿ ಯಲ್ಲಮ್ಮನಿ ಗಾಗಿ ಮೀಸಲಿಡಲ್ಪಟ್ಟರು. ತಾಂತ್ರಿಕರು ಅನುಸರಿಸಿದ ಪಂಚತಂತ್ರ ಪೂಜಾ ಪದ್ಧತಿ ಯಲ್ಲಿ ತಮ್ಮ ಹೆಂಡತಿಯೊಂದಿಗೇ ಅಥವಾ ಬೇರೆ ಹೆಂಗಸಿನ ಜೊತೆಗೆ 'ಮಿಥುನ' ಅಥವಾ ಲೈಂಗಿಕ ಸಂಪರ್ಕ ಹೊಂದುವುದೂ ಒಂದು ಅನಿವಾರ್ಯ ಧಾರ್ಮಿಕ ವಿಷಯವಾಗಿದ್ದು ಲೈಂಗಿಕ ವಿಷಯದಲ್ಲಿ ಸಡಿಲವಾದ ಈ ಪದ್ಧತಿಯಿಂದಾಗಿಯೂ ಶಕ್ತಿಪೂಜೆಯ ಈ ಕೇಂದ್ರಗಳಲ್ಲಿ ದೇವದಾಸಿಯರ ಸಂಖ್ಯೆ ದ್ವಿಗುಣಗೊಂಡಿತು. ರಾಜಾಶ್ರಯವನ್ನು ಹೊಂದಿದ್ದ ದೇವದಾಸಿಯರು ದೇವಾಲಯದ ಪೂಜಾರಿಗಳ

---

6 'ಯಲ್ಲಮ್ಮ' ಎಂಬ ಪದ ಕನ್ನಡದ 'ಎಲ್ಲರ ಅಮ್ಮ' (Universal Mother) ದಿಂದ ಬಂದದ್ದು. ಈ ದೇವತೆಯನ್ನು ಉತ್ತರ ಕರ್ನಾಟಕದ ಅನೇಕ ಹಿಂದೂ ಕುಟುಂಬಗಳಲ್ಲಿ ಹಾಗೂ ಮಹಾರಾಷ್ಟ್ರದ ಕೆಲವು ಸ್ಥಳಗಳಲ್ಲಿ ಪೂಜಿಸುವುದುಂಟು. ಪುರಾಣದ ಕಥೆಯನ್ವಯ ಕಾರ್ತವೀರ್ಯಾರ್ಜುನನೆಂಬ ಕ್ಷತ್ರಿಯ ಅರಸನ ಕಾಟವನ್ನು ತಡೆಯಲಾರದೆ ದೇವತೆಗಳು ಈಶ್ವರನ ಮೊರೆ ಹೋದಾಗ, ಕ್ಷತ್ರಿಯ ಕುಲವನ್ನೇ ನಾಶಮಾಡುವಂತಹ ಪರಶುರಾಮನ ಜನನಕ್ಕೆ ಕಾರಣವಾಗಲೆಂದು ಈಶ್ವರ ಪಾರ್ವತಿಯ ಅಂಶವಾದ ರೇಣುಕಳನ್ನು ಭೂಮಿಗೆ ಕಳುಹಿಸಿ ಅವಳಿಗೆ ಜಮದಗ್ನಿ ಋಷಿಯೊಡನೆ ವಿವಾಹ ಮಾಡಿಸುತ್ತಾನೆ. ಜಮದಗ್ನಿ ತನ್ನ ಪತ್ನಿಯ ಚಾರಿತ್ರ್ಯದ ಬಗ್ಗೆ ಒಮ್ಮೆ ಅನುಮಾನಿಸಿ ತಮ್ಮ ಮಗ ಪರಶುರಾಮನಿಂದಲೇ ಅವಳ ತಲೆಯನ್ನು ಕಡಿಸುವುದು, ಅನಂತರ ಅವಳು ಮಗನ ಹಿರಿಮೆಯಿಂದಲೇ ಬದುಕಿ ಉಳಿಯು ವುದು—ಇವೆಲ್ಲ ಬೇರೆ ಕಥೆಯಾದರೂ, ತನ್ನ ತಂದೆಯನ್ನು ಕಾಡಿದ ಕಾರ್ತವೀರ್ಯಾರ್ಜುನನ ಕುಲವನ್ನೇ ನಾಶಮಾಡಿದ ಪರಶುರಾಮನಂತಹ ದಿವ್ಯ ಕುವರನನ್ನು ಪಡೆದ ರೇಣುಕೆಯನ್ನು 'ಯಲ್ಲಮ್ಮ' ಎಂಬ ಹೆಸರಿನಲ್ಲಿ ಪೂಜಿಸಲಾಗುತ್ತದೆ. ಈ ಆದಿಶಕ್ತಿ ತಮ್ಮೆಲ್ಲರನ್ನೂ ಕಾಪಾಡುವ ಳೆಂಬ ನಂಬಿಕೆ ಇವರಲ್ಲಿ ಬಲವಾಗಿ ಬೇರೂರಿದ್ದು ಈ ದೇವತೆಗಾಗಿಯೇ ದೇವದಾಸಿಯರನ್ನು ಒಪ್ಪಿಸಲಾಗುತ್ತದೆ—S. D. Punekar and Kamala Rao : *A Study of Prostitutes in Bombay*, Pp. 206–216

ಬೆಂಬಲವನ್ನು ಗಳಿಸಿಕೊಂಡು, ತಮ್ಮ ಗಾಯನ–ನರ್ತನದ ಮೂಲಕ ದೇವತೆಗೆ ಸೇವೆ ಸಲ್ಲಿಸಿದಲ್ಲದೆ ಯಾತ್ರಾರ್ಥಿಗಳ ಅಭೀಷ್ಟೆಯನ್ನೂ ತಣಿಸಿದರು. ದೇವಾಲಯಗಳಲ್ಲಿದ್ದ ಈ ಸುಂದರ ಸ್ತ್ರೀಯರಿಂದಾಗಿ ಸಂದರ್ಶಕರ ಸಮೂಹ ಹೆಚ್ಚುತ್ತಿದ್ದಂತೆ ಈ ನಾರಿಯರಿಂದಾಗಿ ದೇವಾಲಯಕ್ಕೊದಗುವ ಆದಾಯವನ್ನು ಕಂಡು ಬಾಯ್ಚಪ್ಪರಿಸಿದ ದೇವಾಲಯದ ಆಡಳಿತವರ್ಗ ಈ ಪದ್ಧತಿಗೆ ತಮ್ಮ ಹೃತ್ಪೂರ್ವಕ ಆಶೀರ್ವಾದ–ಸಹಕಾರವನ್ನು ನೀಡಲು ಮುನ್ನುಗ್ಗಿ ಬಂದರು.[7]

ಪ್ರತಿವರ್ಷವೂ ಯಲ್ಲಮ್ಮನ ಜಾತ್ರೆ ಅದ್ಭುತವಾಗಿ ಆಟಾಟೋಪದಿಂದ ಜರುಗಿ, ಯಲ್ಲಮ್ಮನೇ ತಮ್ಮ ಜೀವಂತ ಶಕ್ತಿ, ಸ್ಫೂರ್ತಿಯ ಮೂಲವೆಂದು ಪರಿಗಣಿಸಿರುವ ಸಾವಿರಾರು ದೇವದಾಸಿಯರನ್ನು ಒಳಗೊಂಡಂತೆ ಅನೇಕರು ಯಲ್ಲಮ್ಮನ ಮೂಲಸ್ಥಾನವೆಂದು ಕರೆಯಿಸಿಕೊಳ್ಳುವ ಸೌಂದತ್ತಿಯ ಯಲ್ಲಮ್ಮ ದೇವಾಲಯದಲ್ಲಿ ಸೇರುತ್ತಾರೆ. ದೇವರಿಗೆ ಪೂಜೆ ಸಲ್ಲಿಸುವಾಗ ರೇಣುಕಾದೇವಿಯ ಜೀವನದ ಹಲವಾರು ಘಟನೆಗಳನ್ನು ತೋರಿಸುವ ಪ್ರಹಸನಗಳನ್ನು ನಡೆಸಲಾಗುತ್ತದೆ.

ದೇವದಾಸಿಯರು ಆದಿಶಕ್ತಿಯಾದ ಪಾರ್ವತಿಯ ಅಂಶವಾದ ರೇಣುಕ ಅಥವಾ ಯಲ್ಲಮ್ಮನೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವುದು ಅಶ್ಚರ್ಯಕರ ರೀತಿಯಲ್ಲಿ. ಉದಾಹರಣೆಗೆ, ಕಾರ್ತವೀರ್ಯಾರ್ಜುನನಿಂದ ಜಮದಗ್ನಿ ಕೊಲ್ಲಲ್ಪಟ್ಟಾಗ ರೇಣುಕ ವಿಧವೆಯಾದಳು ಎಂದು ತೋರಿಸಲು ದೇವಾಲಯದಲ್ಲಿರುವ ಯಲ್ಲಮ್ಮನ ವಿಗ್ರಹದ ಕೈಯಲ್ಲಿರುವ ಬಳೆಗಳನ್ನು ಒಡೆದು ಹಾಕಿ ಅವಳ ಹಣೆಯ ಕುಂಕುಮವನ್ನು ಅಳಿಸಿದಾಗ, ದೇವದಾಸಿಯರು ತಾವೂ ವಿಧವೆಯರಾದಂತೆ ಎದೆ ಬಡಿದುಕೊಂಡು

---

7 S. D. Punekar and Kamala Rao : ‘*A Study of Prostitutes in Bombay*, p. 204 :
"As courtesans flourished under royal patronage, devadasis found encouragement and support in the vested interests of the priests of the temples, and these gay women, apart from ‘entertaining’ the presiding deities of the temples with their singing, dancing, etc., as part of the temple rituals, catered to the erotic interests of pilgrims, priests and others. In all probabilities, the popularity enjoyed by many of the temples was greatly or partly due to these sensuous women attached to them". (The original is from *History of Prostitution in India* : Sinha, S. N., and Basu, N. K.; The Bengal Social Hygiene Association, Calcutta, 1933, Pp. 132–134)

ಅಳುತ್ತಾರೆ; ತಮ್ಮ ಬಳೆಗಳನ್ನು ಚೆಲ್ಲಿ ಕುಂಕುಮವನ್ನು ಅಳಿಸುತ್ತಾರೆ. ಮತ್ತೆ ಒಂದು ತಿಂಗಳಿನಂತರ ನಡೆಯುವ 'ನಾಟಕ'ದಲ್ಲಿ ಜಮದಗ್ನಿಗೆ ಜೀವ ಬಂದು ಯಲ್ಲಮ್ಮನಿಗೆ ಸೌಭಾಗ್ಯವೊದಗಿದಾಗ ಅವರು ಮತ್ತೆ ಬಳೆ ತೊಟ್ಟು ಕುಂಕುಮ ವನ್ನಿಡುತ್ತಾರೆ. ದೇವದಾಸಿಯರಲ್ಲಿ ಅನೇಕರು ಯಲ್ಲಮ್ಮನಿಗೇ ಏಕೆ ಮೀಸಲಿಡಲ್ಪಟ್ಟಿದ್ದಾರೆಂಬುದಕ್ಕೆ ಸರಳ ಉತ್ತರ, ಅವಳೇ ಈ ಪ್ರದೇಶಗಳ ಪ್ರಮುಖ ದೇವತೆ ಯೆಂಬುದು. (ಸಂದರ್ಶಿಸಲ್ಪಟ್ಟ ನೂರ ಸದಿಮೂರು ದೇವದಾಸಿಯರಲ್ಲಿ 75ರಷ್ಟು ಜನರು ಸೌಂದತ್ತಿಯ ಯಲ್ಲಮ್ಮನ ಭಕ್ತರಾದರೆ,ನಾಲ್ವರು ಜೊಜೂರಿಯ ಕಂಡೋಬಾ, ನಾಲ್ವರು ತುಳಜಾಪುರದ ಭವಾನಿ, ಇಬ್ಬರು ಹನುಮಾನ್, ಒಬ್ಬರು ಧರ್ಮಸ್ಥಳದ ಮಂಜುನಾಥ ಮತ್ತು ಒಬ್ಬಳು ಯಲ್ಲಮ್ಮನ ಸೋದರಿ ಹುಲಿಗೆವ್ವನ ಭಕ್ತರು. ಮಿಕ್ಕ ಇಪ್ಪತ್ತೈದು ಜನರಿಗೆ ಯಾವ ದೇವದೇವತೆಯೂ ಇಲ್ಲ).

ದೇವದಾಸಿಯರೆಲ್ಲರೂ ಹಿಂದೂಗಳು. ಇವರಲ್ಲೂ ಮಹರರು, ಮಾಂಗರು, ಢೇತರು ಎಂಬ ವಿವಿಧ ವರ್ಗಗಳಿದ್ದು ಅವರೆಲ್ಲರನ್ನೂ ಹರಿಜನ ಹಂಗಡದ ಕೆಳಗೆ ತರಬಹುದು. ಅವರಲ್ಲಿ ಶೇಖಡ 77ರಷ್ಟು ಜನರು ಕನ್ನಡ ಮಾತನಾಡುತ್ತಿದ್ದು, ಪ್ರತಿ ದೇವದಾಸಿ ಕಡೇಪಕ್ಷ ಮೂರು ಭಾಷೆಗಳನ್ನಾದರೂ ಬಲ್ಲವಳಾಗಿರುತ್ತಾಳೆ.

ದೇವದಾಸಿಯರ ಸಂಖ್ಯೆ ಬಲವಾಗಿರುವ ಸ್ಥಳಗಳಲ್ಲಿ ದೇವದಾಸಿ ಪದ್ಧತಿಯಿಲ್ಲ ದವರ ಮೇಲೂ ಅವರ ಪ್ರಭಾವ ಬೀರಿರುವುದರಿಂದಲೋ ಏನೋ ಇತ್ತೀಚೆಗೆ ದೇವದಾಸಿಯರೇ ಅಲ್ಲದೆ ಇತರ ಅನೇಕರೂ ಈ ವೃತ್ತಿಗೆ ನಾನಾ ಕಾರಣಗಳಿಂದ ಶರಣು ಹೋಗಿದ್ದಾರೆ. ದೇವದಾಸಿಯರೂ ತಮ್ಮ ಸ್ಥಳದಲ್ಲೇ ಸಾಕಷ್ಟು ವರಮಾನ ದೊರೆಯದಿರುವುದರಿಂದ ಅವರಲ್ಲೂ ಅನೇಕರು ಗಣನೀಯ ಸಂಖ್ಯೆಯಲ್ಲಿ ತಮ್ಮ ಜೀವಿತಕ್ಕಾಗಿ ಮುಂಬಯಿಗೆ ಧಾವಿಸಿದ್ದು, ಪರಸ್ಥಳದಲ್ಲವರು ದೇವದಾಸಿಯರು–ಅಲ್ಲದವರು ಎಂಬ ಸಂಕುಚಿತ ಚೌಕಟ್ಟುಗಳಿಗೊಳಪಡದೆ 'ಸೂಳೆ'ಯರೆಂಬ ಒಂದೇ ಹೆಸರಿನಿಂದ ಕರೆಯಿಸಿಕೊಳ್ಳುತ್ತಾರೆ. [8, 9, 10]

---

8 'ಸೂಳೆ' ಎಂಬ ಪದ ಜನಿತವಾದ ಬಗ್ಗೆ ಯಾವೊಂದು ಸ್ಪಷ್ಟ ವಿವರಣೆಯಿಲ್ಲದಿದ್ದರೂ ಕನ್ನಡ ಶಾಸನಗಳಲ್ಲಿ "ಸಂಬದ ಸೂಳೆಯರು ಅಥವಾ ದೇಗುಲದ ಸೂಳೆ'ಯರಿಗಾಗಿ ಮೀಸಲಿಟ್ಟ ಜಮೀನುಗಳ ಉಲ್ಲೇಖವಿರುವುದರಿಂದ ಸೂಳೆಯೆಂಬ ಪದ ಪ್ರಾಚೀನವಾದದ್ದು. ಇದು ಸಂಸ್ಕೃತ ಪದ 'ಶೂಳ' ಅಂದರೆ ನರ್ತಕಿ ಎಂಬುದರಿಂದಲೂ ಬಂದಿರಬಹುದು. ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಸಂಸ್ಕೃತಪದ 'ವೇಶ್ಯೆ' (ಆಕರ್ಷಿಸಲ್ಪಡುವವಳು) ಪದವನ್ನು ಆಧರಿಸಿ "ಬಸವಿ' ಎಂಬ ಪದ ಜನಿತವಾಗಿದ್ದು ದೇವದಾಸಿಯರನ್ನು ಸೂಚಿಸಲು ಅದನ್ನೂ ಬಳಸ ಲಾಗುತ್ತದೆ.

9 ಕನ್ನಡದ ಕೆಲವು ಶಾಸನಗಳಲ್ಲಿ 'ಸಹಜಯೋಗಿನಿ" ಗಳ ಉಲ್ಲೇಖವಿದ್ದು ಅವರು ದೇವಾಲಯ ಗಳ ಆವರಣದಲ್ಲೇ ಇದ್ದುಕೊಂಡು ಪೂಜೆ-ಧ್ಯಾನದಲ್ಲೇ ಜೀವಿತವನ್ನು ಕಳೆಯುತ್ತಿದ್ದರು ಎನ್ನಲಾಗಿದೆ. ಕರ್ನಾಟಕದಲ್ಲಿ ಈಗಿನ 'ಜೋಗತಿ' ಎಂಬ ಪದ 'ಯೋಗಿನಿ'ಯಿಂದ ಬಂದಿದ್ದು

ಅಂತೂ ಧಾರ್ಮಿಕ ಹಿನ್ನಲೆಯಲ್ಲಿ, ದೈವ ಸಾಕ್ಷಾತ್ಕಾರಕ್ಕೆಂದು ಕರ್ನಾಟಕದಲ್ಲಿ ಪ್ರಾರಂಭವಾದ ಈ 'ದೇಹವನ್ನು ಮಾರಿಕೊಳ್ಳುವ' ಪದ್ಧತಿ, ಇಂದು ಮುಂಬಯಿಯೇ ಏಕೆ ಇತರ ಪ್ರಮುಖ ನಗರಗಳ ಹೋಟೆಲ್ಲುಗಳ ಬದಿಗೇ ಇರುವ ಕಟ್ಟಡಗಳಲ್ಲಿ ಜನರನ್ನಾಕರ್ಷಿಸಲು ಪ್ರಚಲಿತವಾಗಿರುವ 'ತಂತ್ರ'ವಾಗಿ ಪರಿಣಮಿಸಿದೆ. ತಂದೆತಾಯಿಗಳ ಮಧ್ಯೆ ಸಾಮರಸ್ಯವಿಲ್ಲದೆ ಮನೆಯಲ್ಲುಂಟಾದ ಪ್ರಕ್ಷುಬ್ಧ ವಾತಾವರಣದಿಂದ ಬೇಸತ್ತು ಜೀವನೋಪಾಯಕ್ಕಾಗಿ ಈ ಸುಲಭದ ಹಾದಿಯನ್ನು ಹಿಡಿದ ಅನೇಕ ತರುಣಿಯರು, ನೆರೆ ಹೊರೆಯಲ್ಲಿರುವ ದೇವದಾಸಿಗಳ ಬಗ್ಗೆ ಆಕರ್ಷಿತರಾಗಿ ಅವರ ಹಾದಿಯನ್ನೇ ಅನುಸರಿಸಿದ ಅನೇಕ ಹುಡುಗಿಯರು, ಸಂಯುಕ್ತ ಕುಟುಂಬಗಳಲ್ಲಿನ ಸದಸ್ಯರಾಗಿ ಕುಟುಂಬದಲ್ಲೇ ಅನಾದರಿಸಲ್ಪಟ್ಟವರು ಆರ್ಥಿಕ ಬವಣೆಗೆ ಸಿಲುಕಿದವರು, ವೈವಾಹಿಕ ಜೀವನದ ಬಗ್ಗೆ ರಂಗಿನ ಕನಸು ಕಟ್ಟಿ ಸೋತವರು, ತಮ್ಮ ಗಂಡಂದಿರಿಂದ ದೈಹಿಕ ಬಯಕೆಯನ್ನು ಪೂರ್ಣವಾಗಿ ತೀರಿಸಿಕೊಳ್ಳಲಾಗದೆ ಅಥವಾ ಬಾಲವಿಧವೆಯಾಗಿ ಚಪಲರಹಿತ ಜೀವನನ್ನು ನಡೆಸಲು ಅಶಕ್ಯರಾಗಿ ಈ ಹಾದಿಯನ್ನಪ್ಪಿದವರು ಇವರೆಲ್ಲರಿಗೂ ಇಂದು 'ಸೂಳೆಗಾರಿಕೆ'ಯೇ ವೃತ್ತಿ. ತಂದೆತಾಯಿ ವರದಕ್ಷಿಣೆ ನೀಡಿ ತಮಗೆ ವಿವಾಹ ಮಾಡಿಕೊಡಲು ಅಶಕ್ತರಾದಾಗ ಅನೇಕ ತರುಣಿಯರು ಮನೆಯಿಂದ ಓಡಿಹೋಗಿ, ಉದ್ಯೋಗ ಗಳಿಸಿಕೊಡುವೆವೆಂದು ಕಪಟಿಗಳು ಒಡ್ಡಿದ ಮೋಸದ ಜಾಲಕ್ಕೆ ಸಿಲುಕಿ ಬಲಾತ್ಕಾರದಿಂದ ಈ ವೃತ್ತಿಯನ್ನು ಪ್ರವೇಶಿಸಿದವರುಂಟು. 'ತೀರ್ಥ ಪ್ರಸಾದ' ಗಳಿಂದ ಮಾತ್ರ ಸಂದರ್ಶಕರಿಗೆ ತಂಪನ್ನೆರೆಯದೆ

---

ಕ್ರಮೇಣ 'ಸಹಜ ಯೋಗಿನಿ'ಯರು ನಾನಾ ಕಾರಣಗಳಿಂದ ಕಣ್ಮರೆಯಾಗಿ ಯೋಗಿನಿಗಳೇ ಉಳಿದುಕೊಂಡರು. ಅಥವಾ ಕ್ರಮೇಣ ಜೋಗಿತಿಯರ ಪ್ರಭಾವ ಯೋಗಿನಿಯರ ಮೇಲೆ ಬಿದ್ದು ಅವರ ಜೀವನವೂ ಸಡಿಲಗೊಂಡಿದ್ದರಿಂದ ಆ ಪದ್ಧತಿಯೇ ನಶಿಸಿ ಹೋಗಿರಬಹುದು.

10 ಮುಂಬಯಿ ನಗರದಲ್ಲಿರುವ ವೇಶ್ಯೆಯರಲ್ಲಿ ಇನ್ನೂರ ಒಂಬತ್ತು ಜನರು ಕನ್ನಡ ಮಾತನಾಡುತ್ತಿದ್ದು ಇವರ ಪ್ರಭಾವ ಬೇರೆಯವರ ಮೇಲೆ ಎಷ್ಟರಮಟ್ಟಿಗೆ ಬಿದ್ದಿದೆಯೆಂದರೆ ಇವರಿರುವ ಮನೆಗಳ ಸುತ್ತಲಿರುವ ಮಾರವಾಡಿಗಳು, ಜಮೀನುದಾರರು ಹಾಗೂ ರಸ್ತೆ ವ್ಯಾಪಾರಿಗಳು ನಿರರ್ಗಳವಾಗಿ ಕನ್ನಡವನ್ನು ಮಾತನಾಡಬಲ್ಲರು. ಸಂದರ್ಶಿಸಲ್ಪಟ್ಟ ಮುನ್ನೂರೈವತ್ತು ವೇಶ್ಯೆಯರಲ್ಲಿ 32.29ರಷ್ಟು ದೇವದಾಸಿಯರು, ನೂರ ಹದಿಮೂರು ಜನ ದೇವದಾಸಿಯರಲ್ಲಿ 77.88ರಷ್ಟು ಹಾಗೂ ದೇವದಾಸಿಗಳಲ್ಲದವರಲ್ಲಿ 44.73 ಜನರು ಕರ್ನಾಟಕದವರು. ಬಿಜಾಪುರ, ದಕ್ಷಿಣ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳಿಂದ ಈ ವೃತ್ತಿಗಾಗಿ ಮುಂಬಯಿಗೆ ವಲಸೆ ಹೋದವರು ಕ್ರಮವಾಗಿ 67, 44 ಮತ್ತು 39. ದೇವದಾಸಿಯರಲ್ಲದವರಲ್ಲಿ ಅನೇಕರು ದಕ್ಷಿಣ ಕನ್ನಡದವರು, ಅವರಲ್ಲೂ ಅನೇಕರು ಅನಕ್ಷರಸ್ಥರು. ಸಾಧಾರಣ ಇಪ್ಪತ್ತು ವಯಸ್ಸಿಗಿಂತಲೂ ಮುಂಚೆ ಮುಂಬಯಿಗೆ ಪ್ರಯಾಣ ಬೆಳೆಸಿದವರು.

(The Bombay Karnatak Inscription volumes of the Archaeological Survey of India; South Indian Inscriptions, Government of India–*A Study of Prostitutes in Bomby* : S. D. Punekar and Kamala Rao, Pp. 204-205)

ಅವರಿಗಗತ್ಯವಾದ ಇನ್ನಿತರ 'ಸುಖ'ಗಳನ್ನು ನೀಡಬಯಸುವ ಹೋಟೆಲ್ಲುಗಳಲ್ಲಿ 'ಮಧ್ಯವರ್ತಿ'ಗಳ ಜಾಸ್ತಿಯಾಗುತ್ತಿದ್ದಂತೆಯೇ ಈ ವರ್ಗದ ಜನ ನಿರುದ್ಯೋಗದ ಆತಂಕದಿಂದ ಬಹುದೂರ ನಿಂತಿದ್ದಾರೆ. ಕರ್ನಾಟಕದಿಂದ ಹೋಗಿ 'ಬಿಡುವಿಲ್ಲದ ಚಟುವಟಿಕೆ'ಯ ಮುಂಬಯಿಯ ಕಾಮಾಟಿಪುರ ಮತ್ತು ಫಾಕ್‌ಲ್ಯಾಂಡ್ ರಸ್ತೆಗಳಲ್ಲಿರುವ ವೇಶ್ಯಾಗಾರಗಳಲ್ಲಿ ಸಂದರ್ಶಿಸಲ್ಪಟ್ಟವರಲ್ಲಿ ಅನೇಕರು ಅವಕಾಶವಿತ್ತರೂ ಈ ಜೀವನದಿಂದ ಹೊರಬರಲು ನಿರಾಕರಿಸಿದ್ದಾರೆ ಎಂಬುದು ಅವರು ತಮ್ಮ ಈ ವೃತ್ತಿಯನ್ನು ಎಷ್ಟು ಗಂಭೀರವಾಗಿ ತೆಗೆದುಕೊಂಡಿದ್ದಾರೆ, ಮೆಚ್ಚಿಕೊಂಡು ನೆಚ್ಚಿಕೊಂಡಿದ್ದಾರೆ ಎಂಬುದಕ್ಕೆ ಸಾಕ್ಷಿ.

ಉಚಿತವೋ ಅನುಚಿತವೋ, ವಿಷವರ್ತುಲವೊಂದು ನಮ್ಮನ್ನಾವರಿಸಿಕೊಂಡಾಗ, ಅದರ ಬೇಗೆಯನ್ನು ಸಹಿಸಲೂ ಆಗದೆ, ಸಹಿಸಲಶಕ್ಯರೆಂದು ತೋರಿಸಿಕೊಳ್ಳಲೂ ಆಗದೆ, ಸ್ಥಿತಪ್ರಜ್ಞರ ಸೋಗುಹಾಕಿ, ಸಹನಾಶಕ್ತಿಯ ಸೂತ್ರವನ್ನು ಎತ್ತಿ ಹಿಡಿಯುವೆವು ಎಂದು ತೋರಿಸಿಕೊಳ್ಳುವ ನಾವು, ವೇಶ್ಯಾವೃತ್ತಿಯ ನಿವಾರಣೆಯಲ್ಲಿ ಸೋತವರು ಎಂದು ಹೇಳಿಕೊಳ್ಳಲಿಚ್ಛಿಸದೆ, ಅನಿವಾರ್ಯವಾದರೂ, ಮಿಕ್ಕೆಲ್ಲ ಅಂಧಶ್ರದ್ಧೆಗಳಂತೆಯೇ ಇದನ್ನು ತೊಡೆಯುವುದು ಅನ್ಯಾಯ–ಅಸಂಭವ ಎಂಬ ಕೃತಕ ಸಮಾಧಾನದಿಂದ ನಿಶ್ಚಿಂತರಾಗಿದ್ದೇವೆ. ಆದರೆ ಅನೇಕ ಅಂಧಶ್ರದ್ಧೆಗಳಿಗಿಂತ ಅಪಾಯವೆನಿಸಬಹುದಾದ, ಮಾನವೀಯ ಮೌಲ್ಯಗಳಿಗೇ ಕಳಂಕಪ್ರಾಯವಾದ ಈ ಪದ್ಧತಿಯನ್ನು ತಡೆಗಟ್ಟದಿರುವುದು ಅನ್ಯಾಯವಲ್ಲವೇ ? ಸಂಬಂಧಪಟ್ಟವರು ಏನೇ ಸಮಜಾಯಿಷಿ ನೀಡಿದರೂ, ವೇಶ್ಯಾವಾಟಿಕೆಗಳನ್ನು ನಿರ್ಮೂಲಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಸಾರಿ ಹೇಳಿದರೂ, ಅದನ್ನುಳಿಸಲು ಪರೋಕ್ಷವಾಗಿ ಪ್ರಯತ್ನಗಳು ಇನ್ನೂ ನಡೆಯುತ್ತಿವೆ ಎಂಬುದು ಅಲ್ಲಗಳೆಯಲಾಗದಂತಹದ್ದು.[11]

---

11 ಉದಾಹರಣೆ: 'ದೇವದಾಸಿ ಕಾಯಿದೆ' ಈಗ ಹಲವು ಪ್ರದೇಶಗಳಲ್ಲಿ ಜಾರಿಯಲ್ಲಿದೆ. ಈ ಬಗ್ಗೆ ಮೂವತ್ನಾಲ್ಕು ದೇವದಾಸಿಯರನ್ನು ಸಂದರ್ಶಿಸಿದಾಗ ಇಪ್ಪತ್ನಾರು ಜನರಿಗೆ ಅಂತಹ ಕಾಯಿದೆಯ ಬಗ್ಗೆ ತಿಳಿವಳಿಕೆಯಿತ್ತು. ಆರು ಜನರಿಗೆ ಏನೂ ತಿಳಿಯದಿದ್ದು, ಮಿಕ್ಕವರು ಉತ್ತರಿಸಲು ನಿರಾಕರಿಸಿದರು. ಆದರೆ ಅವರಲ್ಲನೇಕರು ಅಂತಹ ಕಾನೂನಿನ ಬಗ್ಗೆ, ಸರ್ಕಾರದ ಪ್ರಯತ್ನದ ಬಗ್ಗೆ ಮೆಚ್ಚಿಗೆ ಸೂಚಿಸಿದರು. ಪ್ರಸ್ತುತ, ತರುಣಿಯರನ್ನು ದೇವದಾಸಿಯರನ್ನಾಗಿ ಪರಿವರ್ತಿಸಲು ಗ್ರಾಮದ ಪಟೇಲನ ಅನುಮತಿಯಿರಬೇಕೆಂದು ಕಾಯಿದೆ ಸೂಚಿಸುತ್ತಿದ್ದು ಕೆಲವೆಡೆ ಪಟೇಲನ ನಿಷ್ಕೃತೆಯಿಂದಾಗಿ ಈ ಪದ್ಧತಿ ಕಡಿಮೆಯಾಗಿದ್ದರೂ, ಅನೇಕ ಪಟೇಲರು ತಮ್ಮ ಸ್ವಾರ್ಥಸಾಧನೆಗಾಗಿ ಕಾಯಿದೆಯನ್ನು ಕಠಿನವಾಗಿ ಅನುಷ್ಠಾನಗೊಳಿಸುವ ಯಾವ ಪ್ರಯತ್ನವನ್ನೂ ನಡೆಸಿಲ್ಲವೆಂಬುದು ಗಮನಿಸಬೇಕಾದಂಥದ್ದು. (A Study of Prostitutes in Bombay, p. 78) ಮುಂಬಯಿಯಲ್ಲಿ ವೇಶ್ಯಾಗೃಹಗಳಿಗೆ ಸರ್ಕಾರವೇ ಲೈಸೆನ್ಸುಗಳನ್ನು ನೀಡಿ, ಅದನ್ನು ಕ್ರಮಬದ್ಧ ಬಿಸಿನೆಸ್ಸೆಂದು ಪರಿಗಣಿಸಿದೆ ಎಂಬುದು, ಈ ಪದ್ಧತಿಯ ನಿರ್ಮೂಲನೆಗಾಗಿ ಹೆಣಗಾಡುತ್ತಿರುವವರು ಯೋಚಿಸಬೇಕಾದಂಥದ್ದು.

ವೇಶ್ಯಾವೃತ್ತಿ ಅವಲಂಬಿಸಿರುವುದು ಇನ್ನಿತರ ಶ್ರದ್ಧೆ–ಸಂಪ್ರದಾಯಗಳಂತೆ ಮಾನವನ ಮೌಢ್ಯತೆಯನ್ನಲ್ಲ; ಬದಲಾಗಿ ಮಾನವನಲ್ಲಿ ಸಂಸ್ಕಾರಕ್ಕನುಗುಣವಾಗಿ ರಕ್ತಗತವಾಗಿರುವ ಇಂದ್ರಿಯ–ಕ್ರಿಯೆಯನ್ನು, ಆದ್ದರಿಂದ ಈ ಪದ್ಧತಿ ನಿರ್ಮೂಲನೆ, ಮಾನವ ತನ್ನ ಉದ್ಧಾರಕ್ಕಾಗಿಯೇ ತನ್ನ ವರ್ತನೆಯನ್ನು ಸರಿಪಡಿಸಿಕೊಂಡು ಮಾನವಂತ ಮಾನವನನ್ನಾಗಿ ತನ್ನನ್ನು ತಾನೇ ಪರಿವರ್ತಿಸಿಕೊಳ್ಳಲು ಪ್ರಯತ್ನಿಸಿದಾಗ ಮಾತ್ರ ಸಾಧ್ಯ. ವೇಶ್ಯೆಯರಿರುವುದರಿಂದಲೇ ತನ್ನ ವರ್ತನೆ ಸಡಿಲಗೊಳ್ಳುವ ಅವಕಾಶವಾಗಿದೆ ಎಂದು ಯಾರಾದರೊಬ್ಬರು ವಾದಿಸಿದರೆ ಅದು ವಿತಂಡ ವಾದ. ಸ್ತ್ರೀ ತನ್ನ ಚಾರಿತ್ರ್ಯ ರಕ್ಷಣೆಗಾಗಿ ಯಾವ ಕಾಳಜಿಯನ್ನೂ ತೆಗೆದುಕೊಳ್ಳದಿದ್ದಾಗ ಸನ್ಮಾರ್ಗದಿಂದ ಸ್ವಲ್ಪ ಸರಿದು ನಿಂತ ಪುರುಷ ಅವಳೆಡೆಗೆ ತಳ್ಳಲ್ಪಟ್ಟು ವೇಶ್ಯೆ ಹಾಗೂ ಅವಳಿಗಾಗಿ ಕಾದು ಕೂತಿರುವವರಿಬ್ಬರಮೇಲೂ ತಪ್ಪನ್ನು ಹೊರಿಸಬೇಕೆಂಬುದನ್ನು ಒಪ್ಪಿಕೊಳ್ಳಬೇಕಾದರೂ, ವೇಶ್ಯೆಯರ ಜೀವನವನ್ನು ಕೂಲಂಕಷವಾಗಿ ಪರಿಶೀಲಿಸಿ ಅವರಲ್ಲನೇಕರು 'ಸಂದರ್ಭದ ಶಿಶುಗಳಾಗಿ' ಅನೇಕ ವೇಳೆ ತಮಗರಿವಿಲ್ಲದಂತೆಯೇ ಅಥವಾ ಜೀವನೋಪಾಯಕ್ಕೆ ಬೇರೆ ದಾರಿಯೇ ಇಲ್ಲದೆ ಇದನ್ನಾಶ್ರಯಿಸಿದ್ದಾರೆ ಎಂಬುದನ್ನು ಯೋಚಿಸಿದಾಗ, ಈ ವಿಷಯದಲ್ಲಿ ಸಮಾಜದ ಹೊಣೆಗಾರಿಕೆಯೇ ಹಿರಿದು ಎಂಬ ನಿರ್ಣಯಕ್ಕೆ ಬಂದೇಬರಬೇಕಾಗುತ್ತದೆ. ಒಂದು ಸಲ ಜೀವನದಲ್ಲಿ ಜಾರಿದ ಸ್ತ್ರೀಯರಿಗೆ ಮತ್ತೊಮ್ಮೆ ಕುಲವತಿಯರಾಗಿ ಬಾಳುವ ಅವಕಾಶವನ್ನು ನೀಡುವಂತಹ ಕ್ಷಮಾಗುಣವನ್ನು ಸಮಾಜ ಎಲ್ಲಿಯವರೆಗೆ ತೋರುವುದಿಲ್ಲವೋ ಅಲ್ಲಿಯವರೆಗೂ ಅವರು ತಾವು ಹಿಡಿದ ವೃತ್ತಿಯನ್ನೇ ಕಚ್ಚಿ ನಿಲ್ಲುತ್ತಾರೆ. ಅದರಲ್ಲೇ ತಮಗೆ ಬೇಕಾದ ಸವಲತ್ತುಗಳನ್ನು ಕಲ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ.[12]

---

12 'ಪ್ರಜಾಮತ', ಕನ್ನಡ ವಾರಪತ್ರಿಕೆ, ಬೆಂಗಳೂರು, ಜುಲೈ 13, 1975 ಪುಟ 6 ರಲ್ಲಿ ಪ್ರಕಟವಾಗಿರುವ ವರದಿಯೊಂದು ಹೀಗಿದೆ : "ಫ್ರಾನ್ಸಿನಲ್ಲಿ ಇತ್ತೀಚೆಗೆ ವಿಚಿತ್ರ ಪ್ರದರ್ಶನವೊಂದು ನಡೆಯಿತು. ಲೈಯೋನ್ಸ್ ಎಂಬಲ್ಲಿ ಸೇಂಟ್ ನಿಜಿಯರ್ ಚರ್ಚ್ ಅನ್ನು ಆ ನಗರದ ವೇಶ್ಯೆಯರು ಎರಡು ವಾರಗಳ ಕಾಲವೇ ಆಕ್ರಮಿಸಿಕೊಂಡು ಆ ಚರ್ಚಿನ ಪಾದ್ರಿಗಳಿಗೂ ಪುರಜನರಿಗೂ ಭಾರಿ ಗೊಂದಲ ಉಂಟುಮಾಡಿದರು. 'ನಮಗೆ ನ್ಯಾಯ ದೊರಕಬೇಕು' ಎನ್ನುವುದೇ ಈ ವೇಶ್ಯೆಯರ ಕೇಳಿಕೆ.

'ನಮ್ಮ ಬೇಡಿಕೆ ಈಡೇರುವವರೆಗೆ ನಾವಿಲ್ಲಿಯೇ ಇರುತ್ತೇವೆ.' ಫ್ರಾನ್ಸಿನ 10.000 ಪೂರ್ಣಾವಧಿ ವೇಶ್ಯೆಯರನ್ನು ಅವರು ಸಮಾಜದ ಒಂದು ಭಾಗದ ಲೈಂಗಿಕ ಆವಶ್ಯಕತೆ ಪೂರೈಸುವ ವೃತ್ತಿಗೆ ಸಂಬಂಧಪಟ್ಟ ಕಾರ್ಮಿಕರೆಂದು ಸರ್ಕಾರ ಅಧಿಕೃತವಾಗಿ ಪರಿಗಣಿಸಬೇಕೆಂದು ಈ ವೇಶ್ಯೆಯರು ಒತ್ತಾಯ ಪಡಿಸುತ್ತಿದ್ದಾರೆ. ಅವರಿಗೆ ವಿಶ್ರಾಂತಿ ವೇತನವೂ, ಸಾಮಾಜಿಕ ಭದ್ರತಾ ಸೌಕರ್ಯಗಳೂ ಅಗತ್ಯವೆಂದು ಅವರು ಒತ್ತಾಯ ಹಾಕಿದ್ದಾರೆ.

"ಈ ವೇಶ್ಯೆಯರ ದಂಗೆ ಫ್ರಾನ್ಸಿನ ಇನ್ನಿತರ ನಗರಗಳಿಗೂ ಹಬ್ಬಿತು. ಪ್ಯಾರಿಸ್ಸಿನಲ್ಲಿ ವೇಶ್ಯೆಯರು ಹಾಗೆಯೇ ಚರ್ಚ್ ಒಂದನ್ನು ಆಕ್ರಮಿಸಿಕೊಂಡು ತಮ್ಮ ಪ್ರತಿಭಟನೆ ಸಲ್ಲಿಸಿದರು. ವೇಶ್ಯೆಯರ ಈ ದಂಗೆ ಹರಡುತ್ತಿರುವಂತೆ ಪೊಲೀಸರಿಗೆ ಪೇಚಿಗಿಟ್ಟುಕೊಂಡು. ಅವರನ್ನೆಲ್ಲ ದಸ್ತಗಿರಿ ಮಾಡಿ, ಸರ್ಕಾರದ ಹತೋಟಿಯಲ್ಲಿರುವ ವೇಶ್ಯಾ ವಸತಿ ಗೃಹಗಳಿಗೆ ರವಾನಿಸಲಾಗಿದೆ. 1947 ರಲ್ಲಿ ಇಂತಹ ಗೃಹಗಳನ್ನು ನಿಷೇಧಿಸಲಾಗಿತ್ತು."

ಈ ವಿಷಯದ ಬಗ್ಗೆ ಇಷ್ಟು ವಿವರವಾಗಿ ಚರ್ಚಿಸಿದನಂತರ ನನ್ನ ಮನಸ್ಸಿನಲ್ಲಿ ಮತ್ತೊಂದು ವಿಚಾರ ಪುಟಿದೇಳುತ್ತಿದೆ. ತಾವು ವೇಶ್ಯೆಯರೆಂಬುದನ್ನು ಯಾವ ರೀತಿಯಲ್ಲಿಯೂ ಮರೆಮಾಚದೆ ರಾಜಾರೋಷವಾಗಿ ತಮ್ಮ ವೃತ್ತಿಯನ್ನು ನಡೆಸುವ ಈ ಹೆಣ್ಣುಗಳಿಗೆ ಮಾತ್ರವಲ್ಲದೆ, ವಿವಾಹವಾಗಿ ಮಕ್ಕಳಿದ್ದಾಗ್ಯೂ ಪರ ಪುರುಷ ರೊಡನೆ ಕೂಡಿ ಓಡಿಯಾಡುವ, ಆಧುನಿಕತೆಯ ಸೋಗಿನಲ್ಲಿ ಸ್ವಚ್ಛಂದವಾಗಿ ಗಂಡಸ ರೊಡನೆ ವಿಹರಿಸುವ, ಹಾಗೂ ತಮ್ಮ ಸ್ವಾರ್ಥ ಸಾಧನೆಗಾಗಿ, ತಮ್ಮ ಗಂಡಂದಿರನ್ನು ಯಶಸ್ಸಿನ ಮೆಟ್ಟಿಲನ್ನೇರಿಸುವ ಸಂಭ್ರಮದಲ್ಲಿ ಅಧಿಕಾರವಂತರನ್ನು ಸಂಪ್ರೀತ ಗೊಳಿಸಲು ಕಿಂಚಿತ್ತೂ ಹಿಂಜರಿಯದ 'ಆಧುನಿಕ ಲಲನಾಮಣಿ'ಗಳಿಗೂ "ಸೂಳೆ"ಯ ರೆಂಬ ಹಣೆಪಟ್ಟಿ ಹಚ್ಚಬಾರದೇಕೆ? ಎಂದು. ಒಂದೇ ವೃತ್ತಿಯನ್ನು ನಡೆಸುವ ಇಬ್ಬರು ವ್ಯಕ್ತಿಗಳ ವೇತನದಲ್ಲಿ ಅಥವಾ ಅವರಿಗೆ ದೊರೆಯುವ ಆದರ – ಪುರಸ್ಕಾರ ಗಳಲ್ಲಿ ತಾರತಮ್ಯವಿರುವುದನ್ನು ಕಂಡಾಗ ನನ್ನ ಮನಸ್ಸು ಎಷ್ಟು ರೋಸಿಹೋಗು ತ್ತದೋ, ಅಷ್ಟೇ ಅದು ಗಾಸಿಗೊಳ್ಳುತ್ತದೆ, ಮನಸ್ಸಿನ ದುರ್ಬಲತೆಯಿಂದಾಗಿ ಒಂದೇ ರೀತಿಯ ಚಪಲಕ್ಕೊಳಗಾಗಿಯೂ, ಸಮಾಜದ ಶ್ರೀಮಂತ ಅಂತಸ್ಥಿನ ಸ್ತ್ರೀಯರು ಸಂರಕ್ಷಿಸಲ್ಪಟ್ಟು ದೀನ ವರ್ಗಗಳು ಹೀನಾಯಕ್ಕೊಳಗಾದಾಗ.

ಇದಕ್ಕೆಲ್ಲ ಅಂತ್ಯವೆಂದು? "ಅಂತರ ರಾಷ್ಟ್ರೀಯ ಮಹಿಳಾ ವರ್ಷ"ದಲ್ಲಿ ಮಹಿಳೆಯರನ್ನು ಕುರಿತು ದೊಡ್ಡ ದೊಡ್ಡ ಮಾತುಗಳನ್ನಾಡಬೇಕು ನಿಜ; ಯಾವುದೇ ಸಂದರ್ಭಕ್ಕೆ ಸಂಬಂಧಿಸಿದಂತೆ ಭಾಷಣ ಬಿಗಿದು ಬೀಗುವುದು, ಅದು ಮುಗಿದೊಡನೆ ಅದಕ್ಕೆ ಸಂಬಂಧಿಸಿದ್ದೆಲ್ಲವನ್ನೂ ಮೂಟೆ ಕಟ್ಟಿ ಒಗೆಯುವುದು ನಮ್ಮ 'ಪದ್ಧತಿ'. ಈ ಪದ್ಧತಿಯನ್ನು ಮುರಿದು, ಸಮಾಜದ ಸೇವೆಗೆಂದೇ ನಾವು ಕಂಕಣಬದ್ಧರಾಗಿದ್ದೇವೆ ಎಂದು ಹೇಳಿಕೊಳ್ಳುವ ಸುಧಾರಕರು, ಸಮಾಜದ ಶೋಷಿತ ವರ್ಗಗಳ ಬಗ್ಗೆ ಕಳ ಕಳಿಯನ್ನು ವ್ಯಕ್ತಪಡಿಸುವ ಸರ್ಕಾರಗಳು, 'ಎಲ್ಲಿ ಸ್ತ್ರೀಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ವಾಸಿಸುತ್ತಾರೆ' ಎಂದು ನಂಬಿರುವ ಪುರುಷರು ಇವರೆಲ್ಲ ಒಟ್ಟು ಗೂಡಿ ಈ ವೃತ್ತಿಗಳಿಂದ ತರುಣಿಯರನ್ನು ಅವರನ್ನು ಸುತ್ತುವರಿದಿರುವ "ಸಿಕ್ಕು" ಗಳಿಂದ ಬಿಡಿಸಿ, ಅವರನ್ನು ಉದ್ಧರಿಸುವ ಕಾರ್ಯವನ್ನು ಈ "ಅಂತರಾಷ್ಟ್ರೀಯ ಮಹಿಳಾ ವರ್ಷದಿಂದಲೇ ಪ್ರಾರಂಭಿಸಿ ಮುಂಬರುವ ವರ್ಷಗಳಲ್ಲಿ ಅದನ್ನು ಮುಂದು ವರಿಸಬಾರದೇಕೆ?

**ಆಕರ ಸಾಹಿತ್ಯ**

1 S. D. Punekar and Kamala Rao : *A Study of Prostitutes in Bombay*, Lalvani Publishing House.

2 S. N. Sinha and N. K. Basu : *History of Prostitution in India,* The Bengal Social Hygiene Association, Calcutta, 1933.

3 P. Thomas : *Indian Women Through the Ages,* Asia Publishing House, Bombay, 1964

4 ಉದಯವಾಣಿ ಮ್ಯಾಗಜಿನ್ ವಿಭಾಗ, ರವಿವಾರ 13-7-75.

5 ಪ್ರಜಾಮತ ಜುಲೈ 13, 1975.

(ಲೇಖನದ ಮೊದಲ ಪ್ಯಾರಾದಲ್ಲಿನ ವಾಕ್ಯದ ಮೂಲಕ ಈ ಲೇಖನವನ್ನು ಬರೆಯಲು ಪರೋಕ್ಷವಾಗಿ ಪ್ರಚೋದಿಸಿದ ಸ್ನೇಹಿತರಿಗೂ ನಾನು ಆಭಾರಿ).

# ಹಾವು

ಎನ್. ವಿ. ಭಾಗ್ಯಲಕ್ಷ್ಮಿ

ಮನೆಯ ಕಿಂಡಿಯಲ್ಲಿ ಹಾವು ಭುಸ್ಸೆಂದು
ಒಳನುಗ್ಗಿ
ತಲೆಚಾಚಿ ಮಲಗಿತು
ಹೆದರಿಕೊಂಡರೂ ಕೂಡ
ನೋಡೋಣ ಅಂತ ದೂರವೇ ನಿಂತು
ತಲೆಮೇಲೆ ಕಲ್ಲನ್ನಿಟ್ಟೆ
ವಿಲವಿಲನೆ ಒದ್ದಾಡಿ
ಸರಪರನೆ ಪೊರಳಾಡಿ
ಒಂದಷ್ಟು ವಿಷ ಒಸರಿ
ಸುಮ್ಮನಾಯಿತು
ನೋಡೋಣ ಅಂತ ದೂರವೇ ನಿಂತು
ಕಲ್ಲೆತ್ತಿದೆ
ಸತ್ತು ಹೋಗಿತ್ತು
ಪಾಪ ಅಂತ ಕೋಲಲ್ಲೆತ್ತಿ
ಹಿತ್ತಲಿಗೊಯ್ದು
ಬಾಯೊಳಗೆ ರೈಲಿನಡಿಯಿಟ್ಟಿದ್ದ ನಯವಾದ ಪೈಸೆ ಹಾಕಿ
ಸುಟ್ಟು ಕೈ
ತೊಳೆದು
ಒಳ ಬಂದೆ.

# ಭಗವತಿ ದುರ್ಗಾ (ದುರ್ಗಾ ಸಪ್ತಶತೀ)

**ಎನ್. ವಿ. ವಿಮಲ**

ದುರ್ಗೇ ಸ್ಮೃತಾ ಹರಸಿ ಭೀತಿ ಮಶೇಷ ಜಂತೋಃ
ಸ್ವಸ್ಥೈಃ ಸ್ಮೃತಾ ಮತಿಮತೀವ ಶುಭಾಂ ದದಾಸಿ |
ದಾರಿದ್ರ್ಯದುಃಖ ಭಯ ಹಾರಿಣಿ ಕಾ ತ್ವದನ್ಯಾ
ಸರ್ವೋಪಕಾರ ಕರಣಾಯಸದಾಽಽರ್ದ್ರ ಚಿತ್ತಾ ॥

(ದುರ್ಗಾ ಸಪ್ತಶತೀ–4-17)

[ಹೇ ದುರ್ಗೇ, ನಿನ್ನನ್ನು ಸ್ಮರಿಸಿದರೆ ಎಲ್ಲ ಜೀವಿಗಳ ಭಯವನ್ನೂ ಹೋಗಲಾಡಿಸುತ್ತೀಯೆ. ಸುಖವಾಗಿರುವವರಿಂದ ಸ್ಮರಿಸಲ್ಪಟ್ಟಾಗ (ಅವರಿಗೆ) ಅತ್ಯಂತ ಶುಭ ಬುದ್ಧಿಯನ್ನು ಕೊಡುತ್ತೀಯೆ. ದಾರಿದ್ರ್ಯ-ದುಃಖ-ಭಯಗಳನ್ನು ಹೋಗಲಾಡಿಸುವವಳೇ, ನೀನಲ್ಲದೆ ಮತ್ತಾರು ಸರ್ವಪ್ರಾಣಿಗಳ ಉಪಕಾರಕ್ಕೋಸ್ಕರ ಯಾವಾಗಲೂ ದಯಾಪೂರಿತ ಚಿತ್ತರಾಗಿರುತ್ತಾರೆ ?]

ದುಷ್ಟ ಶಿಕ್ಷಣ, ಶಿಷ್ಟ ರಕ್ಷಣೆಯ ಕಾರ್ಯದಲ್ಲಿ ಪುರುಷ ದೇವತೆಗಳಿಗಿರುವ ಸ್ಥಾನವೇ ಸ್ತ್ರೀ ದೇವತೆಗಳಿಗೂ ಇರುವುದೆಂಬ ಅಂಶವು ದೇವೀ ಮಹಾತ್ಮೆಯ ಮೂಲಕ ಖಚಿತವಾಗುತ್ತದೆ. ಏಕೆಂದರೆ, ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಅರ್ಜುನನಿಗೆ ಧರ್ಮಗ್ಲಾನಿಯಾದಾಗಲೆಲ್ಲಾ ನಾನು ಅವತರಿಸಿ ಧರ್ಮಸಂಸ್ಥಾಪನೆ ಮಾಡುತ್ತೇನೆ ಎಂದು ಆಶ್ವಾಸನೆ ಕೊಟ್ಟಹಾಗೆ, ದುರ್ಗಾಮಾತೆಯೂ ಮತ್ತೆ ಮತ್ತೆ ಅವತರಿಸಿ ಜಗತ್ತಿನ ಪಾಲನೆ ಮಾಡುತ್ತೇನೆ ಎಂದು ತನ್ನ ಭಕ್ತರಿಗೆ ಆಶ್ವಾಸನೆ ನೀಡುತ್ತಾಳೆ[1] !

ದೇವಿಯು ತನ್ನ ಭಕ್ತರಿಗೆ ನೀಡಿದ ಈ ಆಶ್ವಾಸನೆಯಿಂದ ಪುರಾಣಯುಗದಲ್ಲಿ ಸ್ತ್ರೀ ದೇವತೆಗಳಿಗಿದ್ದ ಸ್ಥಾನ-ಮಾನಗಳ ಅರಿವಾಗುತ್ತದೆ. ಸ್ತ್ರೀ ದೇವತೆಗಳು ಆರ್ತರನ್ನು ರಕ್ಷಿಸುವ ಹೊಣೆಯನ್ನು ಸ್ವತಂತ್ರರಾಗಿ ಹೊರುತ್ತಿದ್ದರೆಂಬುದು ಇದರಿಂದ ವೇದ್ಯವಾಗುತ್ತದೆ. ದುರ್ಗಾ ಸಪ್ತಶತಿಯು ದೇವಿಯ ಮಹಾತ್ಮ್ಯೆಯನ್ನೂ ಅವಳ ಸ್ಥಾನ–ಮಾನವನ್ನೂ, ಶಕ್ತಿ–ಸಾಮರ್ಥ್ಯಗಳನ್ನೂ, ಮತ್ತು ಅವಳ ಸಂಪೂರ್ಣ ಸ್ವರೂಪವನ್ನೂ–ವರ್ಣಿಸುವ ಒಂದು ವಿಶಿಷ್ಟ ಕೃತಿಯಾಗಿದೆ.

---

1 ಇತ್ಥಂ ಯದಾ ಬಾಧಾ ದಾನವೋತ್ಥಾ ಭವಿಷ್ಯತಿ ।
ತದಾ ತದಾಽವತೀರ್ಯಾಹಂ ಕರಿಷ್ಯಾಮ್ಯರಿಸಂಕ್ಷಯಮ್ ॥

[ದುರ್ಗಾ ಸ. 11–55]



ಮಹಿಷಾಸುರ ಮರ್ಧಿನಿ. ಕಲ್ಯಾಣ ಚಾಲುಕ್ಯರ ಕಾಲದ ವಿಗ್ರಹ
ಬಂದಳಿಕೆ. ಶಿವಮೊಗ್ಗ ಜಿಲ್ಲೆ



ನೊಳಂಬ ಪಲ್ಲವ ಶೈಲಿಯ ಹತ್ತನೇ ಶತಮಾನದ ದುರ್ಗಾದೇವಿಯ ವಿಗ್ರಹ
(ಸಂತೇಕಲ್ಲ ಹಳ್ಳಿ, ಕೋಲಾರ ಜಿಲ್ಲೆ)

ದೇವಿಯ ಉಪಾಸನೆಯು ಋಗ್ವೇದದಷ್ಟು ಪ್ರಾಚೀನತಮವಾಗಿದೆ. ಋಗ್ವೇದದ ಹತ್ತನೆಯ ಮಂಡಲದಲ್ಲಿ ಬರುವ (ಋಗ್ವೇದ 10–125.1) ದೇವೀಸೂಕ್ತ ರಾತ್ರಿ ಸೂಕ್ತಗಳು ದುರ್ಗಾಮಾತೆಯ ಪರವಾಗಿವೆ.

ವೇದಗಳು ಸ್ತ್ರೀ ದೇವತೆಯ ಶಕ್ತಿ ಸಾಮರ್ಥ್ಯಗಳಿಗೆ ಹೆಚ್ಚಿನ ಪ್ರಾಮುಖ್ಯ ನೀಡಿಲ್ಲವೆಂಬುದು ಸರ್ವವಿದಿತ. ಪುರಾಣಗಳು ಮತ್ತು ಅನಂತರದ ಧಾರ್ಮಿಕ ಸಾಹಿತ್ಯಗಳಲ್ಲಿ ಕ್ರಮೇಣ ದೇವಿಯ ಮಹತ್ತನ್ನು ವರ್ಣಿಸಿರುವುದನ್ನು ಅವಳ ಸಾಮರ್ಥ್ಯವನ್ನು ಗಮನಿಸಿರುವುದನ್ನು ಕಾಣಬಹುದು. ಅಂತಹ ಕೃತಿಗಳಲ್ಲಿ ವಿಶಿಷ್ಟ ವಾದ 'ದುರ್ಗಾ ಸಪ್ತಶತಿ'ಯು ಹದಿಮೂರು ಅಧ್ಯಾಯಗಳಲ್ಲಿ ದುರ್ಗಾ ದೇವಿಯ ಬಗೆಗೆ ವಿಸ್ತಾರವಾದ ವಿವರಗಳನ್ನು ನೀಡುತ್ತದೆ.

ಶಾಕ್ತ ಶಾಸ್ತ್ರದಲ್ಲಿ ದೇವೀ ಮಹಾತ್ಮ್ಯೆಗೆ ಅತ್ಯಂತ ಶ್ರೇಷ್ಠ ಸ್ಥಾನವಿದೆ. ತಾಂತ್ರಿಕ ಪದ್ಧತಿಯ ಮೂಲಕ ಹಿಂದೂ ಧಾರ್ಮಿಕ ವಿಧಿಯಲ್ಲಿ ಸ್ತ್ರೀ ದೇವತೆಗಳು ಉನ್ನತ ಸ್ಥಾನವನ್ನು ಗಳಿಸಿಕೊಂಡರು. ಶಕ್ತಿಪೂಜೆಯು ಶಾಕ್ತೇಯರಿಗೆ ಪರಮ ಪೂಜ್ಯವಾಗಿದೆ. ದೇವೀ ಮಹಾತ್ಮೆ, 'ದುರ್ಗಾ ಸಪ್ತಶತಿ'-ಇವು ಶಾಕ್ತೇಯರಿಗೆ ಗೀತೆಯಂತೆಯೇ ಪವಿತ್ರವಾಗಿವೆ. ಬಂಗಾಳ ದೇಶದಲ್ಲಿ ಇದು 'ಶ್ರೀ ಶ್ರೀಚಂಡಿ' ಎಂದು ಪ್ರಖ್ಯಾತಿ ಹೊಂದಿದೆ. ಶಿವನ ಅರ್ಧಾಂಗಿ ಪಾರ್ವತಿಯನ್ನು 'ಶಕ್ತಿ' ಎಂದು ಪೂಜಿಸುತ್ತಾರೆ.

ದುರ್ಗಾಮಾತೆಯು ಮಹಿಷಾಸುರನನ್ನು ಸಂಹಾರ ಮಾಡಿದ ಪ್ರಕರಣವನ್ನು ಅನೇಕ ಪುರಾಣಗಳು ವರ್ಣಿಸುತ್ತವೆ. ಉದಾ : ವರಾಹ ಪುರಾಣವು ಒಂದು ಅಧ್ಯಾಯದಲ್ಲಿ (ಅಧ್ಯಾ. 95) ವರ್ಣಿಸುತ್ತದೆ. (ಮಹಿಷಾಸುರ ವಧೆ) ಆದರೆ ಮಾರ್ಕಂಡೇಯ ಪುರಾಣವು ಹದಿಮೂರು ಅಧ್ಯಾಯಗಳಲ್ಲಿ (ಅಧ್ಯಾ. 81–94) ಭಗವತಿ ದುರ್ಗಾ ದೇವಿಯ ಬಗೆಗೆ ಸಮಸ್ತ ವಿವರಗಳನ್ನೂ ನೀಡುತ್ತದೆ. 'ದುರ್ಗಾ' ಎಂಬುದು ಆದಿ ಮಾತೆ ಶಿವನ ಅರ್ಧಾಂಗಿ ಪಾರ್ವತಿಯ ಮತ್ತೊಂದು ಹೆಸರು. ಇವಳನ್ನು ಅನೇಕ ಹೆಸರುಗಳಿಂದ ಕರೆಯುತ್ತಾರೆ. (ಉಮಾ-ಚಂಡಿಕಾ ಇತ್ಯಾದಿ) ಇವಳಿಗಿರುವ ಪ್ರತಿಯೊಂದು ಹೆಸರೂ ಪಾರ್ವತಿಯ ನಾನಾ ಸ್ವರೂಪವನ್ನೂ, ಅವಳ ಸ್ಥಾನ ಮಾನವನ್ನೂ, ಸೂಚಿಸುತ್ತದೆ. ಒಟ್ಟಿನಲ್ಲಿ ಅವಳು ಶ್ರೇಷ್ಠ ಗುಣಗಳನ್ನು ಪಡೆದವಳಾದ್ದರಿಂದ ಮಹಿಮಾನ್ವಿತಳಾಗಿದ್ದಾಳೆ.

ಶಿವನ ಅರ್ಧಾಂಗಿಯ ಹೆಸರು ದುರ್ಗಾ ಎಂಬುದು ಹೆಚ್ಚು ಬಳಕೆಯಲ್ಲಿದೆ ಎಂದು ಪ್ರೊ॥ ಜಾಕೊಬಿ ಅವರು ತಿಳಿಸುತ್ತಾರೆ.[2] ಆದರೆ ಪುರಾಣಗಳಲ್ಲಿ 'ಪಾರ್ವತಿ' ಎಂಬ ಹೆಸರು ಹೆಚ್ಚು ಪ್ರಯೋಗವಾಗಿದೆ. ಪಾರ್ವತಿಯ ರೌದ್ರರೂಪ ದುರ್ಗಿ

2 Encyclopaedia of Religion and Ethics, vol. V, p. 117

ಎಂಬುದು ಸರ್ವ ಸಮ್ಮತವಾಗಿದೆ. ದಾನವರನ್ನು ಸಂಹರಿಸಲು ಪಾರ್ವತಿಯು ರೌದ್ರಾವತಾರ ತಾಳಿದಾಗ 'ದುರ್ಗಾ' ಎಂಬ ಹೆಸರು ಅವಳಿಗೆ ಸಾರ್ಥಕ ನಾಮವಾಯಿತು. ಇದಕ್ಕೆ ಪ್ರತಿಯಾಗಿ ಪಾರ್ವತಿಯ ಅತ್ಯಂತ ಸೌಮ್ಯ ರೂಪ ಅಥವಾ ಶಾಂತ ರೂಪ 'ಲಲಿತ' ಎಂದಾಯಿತು.[3] ಲಲಿತಾ ಸಹಸ್ರನಾಮ, ತ್ರಿಶತಿ, ಲಲಿತಾ ಅಷ್ಟೋತ್ತರಗಳಲ್ಲಿ ಈ ಹೆಸರು ವಿರಾಜಮಾನವಾಗಿದೆ. ಹಿಂದೂ ಧಾರ್ಮಿಕ ಸಂಪ್ರದಾಯಗಳಲ್ಲಿ ಭಗವತಿ ಲಲಿತಳು 'ಪರಮೇಶ್ವರಿ' ಎಂದೂ 'ದುರ್ಗಾ' ಎಂಬುದು 'ದುರ್ಗಾದೇವಿ' ಎಂದೂ ಪರಿಗಣಿತವಾಗಿದೆ. ಆಯಾ ಕಾಲದಲ್ಲಿ ದೇವಿಯು ಮಾಡಿದ ಕೆಲಸ ಕಾರ್ಯಗಳಿಗೆ, ಅವಳ ಸ್ವರೂಪ, ಸ್ವಭಾವಕ್ಕನುಗುಣವಾಗಿ ಈ ಹೆಸರುಗಳು ಸೂಚಿತವಾಗುತ್ತವೆ. ಭಗವತಿ ಲಲಿತಳು ಶಕ್ತಿಯ ಆದಿ ಮಾತೆಯಾಗಿ, ಜಗತ್ತಿನ ಚಾಲಕ ಶಕ್ತಿಯಾಗಿದ್ದಾಳೆ. ಇವಳು ಆದಿ ಪರಾಶಕ್ತಿಯಾಗಿದ್ದಾಳೆ.

ದುರ್ಗಾ ಸಪ್ತಶತಿಯಲ್ಲಿ ವ್ಯಕ್ತವಾಗಿರುವ ದೇವಿಯ ಮಹಾತ್ಮ್ಯೆ, ಕಾರ್ಯ, ಸಿದ್ಧಿ, ಸಾಧನೆ, ವ್ಯಕ್ತಿತ್ವ, ಹಾಗೂ ಅವಳ ಶಕ್ತಿ ಸಾಮರ್ಥ್ಯಗಳನ್ನು ಮತ್ತು ದುರ್ಗಾ ಪೂಜೆಯ ಉಗಮ ಹಾಗೂ ವಿಕಾಸ-ಇವನ್ನು ಕುರಿತು ವಿವೇಚಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ. ದುರ್ಗಾದೇವಿಯನ್ನು ಕುರಿತು ರಚಿತವಾಗಿರುವ ದುರ್ಗಾ ಸಪ್ತಶತಿಯ ಕಡೆಗೆ ವಿದ್ವಾಂಸರು ಗಮನ ಹರಿಸಿರುವುದು ಕಡಿಮೆ. ದುರ್ಗಾ ಸಪ್ತಶತಿಯು ಭಾರತೀಯ ಭಾಷೆಗಳಿಗೆ ಮತ್ತು ಇತರ ಯುರೋಪಿಯನ್ ಭಾಷೆಗಳಿಗೆ ಅನುವಾದಗೊಂಡಿವೆ. ದುರ್ಗಾದೇವಿಯ ಬಗೆಗೆ ಲೇಖನಗಳು ಕೃತಿಗಳು ಅಲ್ಲಲ್ಲಿ ದೊರೆಯುತ್ತವೆ.[4] ಮತ್ತು ದುರ್ಗಾಪೂಜೆಯ ಉಗಮ, ಸ್ವರೂಪಗಳ ಬಗೆಗೂ ಕೆಲವು ವಿದ್ವಾಂಸರು ಬೆಳಕು ಚೆಲ್ಲಿದ್ದಾರೆ.

ದುರ್ಗಾ ಸಪ್ತಶತಿಯು 'ದುರ್ಗಾಮಾತೆ'ಯ ಸ್ತುತಿರೂಪವಾದ ಸ್ತೋತ್ರ ಮಾಲೆ. ದೇವತೆಗಳ ಸುಖ, ಸಂತೋಷ, ಮನಶ್ಶಾಂತಿಯನ್ನು ಕೆಡಿಸಲು ಕಾರಣರಾದ ದುಷ್ಟ ರಾಕ್ಷಸರೊಡನೆ ದುರ್ಗಿಯು ಯುದ್ಧ ಮಾಡಿದಾಗ ತೋರಿದ ವೀರ್ಯ, ತೇಜಸ್ಸು, ಶಕ್ತಿ ಸಾಮರ್ಥ್ಯಗಳನ್ನು ದುರ್ಗಾ ಸಪ್ತಶತಿಯು ವರ್ಣಿಸುತ್ತದೆ. ಕಾವ್ಯಾತ್ಮಕ ಗುಣಗಳಿಂದ ಕೂಡಿದ ಈ ಸ್ತೋತ್ರಮಾಲೆಯ ಅಭಿವ್ಯಕ್ತಿಯು ಸೊಗಸಾಗಿದೆ.

ಹೆಸರೇ ಸೂಚಿಸುವಂತೆ ಈ ಸ್ತೋತ್ರಮಾಲೆಯಲ್ಲಿ ಏಳುನೂರು ಶ್ಲೋಕಗಳಿವೆ. ಇದರಲ್ಲಿ ಒಟ್ಟು ಹದಿಮೂರು ಅಧ್ಯಾಯಗಳಿವೆ. 'ದೇವೀ ಉವಾಚ, ಋಷಿರುವಾಚ, ರಾಜೋವಾಚ'—ಮೊದಲಾದುವುಗಳನ್ನೂ ಕೂಡ ಪೂರ್ಣ ಶ್ಲೋಕವೆಂದು ಪರಿಗಣಿಸಲಾಗಿದೆ. ಪೂರ್ಣ ಶ್ಲೋಕದ ಲೆಕ್ಕ ಮಾಡುವಾಗ ಇಂತಹವು

---

3 Dixitar : Lalita Cult – Madras - 1942

4 History of Dharmasastra : P. V. Kane - Pt. 1. vol. V, p. 155

ಗಳನ್ನು ಬಿಟ್ಟರೆ ದುರ್ಗಾ ಸಪ್ತಶತಿಯಲ್ಲಿ ಆರು ನೂರಕ್ಕಿಂತ ಕಡಿಮೆ ಪೂರ್ಣ ಶ್ಲೋಕಗಳು ಸಿಗುತ್ತವೆ.

ದುರ್ಗಾ ಸಪ್ತಶತಿಯ ಒಂದು, ಎರಡು ಮತ್ತು ಐದನೆಯ ಅಧ್ಯಾಯಗಳಲ್ಲಿ ಹೆಚ್ಚು ಸಂಖ್ಯೆಯ ಶ್ಲೋಕಗಳಿವೆ. ಇವುಗಳಲ್ಲಿ ಕ್ರಮವಾಗಿ 104, 69, 129-ಶ್ಲೋಕಗಳಿವೆ. ಈ ಮೂರು ಅಧ್ಯಾಯಗಳಲ್ಲಿ ದೇವಿಯ ಮೂರು ಚರಿತ್ರೆಗಳಿವೆ. ಇವು ದೇವಿಯ ಅಸಾಧಾರಣವಾದ ಮಹಾತ್ಮ್ಯವನ್ನು ಪ್ರಕಾಶಪಡಿಸುತ್ತವೆ. ದೇವಿಯ 'ಮಹಾಕಾಳಿ'ಯ ಸ್ವರೂಪ ಮತ್ತು ಅದಕ್ಕೆ ಸಂಬಂಧಿಸಿದ ವಿವರವು ಮೊದಲನೆಯ ಭಾಗದಲ್ಲಿಯೂ, 'ಮಹಾಲಕ್ಷ್ಮಿ'ಗೆ ಸಂಬಂಧಿಸಿದ ವಿವರವು ಎರಡನೆಯ ಭಾಗದಲ್ಲಿಯೂ ಮತ್ತು 'ಮಹಾಸರಸ್ವತಿ'ಗೆ ಸಂಬಂಧಿಸಿದ ವಿವರವು ಮೂರನೆಯ ಭಾಗದಲ್ಲಿಯೂ ವರ್ಣಿತವಾಗಿವೆ. ದೇವಿಯ ಈ ಮೂರು ರೂಪಗಳನ್ನೂ ಕ್ರಮವಾಗಿ ದುರ್ಗಾ ಸಪ್ತಶತಿಯು ವಿವರಿಸುತ್ತದೆ. ಉಳಿದ ಅಧ್ಯಾಯಗಳು ಚಿಕ್ಕದಾಗಿವೆ. ಹದಿಮೂರನೆಯ ಅಧ್ಯಾಯವು ಅತಿ ಚಿಕ್ಕದು. ಐದನೆಯ ಅಧ್ಯಾಯವು ಅತಿ ದೊಡ್ಡದು. ದುರ್ಗಿಯ ಮಹಾ ಸರಸ್ವತಿಯ ಸ್ವರೂಪವನ್ನು ಚಿತ್ರಿಸುವ ಶ್ಲೋಕಗಳ ಸಂಖ್ಯೆ ಅಧಿಕವಾಗಿದೆ. ದುರ್ಗಾ ಸಪ್ತಶತಿಯ ಕೊನೆಯ ಅಧ್ಯಾಯವು ಫಲಶ್ರುತಿ. ಹಾಗೂ ದುರ್ಗಾಪೂಜೆಯನ್ನು ಮಾಡುವ ವಿಧಾನವನ್ನು ತಿಳಿಸುತ್ತದೆ. ಇದರಿಂದ ದುರ್ಗಾ ಸಪ್ತಶತಿಯಲ್ಲಿ ವ್ಯವಸ್ಥಿತವಾದ, ಸುಸಂಬದ್ಧವಾದ, ಹಾಗೂ ಕ್ರಮಬದ್ಧವಾದ—ವಸ್ತು ವಿಭಜನೆಯಿರುವುದನ್ನು ಯಾರಾದರೂ ಗಮನಿಸಬಹುದು.

ದುರ್ಗಾ ಸಪ್ತಶತಿಯ ಹದಿಮೂರು ಅಧ್ಯಾಯಗಳಲ್ಲದೆ, ಇದರ ಮೊದಲು ಮತ್ತು ಕೊನೆಯ ಭಾಗಗಳಲ್ಲಿ ಕೆಲವು ತಾಂತ್ರಿಕ ಶಾಸ್ತ್ರಕ್ಕೆ ಸಂಬಂಧಪಟ್ಟ ಶ್ಲೋಕಗಳನ್ನು ಸೇರಿಸಿದ್ದಾರೆ. ತಾಂತ್ರಿಕ ವಿಧಾನದಲ್ಲಿ ವಿಧಿಸಿರುವ ಶಕ್ತಿ ಪೂಜೆ, ಸ್ತ್ರೀ ದೇವತೆಗಳ ಉಪಾಸನೆಯು ವೈದಿಕ ವಿಧಿಯನಂತರ ತನ್ನ ಸ್ಥಾನವನ್ನ ಗಳಿಸಿಕೊಂಡುದು ಸರ್ವವಿದಿತ. ಕವಚ, ಅರ್ಗಲಾ ಸ್ತೋತ್ರ ಹಾಗೂ ಕೀಲಕ ಇತ್ಯಾದಿ—ಇವು ದುರ್ಗಾ ಸಪ್ತಶತಿಯ ಮೊದಲಲ್ಲಿ ಸೇರಿವೆ. ಈ ಭಾಗವು ಮಾರ್ಕಂಡೇಯ ಪುರಾಣದ ದುರ್ಗಾ ಸಪ್ತಶತಿಯ ಭಾಗದಲ್ಲಿ ಕಂಡುಬರುವುದಿಲ್ಲ.

ತಾಂತ್ರಿಕ ವಿಧಿ, ಶಾಕ್ತ ಸಂಪ್ರದಾಯ—ಮೊದಲಾದ ವಿವರಗಳು ಈ ಲೇಖನದ ಪರಿಮಿತಿಗೆ ಒಳಪಡುವುದಿಲ್ಲ. ಆದರೆ ದುರ್ಗಾ ಸಪ್ತಶತಿಗೆ ಮಾಂತ್ರಿಕ, ತಾಂತ್ರಿಕ ಪೂಜಾ ವಿಧಿಗಳ ಸಂಬಂಧವೂ ಇರುವುದೆಂಬ ಅಂಶವನ್ನು ಮಾತ್ರ ಇಲ್ಲಿ ಸೂಚಿಸಬಯಸುತ್ತೇನೆ. ದುರ್ಗಾಪೂಜಾ ಪದ್ಧತಿಯ ಉಗಮ ವಿಕಾಸವನ್ನು ಸ್ಥೂಲವಾಗಿ ಮುಂದೆ ಪರಿಶೀಲಿಸಲಾಗುವುದು.

2

ದುರ್ಗಾ ಪೂಜೆಯ ಉಗಮ, ವಿಕಾಸವನ್ನು ನಾವು ಗಮನಿಸುತ್ತಾ ನಮ್ಮ ದೃಷ್ಟಿಯನ್ನು ಹಿಂದಕ್ಕೆ ಸರಿಸಿದರೆ, ಸ್ತ್ರೀ ದೇವತೆಯ ಉಪಾಸನೆಯು ಸಾಮಾಜಿಕ ಧಾರ್ಮಿಕ, ತಾತ್ವಿಕ ದೃಷ್ಟಿಯಿಂದ ಗಣನೀಯವಾದ ಸ್ಥಾನವನ್ನು ಪಡೆದಿರುವುದನ್ನು ಕಾಣುತ್ತೇವೆ. ಸ್ತ್ರೀ ದೇವತೆಗಳಿಗಿರುವ ಸ್ಥಾನಮಾನಗಳನ್ನು ಗಮನಿಸಿದಾಗ ಮೂಲ ಬುಡಕಟ್ಟಿನವರ ಗುಂಪು ಜೀವನದಲ್ಲಿ (Tribal) ಸ್ತ್ರೀಯರಿಗಿದ್ದ ಸ್ಥಾನಮಾನ, ಗೌರವವನ್ನು ಸೂಚಿಸುತ್ತದೆ. ಇವರ ಸಾಮಾಜಿಕ ಪದ್ಧತಿಯಲ್ಲಿ 'ಸ್ತ್ರೀಯರು', ಗುಂಪಿನ ಹಿರಿಯರಾಗುತ್ತಿದ್ದರು. ಬಹುಶಃ ಪದ್ಧತಿಯು ಸ್ತ್ರೀ ದೇವತೆಗಳನ್ನು ಪುರುಷ ದೇವತೆಗಳಂತೆ ಉನ್ನತ ಸ್ಥಾನಕ್ಕೇರಿಸಲು ಕಾರಣವಾಗಿರಬಹುದು. ತಾಯಿಯು ಗುಂಪಿನ ಹಿರಿಯವಳು' ಎನ್ನುವ ಅಂಶವನ್ನು ಗಮನಿಸಿದರೆ, ಸ್ತ್ರೀ ದೇವತೆಗಳ ಉಪಾಸನೆಯು ಉಗಮವು ಕೃಷಿ ಪದ್ಧತಿಯ ಉಗಮದೊಂದಿಗೆ ಸಂಬಂಧಿಸಿದಂತೆ ತೋರುತ್ತದೆ. ಅಂದರೆ ಪುರುಷದೇವತೆ ಮತ್ತು ಸ್ತ್ರೀ ದೇವತೆಗಳು ಯುದ್ಧ ಮತ್ತು ಶಾಂತಿ ಕಾಲಗಳಲ್ಲಿ ಪೂಜಿಸಲ್ಪಡುತ್ತಿದ್ದರು. ಜನರು ಸುಖ, ಶಾಂತಿ, ರಕ್ಷಣೆಗಳನ್ನು ಪಡೆಯಲು, ಸಂಪತ್ತು, ಬೆಳೆಯನ್ನು ವೃದ್ಧಿಗೊಳಿಸಲು ಸ್ತ್ರೀ ದೇವತೆಗಳ ಉಪಾಸನೆ ಮಾಡಲು ಮೊದಲುಮಾಡಿದರು. ಫಲವತ್ತು, ಸಂಪದ್ಭರಿತ–ಇವು ಸ್ತ್ರೀ ದೇವತೆಗಳಿಗೆ ಸಾಂಕೇತಿಕವಾದವು. ಬೇಸಾಯ ಜೀವನದಲ್ಲಿ ಶಾಂತಿ, ಸೌಲಭ್ಯಗಳು ನೆಲೆಗೊಂಡ ಕಾಲದಲ್ಲಿ ಸ್ತ್ರೀ ದೇವತೆಗಳ ಉಪಾಸನೆಗೆ ಮೊದಲಾಯಿತೆಂದೂ ಮತ್ತು ಇವರು ಅತ್ಯುನ್ನತ ಸ್ಥಾನವನ್ನು ಗಳಿಸಿಕೊಂಡರೆಂದು ಹೇಳಬಹುದು. ದುರ್ಗಾದೇವಿ, ಕಾಳಿ, ಸರಸ್ವತಿ, ಲಕ್ಷ್ಮಿ ಮತ್ತು ಶಕ್ತಿ–ದೇವತೆಗಳು ಸಂಪತ್ತು, ಸಮೃದ್ಧಿ, ಜ್ಞಾನ, ಪರಾಶಕ್ತಿ–ಮೊದಲಾದವುಗಳನ್ನು ಪ್ರತಿನಿಧಿಸಲು ತೊಡಗಿದರು.[5]

ಭೂಸಂಪತ್ತು, ಬೇಸಾಯ, ಫಲಸಮೃದ್ಧಿ–ಇವುಗಳೊಂದಿಗೆ ಸ್ತ್ರೀ ದೇವತೆಗಳ ಸಂಬಂಧವು ಸಿಂಧೂನಾಗರೀಕತೆಗೆ ಪೂರ್ವದಿಂದಲೂ ಇತ್ತು ಎಂಬುವನ್ನು ಇತಿಹಾಸಕಾರರು ಗುರುತಿಸುತ್ತಾರೆ. ಉದಾ :–ಅನ್ನದಾ, ಅನ್ನಪೂರ್ಣ, ಶಾಕಾಂಬರಿ–(ಅನ್ನವನ್ನು ಕೊಡುವವಳು, ಅನ್ನದಿಂದ ಪೂರ್ಣಳಾದವಳು) ಮೊದಲಾದ ಹೆಸರುಗಳು ಸ್ತ್ರೀ ದೇವತೆ ಮತ್ತು ವನಸ್ಪತಿಗಳಿಗೆ ಸಂಬಂಧವನ್ನು ಕಲ್ಪಿಸುತ್ತವೆ. ಈ ಸಂಬಂಧವು ಶಾಕ್ತರಲ್ಲಿ 'ಕುಲಮರ'ಗಳನ್ನು ದೇವತೆಯೆಂದು ಪೂಜಿಸುವ ಪದ್ಧತಿಗೆ ಪ್ರಾಮುಖ್ಯವನ್ನು ನೀಡಿತು. 'ಕುಲಯೋಗಿನಿ'ಗಳು, ಕುಲಮರಗಳಲ್ಲಿ ವಾಸಿಸುತ್ತಾರೆಂಬ ನಂಬಿಕೆ ಇವರಲ್ಲಿ ಉಂಟಾಯಿತು.

---

5 Lokayata : Debi Prasad Chattopadyaya, p. 259

ಇಲ್ಲಿಂದ ಮುಂದೆ ಬಂದರೆ, ದುರ್ಗಾ ಪೂಜೆಯ ವಿಕಾಸವನ್ನು ಗಮನಿಸಬಹುದು. ಪೂರ್ಣಘಟ ಮತ್ತು ಸರ್ವತೋಭದ್ರ ಮಂಡಲ-ಇವು ದುರ್ಗಾಪೂಜೆಯಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಗಳಿಸುತ್ತವೆ. ಸಿಂಹವಾಹಿನಿಯಾದ, ಹತ್ತು ತೋಳುಗಳಿಂದ ಕೂಡಿದ, ಸರ್ವಾಲಂಕಾರ ಭೂಷಿತೆಯಾಗಿ ಶೋಭಿಸುವ ದುರ್ಗಾಮಾತೆಯ ವಿಗ್ರಹವು ಇತ್ತೀಚಿಗೆ ಸಾಮಾನ್ಯವಾಗಿ ಎಲ್ಲ ಕಡೆಯೂ ಕಂಡುಬರುವುದು. ಆದರೆ ಅನೇಕರಿಗೆ ದುರ್ಗಿಯ ಈ ಸ್ವರೂಪವು ಬಹಳ ದಿನಗಳವರೆಗೆ ತಿಳಿದಿರಲಿಲ್ಲವೆಂಬುದು ಸೋಜಿಗದ ಸಂಗತಿ. (ಉದಾ :–ಒಂದು ಶತಮಾನದ ಹಿಂದೆ ಬಂಗಾಳದ ವಿಗ್ರಹ (ಪ್ರತಿಮೆ) ಕಾರರಿಗೆ ಹತ್ತು ತೋಳುಗಳಿರುವ, ಸಿಂಹವಾಹಿನಿಯಾದ ಮತ್ತು ತನ್ನ ಮಕ್ಕಳಿಂದ ಕೂಡಿರುವ ದುರ್ಗಾದೇವಿಯ ಈ ರೂಪವು ತಿಳಿದಿರಲಿಲ್ಲವೆಂದು ಶ್ರೀ ಬಂದೋಪಾಧ್ಯಾಯರು ತಿಳಿಸುತ್ತಾರೆ.)[6] ಇತ್ತೀಚಿಗೆ ದೇವಿಯ ವಿಗ್ರಹದಲ್ಲಿ ಅತ್ಯಂತ ವೈಭವ, ಅಲಂಕಾರ ಇವುಗಳು ಕಂಡುಬರುತ್ತಿವೆ. ಇದಕ್ಕಿಂತ ಮುಂಚೆ ದುರ್ಗಾಪೂಜಾ ವಿಧಿಯು, ಆಚರಣೆಯ ಮಹತ್ವವೆಲ್ಲವೂ ಪೂರ್ಣಘಟ ಯಂತ್ರಗಳಲ್ಲಿ ಅಡಕವಾಗಿತ್ತು.

ಪಂಚ ಸಸ್ಯಗಳನ್ನು ಹರಡಿದ ಮಣ್ಣಿನ ಚೌಕದಮೇಲೆ ನೀರಿನಿಂದ ತುಂಬಿದ ಮಣ್ಣಿನ ಮಡಕೆ (ಘಟ)ಯನ್ನು ಇಡುವುದು. ಮೊಸರನ್ನವನ್ನು ಮಡಕೆಯಲ್ಲಿ ಇಡುವುದು. ಮಡಕೆಯ ಕಂಠಕ್ಕೆ ಕೆಂಪುದಾರವನ್ನು ಕಟ್ಟುವುದು. ಮಡಕೆಯ ತೆರೆದ ಬಾಯನ್ನು ಪಂಚ ವಿಧದ ಎಲೆಗಳಿಂದ ಮುಚ್ಚುವುದು. ನಂತರ ಮಣ್ಣಿನ ತಟ್ಟೆಯಲ್ಲಿ ಅನ್ನ, ವೀಳೆಯದೆಲೆಯನ್ನಿಡುವುದು. ನಂತರ ಇದರಮೇಲೆ ಪೂರ್ಣ ಫಲದಿಂದ ಕೂಡಿದ ಕುಂಕುಮ ಲೇಪಿತವಾದ (ಸಿಂಧೂರ ಪುತ್ಥಳಿ) ತೊಟ್ಟಿನಿಂದಾವೃತವಾದ ಎಳೆನೀರು ಕಾಯನ್ನು ಇಡುವುದು. ಇದೇ ಪೂರ್ಣ ಘಟ. ಈ ಪೂರ್ಣ ಘಟವನ್ನು ತಂತ್ರಶಾಸ್ತ್ರದಲ್ಲಿ ಹೇಳಿರುವ ನಿಯಮದ ಪ್ರಕಾರ ಬರೆದ ಸರ್ವತೋಭದ್ರ ಮಂಡಲ (ಅಷ್ಟದಳಪದ್ಮ)ದ ಮೇಲೆ ಇಟ್ಟು ಪೂಜಿಸುವುದು. 'ದುರ್ಗಾ ಪೂಜೆಯ ವಿಧಾನ.[7]

ಅಷ್ಟದಳ ಪದ್ಮವು ಸ್ತ್ರೀಯರ ಜನನೇಂದ್ರಿಯವನ್ನು ಸಂಕೇತಿಸುತ್ತದೆ. ಪೂರ್ಣಘಟ ಮತ್ತು ಸರ್ವತೋಭದ್ರ ಮಂಡಲಗಳು, ಸಸ್ಯ, ಫಲಗಳು ಸ್ತ್ರೀಯರ ಜನನೇಂದ್ರಿಯ, ಸಂತಾನ ವೃದ್ಧಿ-ಇವುಗಳಿಗೆ ಸಂಬಂಧವನ್ನು ಕಲ್ಪಿಸಿವೆ. ಉದಾ :- ಮಣ್ಣಿನ ಮಡಕೆ ಸ್ತ್ರೀಯರ ಗರ್ಭ, ಸಿಂಧೂರ ಪುತ್ಥಳಿ ಗರ್ಭದಲ್ಲಿನ ಮಗುವನ್ನು ಸಂಕೇತಿಸುತ್ತದೆ. ಮನುಷ್ಯರ ಸಂತಾನವೃದ್ಧಿಗೆ, ಸಸ್ಯ, ಫಲಗಳ ಸಮೃದ್ಧಿಯ ಸಂಬಂಧವನ್ನು ಕಲ್ಪಿಸಿರುವುದರಕಾರಣ ಹೀಗಿರಬಹುದು. ಸಸ್ಯ ಸಂಪತ್ತು, ಸ್ತ್ರೀಯರ ಸಂತಾನ ವೃದ್ಧಿಯಂತೆ ಸತತವಾಗಿ ಆಗುತ್ತಿರಲಿ ಎಂದು ಇರಬಹುದು.

---

6 Lokayata: Debi Prasad Chattopadyaya, p. 294
7 ಅದೇ : ಪು. 295

ಆದುದರಿಂದ, ದುರ್ಗಾ ಪೂಜೆಯು ಕೃಷಿ ಸಂಪತ್ತೂ ಮತ್ತು ಸಂತಾನವೃದ್ಧಿಯಲ್ಲಿ ವಿಶಿಷ್ಟ ಪಾತ್ರ ವಹಿಸಿರುವುದನ್ನು ಇದರ ಉಗಮ ಹಾಗೂ ವಿಕಾಸದ ಚರಿತ್ರೆಯಿಂದ ಸ್ಪಷ್ಟವಾಗುತ್ತದೆ.[8]

ದುರ್ಗಾ ಪೂಜೆಯು ಬೌದ್ಧಿಕ ತಂತ್ರದಲ್ಲಿಯೂ, ಸಾಂಖ್ಯ ಶಾಸ್ತ್ರದಲ್ಲಿಯೂ ಬಳಕೆಯಲ್ಲಿರುವುದು ಕಂಡು ಬರುತ್ತದೆ.[9] ಹೀಗೆ ದುರ್ಗಾ ಪೂಜೆಯು ಸಾಮಾಜಿಕ ವಾಗಿ ಮಹತ್ವದ ಸ್ಥಾನ ಪಡೆದಿದೆ.

3

ಇನ್ನು ಮುಂದೆ, ದುರ್ಗಾ ಪೂಜೆಯು ಧಾರ್ಮಿಕ ಹಾಗೂ ತಾತ್ವಿಕವಾಗಿ ಯಾವ ಸ್ಥಾನಗಳಿಸಿದೆ ಎಂದು ವಿವೇಚಿಸಬಹುದು.

ದುರ್ಗಾ ಸಪ್ತಶತಿಯನ್ನು ವೈದಿಕ ವಿಧಿಯಂತೆ, ಮಂತ್ರಗಳಂತೆ ಗೌರವಿಸ ಲಾಗಿದೆ. ವೈದಿಕ ಮಂತ್ರಗಳಂತೆ ಇದಕ್ಕೂ ಮಂತ್ರ ದ್ರಷ್ಟಾರವುಂಟು. ಛಂದಸ್ಸುಂಟು. ಇದರಿಂದ ದುರ್ಗಾ ಸಪ್ತಶತಿಯು ವೈದಿಕ ಮಂತ್ರಗಳಷ್ಟೇ ಪ್ರಭಾವ ಬೀರಿದೆ ಎಂದು ವೇದ್ಯವಾಗುತ್ತದೆ.

ದುರ್ಗಾ ಸಪ್ತಶತಿಯಲ್ಲಿ ಅಥರ್ವಣ ವೇದದ ಮೂಲಾಂಶಗಳಿರುವುದನ್ನು ಗಮನಿಸಬಹುದು. ಅಥರ್ವಣವು ಕ್ರಿಯೆ–ಫಲಗಳ ನಡುವೆ ಮಂತ್ರಶಕ್ತಿಯ ಸಂಬಂಧವನ್ನು ಕಲ್ಪಿಸುತ್ತದೆ. ಉದಾ: ದುರ್ಗಾದೇವಿಯು ರಾಕ್ಷಸರ ಮೇಲೆ ಮಂತ್ರ ಜಲವನ್ನು ಪ್ರೋಕ್ಷಿಸಿ ಅವರನ್ನು ಕೊಂದಳು. ಈ ತರಹದ ವೈದಿಕ ಮಾಂತ್ರಿಕ ಶಕ್ತಿಯ ಲಕ್ಷಣಗಳು ಇಲ್ಲಿ ಕಂಡುಬರುವುದರಿಂದ ಇದು ಸಂಪ್ರದಾಯಸ್ಥರಿಗೂ ಪೂಜ್ಯವಾಗಿದೆ; ಪವಿತ್ರವಾಗಿದೆ. ಬ್ರಹ್ಮ, ವಿಷ್ಣು ಮತ್ತು ರುದ್ರರು ದುರ್ಗಾ ಸಪ್ತಶತಿಯ ದ್ರಷ್ಟಾರರು. ಗಾಯತ್ರಿ, ಉಷ್ಣಿಕ್ ಮತ್ತು ಅನುಷ್ಟುಪ್–ಈ ವೈದಿಕ ಛಂದಸ್ಸುಗಳು ಇಲ್ಲಿನ ಕೆಲವು ಅಧ್ಯಾಯಗಳಲ್ಲಿವೆ. ವೇದಗಳ ಮಂತ್ರ ದ್ರಷ್ಟಾರರು ಋಷಿಗಳು. ದುರ್ಗಾ ಸಪ್ತಶತಿಯ ರಚನೆಗೆ ಕಾರಣನೂ ಒಬ್ಬ ಋಷಿ. ದೇವಿಯ ಮಹಾತ್ಮ್ಯೆಯನ್ನು ಸಂಭಾಷಣೆಯ ರೂಪದಲ್ಲಿ ವಿವರಿಸುತ್ತಾನೆ. ಮಾರ್ಕಂಡೇಯ ಮುನಿಯು ಕೌಷ್ಟಿಕಿಗೆ ತಿಳಿಸುತ್ತಾನೆ.

ದುರ್ಗಾ ಸಪ್ತಶತಿಯಲ್ಲಿ ಬರುವ ಪಾತ್ರಗಳ ಹೆಸರುಗಳು ಸಾಂಕೇತಿಕವಾಗಿರು ವುದನ್ನು ಗಮನಿಸಬಹುದು. ರಾಜ್ಯವನ್ನು ಕಳೆದುಕೊಂಡ ಸುರಥ ಎಂಬ ರಾಜನೂ, ಐಶ್ವರ್ಯವನ್ನು ಕಳೆದುಕೊಂಡ ಸಮಾಧಿ ಎಂಬ ವೈಶ್ಯನೂ ಸುಮೇಧ ಮುನಿಯ

8 Lokayata: Debi Prasad Chattopadyaya, p. 296
9 ಅದೇ : ಪು. 326, 359

ಆಶ್ರಮಕ್ಕೆ ಬರುತ್ತಾರೆ. ಇವರ ದುಃಖದ ಕಾರಣವನ್ನರಿತ ಮುನಿಯು, ಅವರ ದುಃಖ ಪರಿಹಾರಕ್ಕಾಗಿ ದುರ್ಗಾಮಾತೆಯ ಮಹಾತ್ಮ್ಯೆಯನ್ನು ಮತ್ತು ಅವಳ ಪೂಜಾಕ್ರಮವನ್ನೂ ತಿಳಿಸುತ್ತಾನೆ. ಇದನ್ನು ಕೇಳಿದನಂತರ ಇವರಿಬ್ಬರೂ ದುರ್ಗಾ ದೇವಿಯ ಪೂಜೆಯನ್ನು ಮಾಡಿ, ದೇವೀ ಸೂಕ್ತದಿಂದ ಅವಳನ್ನು ಜಪಿಸಿ, ಅವಳ ದರ್ಶನವನ್ನು ಪಡೆಯುತ್ತಾರೆ. ಇವರಿಬ್ಬರೂ ಅವಳ ಕೃಪೆಗೆ ಪಾತ್ರರಾಗಿ ತಮ್ಮ ಕಷ್ಟಗಳಿಂದ ಪಾರಾಗುತ್ತಾರೆ. ಇಲ್ಲಿ ವರ್ಣಿತವಾಗಿರುವ ದುರ್ಗಾಸ್ತವವು ಅತ್ಯಂತ ರಮಣೀಯವಾಗಿದೆ.

ಸುರಥ ಮತ್ತು ಸಮಾಧಿಗಳೆಂಬ ಹೆಸರುಗಳು ದುರ್ಗಾ ಪೂಜೆಯಲ್ಲಿ ಅತ್ಯಂತ ಅವಶ್ಯಕವಾಗಿ ಬೇಕಾದ ಕ್ರಿಯೆ ಮತ್ತು ಏಕಾಗ್ರತೆ ಎಂಬ ಅರ್ಥವನ್ನು ಸೂಚಿಸುತ್ತವೆ. 'ಕ್ರಿಯೆ'ಯು ದೇವಿಯ ಉಪಾಸನೆಯನ್ನು (ಪೂಜೆ) ಸೂಚಿಸಿದರೆ, ಏಕಾಗ್ರತೆಯು (ಶ್ರದ್ಧೆ) ದೇವಿಯನ್ನು ಒಲಿಸಿಕೊಳ್ಳುವ ವಿಧಾನವನ್ನು ಸೂಚಿಸುತ್ತದೆ.

ದುರ್ಗಾ ಸಪ್ತಶತಿಯು ಧಾರ್ಮಿಕ ಹಾಗೂ ಪಾಂಡಿತ್ಯ ಪೂರ್ಣ ದೃಷ್ಟಿಗಳಿಂದ ಪ್ರಾಮುಖ್ಯವನ್ನು ಪಡೆದಿದೆ. ದಸರಾ ಹಬ್ಬದ ಎಂಟನೆಯ ದಿನದಿಂದ 'ದುರ್ಗೋತ್ಸವ'ವನ್ನು ಆಚರಿಸುತ್ತಾರೆ. ಇದನ್ನು 'ದುರ್ಗಾಷ್ಟಮಿ' ಎಂದು ಕರೆಯುತ್ತಾರೆ. 'ದುರ್ಗಾಪೂಜೆ'ಯು ಬಂಗಾಳ ದೇಶದಲ್ಲಿ ಅತ್ಯಂತ ಮಹತ್ವದ ಸ್ಥಾನ ಪಡೆದಿದೆ. ಇದನ್ನು ನಾಡಹಬ್ಬವಾಗಿ ಆಚರಿಸುತ್ತಾರೆ. ಉಳಿದ ದಿನಗಳಲ್ಲಿ ದುರ್ಗಾ ಸಪ್ತಶತಿಯ ಪಾರಾಯಣ ಮಾಡುತ್ತಾರೆ. ಅಷ್ಟಮಿ, ನವಮಿ, ಚತುರ್ದಶಿ–ಈ ದಿನಗಳು ದುರ್ಗಾ ಪಾರಾಯಣಕ್ಕೆ ಶ್ರೇಷ್ಠವಾದುವುಗಳೆಂದು ಪರಿಗಣಿಸಲಾಗಿದೆ. ದುರ್ಗಾ ಮಾತೆಯು ಕ್ಷಿಪ್ರ ಪ್ರಸಾದಿನಿ. ಅಂದರೆ ತನ್ನ ಭಕ್ತರ ಅಭೀಷ್ಟಗಳನ್ನು ಬಹಳ ಬೇಗನೆ ನೆರವೇರಿಸುತ್ತಾಳೆ.

ದುರ್ಗಾ ಸಪ್ತಶತಿಯ ಕೆಲವು ವಿಶಿಷ್ಟ ಭಾಗಗಳ ನಿತ್ಯ ಪಾರಾಯಣದಿಂದ ಮತ್ತು ಅತ್ಯಂತ ಶ್ರದ್ಧಾ ಭಕ್ತಿಗಳ ಸತತ ಪಾರಾಯಣದಿಂದ ಪುರುಷಾರ್ಥಗಳು ಸಿದ್ಧಿಸುತ್ತವೆ ಎಂಬ ಆಶ್ವಾಸನೆಯನ್ನು ಇದು ನೀಡುತ್ತದೆ. ದುರ್ಗಾಮಾತೆಯ ಅನುಗ್ರಹಕ್ಕೆ ಪಾತ್ರರಾದ ಭಕ್ತವೃಂದಕ್ಕೆ ಭೋಗ, ಸ್ವರ್ಗ, ಅಪಸರ್ಗವನ್ನು ಅವಳು ಕರುಣಿಸುತ್ತಾಳೆ.

ದುರ್ಗಾ ಸಪ್ತಶತಿಯು ಕ್ರಿ.ಶ. 5-6 ನೆಯ ಶತಮಾನದಲ್ಲಿ ಭಾರತದ ಪಶ್ಚಿಮ ಭಾಗಗಳಲ್ಲಿ ರಚಿತವಾಗಿದ್ದು, ಇದು ಪುರಾಣದ ಪ್ರಕ್ಷಿಪ್ತ ಭಾಗವಾಗಿದೆ ಎಂದು ಪ್ರೊ. ಪಾರ್ಗಿಟರ್ ಅಭಿಪ್ರಾಯಪಡುತ್ತಾರೆ.[10] ಹಾಗಾದರೆ, ಈ ಕೃತಿಯು ಆ ಕಾಲದ ಸ್ಥಿತಿಗತಿಗಳನ್ನು ಚಿತ್ರಿಸುತ್ತದೆ.

10 Markandeya Purana : Ed. & Tra. F. E. Pargiter – Pp. viii-xxix

'ದುರ್ಗಾ' ಎಂಬ ಪದವು ದುರ್ಗಾ ಸಪ್ತಶತಿಯಲ್ಲಿ ಅಪರೂಪವಾಗಿ ಬರುತ್ತದೆ. ಇದರಲ್ಲಿ ದುರ್ಗಾ ಮಾತೆಯ ಮಹಿಮೆ, ಸಾಮರ್ಥ್ಯ ವರ್ಣನೆಗಳಿಗೆ ಸಂಬಂಧಪಟ್ಟ ವಿಷಯವಿದೆ. 'ಚಂಡೀಪಾತ', 'ದೇವೀ ಮಹಾತ್ಮ್ಯೆ' ಅಥವಾ 'ಚಂಡಿ' ಅಥವಾ 'ಸಪ್ತಶತಿ'-ಇತ್ಯಾದಿ ಈ ಹೆಸರುಗಳು ಈ ಕೃತಿಗಿವೆ.

ಚಂಡ ಮತ್ತು ಮುಂಡರೆಂಬ ರಾಕ್ಷಸರನ್ನು ಅವಳು ವಧೆ ಮಾಡಿದ್ದರಿಂದ ಅವಳಿಗೆ ಚಂಡೀ ಮತ್ತು ಚಾಮುಂಡೀ—ಎಂಬ ಹೆಸರುಗಳೂ ಇವೆ. ಶುಂಭ-ನಿಶುಂಭರ ವಧೆಗೆ ಈ ರಾಕ್ಷಸರು ಮೂಲ ಕಾರಣರು. ಈ ಅಸುರ ವೀರರನ್ನು ಸಂಹರಿಸಲು ದುರ್ಗಾದೇವಿಯು ಭಯಂಕರ ರೂಪ ತಾಳಿ ಯುದ್ಧದಲ್ಲಿ ತನ್ನ ಕೌಶಲವನ್ನು ತೋರಿದಳು. ರಾಕ್ಷಸರನ್ನು ವಧಿಸಬೇಕೆಂದು ತ್ರಿಮೂರ್ತಿಗಳು ಪಾರ್ವತಿಯನ್ನು ಕೇಳಿಕೊಂಡಾಗ, ಪಾರ್ವತಿಯೇ ಭಯಂಕರ ರೂಪತಾಳಿ ರಾಕ್ಷಸರನ್ನೂ ನಾಶಮಾಡಿದಳು. ಹೀಗಾಗಿ, ದುರ್ಗಾ ಮಾತೆಯು ಸಪ್ತಶತಿಯ ಪ್ರಧಾನ ಪಾತ್ರವಾಗಿದ್ದಾಳೆ.

ಪುರಾಣದ ಒಂದು ಭಾಗವಾದರೂ ದುರ್ಗಾ ಸಪ್ತಶತಿಯು ಒಂದು ಸ್ವತಂತ್ರ ಕೃತಿ. ತಾಂತ್ರಿಕ ಪದಗಳಾದ ಐಂ, ಹ್ರೀಂ, ಕ್ಲೀಂ-ಮೊದಲಾದುವು ಇಲ್ಲಿ ಮಹತ್ವದವುಗಳಾಗಿವೆ. ದುರ್ಗಾ ಸಪ್ತಶತಿಯಲ್ಲಿ ಮಹಾಸರಸ್ವತಿಯ ಚರಿತ್ರವು ಹೆಚ್ಚಾಗಿದೆ. ಇದರಲ್ಲಿ 'ಕ್ಲೀಂ ಬೀಜ'ವು ಪ್ರಧಾನವಾಗಿರುತ್ತದೆ. ದುರ್ಗಾದೇವಿಯು 'ಮಹಾ ಸರಸ್ವತಿ'ಯ, ರೂಪದಲ್ಲಿ ತನ್ನ 'ವಿಭೂತಿ' ಎಲ್ಲವನ್ನೂ ಪ್ರಕಟಿಸಿದಳು. ಇದು 'ಕ್ಲೀಂ' ನಲ್ಲಿ ಐಕ್ಯವಾಗುತ್ತದೆ. ಮತ್ತು 'ಕಾಳೀ' ಸ್ವರೂಪವನ್ನು ಸೂಚಿಸುತ್ತದೆ. ಪಾರ್ವತಿಯನ್ನು 'ಹ್ರೀಂ ಕಾರ ನಿಲಯಾ' ಎಂದು ಕರೆಯುತ್ತಾರೆ. 'ಹ್ರೀಂ' ಎಂದರೆ ದೇವಿಯ ಆದಿಶಕ್ತಿಯ ಸ್ವರೂಪ ಎಂದಾಗುತ್ತದೆ.

ದುರ್ಗಾದೇವಿಯನ್ನು 'ಮಹಾಕಾಳಿ'ಯೊಂದಿಗೆ ಸಮೀಕರಿಸುತ್ತಾರೆ. ಇವೆರಡಕ್ಕೂ ಮೂಲ ರೂಪ ಪಾರ್ವತಿ. ಹ್ರೀಂ ಮತ್ತು ಕ್ಲೀಂ ಎಂಬುದು ಬಹುಮಟ್ಟಿಗೆ ಒಂದೇ ಅರ್ಥವನ್ನು ಸೂಚಿಸುತ್ತವೆ. ದುರ್ಗಾದೇವಿಯು ಯುದ್ಧ ಮಾಡುತ್ತಿರುವಾಗ ಅವಳು ತೋರಿದ ಭಯಂಕರ ಸ್ವರೂಪ (ಕಾಳೀ) ಮತ್ತು ಅವಳ ಯುದ್ಧ ಸಾಮರ್ಥ್ಯವನ್ನು ಇವು ಸೂಚಿಸುತ್ತವೆ. ಕಾಳೀ ಧ್ಯಾನ ಮತ್ತು ಕಾಳೀ ಸ್ತವಗಳು ದುರ್ಗಾ ಸಪ್ತಶತಿಯ ಮುಖ್ಯ ವಿಷಯ. ಈ ಕಾರಣದಿಂದಾಗಿ ಕಾಳೀ ಉಪಾಸಕರಿಗೆ ದುರ್ಗಾ ಸಪ್ತಶತಿಯು ಪರಮ ಪೂಜ್ಯವಾಗಿದೆ.

ದುರ್ಗಾ ಸಪ್ತಶತಿಯಲ್ಲಿ ದುರ್ಗಾದೇವಿಯ ಮೂಲ ಸ್ವರೂಪವನ್ನು ತಿಳಿಸುವ ಅಂಶಗಳು ಹೀಗಿವೆ. ಶಿವ ಮತ್ತು ಪಾರ್ವತಿಯರು ಜಗತ್ತಿನ ಸೃಷ್ಟಿಗೆ ಕಾರಣರಾದ ಆದಿಶಕ್ತಿ ಸ್ವರೂಪರು. ಹೀಗಾಗಿ ಅವರು ಕಾಮನಿಗೆ ಪ್ರಾಶಸ್ತ್ಯವನ್ನು ನೀಡಿ

ಕಾಮೇಶ್ವರ ಮತ್ತು ಕಾಮೇಶ್ವರಿ ಎಂದು ಪ್ರಸಿದ್ಧರಾದರು. 'ಶಕ್ತಿ' ಇಲ್ಲದ ಶಿವನು ಅಸಮರ್ಥ.[11] ಹಾಗೆಯೇ, ಶಿವನಿಲ್ಲದ ಶಿವೆಯು ಅಪೂರ್ಣ. ಶಿವ-ಪಾರ್ವತಿಯರ ಈ ಅಭೇಧವಾದ ಸಂಯೋಗವನ್ನು 'ಶಕ್ತಿ' ಎನ್ನುತ್ತಾರೆ. ಶಕ್ತಿಯನ್ನು ಪೂಜಿಸುವ ಈ ಕ್ರಮವೇ ಶಕ್ತಿ ಉಪಾಸನೆಗೆ ಮೂಲವಾಯಿತು. ಶಕ್ತಿಯು ಯಾವಾಗಲೂ ಜಗತ್ತಿನ ಸೃಷ್ಟಿಗೆ ಅಥವಾ ಲಯಕ್ಕೆ ಕಾರಣವಾಗುತ್ತದೆ. ಆದ್ದರಿಂದ ಯಾವುದೋ ಒಂದು ಉದ್ದೇಶಕ್ಕಾಗಿ ತ್ರಿಮೂರ್ತಿಗಳ ಮತ್ತು ಸಮಸ್ತ ದೇವತೆಗಳ ತೇಜಸ್ಸೆಲ್ಲವೂ ಒಟ್ಟುಗೂಡಿ ಸ್ತ್ರೀ ರೂಪವನ್ನು ತಾಳಿತು. ದುರ್ಗಾ ಮಾತೆಯನ್ನು ಈ ರೀತಿ ವರ್ಣಿಸಿದ್ದಾರೆ. ಉದಾಹರಣೆ : 'ನಿಶ್ಶೇಷ ದೇವಗಣ ಶಕ್ತಿ ಸಮೂಹ ಮೂರ್ತಿಃ', 'ತೇಜಃ ಸಮೂಹಂ', 'ಸರ್ವದೇವ ಶರೀರಜಂ' ಇತ್ಯಾದಿ. ದೇವಾದಿ ದೇವತೆಗಳ ಸಾಮೂಹಿಕವಾದ ಶಕ್ತಿಯನ್ನೂ ಪೂಜಿಸುವುದರಿಂದ, ಪ್ರಾರ್ಥಿಸುವುದರಿಂದ ಅನೇಕ ತೊಂದರೆಗಳು ನಿವಾರಣೆಯಾಗುತ್ತವೆ. ಹೀಗೆ, ದುರ್ಗಾ ಸಪ್ತಶತಿಯು, ದುರ್ಗಾ ಮಾತೆಯು ಬೇರೆ ಯಾರೂ ಅಲ್ಲದೆ ಸಮಸ್ತ ದೇವತೆಗಳ ತೇಜಸ್ಸಿನ ಮಾನವತಾ ರೂಪದ ಒಬ್ಬ ಸ್ತ್ರೀ ದೇವತೆಯೆಂದು ತಿಳಿಸುತ್ತದೆ. ಉಳಿದ ಪುರಾಣಗಳು ದೇವಿಯ ಮೂಲದ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳನ್ನು ಹೊಂದಿವೆ.

ದುರ್ಗಾ ಸಪ್ತಶತಿಯ ಅಧಿದೇವತೆ ದುರ್ಗಾದೇವಿ. ದುರ್ಗಾದೇವಿಯನ್ನು ಉಪನಿಷತ್ತು ಅಗ್ನಿವರ್ಣದವಳೆಂದು ಮೊದಲು ಉಲ್ಲೇಖಿಸುತ್ತದೆ.[12] (ಅಗ್ನಿವರ್ಣಾ) ತೇಜಸ್ಸಿನಿಂದ ಕಂಗೊಳಿಸುವವಳು (ತಪಸಾ ಜ್ವಲನ್ ತೀಂವರ್) ಮತ್ತು ಆರಾಧನೆ ಯಿಂದ ಒಲಿಯುವವಳು ಮತ್ತು ಅಭೀಷ್ಟೆಗಳನ್ನು ನೀಡುವವಳು ಎಂದು ವರ್ಣಿತ ಳಾಗಿದ್ದಾಳೆ. ಮಹಾಭಾರತವು ಅವಳನ್ನು ಉಲ್ಲೇಖಿಸಿ ಪ್ರಶಂಸಿಸುತ್ತದೆ. ಅರ್ಜುನನು ಅವಳ ಮಹಿಮೆಯನ್ನು ಕೊಂಡಾಡಿದ್ದಾನೆ. ದುರ್ಗಾ ಸಪ್ತಶತಿಯು ದೇವಿಯ ಮಹತ್ವನ್ನು ವರ್ಣಿಸುತ್ತದೆ. ಯುದ್ಧ ಯಜ್ಞವು ಮುಗಿದಮೇಲೆ ದೇವಿಯು ನಾನಾ ರೂಪದ ಶಕ್ತಿಗಳು ಅವಳಲ್ಲಿ ಮತ್ತೆ ಬಂದು ಐಕ್ಯವಾಗುತ್ತವೆ ಎಂಬುದು ಇಲ್ಲಿ ಸೂಚಿತವಾಗುತ್ತದೆ.

'ದುರ್ಗಾ' ಎಂದರೆ ಎಂತಹ ಕಷ್ಟ, ಸಂಕಟಗಳನ್ನು ನಿವಾರಿಸುವ ಶಕ್ತಿ ಯುಳ್ಳದ್ದು. (ದುರ್ಗೆ ದುರ್ಗಾರ್ತಿನಾಶಿನೀ) ಇವಳು 'ಯೋಗ ನಿದ್ರಾದೇವಿ' ಎಂದೂ 'ಮಹಾಕಾಳೀ'-ಎಂದು ಪ್ರಸಿದ್ಧಳಾಗಿದ್ದಾಳೆ. ವಿಷ್ಣುವಿನ ಕಣ್ಣುಗಳಲ್ಲಿ ವಾಸಿಸುವ ದೇವತೆ ಯೋಗಾನಿದ್ರಾದೇವಿ. (ಹರಿನೇತ್ರ ಕರ್ತಾಲಯಾಮ್) ಈ

---

11 ಸೌಂದರ್ಯಲಹರಿ ; 1.1 ಶಂಕರಾಚಾರ್ಯ

12 ತೈತ್ತರೀಯ ಉಪನಿಷತ್ತು : ಜಾತವೇದಸೇ ಸುನವಾಮ

............ ತಾಮ್ ಅಗ್ನಿವರ್ಣಾಂ ತಪಸಾ ಜ್ವಲನ್‌ತೀಮ್ .......

Ed. Jyoser, p. 188

ಕಾರಣದಿಂದಾಗಿ, ವಿಷ್ಣುವಿಗೆ ಜಗತ್ತಿನ ಆಗುಹೋಗುಗಳ ಪರಿವೆ ಇರುವುದಿಲ್ಲ. ಮಧು–ಕೈಟಭರೆಂಬ ರಾಕ್ಷಸರು ಜಗತ್ತಿಗೆ ಕಂಟಕರಾಗಿದ್ದಾಗ, ಬ್ರಹ್ಮನ ಪ್ರಾರ್ಥನೆಯ ಮೇರೆಗೆ ಈ ಯೋಗ ನಿದ್ರಾದೇವಿಯು ಬಲದಿಂದ ವಿಷ್ಣುವು ತನ್ನ ಚಕ್ರವನ್ನು ಪ್ರಯೋಗಿಸಿ ರಾಕ್ಷಸರನ್ನು ಕೊಂದನು.

ದುರಾತ್ಮನಾದ ಮಹಿಷಾಸುರನನ್ನು ವಧಿಸಲು ದುರ್ಗಾದೇವಿಯು ಮಹಾಲಕ್ಷ್ಮಿಯ ಸ್ವರೂಪವನ್ನು ತಾಳುತ್ತಾಳೆ. ಮಹಾಲಕ್ಷ್ಮಿ ಸ್ವರೂಪಳಾದ ದುರ್ಗಾದೇವಿಗೆ ದೇವಾದಿದೇವತೆಗಳು ತಮ್ಮ ಸಮಸ್ತ ತೇಜೋರಾಶಿಯನ್ನೂ, ಆಯುಧ ವಿಶೇಷಗಳನ್ನೂ ದಯಪಾಲಿಸಿದರು. ಹೀಗೆ ಸಮಸ್ತ ಶಕ್ತಿಗಳ ಮಹತ್ವವನ್ನು ಪಡೆದ ದೇವಿಯು, ದೇವತೆಗಳ ತೇಜಸ್ಸಿನ ಪ್ರಭಾವದಿಂದ ಸರ್ವಮಂಗಳೆಯಾಗಿ ಶೋಭಿಸಿದಳು. ಸೂರ್ಯನು ದೇವಿಯ ಪ್ರತಿರೋಮಕೂಪದಲ್ಲಿಯೂ ತನ್ನ ರಶ್ಮಿಗಳನ್ನು ತುಂಬಿದುದರಿಂದ ಅವಳು ಅತ್ಯಂತ ತೇಜೋಮಯಿಯಾಗಿ, ಸಾಮರ್ಥ್ಯಶಾಲಿಯಾಗಿ ಕಂಗೊಳಿಸಿದಳು. (2-24) ಪಾರ್ವತಿಯ ತಂದೆಯಾದ ಹಿಮವಂತನು ವಾಹನ ಯೋಗ್ಯವಾದ ಸಿಂಹವನ್ನು ದೇವಿಗೆ ಕೊಟ್ಟನು. ಅತ್ಯಂತ ಪ್ರಬಲವಾದ, ಶಕ್ತಿಯುತವಾದ ಸಿಂಹದ ಈ ಕೊಡುಗೆಯು ಔಚಿತ್ಯಪೂರ್ಣವಾಗಿದೆ. ಈ ಸಿಂಹವು ಮಹಿಷ ಪಶುಸ್ವರೂಪನಾದ ಮಹಿಷಾಸುರನೊಡನೆ ದೇವಿಯು ಯುದ್ಧ ಮಾಡುವಾಗ ಎಲ್ಲ ರೀತಿಗಳಿಂದಲೂ ಸಹಕರಿಸಿತು.

ದುರ್ಗಾ ಸಪ್ತಶತಿಯ ಎರಡರಿಂದ ನಾಲ್ಕನೆಯ ಅಧ್ಯಾಯಗಳು ದುರ್ಗಾದೇವಿಯ ಮಹಾಲಕ್ಷ್ಮಿ ಸ್ವರೂಪವನ್ನು ವರ್ಣಿಸುತ್ತವೆ. ಈ ಭಾಗವು ಬಹಳ ಮುಖ್ಯವಾದುದು. ಏಕೆಂದರೆ, ಇದು ದೇವಿಯ ಹುಟ್ಟು, ವಾಸಸ್ಥಾನ, ಸ್ವರೂಪ, ಅಭೇಧತೆ, ಗುಣ ವಿಶೇಷಗಳು ಮತ್ತು ಅವಳ ವಿಶೇಷ ಕಾರ್ಯಕಲಾಪಗಳನ್ನೂ ವಿವರಿಸುತ್ತದೆ.

ದುರ್ಗಾ ಸಪ್ತಶತಿಯ ಐದರಿಂದ ಹನ್ನೆರಡು ಅಧ್ಯಾಯಗಳವರೆಗೆ ದೇವಿಯು ಬಹುಮುಖಳಾಗುತ್ತಾಳೆ. ಅವಳು ತನ್ನಿಂದ ಸಪ್ತಮಾತೃಕೆಗಳನ್ನು ಕಳಿಸುತ್ತಾಳೆ. ಶುಂಭ, ನಿಶುಂಭರೆಂಬ ದೈತ್ಯ ಸಹೋದರರ ಮುಖಂಡತ್ವದಲ್ಲಿದ್ದ ಅಸಂಖ್ಯ ದೈತ್ಯ ಬಲವನ್ನು ಸಂಹರಿಸಲು ದೇವಿಯು ತನ್ನ ಸಪ್ತಮಾತೃಕೆಗಳನ್ನು ಕಳುಹಿಸುತ್ತಾಳೆ. ದೇವಿಯು 'ಮಹಾ ಸರಸ್ವತಿ' ಸ್ವರೂಪವು ಇಲ್ಲಿ ವ್ಯಕ್ತವಾಗಿದೆ. ರಾಕ್ಷಸ ಪ್ರಮುಖರನ್ನು ಯುದ್ಧಕ್ಕೆ ಕರೆತರುವ ಉಪಾಯವು ಸ್ವಾರಸ್ಯಕರವಾಗಿದೆ. ಶುಂಭ, ನಿಶುಂಭರು ದೇವಿಯ ಅಪಾರ ಸೌಂದರ್ಯರಾಶಿಗೆ ಮೋಹಗೊಂಡು ಅವಳನ್ನು ತಾವು ಪಡೆಯಬೇಕೆಂದು ಅಪೇಕ್ಷೆಪಟ್ಟರು. ತಮ್ಮಲ್ಲಿ ಒಬ್ಬರನ್ನು ಸೇವಿಸುವಂತೆ ದೇವಿಯನ್ನು ಕೇಳಿಕೊಂಡರು. ಅದಕ್ಕೆ ದೇವಿಯು 'ಯಾರು ನನ್ನನ್ನು ಯುದ್ಧದಲ್ಲಿ ಜಯಿಸುವರೊ ಯಾರು ನನ್ನ ದರ್ಪವನ್ನು ಅಡಗಿಸುವರೋ ಅವರೇ ನನಗೆ ಸರಿಯಾದ ಪ್ರತಿಸ್ಪರ್ಧಿ.

ಅವರು ನನ್ನ ಪತಿಯಾಗುವರು' ಎಂದು ಹೇಳಿದಳು (5-120). ನಂತರ ದೇವಿಯು ಭಯಂಕರ ಶಕ್ತಿ ಸ್ವರೂಪಿಣಿಯಾಗಿ, ತನ್ನ ಮಹತ್ತೆಲ್ಲವನ್ನೂ ಉಪಯೋಗಿಸಿಕೊಂಡು ದೂಮ್ರಲೋಚನ, ರಕ್ತಬೀಜ, ಚಂಡ, ಮುಂಡ ಮತ್ತು ಅವರ ಮುಖಂಡರೆಲ್ಲರನ್ನೂ ಸಂಹರಿಸಿದಳು.

ದೇವಿಯು ಶುಂಭನನ್ನು ನಿಗ್ರಹಿಸುವಾಗ, ಶುಂಭನು "ನೀನು ಗರ್ವಿತಳು, ಇತರರ ಬಲವನ್ನಾಶ್ರಯಿಸಿ ಯುದ್ಧ ಮಾಡುತ್ತಿರುವೆ. ನೀನು ಏಕಾಂಗಿಯಾಗಿ ಯುದ್ಧ ಮಾಡು" ಎಂದನು. ಆಗ ದೇವಿಯು ನಾನೊಬ್ಬಳೆ ಇರುವುದು ಉಳಿದ ಮಾತೃಕೆಗಳು ನನ್ನ ಮಹಿಮಾಶಕ್ತಿಯಿಂದುಂಟಾದುವು. ಈಗ ಅವು ನನ್ನಿಂದ ಉಪಸಂಹರಿಸಲ್ಪಟ್ಟಿವೆ. ಈಗ ನನ್ನೊಡನೆ ಯುದ್ಧ ಮಾಡು ಎಂದಳು (10-3-10). ಹೀಗೆ ಅವರಿಗೆ ಭಯಂಕರ ಯುದ್ಧವಾಯಿತು. ಶುಂಭ, ನಿಶುಂಭರ ಸಂಹಾರದಿಂದ ಜಗತ್ತು ಶಾಂತಿ, ಸಮಾಧಾನವನ್ನು ಹೊಂದಿತು. ಇಲ್ಲಿ ದುರ್ಗಾದೇವಿಯ ಮಹಾ ಸರಸ್ವತಿಯ ಬಹುಮುಖ ವ್ಯಕ್ತಿತ್ವವನ್ನು ಸೂಚಿಸುತ್ತದೆ.

ರಕ್ತ ಬೀಜಾಸುರನನ್ನು ಸಂಹರಿಸುವಾಗ, ದೇವಿಗೆ ಒಂದು ಸಮಸ್ಯೆ ಉದ್ಭವಿಸಿತು. ರಕ್ತಬೀಜಾಸುರನ ರಕ್ತದ ಪ್ರತಿಯೊಂದು ಹನಿಯಿಂದ ಹುಟ್ಟುವ ರಾಕ್ಷಸರನ್ನೂ, ರಕ್ತಬೀಜನ ರಕ್ತವನ್ನೂ ಭದ್ರಕಾಳಿಯು ನುಂಗುವಂತೆ ಮಾಡಿದನಂತರ ದೇವಿಯು ರಕ್ತಬೀಜನನ್ನು ಸಂಹರಿಸಿದಳು.

ದುರ್ಗಾದೇವಿಯು ಸಮಸ್ತ ದೈವೀ ಶಕ್ತಿಗಳ ಸ್ತ್ರೀರೂಪವೆಂದೂ, ದೇವತೆಗಳ ಕಷ್ಟ ನಿವಾರಣೆಗಾಗಿ ಜನಿಸಿದ ತೇಜಸ್ಸಿನ ಸ್ವರೂಪದವಳೆಂದೂ, ಇದುವರೆಗೆ ಪರಿಶೀಲಿಸಿದ ಅಂಶಗಳಿಂದ ಸ್ಪಷ್ಟವಾಗುತ್ತದೆ. ದುರ್ಗಾ ಸಪ್ತಶತಿಯಲ್ಲಿ ವ್ಯಕ್ತವಾಗಿರುವ ದೇವಿಯ ಸ್ತೋತ್ರಗಳು ಅವಳ ವ್ಯಕ್ತಿತ್ವವನ್ನು ಅರಿಯಲು ಅತ್ಯಂತ ಉಪಯುಕ್ತವಾಗಿವೆ.

ದುರ್ಗಾ ಸಪ್ತಶತಿಯು ಆ ಕಾಲದ ಸ್ತ್ರೀಯರ ಸ್ಥಾನಮಾನವನ್ನು ಚಿತ್ರಿಸುತ್ತದೆ. ದುರ್ಗಾದೇವಿಗೆ ತೊಡಿಸಲಾದ ಆಭರಣಗಳು, ಆ ಕಾಲದ ಸ್ತ್ರೀಯರು ತೊಡುತ್ತಿದ್ದ ಆಭರಣಗಳನ್ನು ಸೂಚಿಸುತ್ತವೆ. ಹಾಗೆಯೇ, ಇಲ್ಲಿ ಉಲ್ಲೇಖವಾಗಿರುವ ಬಗೆಬಗೆಯ ಶಸ್ತ್ರಾಸ್ತ್ರಗಳು ಆ ಕಾಲದ ಯುದ್ಧಗಳಲ್ಲಿ ಬಳಸುತ್ತಿದ್ದ ಆಯುಧ ವಿಶೇಷಗಳನ್ನು ಸೂಚಿಸುತ್ತವೆ.

ಸಮಸ್ತ ಸ್ತ್ರೀಯರೂ ದುರ್ಗಾದೇವಿಯ ಅಂಶವೆಂದು ಅವರನ್ನು ವಿಶೇಷವಾಗಿ ಗೌರವಿಸುತ್ತಿದ್ದರು. ಅವರನ್ನು 'ಸ್ತ್ರೀ ರತ್ನ'ಗಳೆಂದೂ, ಯಾರು ರತ್ನಗಳನ್ನು ಪಡೆಯಲು ಯೋಗ್ಯರೋ ಅವರು ಪಡೆಯಬೇಕೆಂದು ತಿಳಿಯುತ್ತಿದ್ದರು. (ರತ್ನ ಭುಜಾಃ) ಗಜರತ್ನ, ಅಶ್ವರತ್ನಗಳ ಜೊತೆಗೆ 'ಸ್ತ್ರೀ ರತ್ನವೂ' ದುರ್ಗಾ ಸಪ್ತಶತಿಯಲ್ಲಿ ಸೇರಿದೆ. ಮತ್ತು ಸಮಸ್ತ ವಿದ್ಯೆಗಳೂ ದೇವಿಯ ಅಂಶಗಳೆಂದು ತಿಳಿಯುತ್ತಿದ್ದರು.

ದುರ್ಗಾ ಸಪ್ತಶತಿಯಲ್ಲಿ ಕಾವ್ಯದಲ್ಲಿರಬೇಕಾದ ಕಥಾನಕ, ಪಾತ್ರಗಳು, ರಸ, ಅಲಂಕಾರ ಮೊದಲಾದುವು ಕಂಡುಬರುವುದರಿಂದ ಇದನ್ನು ಸ್ತೋತ್ರ ಕಾವ್ಯವೆಂದು ಪರಿಗಣಿಸಬಹುದು. ಇದರ ಭಾಷೆ ಸರಳ, ನೇರ ಹಾಗೂ ಪ್ರಭಾವಶಾಲಿಯಾದುದು. ಈ ಗುಣಗಳಿಂದ ಇದು ವೇದದ ಸೂಕ್ತಗಳ ಭಾಷಾ ಶೈಲಿಗೆ ಹತ್ತಿರವಾಗುತ್ತದೆ. ಅಲ್ಲದೆ, ದೀರ್ಘಸಮಾಸಗಳು, ವಿಶಿಷ್ಟ ಪದಗಳ ಬಳಕೆಯೂ ಇಲ್ಲಿ ಕಂಡುಬರುತ್ತದೆ. ಇವು ಕೃತಿಕಾರನಿಗೆ ಭಾಷೆಯ ಮೇಲಿನ ಹತೋಟಿಯನ್ನು ಸೂಚಿಸುತ್ತವೆ. ಯುದ್ಧದ ವರ್ಣನೆಗಳಲ್ಲಿ ಭೀಭತ್ಸರಸವು ಚೆನ್ನಾಗಿ ವ್ಯಕ್ತವಾಗಿದೆ. ಉದಾ :– ಯುದ್ಧದಲ್ಲಿ ವೀರರ ತಲೆಗಳು ಕಡಿದು ಕೆಳಗೆ ಬಿದ್ದಾಗ ಅವು ತೂರ್ಯ (ಯುದ್ಧವಾದ್ಯ) ದ ಶಬ್ದಕ್ಕೆ ಸರಿಯಾಗಿ ನರ್ತನ ಮಾಡುತ್ತಿದ್ದುವಂತೆ. ದೇವಿ ಮತ್ತು ದಾನವರ ಭಯಂಕರ ಯುದ್ಧದ ವರ್ಣನೆಗಳು ರಾಮಾಯಣ, ಮಹಾಭಾರತಗಳ ಯುದ್ಧದ ವರ್ಣನೆಗಳನ್ನು ಹೋಲುತ್ತವೆ. ರೂಪಕ, ಉಪಮಾ, ಉತ್ಪ್ರೇಕ್ಷೆ, ಅತಿಶಯೋಕ್ತಿ ಇತ್ಯಾದಿ ಅಲಂಕಾರಗಳು ಇಲ್ಲಿ ಕಂಡುಬರುತ್ತವೆ. ಉಪಮಾನ, ಉಪಮೇಯಗಳು ಅಧಿಕವಾಗಿವೆ. ಅಗ್ನಿ, ಸೂರ್ಯ, ಮೋಡ, ಮೇರು– ಮೊದಲಾದುವು ಉಪಮಾನಗಳಾದರೆ, ದೇವಿಯ ಮತ್ತು ಅವಳಿಗೆ ಅಸುರರು ಬಿಡುವ ಬಾಣಗಳು ಉಪಮೇಯವಾಗುತ್ತವೆ. ಇದರ ಶೈಲಿಯು ಶಬ್ದಾಲಂಕಾರಕ್ಕೆ ಮಾದರಿಯಾಗುತ್ತದೆ. ಇಲ್ಲಿನ ಅನೇಕ ಅಭಿವ್ಯಕ್ತಿಗಳಲ್ಲಿ ಇದು ವ್ಯಕ್ತವಾಗುತ್ತದೆ. ಯಮಕ, ಅನುಪ್ರಾಸ–ಮೊದಲಾದ ಶಬ್ದಾಲಂಕಾರಗಳು ಹೆಚ್ಚಿನ ಸಂಖ್ಯೆಯಲ್ಲಿವೆ.

ಔಚಿತ್ಯಪೂರ್ಣವಾದ ಹಾಗೂ ಕಲಾತ್ಮಕವಾದ ಅಭಿವ್ಯಕ್ತಿಗಳು ಈ ಸ್ತೋತ್ರ ಕಾವ್ಯದ ಮೆರಗನ್ನು ಹೆಚ್ಚಿಸುತ್ತವೆ ಮತ್ತು ಕಾವ್ಯಕ್ಕೆ ಒಂದು ಬಗೆಯ ಶೋಭೆಯನ್ನು ತಂದುಕೊಡುತ್ತವೆ. ಉದಾ :- ಹರಿನೇತ್ರಕೃತಾಲಯಾಮ್ (1–70) ತುಹಿನಾಚಲ ನಿವಾಸಿನೀಂ), ದುರ್ಗಾ ದುರ್ಗಾರ್ತಿನಾಶಿನೀ (10-31) ಅನುಪಾಸನೆ (4-35) ಚಂಚಲಾಪಾಂಗೀ (5-11) ಇತ್ಯಾದಿ. ಇವು ಉಚಿತ ಸ್ಥಾನಗಳಲ್ಲಿ ಬಳಕೆಯಾಗಿದ್ದು ಕಾವ್ಯ ಸೌಂದರ್ಯವನ್ನು ಹೆಚ್ಚಿಸಿವೆ. ಶ್ಲೋಕಗಳು ಪುನರುಕ್ತಿಯಿದ್ದರೂ ಇವು ಕ್ರಮಬದ್ಧವಾಗಿವೆ. ಇದು ಯಜುರ್ವೇದದ ರುದ್ರಾಧ್ಯಾಯ ಮತ್ತು ಚಂಪಕಾಧ್ಯಾಯವನ್ನು ನೆನಪಿಗೆ ತರುತ್ತದೆ.

ದುರ್ಗಾ ಸಪ್ತಶತಿಯ ಕೊನೆಯ ಅಧ್ಯಾಯಗಳು (12-13) ದೇವಿಗೆ ಮಾಡುವ ಪೂಜಾಪದ್ಧತಿಯನ್ನು ವಿವರಿಸುತ್ತದೆ. ಪುಷ್ಪ, ಗಂಧ, ಧೂಪ, ದೀಪ— ಮೊದಲಾದ ಪೂಜಾ ಪರಿಕರಗಳನ್ನು ಬಳಸಬೇಕೆಂದು ಹೇಳಿದೆ. ಗುಗ್ಗುಲ (ಧೂಪ)ವು ದೇವಿಗೆ ಬಹಳ ಪ್ರಿಯವಾದುದೆಂದು ಹೇಳಿದೆ. ದುರ್ಗಾ ಉಪಾಸಕನು ಪಾಲಿಸಬೇಕಾದ ಕೆಲವು ನಿಯಮಗಳನ್ನು ಹೇಳುತ್ತದೆ.

ಈ ಸ್ತೋತ್ರ ಕಾವ್ಯದಲ್ಲಿ ಜೀವನದ ಮೌಲ್ಯಗಳು ವ್ಯಕ್ತವಾಗಿರುವುದನ್ನು ಗಮನಿಸಬಹುದು. ಭಾರತೀಯ ತತ್ವಶಾಸ್ತ್ರದಲ್ಲಿ ವ್ಯಕ್ತವಾಗಿರುವ ವಿಷಯಗಳು ಇಲ್ಲಿಯೂ ಕಂಡುಬರುತ್ತದೆ. ಜೀವನದ ಧ್ಯೇಯಗಳು, ಮಾರ್ಗಗಳು ಸೂಚಿತ ವಾಗಿವೆ. ಜೀವನದಲ್ಲಿ ಮುಖ್ಯವಾಗಿ ಬೇಕಾಗಿರುವ ಸಮದರ್ಶಿತ್ವದ ಕಷ್ಟ-ಸುಖ ಗಳನ್ನು ಸಮವಾಗಿ ಕಾಣುವುದು ಕಡೆಗೆ ಹೆಚ್ಚು ಒತ್ತು ನೀಡಿರುವುದು ಗಮನಾರ್ಹ ವಾಗಿದೆ. ಈ ಎಲ್ಲ ಕಡೆಗಳಲ್ಲಿ ಭಗವದ್ಗೀತೆಯ ತತ್ವದ ಸಾರವು ನೆನಪಿಗೆ ಬರುತ್ತದೆ. ಮಾನವನ ಜೀವನವು ಆಗಾಗ್ಗೆ ಸಂಕಟ, ತೊಂದರೆಗಳಿಗೆ ಈಡಾಗುವುದು ಸಹಜ. ಈ ಸಂದರ್ಭಗಳಲ್ಲಿ ದುರ್ಗಾದೇವಿಯು ಸರ್ವಾಂತರ್ಯಾಮಿಯಾಗಿ, ಸರ್ವಕಾಲ ದಲ್ಲಿಯೂ ಕಾಪಾಡುವಳೆಂಬ ಅಂಶವು ಗೋಚರವಾಗುತ್ತದೆ. ಮತ್ತು ಅವಳ ಮಾತುಕತೆಗಳಾದ ಶಾಕಾಂಬರೀ, ಬ್ರಾಮರಿ, ಇತ್ಯಾದಿ. ಇವುಗಳನ್ನು ಅವಳ ವಿಭೂತಿಯ ಅಂಶಗಳೆಂದು ಮಾತ್ರ ಚಿತ್ರಿಸುತ್ತದೆ. ಇದು ವೇದಗಳಲ್ಲಿ ವ್ಯಕ್ತ ವಾಗಿರುವ ಏಕತ್ವವಾದವನ್ನು ಬೆಂಬಲಿಸುತ್ತದೆ ಮತ್ತು ಅದ್ವೈತ ತತ್ವವನ್ನು ಎತ್ತಿ ಹಿಡಿಯುತ್ತದೆ. ಸಮಸ್ತ ಜೀವಿಗಳ ಸಂಪತ್ತು, ಸೌಭಾಗ್ಯವನ್ನು ಹೆಚ್ಚಿಸಿ, ಅವರ ಜೀವನವನ್ನು ಉತ್ತಮೋತ್ತಮವಾಗಿ ಮಾಡುವ ಭರವಸೆಯನ್ನು ಇದು ನೀಡುತ್ತದೆ.

ಅತ್ಯಂತ ಗಮನಾರ್ಹವಾದ ಸ್ತೋತ್ರ ಕಾವ್ಯವಾದ ದುರ್ಗಾ ಸಪ್ತಶತಿಯು ಸಾಮಾಜಿಕವಾಗಿ, ಧಾರ್ಮಿಕವಾಗಿ, ತಾತ್ವಿಕವಾಗಿ–ಯಾವ ಮಹತ್ತರವಾದ ಸ್ಥಾನ ವನ್ನು ಗಳಿಸಿದೆ ಎಂಬುದನ್ನೂ ಮತ್ತು ಭಗವತಿ ದುರ್ಗಾದೇವಿಯ ಮಹಿಮಾನ್ವಿತ ಚರಿತ್ರೆಯನ್ನು ಅರಿಯುವ ಒಂದು ಪ್ರಯತ್ನ ಈ ಲೇಖನದಲ್ಲಿ ನಡೆದಿದೆ ಎಂದು ನಾನು ಭಾವಿಸುತ್ತೇನೆ.

## ಸಹಾಯಕ ಗ್ರಂಥಗಳು ಮತ್ತು ಲೇಖನಗಳು


1 ಶ್ರೀ ದುರ್ಗಾ ಸಪ್ತಶತೀ : ಶ್ರೀರಾಮಕೃಷ್ಣದಾಸ. ಶ್ರೀ ರಾಮಕೃಷ್ಣಾಶ್ರಮ, ಮೈಸೂರು, 1965

2 Markandeya Purana : F. E. Pargiter - Indological Book House, Varanasi, 1904

3 ಶ್ರೀ ಮಾತಾ : ಶ್ರೀ ಅರವಿಂದರು - ಅರವಿಂದಾಶ್ರಮ, ಪಾಂಡುಚೇರಿ, 1958

4 Lokayata : Devi Prasad Chattopadyaya, People's Publishing House, New Delhi, 1968

5 Goddess Durga : Dr. C. L. Prabhakar - Bharatiya Vidya Bhavan, vol. XXXI

6 The Origin and Development of Durga: R. C. Majumdar, JRAS – 1906

7 ಶ್ರೀ ಕಾಲಿಕಾ ಪುರಾಣಂ : 4 ಭಾಗಗಳು ; ಎಚ್. ಪಿ. ವೆಂಕಟರಾವ್ (ಅನು) ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ, 1944

# ಹೊನ್ನಮ್ಮನ ದೃಷ್ಟಿಯಲ್ಲಿ ಆದರ್ಶ ಸತಿ : ಅಂದು–ಇಂದು

**ವೈ. ಕೆ. ಸಂಧ್ಯಾ**

ಕನ್ನಡ ಸಾಹಿತ್ಯ ಚರಿತ್ರೆಯ ಪುಟಗಳನ್ನು ತಿರುವಿಹಾಕಿದಾಗ ಹಿಂದಿನಿಂದ ಇಂದಿನವರೆಗೂ ಕಾವ್ಯ ಪ್ರಕಾರದಲ್ಲಿ ಕೈಯಾಡಿಸಿದ ಸ್ತ್ರೀಯರು ಬಹಳ ಕಡಿಮೆ ಸಂಖ್ಯೆಯಲ್ಲಿ ಗೋಚರಿಸುತ್ತಾರೆ. ಹಿಂದೆ ಆಗಿಹೋದ ಕೆಲವೇ ಮಂದಿ ಕವಯಿತ್ರಿಯರಲ್ಲಿ ಸಂಚಿಯ ಹೊನ್ನಮ್ಮನೂ ಒಬ್ಬಳು. ಮೈಸೂರಿನ ಪ್ರಭುಗಳಾಗಿದ್ದ ಚಿಕದೇವರಾಜ ಒಡೆಯರ ಆಶ್ರಯದಲ್ಲಿ ಅವರ ಪ್ರೋತ್ಸಾಹದಿಂದ 'ಕಬ್ಬೊನ್ನು ಚೆಂಬೊನ್ನಾದಂತೆ' ಆಗಿ ಅವಳು ಬೆಲೆಯುಳ್ಳ ಕೃತಿಯೊಂದನ್ನು ರಚಿಸಿದ್ದಾಳೆ. ಹದಿನೇಳನೆಯ ಶತಮಾನ ಮೈಸೂರಲ್ಲಿ ಕನ್ನಡ ಸಾಹಿತ್ಯದ ಪುನರುಜ್ಜೀವನ ಕಾಲವೆನ್ನಬಹುದು. ಆಕೆಗೆ ಆಶ್ರಯದಾತರಾದ ಚಿಕದೇವರಾಜ ಒಡೆಯರು ಸ್ವತಃ ಕವಿಗಳು ಮತ್ತು ರಸಿಕರು. ಇವರ ಆಸ್ಥಾನದಲ್ಲಿ ತಿರುಮಲಾರ್ಯ, ಚಿಕುಪಾಧ್ಯಾಯ, ಸಿಂಗರಾರ್ಯ ಮುಂತಾದ ಅನೇಕ ದೊಡ್ಡ ದೊಡ್ಡ ಪಂಡಿತರು. ಇಂಥ ವಿದ್ವತ್‌ಪೂರ್ಣ ವಾತಾವರಣದ ಮತ್ತು ಪುನರುಜ್ಜೀವನ ಕಾಲದ ಪ್ರಭಾವಗಳನ್ನು ನಾವು ಅವಳ ಕೃತಿ ಹದಿಬದೆಯ ಧರ್ಮದಲ್ಲಿ ಗುರುತಿಸಬಹುದು.

ಹದಿಬದೆಯ ಧರ್ಮ ಲಲಿತವಾದ ಸಾಂಗತ್ಯದಿಂದ ಕೂಡಿ ಒಂಬತ್ತು ಸಂಧಿಗಳನ್ನು ಒಳಗೊಂಡಿದೆ. ಇಲ್ಲಿ ಕವಯಿತ್ರಿ ಧರ್ಮದೃಷ್ಟಿಯಿಂದ ವಿಶ್ಲೇಷಿಸಿ ದಾಂಪತ್ಯ ಜೀವನವನ್ನು ಎತ್ತಿ ಹಿಡಿಯುತ್ತಾಳೆ. 'ನಿರ್ಮಲ ಸತಿಯರ ಧರ್ಮ' ಈ ಕಾವ್ಯದ ಸಾರ. ರಾಮಾಯಣ, ಭಾರತ, ಮನ್ವಾದಿ ಧರ್ಮಶಾಸ್ತ್ರಗಳಲ್ಲಿ ಉಕ್ತವಾಗಿರುವ ಸತೀ ಧರ್ಮವನ್ನು ಗೃಹಿಣಿಯ ಬಾಳಿನ ಪರಮಗಂತವ್ಯವನ್ನು ಖಚಿತವಾಗಿ ತೋರಿಸಿಕೊಡಬೇಕೆಂಬುದೇ ಹೊನ್ನಮ್ಮನ ಆಶಯ. ಹೆಣ್ಣು ತವರು ಮನೆಯಲ್ಲಿ, ಗಂಡನ ಮನೆಯಲ್ಲಿ, ಮಗಳಾಗಿ, ಮಡದಿಯಾಗಿ, ಸೊಸೆಯಾಗಿ ಕಡೆಗೆ ಸವತಿಯಾಗಿ ಕೂಡ ಹೇಗೆ ಒಪ್ಪವಾಗಿ ಬಾಳಬೇಕು. ಇದಕ್ಕೆ ಅನುಸರಿಸಬೇಕಾದ ತತ್ವ, ನೀತಿಗಳನ್ನು ಅಚ್ಚುಕಟ್ಟಾಗಿ ಹೇಳಿದ್ದಾಳೆ. ಹಿಂದಿನ ಅನೇಕ ಶ್ರೇಷ್ಠ ಪುರಾಣಗಳಿಂದ ಉದಾಹರಣೆಗಳನ್ನು ಕೊಟ್ಟು ಸತಿಯರಿಗೆ ಮನವರಿಕೆ ಮಾಡಿಕೊಟ್ಟಿದ್ದಾಳೆ.

ಪಂಪನಿಂದ ಹೊನ್ನಮ್ಮನವರೆಗೂ ಏಳು ಶತಮಾನಗಳ ಸಾಹಿತ್ಯರಾಶಿ ಬೆಳೆದು ಬಂದಿದ್ದರೂ ಅವು ಕೇವಲ ಚಂಪೂ, ರಗಳೆ, ಷಟ್ಪದಿ ಇತ್ಯಾದಿಗಳಲ್ಲಿ ರಚನೆಯಾದ ಯಾರನ್ನಾದರೂ ಕುರಿತ ಕಾವ್ಯವಾಗಿರುತ್ತಿತ್ತು. ಆದರೆ ಈ ರೀತಿ ಸ್ತ್ರೀಯರಿಗೆ ಅವರ

ದಾಂಪತ್ಯ ಜೀವನದ ಬಗ್ಗೆ ಬೋಧಿಸುವ ಗ್ರಂಥ ಕಂಡುಬರುವುದು ಇದೇ ಮೊದಲು. ಇದು ಕನ್ನಡಕ್ಕೆ ಹೊಚ್ಚ ಹೊಸದು. ಈ ಗ್ರಂಥದಲ್ಲಿ ನೀತಿ, ಬುದ್ಧಿ ಮಾತುಗಳು ಹೇಳಿದ್ದರೂ ನೀತಿ ಗ್ರಂಥದಂತೆ ನೀರಸವಾಗಿ ಹೇಳಿಲ್ಲ. ಪತಿವ್ರತೆಯಾದ ಸ್ತ್ರೀಯು ತನ್ನ ಗಂಡನ ಜೊತೆ ಹೇಗಿರಬೇಕು, ಅಗಲಿದಾಗ ಹೇಗಿರಬೇಕು, ಅತ್ತೆ-ಮಾವ ಬಂಧು ಬಾಂಧವರೊಡನೆ ಹೇಗೆ ನಡೆದುಕೊಳ್ಳಬೇಕೆಂಬ ಮಾದರಿಯ ಚಿತ್ರ ಸೊಗಸಾಗಿ ಬಂದಿದೆ. ಪ್ರಸ್ತುತ ಸತಿಯರು ತಮ್ಮ ಗಂಡಂದಿರ ಜೊತೆ ಹೇಗಿರಬೇಕೆಂದು ಹೊನ್ನಮ್ಮ ಹೇಳಿರುವ ಮಾತುಗಳನ್ನು ವಿಶ್ಲೇಷಿಸಲಾಗಿದೆ. ಹೆಣ್ಣು ತನ್ನ ಇನಿಯ ನನ್ನು ಹೇಗೆ ಅನುವರ್ತಿಸಿಕೊಂಡಿರಬೇಕು ಅವನಿಗೆ ಹೇಗೆ ಉಪಚಾರವೆಸಗಬೇಕು ಎಂಬ ವಿಷಯಗಳನ್ನು ತಿಳಿಸುವುದಕ್ಕಾಗಿಯೇ ಈ ಗ್ರಂಥದ ಇಡೀ ಮೂರನೆಯ ಸಂಧಿ ಮೀಸಲಾಗಿದೆ.

ಮದುವೆಯಾಗಿ ಗಂಡನ ಮನೆ ಸೇರಿದ ಹೆಣ್ಣು ಹೊಸ ಜೀವನ, ಹೊಸ ಪರಿಸರದಲ್ಲಿ ಬಾಳಬೇಕಾಗುತ್ತದೆ. ಅಲ್ಲಿ ಅವಳಿಗೆ ಗಂಡನಿಂದ ಹಿಡಿದು ಪ್ರತಿಯೊಬ್ಬರೂ ಹೊಸಬರೇ. ಅವರ ರೀತಿ, ನೀತಿ, ಮನಸ್ಸು ಯಾವುದನ್ನೂ ಅರಿಯಳು ಈಕೆ. ಮುಗ್ಧೆ. ಗಂಡನ ವಿಷಯದಲ್ಲಿ ತುಂಬು ಪ್ರೀತಿ. ಆದರೆ ಅದನ್ನು ವ್ಯಕ್ತಪಡಿಸಲು ನಾಚಿಕೆ ಅಡ್ಡಿ. ಗಂಡನ ನೋಟವನ್ನು ಎದುರಿಸಲಾರದೆ ತಲೆ ತಗ್ಗಿಸುವಳು. ಪತಿಯನ್ನು ಪ್ರೀತಿಸುವುದೇ ಈ ಅಮಾಯಕಳ ಸ್ವಭಾವವಾಗಿಬಿಡುತ್ತದೆ. ಇಂಥ ಸತಿಯರಿಗೆ ಗಂಡ ಸಾಕ್ಷಾತ್ ನಾರಾಯಣನ ಸ್ವರೂಪ. ಹಗಲೂ ರಾತ್ರಿಯೆನ್ನದೆ ಅವನನ್ನು ಭಕ್ತಿಯಿಂದ ಸೇವಿಸಬೇಕು. ಅವನನ್ನು ಉಪಚರಿಸಬೇಕು. ಅವನ ವಿಷಯದಲ್ಲಿ ಮರೆ ಮೋಸಗಳನ್ನು ಮಾಡದೆ ತ್ರಿಕರಣಪೂರ್ವಕವಾಗಿ ಪ್ರಾಮಾಣಿಕತೆ ಯಿಂದ ನಡೆದುಕೊಳ್ಳಬೇಕು.

ಮುಂದೆ ಹೊನ್ನಮ್ಮ ಹೆಣ್ಣು ಗಂಡನನ್ನು ಹೇಗೆ ಅನುಗಾಲವೂ ಉಪಚರಿಸ ಬೇಕೆಂಬುದನ್ನು ಮನಶ್ಶಾಸ್ತ್ರೀಯವಾಗಿ ವಿಶ್ಲೇಷಿಸಿ ಹಲವಾರು ಸೂಚನೆಗಳನ್ನು ಕೊಡುತ್ತಾಳೆ. ಗಂಡನ ಅಭಿರುಚಿಗೆ ತಕ್ಕಂತೆ ಮಡದಿ ನಡೆದುಕೊಂಡಾಗ ಅವರ ಸಂಸಾರ ರಸಮಯ; ಅತಿ ಮಧುರ. ತನ್ನ ಸಿಂಗಾರದ ವಿಚಾರದಲ್ಲಿ ನಲ್ಲನ ರುಚಿ ಹೇಗಿದೆಯೆಂಬುದನ್ನು ಕುಶಲೆಯಾದವಳು ಮೊದಲೇ ತಿಳಿದು ಅದರಂತೆಯೇ ಸಿಂಗರಿಸಿ ಕೊಂಡು ಅವನನ್ನು ತಣಿಸಬೇಕು. 'ಆವ ಪರಿಯ ದೇಸಿ ಆಣ್ಮಗೆ ಬಗೆವರ್ಪುದು' ಅಂಥ ಅಂದ ಚಂದವಾದ ಉಡಿಗೆ ತೊಡಿಗೆಗಳನ್ನೇ ಧರಿಸಿ ಅವನ ಮೆಚ್ಚುಗೆ ಪಡೆಯ ಬೇಕು. ಹೀಗೆ ಅವನ ಮನಸ್ಸನ್ನು ತನ್ನ ಕಡೆಗೆ ಸೆಳೆದುಕೊಂಡು ಗೆಲ್ಲಬಹುದು.

'ಇಂತು ನೋಡುವೆನಿಂತು ನುಡಿವೆನಿಂತೆಸಗುವೆ
ನಿಂತು ಸೇರುವೆನಿಂತಿರುವೆ
ಇಂತು ಮನ್ನಿಪೆನಿಂತು ಮನಗರಿಗಿಪೆನೆಂದು
ಚಿಂತಿಪುದೇಕಚಿತ್ತದೊಳು'

ಈ ರೀತಿ ಕಾಂತೆ ನಲ್ಲ ಬರುವ ಮೊದಲೇ ಅವನ ವಿಷಯದಲ್ಲಿ ಆಸಕ್ತಿ ತಳೆದು, ಸಡಗರಗೊಂಡು ನಗುಮೊಗದಿಂದ ಅವನನ್ನು ಸ್ವಾಗತಿಸಬೇಕು. ಅವನ ದನಿ ಗೇಳುತ್ತಲೇ ಮುಗಿಲನ್ನು ಕಂಡ ನವಿಲು ಮುದಗೊಳ್ಳುವಂತೆ ಅನುರಾಗರಸದ ಅಲೆಯಲ್ಲಿ ಅವಳ ಸಂತಸ ಮೇರೆ ಮೀರಿ ಅವನಿಗೆ ಮರ್ಯಾದೆ ಮಾಡಬೇಕು. ಅವನ ಉಪಚಾರಕ್ಕೆ ತವಕಗೊಂಡು ಧಾವಿಸಬೇಕು ಹೀಗೆ ವಲ್ಲಭನ ಪರಿಚರ್ಯವೇ ಸತಿಯರಿಗೆ ಸುಖಕೊಡುವ ಸಂಗತಿಯಾಗಬೇಕು.

ಸಂಸಾರದಲ್ಲಿ ಬರುವ ಕಷ್ಟ ಕಾರ್ಪಣ್ಯಗಳನ್ನು ಕಂಡು ರೇಗಿ ಆರ್ಭಟ ಮಾಡಿ ಮನೆಯ ಶಾಂತಿಯನ್ನು ಕಲಕಬಾರದು. ಸತಿಯಾದವಳು ಸದಾ ಸಮಾಧಾನಚಿತ್ತೆ ಯವಳಾಗಿರಬೇಕು. ಯಾವಾಗಲೂ ಹುಬ್ಬು ಗಂಟಕ್ಕಿಕೊಂಡು, ಸುಳ್ಳು ಹೇಳುತ್ತ ಮನದಿನಿಯನಿಗೆ ಬೇಸರವನ್ನುಂಟುಮಾಡಬಾರದು. ನಗು ಚೆಲ್ಲುತ್ತ ಅವನನ್ನು ಸೇವಿಸಿ ತೃಪ್ತಿಗೊಳ್ಳಬೇಕು. ಪತಿಗೆ ಇಷ್ಟವಾದ ಕೆಲಸಗಳನ್ನೇ ಮಾಡುತ್ತ ಅವನಿಗೆ ಒಗ್ಗದ ವಿಷಯ, ವಸ್ತುಗಳನ್ನು ದೂರಕ್ಕೆ ಸರಿಸುತ್ತ ತನ್ನ ಆಕಾಂಕ್ಷೆ, ಮನವಾರ್ತೆ ಯನ್ನು ಸಮಯ ಸಂದರ್ಭವರಿತು ಪತಿಯೊಡನೆ ವಿನಯದಿಂದ ಬಿನ್ನವಿಸಿಕೊಳ್ಳ ಬೇಕು.

ಸಂಸಾರ ತಾಪತ್ರಯ ಮೆಲ್ಲಮೆಲ್ಲಗೆ ಪ್ರಾರಂಭವಾಗಲು ಪತಿಗೆ ಸಿಟ್ಟು ಬರುತ್ತದೆ. ಕೂಗಾಡುತ್ತಾನೆ. ಆಗ ಜಾಣಳಾದ ಪತ್ನಿ ಖಂಡಿತ ಅವನ ವಿಷಯದಲ್ಲಿ ಕೋಪಗೊಳ್ಳಬಾರದು. ಅದಕ್ಕೆ ಬದಲಾಗಿ ಅವನ ಕೋಪ, ಕೂಗಾಟದ ಸಮಯದಲ್ಲಿ ಅವನಿಗೆ ಎದುರು ಉತ್ತರ ಕೊಡದೆ ಮೌನವಾಗಿದ್ದುಬಿಟ್ಟರೆ ಅವನ ಕೋಪ ತಾನಾಗೇ ಶಾಂತವಾಗಿಬಿಡುತ್ತದೆ. ಅವನ ಕೋಪದ ಕಾವು ಆರಿದಮೇಲೆ ಯಾರೂ ಇಲ್ಲದಂಥ ಏಕಾಂತವನ್ನು ನೋಡಿ ಮೆಲು ಮಾತುಗಳಿಂದ ಸೂಕ್ಷ್ಮವಾಗಿ ಅವನ ತಪ್ಪನ್ನು ವಿನಯವಾಗಿ ತೋರಿಸಿಕೊಡಬೇಕು. ಅವನ ಯಾವ ಅನುಚಿತ ಕಾರ್ಯವನ್ನೂ ಇದು ಸರಿಯಲ್ಲ ಎಂದು ಹೆಂಡತಿ ಅದನ್ನು ಧೋರಣೆಯ ರೀತಿ ನೇಮಿಸದೆ ವಿನಯಳಾಗಿ ತಿಳಿ ಹೇಳಬೇಕು. ಅತೀ ಹೆದರಿಕೆಯಿಂದ ಕುಗ್ಗಿ ಹಿಂತೆಗೆಯುವುದಾಗಲೀ, ಮಿತಿ ಮೀರಿ ಮೇರೆವರಿಯುವುದಾಗಲೀ ಸಲ್ಲದು. ಸಮತೋಲವಾಗಿ ಅವನ ಮನಸ್ಸಿಗೆ ಹಿಡಿಯು ವಂತೆ ಸೇವೆ ಮಾಡಬೇಕು. ತಾನೆಷ್ಟೇ ವಿದ್ಯಾವತಿ, ರೂಪವತಿ, ಸಿರಿವತಿಯಾದರೂ ಈ ಎಲ್ಲ ಹಮ್ಮುಗಳನ್ನೂ ತೊರೆದು ಶುದ್ಧ ಮನಸ್ಕಳಾಗಿ ಪತಿಯ ಪಾದವೇ ಗತಿ ಯೆಂದು ನಂಬಿ ನಡೆಯುವುದು ಶ್ರೇಯಸ್ಕರ. ಅವನಿಟ್ಟಂತೆ ಬಾಳುವೆ ನಡೆಸುತ್ತೇನೆಂಬ ನೇಮ ಬೇಕು. ತನ್ನ ಮತ್ತು ತನ್ನ ಗಂಡನ ನಡುವೆ ನಡೆದ ಯಾವ ಮಾತುಕತೆ, ಸುದ್ದಿಯನ್ನಾಗಲಿ ಯಾರಿಗೂ ಹೇಳದೆ ಸಂಸಾರದ ಗುಟ್ಟನ್ನು ಕಾಪಾಡಬೇಕು. ತನ್ನ ಗಂಡನಿಗಾಗದವರು ತನಗೆ ಎಷ್ಟೇ ಆಪ್ತರಾಗಿರಲಿ ಅವರನ್ನು ದೂರವಾಗಿಟ್ಟು ಪತಿಯೇ ಪರದೈವ, ದೊರೆ ಎಂದು 'ಬಳಿವಿಡಿದಿನಿಯನ ಪಾದಾರವಿಂದದ ನೇಮ

ದೊಳಿಹುದು'. ಹೀಗಿದ್ದಾಗ ಸತಿಯರು ಪತಿಗೆ ಅಂತರಂಗದವರಾಗುತ್ತಾರೆ. ಹೀಗೆ ಖ್ಯಾತಿವೆತ್ತ ಪತಿವ್ರತೆಯರ ಸಾಲೇ ನಮ್ಮಲ್ಲಿದೆ. ಅನೇಕ ವಿಪತ್ಪರಂಪರೆಗಳನ್ನು ಎದುರಿಸಿಯೂ ಎಂಥ ಕಷ್ಟ ಸಮಯದಲ್ಲೂ ಪತಿಪ್ರತೆಯರಾದ ದಮಯಂತಿ, ಸೀತೆ, ದ್ರೌಪದಿ, ಅರುಂಧತಿ, ಅನಸೂಯೆ, ಲೋಪಾಮುದ್ರೆ ಮುಂತಾದ ಪತಿವ್ರತಾ ಸ್ತ್ರೀಯರು ಇಂದಿಗೂ ನಮಗೆ ದಾರಿದೀಪವಾಗಿದ್ದಾರೆ. ಈ ರೀತಿ ಪತಿವ್ರತಾ ಧರ್ಮ ನಮ್ಮ ಭಾರತೀಯ ಸ್ತ್ರೀಯರಲ್ಲಿ ರಕ್ತಗತವಾಗಿ ಬಂದಿದೆ. ಇವೇ ಮುಂತಾದ ಅನೇಕ ಉಪದೇಶಾತ್ಮಕ ಮಾತುಗಳಲ್ಲಿ ಹೊನ್ನಮ್ಮ ಗೃಹಿಣಿಯರಿಗೆ ಪತಿವ್ರತೆಯರಾಗಿ ಬಾಳುವ ನೀತಿ ಬೋಧಿಸುತ್ತಾಳೆ.

ಈ ಗ್ರಂಥ ಹೆಣ್ಣು ಮಕ್ಕಳಿಗೆ ಗಂಡನನ್ನು ಒಲಿಸಿಕೊಂಡು ತಮ್ಮ ಬಾಳನ್ನು ಸುಖಮಯವನ್ನಾಗಿ ಮಾಡಿಕೊಳ್ಳುವ ಗುಟ್ಟನ್ನು ತಿಳಿಸಿಕೊಡುತ್ತದೆ. ಇದರಿಂದ ಗೃಹಶಾಂತಿ, ರಸಮಯ ದಾಂಪತ್ಯ, ಆತ್ಮತೃಪ್ತಿ, ಸುಖವನ್ನು ಸಾಧಿಸುವ ಮಾರ್ಗ ತಿಳಿಯುತ್ತದೆ. ಮನಶ್ಶಾಸ್ತ್ರೀಯ ದೃಷ್ಟಿಯಿಂದ ಪರಿಶೀಲಿಸಿ ಹೇಳುವ ಹೊನ್ನಮ್ಮನ ಮಾತುಗಳಲ್ಲಿ ಅನೇಕ ಉಪಯುಕ್ತ ಅಂಶಗಳಿವೆ. ಗಂಡಂದಿರ ಚಿತ್ತವೃತ್ತಿಗಳನ್ನು ಅರಿತು ಸತಿಯರು ಅದಕ್ಕೆ ತಕ್ಕಂತೆ ವರ್ತಿಸಿದರೆ ಅವರ ಬಾಳು ಸುಗಮ ; ಸುರಮ್ಯ. ಮನೋವ್ಯಾಪಾರದ ದೃಷ್ಟಿಯಿಂದ ಕವಯಿತ್ರಿ ಹೇಳುವ ಮಾತುಗಳು ಗಮನಾರ್ಹ. ಕೆಲವು ದಿನ ಅವನು ಹೋದ ದಾರಿಯಲ್ಲೇ ಹೋದರೆ ಅವನೇ ಮುಂದೆ ತಮ್ಮದಾರಿಗೆ ಬರುತ್ತಾನೆ ಎಂದು ಸತಿಯರು ತಿಳಿದುಕೊಳ್ಳಬೇಕು.

ಮನೆಗೆಲಸದಲ್ಲಿ ತೊಡಗಿರುವ ಗೃಹಿಣಿಯರಿಗೆ ಬಾಳಿನ ಧ್ಯೇಯವೊಂದನು ತೋರಿಸಲು ಹೊನ್ನಮ್ಮ ಈ ಗ್ರಂಥ ರಚಿಸಿದ್ದಾಳೆ ಎಂದು ಹಿಂದೆ ಹೇಳಿದೆ. 17ನೆಯ ಶತಮಾನದಲ್ಲಿದ್ದ ಆದರ್ಶ ಮಹಿಳೆಯರು ಹೊನ್ನಮ್ಮ ವರ್ಣಿಸಿದ ಪತಿವ್ರತೆಯರಂತೆ ಇರಬಹುದು. ಆದರೆ 20ನೆಯ ಶತಮಾನದ ಗೃಹಣಿಯರು ಹೊನ್ನಮ್ಮ ಆಶಿಸಿದ ಆದರ್ಶ ವ್ಯಕ್ತಿತ್ವವನ್ನು ಸಾಧಿಸಲು ಎಷ್ಟರಮಟ್ಟಿಗೆ ಸಾಧ್ಯ ? ಹಿಂದಿನ ಕಾಲದ ಸ್ತ್ರೀಯರಿಗೆ ಮನೆಯೇ ಪ್ರಪಂಚ. ಗಂಡ, ಅತ್ತೆ–ಮಾವರ ಸೇವೆ, ಮನೆಗೆಲಸ, ಸಂಸಾರ ನಿಭಾಯಿಸಲು ಸಮೃದ್ಧ ವೇಳೆ ಇತ್ತು. ಅದರಂತೆ ಅವಳು ಆದರ್ಶ ಸತಿ, ಸೊಸೆ, ತಾಯಿಯಾಗಿ ಯಶಸ್ವಿಯಾಗುತ್ತಿದ್ದಳು. ತನ್ನ ಸ್ಥಾನ ಮನೆಯಲ್ಲಿ ಎಂದು ಒಪ್ಪಿಕೊಂಡು ಅವಳು ಬಾಳ್ವೆ ನಡೆಸುತ್ತಿದ್ದಳು. ಆಗಿನ ಕಾಲದ ನಂಬಿಕೆಗಳನ್ನು ನಂಬಿ ಹೊನ್ನಮ್ಮ ತಾನು ಕಂಡಿದ್ದ ವಿಷಯವನ್ನು ಪ್ರತಿಪಾದಿಸಿದ್ದಾಳೆ. ಆದರೆ ಈಗ ಕಾಲ ಬದಲಾಗಿದೆ. ಜೀವನದ ಸ್ಥಿತಿಗತಿಗಳು, ಒಲವು ನಿಲುವುಗಳು ಬದಲಾಗಿವೆ. ಹೊನ್ನಮ್ಮ ಹೇಳುವಂಥ ಪ್ರತಿವ್ರತೆಯರು ಇಂದೂ ಇದ್ದಾರೆಯೇ ಎಂದು ಅಚ್ಚರಿ. ಅಂದರೆ ಈಗಿನ ಕಾಲದಲ್ಲಿ ಪತಿವ್ರತೆಯರೇ ಇಲ್ಲ ಎಂದು ಅರ್ಥವಲ್ಲ. ಹದಿಬದೆಯ

ಧರ್ಮದಲ್ಲಿ ವರ್ಣಿತವಾಗಿರುವ ರೀತಿಯಲ್ಲಿ ಅಂಶ ಅಂಶಗಳಲ್ಲಿಯೂ ಅದೇ ಮಾದರಿಯಲ್ಲಿ ಇಂದು ನಡೆದುಕೊಳ್ಳಲು ಸಾಧ್ಯವೇ ಎಂದು ಪ್ರಶ್ನೆ. ಇಂದಿನ ಮಹಿಳೆ ಕೇವಲ ಪತಿಯ ಭೋಗದ - ವಸ್ತು, ಮನೆಯ ಬಂದಿಯಲ್ಲ. ಅವಳೂ ವಿದ್ಯಾವಂತಳಾಗಿ ಪತಿಗೆ ಸಮ ಸಮವಾಗಿ ನಾನಾ ರಂಗಗಳಲ್ಲಿ ಉದ್ಯೋಗಕ್ಕೆ ತೊಡಗಿದ್ದಾಳೆ. ಸಂಸಾರದ ಆರ್ಥಿಕ ಹೊರೆಯನ್ನೂ ತೂಗಿಸುವುದರ ಜೊತೆಗೆ ದೇಶದ ಉತ್ಪಾದನೆಯಲ್ಲಿ ಸಕ್ರಿಯವಾಗಿ ಪಾಲುಗೊಳ್ಳುತ್ತಿದ್ದಾಳೆ. ದಿಟ್ಟತನದಿಂದ ಮುಂದೆ ಬಂದು ಅನೇಕರಿಗೆ ಸಹಾಯಕಳಾಗಿ ದುಡಿಯುತ್ತಿದ್ದಾಳೆ. ಅವಳ ಜೀವನ ನಾಲ್ಕುಗೋಡೆಗಳ ಮಧ್ಯದಿಂದ ವಿಶಾಲ ಜಗತ್ತಿಗೆ ಸ್ಥಳಾಂತರವಾಗಿದೆ. ದಿನವೆಲ್ಲ ಯಾವುದಾದರೊಂದು ಕೆಲಸದಲ್ಲಿ ಮಗ್ನಳಾಗಿರುವ ಅವಳಿಗೆ ಹದಿಬದೆಯ ಧರ್ಮದ ಪ್ರತಿಯೊಂದು ಅಂಶವನ್ನೂ ನೆರವೇರಿಸಲು ಎಲ್ಲಿ ಬಿಡುವು ? ಜೊತೆಗೆ ಕುಟುಂಬಕ್ಕೆ ಸಮ ಹೆಗಲು ನೀಡಿರುವ ಆಕೆಗೆ ಈಗ ತಾನು ದಾಸಿ, ಪತಿ ದೇವರು, ಮನೆಯೇ ಧರ್ಮಾಶ್ರಮ ಎಂಬ ದೈನ್ಯ, ವಿನಯ, ಕೀಳರಿಮೆ, ಭಾವುಕ ಅಭಿಪ್ರಾಯಗಳು ಬಹಳಷ್ಟು ಕಡಮೆಯಾಗಿದೆ. ಹೀಗೆ ಭಾವನೆಗಳ ಪಲ್ಲಟ, ಸಮಯದ ಅಭಾವ ಇತ್ಯಾದಿ ಅನೇಕ ಇತರ ಕಾರಣಗಳಿಂದಾಗಿ ಈಗಿನ ಪತಿವ್ರತೆಯರ ಕ್ರಿಯೆಗಳು ಬದಲಾಗಿವೆ. ಆದರೆ ಮೂಲತಃ ಹೊನ್ನಮ್ಮ ಹೇಳಿರುವ ಅಂಶಗಳು ಅವರಲ್ಲಿ ನೆಲಗೊಂಡೇ ಇದೆ. ಕಾಲ ಪರಿವರ್ತನೆಗೆ ತಕ್ಕಂತೆ ಪಾತಿವ್ರತ್ಯದ ಕ್ರಿಯೆಗಳು ಮಾರ್ಪಾಡಾಗಿವೆ ಅಷ್ಟೆ.

ಹೊನ್ನಮ್ಮನ ಗ್ರಂಥ ಹೋರನೋಟಕ್ಕೆ ಗೊಡ್ಡಾಚಾರದ, ನೀತಿಯ ಕಂತೆ ಪುರಾಣಗಳಂತೆ ತೋರಬಹುದು. ಆದರೆ ಇದು ಹಳೆಯ ಮುತ್ತೈದೆಯರಿಗೇ ಸರಿ ಎಂದು ನಾವು ಮೂಗೆಳೆಯುವಂತಿಲ್ಲ. ಗಂಡ, ಹೆಂಡತಿ, ಸಂತಾನ, ಸಮಾಜ, ಸೃಷ್ಟಿ ಇರುವಷ್ಟು ದಿನವೂ, ನಿರಂತರವೂ ಎದುರಿಸಬೇಕಾದಂಥ ಸನ್ನಿವೇಶಗಳಿಗೆ ದೇಶ ಕಾಲಕ್ಕೆ ಬದ್ಧವಲ್ಲದ ಅಮೂಲ್ಯ ಮದ್ದನ್ನು ಅರೆದುಕೊಟ್ಟಿದ್ದಾಳೆ ಹೊನ್ನಮ್ಮ. ಕಾಲಾತೀತವಾದ ಸಫಲ ದಾಂಪತ್ಯಧರ್ಮದ ರಹಸ್ಯವನ್ನು ಸ್ತ್ರೀಯರಿಗೆ ತಿಳಿಸುತ್ತಾಳೆ. ಈ ಗ್ರಂಥದಲ್ಲಿ ಅಡಕವಾಗಿರುವ ಅಂಶಗಳನ್ನೇ ಸ್ವಲ್ಪ ಹೆಚ್ಚುಕಡಮೆ ಮಾಡಿ ಇಂದಿನ ಸಮಾಜಕ್ಕೆ ಹೊಂದುವಂತೆ ಅಲ್ಲಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡರೆ ಸರಿ ಹೋಗುತ್ತದೆ. ಆದರೆ ಅದರಲ್ಲಿರುವ ತಿರುಳು ಮಾತ್ರ ಗಟ್ಟಿಯಾಗಿ ಪಕ್ವವಾಗಿದೆ. ಈ ದೃಷ್ಟಿಯಿಂದ ಹೊನ್ನಮ್ಮನ ಈ ಕೃತಿ ಸಾರ್ವಕಾಲಿಕ ಶಾಶ್ವತ ಮೌಲ್ಯವನ್ನು ಳಿಸಿಕೊಂಡು ಬಾದಿದೆ ಎನ್ನಬಹುದು.

ಇಂದು, ಮಹಿಳೆಯರಿಗೆ ಸಂಬಂಧಪಟ್ಟ ಹಲವಾರು ವಿಷಯಗಳ ಮೇಲೆ ಅನೇಕ ಪುಸ್ತಕಗಳು ಬರುತ್ತಿವೆ. ಆದರೆ ಹೊನ್ನಮ್ಮ ಈಗ ಮೂರು ಶತಮಾನಗಳ ಹಿಂದೆಯೇ ಸ್ತ್ರೀಯರ ವಿಷಯದಲ್ಲಿ ಹಿತಾಸಕ್ತಿ ತಳೆದು ಸುದತಿಯರಿಗೊಂದು

ದಾಂಪತ್ಯ ದೀಪಿಕೆಯನ್ನು ತಯಾರು ಮಾಡಿಟ್ಟು ಹೋಗಿದ್ದಾಳೆ. ಗೃಹಿಣಿಯರಿಗೆ ಇದು ಒಂದು ಒಳ್ಳೆಯ ಕೈಪಿಡಿ. ಆದುದರಿಂದ ಇಂದಿನ ಮಹಿಳೆಯರು ಅವಳಿಗೆ ಕೃತಜ್ಞರು. ಅವಳ ಕೃತಿಯನ್ನು ಕೇವಲ ವಿಶ್ವಾಸವಾಗಿ ಕಂಡು ಮೆಚ್ಚುವುದು ಮಾತ್ರ ವಲ್ಲ ಹೊನ್ನಮ್ಮನ ಮಾತುಗಳನ್ನು ನಮ್ಮ ಸ್ತ್ರೀಯರು ಗ್ರಹಿಸಿ ಚೆನ್ನಾಗಿ ಮನನ ಮಾಡಿಕೊಳ್ಳಬೇಕು.

# ಆಂಗ್ಲ ಮಹಿಳಾ ಸಾಹಿತ್ಯ–ತೆರೆಮರೆಯ ಮೂರು ಚಿತ್ರಗಳು

**ಚಿ. ನ. ಮಂಗಳಾ**

## ವಿರಾಗಿಣಿ ಜ್ಯೂಲಿಯನ್ (1342–1443)

"......Because I am a woman should I believe that I ought not to tell you about the goodness of god?" ನಾನು ಹೆಣ್ಣಾದ ಮಾತ್ರಕ್ಕೆ ಭಗವಂತನ ಸದ್ಗುಣಗಳನ್ನು ಕುರಿತು ನಿಮಗೆ ಹೇಳಲೇಬಾರದು ಎಂಬು ದನ್ನು ನಂಬಬೇಕೆ?

ಈ ಪ್ರಶ್ನೆಯನ್ನು ಕೇಳಿದವಳು ನಾರಿಚ್‌ನ ಸಂತ ಜ್ಯೂಲಿಯನ್ ಇಗರ್ಜಿಗೆ ಸೇರಿದ ವಿರಾಗಿಣಿ ಮಾತೆ ಜೂಲಿಯನ್.

ಮಧ್ಯಯುಗದ ಈ ಮಹಿಳೆಯನ್ನು ಬರಹಗಾರ್ತಿ ಎನ್ನಬಹುದೆ? ಅವಳು ಬರೆದಿರುವ ಏಕೈಕ ಕೃತಿ 'ಭಗವದ್ ಪ್ರೇಮದ ದಿವ್ಯ ದರ್ಶನ' (The Revelations of Divine Love) ಸಾಹಿತ್ಯವೆನಿಸಿಕೊಳ್ಳುವುದೆ?

ಭಾವ ಬರಹ ಎರಡೂ ದೃಷ್ಟಿಯಿಂದ ಮಾತೆ ಜ್ಯೂಲಿಯನ್ನಳ ಕೃತಿ ಉತ್ತಮ ಸಾಹಿತ್ಯ. ಆದರೆ ಆ ಕೃತಿಯಲ್ಲಿ ಉಲ್ಲೇಖವಾಗಿರುವ ವಿಚಾರ ವಿವರ ಸತ್ಯವೋ ಮಿಥ್ಯವೊ? ನಂಬುವವರಿಗೆ ಸತ್ಯ. ನಂಬದವರಿಗೆ ಮಿಥ್ಯ.

ನಂಬುವವರೂ ನಂಬದವರೂ ಅಂದಿನಂತೆಯೇ ಇಂದಿಗೂ ಇರುವುದರಿಂದಲೇ ಈ ಕೃತಿ ಇಂದಿಗೂ ರಮ್ಯ.

ಆದರೆ ಜ್ಯೂಲಿಯನ್ನಳ ಕಾಲಕ್ಕೆ, ಅದರಲ್ಲೂ ಇಗರ್ಜಿಗಳಲ್ಲಿ, ವಿದ್ಯಾಲಯ ಗಳಲ್ಲಿ ಇದ್ದವರು ದಿನನಿತ್ಯದ ಘಟನೆಗಳಿಗಿಂತ ಭಿನ್ನವಾದ ಯಾವುದೇ ವಿಷಯ ವಾದರೂ ಅದಕ್ಕೆ ಹೆಚ್ಚಿನ ಬೆಲೆಯನ್ನು ಕೊಡುತ್ತಿದ್ದರು. ಗಮನ ಕೊಡುತ್ತಿ ದ್ದುದು ಅಷ್ಟೇ ಅಲ್ಲ ... ಅವನ್ನು ದೈವಿಕ ಅತಿಮಾನುಷ ಘಟನೆಗಳೆಂದೂ ಭವಿಷ್ಯದ ಸೂಚಕವೆಂದೂ ನಂಬುತ್ತಿದ್ದರು. ದಿವ್ಯ ದರ್ಶನವನ್ನು ಪಡೆದರೆನ್ನಲಾದ ಸಂತರನ್ನು ನೋಡಲು ಜನ ಸಾವಿರಾರು ಮೈಲು ಪ್ರಯಾಣ ಮಾಡುತ್ತಿದ್ದರು.

ಮಾತೆ ಜ್ಯೂಲಿಯನ್ ಬದುಕಿ ಬಾಳಿದ್ದು ಈ ಕಾಲದಲ್ಲಿ. ಆಕೆ ತನ್ನ ಇಡೀ ಜೀವನವನ್ನು ಭಗವಂತನ ಸೇವೆಗೆ ಮುಡಿಪಾಗಿಟ್ಟಳು. ಪ್ರಾರ್ಥನೆ, ಧ್ಯಾನ ಇವುಗಳಲ್ಲಿ ಅವಳ ಮನ ಲೀನವಾಯಿತು. ಧ್ಯಾನದಿಂದ ಸಮರ್ಪಣ ಭಾವದಿಂದ ಭಗವಂತನ

ಸಾನ್ನಿಧ್ಯವನ್ನು ಪಡೆಯಲೆಂದೆ, ಜೀವಿಸಿದ ಈ ಯೋಗಿನಿಯ ಕೃತಿ ಮಧ್ಯಯುಗದ ಆಂಗ್ಲ ಸಾಹಿತ್ಯಕ್ಕೆ ಮಹಿಳೆಯೊಬ್ಬಳ ವಿಶಿಷ್ಟ ಕೊಡುಗೆ.

ಜ್ಯೂಲಿಯನ್ನಳ ಬಾಲ್ಯದ ಬಗ್ಗೆ ಹೆಚ್ಚಿಗೆ ಏನೂ ತಿಳಿದಿಲ್ಲ. ಅವಳು ತನ್ನ ಹುಟ್ಟೂರಾದ ನಾರಿಚ್‌ನ ಹೊರಗೆ ಅಡಿಯಿಟ್ಟಿರುವಂತೆ ಕಾಣುವುದಿಲ್ಲ. ತಂದೆತಾಯಿ ಅವಳಿಗಿಟ್ಟ ಹೆಸರೇನು ? ಅದೂ ಗೊತ್ತಿಲ್ಲ. ಜ್ಯೂಲಿಯನ್ ಇಗರ್ಜಿಗೆ ಹೋಗಿ ಸೇರಿ ವೈರಾಗ್ಯದ ಜೀವನ ನಡೆಸಲು ನಿರ್ಧರಿಸಿದಾಗ ಆಕೆಯೇ ಆರಿಸಿಕೊಂಡ ಹೆಸರು 'ಜ್ಯೂಲಿಯನ್'.

ಜ್ಯೂಲಿಯನ್ ತನ್ನ ಕೃತಿಯಲ್ಲಿ ಹೀಗೆ ಬರೆದಿದ್ದಾಳೆ. "ಕ್ರಿಸ್ತನು ಅನುಭವಿಸಿದ ಯಾತನೆಗಳ ಅನುಭವ ನನಗೂ ಆಗಬೇಕೆಂಬುದು ನನ್ನ ಆಸೆಯಾಗಿತ್ತು." ಈ ಆಸೆ ನಿರಾಸೆಯಾಗಲಿಲ್ಲ, ಅವಳಿಗೆ ಮೂವತ್ತು ವರುಷವಾಗಿದ್ದಾಗ ಎರಡು ರಾತ್ರಿ ಅವಳು ಬಯಸಿದ ದಿವ್ಯಾನುಭವವಾಯಿತು.

ಈ ಅನುಭವದ ಅನಂತರ ಅವಳು ವಿರಾಗಿಣಿಯಾಗಿರಲು ನಿರ್ಧರಿಸಿದಳು. ಇಗರ್ಜಿಯ ಮಗ್ಗುಲಿಗಿದ್ದ ಒಂದು ಪುಟ್ಟ ಕೋಣೆ ಅವಳ ವಾಸಸ್ಥಾನವಾಯಿತು. ಕೋಣೆಯ ಒಂದು ಮಗ್ಗುಲಿಗಿದ್ದ ಸಣ್ಣ ಕಿಟಕಿಯ ಮೂಲಕ ಅವಳು ಇಗರ್ಜಿಯಲ್ಲಿ ನಡೆಯುವ ಎಲ್ಲ ಕಾರ್ಯಕ್ರಮಗಳನ್ನೂ ನೋಡಬಹುದಾಗಿತ್ತು. ಅಲ್ಲದೆ ಪ್ರಸಾದ ವನ್ನೂ ಸ್ವೀಕರಿಸಬಹುದಾಗಿತ್ತು. ಇನ್ನೊಂದು ಕಿಟಕಿಯಿದ್ದುದು ಇಗರ್ಜಿಯ ರುದ್ರಭೂಮಿಯ ಕಡೆಗೆ. ಈ ಕಿಟಕಿಯ ಮೂಲಕ ಮಾತೆ ಜ್ಯೂಲಿಯನ್ ಇಗರ್ಜಿಗೆ ಬರುತ್ತಿದ್ದ ಭಕ್ತಾದಿಗಳ ಹಾಗೂ ಯಾತ್ರಿಕರ ಜೊತೆಯಲ್ಲಿ ಮಾತನಾಡುತ್ತಿದ್ದಳು. ಅವರ ನೂರಾರು ಸಮಸ್ಯೆಗಳಿಗೆ ಸಮಾಧಾನವನ್ನೂ ಪರಿಹಾರವನ್ನೂ ಸೂಚಿಸು ತ್ತಿದ್ದಳು.

ಹದಿನೈದನೆಯ ಶತಮಾನದ ಮೊದಲಿಗೆ ಜ್ಯೂಲಿಯನ್ನಳನ್ನು ನೋಡ ಬಂದವ ರಲ್ಲಿ ಪ್ರಮುಖಳು ಮಾರ್ಜರಿ ಕೆಂಪ್. ಈಕೆಗೂ ಹಲವಾರು ದಿವ್ಯಾನುಭವಗಳು ಆಗಿದ್ದವು. ಆದರೆ ಅವಳು ವಿರಾಗಿಣಿಯಲ್ಲ. ತನಗಾದ ಅನುಭವಗಳು ದೈವಿಕವೆ ಎಂಬುದನ್ನು ತಿಳಿಯಲು ಬಂದವಳು ಅವಳು.

ಒಬ್ಬರಿಗಾಗುವ ಅನುಭವಗಳು ನಾಡಬಾಂಧವರಿಗೆ ಕೆಡುಕನ್ನು ಬಗೆಯದೆ ಹೋದರೆ ಅವನ್ನು ದೇವರ ಆದೇಶವೆಂದೇ ತಿಳಿಯಬೇಕೆಂದು ಹೇಳಿದ್ದಾಳೆ ಜ್ಯೂಲಿಯನ್.

ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲೂ ಪ್ಯಾರಿಸಿನಲ್ಲೂ ಕೃತಿಯ ಎರಡು ಪ್ರತಿಗಳಿವೆ. ಜ್ಯೂಲಿಯನ್ ತನ್ನ ಕೃತಿಯನ್ನು ಬರೆದಮೇಲೆ ಈ ಪ್ರತಿಗಳನ್ನು ಮಾಡಿರಬೇಕು. ಆದರೆ ಹದಿನೇಳನೆಯ ಶತಮಾನದ ಆದಿಯವರೆಗೂ ಕೃತಿ

ಮುದ್ರಿತವಾಗಲಿಲ್ಲ, ಕೃತಿಯು ಎರಡು ರೂಪಗಳಿವೆ. ಒಂದು ಸಂಕ್ಷಿಪ್ತ. ಕೃತಿಯು ಶೈಲಿ ಸರಳವಾಗಿದೆ. ನಿರೂಪಣೆಯಲ್ಲಿ ಅವಳ ನಂಬಿಕೆ ಸ್ಪಷ್ಟವಾಗಿ ಮೂಡಿದೆ. ಆಗ ಬಳಕೆಯಲ್ಲಿದ್ದ ಪೂರ್ವ ಆಂಗ್ಲಿಯನ್ ಪ್ರಾಂತಭಾಷೆಯಲ್ಲಿ ಕೃತಿ ರಚಿತವಾಗಿದೆ.

ತನ್ನ ಜೀವನ ಒಂದು ಆಧ್ಯಾತ್ಮಿಕ ಪಯಣ ಎಂದು ಭಾವಿಸಿದ್ದಳು ಜ್ಯೂಲಿಯನ್. ಕೃತಿಯಲ್ಲಿ ಒಂದೆಡೆ ಹೀಗೆ ಬರೆದಿದ್ದಾಳೆ.

"I saw Him and I sought Him ;
I had Him and I wanted Him."

ಭಗವಂತನನ್ನು ಮೊದಲು ತನ್ನ ಅರಿವಿನ ಬಿಂದುವಿನಲ್ಲಿ ಕಂಡು ಅನಂತರ ಎಲ್ಲೆಲ್ಲಿಯೂ ಎಲ್ಲದರಲ್ಲಿಯೂ ಅವನನ್ನೇ ಕಂಡವಳು ಜ್ಯೂಲಿಯನ್.

ಸುಲಭ ಸುಂದರ ಸರಳ ಶೈಲಿಯಲ್ಲಿರುವ ಈ ಕೃತಿಯುನ್ನು ಓದುವಾಗ ಶಿವ ಶರಣೆಯರ ವಚನಗಳ ಭಾವ ಭಾಷೆ ಎರಡರ ನೆನಪೂ ಆಗುತ್ತದೆ. ಜ್ಯೂಲಿಯನ್ ತನ್ನ ಹೇಳಿಕೆಗಳನ್ನು ಮೂರಾಗಿ ವಿಂಗಡಿಸಿದ್ದಾಳೆ. '3' ಆಕೆಯನ್ನು ಬಹುವಾಗಿ ಆಕರ್ಷಿಸಿದ ಸಂಖ್ಯೆ. '3' ದಿವ್ಯ ತ್ರಿಮೂರ್ತತೆಯ ಸಂಕೇತ – ತಂದೆಮಗ, ದಿವ್ಯ ಶಕ್ತಿಯು (Father, Son and Holy Spirit) ಆದೇಶ.

ತಾನು ಹೊಸ ವಿಚಾರಗಳೇನನ್ನೂ ಹೇಳುತ್ತಿಲ್ಲವೆಂದೂ ಏಸುಕ್ರಿಸ್ತನ ಸಂದೇಶದ ಸಾರವೇ ತನ್ನ ಅನಿಸಿಕೆಗಳ ಮೂಲವೆಂದೂ ಸ್ಪಷ್ಟಪಡಿಸಿದ್ದಾಳೆ.

1373ರ ಮೇ ತಿಂಗಳ ಎಂಟರಂದು ಮೊದಲ ಬಾರಿಗೆ ಜ್ಯೂಲಿಯನ್ನಳಿಗೆ ದಿವ್ಯ ದರ್ಶನವಾಯಿತು. ಅದಕ್ಕೆ ಮೊದಲು ಐದು ದಿನಗಳ ಕಾಲ ಅವಳಿಗೆ ತೀವ್ರ ಅನಾರೋಗ್ಯವಾಗಿತ್ತು. ಸಾವು ಬದುಕಿನ ನಡುವೆ ತೂಗುಯ್ಯಾಲೆಯಾಡುತ್ತಿತ್ತು ಅವಳ ಜೀವ. ಆ ಬವಣೆಯನ್ನು ಅವಳು ಹೀಗೆ ವರ್ಣಿಸಿದ್ದಾಳೆ.

"And being in youth as yet, I thought it great sorrow to die ; but for nothing that was in earth that me liked to live for, nor for no pain that I had fear of, for I trusted in God of His mercy. But it was to have lived that I might have loved God better and longer time, that I might have the more knowing and loving of God in bliss of Heaven."

ಒಂದು ಕ್ಷಣದಲ್ಲಿ ಅವಳ ನೋವು ಮಾಯವಾಗಿತ್ತು. ಎದುರಿಗೆ ಕಾಣುತ್ತಿದ್ದುದು ಶಿಲುಬೆಯ ಮೇಲಿನ ಏಸುವಿನ ಚಿತ್ರ. ಏಟು ತಿಂದ ದೇಹ. ರಕ್ತ ಸೋರುತ್ತಿದ್ದ ತಲೆ. ಕಾಲ್ವರಿಯ ಬೆಟ್ಟವೊಂದರಮೇಲೆ ಶಿಲುಬೆಗೇರಿಸಲ್ಪಟ್ಟ ಏಸುಕ್ರಿಸ್ತನ ಆ ಮುಖಭಾವ ಒಮ್ಮೆಗೇ ಬದಲಾಯಿತು. ಅವಳ ಭಾವವೂ

ಬದಲಾಯಿತು. ಇದನ್ನು ಕುರಿತು ಹೀಗೆ ಬರೆದಿದ್ದಾಳೆ. 'And right in the same time that me thought, by the seeming, the life might no longer last ... Suddenly He changed His blessed countenance. The changing of His blessed countenance changed mine, and I was as glad and merry as it was possible. Then brought our Lord merrily to my mind, "where is now any point of thy pain or of thy grief ? and I was full merry".

ಏಸುವಿನ ಯಾತನೆಯ ನಿಜವಾದ ಅರ್ಥವನ್ನು ಗ್ರಹಿಸಿದ ಜ್ಯೂಲಿಯನ್ ತನ್ನ ಅಭಿಪ್ರಾಯವನ್ನು ಹೀಗೆ ಬರೆದಿದ್ದಾಳೆ.

'A glad giver taketh but little heed of the thing that he giveth, but all his desire and his intent is to please him and solace him to whom he giveth it, and if the receiver take the gift highly and thankfully, then the courteous giver setteth at naught all his cost and all his travail, for joy and delight that he hath pleased and solaced him that he loveth.'

ಈ ದಿವ್ಯ ದರ್ಶನವಾದ ಬಳಿಕ ಅವಳ ಆರೋಗ್ಯ ಮತ್ತೆ ಕೆಟ್ಟಿತು. ಆದರೆ ಧೃತಿಗೆಡದೆ ದೇವರ ಧ್ಯಾನದಲ್ಲಿ ಮಗ್ನಳಾದಳು.

"In Grace we have our fulfilling"

ಭಗವಂತನ ಕರುಣೆಯಿದ್ದರೆ ನಮ್ಮಲ್ಲಿ ಪರಿಪೂರ್ಣತೆ. ಇಲ್ಲದಿದ್ದರೆ ಶೂನ್ಯತೆ ಎಂದು ನಂಬಿದ್ದವಳು ಜ್ಯೂಲಿಯನ್.

ಒಂದು ಸಲ ಅಂಗೈಯಲ್ಲಿ ಒಂದು ಸಣ್ಣ ಬೀಜವನ್ನು ಇಟ್ಟುಕೊಂಡು ಅದರ ಬಗ್ಗೆ ಯೋಚಿಸಿದಳು. ಈ ಬೀಜದ ಅರ್ಥವೇನಿರಬಹುದು ? ಅದಕ್ಕೆ ಅವಳ ಉತ್ತರ ಹೀಗಿದೆ.

"In this little Thing I saw three properties : the first is that God made it ; the second is that God loveth it ; the third that God keepeth it."

ದೇವರು ಮಾನವನಿಗೆ ಕೊಟ್ಟ ಸಂದೇಶವೇನು ? ಜ್ಯೂಲಿಯನ್ ಹೀಗೆ ನುಡಿದಿದ್ದಾಳೆ.

"He said not thou shalt not be tempested thou shalt not be travailed, thou shalt not be afflicted." But he said "thou shalt not be overcome."

ಮಾನವನನ್ನು ಮೀರಿಸಬಲ್ಲವರಿಲ್ಲ ಎಂಬ ಅಚಲ ನಂಬಿಕೆಯನ್ನು ಹೊಂದಿದ್ದವಳು ಜ್ಯೂಲಿಯನ್.

ಎರಡನೆಯ ಮಹಾಯುದ್ಧದ ಕಾಲದಲ್ಲಿ ಪುರಾತನವಾದ ಸಂತ ಜ್ಯೂಲಿಯನ್ ಇಗರ್ಜಿಯ ಮೇಲೆ ಸಿಡಿದ ಜರ್ಮನ್ ಬಾಂಬೊಂದು ಇಡೀ ಇಗರ್ಜಿಯನ್ನೇ ನೆಲಸಮಮಾಡಿತು. ಇಗರ್ಜಿ ನಾಶವಾದಾಗ ಅದರ ಜೊತೆಯೇ ಜ್ಯೂಲಿಯನ್ನಳು ವಾಸಸ್ಥಾನವಾಗಿದ್ದ ಕೋಣೆಯೂ ನಾಶವಾಯಿತು. ಆ ಜಾಗದಲ್ಲಿ ಈಗ ಖಾಸಗೀ ಪ್ರಾರ್ಥನಾ ಮಂದಿರವೊಂದು ಎದ್ದು ನಿಂತಿದೆ.

ಜ್ಯೂಲಿಯನ್ ಕಾಲವಾಗಿ ಶತಮಾನಗಳುರುಳಿವೆ. ಅವಳಿದ್ದ ಕೋಣೆಯೂ ಇಲ್ಲವಾಗಿದೆ. ಆದರೆ ಅವಳ ಕೃತಿ ಮಾತ್ರ ಬಾಳಿಗೊಂದು ಬೆಳಕಾಗಿದೆ.

**ಮಾರ್ಗರೆಟ್ ಪ್ಯಾಸ್ಟನ್**

ಹದಿನೈದನೆಯ ಶತಮಾನದ ಮಧ್ಯಕಾಲ. 1485ರಲ್ಲಿ ಯುದ್ಧ[1] ಮುಗಿದು ವಾತಾವರಣ ಸ್ವಲ್ಪ ತಿಳಿಯಾಗಿತ್ತು. ಆಗ ನಾರ್'ಫೋಕಿನ ಕುಟುಂಬವೊಂದರಲ್ಲಿ ಪತ್ರವ್ಯವಹಾರ ಮಾತ್ರ ತಪ್ಪದೆ ನಡೆದಿತ್ತು. ಈ ಕುಟುಂಬವೇ ಪ್ಯಾಸ್ಟನ್ ಕುಟುಂಬ. ಈ ಕುಟುಂಬದಲ್ಲಿ ನಡೆದ ಪತ್ರವ್ಯವಹಾರ ಎಂದಾದರೊಂದುದಿನ ಪ್ರಕಟವಾಗಿ ವಯ್ಯಕ್ತಿಕ ಕಾಗದ ಪತ್ರಗಳು ಸರ್ವರ ಸ್ವತ್ತಾಗಬಹುದೆಂದು ಅವರು ಖಂಡಿತವಾಗಿಯೂ ಕನಸು ಕಂಡಿರಲಾರರು. 'ಓದಿದಕೂಡಲೆ ಸುಟ್ಟುಹಾಕಿಬಿಡಿ' ಎಂದೇ ಪ್ರತಿಯೊಂದು ಪತ್ರವೂ ಕೊನೆಗೊಳ್ಳುತ್ತಿತ್ತು. ಆದರೆ ಈ ಕುಟುಂಬದವನಾದ ಜಾನ್ ಪ್ಯಾಸ್ಟನ್ ಪ್ರತಿಯೊಂದು ಪತ್ರವನ್ನೂ ಸಂಗ್ರಹಿಸಿ ಇಟ್ಟಿದ್ದರಿಂದ ಅವು ಉಳಿದು ಬಂದವು. ಈ ಸಂಗ್ರಹಕಾರ್ಯ 1509ರ ವರೆಗೂ ನಡೆಯಿತು. ಅನಂತರ ಬಂದವರು ಅವನ್ನು ಹಾಗೇ ಇಟ್ಟು ಕೊನೆಗೆ 1729ರಲ್ಲಿ ಸರ್ ವಿಲಿಯಮ್ ಪ್ಯಾಸ್ಟನ್ ಹಣಕ್ಕಾಗಿ ಆ ಪತ್ರಗಳನ್ನು ಪ್ರಾಚೀನ ವಸ್ತು ಸಂಗ್ರಹಕಾರನೊಬ್ಬನಿಗೆ ಮಾರಿಬಿಟ್ಟ. ಈ ಪತ್ರಗಳು ಅನೇಕ ಬಾರಿ ಕೈ ಬದಲಾಗಿ ಕೊನೆಗೆ ವಿಲಿಯಮ್ ಫೆನ್ ಎಂಬುವನ ಕೈ ಸೇರಿದವು. 1787ರಲ್ಲಿ ಆತ ಅವುಗಳಲ್ಲಿ ಕೆಲವನ್ನು ಪ್ರಕಟಿಸಿದ.

ಹದಿನೈದನೆಯ ಶತಮಾನದ ಸಾಮಾಜಿಕ ಹಾಗೂ ಕೌಟುಂಬಿಕ ಜೀವನದ ಚಿತ್ರಣವಾಗಿ ಈ ಪತ್ರಗಳ ಮೌಲ್ಯ ಅಪಾರ. ಸಿರಿವಂತ ಜಮೀನುದಾರ ಕುಟುಂಬವೊಂದರ ಆಗುಹೋಗುಗಳನ್ನು ಸೊಗಸಾಗಿ ಚಿತ್ರಿಸಿವೆ ಈ ಪತ್ರಗಳು. ಈ ಪತ್ರಗಳಿಗೆ ಸಮಯ ಸನ್ನಿವೇಶಗಳೇ ಸ್ಫೂರ್ತಿ. ಅಲ್ಲದೆ ಆಗ ನಡೆದಿದ್ದ ಅಂತರ್ಯುದ್ಧದ

---

1 Wars of the Roses

ಪ್ರಭಾವ ಜನರ ಮೇಲೆ ಏನಾಗಿತ್ತು ಎಂಬುದಕ್ಕೆ ಈ ಪತ್ರಗಳಲ್ಲಿ ಸಾಕಾದಷ್ಟು ನಿದರ್ಶನಗಳಿವೆ.

ಈ ಪತ್ರಗಳ ಇನ್ನೊಂದು ವಿಶೇಷವೆಂದರೆ ಈ ಪತ್ರಗಳನ್ನು ಬರೆದ ಮಹಿಳೆಯರ ದಿನ ನಿತ್ಯದ ಆಸೆ ಆಕಾಂಕ್ಷೆ, ಬೇಡಿಕೆ ಕೋರಿಕೆಗಳು ಸಾಮಾನ್ಯವಾಗಿ ಎಲ್ಲ ಮಹಿಳೆಯರ ಅಂತರಂಗವನ್ನೂ ಜೀವನದಲ್ಲಿ ಅವರ ಪಾತ್ರವನ್ನೂ ಪ್ರತಿನಿಧಿಸುತ್ತವೆ.

ಆ ಕುಟುಂಬದ ಪುರುಷರು ಕಾರ್ಯನಿಮಿತ್ತ ಅನೇಕ ದಿನಗಳವರೆಗೆ ಮನೆಯಿಂದ ಹೊರಗೆ ಉಳಿಯಬೇಕಾಗುತ್ತಿತ್ತು. ಇವರ ಪತ್ನಿಯರು ನಾರ್‌ಫೋಕಿನಲ್ಲಿ ಮನೆಗಳನ್ನೂ ಜಮೀನನ್ನೂ ನೋಡಿಕೊಳ್ಳಬೇಕಾಗುತ್ತಿತ್ತು. ಪತ್ರಗಳನ್ನು ಬರೆದಿರುವವರು ಹೆಚ್ಚಾಗಿ ಈ ಮಹಿಳೆಯರೆ.

ಸರ್ ವಿಲಿಯಂ ಪ್ಯಾಸ್ಟನ್ನಿನ ಪತ್ನಿ ಆಗ್ನೆಸ್ ಹಾಗೂ ಅವಳ ಸೊಸೆ ಜಾನ್ ಪ್ಯಾಸ್ಟನ್ನಿನ ಪತ್ನಿ ಮಾರ್ಗರೆಟ್ ಇಬ್ಬರದೂ ತೀರ ಭಿನ್ನ ವ್ಯಕ್ತಿತ್ವ. ಆದರೆ ಇಬ್ಬರೂ ಅಸಾಧಾರಣ ಪ್ರತಿಭೆಯ ಮಹಿಳೆಯರು. ದೊಡ್ಡ ಸಂಸಾರದ ನಿರ್ವಹಣೆ ಇವರದು. ಇವರಿಬ್ಬರೂ ದೂರದ ಊರುಗಳಲ್ಲಿದ್ದ ತಮ್ಮ ಗಂಡಂದಿರಿಗೆ ಮನೆಯ ಆಗುಹೋಗುಗಳ ಬಗ್ಗೆ ತಪ್ಪದೆ ಕಾಗದ ಬರೆಯುತ್ತಿದ್ದರು.

ಸುಮಾರು 1440ರಲ್ಲಿ ಆ್ಯಗ್ನೆಸ್ ತನ್ನ ಪತಿಗೆ ಬರೆದ ಕಾಗದದಿಂದ ಈ ಪತ್ರ ಗುಚ್ಛ ಆರಂಭ. ಆಗಿನ್ನೂ ಮಾರ್ಗರೆಟ್ ಮನೆಗೆ ಸೊಸೆಯಾಗಿ ಬಂದಿರಲಿಲ್ಲ. ಮಾರ್ಗರೆಟ್‌ಳನ್ನು ಸೊಸೆಯಾಗಿ ತಂದುಕೊಳ್ಳುವ ವಿಷಯದ ಪ್ರಸ್ತಾಪ ಅಲ್ಲಿದೆ. ಆ ಪತ್ರದಲ್ಲಿನ ಒಂದು ಭಾಗ ಸ್ವಾರಸ್ಯವಾಗಿದೆ.

Dear husband..............................

..............................................

..............................................

I send you good tidings of the coming and bringing home of the gentlewoman that ye weeten (know) of from Reedham this same night according to appointment that ye made therefor yourself.

The parson of stockton told me that if ye would buy her a gown, her mother would give there to a goodly fur; the gown needeth to be had; and of colour it would be a goodly blue or else a bright sanguine.

I pray you to buy for me two pipes of gold.. ...........

ಹೊಸ ಗೌನು ಒಳ್ಳೆಯ ಫರ್‌ಕೋಟು ಇವೆರಡನ್ನೂ ಪಡೆದು ಮಾರ್ಗರೆಟ್ ಮನೆಗೆ ಸೊಸೆಯಾಗಿ ಬಂದಳು. ತನ್ನ ಸರ್ವಸ್ವವನ್ನೂ ಮನೆ, ಮಕ್ಕಳು, ಪತಿ ಇವರಿಗಾಗಿ ಮೀಸಲಾಗಿಟ್ಟಳು.

ಮಾರ್ಗರೆಟಳ ಪತ್ರಗಳು ಅವಳ ದೂರದರ್ಶಿತ್ವವನೂ, ಮನಸ್ಥೈರ್ಯವನ್ನೂ ವ್ಯವಹಾರ ಜ್ಞಾನವನ್ನೂ ತಿಳಿಸುತ್ತವೆ.

1443ರಲ್ಲಿ ಮಗ ಒಂದು ವರುಷದವನಾಗಿದ್ದಾಗ ಲಂಡನ್ನಿನಲ್ಲಿದ್ದ ಪತಿಗೆ ಬರೆದ ಕಾಗದದಲ್ಲಿ ಆತನಿಗೆ ತೀವ್ರ ಅನಾರೋಗ್ಯವಾಗಿದ್ದಾಗ ಅತ್ತೆ ಸೊಸೆಯರಿಬ್ಬರೂ ಎಷ್ಟು ಆತಂಕ ಪಟ್ಟರು. ಯಾವೆಲ್ಲ ದೇವರಿಗೆ ಹರಕೆ ಹೊತ್ತರು. ತೀರ್ಥಯಾತ್ರೆಗಳನ್ನು ಮಾಡಲು ನಿರ್ಧರಿಸಿದರು ಎಂಬುದಿದೆ.

"My mother behested (vowed) another image of wax of the weight of you, to our lady of Walsingham and she sent four nobles (coins worth 6 s 8 d) to the four orders of friars at Norwich to pray for you; I have behested to go on Pilgrimage to Walsingham and in St Leonards (at Norwich) for you; by my troth, I had never so heavy a season as I had from the time that I wist of your sickness"

ಈ ಆತಂಕ, ಈ ಯಾತನೆ, ಈ ಪ್ರಾರ್ಥನೆ ಸಾರ್ವಕಾಲಿಕವಾದ ಕೆಲವೊಂದು ಜೀವಂತ ನಂಬಿಕೆಗಳ ಪ್ರತೀಕ.

ಮಾರ್ಗರೆಟಳು ಬರೆದ ಅನೇಕ ಕಾಗದಗಳಲ್ಲಿ ಅವರ ಜಮೀನನ್ನು ಸಾಗುವಳಿ ಮಾಡುತ್ತಿದ್ದ ಜನರ ಬವಣೆ, ಇವರೊಂದಿಗೆ ಅವರ ವ್ಯಾಜ್ಯ, ಮೊದಲಾದವುಗಳ ವಿವರವಿದೆ. ಈ ವ್ಯಾಜ್ಯಗಳಲ್ಲಿ ಮಾರ್ಗರೆಟ್ ಸೋತಾಗ ಮುಂದಾಗುತ್ತಿದ್ದವಳು ಆ್ಯಗ್ನೆಸ್.

ಸ್ವೈಲ್ ಥೋರ್ಪಿನಲ್ಲಿದ್ದ ಜಾನ್‌ನ ಜಹಗೀರು ಅವನಿಗೆ ರಾಜ ಆರನೆಯ ಹೆನ್ರಿ ಅವನ ಸೇವೆಗೆ ಪ್ರತಿಯಾಗಿ ಕೊಟ್ಟಿದೆಂದೂ ಆದ್ದರಿಂದ ಜಾನ್ ಯಾವ ನಿಮಿಷದಲ್ಲೇ ಆದರೂ ನಾರಿಚ್‌ನ ಕೋಟೆ ಮನೆಗೆ ಒಬ್ಬ ಸೈನಿಕನನ್ನು ಕಳುಹಿಸಲು ಸಿದ್ಧನಾಗಿರಬೇಕೆಂದೂ ಜೊತೆಗೆ ರಾಜನಿಗೆ ಕಾಣಿಕೆಯಾಗಿ ವರುಷಕ್ಕೆ ಮೂವತ್ತು ಷಿಲ್ಲಿಂಗುಗಳನ್ನು ನೀಡಬೇಕೆಂದೂ ಬಂದ ವರ್ತಮಾನವನ್ನು ಗಂಡನಿಗೆ ಮಾರ್ಗರೆಟ್ ತಿಳಿಸಿದ್ದೂ ಪತ್ರದಿಂದಲೆ.

1459 ರಲ್ಲಿ ರಾಜನಾದ ನಾರಿಚ್‌ನ ಅನೇಕರಿಗೆ ಮುದ್ರೆಯೊತ್ತಿದ ಲಕೋಟೆಗಳಲ್ಲಿ ಪತ್ರಗಳು ಬಂದವು. ತನಗೋಸ್ಕರವಾಗಿ ಅವರೆಲ್ಲರೂ ಸೈನಿಕರನ್ನು

ಲೈಸೆಸ್ಟರಿಗೆ ಕಳುಹಿಸಬೇಕೆಂಬುದು ಆದೇಶ. ಈ ಸುದ್ದಿಯನ್ನೂ ಮಾರ್ಗರೆಟ್ ಪತ್ರಮುಖೇನ ತಿಳಿಸಿದಳು. ಪತಿ ಜಾನ್ ಊರಿನಲ್ಲಿಲ್ಲದ ಕಾರಣ ಮಗ ಜಾನ್‌ನನ್ನೇ ಕಳುಹಿಸೆಂದು ಮಾರ್ಗರೆಟಳಿಗೆ ಅನೇಕರು ಸಲಹೆ ಮಾಡಿದ್ದರು.

ರಾಜ ಆರನೆಯ ಹೆನ್ರಿ ಶುದ್ಧ ನಿಷ್ಪ್ರಯೋಜಕನಾಗಿ ಲಂಕಾಸ್ಟರಿನ ರಾಜಮನೆತನದವರಿಗೂ ಯಾರ್ಕಿನ ಡ್ಯೂಕ್ ಎಡ್ವರ್ಡನ ಅನುಯಾಯಿಗಳಿಗೂ ಮಧ್ಯೆ ನಡೆಯುತ್ತಿದ್ದ ಜಗಳದ ಪಗಡೆಯಾಟದಲ್ಲಿ ಕಾಯಿ ಮಾತ್ರವಾಗಿದ್ದನು. ಆದರೆ ಅವನ ಪತ್ನಿ ರಾಣಿ ಮಾರ್ಗರೆಟ್ ಅತ್ಯಂತ ಪ್ರಭಾವಶಾಲೀ ಮಹಿಳೆ.

1452 ರಲ್ಲಿ ರಾಣಿ ತನ್ನ ಪಂಗಡಕ್ಕೆ ಜನರನ್ನು ಸೇರಿಸಿಕೊಳ್ಳುವುದಕ್ಕಾಗಿ ನಾರಿಚ್‌ಗೆ ಭೇಟಿಕೊಟ್ಟಾಗ ಮಾರ್ಗರೆಟ್ ಪ್ಯಾಸ್ಟನ್ ರಾಣಿಯನ್ನು ಭೇಟಿಯಾದಳು. ಇದರ ಬಗ್ಗೆ ಗಂಡನಿಗೆ ಬರೆದ ಪತ್ರವೊಂದರಲ್ಲಿ ಮಾರ್ಗರೆಟ್ ಮುಖ್ಯವಾಗಿ ಇದನ್ನೂ ಸೇರಿಸಿದ್ದಾಳೆ. ಸರಿಯಾದ ಒಡವೆಗಳಿಲ್ಲದೆ ರಾಣಿಯನ್ನು ನೋಡಬೇಕಾಗಿ ಬಂದ ಸಂದರ್ಭ ಅದು.

"When the Queen was here I borrowed my cousin Elizabeth clere's device (ornament) for I durst not for shame go with my beads among so many fresh gentle women as here were at that time,"

ಕೊರಳಿಗೆ ಹಾಕಿಕೊಳ್ಳಲು ಸರಿಯಾದ ಮಾಲೆಯಿಲ್ಲದೆ ರಾಣಿಯನ್ನು ನೋಡುವುದಾದರೂ ಹೇಗೆ. ಅಂತೂ ಮಾರ್ಗರೆಟ್ ಪ್ಯಾಸ್ಟನ್ ಎರವಲು ತಂದ ಕಂಠೀಹಾರದಲ್ಲಿ ರಾಣಿಯನ್ನು ಸಂದರ್ಶಿಸಿದಳು!

ನೆರೆಮನೆಯ ಶ್ರೀಮಂತ ವೀರನೊಬ್ಬ ಕಾಲವಾದಾಗ ಮಾರ್ಗರೆಟ್ ಪತ್ರ ಬರೆದು ಆತ ಕಾಲವಾದ ವಿಷಯವನ್ನು ತಿಳಿಸುವುದರ ಜೊತೆಗೆ ಆತನ ಆಸ್ತಿಯನ್ನೇನಾದರೂ ಖರೀದಿ ಮಾಡಬೇಕಾದರೆ ತಿಳಿಸಬೇಕಾಗಿ ಕೋರಿದ್ದಾಳೆ.

ಮಾರ್ಗರೆಟ್ ಬರೆದ ಪತ್ರಗಳು ಹೆಚ್ಚಾಗಿ ಕೌಟುಂಬಿಕ ಜೀವನಕ್ಕೆ ಸಂಬಂಧಿಸಿದ್ದೇ ಆದರೂ ಅನೇಕ ಕಡೆಗಳಲ್ಲಿ ನಾಡಿನ ಪ್ರಕ್ಷುಬ್ಧ ವಾತಾವರಣದ ವಿವರಣೆಯಿದೆ. 1440 ರಲ್ಲಿ ಯಾರ್‌ಮೌತ್ ಹಾಗೂ ಕ್ರೋಮರಿಗೆ ಬಂದಿಳಿಯುತ್ತಿದ್ದ ಹೊರನಾಡ ಕಡಲ್ಗಳ್ಳರ ವಿವರಣೆ ಒಂದು ಪತ್ರದಲ್ಲಿದೆ.

ಅಂತರ್ಯುದ್ಧದ ಕಾಲದಲ್ಲಿ ಒಳಜಗಳ ಒಳಪಂಗಡಗಳು ಹೆಚ್ಚಿದವು. ನಾರಿಚ್‌ನಲ್ಲಿದ್ದ ತಮ್ಮ ಮನೆಯನ್ನು ರಕ್ಷಿಸಿಕೊಳ್ಳಲು ಆಯುಧಗಳನ್ನು ಕಳುಹಿಸಬೇಕೆಂದು ಒಂದು ಪತ್ರ ಸೂಚಿಸುತ್ತದೆ.

ಆದರೆ ಬಿಲ್ಲು ಬಾಣಗಳ ಬೇಡಿಕೆಯ ಜೊತೆಗೇ ಈ ಮಹಿಳೆ ಬರೆವ ಪತ್ರದಲ್ಲಿ ಒಂದು ಪೌಂಡ್ ಬಾದಾಮಿ ಒಂದು ಪೌಂಡು ಸಕ್ಕರೆ ಇವನ್ನೂ ತನಗಾಗಿ ಕಳುಹಿಸಬೇಕೆಂಬ ಕೋರಿಕೆಯೂ ಇದೆ. ಜೊತೆಗೆ ಮಕ್ಕಳಿಗೆ ಗೌನು ಹೊಲಿಯಲು ಬಟ್ಟೆ.

"I pray you that ye will Vouchsafe to do buy some frieze (cloth) to make of your children's gowns. Ye shall have best cheap and best choice of Hay's wife, as is told me and that ye will buy a yard of broad cloth of black for one hood for me, of 44 d or four shillings a yard, for there is neither good cloth nor good frieze, in this town. As for the children's gowns and (if) I have them I will do them maken."

1459-61ರಲ್ಲಿ ನಾಡಿನ ಸ್ಥಿತಿ ತೀರ ಕೆಟ್ಟಿತ್ತು. ನಾರ್‌ಫೋಕಿಗೆ ಬರಬಾರದೆಂದೂ ಬಂದರೆ ಆತನಿಗೆ ಪ್ರಾಣಭಯವೆಂದೂ ಮಾರ್ಗರೆಟ್ ಎಚ್ಚರಿಕೆಯಿತ್ತಳು. ಆತನಿಗೆ ಸೇರಬೇಕಾದ ಇಪ್ಪತ್ತು ಚಿನ್ನದ ನಾಣ್ಯಗಳನ್ನು ಕಳುಹಿಸಿಕೊಡದೆ ತಾನೇ ಉಳಿಸಿಕೊಂಡಿರುವುದಕ್ಕೆ ಕಾರಣ ರಸ್ತೆ ರಸ್ತೆಗಳಲ್ಲಿ ನಡೆಯುವ ದರೋಡೆಗಳೆಂದು ಮಾರ್ಗರೆಟ್ ಒಂದೆಡೆ ತಿಳಿಸಿದ್ದಾಳೆ.

ನಾಲ್ಕನೆ ಎಡ್ವರ್ಡನ ಆಳ್ವಿಕೆಯ ಕಾಲದಲ್ಲೂ ದೌರ್ಜನ್ಯ ಅಶಿಸ್ತು ಮುಂದುವರೆದು ತನ್ನ ಆಳು ಕಾಳು ಭೂಮಿಕಾಣಿ ಇವನ್ನು ನೋಡಿಕೊಳ್ಳುವುದರಲ್ಲೇ ಮಾರ್ಗರೆಟಳ ಕಾಲ ಕಳೆದುಹೋಗುತ್ತಿತ್ತು.

1466ರಲ್ಲಿ ಮಾರ್ಗರೆಟಳ ಪತಿ ಸರ್ ಜಾನ್ ಕಾಲವಾದ. ಮಾರ್ಗರೆಟಳ ಮಕ್ಕಳು ಅಷ್ಟುಹೊತ್ತಿಗೆ ವಯಸ್ಸಿಗೆ ಬಂದವರಾಗಿದ್ದರು. ಮಗ ಜಾನ್‌ಗೆ ದುಡ್ಡಿನ ಬೆಲೆ ತಿಳಿದಿರಲಿಲ್ಲ. ಮಗನಿಗೆ ಬರೆದ ಕಾಗದವೊಂದರಲ್ಲಿ ಹೀಗೆ ಬರೆದಿದ್ದಾಳೆ. ಗಂಡನ ಸಮಾಧಿ ಶಿಲೆಗೆ ಹಣ ಬೇಕಾದಾಗ ಮಗನಿಗೆ ಒಂದು ಜರತಾರಿ ಬಟ್ಟೆಯನ್ನು ಕಳುಹಿಸಿದಳು. ಕಳುಹಿಸಿದಾಗ ಬರೆದದ್ದು ಹೀಗೆ ;

"Charging you that it be not sold to none other use than to performing of your fathers tomb as ye send me word in writing, if ye sell it to any other use, by my troth, I shall never trust you while I live."

ಅಶಾಂತಿ ಅಶಿಸ್ತು ಅನಿರ್ದಿಷ್ಟತೆಯ ಮಧ್ಯೆ ಬಾಳಿದ ಮಾರ್ಗರೆಟ್ ಪ್ಯಾಸ್ಟನ್ನಿನ ಪತ್ರಗಳಲ್ಲಿ ಮೊದಲಿನಿಂದ ಕೊನೆಯವರೆಗೂ ಮೂಡಿರುವುದು ಅವಳ ಜೀವಂತ ವ್ಯಕ್ತಿತ್ವ. ಮಾರ್ಗರೆಟಳ ಮಾನವೀಯತೆಯೇ ಅವಳ ಪತ್ರ ಸಾಹಿತ್ಯದ ಮಾಸದ ಮೌಲ್ಯ.

**ಸಿಲಿಯ ಫಿನ್ನೆಸ್**

ಹದಿನೇಳನೆಯ ಶತಮಾನದ ಅಂತ್ಯ ಭಾಗದಲ್ಲಿ ಇಂಗ್ಲೆಂಡಿನ ಭಾಗ ಭಾಗವನ್ನೂ ಹೋಗಿ ನೋಡಿ ಬಂದಳು ಸಿಲಿಯ. ಅವಳು ಹೋದದ್ದಾದರೂ ಹೇಗೆ? ರೈಲೆ ಬಸ್ಸೆ ವಿಮಾನವೆ? ಆಧುನಿಕ ಸಂಚಾರ ಸಾಧನಗಳ ಕಾಲವಲ್ಲದ ಅಂದು ಒಬ್ಬ ಮಹಿಳೆ ಇಡೀ ಇಂಗ್ಲೆಂಡನ್ನು ಒಬ್ಬರೋ ಇಬ್ಬರೋ ಜೊತೆಗಾತಿಯರ ಜೊತೆ ಇಲ್ಲವೆ ಸೇವಕರ ಜೊತೆ ಸಂಚರಿಸಿದ್ದು ಕುದುರೆಯ ಮೇಲೆ.

ಕುದುರೆಯನ್ನೇರಿ ಇಡೀ ಇಂಗ್ಲೆಂಡನ್ನು ನೋಡಿ ಬಂದಳೆಂದು ಮಾತ್ರ ಖ್ಯಾತಳಾಗಿಲ್ಲ ಸಿಲಿಯ. ಸಿಲಿಯಳ ಖ್ಯಾತಿ ಬಾಡದಿರುವುದು ಅವಳು ತನ್ನ ಸಂಚಾರದ ವಿವರಗಳನ್ನು ಬರೆದಿಟ್ಟಿರುವ ದಿನಚರಿಯ ಪುಸ್ತಕದಿಂದ.

ಇಕ್ಕಟ್ಟಿನ ರಸ್ತೆಗಳು, ಕೆಸರು ತುಂಬಿದ ನೆಲ, ಗುಡ್ಡ ಬೆಟ್ಟ ಕಣಿವೆ ಜಲ, ಮಳೆ ಬಿಸಿಲು ಒಂದನ್ನೂ ಲೆಕ್ಕಿಸದೆ ಮುನ್ನಡೆದಳು. ಸಾವಿರಾರು ಮೈಲು ಸಂಚರಿಸಿದಳು.

ಹದಿನೆಂಟನೆಯ ಶತಮಾನದ ಮೊದಲಲ್ಲೇ ಅವಳು ತನ್ನ ಪ್ರವಾಸ ಸಾಹಿತ್ಯವನ್ನು ಬರೆದರೂ 1812 ರವರೆಗೂ ಅಂದರೆ ಕವಿ ರಾಬರ್ಟ್ ಸದೆಯ ಕೈಗೆ ಆ ಹಸ್ತಪ್ರತಿಯ ಕೆಲವೊಂದು ಭಾಗಗಳು ಸಿಗುವವರೆಗೂ ಅವುಗಳ ಬಗ್ಗೆ ತಿಳಿದಿರಲಿಲ್ಲ. ಮುಂದೆ 1888ರಲ್ಲಿ ಫಿನ್ನೆಸ್ ಕುಟುಂಬದಲ್ಲಿ ಜನಿಸಿದವಳೇ ಆದ ಎಮಿಲಿ ಗ್ರಿಫಿಕ್ಸ್ ಎಂಬಾಕೆ ಅವನ್ನು "ವಿಲಿಯಂ ಹಾಗೂ ಮೇರಿ ಇವರ ರಾಜ್ಯಭಾರದ ಕಾಲದಲ್ಲಿ ಕುದುರೆಯೇರಿ ಸಂಚಾರ" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿದಳು. 1947ರಲ್ಲಿ ಕ್ರಿಸ್ಟಾಫರ್ ಮಾರಿಸ್ ಅದನ್ನು ಸಂಪಾದಿಸಿ ಪ್ರಕಟಿಸಿದ.

ಬ್ರಹ್ಮಚಾರಿಣಿ ಸಾಹಸಪ್ರಿಯೆ ಸಿಲಿಯ ಕಂಡ ನೋಟಗಳು, ಸಂಪ್ರದಾಯಗಳು ಸಂದರ್ಶಿಸಿದ ಜನಗಳು ಇವುಗಳ ಜೀವಂತ ವಿವರಣೆ ಈ ಕೃತಿ.

ಸಿಲಿಯ ಹುಟ್ಟಿದ್ದು 1662ರಲ್ಲಿ. ಶ್ರೀಮಂತ ಕುಟುಂಬದಲ್ಲಿ ಜನನ. ಅವಳು ಕುಟುಂಬದ ಇತರರಂತೆಯೇ ಸಂಪ್ರದಾಯ ಶರಣೆಯಲ್ಲ. ಅಲ್ಲದೆ ರಾಜಕೀಯದಲ್ಲಿ ವ್ಹಿಗ್ ಪಕ್ಷಕ್ಕೆ ಒಲಿದವಳು.

ತಂದೆಯ ಮರಣಾನಂತರ ಸಿಲಿಯ ತನ್ನ ತಾಯಿಯ ಜೊತೆ ಸ್ಯಾಲಿಸ್‌ಬರಿಯ ಬಳಿಯಿದ್ದ ನ್ಯೂಟನ್‌ಟೋನಿಯಲ್ಲಿದ್ದ ಹಳೆಯ ಮನೆಯಲ್ಲಿದ್ದಳು. ಅವಳ ಪ್ರವಾಸ ಆರಂಭವಾದದ್ದು ಅಲ್ಲಿಂದಲೆ. ಮೊದಮೊದಲು ದೂರದಲ್ಲಿದ್ದ ಬಂಧು ಬಳಗದವರ ಮನೆಗೆ ಭೇಟಿ. ಈ ಶ್ರೀಮಂತ ಕುಟುಂಬಗಳಿಗೆ ಹೋಗಿ ಬಂದಾಗಲೆಲ್ಲಾ ಆ ಮನೆಗಳ ವೈಭವ, ಕೊಠಡಿಗಳ ಅಚ್ಚುಕಟ್ಟು, ಅವುಗಳಲ್ಲದ ವೈಭವ, ಕುರ್ಚಿ ಮೇಜಿನಿಂದ ಹಿಡಿದು ಚಿತ್ರಪಟಗಳು ಎಲ್ಲವನ್ನೂ ವರ್ಣಿಸಿ ಬರೆದಿಡುತ್ತಿದ್ದಳು.

1691ರಲ್ಲಿ ಅವಳ ತಾಯಿ ಕಾಲವಾದಳು. ತಾಯಿಯ ಮರಣಾನಂತರ ಸಿಲಿಯು ತಂಗಿಯ ಸಂಪರ್ಕ ಸಾಧ್ಯವಾಗುವಂತೆ ಲಂಡನ್ನಿನಲ್ಲಿ ನೆಲಸಿದಳು.

ಸಿಲಿಯಳಲ್ಲಿ ಉತ್ತಮ ವರದಿಗಾರಳಿಗಿರಬೇಕಾದ ಎಲ್ಲ ಗುಣಗಳೂ ಇದ್ದವು. ಸುದ್ದಿ ಸಂಗ್ರಹಕ್ಕೆ ಬೇಕಾದ ಕಾತರ ಕಣ್ಣು, ಪ್ರತಿಯೊಂದನ್ನು ಸ್ವತಃ ಹೋಗಿ ತಿಳಿದುಕೊಳ್ಳುವ ಹಂಬಲ, ತೀಕ್ಷ್ಣ ಸಂವೇದನೆ, ನೋಡಿದ್ದೆಲ್ಲವನ್ನೂ ಕೇಳಿದ್ದೆಲ್ಲವನ್ನೂ ನೆನಪಿನಲ್ಲಿಟ್ಟುಕೊಳ್ಳುವ ಅಸಾಧಾರಣ ಜ್ಞಾಪಕಶಕ್ತಿ. ಜೊತೆಗೆ 'ಅರೆ'ಗಳಿಲ್ಲದ ಸಮತೂಕದ ಸ್ವಭಾವ.

ಸಿಲಿಯ ತನ್ನ ಪ್ರವಾಸಗಳನ್ನು ಸಂಪೂರ್ಣ ಸಂತೋಷದಿಂದ ಅನುಭವಿಸಿದಳು. ಅವಳು ಅನುಭವಿಸಿದ್ದೇ ಅಲ್ಲದೆ ಅವಳ ಪ್ರವಾಸ ಸಾಹಿತ್ಯವನ್ನು ಓದುವ ಯಾರಿಗೇ ಆದರೂ ಅದೇ ಅನುಭವವಾಗುತ್ತದೆ. ಅವಳ ಕಾಲದ ಇಂಗ್ಲೆಂಡಿಗೆ ಅವಳೊಬ್ಬ ಉತ್ತಮ ಮಾರ್ಗದರ್ಶಿ. ಆಗ ಇಡೀ ಇಂಗ್ಲೆಂಡಿನ ಜನಸಂಖ್ಯೆ ಇಂದಿನ ಲಂಡನ್ ಜನಸಂಖ್ಯೆಯಲ್ಲಿ ಅರ್ಧಕ್ಕಿಂತಲೂ ಕಡಿಮೆ !

ಸಿಲಿಯ ಪ್ರವಾಸ ಹೋದ ಕಡೆಯಲ್ಲೆಲ್ಲಾ ಪ್ರತಿಯೊಂದನ್ನೂ ನೋಡಲು ಬಯಸುತ್ತಿದ್ದಳು. ಇಗರ್ಜಿಗಳನ್ನೂ ಕೋಟೆ ಮನೆಗಳನ್ನೂ ಹತ್ತಿ ಹೋಗಿ ಅಲ್ಲಿಂದ ಕಾಣುವ ನೋಟಗಳನ್ನು ಬಣ್ಣಿಸಿದ್ದಾಳೆ ಸಿಲಿಯ. ಕೋಟೆ ಮನೆಯ ಮೇಲೆ ನಿಂತು ಕೆಳಗೆ ನೋಡಿದಾಗ ಕಾಣುವ ಹಳ್ಳಿಗಾಡಿನ ದೃಶ್ಯ ಅದ್ಭುತ. ಬಹುಶಃ ಅವಳು ಹೋಗಿ ನೋಡದೆ ಇದ್ದ ಸ್ಥಳವೆಂದರೆ ಗಣಿಯೊಂದೆ. ಆದರೆ ಗಣಿಗಳ ಮೇಲೆ ನಿಂತು ಅಲ್ಲಿನ ಕೆಲಸಗಾರರೊಂದಿಗೆ ಸಂಭಾಷಣೆ ನಡೆಸಿದ್ದಳು.

ಸಿಲಿಯಳ ಆರೋಗ್ಯ ಅಷ್ಟೇನೂ ಚೆನ್ನಾಗಿರಲಿಲ್ಲ. ವಾತರೋಗ ಅವಳನ್ನು ಕಾಡುತ್ತಿತ್ತು. ಅದಕ್ಕಾಗಿ ಅವಳಿಗೆ ಸ್ಥಳ ಬದಲಾವಣೆ, ಹವ ಬದಲಾವಣೆ ಎರಡೂ ಬೇಕಾಗಿತ್ತು. 1702 ರ ಸುಮಾರಿಗೆ ಓದುಗರನ್ನು ಕುರಿತು ಪ್ರವಾಸದ ಅಗತ್ಯದ ಬಗ್ಗೆ ಹೀಗೆ ಹೇಳಿದ್ದಾಳೆ.

"Now thus much without Vanity may be asserted of the subject, that if all persons, both Ladies, much more gentlemen, would spend some of their tyme in Journeys to visit their native Land, and be curious to inform themselves and make observations of the pleasant prospects, good buildings, different produces and manufactures of each place, with the Variety of sports and recreations they are adapt to, would be a souveraign remedy to cure or preserve from these epidemick diseases of Vapours, should I add Laziness?"

ರಾಜಕಾರಣದಲ್ಲಿರುವವರು ಅದರಲ್ಲೂ ಸಂಸತ್ ಸದಸ್ಯರು ತಮ್ಮ ನಾಡಿನ ಬಗ್ಗೆ ಸಂಪೂರ್ಣ ತಿಳುವಳಿಕೆ ಉಳ್ಳವರಾಗಿರಬೇಕೆಂಬುದು ಅವಳ ಅಭಿಪ್ರಾಯ. ಅವಳ ಈ ಮಾತು ಎಷ್ಟು ಸತ್ಯ ನೋಡಿ.

"But much more requisite is it for gentlemen in general service of their country at home or abroad to know and inform themselves...but to their shame it must be own'd many if not most are ignorant of anything but the name of the place for which they serve in parliament, how then can they speake for or promote their good or redress their grievances?"

ತನ್ನ ನಾಡನ್ನು ಸಂಪದ್ಭರಿತವಾಗಿ ಮಾಡುವ ಎಲ್ಲವನ್ನೂ ಅದರಲ್ಲೂ ಕೈಗಾರಿಕೆಗಳನ್ನು ಉತ್ಪನ್ನಗಳನ್ನು ಸಿಲಿಯ ಬಹಳವಾಗಿ ಮೆಚ್ಚಿಕೊಂಡು ವರ್ಣಿಸಿದ್ದಾಳೆ. ಮಾನವನ ರಚನಾತ್ಮಕ ಶಕ್ತಿಗೆ ಸ್ಮಾರಕವಾಗಿ ನಿಂತಿರುವ ವಿಶಾಲ ನಗರಗಳು, ಕಟ್ಟಡಗಳು ಅವಳನ್ನು ಬಹಳವಾಗಿ ಆಕರ್ಷಿಸುತ್ತಿದ್ದವು. ಬ್ರಿಸ್ಟಲಿನ ಬಂದರು, ಉತ್ತಮ ಕ್ಯಾಲಿಕೊ ಹಾಗೂ ಡಮಾಸ್ಕ್ ಬಟ್ಟೆಗೆ ಹೆಸರಾದ ಎಕ್ಸೆಟರ್, ಗಸ್ಟರಿನ ಉಣ್ಣೆ ಹೀಗೆ ಒಂದೆ ಎರಡೆ ?

ಕವೆಂಟ್ರಿಗೆ ಹೋದಾಗ ಸಿಲಿಯ ಅಲ್ಲಿನ ಉದ್ದಿಮೆಯನ್ನೇ ಅಲ್ಲದೆ ಅಲ್ಲಿನ ಹಣ ಕಾಸಿನ ವ್ಯವಹಾರವನ್ನೂ ಗಮನಿಸಿದ್ದಾಳೆ. ಸಾರ್ವಜನಿಕರ ಹಣ ಪೋಲಾಗಿಲ್ಲ. ಕಾರ್ಪೊರೇಷನ್ ತನ್ನ ಆದಾಯದಲ್ಲಿ ಮೂರು ಸಾವಿರ ಪೌಂಡುಗಳನ್ನು ಶಾಲೆಗಳಿಗಾಗಿ ಧರ್ಮಕಾರ್ಯಗಳಿಗಾಗಿ ವಿನಿಯೋಗಿಸುತ್ತವೆ ಎಂದಿದ್ದಾಳೆ.

ಬಡತನಕ್ಕೆ ಕಾರಣ ಬಹುವಾಗಿ ಸೋಮಾರಿತನ ಅಸಡ್ಡೆ ಎನ್ನುತ್ತಾಳೆ ಸಿಲಿಯ. ಒಂದೆಡೆ ಹೀಗೆ ಬರೆದಿದ್ದಾಳೆ. "2 or 3 great wenches as tall and bigg as any women who sat hovering between their beds and the chimney corner all idle doing nothing or at least was not settled to any work tho' it was nine of the clock when I came thither haveing gone 7 long miles that morning".

ಸಿಲಿಯಳ ವಿವರಣೆ ಕೆಲವೆಡೆ ಬಹಳ ಅರ್ಥವತ್ತಾಗಿದೆ. ಉದಾಹರಣೆಗೆ ತೀರಾ ಜೀರ್ಣವಾಗಿ ಹೋದ ಸಂತ ಆಲ್‌ಬನ್ ಕಥೀಡ್ರಲನ್ನು ನೋಡಿ ಹೀಗೆ ಬರೆದಿದ್ದಾಳೆ.

'So worn away that it mourns for some charitable person to repair it'.

ಪ್ರವಾಸದ ಕಾಲದಲ್ಲಿ ಸಿಲಿಯ ಕಳ್ಳಕಾಕರ ಕೈಗೆ ಪುಂಡರ ಕೈಗೆ ಸಿಕ್ಕಿದ್ದೂ ಉಂಟು. ಒಮ್ಮೊಮ್ಮೆ ಈ ಸಾಹಸ ಸಾಕು ಎನಿಸಿದ್ದೂ ಉಂಟು. ಆದರೆ ಸಾಗರದ

ನೀರಿನಿಂದ ಉಪ್ಪು ಮಾಡುವ ಯತ್ನವನ್ನು ನೋಡಿದಾಗ, ಕಲ್ಲಿದ್ದಲಿನ ಗಣಿಗಳ ಬಳಿ ನಿಂತು ಕಲ್ಲಿದ್ದಲಿನ ವಿವಿಧ ಉಪಯೋಗಗಳನ್ನು ತಿಳಿದಾಗ, ಬಕ್ಸ್‌ಟನ್ನಿನಂತಹ ಪ್ರದೇಶಗಳಲ್ಲಿ ಎಡೆಬಿಡದೆ ಸುರಿಯುವ ನೀರು ನಿರ್ಮಿಸಿರುವ ವಿವಿಧಾಕೃತಿಗಳನ್ನು ಕಂಡಾಗ, ಇನ್ನೂ ಕಾಣಬೇಕೆಂಬ ಹಂಬಲ ಚಿಗುರಿ ಹೆಮ್ಮರವಾಗುತ್ತಿತ್ತು.

ಒಮ್ಮೆ ಇಂಗ್ಲೆಂಡಿನ ಹಾಗೂ ಸ್ಕಾಟ್‌ಲೆಂಡಿನ ಇಬ್ಬರ ನಡುವೆ ನಡೆಯ ಬೇಕಾಗಿದ್ದ ಒಂದು ಓಟದ ಪಂದ್ಯ ನೋಡಲೆಂದೇ ಹಲವಾರು ಮೈಲು ಪ್ರಯಾಣ ಮಾಡಿ ವಿಂಡ್‌ಸರ್ ಅರಣ್ಯಕ್ಕೆ ಹೋದಳು ಸಿಲಿಯ.

ತಾನು ವರುಷದಲ್ಲಿ ಎಷ್ಟು ಮೈಲು ಪ್ರವಾಸ ಮಾಡಿದ್ದೇನೆಂದು ಬರೆದಿಡು ವುದೂ ಅವಳ ಪದ್ಧತಿಯಾಗಿತ್ತು. 1697 ರಲ್ಲಿ ಸುಮಾರು 1,045 ಮೈಲು ಪ್ರವಾಸ ಮಾಡಿದ್ದೇನೆಂದು ಬರೆದಿದ್ದಾಳೆ. ಅವುಗಳಲ್ಲಿ ಕೋಚುಗಾಡಿಯ ಪ್ರಯಾಣ ಕೇವಲ ನೂರು ಮೈಲುಗಳಷ್ಟು ಮಾತ್ರ, ಉಳಿದದ್ದೆಲ್ಲ ಕುದುರೆಯ ಮೇಲೆ.

1702ರ ಹೊತ್ತಿಗೆ ವೃದ್ಧೆಯಾಗಿದ್ದ ಸಿಲಿಯ ಪ್ರವಾಸವನ್ನು ನಿಲ್ಲಿಸಿ ಪ್ರವಾಸದ ಬಗ್ಗೆ ಕೃತಿ ಬರೆಯಲು ತೊಡಗಿದಳು. ಲಂಡನ್ನಿನಲ್ಲಿ ನೆಲೆಸಿದಾಗ ಲಂಡನ್ನಿನ ಬಗ್ಗೆಯೇ ಸಾಕಷ್ಟು ಕಂಡು ಬರೆದಳು.

ಸಮ್ರಾಜ್ಞಿ ಆ್ಯನಳ ರಾಜ್ಯಾರೋಹಣದ ವಿವರವಾದ ವರದಿ ರಸವತ್ತಾಗಿದೆ ಸಿಲಿಯಳ ಬರಹದಲ್ಲಿ.

ಎಪ್ಪತ್ತೊಂಬತ್ತು ವರುಷಗಳ ಕಾಲ ತನ್ನ ನಾಡಿನ ನಾಡಿ ನಾಡಿಯಲ್ಲಿ ಸಂಚರಿಸಿ ಬಂದ ಸಿಲಿಯಳ ಸಮಾಧಿ ನ್ಯೂಟನ್–ಟೋನೆಯ ರುದ್ರಭೂಮಿಯಲ್ಲಿ ಅವಳ ತಂದೆ ತಾಯಿಯರ ಸಮಾಧಿಗಳ ಪಕ್ಕದಲ್ಲಿದೆ.

ಪ್ರವಾಸ ಸಾಹಿತ್ಯದಲ್ಲಿ ಸಿಲಿಯ ಫಿನ್ನೆಸಳ ಕೃತಿ ಒಂದು ಮೈಲಿಗಲ್ಲು.

(ಈ ಲೇಖನಕ್ಕೆ ಆಧಾರ: ಎಚ್. ಇ. ಸ್ಟೋವೆಲ್ ಬರೆದಿರುವ 'Quill Pens and Petticoats' ಎಂಬ ಗ್ರಂಥ.)

# ಸ್ವಾತಂತ್ರ್ಯೋತ್ತರ ಕಾದಂಬರಿಕಾರ್ತಿಯರು–ಒಂದು ಸಮೀಕ್ಷೆ

**ಆರ್ಯಾಂಬ ಪಟ್ಟಾಭಿ**

ಕಾದಂಬರಿ ಸಾಹಿತ್ಯದ ಒಂದು ದೊಡ್ಡ ವಿಭಾಗ ಹಾಗೂ ಜನಪ್ರಿಯವೂ ಶಕ್ತಿಯುತವೂ ಆದ ಸಾಹಿತ್ಯ ಪ್ರಕಾರ. ಸಾಹಿತ್ಯದ ಎಲ್ಲ ರೂಪಗಳಿಗಿಂತ ಕಾದಂಬರಿ ಸಾಮಾನ್ಯಓದುಗರೊಂದಿಗೆ ನಿಕಟ ಸಂಬಂಧ ಪಡೆದಿರುವುದು. ಸ್ವಾತಂತ್ರ್ಯೋತ್ತರದ ಈ ಮೂವತ್ತು ವರ್ಷಗಳಲ್ಲಿ ಲೇಖಕಿಯರಿಂದ ಸಾಹಿತ್ಯದ ಎಲ್ಲ ಕ್ಷೇತ್ರಗಳಿಗಿಂತ ಗದ್ಯದಲ್ಲಿ, ಅದರಲ್ಲೂ ಕಾದಂಬರಿ ಕ್ಷೇತ್ರದಲ್ಲಿ ಹೆಚ್ಚಾಗಿ ಕೆಲಸ ನಡೆದಿರುವುದು ಸ್ಪಷ್ಟವಾಗಿದೆ.

ಇಂದಿನ ಸ್ವತಂತ್ರ ಭಾರತದಲ್ಲಿ ಭಾರತೀಯ ಮಹಿಳೆ ಪ್ರಧಾನಿಯಾಗಿ, ರಾಯಭಾರಿಯಾಗಿ, ಮಂತ್ರಿಯಾಗಿ, ವೈದ್ಯಳಾಗಿ, ಶಿಕ್ಷಕಳಾಗಿ ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾಳೆ, ತನ್ನ ಅನುಭವದ ಬುತ್ತಿಯನ್ನು ತುಂಬಿಕೊಳ್ಳುತ್ತಿದ್ದಾಳೆ. ಸ್ವಾತಂತ್ರ್ಯೋತ್ತರ ಮಹಿಳಾ ಸಾಹಿತ್ಯ ತುಂಬ ಉತ್ಸಾಹದಾಯಕವಾಗಿದೆ. ಹೊಸಗನ್ನಡದ ಯುಗ ಪ್ರಾರಂಭವಾದಮೇಲೆ ಸ್ವಾತಂತ್ರ್ಯಹೋರಾಟದಲ್ಲಿ ಪುರುಷರೊಂದಿಗೆ ಮಹಿಳೆಯರೂ ಕೈಗೂಡಿಸಿದಂತೆ ಸಾಹಿತ್ಯದ ವಿದ್ಯಾರ್ಥಿಯಾಗಿದ್ದ ಮಹಿಳೆ ಸಾಹಿತಿಯೂ ಆದಳು. ಸ್ವಾತಂತ್ರ್ಯ ಬಂದನಂತರ ಮಹಿಳೆಯರ ಕಾದಂಬರಿ ಕ್ಷೇತ್ರ ಹೇಗೆ ಬೆಳೆದು ಬಂದಿದೆ ? ಕಾದಂಬರಿಗಾರ್ತಿಯರ ಕೃತಿ ರಚನೆ ಹೇಗೆ ಸಾಗಿದೆ ? ಹೇಗೆ ಇಲ್ಲಿಯತನಕ ಮುಂದುವರಿಯುತ್ತಾ ಬಂದಿದೆ ? ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಎಂಥಹ ಸ್ಥಾನ ಪಡೆದಿದೆ ? ಕಾದಂಬರಿಗಾರ್ತಿಯರ ಕೃತಿಗಳಿಂದ ನಮಗೆ ತೃಪ್ತಿ ಸಿಕ್ಕಿದೆಯೇ ? ಅವರು ಹೊಸ ದೃಷ್ಟಿಯನ್ನು ಬೆಳೆಸಿಕೊಂಡಿದ್ದಾರೆಯೇ, ಹೇಗೆ ? ಕಾದಂಬರಿ ರಚನೆ ಯಾವ ಯಾವ ಮಟ್ಟದಲ್ಲಿ ರೂಪುಗೊಂಡಿದೆ ? ಕಾದಂಬರಿಗಾರ್ತಿಯರ ಒಲವು ಯಾವ ಕಡೆಗಿದೆ ? ಅವರ ರುಚಿ ಎಂಥಹದು ? ಅವರ ಧೈರ್ಯ ದಾರ್ಷ್ಟೀಕ ಧೃಷ್ಟತನಗಳ ಸ್ವರೂಪವೇನು, ಅವರ ನಂಬಿಕೆಗಳ ಗುರಿ ಎಲ್ಲಿ, ಅವರ ಕನ್ನಡದ ಗುಣ ಎಷ್ಟು, ಮೊದಲಾದ ಕಾದಂಬರಿಗಾರ್ತಿಯರ ಮನಸ್ಸಿನ ಆಳತೆ, ತೂಕ, ಅವರ ಕಾದಂಬರಿಗಳ ಅಧ್ಯಯನ ನಡೆಸಿದರೆ ಸ್ಪಷ್ಟವಾಗುವುದು.

ಈ ಒಂದು ಸಮೀಕ್ಷೆಯಲ್ಲಿ ಸ್ವಾತಂತ್ರ್ಯೋತ್ತರದ ಎಲ್ಲ ಕಾದಂಬರಿಕಾರ್ತಿಯರ ಕೃತಿಗಳನ್ನೂ ಪರಿಶೀಲಿಸಿ ವಿಮರ್ಶೆ ಮಾಡುವುದು ಅಸಾಧ್ಯ ಹಾಗೂ ಅನಾವಶ್ಯಕ. ಕಾದಂಬರಿಗಾರ್ತಿಯರ ಕೃತಿಗಳ ತಿರುಳನ್ನು, ಹುರುಳನ್ನು ಕಾಣಬೇಕಾದರೆ, ಅವರ

ಆಸೆ, ಆದರ್ಶ, ಗಮ್ಯ, ಗುರಿಗಳ ಯಥಾರ್ಥ ಜ್ಞಾನ ಬೇಕಾದರೆ ಸಮಗ್ರ ಕಾದಂಬರಿ ಕ್ಷೇತ್ರದ ಅಧ್ಯಯನ ನಡೆಸಬೇಕು.

ಆಧುನಿಕ ಮಹಿಳಾ ಸಾಹಿತ್ಯದಲ್ಲಿ ಕಾದಂಬರಿ ಪ್ರಕಾರವು ಹೊಂದಿರುವ ಸ್ಥಾನ-ಮಾನ, ಜನಪ್ರಿಯತೆ ಹಾಗೂ ಸೌಲಭ್ಯಗಳೊಡನೆ ಇನ್ನಾವ ಪ್ರಕಾರವೂ ಸ್ಪರ್ಧಿಸಲಾರದು ಎಂದರೆ ಅತಿಶಯೋಕ್ತಿಯೇನಲ್ಲ. ಪ್ರತಿ ತಿಂಗಳೂ ಇಪ್ಪತ್ತು, ಮೂವತ್ತು ಮಹಿಳೆಯರ ಕಾದಂಬರಿಗಳು ಪ್ರಕಟವಾಗುತ್ತಿವೆ. ಕಾದಂಬರಿಕ್ಷೇತ್ರಕ್ಕೆ ಸ್ವಾತಂತ್ರ್ಯೋತ್ತರ ಮಹಿಳೆಯರ ಕೊಡುಗೆ ಸಂಖ್ಯಾದೃಷ್ಟಿಯಿಂದಲೂ, ಜನಪ್ರಿಯತೆಯ ದೃಷ್ಟಿಯಿಂದಲೂ ಗಣ್ಯವಾಗಿ ಪ್ರಗತಿ ಮಾರ್ಗದಲ್ಲಿದ್ದರೂ ಅಂತಸ್ಸತ್ವ ವೈವಿಧ್ಯಗಳ ದೃಷ್ಟಿಯಿಂದ ಕೆಳಮಟ್ಟದಲ್ಲೇ ಇದೆ.

ಈಗಂತೂ ಕಾದಂಬರಿಗಾರ್ತಿಯರು ಗಮನಾರ್ಹ ಸಂಖ್ಯೆಯಲ್ಲಿದ್ದಾರೆ. ಕಾದಂಬರಿ ಬರೆಯುವವರು ಹೆಚ್ಚಲು ಕಾರಣ ಕಾದಂಬರಿ ಪ್ರಕಟಿಸಲು ಪ್ರಕಾಶಕರು ಬೀದಿ ಬೀದಿಗಳಲ್ಲಿ ಹುಟ್ಟಿಕೊಂಡಿದ್ದಾರೆ. ಕಾದಂಬರಿಗೆ ಬೇಡಿಕೆಯೂ ಸಾಕಷ್ಟು ಹೆಚ್ಚಿದೆ. ಕೂತಲ್ಲಿ, ನಿಂತಲ್ಲಿ, ಕಂಡಲ್ಲಿ, ಕೇಳಿದಲ್ಲಿ ಕಾದಂಬರಿಗಾರ್ತಿಯರು ಹುಟ್ಟಿಕೊಳ್ಳುತ್ತಿದ್ದಾರೆ. ದಿನ ಪತ್ರಿಕೆ, ವಾರ ಪತ್ರಿಕೆ, ಮಾಸ ಪತ್ರಿಕೆಗಳ ಬೆಳೆ ಹುಲುಸಾಗಿರುವುದರಿಂದ (ಬಹಳ ಮಂದಿ ಅವುಗಳನ್ನು ಓದುವುದರಿಂದ) ಅವುಗಳಲ್ಲಿ ಹೆಚ್ಚಾಗಿ ಮಹಿಳೆಯರ ಕಾದಂಬರಿಗಳು ಪ್ರಕಟವಾಗುತ್ತಿವೆ.

ಮಹಿಳೆಯರ ಕಾದಂಬರಿಗಳೇನೋ ಲೆಕ್ಕವಿಲ್ಲದಷ್ಟು ಪ್ರಕಟವಾಗುತ್ತಿವೆ. ಆದರೆ ಅವುಗಳನ್ನು ಕೊಂಡು ಓದುವವರಿಲ್ಲ ಎನ್ನುವುದು ಒಂದು ಆಕ್ಷೇಪಣೆ. ಜಳ್ಳೇ ಜಾಸ್ತಿ ಎನ್ನುವುದು ಇನ್ನೊಂದು ವಾದ. ಪುಸ್ತಕವೇ ಇಲ್ಲದಿರುವುದಕ್ಕಿಂತ ಇದ್ದರೆ ಓದುವವರು ಹುಟ್ಟಿಕೊಳ್ಳಬಲ್ಲರು.

ಜನಸಾಮಾನ್ಯರಿಗಾಗಿಯೇ ರಚಿತವಾದ ಕಾದಂಬರಿಗಳ ಸಂಖ್ಯೆಯೇ ಹೆಚ್ಚು. ಕಾದಂಬರಿಯ ಬೆಳೆ ಹುಲುಸಾಗಿದ್ದರೂ ಪೈರಿಗಿಂತ ಕೊಳೆಯೇ ಹೆಚ್ಚು. ಅನುಭವವಿಲ್ಲದ ಬರವಣಿಗೆ, ಪ್ರೇಮ ಕಥೆಗಳು, ವಿಷಯ ಮತ್ತು ವೈಚಾರಿಕತೆಯೇ ಇಲ್ಲದ ಕಾದಂಬರಿಗಳು ಬೇಸರ ತರಿಸುವಷ್ಟು ಬರುತ್ತಿವೆ. ಕಾದಂಬರಿಗಳನ್ನು ಬರೆದು ಸಾಹಿತಿಗಳೆನಿಸಿಕೊಳ್ಳುವ ಜನಪ್ರಿಯತೆ ಗಳಿಸುವ ಚಾಪಲ್ಯದಿಂದ ಈಚೀಚೆಗಂತೂ ಬರವಣಿಗೆಗೆ ಬಂದವರೆಲ್ಲ ಕಾದಂಬರಿ ರಚನೆಗೆ ಪ್ರಾರಂಭಿಸಿದ್ದಾರೆ. ಹಿರಿಯ ಲೇಖಕಿಯರನ್ನು ಕಿರಿಯರು ಅನುಕರಣೆಮಾಡುತ್ತಿದ್ದಾರೆ. ಕೀರ್ತಿ, ಹಣಕ್ಕಾಗಿ ಬರೆಯುವವರೇ ಹೆಚ್ಚುಮಂದಿ.

ಕಾದಂಬರಿಯನ್ನು ಓದುವವರು ಯಾವ ವರ್ಗದವರು ? ಮಹಿಳೆಯರೇ, ಪುರುಷರೇ, ಯಾರು ಹೆಚ್ಚು ? ಅವರ ನಿರೀಕ್ಷೆಗಳೇನು ? ಮೌಲ್ಯಗಳೇನು ? ಇಂತಹ ಹತ್ತಾರು ಅಂಶಗಳೂ ಕಾದಂಬರಿಗಾರ್ತಿಯರ ರಚನೆಯಮೇಲೆ ಪ್ರಭಾವ ಬೀರುತ್ತಿವೆ.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಬೆಳಕಿಗೆ ಬಂದಿರುವ ಎಲ್ಲ ಕಾದಂಬರಿಗಾರ್ತಿಯರಿಗೆ ಆಹ್ವಾನವಿದ್ದರೂ ಸ್ಥಾನ ಸಿಕ್ಕಿರುವುದು ಕೆಲವರಿಗೆ ಮಾತ್ರ. ಈ ಕಾಲದಲ್ಲಿ ಪ್ರಕಟವಾಗಿರುವ ನೂರಾರು ಕೃತಿಗಳಲ್ಲಿ ಎಲ್ಲವೂ ಸಫಲವಾಗಿಲ್ಲ. ಕೆಲವು ಆಗಿವೆ. ಪ್ರಯತ್ನ ಹಲವರದಾದರೆ ಸಿದ್ಧಿ ಕೆಲವರಿಗೆ ಮಾತ್ರ. ಇದಕ್ಕೆ ಉತ್ತರ ಹುಡುಕಲು ಕಾದಂಬರಿಗಾರ್ತಿಯರ ಸಂವೇದನಾ ಶೀಲತೆಯ ಇತಿಮಿತಿಗಳ ಬಗ್ಗೆ ಆಲೋಚಿಸಬೇಕು.

ಹೆಚ್ಚುಮಂದಿ ಬರಹಗಾರರು ಕಾಲ್ಪನಿಕ ಸಾಹಿತ್ಯಬಿಟ್ಟು ಬೇರೊಂದು ಕಡೆಗೆ ದೃಷ್ಟಿಯನ್ನೇ ಹಾಯಿಸಿಲ್ಲ. ಪ್ರೋತ್ಸಾಹ ಹೀನತೆ, ಅನುಭವದ ಮಿತಿ, ಸಂಸಾರ ಬಂಧನ ಇವುಗಳು ಕಾರಣವಿದ್ದರೂ ಉತ್ಪ್ರೇಕ್ಷೆಮಾಡಿ ಬರೆಯುವ, ಸತ್ಯಕ್ಕೆ ದೂರ ನಿಂತು ನೋಡುವ ಪ್ರಯತ್ನ ಕಾದಂಬರಿಗಾರ್ತಿಯರಲ್ಲಿ ಕಂಡುಬರುವುದಕ್ಕೆ ಅವರ ಆಲೋಚನೆಯ ಪರಿಧಿಯು ಪರಿಮಿತವಾಗಿರುವುದೇ ಪ್ರಮುಖ ಕಾರಣವೆಂದು ಊಹಿಸಬಹುದು.

ಹೆಚ್ಚು ಕಾದಂಬರಿಗಾರ್ತಿಯರು ಗೃಹಣಿಯರು, ತಾಯಂದಿರು, ಪಟ್ಟಣದಲ್ಲಿ ವಾಸಿಸುವ ಮಧ್ಯಮ ವರ್ಗಕ್ಕೆ ಸೇರಿದವರು. ಆದ್ದರಿಂದ ಅವರ ಕೃತಿಗಳಲ್ಲಿ ಸಾಮಾಜಿಕ ಮತ್ತು ಕೌಟುಂಬಿಕ ಸಮಸ್ಯೆಗಳೇ ಪ್ರಧಾನವಾಗಿ ಚಿತ್ರಿತವಾದ ಕಥೆಗಳು ಹೆಚ್ಚಾಗಿವೆ.

ಸ್ವತಂತ್ರ ಭಾರತದಲ್ಲಿ ಸ್ತ್ರೀಗೇನೋ ಸಾಕಷ್ಟು ಸ್ವಾತಂತ್ರ್ಯ ದೊರಕಿದೆ. ರಾಜಕೀಯ, ಸಾಮಾಜಿಕ ರಂಗದಲ್ಲಿ ಸಾಕಷ್ಟು ಮಂದಿ ಪ್ರತಿಷ್ಠಿತ ಸ್ಥಾನ ಗಳಿಸಿದ್ದಾರೆ. ಆದರೆ ನೂರಕ್ಕೆ ಇಂತಹವರು ಎಷ್ಟು ಮಂದಿ ? ಸ್ತ್ರೀ ಮಾನಸಿಕವಾಗಿ ಇನ್ನೂ ಬಂಧಮುಕ್ತಳಾಗಿಲ್ಲ. ಮೂಢ ನಂಬಿಕೆಗಳು, ಸಂಪ್ರದಾಯಗಳು ಆಕೆಯನ್ನು ಇನ್ನೂ ಬಂದಿಯನ್ನಾಗೇ ಇರಿಸಿವೆ. ಪ್ರತಿಭೆ, ಬುದ್ಧಿ, ಸಾಮರ್ಥ್ಯಗಳಿದ್ದೂ ಅವುಗಳನ್ನು ವಿಕಾಸಮಾಡಿಕೊಳ್ಳಲು ಸಾಧ್ಯವಾಗದೆ ಹೋಗಿದೆ. ಕೆಲವು ಕಾದಂಬರಿಗಾರ್ತಿಯರಿಗೆ ನಮ್ಮ ಸಂಪ್ರದಾಯಗಳಲ್ಲಿ, ಸಂಸ್ಕೃತಿಗಳಲ್ಲಿ ಅಗಾಧ ನಂಬಿಕೆ. ಆದ್ದರಿಂದ ಸಂಪ್ರದಾಯದ ಚೌಕಟ್ಟಿನಲ್ಲಿ ಬಗೆಹರಿಸಲಾರದ ಸಮಸ್ಯೆಗಳು ಮತ್ತು ಅನುಭವಗಳನ್ನು ಕತೆಯ ವಿಷಯವನ್ನಾಗಿ ಮಾಡಿಕೊಂಡು ಕಥೆಗಳು ಸಫಲವಾಗಿಲ್ಲ. ಮೌಲ್ಯಗಳು, ಧ್ಯೇಯಗಳು, ಅಭಿಪ್ರಾಯಗಳು, ನೀತಿ ಧರ್ಮಗಳು ಬದಲಾಗುತ್ತಿವೆ. ಹಾಗಿದ್ದರೂ ಮಹಿಳಾ ಕಾದಂಬರಿಗಳಲ್ಲಿ ಹಳೆಯ ಸಿದ್ಧಾಂತಗಳನ್ನು ಖಂಡಿಸಿ ಹೊಸತತ್ತ್ವಗಳನ್ನು ಸ್ಥಿರೀಕರಿಸುತ್ತಿರುವುದು ಕಂಡು ಬರುತ್ತಿಲ್ಲ.

ನಮ್ಮ ದೇಶ ಸ್ವತಂತ್ರವಾದಮೇಲೆ ಹೊಸ ಹೊಸ ಸಮಸ್ಯೆಗಳು ಹುಟ್ಟಿಕೊಂಡು ನಮ್ಮ ನಿತ್ಯ ಜೀವನ ಜಟಿಲವಾಗುತ್ತಾ ನಡೆದಿದೆ. ಹೀಗಾಗಿ ಇಂದಿನ ಕಾದಂಬರಿಗಾರ್ತಿಯರಿಗೆ ವಸ್ತುವಿನ ಆಯ್ಕೆಯಲ್ಲಿ ಹಲವಾರು ಅವಕಾಶಗಳಿವೆ. ಈ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವ ಬುದ್ಧಿ ಕಾದಂಬರಿಗಾರ್ತಿಯರಿಗೆ ಬೇಕು.

ವಸ್ತುವಿನಲ್ಲಿ ವೈವಿಧ್ಯತೆ ಇಲ್ಲ. ಬಾಲ ವಿಧವೆಯರ ಕಣ್ಣೀರು, ಹೆಣ್ಣಿನ ಅಸಹಾಯಕತೆ, ಹೆಣ್ಣಿನ ಹೀನಸ್ಥಿತಿ, ವಿಧವಾಜೀವನದ ಸಮಸ್ಯೆ, ನೀತಿ, ರೀತಿ ಕುರಿತ ಮುಖ್ಯ ವಿಷಯಗಳು ವಿಶೇಷವಾಗಿ ಕಾದಂಬರಿಗಾರ್ತಿಯರು ಆಯ್ಕೆಮಾಡಿರುವ ವಸ್ತುವಾಗಿದೆ. ವಸ್ತು ಹಳೆಯದೇ. ಈಚೀಚೆಗೆ ಪ್ರಕಟವಾಗಿರುವ ಕಾದಂಬರಿಗಳಲ್ಲಿ ಸವಕಲು ನಾಣ್ಯವನ್ನೇ ಮತ್ತೆ ಮತ್ತೆ ಚಲಾವಣೆಗೆ ತರುವ ಪ್ರಯತ್ನ ನಡೆಯುತ್ತಿದೆ. ವಿಶ್ವದ ಮಹಾ ಸಮಸ್ಯೆಗಳತ್ತ ಲೇಖಕಿಯರು ಗಮನ ಹರಿಸಬೇಕಾಗಿದೆ. ಲೇಖಕಿಯರ ಕೃತಿಗಳು ಕಳೆದ ಹತ್ತು ಹದಿನೈದು ವರ್ಷಗಳಿಂದ ಮಳೆಗಾಲದ ಜಲಪಾತದಂತೆ ಧುಮುಕುತ್ತಿದ್ದರೂ ಅವಿನ್ನೂ ಜೀವನ ಸಾಗರದಾಳ ಕಾಣಬೇಕಾಗಿದೆ. ಕಾದಂಬರಿ ಗಾರ್ತಿಯರಲ್ಲಿ ಸಾಮಾಜಿಕ ಪ್ರಜ್ಞೆ ಇನ್ನೂ ಗಾಢವಾಗಬೇಕಾಗಿದೆ. ಬದುಕಿನ ಎಲ್ಲ ವಿಧವಾದ ಸಮಸ್ಯೆಗಳ ಚಿತ್ರಣ ಮೂಡಿಬರಬೇಕಾಗಿದೆ. ಲೇಖಕಿಯರ ಕೃತಿಗಳಲ್ಲಿ ರಾಷ್ಟ್ರಪ್ರಜ್ಞೆ, ಅಂತರರಾಷ್ಟ್ರೀಯ ಪ್ರಜ್ಞೆಗಳ ತೀವ್ರ ಕೊರತೆಯಿದೆ. ಹೆಚ್ಚು ಕಾದಂಬರಿಗಳು ಮನರಂಜನೆ ನೀಡಿದರೂ, ಬುದ್ಧಿಯ ಮೇಲೆ ಯಾವ ಪ್ರಭಾವವನ್ನೂ ಬೀರಲಾರವು. ಈಗ ವ್ಯಾವಹಾರಿಕ ಭಾಷೆಯಲ್ಲೇ ಕಾದಂಬರಿಗಳು ಬರುತ್ತಿವೆ. ಸಣ್ಣ ಕಥೆಯನ್ನು ವಿಸ್ತರಿಸಿಬಿಟ್ಟರೆ ಕಾದಂಬರಿಯಾಯಿತು ಎಂದು ತಿಳಿದು ಬರೆಯು ತ್ತಿರುವ ಲೇಖಕಿಯರ ಸಂಖ್ಯೆಗೂ ಮಿತಿಯಿಲ್ಲವಾಗಿದೆ.

ಲೇಖಕಿಯರ ಕಾದಂಬರಿಗಳ ಹುಚ್ಚು ಹೊಳೆ ಹರಿಯುತ್ತಿದೆ. ಮನೋ ರಂಜನೆಯೇ ಇಂದಿನ ಹೆಚ್ಚು ಕಾದಂಬರಿಗಳ ಗುರಿ. ಶ್ರಮಜೀವಿಗಳ, ದೀನದಲಿತರ ಚಿತ್ರಣ ತುಂಬ ಅಪರೂಪವಾಗುತ್ತಿದೆ. ಕಾದಂಬರಿಗಾರ್ತಿಯರಿಗೂ ಸಹಜವಾದ ಸ್ವಾತಂತ್ರ್ಯವೂ ಇಲ್ಲ. ಯಾಕೆಂದರೆ ಪ್ರಕಾಶಕರು ಕಾದಂಬರಿಗಳಿಗೆ ಪುಟ ಸಂಖ್ಯೆಯ ನಿರ್ಬಂಧ ಹಾಕುತ್ತಿದ್ದಾರೆ. ಆದ್ದರಿಂದ ಲೇಖಕಿಯರು ಕೂಡ ಸಾಹಿತ್ಯದ ದೃಷ್ಟಿಯ ಜೊತೆಗೆ ಮಾರಾಟದ ದೃಷ್ಟಿಯನ್ನೂ ಕೂಡಿಸಿಕೊಳ್ಳಬೇಕಾಗಿದೆ.

ಉತ್ತಮ ಮಟ್ಟದ ಕಾದಂಬರಿಗಳೂ ಬಂದಿವೆ. ಹೊಸ ಹೊಸ ಕಾದಂಬರಿ ಗಾರ್ತಿಯರ ಸೃಷ್ಟಿಯೂ ಆಗಿದೆ. ಕೆಲವು ಕಾದಂಬರಿಗಾರ್ತಿಯರು ತಮ್ಮ ಕೃತಿಗಳಲ್ಲಿ ಜನಜೀವನವನ್ನು ವಾಸ್ತವವಾಗಿ ಚಿತ್ರಿಸಿರುವ ರೀತಿ, ಹರಿತವಾದ ಬರಹ, ಇವು ಬೆರಗುಗೊಳಿಸುವಂತಿವೆ. ಈ ಕಾದಂಬರಿಗಾರ್ತಿಯರು ಗಟ್ಟಿ ನೆಲದ ಮೇಲೆ ನಿಂತು ಸುತ್ತಲೂ ನೋಡಿ ಓದುಗರೊಡನೆ ಸಹಾನುಭೂತಿ ಹಾಗೂ ಕಲ್ಪನೆಯ ಸಂಪರ್ಕ ವನ್ನು ತಮ್ಮ ಕೃತಿಗಳ ಮೂಲಕ ಸಾಧಿಸಿದ್ದಾರೆ.

ಕಾದಂಬರಿಗಾರ್ತಿಯರ ಇತಿಮಿತಿಗಳನ್ನು ಗಮನಿಸಿದಾಗ ತಂತ್ರದಲ್ಲಿ, ಶೈಲಿ ಯಲ್ಲಿ, ವಸ್ತುವಿನಲ್ಲಿ ಹೆಚ್ಚು ವ್ಯತ್ಯಾಸ ಕಂಡುಬರುವುದಿಲ್ಲ. ಒಂದು ರೀತಿಯ 'monotony' ಏಕನಾದವನ್ನು ಸುಲಭವಾಗಿ ಗುರುತಿಸಬಹುದು.

ಮನಸ್ಸಿನ ಪದರಗಳನ್ನು ಬಿಚ್ಚುವುದರಲ್ಲಿ ಕೆಲವು ಲೇಖಿಕಿಯರು ಆಸಕ್ತಿ ತೋರಿಸಿದ್ದಾರೆ. ಕೆಲವರು ಅನುಭವಗಳಿಗೆ ಜೀವಗೂಡಿಸಿ ಅವು ಓದುಗರ ಕಣ್ಣಿಗೆ ಕಟ್ಟುವಂತೆ ಮಾಡುವ ಕಲಾತಂತ್ರಗಳನ್ನು ಚೆನ್ನಾಗಿ ಗಳಿಸಿದ್ದಾರೆ. ಜೀವನದ ಸಿಹಿ ಕಹಿಯ ಚಿಕ್ಕ ಚಿಕ್ಕ ಸನ್ನಿವೇಶಗಳನ್ನು ಹುಡುಕಿ ಪರಸ್ಥಿತಿ ಮತ್ತು ಪಾತ್ರಗಳ ಸೂಕ್ಷ್ಮ ವ್ಯತ್ಯಾಸಗಳನ್ನು ನಮಗೆ ತೋರಿಸಿಕೊಟ್ಟಿದ್ದಾರೆ.

ಕಾದಂಬರಿಕ್ಷೇತ್ರದಲ್ಲಿ ಮಹಿಳೆಯರಿಗೆ ಗೌರವಯುತವಾದ ಸ್ಥಾನವನ್ನು ದೊರಕಿಸಿಕೊಟ್ಟ ಕೀರ್ತಿ ದಿವಂಗತ ಶ್ರೀಮತಿ ತ್ರಿವೇಣಿಗೆ ಸಲ್ಲತಕ್ಕದ್ದು. ಬರೆಯಲು ಪ್ರಾರಂಭಿಸಿದ ಹತ್ತು ವರ್ಷಗಳಲ್ಲೇ ಇಪ್ಪತ್ತು ಕಾದಂಬರಿಗಳನ್ನು ಬರೆದು ಇವರು 1950 ರಿಂದ 1960ರ ದಶಕದಲ್ಲಿ ಪ್ರಸಿದ್ಧಿಗೆ ಬಂದರು. ಕಾದಂಬರಿ ಪ್ರಕಾರದಲ್ಲಿ ಹೆಚ್ಚು ಉತ್ಸಾಹದಿಂದ ಕಾಲಿರಿಸಿದ ತ್ರಿವೇಣಿ ಕನ್ನಡ ಕಾದಂಬರಿಗಾರ್ತಿಯರಲ್ಲಿ ಮನೋವಿಜ್ಞಾನವನ್ನು ಕುರಿತು ಕಾದಂಬರಿ ರಚನೆಮಾಡಿದವರಲ್ಲಿ ಮೊದಲಿಗರು. ಇವರ ಮೊದಲ ಕೃತಿ 'ಹೂವು ಹಣ್ಣು' 1953ರಲ್ಲಿ ಬೆಳಕು ಕಂಡಿತು. ಇವರ ಕೃತಿಗಳಲ್ಲಿ ಹೆಣ್ಣಿಗೇ, ಹೆಣ್ಣಿನ ಸಮಸ್ಯೆಗಳಿಗೇ ಹೆಚ್ಚಿನ ಪ್ರಾಶಸ್ತ್ಯ. ಜನಸಾಮಾನ್ಯರಿಗಾಗಿಯೇ ರಚಿತವಾದ ಕಾದಂಬರಿಗಳ ಸಂಖ್ಯೆಯೇ ಹೆಚ್ಚು. ಮಹಿಳೆಯರ ನಿತ್ಯ ಜೀವನದ ಸತ್ಯ ದುರಂತ ಚಿತ್ರಗಳನ್ನೇ ಕಂಡು ನೊಂದ ತ್ರಿವೇಣಿ ಪ್ರಗತಿಶೀಲ ಲೇಖಕಿ. ತಮ್ಮ ಕೃತಿಗಳಲ್ಲಿ ಅವರು ಮಹಿಳೆಯರ ಬಗ್ಗೆ ಅಭಿಮಾನ ತೋರಿಸಿ, ಗಂಡಸಿನ ದಬ್ಬಾಳಿಕೆ, ಇತ್ಯಾದಿಗಳನ್ನು ಎದುರಿಸುವ ಮಹಿಳೆಯರಿಗೆ ಸಾಮರ್ಥ್ಯ, ಉತ್ಸಾಹ, ಧೈರ್ಯದಿಂದ ಮುನ್ನುಗ್ಗಿ ನಿಮ್ಮ ಗುರಿ, ಆದರ್ಶಗಳನ್ನು ಸಾಧಿಸಿ ಎಂದಿದ್ದಾರೆ. ಈ ಕಾರಣದಿಂದ ಪುರುಷ ಲೇಖಕರು, ವಿಮರ್ಶಕರು ತ್ರಿವೇಣಿಯನ್ನು 'ಮಹಿಳಾ ಪಕ್ಷಪಾತಿ' ಎಂದು ಟೀಕೆ ಮಾಡಿದ್ದಾರೆ.

ಬೆಳ್ಳಿಮೋಡ, ಅಪಸ್ವರ, ಬೆಕ್ಕಿನಕಣ್ಣು, ಶರಪಂಜರ ತ್ರಿವೇಣಿಯ ಜನಪ್ರಿಯ ಕಾದಂಬರಿಗಳು. ಇವರ ಎಲ್ಲ ಕಾದಂಬರಿಗಳೂ ಒಂದೇ ರೀತಿಯ ಯಶಸ್ಸನ್ನು ಪಡೆದಿವೆ ಎಂದು ಹೇಳಲಾಗದಿದ್ದರೂ ಎಲ್ಲ ಕಾದಂಬರಿಗಳೂ ತುಂಬಾ ವಾಚನೀಯವಾಗಿವೆ. 1963ರಲ್ಲಿ ಪ್ರಕಟವಾದ 'ಹಣ್ಣೆಲೆ ಚಿಗುರಿದಾಗ' ತ್ರಿವೇಣಿಯ ಸಫಲ ಸಾಹಿತ್ಯ ಕೃತಿಗಳಲ್ಲೊಂದು. ಇತರ ಎಲ್ಲ ಕಾದಂಬರಿಗಳು ಜನಪ್ರಿಯವಾಗಿದ್ದರೂ ಇವರ ಯಾವ ಒಂದು ಕೃತಿಯೂ 'ಮಹತ್ಸಾಧನೆಯ ಮೇರುಕೃತಿ' ಎನಿಸುವ ಮಟ್ಟಕ್ಕೆ ಬರಲಿಲ್ಲ. ಚಿಕ್ಕವಯಸ್ಸಿನಲ್ಲಿಯೇ ನಿಧನರಾಗಿ ಕಾದಂಬರಿ ಲೋಕಕ್ಕೆ ತುಂಬಲಾಗದ ನಷ್ಟವಾಯಿತು. ಅವರು ಗತಿಸಿ 12 ವರ್ಷಗಳಾಗಿದ್ದರೂ ಅವರ ಜನಪ್ರಿಯತೆಯಿನ್ನೂ ಕಡಿಮೆಯಾಗಿಲ್ಲ.

ಸ್ವಾತಂತ್ರ್ಯ ಪೂರ್ವದಿಂದ ಬರೆಯುತ್ತಿರುವ ಶ್ರೀಮತಿ 'ವಾಣಿ' ಸ್ವಾತಂತ್ರ್ಯ ಬಂದ ನಂತರ ಹಲವಾರು ವರ್ಷಗಳು ತಟಸ್ಥವಾಗಿದ್ದು ನಂತರ ಇಪ್ಪತ್ತಕ್ಕೂ ಹೆಚ್ಚಿನ

ಸಂಖ್ಯೆಯಲ್ಲಿ ಕಾದಂಬರಿಗಳನ್ನು ರಚಿಸಿರುವ ಲೇಖಕಿ. ಬಿಡುಗಡೆ, ಚಿನ್ನದ ಪಂಜರ, ಎರಡು ಕನಸು, ಮನೆಮಗಳು, ಶುಭಮಂಗಳ, ಅಂಜಲಿ ಮುಂತಾದ ಉತ್ತಮ ಕಾದಂಬರಿಗಳನ್ನು ಬರೆದಿರುವ ಹಿರಿಯ ಕಾದಂಬರಿಗಾರ್ತಿ 'ವಾಣಿ' ಸರಳವಾಗಿ, ಸೊಗಸಾಗಿ, ಸಹಜವಾಗಿ ಕೃತಿಗಳನ್ನು ರಚಿಸಬಲ್ಲರು. ಗುರಿಸಾಧನೆಯ ದೃಷ್ಟಿಯಿಂದ 'ಕಿವುಡು'ತನದ ಬಗ್ಗೆ ಅವರು ಬರೆದಿರುವ 'ಅಂಜಲಿ' ಒಂದು ಯಶಸ್ವೀ ಕಾದಂಬರಿ.

ತಮ್ಮ ಇಳಿವಯಸ್ಸಿನಲ್ಲಿ, ಬದುಕಿನ ಬುತ್ತಿಯನ್ನು ತುಂಬಿಕೊಂಡ ನಂತರ, ಮಕ್ಕಳು, ಮೊಮ್ಮಕ್ಕಳನ್ನು ನೋಡಿದ ನಂತರ ಕಾದಂಬರಿ ರಚಿಸಲು ಪ್ರಾರಂಭಿಸಿ ಬಹುಬೇಗ ಜನಪ್ರಿಯತೆ ಗಳಿಸಿದ ಕಾದಂಬರಿಗಾರ್ತಿ ಶ್ರೀಮತಿ ಎಂ. ಕೆ. ಇಂದಿರ. ಇವರು ಇಪ್ಪತ್ತೈದಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿದ್ದಾರೆ. ತುಂಗ-ಭದ್ರ, ಶಾಂತಿಧಾಮ, ಚಿದ್ವಿಲಾಸ, ಗೆಜ್ಜೆ ಪೂಜೆ ಇವರ ಉತ್ತಮ ಕಾದಂಬರಿಗಳು. 'ಶಾಂತಿ ಧಾಮ' ಕೃತಿಯಲ್ಲಿ ಕಾದಂಬರಿಗಾರ್ತಿ ಹಲವಾರು ಪಾತ್ರಗಳನ್ನು ಅಳವಡಿಸಿಕೊಂಡು, ಅವುಗಳ ಸಮಗ್ರ ಜೀವನದ ನಿರೂಪಣೆಯ ಮೂಲಕ ಯಶಸ್ವಿಯಾಗಿ ಜೀವಂತ ಚಿತ್ರಣ ನೀಡಿದ್ದಾರೆ. ಲೇಖಕಿಗೆ ಜೀವನದ ಬಗ್ಗೆ ಸಾಕಷ್ಟು, ಸಮಗ್ರವಾದ ಅನುಭವವಿದ್ದು, ಆ ಅನುಭವದ ಮೂರ್ತತೆಯನ್ನು ಯಶಸ್ವಿಯಾಗಿ ಕಾದಂಬರಿಗಳಲ್ಲಿ ನಿರೂಪಿಸಿರುವುದು ಕಂಡುಬರುವುದು. ಹಲವಾರು ಸಾಮಾಜಿಕ ಸಮಸ್ಯೆಗಳ ಮೇಲೂ ಇವರು ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳೆಲ್ಲ ಯಶಸ್ವಿಯಾಗಿವೆ ಎಂದು ಹೇಳಲಾಗದಿದ್ದರೂ ಇವರ ಒಂದೊಂದು ಕಾದಂಬರಿಯಲ್ಲಿ ಒಂದೊಂದು ಹೊಸ ಸಮಸ್ಯೆ ಇದೆ, ವಾಸ್ತವಿಕ ಅನುಭವವಿದೆ, ಬದುಕನ್ನು ಆಳವಾಗಿ ನೋಡುವ ಪ್ರಯತ್ನವಿದೆ. ಪಾತ್ರಗಳು ಮಾನವೀಯತೆಯಿಂದ ಓದುಗರ ಮನಸೆಳೆಯುತ್ತವೆ.

ದಿವಂಗತ ಶ್ರೀಮತಿ ಎಂ. ಕೆ. ಜಯಲಕ್ಷ್ಮಿ ಹದಿನಾರು ಕಾದಂಬರಿಗಳನ್ನು ಬರೆದಿರುವ ಸ್ವಾತಂತ್ರ್ಯೋತ್ತರ ಕಾದಂಬರಿಗಾರ್ತಿ. 'ಬಾಳಿನ ಪಥ', 'ಸಂಸಾರ ಸಮರ', 'ಮೋಡ ಚದುರಿತು', 'ಬಾಳು ಬೆಳಗಿತು' ಇವರ ಉತ್ತಮ ಮಟ್ಟದ ಕಾದಂಬರಿಗಳು.

ನೀಳಾದೇವಿ ಮತ್ತೊಬ್ಬ ಜನಪ್ರಿಯ ಕಾದಂಬರಿಗಾರ್ತಿ. ಇವರು ತಮಗಿರುವ ವಿಶಾಲ ಅನುಭವದ ಕ್ಷೇತ್ರವನ್ನು ಹಿನ್ನೆಲೆಯಾಗಿಟ್ಟುಕೊಂಡು ಕಾದಂಬರಿಗಳ ಮೂಲಕ ತಮ್ಮ ಅನುಭವಕ್ಕೆ ಸಾಹಿತ್ಯ ರೂಪವನ್ನು ಕೊಡುವ ಯತ್ನಮಾಡಿದ್ದಾರೆ.

ವೈದ್ಯರಾಗಿ ಸೇವೆಸಲ್ಲಿಸುತ್ತಿರುವ ಶ್ರೀಮತಿ ಅನುಪಮಾ ನಿರಂಜನ 'ಸ್ನೇಹ ಪಲ್ಲವಿ', 'ನೂಲು ಸೇರಿದ್ದ ಚಿತ್ರ', 'ಶ್ವೇತಾಂಬರಿ', 'ಆಕಾಶಗಂಗೆ' ಮುಂತಾದ ಇಪ್ಪತ್ತಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿ ಜನಪ್ರಿಯರಾಗಿದ್ದಾರೆ.

ಕಾದಂಬರಿ ಕ್ಷೇತ್ರದಲ್ಲಿ ಈಚೀಚೆಗೆ ಬಹುಸಂಖ್ಯಾತ ಲೇಖಕಿಯರು ಕಾಲಿರಿಸಿ ಕೃತಿರಚನೆ ಮಾಡುತ್ತಿದ್ದಾರೆ. ಕೆಲವು ಕಾದಂಬರಿಗಾರ್ತಿಯರು ತುಂಬ ಜನಪ್ರಿಯ ವಾದ ಕಾದಂಬರಿಗಳನ್ನು ರಚಿಸಿದ್ದಾರೆ. 'ಜನಪ್ರಿಯತೆ'ಯನ್ನು ಕುರಿತು ಒಂದು ಮಾತು. ಒಳ್ಳೆಯ ಸಾಹಿತ್ಯಕೃತಿ ಜನಪ್ರಿಯವಾಗದಿರಬಹುದು. ಜನಪ್ರಿಯವಾದ ಕೃತಿಯೊಂದು ಒಳ್ಳೆಯ ಸಾಹಿತ್ಯವಾಗಬೇಕಾಗಿಲ್ಲ. ಆದರೆ ಒಳ್ಳೆಯ ಸಾಹಿತ್ಯಕೃತಿ ಮಾತ್ರ ಎಲ್ಲ ಕಾಲಕ್ಕೂ ಒಳ್ಳೆಯ ಕಾದಂಬರಿಯಾಗಿ ಉಳಿಯಬಲ್ಲದು. ಕಾದಂಬರಿ ಗಾರ್ತಿಯರ ಹೆಚ್ಚು ಕೃತಿಗಳು ಸಾಕಷ್ಟು ಜನಪ್ರಿಯತೆಗಳಿಸಿದ್ದರೂ ಒಳ್ಳೆಯ ಸಾಹಿತ್ಯ ಕೃತಿಗಳೆಂದು ಹೇಳಲು ಸಾಧ್ಯವಿಲ್ಲ.

ಕಾದಂಬರಿಗಾರ್ತಿಯರ ಕೃತಿಗಳನ್ನು ಒಟ್ಟಾರೆ ಸಮೀಕ್ಷಿಸಿದರೆ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದು. ಉತ್ತಮ ಕೃತಿಗಳು ಸ್ವಾರಸ್ಯವಾಗಿ ಓದಿಸಿಕೊಂಡು ಹೋಗುತ್ತವೆ. ಓದುಗರ ಆಸಕ್ತಿ ಉಳಿಯುವಂತೆ ಕಥೆಯನ್ನು ಬೆಳೆಸಿಕೊಂಡು ಹೋಗುವ ಸಾಮರ್ಥ್ಯ ಕಾದಂಬರಿಗಾರ್ತಿಯರಿಗಿದೆ. ರಚನೆ, ತಂತ್ರ ಗಳಲ್ಲಿ ಮಹತ್ತರವಾದ ಬೆಳವಣಿಗೆ ಕಾಣಿಸಿದೆ. ಕೆಲವು ಕೃತಿಗಳಲ್ಲಿ ನೂರುಕಾಲ ನಿಲ್ಲುವ ಸಾಹಿತ್ಯ ನಿರ್ಮಾಣ ಆಗುವ ಸೂಚನೆಗಳಿವೆ. ಸರಳವಾದ ವಸ್ತು, ನೇರ ವಾದ ಕಥಾ ನಿರೂಪಣೆ, ತೊಡಕಿಲ್ಲದ ಪಾತ್ರರಚನೆ–ಇವರ ಜನಪ್ರಿಯತೆಗೆ ಕಾರಣ ವಾಗಿವೆ. ಆದರೆ ಇನ್ನೂ ಸಿದ್ಧತೆ, ಶ್ರಮ ಅಗತ್ಯ. ಸಾಹಿತ್ಯಕ್ಷೇತ್ರದಲ್ಲಿ ಜನಪ್ರಿಯತೆ ಸಿದ್ಧಿಗೆ ಮಾನದಂಡವಾಗಬಾರದು.

ಸಂಸಾರ ಜೀವನ, ಹೆಣ್ಣಿನ ಸಮಸ್ಯೆಗಳ ಬಗ್ಗೆ ಸ್ತ್ರೀ ಲೇಖನಿ ನಿರರ್ಗಳವಾಗಿ ಹರಿದಿದೆ. ಆದರೆ ಸ್ತ್ರೀ ಲೇಖನಿ ಇವುಗಳಿಗೇ ಸೀಮಿತವಾಗಬಾರದು. ಆಳವೂ, ವಿಸ್ತಾರವೂ ಇಲ್ಲದ ಕೃತಿಗಳನ್ನು ಕಾದಂಬರಿಗಾರ್ತಿಯರು ಏಕೆ ಬರೆಯುತ್ತಾರೆ ಎನ್ನುವ ಟೀಕೆಯೂ ಕೇಳಿಬರುತ್ತಿದೆ. ಜೀವನದಲ್ಲಿ ಎಷ್ಟು ವೈವಿಧ್ಯವಿದೆಯೋ ಕಾದಂಬರಿಗಾರ್ತಿಯರ ಕೃತಿಗಳಲ್ಲಿ ಅಷ್ಟು ವೈವಿಧ್ಯವಿಲ್ಲ. ರಾಜಕೀಯ ಸಮಸ್ಯೆಯ ಚಿತ್ರಣವೂ ತುಂಬ ಅಪರೂಪ. ಹೆಚ್ಚು ಕಾದಂಬರಿಗಾರ್ತಿಯರು ಪಟ್ಟಣದಲ್ಲಿ ವಾಸಿಸುವ ಮಧ್ಯಮವರ್ಗಕ್ಕೆ ಸೇರಿದವರಾದ್ದರಿಂದ ಅವರ ಕೃತಿಗಳಲ್ಲಿ ಗ್ರಾಮ ಜೀವನ, ಬಡತನ, ಪ್ರಾದೇಶಿಕತೆ, ಆದಿವಾಸೀ ಜನರ ಜೀವನದ ಬಗ್ಗೆ ಕಾದಂಬರಿ ಗಳು ಬರುತ್ತಿರುವುದು ತುಂಬ ವಿರಳ. ಹೊಸ ಪ್ರವೃತ್ತಿಯ ಕಾದಂಬರಿಗಳೂ ಹೆಚ್ಚು ಬರುತ್ತಿಲ್ಲ. ಲೇಖಕಿಯರ ಕೃತಿಗಳಲ್ಲಿ ಜೀವನದ ಸಮಗ್ರತೆಗೆ ದನಿಗೂಡಿಸುವ ಪ್ರಯತ್ನ ನಡೆಯುತ್ತಿಲ್ಲ. ಎಲ್ಲವನ್ನೂ ಚೆನ್ನಾಗಿ ಅರಿತು ಬರೆಯುವವರ ಸಂಖ್ಯೆ ಕಡಿಮೆ. ಓದುಗರಿಗೆ ಬೇಕಾದುದನ್ನೇ ಕೊಡುವ ಪ್ರಯತ್ನ ನಡೆಯುತ್ತಿದೆ. ಓದುಗರ ಮಟ್ಟ ಕಡಿಮೆಯಾಗುತ್ತಿದೆ. ಹೀಗಾಗಿ ಕಾದಂಬರಿಗಳ ಮಟ್ಟವೂ ಕಡಿಮೆ ಯಾಗುತ್ತಿದೆ.

ಲೇಖಕಿಯರ ಹೆಚ್ಚು ಕಾದಂಬರಿಗಳಲ್ಲಿ ಬರುವ ವಿಚಿತ್ರ ತಿರುವು, ಆಕಸ್ಮಿಕ ಸೋಜಿಗ, ನೋವು-ನಲಿವು ಇವುಗಳಿಂದ ಓದುಗರ ಆಸಕ್ತಿ ಕೆರಳಿದರೂ ಅವು ಒಟ್ಟಾರೆ ಕೊಡುವ ಅನುಭವ ಗಟ್ಟಿಯಾದದ್ದಲ್ಲ.

ಮಹಿಳೆಯರ ಸ್ವಾತಂತ್ರ್ಯಪ್ರಿಯತೆ, ಜೀವನದಲ್ಲಿ ಹುದುಗಿ ಕುಳಿತಿರುವ ಸುಖ ದುಃಖಗಳ ನಿವೇದನ, ನೊಂದವರ ಬಗ್ಗೆ ಅನುಕಂಪ ಲೇಖಕಿಯರ ಕೃತಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಆದರೆ ಪ್ರತಿ ಸಮಸ್ಯೆಯನ್ನೂ ಚರ್ಚಿಸಿ, ತರ್ಕಿಸಿ, ವಿವೇಚಿಸಿ ತಿಳಿಯಬೇಕೆಂಬ ಆಸೆಯ ಜೊತೆಗೆ ದೇಶದ, ಸಮಾಜದ, ಸರ್ವತೋಮುಖ ವಾದ ಪ್ರಗತಿಗೆ ವಿರೋಧ ಬರುವ ದೇವರು, ಧರ್ಮ, ನೀತಿ, ವ್ಯವಹಾರ, ಮೂಢ ನಂಬಿಕೆಗಳು, ಆಚಾರ ಸಂಪ್ರದಾಯಗಳ ಕಲ್ಪನೆಗಳನ್ನೆಲ್ಲಾ ಎದುರಿಸಿ ನಿವಾರಿಸ ಬೇಕೆಂಬ ಅಪೇಕ್ಷೆ ಮಾತ್ರ ಕಾದಂಬರಿಗಾರ್ತಿಯರಲ್ಲಿ ಸ್ಪಷ್ಟವಾಗಿ ಕಾಣುತ್ತಿಲ್ಲ. ಕಾಲಕ್ಕೆ ತಕ್ಕಂತೆ ಕಾದಂಬರಿಗಳು ಸೃಷ್ಟಿಯಾಗುತ್ತಿವೆ. ಆದರೆ ಅವುಗಳು ಕಾಲಗಳ ಇತಿಮಿತಿ ಯನ್ನು ಮೀರಿ ಸರ್ವಕಾಲಾನುಗುಣವಾಗಿರುವಂತೆಯೂ ಸೃಷ್ಟಿಯಾಗಬೇಕು.

ಕಲಾದೃಷ್ಟಿಯಿಂದ ಕಾದಂಬರಿಗಾರ್ತಿಯರ ಬೆಳೆ ಹುಲುಸು. ಆದರೆ ವಿಚಾರ ದೃಷ್ಟಿಯಿಂದ ತೃಪ್ತಿದಾಯಕವಾಗಿಲ್ಲ. ಹೇಳಿದ್ದನ್ನೇ ಹೇಳುವ ಕಾದಂಬರಿಗಾರ್ತಿ ಯರು ಹೆಚ್ಚಾಗಿದ್ದಾರೆ. ಮನರಂಜನೆಯೇ ಪ್ರಧಾನವಾದ ಇವರ ಕೃತಿಗಳಲ್ಲಿ ಸ್ತ್ರೀಯರ ಬದುಕಿನಲ್ಲಿ ಉದ್ಭವಿಸುವ ಸಮಸ್ಯೆಗಳ ಚಿತ್ರಣವೇ ಪ್ರಮುಖವಾದುದು. ಕೆಲವರು ಗಂಭೀರವಾದ ಸಮಸ್ಯಾತ್ಮಕವಾದ ವಸ್ತುವನ್ನು ಆಯ್ಕೆ ಮಾಡಿದ್ದರೂ, ಹೆಣ್ಣಿನ ಮೂಲಕ ಸಮಾಜವನ್ನು ನೋಡಿ, ಉಳಿದ ಕಡೆಗಳನ್ನು ಮರೆತು ಸಮಗ್ರ ದೃಷ್ಟಿಯನ್ನು ತೋರಿಸಲಾರದೆ ಹೋಗಿ ವಿಫಲರಾಗಿದ್ದಾರೆ. ಹೆಚ್ಚು ಕಾದಂಬರಿಗಳ ಗುರಿ ಮನರಂಜನೆ. ಉಳಿದದ್ದು ಏನಿದ್ದರೂ ಅತ್ಯಂತ ಗೌಣ ಸ್ಥಾನದಲ್ಲಿವೆ. ಸಿನಿಮೀಯ ದೃಶ್ಯಗಳಿಂದ ಅಪಕ್ವವಾಗಿ ಕಂಡು, ಭಾವುಕತನದ ಭಾರ ಹೊರಲಾರದೆ ಸೊರಗಿ ಹೋಗಿರುವ ಕೃತಿಗಳ ಸಂಖ್ಯೆಗೂ ಮಿತಿಯಿಲ್ಲವಾಗಿದೆ. ಕೆಲವರಂತೂ ಕ್ಷಣಿಕ ಆವೇಶದಿಂದಾಗಿ ಬರೆಯುತ್ತಾರೆ. ಅಂದಮಾತ್ರಕ್ಕೆ ಕನ್ನಡ ಕಾದಂಬರಿಗಾರ್ತಿಯರಲ್ಲಿ ಸತ್ವಶಾಲಿಯಾದ ಕೃತಿಗಳನ್ನು ಸೃಷ್ಟಿಸುವ ಚೈತನ್ಯವಿಲ್ಲವೆಂದಲ್ಲ, ಅಂಥವರೂ ಇದ್ದಾರೆ. ವಿಚಾರಶಾಲಿಗಳಾದ ಲೇಖಕಿಯರು ಸಹಜತೆಯ ಕಡೆಗೆ ಗಮನಕೊಟ್ಟು ತೀವ್ರವಾಗಿ ಆಲೋಚಿಸಬೇಕಾದ್ದು ಅತ್ಯಗತ್ಯ.

ಕೆಲವು ಲೇಖಕಿಯರು ಉತ್ತಮ ಮಟ್ಟದ ಕಾದಂಬರಿಗಳನ್ನು ರಚಿಸಿದ್ದರೂ, ಅವರ ಕೃತಿಗಳ ಮೌಲ್ಯಮಾಪನದ ವಿಚಾರವಾಗಿ ಒಂದು ಸ್ಪಷ್ಟ ಅಭಿಪ್ರಾಯ ಸಾಹಿತ್ಯ ಕ್ಷೇತ್ರದಲ್ಲಿ ಕಾಣಬರುವುದಿಲ್ಲ.

ಹತ್ತಿಪ್ಪತ್ತು ವರ್ಷಗಳಿಂದೀಚೆಗೆ ವಿಪುಲವಾಗಿ ಕಾದಂಬರಿಗಳು ಲೇಖಕಿಯರಿಂದ ಹೊರಬರುತ್ತಿವೆ. ಕಾದಂಬರಿಗಳನ್ನು ಓದುವವರೂ ಹೆಚ್ಚಾಗಿದ್ದಾರೆ. ಅವುಗಳನ್ನು

ಪ್ರಕಟಿಸಲು ಪತ್ರಿಕೆಗಳು, ಪ್ರಕಾಶಕರು ಮುಂದೆ ಬಂದಿದ್ದಾರೆ. ಇದು ನಿಜಕ್ಕೂ ಶುಭ ಚಿಹ್ನೆ. ಪ್ರೋತ್ಸಾಹವಿಲ್ಲದಿದ್ದ ಸಂಕಷ್ಟ, ಸಂದಿಗ್ಧಗಳ ಪರಿಸ್ಥಿತಿಯಲ್ಲೂ ಸ್ಥೈರ್ಯ, ಧೈರ್ಯಗಳಿಂದ ಸಾಹಿತ್ಯ ರಚಿಸಿದ ಶ್ರೀಮತಿ ಗೌರಮ್ಮ, ತ್ರಿವೇಣಿ, ಜಯಲಕ್ಷ್ಮಿಯವರಿಗೆ ನಾವು ಮನಸಾ ಅಭಿನಂದಿಸಬೇಕು. ಉತ್ತಮ ಕಾದಂಬರಿಗಳನ್ನು ರಚಿಸಬೇಕೆಂಬ ಹಂಬಲ, ಉತ್ಸಾಹ, ಶ್ರದ್ಧೆ ಕೆಲವರಲ್ಲಿ ಕಂಡುಬರುತ್ತಿದೆ. ಕೆಲವು ಕಾದಂಬರಿಗಾರ್ತಿಯರು ಉತ್ತಮ ಕೃತಿಗಳನ್ನು ರಚಿಸುವುದರಲ್ಲಿ ಸಫಲರಾಗಿದ್ದರೂ ಕಾದಂಬರಿಗಾರ್ತಿಯರ ಕೃತಿಗಳನ್ನು ಸಮೀಕ್ಷೆ ಮಾಡಿ ನೋಡಿದರೆ ಇದುವರೆವಿಗೆ ಅವರು ಸಾಧಿಸಿರುವುದು ಸಾಲದು, ಏನೇನೂ ಸಾಲದು ಎಂದು ಹೇಳಬಹುದು.

ಅಸಭ್ಯ ಕಾದಂಬರಿಗಳನ್ನು ಬರೆಯಲು ಒಂದು ಬಗೆಯ ಸಂಕೋಚ, ಸಂಯಮ ಪ್ರವೃತ್ತಿ ಕಾದಂಬರಿಗಾರ್ತಿಯರಲ್ಲಿ ಸ್ಪಷ್ಟವಾಗಿ ಕಂಡುಬರುವುದು. ಈ ಮಡಿವಂತಿಕೆಯ ಮಿತಿ ಸಾಹಿತ್ಯದ ಬೆಳವಣಿಗೆಯನ್ನು ಖಂಡಿತವಾಗಿ ಕುಂಠಿತಗೊಳಿಸುವುದು. ಯಾಕೆಂದರೆ ಒಂದು ಪ್ರಶ್ನೆಯನ್ನು ನಮಗೆ ನಾವೇ ಹಾಕಿಕೊಳ್ಳಬೇಕು. ಜೀವನ ಸಭ್ಯವಾಗಿದೆಯೇ ಖಂಡಿತ ಇಲ್ಲ. ಅದು ಬೇಕು, ಇದು ಬೇಡ, ಅದು ಸಭ್ಯ, ಇದು ಅಸಭ್ಯ ಎಂದು ಸಾಹಿತಿ ಹೇಳುವಂತಿಲ್ಲ. ಸತ್ಯವನ್ನು ಬಿಚ್ಚಿ ತೋರಿಸುವುದು ಸಾಹಿತಿಯ ಕರ್ತವ್ಯ.

ಒಟ್ಟಿನಲ್ಲಿ ಹೇಳುವುದಾದರೆ ಸ್ವಾತಂತ್ರ್ಯೋತ್ತರ ಕಾಲ ಕಾದಂಬರಿ ಯುಗ. ಹೆಚ್ಚಿನ ಸಂಖ್ಯೆಯಲ್ಲಿ ಕಾದಂಬರಿಗಾರ್ತಿಯರು ಹುಟ್ಟಿಕೊಂಡಿದ್ದಾರೆ. ಹೆಚ್ಚು ಕಾದಂಬರಿಗಳು ಏನನ್ನು ಸಾಧಿಸದಿದ್ದರೂ ಓದುವ ಅಭಿರುಚಿಯನ್ನು, ಕನ್ನಡಿಗರಲ್ಲಿ ಕನ್ನಡಾಭಿಮಾನವನ್ನು ಸ್ವಾತಂತ್ರ್ಯೋತ್ತರದಲ್ಲಿ ಹುಟ್ಟಿಸಿದವು, ಹುಟ್ಟಿಸುತ್ತಿವೆ ಎಂದು ಹೇಳಬಹುದು. ಕಾದಂಬರಿಗಾರ್ತಿಯರು ಭಾಷೆಯ ಶಕ್ತಿ, ಸತ್ವ, ಸಹಜತೆಗೆ ಪ್ರಾಮುಖ್ಯತೆಕೊಟ್ಟು ಎಲ್ಲ ಸಂವೇದನೆಗಳಿಗೂ ಅಭಿವ್ಯಕ್ತಿಕೊಡುವ ಅವಕಾಶ ಕೊಡಬೇಕು. ಓದುಗರ ಮಟ್ಟಕ್ಕೆ ಲೇಖಕಿಯರು ಇಳಿಯದೆ ಓದುಗರ ಮಟ್ಟವನ್ನು ಮೇಲಕ್ಕೆತ್ತುವ, ಅವರನ್ನು ಆಳುವ ಶಕ್ತಿಯನ್ನು ಸಂಪಾದಿಸಬೇಕು. ಜೀವನದ ಸುತ್ತ ಕವಿದಿರುವ ಕತ್ತಲೆಯ ತೆರೆಗಳನ್ನೇ ಸರಿಸಿ ಜ್ಞಾನ, ಪ್ರೇಮ, ಸೌಹಾರ್ದದ ಬೆಳ್ಳಿಯ ಬೆಳಕು ಚಿತ್ತರಿಸುವಂತೆ ಮಾಡಲು ಕಾದಂಬರಿಗಾರ್ತಿಯರು ಶ್ರಮಿಸಬೇಕು. ಕಾಲ ಕಾಲಕ್ಕೆ ಬದಲಾವಣೆಹೊಂದುತ್ತಿರುವ ಮೌಲ್ಯಗಳನ್ನು ಅವರು ವಿಚಾರಮಾಡಬೇಕು. ಹೆಚ್ಚು ಕಾದಂಬರಿಗಾರ್ತಿಯರಲ್ಲಿ ಕಾಣಬರುತ್ತಿರುವುದು ಕೇವಲ ಉತ್ಸಾಹ. ಉತ್ಸಾಹ ಒಂದಿದ್ದರೆ ಸಾಲದು. ಉತ್ಸಾಹ ಉದ್ವೇಗಕ್ಕೆ ಹೋಗದಂತೆ ತಡೆಗಟ್ಟಬೇಕು. ಪ್ರಸಿದ್ಧಿಗೆ ಬರಬೇಕೆಂಬ ಉದ್ದೇಶದಿಂದಲೇ ಬರೆಯುವುದು ನಿಲ್ಲಬೇಕು.

# ನಾ ಕಂಡ ಮಹಿಳೆ : (ಪೂರ್ವ) ಆಫ್ರಿಕದಲ್ಲಿ

**ವಸಂತ ವೆಂಕಟರಂಗನ್**

ಈಗ್ಗೆ ನಾಲ್ಕು ವರ್ಷಗಳ ಹಿಂದೆ 1971 ರಲ್ಲಿ ಸರ್ಕಾರದವರು ನಮ್ಮವರನ್ನು ಸಂಸಾರ ಸಮೇತ ಟಾಂಜೇನಿಯಾಗೆ ಕಳುಹಿಸಲಿದ್ದಾರೆ ಎಂಬ ಸುದ್ದಿ ತಿಳಿಯುತ್ತಲೂ ಹೊಸ ಭಾಗ, ಹೊಸ ಜನ ಹೀಗೆ ಹೊಸಹೊಸದಾಗಿ ಸದಾ ಏನನ್ನಾದರೂ ನೋಡುವ ಕುತೂಹಲವಿದ್ದ ನಾನು ಬಹಳ ಉತ್ಸಾಹದಿಂದ ಹೊರಟೆ. ಆಫ್ರಿಕನ್ನರು ಕಪ್ಪಗಿರುತ್ತಾರೆ ಎನ್ನುವ ವಿಷಯದ ವಿನಾ ನನಗೆ ಮತ್ತೇನೂ ಅವರ ವಿಷಯ ತಿಳಿದಿರಲಿಲ್ಲ. ಪೂರ್ವ ಆಫ್ರಿಕದಲ್ಲಿರುವ ಟಾಂಜೇನಿಯಾದ ಮುಖ್ಯಪಟ್ಟಣವೂ ಬಂದರೂ ಆದ ಡಾರ್-ಎಸ್-ಸೆಲೊನಲ್ಲಿ ಕಾಲಿಟ್ಟಾಗ ನನಗೆ ಸ್ವಲ್ಪಮಟ್ಟಿಗೆ ಉತ್ಸಾಹ ಭಂಗವೇ ಆಯಿತೆನ್ನಬೇಕು. ಏಕೆಂದರೆ ಹೆಚ್ಚು ಕಡಿಮೆ ಬೊಂಬಾಯಲ್ಲಿರುವಂತಹುದೇ ಕಟ್ಟಡಗಳು, ಊರುಗಳಲ್ಲಿ ಹೆಚ್ಚಾಗಿ ನೋಡಸಿಗುವವರು ಏಷ್ಯನ್ನರು, ಕಿವಿಗೆ ಬೀಳುತ್ತಿದ್ದುದು ಪಂಜಾಬಿ, ಗುಜರಾತಿ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳು: ಸರಿ ಇಂಡಿಯಾದಲ್ಲಿ ಸಿಗುವಂತೆಯೇ ಉಪ್ಪು, ಹುಳಿ, ಅಕ್ಕಿ, ಬೇಳೆ, ತರಕಾರಿಗಳು ಸಮಸ್ತವೂ ಸಿಗುತ್ತಿತ್ತು. ನನಗಂತೂ ಇಂಡಿಯಾ ದೇಶವನ್ನು ಬಿಟ್ಟು ಸಾವಿರಾರು ಮೈಲಿಗಳಾಚೆ ಹೋದಂತೆಯೇ ಇಲ್ಲವಲ್ಲಾ ಎನಿಸುತ್ತಿತ್ತು. ಕ್ರಮೇಣ ತಿಳಿಯಿತು ಅಲ್ಲಿನ ಇತಿಹಾಸ.

ಈಗ್ಗೆ ಹದಿನಾಲ್ಕು ವರ್ಷಗಳ ಹಿಂದಷ್ಟೇ ಟಾಂಜೇನಿಯಾ ಸ್ವತಂತ್ರವಾಯಿತು. ಅದುವರೆಗೆ ಅಲ್ಲಿ ಆಳುತ್ತಿದ್ದವರು ಬ್ರಿಟಿಷರು. ವ್ಯಾಪಾರ ಮತ್ತಿತರ ಕೆಲಸಗಳನ್ನು ಮಾಡುತ್ತಿದ್ದವರು ಏಷ್ಯನ್ನರು. ಇತರ ಕೆಲಸ ಮಾಡುತ್ತಿದ್ದವರು ಆಫ್ರಿಕನ್ನರು. ಬಿಳಿಯರು ಆಫ್ರಿಕರನ್ನು ಹಾಗಿರಲಿ, ಏಷ್ಯನರನ್ನೂ ಸಹ ತಮ್ಮ ಮನೆ, ಸ್ಕೂಲು, ಕ್ಲಬ್ಬುಗಳಿದ್ದ ಆವರಣದ ಸುತ್ತ ಮುತ್ತ ಸಹ ಇರಲು ಅವಕಾಶ ಕೊಡುತ್ತಿರಲಿಲ್ಲ ಎಂದಮೇಲೆ ಪಟ್ಟಣಗಳಲ್ಲಿ ಆಫ್ರಿಕನ್ನರು ಮನೆ ಮಾಡುವುದಂತೂ ದೂರವಾದ ಮಾತೇ ಆಗಿತ್ತು. ಅಂದಿನಿಂದಲೂ ಅವರು ಊರುಗಳಿಂದ ಆರೆಂಟು ಮೈಲಿ ದೂರವಿರುವ ಹಳ್ಳಿಗಳಲ್ಲಿ ನೆಲಸಿದ್ದು, ಪ್ರತಿದಿನ ಪಟ್ಟಣಗಳಿಗೆ ನಡೆದು ಬಂದು ಕೆಲಸಗಳನ್ನು ಮಾಡುತ್ತಿದ್ದರು. ಇದು ಅವರಿಗೆ ದೂರ ಎನಿಸುವುದೂ ಇಲ್ಲ, ಈ ದೂರವನ್ನು ನಡೆಯುವುದವರಿಗೆ ಕಷ್ಟವೂ ಇಲ್ಲ. ಈಗಷ್ಟೇ ದೊಡ್ಡ ದೊಡ್ಡ ಹುದ್ದೆಗಳಲ್ಲಿರುವವರು ಸಾಮಾನ್ಯವಾಗಿ ಪಟ್ಟಣಗಳಲ್ಲಿ ವಾಸಮಾಡುತ್ತಾರೆ. ಚಿಕ್ಕ ಹುದ್ದೆ

ಗಳಲ್ಲಿರುವವರು ಪಟ್ಟಣದಲ್ಲಿ ಆ ಬಾಡಿಗೆ ಕೊಟ್ಟು, ಏರಿಕೆಯ ಬೆಲೆಗಳನ್ನೆದುರಿಸಿ ಜೀವನ ಮಾಡುವುದು ಕಷ್ಟವೇ ಆಗುತ್ತದೆ.

ಇನ್ನು ಸ್ತ್ರೀಯರ ವಿಷಯ. ಡಾರ್-ಎಸ್-ಸೆಲೊನಲ್ಲಿ ನಾನು ನೋಡಿದ ಮಟ್ಟಿಗೆ ಸ್ತ್ರೀಯರೆಲ್ಲರೂ ಫ್ರಾಕುಗಳನ್ನು ತೊಡುತ್ತಾರೆ. ಭಾನುವಾರ ಬೆಳಿಗ್ಗಿನಿಂದ ಸಂಜೆಯವರೆಗೆ ಗಂಡಸರೂ ಹೆಂಗಸರೂ, ಮಕ್ಕಳೂ ಚರ್ಚುಗಳಿಗೆ ತಂಡತಂಡವಾಗಿ ಹೋಗುತ್ತಿದ್ದುದನ್ನು ಕಂಡೆ. ಅಲ್ಲದೇ ಹುಸೇನಿ, ಮಹಮೇದಿ, ಸಯಾದಿ ಎಂದು ಗಂಡಸರು ಹೆಸರಿಟ್ಟುಕೊಂಡಿದ್ದುದನ್ನು ನೋಡಿ ಆಚ್ಚರಿಗೊಂಡುದಲ್ಲದೇ ಬುರ್ಖಾ ಹೊದ್ದುಕೊಂಡಿದ್ದ ಸ್ತ್ರೀಯರನ್ನು ನೋಡಿ ಮಹದಾಶ್ಚರ್ಯವೆನಿಸಿತು. "ನೀವೇಕೆ ಬುರ್ಖಾ ಹೊದ್ದುಕೊಂಡಿದ್ದೀರಿ?" ಎಂದು ಒಬ್ಬಾಕೆಯನ್ನು ಕೇಳಿದೆ. ಅವಳು 'ಇದು ನಮ್ಮ ಸಂಪ್ರದಾಯ' ಎಂದಳು. ಆಫ್ರಿಕನ್ನರೆನಿಸಿದ ಇವರಿಗೆ ತಮ್ಮದೇ ಜಾತಿ, ಮತ, ಸಂಪ್ರದಾಯಗಳಿಲ್ಲವೇ ? ಇವರೇಕೆ ಚರ್ಚುಗಳಿಗೂ ಮಸೀದಿಗಳಿಗೂ ಹೋಗಬೇಕು ? ಎಂದು ವಿಸ್ಮಯಪಟ್ಟು ಅನೇಕರನ್ನು ಈ ಬಗ್ಗೆ ಪ್ರಶ್ನಿಸಿದೆ. ಅವರುಗಳು ನಾಲ್ಕಾರು ತಲೆಮಾರುಗಳಿಂದ ಪಟ್ಟಣಗಳಲ್ಲಿ ನೆಲೆಸಿ, ತಮ್ಮ ಸಂಪ್ರದಾಯಗಳನ್ನು ಮರೆತೇ ಬಿಟ್ಟಿದ್ದಾರೆ. ಆದುದರಿಂದ ನನ್ನ ಪ್ರಶ್ನೆಗಳಿಗೆ ಯಾರೂ ಸಮರ್ಪಕವಾದ ಉತ್ತರ ಕೊಡಲಿಲ್ಲ. ಇದರಿಂದ ನನಗೆ ಉತ್ಸಾಹಭಂಗವಾಯಿತು.

ಕೆಲವೇ ತಿಂಗಳುಗಳಲ್ಲಿ ನಮ್ಮವರಿಗೆ ಸ್ವಲ್ಪಮಟ್ಟಿಗೆ ಹಳ್ಳಿಗಾಡು ಜೀವನದ ಸಂಪರ್ಕವಿರುವ ಅರೂಷಾ ಎಂಬಲ್ಲಿಗೆ ವರ್ಗವಾಯಿತು. ಅಲ್ಲಿ ನನಗೆ ಹೆಚ್ಚಿಗೆ ಸಂಖ್ಯೆಯಲ್ಲಿ ಆಫ್ರಿಕನ್ನರನ್ನು ನೋಡಲು ಸಾಧ್ಯವಾಯಿತು. ಸುತ್ತಮುತ್ತಲಿದ್ದ ಹಳ್ಳಿಗಳನ್ನು ನೋಡಲು ಸಾಧ್ಯವಾಯಿತು. ಹತ್ತಿರವಿದ್ದ ಪುಸ್ತಕ ಭಂಡಾರದಿಂದ ಅನೇಕ ಪುಸ್ತಕಗಳನ್ನು ತಂದು ಓದಿ, ಓದಿದುದನ್ನು ಕಣ್ಣಾರ ಕಂಡು ತೃಪ್ತಿಹೊಂದಿದೆ.

ಆಫ್ರಿಕನ್ನರ ಜನಜೀವನದಲ್ಲಿ ನಾವು ನೋಡುವ ಒಂದು ಮುಖ್ಯ ಅಂಶವೇನೆಂದರೆ evolution ವಿಕಾಸದಲ್ಲಿನ ಪ್ರತಿಯೊಂದು ಹಂತದಲ್ಲಿನ ಆಚರಣೆಗಳೂ ಸಮಕಾಲೀನವಾಗಿ ಈ ದಿನದವರೆಗೆ ನಡೆದು ಬರುತ್ತಿದೆ. ಶಿಲಾಯುಗದವರಂತೆ ಆಚಾರಗಳನ್ನು ಪಾಲಿಸುತ್ತಿದ್ದು, ಸೊಂಟಕ್ಕೊಂದು ತುಂಡು ಚರ್ಮ ಸುತ್ತಿ, ಅಂದಂದಿನ ಹೊಟ್ಟೆಪಾಡಿಗೆ ಬೇಕಾದ ಪ್ರಾಣಿಗಳನ್ನು ಬೇಟೆಯಾಡಿ ಜೀವಿಸುತ್ತಿರುವ ಕಾಡು ಜನರನ್ನೂ (Bushmen), ಕ್ರಮೇಣ ಏರ್ಪಟ್ಟ ಬದಲಾವಣೆಗೆ ಸ್ವಲ್ಪಮಟ್ಟಿಗೆ ಹೊಂದಿಕೊಂಡು ಸ್ವಲ್ಪಸ್ವಲ್ಪವೇ ಬದಲಾಯಿಸುತ್ತಿರುವ ಹಳ್ಳಿಗರನ್ನೂ, ಪಾಶ್ಚಾತ್ಯರ ಪ್ರಭಾವಕ್ಕೊಳಗಾಗಿ ಜಾತಿಮತಾಚರಣೆಗಳ ಬಂಧನವೆಲ್ಲವನ್ನೂ ಕಿತ್ತೊಗೆದು. ಪಾಶ್ಚಾತ್ಯರಂತೆಯೇ ಜೀವನವನ್ನು ರೂಪಿಸಿಕೊಂಡಿರುವ ಅತ್ಯಾಧುನಿಕ ಜನರನ್ನು ನೋಡಬಹುದು. ಆದುದರಿಂದ ಈ ಎಲ್ಲ ಜನರ ಜೀವನ ಕ್ರಮವನ್ನೂ ಗಮನಕ್ಕೆ

ತಂದುಕೊಳ್ಳದೇ ನಾವು ಅವರ ನಾಗರಿಕತೆಯ ಬಗೆಗೆ ಯಾವ ಒಂದು ನಿರ್ಣಯಕ್ಕೂ ಬರಲು ಸಾಧ್ಯವಿಲ್ಲ.

ಆಫ್ರಿಕನ್ನರಿಗೆ ತಿಳಿವನ್ನು ತಂದುಕೊಟ್ಟು, ಅವರನ್ನು ಉದ್ಧಾರ ಮಾಡುವ ಸಲುವಾಗಿ ಮತ್ತು ಆ ನೆವದಿಂದ 475 ವರ್ಷಗಳ ಹಿಂದೆ (1500–1975) ಆಫ್ರಿಕಕ್ಕೆ ಬಂದ ಬಿಳಿಯರು, ಅವರಲ್ಲಿ ಕ್ರಿಶ್ಚಿಯನ್ ಮತವನ್ನು ಪ್ರಚಾರ ಮಾಡಿ ತಮ್ಮ ಮತಕ್ಕೆ ಸೇರಿಸಿಕೊಂಡಿದ್ದಾರೆ. ಸೂಯೆಜ್ ಮೊದಲು ಭೂಸಂಧಿಯಾಗಿತ್ತಷ್ಟೆ; ಮತ್ತು ಕೆಂಪು ಸಮುದ್ರವೂ ಸಹ ಅಷ್ಟೇನೂ ಅಗಲವಾಗಿಲ್ಲದೆ ದಾಟಲು ಸುಲಭ ಸಾಧ್ಯವಾಗಿಯೇ ಇತ್ತು. ಆದ್ದರಿಂದ ಈಗ್ಗೆ ಚರಿತ್ರಕಾರರಿಗೆ ಆಧಾರ ಸಿಕ್ಕಿರುವಂತೆ ಕ್ರಿ. ಪೂ. 2000–3000 (ಎಂದರೆ ಈಗ್ಗೆ ಸುಮಾರು 4–5 ಸಾವಿರ ವರ್ಷಗಳು) ವರ್ಷಗಳಿಂದಲೂ ಅರಬ್ಬರು ಆಫ್ರಿಕಾ ಖಂಡಕ್ಕೆ ಬರುತ್ತಲೇ ಇದ್ದಾರೆ ಎಂದಮೇಲೆ ಇತಿಹಾಸಕ್ಕೆ ಎಟುಕದೆ, ಗಣನೆಗೆ ಸಿಕ್ಕದೆ ಇನ್ನೆಷ್ಟು ವರ್ಷಗಳಿಂದ ಆಫ್ರಿಕಾ ಖಂಡಕ್ಕೆ ಇವರು ಪರಿಚಿತರೋ ಯಾರಿಗೆ ಗೊತ್ತು? ಹೀಗಾಗಿ, ಆಫ್ರಿಕನ್ನರ ಮೇಲೆ ಅರಬ್ಬರ ಪ್ರಭಾವ ಯಾವಾಗಲೂ ವಿಶೇಷವಾಗಿಯೆ ಬಿದ್ದಿದೆ. ಒಮ್ಮೆಯಂತೂ ಅರಬ್ ರಾಜನೊಬ್ಬ ಆದಷ್ಟು ಜನರನ್ನು ಮುಸ್ಲಿಂ ಮತಕ್ಕೆ ಸೇರಿಸಿಕೊಳ್ಳಬೇಕೆಂದು ಹಠತೊಟ್ಟು ಆಫ್ರಿಕದ ಪೂರ್ವತೀರದಿಂದ ಪ್ರಾರಂಭಿಸಿ, ಉತ್ತರಕ್ಕೆ ಮುಂದುವರಿದು ನೈಲ್ ನದಿಯ ಪ್ರದೇಶಗಳನ್ನೆಲ್ಲಾ ಮುಗಿಸಿ, ಮೆಡಿಟರೇನಿಯನ್ ಸಮುದ್ರವನ್ನು ದಾಟಿ ಯೂರೋಪಿನ ದೇಶಗಳಲ್ಲೆಲ್ಲಾ ದಾಳಿ ಮಾಡಲು, ರೋಷಗೊಂಡ ಯೂರೋಪಿಯನ್ನರು ಅರಬ್ಬರನ್ನು ಸದೆಬಡೆದು ಓಡಿಸಿದುದೇ ಅಲ್ಲದೆ, ತಾವೂ ತಮ್ಮ ಕ್ರಿಶ್ಚಿಯನ್ ಮತವನ್ನು ಹರಡುವ ಸಲುವಾಗಿ ಮಿಷನರಿಗಳನ್ನು ಪ್ರಪಂಚದ ಎಲ್ಲೆಡೆಗಳಿಗೂ–ಮುಖ್ಯವಾಗಿ ಆಫ್ರಿಕಾ ಖಂಡಕ್ಕೆ–ಕಳುಹಿಸಿ ಮತ ಪ್ರಚಾರ ಮಾಡಿದರು. ಅವರಿಗಾಗಿ ಸ್ಕೂಲುಗಳನ್ನೂ, ಆಸ್ಪತ್ರೆಗಳನ್ನೂ ತೆರೆದು, ಅಕ್ಷರಾಭ್ಯಾಸ ವನ್ನು ಸಹ ಮಾಡಿಸಿದರು. ಆದುದರಿಂದಲೇ ಆಫ್ರಿಕದಲ್ಲಿ ಬಹಳ ಮಂದಿ ಕ್ರಿಶ್ಚಿಯನ್ ಮತ್ತು ಮುಸ್ಲಿಂ ಮತಕ್ಕೆ ಸೇರಿದವರಿದ್ದಾರೆ. ಇವರುಗಳು ಅತಿನಿಷ್ಠೆಯಿಂದ ಆಯಾ ಮತದ ಆಚಾರವಿಚಾರಗಳನ್ನು ನಡೆಸಿಕೊಂಡು ಹೋಗುತ್ತಿರುವುದು ನಿಜ ಕೂ ಪ್ರಶಂಸಾರ್ಹ. ಅಲ್ಲಿನ ಆ ಮಹಿಳೆಯರೂ ಆಯಾ ಮತ ಪದ್ಧತಿಗನ್ನನುಸರಿಸಿ ಉಡುಪುಗಳನ್ನು ತೊಡುತ್ತಾರೆ. ಸೋಮಾಲಿಯನ್ನರೂ ಮತ್ತು ಸುತ್ತಮುತ್ತಲ ಕೆಲವು ದೇಶದವರನ್ನು ನೋಡಿದರೆ ಅಚ್ಚರಿಪಡಬೇಕಾದೀತು. ಅಷ್ಟರಮಟ್ಟಿಗೆ ಅರೇಬಿಯನ್ನರಂತೆಯೇ ಗಂಡಸರೂ ಹೆಂಗಸರೂ ಉಡುಪು ಧರಿಸುತ್ತಾರೆ.

ಪಟ್ಟಣಗಳಲ್ಲಿರುವ ಗಂಡಸರು ಪ್ಯಾಂಟ್ ಷರಟುಗಳನ್ನು ಧರಿಸುತ್ತಾರೆ. ಹಳ್ಳಿಯ ಜನ ಒಂದು ತುಂಡು ಬಟ್ಟೆಯನ್ನು ಲುಂಗಿಯಂತೆ ಸೊಂಟಕ್ಕೆ ಸುತ್ತಿರು

ತ್ತಾರೆ ಅಥವಾ ನಮ್ಮ ದೇಶದ ಸನ್ಯಾಸಿಗಳಂತೆ ಭುಜದ ಮೇಲೆ ಗಂಟಿಕ್ಕಿ ಉಟ್ಟಿರುತ್ತಾರೆ. ಮೊದಲು ಹೆಂಗಸರು ಸೊಂಟಕ್ಕೆ ಬಟ್ಟೆ ಕಟ್ಟುತ್ತಿದ್ದರೇ ವಿನಾ ಎದೆಯ ಭಾಗ ಮುಚ್ಚುವ ಅಭ್ಯಾಸ ಇವರಲ್ಲಿರಲಿಲ್ಲ. ಆದರೆ ಈಗ ಎದೆ ಮುಚ್ಚುವಂತೆ ಬಟ್ಟೆ ಉಡಬೇಕೆಂದು ಸರ್ಕಾರದ ಕಾನೂನು ಇರುವುದರಿಂದ ಒಂದೇ ಒಂದು ತುಂಡು ಬಟ್ಟೆ ಉಟ್ಟರೂ ಎದೆ ಮುಚ್ಚುವಂತೆ ಉಡುತ್ತಾರೆ. ಇದು ಪಟ್ಟಣಗಳಲ್ಲಿ ಮಾತ್ರ. ಆದರೆ ಅನೇಕ ಹಳ್ಳಿಗಳಲ್ಲಿ ಈಗಲೂ ಹೆಂಗಸರು ಸೊಂಟಕ್ಕೆ ಮಾತ್ರ ಬಟ್ಟೆಯನ್ನೋ ಚರ್ಮವನ್ನೋ ಕಟ್ಟಿರುತ್ತಾರೆ. ಪಟ್ಟಣದ ಹೆಂಗಸರು ಪಾಶ್ಚಾತ್ಯರ ಪ್ರಭಾವದಿಂದಾಗಿ ಫ್ರಾಕುಗಳನ್ನು ತೊಡುತ್ತಾರೆ. ಬಹಳ ಮುಂದುವರಿದವರು ಬರೀ ಫ್ರಾಕುಗಳನ್ನು ತೊಟ್ಟರೆ, ಹಳೆಯ ಸಂಪ್ರದಾಯವನ್ನಿನ್ನು ಉಳಿಸಿಕೊಂಡಿರಬೇಕೆಂಬ ಇಚ್ಛೆಯುಳ್ಳವರು. ಆ ಫ್ರಾಕಿನಮೇಲೆಯೇ ಸೊಂಟಕ್ಕೆ ಮೂರುವರೆ ಮೊಳದ ಬಟ್ಟೆಯೊಂದನ್ನು ನಮ್ಮ ಊರಿನವರು ಲುಂಗಿ ಉಡುವಂತೆ ಉಡುತ್ತಾರೆ. ಈ ಮೂರುವರೆ ಮೊಳದ ಬಟ್ಟೆಗೆ ಕಿಟೆಂಗೆ ಎಂದು ಹೆಸರು. ಇದರ ಅರ್ಥ ತುಂಡು ಬಟ್ಟೆ ಎಂದು. ಈ ಕಿಟೆಂಗೆಯು ಈವರೆಗೂ ಹತ್ತಿಯ ಬಟ್ಟೆಯಾಗಿಯೇ ಇದೆ. ಇವುಗಳ ಬಣ್ಣ ಬಹಳ ಚೆಂದ. ಅಚ್ಚು ಸಹ ಅಷ್ಟೆ. ಕಿಟೆಂಗೆಗಳ ಎರಡೂ ತುದಿಗೆ ಎರಡು ಸೆರಗುಗಳು, ಎರಡು ಬದಿಯಲ್ಲೂ ಅಂಚು ಮತ್ತು ಮಧ್ಯೆ ಹೂ, ಮರ, ಗಿಡ, ಹಣ್ಣು, ಪ್ರಾಣಿಗಳ ಚಿತ್ರ ಅಚ್ಚೊತ್ತಿರುತ್ತದೆ. ಕೆಲವು ಜಾತಿಯಲ್ಲಿ ಹೆಂಗಸರು ತಮ್ಮ ತಲೆಕೂದಲನ್ನು (expose) ತೋರಗೊಡಬಾರದಂತೆ. ಆದುದರಿಂದ ತಲೆಗೆ ಸದಾ ಲಪ್ಪಟ್ಟೆ ಸುತ್ತಿರುತ್ತಾರೆ. ಈ ಲಪ್ಪಟ್ಟೆ ಸುತ್ತುವುದಕ್ಕೂ ಒಂದು ವಿಶೇಷ ರೀತಿ ಇದೆ. ಈ ಲಪ್ಪಟ್ಟೆ ಬಟ್ಟೆಯು ಉಟ್ಟಿರುವ ಕಿಟೆಂಗೆಯಂತಹುದೇ ಮತ್ತೊಂದು ಮೂರುವರೆ ಮೊಳ ಉದ್ದದ ಕಿಟೆಂಗೆಯಾಗಿರಲೂ ಬಹುದು, ಅಥವಾ ಒಂದು ಗಜ ಚದರದ ಬಟ್ಟೆಯಾದರೂ ಇದ್ದೀತು. ಈಚೆಗೆ ಈ ಒಂದು ಗಜ ಚೌಕದ ಬಟ್ಟೆಗಳಂತೂ ವಿಧವಿಧದ ನೈಲಾನ್ ಬಟ್ಟೆಗಳೂ ಇರುತ್ತವೆ ಮತ್ತು ಹತ್ತಿಯವೂ ಇರುತ್ತವೆ. ಎಂತಹ ಶ್ರೀಮಂತರೇ ಆದರೂ, ಎಷ್ಟೇ ಬೆಲೆಬಾಳುವ ಫ್ರಾಕುಗಳನ್ನು ತೊಟ್ಟಿದ್ದರೂ ಸೊಂಟಕ್ಕೆ ಕಟ್ಟುವುದು ಹತ್ತಿಯ ಈ ಕಿಟೆಂಗೆಗಳನ್ನೇ.

ಈಚೆಗೆ ಪಾಶ್ಚಾತ್ಯರ ಪ್ರಭಾವ ಎಷ್ಟರಮಟ್ಟಿಗಿದೆಯೆಂದರೆ ಪಟ್ಟಣಗಳಲ್ಲಿರುವ ಹೆಂಗಸರೆಲ್ಲರೂ ಬರೀ ಫ್ರಾಕುಗಳನ್ನಷ್ಟೇ ತೊಡುತ್ತಾರೆ. ಈ ಫ್ರಾಕುಗಳು ಮೊಣಕಾಲಿನವರಿಗೆ ಇರಬೇಕಾದ್ದು ನ್ಯಾಯವಷ್ಟೇ. ಆದರೆ ಪಾಶ್ಚಾತ್ಯರನ್ನು ನೋಡಿ ಇವರೂ ಮಿನಿಫ್ರಾಕುಗಳನ್ನು ತೊಡಲು ಪ್ರಾರಂಭಿಸಿದರು. ಇವು ತೀರ ಅಸಹ್ಯ ಎನಿಸುವಷ್ಟು ತುಂಡಾಗಲು ಸರ್ಕಾರದವರು ಕಾನೂನು ತರಬೇಕಾಯಿತು : ಅದರಂತೆ ಹೆಂಗಸರು ಬರಿಯ ಫ್ರಾಕು ಧರಿಸಿದ್ದೇ ಆದರೆ ಅದು ಮೊಳಕಾಲು ಮುಟ್ಟುವಂತಿರ

ಬೇಕು. ಮಿನಿಫ್ರಾಕುಗಳನ್ನು ತೊಟ್ಟವರು ಅದರ ಮೇಲೆ ಕಿಟೆಂಗೆಗಳನ್ನುಡಬೇಕು. ಇದನ್ನು ಮೀರಿದವರು ಎಷ್ಟೋ ಮಂದಿ ಈವರೆಗೆ ಶಿಕ್ಷೆಗೆ ಗುರಿಯಾಗಿದ್ದಾರೆ. ಇದಕ್ಕೆ ಆ ಹೆಂಗಸರು ಕೊಡುವ ವಿವರಣೆ ಏನೆಂದರೆ "ಪ್ರಪಂಚದಲ್ಲಿ ಮಿಕ್ಕೆಲ್ಲ ಜನರಿಗೆ ಒಳ್ಳೆಯ ಬಣ್ಣ ಮತ್ತು ಲಕ್ಷಣಗಳು ಇವೆ ; ನಮಗೆ ಇದಾವುದೂ ಇಲ್ಲದ್ದರಿಂದ ನಾವು ಹೀಗೆ ಬಟ್ಟೆ ಉಟ್ಟು ಜನರನ್ನು ಆಕರ್ಷಿಸಬೇಕಾಗುತ್ತದೆ" ಎಂದು ಕಾನೂನು ಜಾರಿಗೆ ಬಂದು, ಹತ್ತಾರು ಜನ ಶಿಕ್ಷಿಸಲ್ಪಡುತ್ತಲೂ ಈಗ ಅನೇಕರು ಮ್ಯಾಕ್ಸಿಗಳನ್ನು (ಕಾಲಿನವರೆಗಿರುವ ಲಂಗಗಳು) ವಿಧವಿಧವಾಗಿ ತೊಡಲು ಪ್ರಾರಂಭಿಸಿದ್ದಾರೆ. ಕೆಲವು ಹೆಂಗಸರು ಒಂದು ಕಿಟೆಂಗೆ ಸೊಂಟಕ್ಕುಟ್ಟು ಮತ್ತೊಂದನ್ನು ನಮ್ಮ ಊರಿನ ಗಂಡಸರು ಅಂಗವಸ್ತ್ರವನ್ನು ಮೈತುಂಬ ಹೊದೆಯುವಂತೆ ಹೊದ್ದುಕೊಳ್ಳುತ್ತಾರೆ. ಮತ್ತೆ ಕೆಲವರು ಅದರಲ್ಲೂ ಸೋಮಾಲಿಯನ್ನರು–ನಾಲ್ಕಾರು ಗಜ ಬಟ್ಟೆಯಿಂದ ಸುತ್ತಾ ತುಂಬ ನೆರಿಗೆಗಳನ್ನಿಟ್ಟ ಕಾಲು ಮುಟ್ಟುವಂಥಾ ದೊಡ್ಡ ಲಂಗಗಳನ್ನು ತೊಟ್ಟು, ಕಿಟೆಂಗೆಯೊಂದನ್ನು ತಲೆಯಮೇಲಿಂದ ಎದೆಯನ್ನು ಮುಚ್ಚುವಂತೆ ಉಡುತ್ತಾರೆ. ಹೀಗಿದೆ ಇವರ ಉಡುಪಿನ ವೈವಿಧ್ಯ. ಮಸಾಯಗಳೆಂಬುವರು ಸೋಮಾಲಿಯನ್ನರಂತೆ ಲಂಗತೊಟ್ಟು ಕಿಟೆಂಗೆಯನ್ನು ಭುಜದ ಮೇಲೆ ಗಂಟಿಕ್ಕಿ ಉಡುತ್ತಾರೆ. ಫ್ರಾಕನ್ನು ತೊಡದಿರುವುದರಿಂದ ಇವರ ಭುಜಭಾಗವು ಸದಾ expose ಆಗಿರುತ್ತವೆ.

ಪ್ರಪಂಚದಲ್ಲಿ ಮಿಕ್ಕೆಲ್ಲ ಜನರೂ ತಲೆಕೂದಲು ಗುಂಗುರಾಗಿರಬೇಕೆಂದು ಆಸೆ ಪಟ್ಟು, ತೀರ ನೇರ ಕೂದಲಿರುವವರು ಗುಂಗುರು ಸಾಧನ (curlers) ಗಳನ್ನು ಉಪಯೋಗಿಸಿ ಗುಂಗುರು ಮಾಡಿಕೊಳ್ಳುತ್ತಿದ್ದರೆ ಆಫ್ರಿಕನ್ನರ ಸ್ಥಿತಿ ಇದ್ದಕ್ಕೆ ನೇರ ವಿರುದ್ಧ. ಅವರ ತಲೆಕೂದಲು ಬಹಳ ವಿಚಿತ್ರವಾಗಿರುತ್ತದೆ. ಪ್ರತಿಯೊಂದು ಕೂದಲೂ ಬಹು ಸಣ್ಣಗೆ ಸುರುಳಿ ಸುತ್ತಿಕೊಂಡು ಅವರ ತಲೆಗೇ ಅಂಟಿದಂತಿದ್ದು, ನೋಡುವವರಿಗೆ ಅವರ ತಲೆತುಂಬಾ ಸ್ಪ್ರಿಂಗ್‌ಗಳನ್ನು ಅಂಟಿಸಿಕೊಂಡಿದ್ದಾರೇನೋ ಎಂಬ ಭ್ರಮೆಯನ್ನುಂಟು ಮಾಡಿಸುತ್ತದೆ. ಇವರಲ್ಲಿ ಯಾರಿಗೂ ತಲೆಕೂದಲು ಒಂದು ಅಥವಾ ಒಂದುವರೆ ಗೇಣಿಗಿಂತ ಹೆಚ್ಚು ಉದ್ದವಾಗಿ ಬೆಳೆಯುವುದಿಲ್ಲ. ಈಗಿನ ಕೆಲವು ನವನಾಗರೀಕ ತರುಣಿಯರು ಒಂದು ಬಗೆಯ ಮಯಣವನ್ನು ಹಚ್ಚಿಸಿಕೊಂಡು ಕೂದಲನ್ನು ನೀಳಮಾಡಿಸಿಕೊಳ್ಳುತ್ತಾರೆ. ಅದಕ್ಕೆ ಸುಮಾರು ಮೂರು ದಿವಸಗಳ ಅರ್ಧರ್ಧ ಘಂಟೆಯವರೆಗೆ ಕುಳಿತಿರಬೇಕು ಮತ್ತು ಅದಕ್ಕೆ ತಗಲುವ ವೆಚ್ಚ 60-70 ಷಿಲ್ಲಿಂಗು (1 ಷಿಲ್ಲಿಂಗು ಹೆಚ್ಚುಕಡಿಮೆ ಒಂದು ರೂಪಾಯಿ). ಹೀಗೆ ನೇರಮಾಡುವಾಗ ತಲೆ ಬಹಳ ನೋವಾಗುತ್ತದಂತೆ. ನೇರಮಾಡಿಸಿಕೊಂಡ ಕೂದಲು ಆರೆಂಟು ತಿಂಗಳ ವರೆಗೆ ಹಾಗೆಯೇ ಉಳಿಯುತ್ತದೆಯಂತೆ.

ಅಷ್ಟೇನೂ ನಾಗರಿಕರಲ್ಲದ ಶಾಸ್ತ್ರ ಸಂಪ್ರದಾಯಗಳನ್ನುಳಿಸಿಕೊಂಡಿರುವವರನ್ನು ನೋಡೋಣ. ಸ್ಪ್ರಿಂಗ್‌ಗಳಂತೆ ತಲೆಗೇ ಅಂಟಿಕೊಂಡಂತಿರುವ ಕೂದಲನ್ನು ವಿಧ ವಿಧವಾಗಿ ಜಡೆಹೆಣೆದುಕೊಳ್ಳುವುದರಲ್ಲಿ ಇವರದು ಎತ್ತಿದ ಕೈ. ಇವರ ತಲೆಗೂದಲನ್ನು ಹಣಿಗೆಯಿಂದ ಬಾಚುವುದು ಕಷ್ಟ. ಹಾಗೆ ಬಾಚುವಾಗ ಬಹಳ ನೋವಾಗುತ್ತದೆ. ಅದರೂ ಬಿಡದೆ ಪ್ರತಿ ನಾಲ್ಕೈದು ದಿನಗಳಿಗೊಮ್ಮೆ–ಸಮಯವಿದ್ದವರು ನಿತ್ಯವೂ ಸಹ ಕೇಶಾಲಂಕಾರ ಮಾಡಿಕೊಳ್ಳುವ ಇವರ ತಾಳ್ಮೆಯನ್ನು ಎಷ್ಟು ಹೊಗಳಿದರೂ ಸಾಲದು. ಇದೆಲ್ಲ ಕಾರಣಗಳಿಂದಲೂ ಮತ್ತು ಸೆಖೆ ವಿಪರೀತವಾಗಿ ತಲೆಗೆ ಸ್ನಾನಮಾಡಲು ನೀರಿಗೂ ತೊಂದರೆಯಿದ್ದು, ಹೇನು ಸೀರು ಬಿದ್ದಲ್ಲಿ ಕೂದಲನ್ನು ಬಾಚಲಸಾಧ್ಯವಾದುದರಿಂದಲೂ ಕಾಲ ಕಾಲಕ್ಕೆ ಹೆಂಗಸರೂ ಗಂಡಸರೂ ಕೇಶಮುಂಡನ ಮಾಡಿಸಿಕೊಳ್ಳುತ್ತಾರೆ. ವಿಶೇಷ ಸಮಾರಂಭಗಳಲ್ಲೂ, ಮಗುವಿನ ಜನನ, ನಾಮಕರಣ, ವಿಧಿವಿಶೇಷ ಮತ್ತು ಯೌವ್ವನದ ವಿವಿಧ ಹಂತಗಳಿಂದ ಮುಪ್ಪಿನವರೆಗೆ ನಡೆಯುವ ಶುಭ ಸಮಾರಂಭಗಳಲ್ಲೂ ಶಾಸ್ತ್ರೋಕ್ತವಾಗಿ ಕೂದಲು ತೆಗೆಯುವುದು ಇವರಲ್ಲಿ ವಾಡಿಕೆ.

ಒಂದು ಬಗೆಯ ಹಾಲನ್ನು ಮಯಣವನ್ನು ಬೆರಿಸಿ, ತಲೆಕೂದಲನಲ್ಲಿ ಹತ್ತಾರು ಭಾಗಮಾಡಿ ಅದಕ್ಕೆ ಚೆನ್ನಾಗಿ ಹಚ್ಚಿ ತಲೆಗೂದಲನ್ನು, ತಲೆತುಂಬಾ ನೆಟ್ಟ ಕೊಂಬುಗಳಂತೆ ತಿರುಚಿಕೊಳ್ಳುವುದೊಂದು ವಿಧ. ಬೈತಲೆಗಳಿಂದ ಬೇರ್ಪಡಿಸಿದ ಸುಮಾರು ಇಪ್ಪತ್ತು ಮುವ್ವತ್ತು ಜಡೆಗಳನ್ನು ಅಲ್ಲಲ್ಲೇ ಸುತ್ತಿ ತಲೆ ತುಂಬಾ ಪುಟ್ಟ ಪುಟ್ಟ ಸಿಂಬಿಗಳನ್ನಿಟ್ಟಂತೆ ಸಿಂಗರಿಸಿಕೊಳ್ಳುವುದು ಮತ್ತೊಂದು ವಿಧ : ಕೊಂಬಿನಂತೆ ತಿರುಚಿದವುಗಳನ್ನು ಕಲಾತ್ಮಕವಾಗಿ ಜೋಡಿಸಿದಾಗ ಕಿರೀಟದಂತೆ ಶೋಭಿಸುವುದೊಂದು ವಿಧ ; ತಲೆ ತುಂಬಾ ಜಡೆಯಿಂದ ಮಾಡಿದ ಐದಾರು ಶಂಖಗಳಿವೆಯೆನೋ ಎಂಬ ಭ್ರಾಂತಿಯನ್ನುಂಟುಮಾಡುವುದು ಮತ್ತೊಂದು ವಿಧ. ತಲೆಯ ಮೊದಲ ಭಾಗದಿಂದ ಪ್ರಾರಂಭಿಸಿ ಮಧ್ಯ ನೆತ್ತಿಯೆಡೆಗೆ ಮುಂದುವರಿದು ತುದಿಗೆ ಶಿಖೆಯಂತೆ ಕಾಣುವ ಆ ಸೊಗಸೋ ! ಬೇಸರವಿಲ್ಲದೇ ಆ ನೋವನ್ನು ಸಹಿಸಿ ಬಿಡದೆ ಕೇಶಾಲಂಕಾರ ಮಾಡಿಕೊಳ್ಳುವ ಅವರ ತಾಳ್ಮೆಯೋ !! ಅದನ್ನೆಷ್ಟು ಹೊಗಳಿದರೂ ಸಾಲದು. ಹಳ್ಳಿಗರು ಕೆಲವರು ಬೈತಲೆಗಳಿಂದ ಬೇರ್ಪಡಿಸಿದ ಹಿಡಿ ಕೂದಲಿನಲ್ಲಿ ಅಲ್ಲಲ್ಲಿಯೇ ಹಾಗೆಯೇ ಜಡೆ ಹೆಣೆಯುತ್ತಾರೆ. ಗುಂಗುರು ಕೂದಲಾದ್ದರಿಂದ ಯಾವ ಆಧಾರವೂ ಇಲ್ಲದೆ ಬಿಚ್ಚಿಹೋಗದೇ ಇರುವ ಆ ಮೂರುನಾಲ್ಕಂಚು ಉದ್ದದ ಜಡೆಗಳು ಸುರುಟಿಕೊಳ್ಳುವ ರೀತಿಯನ್ನು ನೋಡಿದರೆ ತಲೆತುಂಬಾ ಹತ್ತಿಪ್ಪತ್ತು ದೊಡ್ಡಗಾತ್ರದ ಕಂಬಳಿ ಹುಳಿಗಳೇನೋ ಎಂಬ ಭ್ರಾಂತಿಯನ್ನುಂಟು ಮಾಡುತ್ತವೆ. ಈಚೆಗೆ ಪಟ್ಟಣದ ಯುವತಿಯರು ನೇರ್ಪುಮಾಡಿಸಿದ ತಲೆ ಕೂದಲನ್ನು ಒಂದಕ್ಕೆ ಬಾಚಿ ಎಲ್ಲವನ್ನೂ ಸೇರಿಸಿ ಒಂದು ರಬ್ಬರ್ ಬ್ಯಾಂಡ್ ಹಾಕುತ್ತಾರೆ. ರಬ್ಬರ್ ಬ್ಯಾಂಡಿನ ಹಿಡಿತದಿಂದಾಚೆಗಿನ ಕೂದಲ ಸಮೂಹವು

ಒಂದು ಚೆಂಡಿನಂತೆ ಮನ ಮೋಹಕವಾಗಿ ಕಾಣಿಸುತ್ತದೆ. ಇವರು ತಲೆಗೆ ಎಣ್ಣೆ ಹಚ್ಚು ತ್ತಾರೆ ಮತ್ತು ಮೈಗೂ ಅನೇಕ ಬಗೆಯ ತೈಲವನ್ನು ಹಚ್ಚುವುದರಿಂದ ಇವರ ಚರ್ಮವು ಫಳಫಳನೆ ಹೊಳೆಯುತ್ತಿರುತ್ತದೆ. ಹಳ್ಳಿಗಳಲ್ಲಿ ಪ್ರತಿದಿನ ಸ್ನಾನ ಮಾಡುವ ಅಭ್ಯಾಸವೇ ಇಲ್ಲ. ಕುಡಿಯುವ ನೀರಿಗೇ ತೊಂದರೆ ಇರುವಾಗ ಸ್ನಾನಕ್ಕೆ ನೀರೆಲ್ಲಿಂದ ತಂದಾರು ಪಾಪ ? ಬೆವರಿನ ದುರ್ನಾತ ಹೊಡೆಯದಿರುವುದಕ್ಕಾಗಿ ಇವರು ಪ್ರಾಣಿಗಳ ಕೊಬ್ಬಿನ ಜೊತೆಗೆ ಒಂದು ಬಗೆಯ ನುಣ್ಣನೆಯ ಜೇಡಿ ಮಣ್ಣನ್ನು ಬೆರೆಸಿ, ಆ ಮಿಶ್ರಣ ವನ್ನು ಮೈಗೆ ಬಳಿದುಕೊಳ್ಳುತ್ತಾರೆ. ಸ್ವಲ್ಪ ಹೊತ್ತಿನ ಮೇಲೆ ಆ ಮಿಶ್ರಣವು ಮೈಯ್ಯಿನ ಕೊಳೆಯನ್ನು ಆಕರ್ಷಿಸಿ ಹೆಳಕೆ ಹೆಳಕೆಯಾಗಿ ಉದುರಿ ಮೈ ಸ್ವಚ್ಛ ವಾಗುತ್ತದಂತೆ. ನೀರಿಗೆ ತೊಂದರೆ ಇರುವವರು ಹೀಗೇನಾದರೂ (alternative) ಮಾಡದಿದ್ದರೆ ಗತಿಯೇನು ? ಒಂದು ಬಗೆಯ ಕೆಂಪು ಮಣ್ಣನ್ನು ನೀರಿನಲ್ಲಿ ಕಲಸಿ ಮೈಗೆ ಕಲಾತ್ಮಕವಾಗಿ ಬಳಿದುಕೊಳ್ಳುವುದು, ಇತಿಹಾಸಕಾರರಿಗೆ ಸಿಕ್ಕಿರುವ ಆಧಾರದ ಮೇರೆಗೆ ಎಂಟು ಸಾವಿರ ವರ್ಷಗಳಿಂದಲೂ ಪದ್ಧತಿಯಲ್ಲಿದೆ.

ಇನ್ನು ಆಭರಣಗಳ ವಿಷಯ : ಆಭರಣದ ಮೋಹ ಸ್ತ್ರೀಗೆ ಸ್ವಾಭಾವಿಕವಾಗಿ ಬಂದದ್ದು. ಮಾನವನು ಪ್ರಾಣಿಗಳ ಜೊತೆ ತಾನೂ ಪ್ರಾಣಿಯಂತೆಯೇ ಜೀವಿಸು ತ್ತಿದ್ದವನು, ಒಮ್ಮೆ ತನ್ನ ಬಗೆಗೆ ಗಮನಕೊಟ್ಟು ಆಭರಣಗಳಿಂದ ತನ್ನನ್ನು ಸಿಂಗರಿಸಿ ಕೊಳ್ಳಲು ಪ್ರಾರಂಭಿಸಿದ ಹಂತವನ್ನು ಒಂದು ಮುಖ್ಯವಾದ ಹಂತ ಎಂದು ಪರಿಗಣಿಸ ಲಾಗಿದೆ. ಇದಕ್ಕೆ ಆಫ್ರಿಕನ್ನರೂ ಹೊರತಾಗಿಲ್ಲವಷ್ಟೆ. ಮೈಗೆ ಬಣ್ಣಗಳ ಲೇಪನ, ಆಕಾರ ಮತ್ತು ಹೊಳಪು ಕೊಟ್ಟ ದಂತದ, ಕಲ್ಲಿನ, ಮರದ ಚೂರುಗಳನ್ನು, ಆಸ್ಟ್ರಿಚ್ ಹಕ್ಕಿಯ ಮೊಟ್ಟೆಯ ಚಿಪ್ಪುಗಳನ್ನು (ಇವು ಬಹಳ ಗಟ್ಟಿಯಾಗಿಯೂ ದಪ್ಪ ವಾಗಿಯೂ ಇರುತ್ತವೆ) ಬಳ್ಳಿಗಳ ಆಧಾರದಿಂದ ಪೋಣಿಸಿ ಹಾಕಿಕೊಳ್ಳುವ ಸಂಪ್ರದಾಯ ಉಂಟು. ನಾಗರಿಕತೆಯಲ್ಲಿ ಬಹಳ ಹಿಂದುಳಿದಿದ್ದು, ನಾಲ್ಕು ಶತಮಾನಗಳ ಹಿಂದಿನವರೆಗೂ ಹೊರಜಗತ್ತಿನ ಸಂಪರ್ಕವೇ ಇಲ್ಲದಿದ್ದ ಆಫ್ರಿಕನ್ನರು ಕೇವಲ ಗಾಜಿನ ಮಣಿಗಳು, ಉಪ್ಪು ಮತ್ತು ಅಲ್ಯುಮಿನಿಯಂ ಪಾತ್ರೆಗಳಿಗಾಗಿ ಸಾವಿರಾರು ರೂಪಾಯಿ ಬೆಲೆಬಾಳುವ ಚಿನ್ನ, ದಂತ, ಕಚ್ಚಾ ಪದಾರ್ಥಗಳು ಮತ್ತು ಕಾಲಕ್ರಮೇಣ ಗುಲಾಮರನ್ನು ಸಹ ಮಾರುತ್ತಿದ್ದರೆಂದಮೇಲೆ ಅಲಂಕರಣ ಸಾಮಗ್ರಿಗಳ ಮೇಲಿನ ಮೋಹ ಎಷ್ಟರಮಟ್ಟಿಗಿತ್ತೆಂದು ತಿಳಿಯುತ್ತದಷ್ಟೆ. ಈಗಲೂ ಸಹ ಪೋಣಿಸಿದ ಬಣ್ಣದ ಮಣಿಗಳ ಸರಗಳೆಂದರೆ ಆಫ್ರಿಕನ್ ಮಹಿಳೆ ಯರಿಗೆ ಬಲುಪ್ರೀತಿ. ಅಲ್ಲದೇ ಬಹುಸಣ್ಣ ಮಣಿಗಳನ್ನು ಕವಡೆಗಳನ್ನು ಕಲಾತ್ಮಕ ವಾಗಿ ಪೋಣಿಸಿ ಹೊಲಿಯುವುದರಲ್ಲಿ ಇವರದು ಎತ್ತಿದ ಕೈ. ಮಣಿ ಹೊಲಿದ ದೊಡ್ಡ ಚರ್ಮದ ತುಂಡು ಲಂಗಕ್ಕಾಗುತ್ತದೆ. ಪೋಣಿಸಿ ಹೊಲೆದು ಅಲಂಕಾರ ಮಾಡಿದ ಬೆಲ್ಟುಗಳೂ, ಕೈ ಪಟ್ಟಿಗಳೂ (ಕೈ ಗಡಿಯಾರದ ಪಟ್ಟಿಗಳಂತಿರುವುವು)



ಕೇಶ ವಿನ್ಯಾಸ



ಕೇಶ ವಿನ್ಯಾಸ



ಕಿಟೆಂಗೆ ತಲೆಗೆ ಸುತ್ತಿರುವುದು



ಕಿಟೆಂಗೆ ಉಟ್ಟಿರುವುದು

ತಂತಿಯಲ್ಲೇ ಮಣಿಗಳನ್ನು ಪೋಣಿಸಿ ಹೆಣೆದ ಮೂರು ನಾಲ್ಕು ಅಂಗುಲ ಅಗಲದ ಅಡ್ಡಿಕೆ (necklace)ಗಳೂ, ಚಿತ್ರ ವಿಚಿತ್ರವಾಗಿ ದಾರಗಳಲ್ಲಿ ಮಣಿ ಪೋಣಿಸಿದ ಹಾರಗಳೂ ನಾನಾ ರೀತಿಯಲ್ಲಿ ತಾಮ್ರದ ತಂತಿಗಳಲ್ಲಿ ಬಗ್ಗಿಸಿ ಹೆಣೆದ ಕೈಕಡಗಗಳು, ಪಸುವಿನ ಚರ್ಮದಿಂದ ಮಾಡಿದ ಚಪ್ಪಲಿ ಮತ್ತು ಗುರಾಣಿಗಳೂ, ಪ್ರಾಣಿಗಳ ಚರ್ಮ ದಿಂದ ಮಾಡಿದ ಡ್ರಮ್‌ಗಳೂ ಇಲ್ಲಿನ ವಿಶೇಷಗಳು. ಇವುಗಳನ್ನು ಪಾಶ್ಚಾತ್ಯರು ವಿಪರೀತವಾಗಿ ಕೊಳ್ಳುತ್ತಾರೆ. ಪ್ರತಿಯೊಬ್ಬ ಮಸಾಯಿ ಜಾತಿಯ ಹೆಂಗಸೂ ಒಂದು ನಿಮಿಷವನ್ನೂ ವ್ಯರ್ಥಮಾಡದೇ ಮಣಿ ಪೋಣಿಸುತ್ತಿರುವುದನ್ನು ನೋಡಬಹುದು. ಮಣಿ ಕೆಲಸವನ್ನು ಎಲ್ಲ ಹೆಂಗಸರೂ ಮಾಡಬಲ್ಲರಾದರೂ ಮಸಾಯಿಗಳದ್ದೊಂದು ವಿಶಿಷ್ಟ ರೀತಿ. ಇದಲ್ಲದೇ ಆಮದು ಮಾಡಲ್ಪಟ್ಟ ಈಗಿನ ನವೀನ ಮಾದರಿಯ ಲೋಲಕ್ಕುಗಳೂ, ಕೈಬಳೆಗಳು ಮುಂತಾದುವನ್ನು ಹೆಂಗಸರೂ ಕೆಲವರು ಗಂಡಸರೂ ಧರಿಸಿರುವುದನ್ನು ನೋಡಬಹುದು. ಮಸಾಯಿ ಹೆಂಗಸರು ಕಿವಿಯ ಹತ್ತಾರು ರಂಧ್ರಗಳಿಗೆ ವಿಧವಿಧವಾಗಿ ಪೋಣಿಸಿದ ಆಭರಣಗಳನ್ನು ಧರಿಸುತ್ತಾರೆ. ಕುತ್ತಿಗೆ ಯಲ್ಲಿ ಸದಾ ಅಡ್ಡಿಕೆಗಳಂತೂ (Necklace) ಇದ್ದೇ ತೀರಬೇಕು. ಇದಲ್ಲದೇ ಮಣಿ ಉಂಗುರವೂ ಸರ್ವೇ ಸಾಮಾನ್ಯ. ಕೆಲವು ಜಾತಿಯ ಹೆಂಗಸರು ಮಾತ್ರ ಕಾಲ್ಬಳೆ ಗಳನ್ನು ತೊಡುವ ಅಭ್ಯಾಸವಿದೆ. ಪ್ರತಿಯೊಂದು ಬಳೆ ಪ್ರತ್ಯೇಕವಾಗಿರದೇ ಮೀನ ಖಂಡದುದ್ದಕ್ಕೂ ಮಂಡಿಯವರೆಗೆ ಸುತ್ತಿರುವ ಲೋಹದ ಒಂದೇ ತಂತಿಯದಾಗಿರು ತ್ತದೆ. ಇವರಲ್ಲಿ ಅಲಂಕಾರಕ್ಕಾಗಿ ಹಚ್ಚೆ ಹಾಕಿಸಿಕೊಳ್ಳುವ ರೂಢಿಯೂ ಇದೆ.

ಚಪ್ಪಲಿ, ಬೂಟ್ಸು, ತೊಡೆಯವರೆಗಿನ ಪಾರದರ್ಶಕ ಕಾಲುಚೀಲಗಳೂ, ಕೈಗಡಿಯಾರಗಳೂ, ಪರ್ಸುಗಳೂ ಆಧುನಿಕ ಮಹಿಳೆಯರ ಉಪಯೋಗದ ವಸ್ತುಗಳು. ಹಳ್ಳಿಯ ಹೆಂಗಸರು ದನದ ಚರ್ಮದ ಚಪ್ಪಲಿ ಈಚೀಚೆಗಷ್ಟೆ ಉಪಯೋಗಿಸು ತ್ತಾರೆ.

ಆಫ್ರಿಕನ್ನರು ಸಂಗೀತಪ್ರಿಯರು ಮತ್ತು ಹುಟ್ಟಾ ನರ್ತನಪ್ರಿಯರು. ಯಾವ ಸಂಗೀತವೇ ಆಗಲೀ ಕಿವಿಗೆ ಬಿದ್ದೊಡನೆ ಅದರ ಲಯಕ್ಕನುಸಾರವಾಗಿ ಮೈ ಕುಣಿಸಿ ನಾಟ್ಯವಾಡುವುದರಲ್ಲಿವರು ನಿಪುಣರು. ಟಾಂಜೇನಿಯಾ ಸಮಾಜವಾದೀ ರಾಜ್ಯ (socialistic country). ಆದ್ದರಿಂದ ಎಂತಹ ದೊಡ್ಡ ಹುದ್ದೆಯಲ್ಲಿರುವ ಆಫೀಸರ್ ಸಹ ಪಾರ್ಟಿಗಳಲ್ಲಾಗಲೀ ಹೋಟೆಲುಗಳಲ್ಲಾಗಲೀ ಬಂದಾಗ ಎಷ್ಟು ಕೀಳು ನೌಕರಿಯಲ್ಲಿರುವ ಹೆಂಗಸನ್ನೂ ಸರಿಸಮಳಂತೆ ಕಾಣಬೇಕು. ಅವಳೊಡನೆ ನರ್ತನ ಮಾಡಲೇಬೇಕು. ಪಾಶ್ಚಾತ್ಯರ ಪ್ರಭಾವದಿಂದ ಇವರಿಗೆ ಅಂಟಿರುವ ಒಂದು ದೊಡ್ಡ ದುರಭ್ಯಾಸವೆಂದರೆ ಕುಡಿತ. ಈ ಕುಡಿತದಿಂದಾಗಿ ಯಾರಿಗೆ ಎಷ್ಟು ಸಂಪಾದನೆ ಇದ್ದರೂ ಸಾಲದಾಗಿದೆ. ಹೋಟೆಲುಗಳಲ್ಲಿ ಸಾಧಾರಣ ದಿವಸಗಳಲ್ಲೂ ಗಂಡು ಹೆಣ್ಣು ಕೈ ಕೈ ಹಿಡಿದು ಕುಣಿಯುವುದೂ ರಾಕ್ ಅಂಡ್ ರೋಲ್ ನೃತ್ಯಗಳೂ

ತೀರಾ ಸಾಧಾರಣ. ಸ್ವಲ್ಪ ಹೊತ್ತಿನವರೆಗೆ ಕುಣಿಯುತ್ತಾರೆ. ಆ ದಣಿವಾರಿಸಿ ಕೊಳ್ಳಲು ಕುಡಿಯುತ್ತಾರೆ, ಮತ್ತು ನಿವಾರಣೆಗೆ ಮತ್ತೆ ಕುಣಿಯುತ್ತಾರೆ. ಇದು ಹೀಗೇ ಮುಂದುವರೆಯುತ್ತದೆ. ಆಫ್ರಿಕನ್ನರು ಕುಡಿದ ಸುಸ್ತಿಗೆ ಕುಣಿಯುತ್ತಾರೆ ಮತ್ತೆ ಕುಣಿದ ಸುಸ್ತಿಗೆ ಕುಡಿಯುತ್ತಾರೆ. ಅದೇನೇ ಇರಲಿ ಆಫ್ರಿಕನ್ನರಿಗೆ ಸಂಗೀತವೂ, ಲಯವೂ, ನೃತ್ಯವೂ ಮೈಗೂಡಿ ಬಂದದ್ದು. ಇವರದು ಸಮಾಜವಾದೀ ಸಮಾಜ ಎಂದು ಹೇಳಿದೆನಷ್ಟೆ. ಆದುದರಿಂದ ನೌಕರರನ್ನು ಯಾರೂ ಛೈದು ಅಂದು ಆಡಬಾರದು. ಅವರುಗಳನು ಮರ್ಯಾದೆಯಿಂದ ಕಾಣಬೇಕು. ಈ ಸಮಾನ ಹಕ್ಕನ್ನು ಎಷ್ಟರಮಟ್ಟಿಗೆ ಚಲಾವಣೆಗೆ ತರಬೇಕು ಮತ್ತು ಎಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂದು ಅವರಿಗಿನ್ನೂ ತಿಳಿದಿಲ್ಲ. ನಮ್ಮ ಮನೆಯ ನೌಕರಿಣಿಗೆ ತಿನ್ನಲು ತಿಂಡಿಯನ್ನು ಕೊಟ್ಟರೆ ನಾವು ಕುಳಿತು ಊಟ ಮಾಡುತ್ತಿದ್ದ ಟೇಬಲ್ಲಿಗೇ ಬಂದು ನಮ್ಮ ಜೊತೆಗೇ ಕುಳಿತು ತಿನ್ನಲು ಪ್ರಾರಂಭಿಸಿದಳು. ಮಗುವಿಗೆ ಹಾಲು ಕೊಡುವಾಗ ನಮ್ಮ ಮನೆ ಸೋಫಾದ ಮೇಲೇ ಕುಳಿತು ಕೊಡುತ್ತಿದ್ದಳು. ಮತ್ತೊಬ್ಬಳಂತೂ ಸಿಳ್ಳೆ ಹಾಕಿಕೊಂಡು ಡ್ಯಾನ್ಸ್ ಮಾಡುತ್ತಲೇ ಮನೆ ಕೆಲಸಗಳನ್ನು ಮಾಡುತ್ತಿದ್ದಳು. ನಾನು ಆಕ್ಷೇಪಿಸಿದ್ದಕ್ಕೆ "ನಾನು ಡ್ಯಾನ್ಸ್ ಮಾಡಿದೆನಲ್ಲದೇ ನಿನ್ನನ್ನು ಡ್ಯಾನ್ಸ್ ಮಾಡ ಹೇಳಿದೆನೇನು? ನಿನ್ನ ಮನೆ ಕೆಲಸ ಮುಗಿಸಿದರೆ ಆಯಿತಿಲ್ಲೋ" ಎಂದಳು ಜಾಣೆ.

ಆಫ್ರಿಕನ್ ಹೆಂಗಸರು ಒಳ್ಳೆ ಬಲಿಷ್ಠರು. ಅವರ ಅಂಗಸೌಷ್ಠವ ನೋಡ. ವಂಥಾದ್ದು. ಮಧ್ಯಮ ವಯಸ್ಸನ್ನು ಮೀರಿದ ಹೆಂಗಸರು ಬಹಳ ದಪ್ಪಕ್ಕಿರುತ್ತಾರೆ ಆದರೆ ಅದರಿಂದ ಅವರಿಗೆ ಯಾವ ತೊಂದರೆಯೂ ಇದ್ದಂತೆ ತೋರುವುದಿಲ್ಲ. ಎಷ್ಟೇ ದೂರವನ್ನಾಗಲೀ ನಿರಾಯಾಸವಾಗಿ ನಡೆಯುತ್ತಾರೆ. ಬಿಸಿಲು, ಗಾಳಿ, ಚಳಿ ಇವು ಗಳಿಗೆ ಇವರು ಹೆದರುವವರೇ ಅಲ್ಲ. ದಿನ ತುಂಬಿದ ಬಸುರಿ ಹೆಂಗಸರೂ ಸಹ ಮನೆ ಕೆಲಸವನ್ನು ಏನೇನೂ ಆಯಾಸವಿಲ್ಲದೇ ಮಾಡುತ್ತಾರೆ. ಮನೆ ಸಾರಿಸುವಾಗ ಬಗ್ಗಿ ನಿಂತೇ ಸಾರಿಸುತ್ತಾರೆ. ಹೆರಿಗೆಯಾದ ನಾಲ್ಕಾರು ಘಂಟೆಗಳ ನಂತರ ಮಗುವನ್ನು ಬೆನ್ನಿಗೆ ಕಟ್ಟಿಕೊಂಡು ಎಲ್ಲೆಂದರಲ್ಲಿಗೆ ನಡೆದೇ ಹೋಗುತ್ತಾರೆ. ಸಣ್ಣಗೆ ಒಣಗಿ ಕೊಂಡವರನ್ನಾಗಲೀ, ವೃದ್ಧಾಪ್ಯದಿಂದ ಬಗ್ಗಿ ಸೋತು ನಡೆಯುವವರನ್ನಾಗಲಿ ನಾನೊಂದು ದಿನವೂ ನೋಡಲಿಲ್ಲ. ಇವರಿಗೆ ಎಷ್ಟೋ ವಯಸ್ಸಿನವರೆಗೆ ತಲೆಗೂದಲು ನೆರೆಯುವುದೇ ಇಲ್ಲ. ಎಪ್ಪತ್ತು ಎಪ್ಪತ್ತೈದು ವರ್ಷದ ವೃದ್ಧೆಯರೂ ಸಹ ಹೊರೆ ಸಾಮಾನನ್ನು ಹೊತ್ತು ಅನಾಯಾಸವಾಗಿ ನಡೆಯುತ್ತಾರೆ. ಇವರು ಮಕ್ಕಳನ್ನು ನಡೆಯಲು ಕಲಿಯುವವರೆಗೂ ಒಂದು ಕಿಟಂಗೆಯ ಆಧಾರದಿಂದ ಬೆನ್ನಿಗೆ ಕಟ್ಟಿ ಕೊಳ್ಳುತ್ತಾರೆ ಮತ್ತು ಕಟ್ಟಿಕೊಂಡೇ ಮನೆಗೆಲಸವಷ್ಟನ್ನು – ಕೊನೆಗೆ ಗುಡಿಸಿ ಸಾರಿಸು ವುದನ್ನೂ – ಮಾಡುತ್ತಾರೆ. ಹೆಂಗಸೊಬ್ಬಳು ಒಂದು ಮಗುವನ್ನು ಬೆನ್ನಿಗೆ ಕಟ್ಟಿ

ಕೊಂಡು, ಮತ್ತೊಂದು ಮಗುವನ್ನು ಎಡ ಸೊಂಟದಲ್ಲೆತ್ತಿಕೊಂಡು ಬಲಗೈಯ್ಯಲ್ಲೊಂದು ಗಂಟನ್ನೆತ್ತಿಕೊಂಡು, ತಲೆಯಮೇಲೆ ಸುಮಾರು 120-150 ಕಾಯಿಗಳಿರುವ ಬಾಳೆಗೊನೆಯನ್ನೆತ್ತಿಕೊಂಡು ಲಟಲಟನೆ ನಡೆದು ಹೋಗುವ ದೃಶ್ಯವೇನೂ ಅಪರೂಪವಲ್ಲ. ಇಂತಹ ದೊಡ್ಡ ಗೊನೆಯೊಂದನ್ನು ಒಂದೆರಡಿಂಚಿನಷ್ಟು ಜರುಗಿಸಲೂ ಸಹ ನಮ್ಮಿಂದಾಗುವ ಮಾತಲ್ಲ. ಅದನ್ನು ನಿರಾಯಾಸವಾಗಿ ಎತ್ತಿ ತಲೆಯಮೇಲಿಟ್ಟುಕೊಳ್ಳುವ ಇವರು ನಿಜಕ್ಕೂ ಗಟ್ಟಿಗರೇ ಸೈ.

ಇನ್ನವರ ಆಚಾರ ವಿಚಾರಗಳನ್ನು ಸರಿಯಾಗಿ ತಿಳಿಯಬೇಕಾದರೆ ಹಳೆಯ ಸಂಪ್ರದಾಯಗಳನ್ನುಳಿಸಿಕೊಂಡು, ಮತಾಂತರಗೊಳ್ಳದೆ, ಪಾಶ್ಚಾತ್ಯ ರೀತಿಯ ಜೀವನಕ್ಕೆ ಮರುಳಾಗದೆ ಇರುವ ನಿಜವಾದ ಆಫ್ರಿಕನ್ನರೆನಿಸುವ ಹಳ್ಳಿಯ ಜನರನ್ನು ನೋಡಬೇಕು. ಕ್ರಿಶ್ಚಿಯನ್ ಮತ್ತು ಮುಸ್ಲಿಂ ಮತಾಂತರಕ್ಕೊಳಪಟ್ಟವರು ಆಯಾ ಜಾತಿಯ ಪದ್ಧತಿಗಳನ್ನನುಸರಿಸುತ್ತಾರೆ ಮತ್ತು ನಾಗರಿಕತೆಯಲ್ಲಿ ಮುಂದುವರಿದ ಪಟ್ಟಣಿಗರು ಈಗ ಪ್ರಪಂಚದೆಲ್ಲೆಡೆಯಲ್ಲಿರುವಂತೆ-ಅದರಲ್ಲೂ ಪಾಶ್ಚಾತ್ಯರಂತೆ–ಪುರುಷರೊಂದಿಗೆ ಸಮಾನ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ. ಇದಕ್ಕೆ ಸರ್ಕಾರದ ಕಡೆಯಿಂದಲೂ ಬೆಂಬಲ ಇದೆ. ಇವುಗಳ ಪೈಕಿ ಮುಖ್ಯವಾದ ವಿಷಯ ಒಂದೆಂದರೆ ಅವಿವಾಹಿತ ತಾಯಿಯರ ಸಮಸ್ಯೆ. ಹಿಂದೆ ಬಂಜೆತನ ಮಹಾಪರಾಧವೆನಿಸಿದ್ದ ಈ ಜನರಲ್ಲಿ ಸ್ತ್ರೀಯೊಬ್ಬಳು ಪ್ರಾಪ್ತ ವಯಸ್ಕಳಾಗುತ್ತಲೇ ಒಂದು ಮಗುವನ್ನು ಹಡೆದರೇನೇ ಅವಳು ವಿವಾಹ ಯೋಗ್ಯಳು ಎನಿಸಿದ್ದ ಕಾಲವೊಂದಿತ್ತು. ಈ ಪದ್ಧತಿಯು ಈಗಲೂ ಕೆಲವು ಜಾತಿಯವರಲ್ಲಿ ಜಾರಿಯಲ್ಲಿದೆ. ಹೀಗಾಗಿ ಮದುವೆಗೆ ಮುಂಚೆ ತಾಯಿಯರಾಗುವುದು ಅವರಿಗೆ ಹೊಸದೂ ಅಲ್ಲ; ಹೀನಾಯವೂ ಅಲ್ಲ. ಈಗ ಮುಂದುವರಿದ ಈ ಯುಗದಲ್ಲಿ ಹೊರ ಜಗತ್ತಿನ ಸಂಪರ್ಕ ಬೆಳೆದು ಅವರುಗಳ ಸಂಪ್ರದಾಯಗಳ ಪರಿಚಯವಾದ ಮೇಲೆ, ಈ ಪದ್ಧತಿಯನ್ನು ತಮ್ಮತನವನ್ನುಳಿಸಿಕೊಳ್ಳುವ ಸಲುವಾಗಿ ಪ್ರೋತ್ಸಾಹಿಸಬೇಕೆ? ಅಥವಾ ಇದು ನೀತಿ ವಿರುದ್ಧ ಎಂದು ಕಾನೂನನ್ನು ಜಾರಿಗೆತರಬೇಕೇ ಎನ್ನುವ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಆದರೆ ಈ ನಡುವೆ ಆ ಬಗ್ಗೆ ನಿಶ್ಚಯವಾಗುವವರೆಗೆ ಆ ತಾಯಿಯರನ್ನೂ (ಆಫ್ರಿಕದಲ್ಲಿ ಜನಸಂಖ್ಯೆ ಕಡಿಮೆ ಇರುವುದರಿಂದ) ಮತ್ತು ಅತ್ಯಮೂಲ್ಯವೆನಿಸಿದ ಶಿಶುಗಳನ್ನು ಅಲಕ್ಷಿಸುವುದೆ? ಆಫೀಸಿನಲ್ಲಿರುವ ಅಂತಹ ನೌಕರಿಣಿಯರಿಗೆ ಮದುವೆಯಾದವರಂತೆಯೇ ಸಮಾನತೆ ಕೊಟ್ಟು ರಜೆ, ಸಂಬಳ, ವಿಶಿಷ್ಟ ಸಂಬಳ ಇವುಗಳನ್ನು ಕೊಡಬೇಕೇ? ಕೊಟ್ಟರೆ ಇಂತಹವುಗಳಿಗೆ ಉತ್ತೇಜನ ಕೊಟ್ಟಂತಾಗುವುದಿಲ್ಲವೆ? ಕೊಡದಿದ್ದಲ್ಲಿ ಪ್ರಜಾಕ್ಷಯಕ್ಕೆ ಕಾರಣವಲ್ಲವೇ? ಎಂಬ ಬಗೆ ಬಗೆಯ ಪ್ರಶ್ನೆಗಳು ಹುಟ್ಟಿಕೊಂಡು ನಿತ್ಯವೂ ವೃತ್ತ ಪತ್ರಿಕೆಗಳಲ್ಲಿ ಇವುಗಳನ್ನು ಸಮರ್ಥನೆ ಮಾಡಿಯೂ, ವಿರೋಧಿಸಿಯೂ ಹೇಳಿಕೆಗಳು ಬರುತ್ತಿರುವುದನ್ನು ಈಗಲೂ ನೋಡಬಹುದು.

ಈಚೆಗಷ್ಟೇ ವಿದ್ಯಾಭ್ಯಾಸದ ಅವಶ್ಯಕತೆಯಿಂದ, ಅದಕ್ಕಿರುವ ಅನುಕೂಲಗಳಿಂದ ಇಲ್ಲಿನ ಸ್ತ್ರೀಯರೂ ವಿದ್ಯಾವಂತರಾಗುತ್ತಿದ್ದಾರೆ ಮತ್ತು ಬಹಳ ದೊಡ್ಡ ಹುದ್ದೆಗಳನ್ನೂ ನಿರ್ವಹಿಸುತ್ತಿದ್ದಾರೆ. ಆದರೆ ಇವರ ಸಮಾಜದಲ್ಲಿರುವ ಒಂದು ಕೊರತೆಯೆಂದರೆ ಹಿಂದೆಯೂ ಮತ್ತು ಹಳ್ಳಿಗಳಲ್ಲಿ ಈಗ್ಲೂ ಸಹ ಗಂಡಸಾದವನು ಅಲ್ಪಸ್ವಲ್ಪ ಸಂಪಾದಿಸಿ ಸಂಸಾರ ನಿರ್ವಹಣೆಗೆಂದು ಕೊಟ್ಟರೆ ಆಯಿತು ; ಅಲ್ಲಿಗವನ ಜವಾಬ್ದಾರಿ ತೀರಿದಂತೆ. ಸಂಸಾರದ ಮಿಕ್ಕೆಲ್ಲ ಜಂಜಡ ಮತ್ತು ಹೊಣೆ ಹೆಂಗಸಿಗೆ ಸೇರಿದ್ದು. ನೀರು ತರುವುದು, ಕಟ್ಟಿಗೆ ತರುವುದು, ಮಕ್ಕಳ ಲಾಲನೆ ಪಾಲನೆ, ಪಶು ಪ್ರಾಣಿಗಳ ಆರೈಕೆ ಮತ್ತು ರಕ್ಷಣೆ, ಗುಡಿಸಲು ಕಟ್ಟುವುದು ಮತ್ತು ರಿಪೇರಿಗಳು, ಅಲ್ಲದೇ ನೀರು ಮೇವನ್ನು ಹುಡುಕುತ್ತಾ ವರ್ಷದಲ್ಲಿ ನಾಲ್ಕಾರು ಬಾರಿ ವಲಸೆ ಹೋಗುವಾಗ ಹೊಸ ಗುಡಿಸಲು ಕಟ್ಟಲು ಸಾಮಾನುಗಳನ್ನು ಹೇರಿಕೊಂಡು ಹೋಗುವುದು, ಹೊಸ ಜಾಗದಲ್ಲಿ ಮತ್ತೆ ವಾಸಕ್ಕೆ ಎಲ್ಲವನ್ನೂ ಹವಣಿಸಿಕೊಳ್ಳುವುದು ಇತ್ಯಾದಿ ಸಮಸ್ತ ಕೆಲಸಗಳೂ ಹೆಂಗಸಿನದೇ. ಈಗಷ್ಟೇ ಪಟ್ಟಣಗಳಲ್ಲಿ ನಾಗರಿಕರೆನಿಸಿದ ಕೆಲವು ಗಂಡಸರು ಸಂಸಾರದ ಒಂದೆರಡು ಕೆಲಸಗಳಲ್ಲಿ ಕೈ ಹಚ್ಚುತ್ತಾರೆ. ಆದರೂ ವಿದ್ಯಾವಂತರಾಗಿದ್ದೂ, ಕೈತುಂಬ ಸಂಬಳವಿದ್ದರೂ ಹೆಂಗಸರು ಮಕ್ಕಳ ಬಗೆಗೆ ಆಸ್ಥೆ ವಹಿಸದೇ ಇರುವವರೇ ಹೆಚ್ಚು ಮಂದಿ. ಅದರಲ್ಲೂ ಹೆಂಡತಿಯೂ ಉದ್ಯೋಗಸ್ಥಳಾಗಿದ್ದರೆ ಆ ಗಂಡಸರಿಗೆ ಮೋಜೆ ಹೌದು. ಸಂಸಾರದ ಸಮಸ್ತ ಜವಾಬ್ದಾರಿಯ ಜೊತೆಗೆ ಖರ್ಚನ್ನು ಸಹ ಅವಳೇ ವಹಿಸಬೇಕಾಗುತ್ತದೆ. ನಾನೂರೈವತ್ತು ವರ್ಷಗಳ ಕಾಲದ ಪಾಶ್ಚಾತ್ಯರ ಪ್ರಭಾವದಿಂದಾಗಿ ಇವರಲ್ಲಿ ಕುಡಿತವು ಜಾಸ್ತಿಯಾಗಿದೆ. ಸಂಸಾರ ನಿರ್ವಹಣೆಯಲ್ಲಿ ಅಷ್ಟೊಂದು ಜವಾಬ್ದಾರಿ ಹೊತ್ತು ಬೇಸತ್ತ ಹೆಂಗಸೂ ಆಗಾಗ್ಗ ಕುಡಿಯುವುದೂ ಅಪರೂಪವೇನಲ್ಲ. ಇನ್ನು ಹಳ್ಳಿಯ ಹೆಂಗಸರ ಪಾಡನ್ನಷ್ಟು ನೋಡೋಣ.

ಪ್ರಪಂಚದಲ್ಲಿ ಎಲ್ಲರಿಗೂ ಇರುವಂತೆ ಆಫ್ರಿಕದಲ್ಲೂ ಸಹ ಹೆಣ್ಣು ಮಕ್ಕಳಿಗಿಂತ ಗಂಡು ಮಕ್ಕಳೆಂದರೆ ಆಸೆ ಹೆಚ್ಚು. ಹೆಣ್ಣು ಮಕ್ಕಳು ಬೇಡವೆಂದಲ್ಲ. ಏಕೆಂದರೆ ಇವರ ಮದುವೆಗಾಗಿ ತಂದೆ ತಾಯಿಗಳೇನೂ ಖರ್ಚು ಮಾಡಬೇಕಾದ್ದಿಲ್ಲ. ಗಂಡು, ಮದುವೆಗಿರುವ ಹುಡುಗಿಗೆ ಜೀವನೋಪಾಯಕ್ಕಾಗಿ ಹಸುಗಳನ್ನು ಕೊಟ್ಟು, ಮದುವೆ ದಿನದ ಖರ್ಚು ವಹಿಸಿ ಮದುವೆ ಮಾಡಿಕೊಂಡು ಹೋಗುತ್ತಾನೆ. ಹೆಣ್ಣೆಂದರೆ ನಮ್ಮ ದೇಶದವರಿಗಿರುವಂತೆ ಖರ್ಚಿನ ಹೆದರಿಕೆಯೇನೂ ಇಲ್ಲ ; ಅವಳು ಶೀಲ ಕಾಪಾಡಬೇಕಲ್ಲ, ಎನ್ನುವ ಭಯವೂ ಇಲ್ಲ. ಏಕೆಂದರೆ ಈವರೆಗೂ ಇನ್ನೂ ಅನೇಕ ಜಾತಿಗಳಲ್ಲಿ ಮದುವೆಯಾಗುವ ಮೊದಲು ಒಂದು ಮಗುವನ್ನು ಹಡೆದವರೇನೇ ಹೆಣ್ಣು ವಿವಾಹ ಯೋಗ್ಯಳು. ಇಂತಹ ಪದ್ಧತಿ ಇಲ್ಲದ ಜಾತಿಯುವರಲ್ಲೂ ಮದು

ವೆಗೆ ಮೊದಲು ಹುಡುಗಿಯೇನಾದರೂ ಶೀಲಗೆಟ್ಟರೆ, ಅವಳನ್ನು ಮಿಕ್ಕವರಿಗಿಂತ ಸ್ವಲ್ಪ ಕಡಿಮೆ ಮಟ್ಟ ಎಂದು ಭಾವಿಸುತ್ತಾರೆಯೇ ವಿನಃ ಅದೊಂದು ಅಪರಾಧ ವೆಂದು ಪರಿಗಣಿಸುವುದಿಲ್ಲ. ಅವಳ ತಂದೆ ತಾಯಿಯರಿಗೆ ಅದರಿಂದ ಏನೂ ತೊಂದರೆ ಇರುವುದಿಲ್ಲ. ಅವಳ ಮಗುವಿಗೂ ಇರುವುದಿಲ್ಲ. ನ್ಯಾಯ ರೀತಿಯಲ್ಲಿ ಮದುವೆಯಾಗಿ ನಾಲ್ಕಾರು ಮಕ್ಕಳ ತಾಯಾದವಳೂ ಸಹ ಕಾರಣಾಂತರದಿಂದ ಗಂಡನಿಂದ ಬೇರೆಯಾದಲ್ಲಿ ಅವಳನ್ನು ಬೇರೆಯುವನು ಮದುವೆಯಾಗಿ ಅವಳ ಆ ಮಕ್ಕಳನ್ನು ಪ್ರೀತಿಯಿಂದಲೇ ಸಾಕುತ್ತಾನೆ. ಇವರಲ್ಲಿ ಮಕ್ಕಳ ತಂದೆ ಎನ್ನಿಸಿ ಕೊಳ್ಳುವುದು ಬಹಳ ಹೆಮ್ಮೆಯ ವಿಷಯ. ಮತ್ತು ದೊಡ್ಡ ಸಂಸಾರವೆಂದರೆ ಇವರಿಗೆ ಬಹಳ ಇಷ್ಟ.

ಆಫ್ರಿಕದಲ್ಲಿ ಗುಲಾಮರ ವ್ಯಾಪಾರದಿಂದಾಗಿ ಉಂಟಾದ ಹಾನಿಗಳಿಂದಲೂ, ಐವತ್ತು ಮಿಲಿಯನ್‌ಗೂ ಮೇಲ್ಪಟ್ಟಷ್ಟು ಜನರು ಹೊರಕ್ಕೆ ಸಾಗಿಸಲ್ಪಟ್ಟದ್ದರಿಂದಲೂ ಆಧುನಿಕ ಔಷಧಿಗಳಿಲ್ಲದೆ ರೋಗ ರುಜಿನಗಳ ಹಾವಳಿಯಿಂದಲೂ, ಪ್ರತಿ 2–3 ವರ್ಷ ಗಳಿಗೊಮ್ಮೆ ತಪ್ಪದೇ ಕಾಡುವ ಕ್ಷಾಮಗಳಿಂದಲೂ ಜನಸಂಖ್ಯೆ ಬಹಳ ಕಡಿಮೆ ಇದೆ. ಪ್ರಪಂಚದ ಬೇರೆಡೆಗಳಲ್ಲಿ ಮಿತಿಮೀರಿದ ಜನಸಂಖ್ಯೆಯ ಸಮಸ್ಯೆಯನ್ನೆದುರಿಸು ತ್ತಿದ್ದರೆ, ಆಫ್ರಿಕನ್ನರು ತಮಗೆ ಬೇಕಾದಷ್ಟು ಜನಸಂಖ್ಯೆ, ಬೇಗ ಬೇಗ ವೃದ್ಧಿ ಹೊಂದ ಲೆಂದು ಗರ್ಭಿಣಿಯರಿಗೂ, ಶಿಶುಗಳಿಗೂ ವಿಶೇಷ ರಕ್ಷಣೆ ನೀಡುತ್ತಿದ್ದಾರೆ. ಇವರಲ್ಲಿ ಹತ್ತು ಹದಿನಾಲ್ಕು ಮಕ್ಕಳಾಗುವುದೇನೂ ಹೆಚ್ಚಲ್ಲ. ಈಗಷ್ಟೆ ಪಟ್ಟಣಿಗರು ಪ್ರಪಂಚದ ಮತ್ತೆಲ್ಲ ಜನರನ್ನೂ ನೋಡಿ ಮಿತ ಸಂತಾನದ ಬಗ್ಗೆ ಆಸ್ಥೆ ವಹಿಸುತ್ತಿ ದ್ದಾರೆ. ಆದರೆ ಇಂತಹವರ ಸಂಖ್ಯೆ ಶೇಕಡ ಒಂದರಷ್ಟು ಇಲ್ಲವೆನ್ನಬಹುದು. ಈಗ ಸುಮಾರು ಐವತ್ತು ವರ್ಷಗಳ ಹಿಂದೆಯೂ ಸಹ ಆಫ್ರಿಕನ್ನರ ಸ್ಥಿತಿ ಹೇಗಿತ್ತೆಂದರೆ ಪಶು ಪಾಲನೆಯನ್ನೇ ಮುಖ್ಯ ಕಸುಬನ್ನಾಗಿರಿಸಿಕೊಂಡಿದ್ದ ಹಳ್ಳಿಗರು, ಒಬ್ಬರ ಗೋ ಸಂಪತ್ತಿನ ಮೇಲೆ ಮತ್ತೊಬ್ಬರು ಆಕ್ರಮಣ ಮಾಡಿ, ಗೋವುಗಳನ್ನು ಹಿಡಿದು ತರುತ್ತಿದ್ದರು. ಗೋಗ್ರಹಣ ಬಹಳ ಮೆಚ್ಚಿಗೆಗೆ ಅರ್ಹವಾದ ಮತ್ತು ಹೆಮ್ಮೆಯ ವಿಷಯವಾಗಿತ್ತು. ಇದರಿಂದಾಗಿ ಸುತ್ತಮುತ್ತಲ ಹಳ್ಳಿಯವರಿಗೆ ಸದಾ ಕಲಹ, ಯುದ್ಧಗಳು ನಡೆಯುತ್ತಲೇ ಇತ್ತು. ಆದುದರಿಂದ ಅವರಿಗೆ ಕಾದಾಡಲು ಗಂಡು ಮಕ್ಕಳ ಸಂಖ್ಯೆಯೂ, ಮಕ್ಕಳನ್ನು ಹೆರಲು ಹೆಣ್ಣು ಮಕ್ಕಳ ಸಂಖ್ಯೆಯೂ, ಸದಾ ಬೆಳೆಯುತ್ತಲೇ ಇರಬೇಕಾಗುತ್ತಿತ್ತೇ ವಿನಃ ಸಂತಾನ ನಿರೋಧವೆಂಬ ಸಂಗತಿ ಅವರಿಗೆ ಗೊತ್ತೇ ಇರಲಿಲ್ಲ. ಮತ್ತು ಈಗಲೂ ಅವರಿಗೆ ಸಾಕಷ್ಟು ಜನಸಂಖ್ಯೆ ಇಲ್ಲದ್ದರಿಂದ ಸಂತಾನ ನಿರೋಧವೆಂಬ ಒಂದು ಯೋಜನೆ ಇದ್ದಿತೆಂದೂ ಸಹ ತಿಳಿಯದವರೂ, ತಿಳಿದರೂ ನಂಬದವರೂ, ನಂಬಿದರೂ ಅನುಸರಿಸಲು ವಿರೋಧ ಸೂಚಿಸುವವರೇ ತುಂಬಿದ್ದಾರೆ.

ಬಂಜೆತನ ಇವರಿಗೆ ಸ್ವಲ್ಪವೂ ಸಹಿಸದ ವಿಷಯ. ಬಂಜೆ ಹೆಂಗಸು ಭೂತಾಯಿಯಂತೆ ತಾನೂ ಫಲವತ್ತಾಗಬೇಕೆಂಬ ಆಸೆಯಿಂದ ಮಣ್ಣಲ್ಲಿ ಬೊಂಬೆ ಮಾಡಿ, ದೇವರಿಗೆ ನಿವೇದಿಸಿ ಹೊರೆಯಿಡುವ ಸಂಪ್ರದಾಯವಿದೆ. ಬಸುರಿ ಹೆಂಗಸು, ದಿನ ತುಂಬಿ ಹೆರಿಗೆಗೆ ದಿನಗಳು ಸಮೀಪಿಸುತ್ತಿರುವಾಗ ಅವರ ಜಾತಿಯ ಹೆಂಗಸರೂ, ಅಕ್ಕ ಪಕ್ಕದ ಹೆಂಗಳೆಯರೂ, ಬಂಧು ಬಳಗದವರೂ ಆಗಾಗ್ಗೆ ಬಂದು ಅವಳ ಯೋಗ ಕ್ಷೇಮ ವಿಚಾರಿಸುವುದು ವಾಡಿಕೆ. ಅವಳದೇ ಆದ ಗುಡಿಸಲಿನಲ್ಲಿ ಮಗುವಿನ ಜನನವಾದರೆ ಒಳ್ಳೆಯದು; ಬೇರೆಲ್ಲಾದರೂ ಆದರೆ ಕೆಟ್ಟ ಶಕುನ ಎಂದು ಅವರು ಭಾವಿಸುತ್ತಾರೆ. ಗರ್ಭಿಣಿ ಹೆಂಗಸು ಪಾಲಿಸಬೇಕಾದ ನಿಯಮಗಳು ಕೆಲವಿರುತ್ತವೆ. ಇವುಗಳನ್ನಿವಳು ತಪ್ಪದೇ ಪಾಲಿಸುತ್ತಿರಬೇಕು. ಆಕೆ ಪ್ರಾಣಿಗಳನ್ನು ಕಡಿಯುವ ಸ್ಥಳದಲ್ಲಿರಬಾರದು ಮತ್ತು ನೋಡಬಾರದು. ಏಕೆಂದರೆ ಅಂತಹ ದೃಶ್ಯಗಳು ಗರ್ಭದಲ್ಲಿನ ಮಗುವಿನ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುತ್ತವಂತೆ. ಅನುಭವಿ ಎನಿಸಿದ ಸೂಲಗಿತ್ತಿಯ ನೇತೃತ್ವದಲ್ಲಿ ಮಗುವಿನ ಜನನವಾದೊಡನೆ ಆ ಸಂತೋಷಕ್ಕೆ ಕೆಲವು ಜಾತಿಯವರು ಒಂದು ಕುರಿಯನ್ನು ಕಡಿಯುತ್ತಾರೆ. ಮಗುವಿಗೆ ಮೂರು ನಾಲ್ಕು ವರ್ಷಗಳವರೆಗೆ ಮೊಲೆಯೂಡುವ ಸಂಪ್ರದಾಯ ಇವರಲ್ಲಿದೆ; ಮಧ್ಯೆ ಹಸುವಿನ ಹಾಲನ್ನೂ ಕುಡಿಸುತ್ತಾರೆ. ಈ ಹಾಲು ಕುಡಿಸುವ ಕಾಲಾವಧಿಯಲ್ಲಿ ಸಾಧಾರಣವಾಗಿ ಇವರು ಯಾವ ಲೈಂಗಿಕ ಸಂಬಂಧವನ್ನೂ ಇಟ್ಟುಕೊಳ್ಳುವುದಿಲ್ಲ. ಹೀಗೆ ಮೂರು ನಾಲ್ಕು ವರ್ಷಗಳ ಅಂತರದ ನಡುವೆ ಹುಟ್ಟಿದ ಮಕ್ಕಳನ್ನು ದಕ್ಷಿಣ ಆಫ್ರಿಕದಲ್ಲಿರುವ ಕೆಲವು ಕಾಡುಜನರು ಕೊಂದುಬಿಡುವ ಸಂಪ್ರದಾಯವಿದೆ.

ಬೆಳೆದ ಹೆಣ್ಣು ಮಕ್ಕಳು ತಾಯಿಯರಿಗೆ ಮನೆಕೆಲಸಗಳಲ್ಲೂ, ಚಿಕ್ಕ ತಮ್ಮ ತಂಗಿಯರನ್ನು ನೋಡಿಕೊಳ್ಳುವುದರಲ್ಲೂ ನೀರು ತರುವುದಕ್ಕೂ ಸಹಾಯ ಮಾಡುತ್ತಾರೆ. ಆದುದರಿಂದ ಚಿಕ್ಕ ಮಗುವೊಂದು ತನ್ನ ಪಾಲನೆಗೆ, ತನ್ನ ತಾಯಿಯನ್ನಾಶ್ರಯಿಸುವಷ್ಟೇ ತನ್ನ ಅಕ್ಕಂದಿರನ್ನು ಆಶ್ರಯಿಸಿರುತ್ತದೆ. ಈ ರೀತಿ ಕೆಲಸಗಳಲ್ಲಿ ನೆರವಾಗುವುದೂ ಮಕ್ಕಳನ್ನು ನೋಡಿಕೊಳ್ಳುವುದೂ ತಮ್ಮ ಕರ್ತವ್ಯವೆಂಬ ಭಾವನೆ ಅವರಲ್ಲಿ ಮೂಡಿರುತ್ತದೆ. ಹೀಗೆ ತಾಯಿಗೆ ನೆರವಾಗಿ ಹುಡುಗಿಯು ತಾಯಿಯಂತೆ ನಡೆ, ನುಡಿ, ಮುಂದೆ ಗೃಹಿಣಿಯಾಗಲು ಬೇಕಾದ ಮನೆಗೆಲಸ ತನ್ನ ಜಾತಿಯ ಆಚಾರ ವಿಚಾರಗಳನ್ನು ಕಲಿಯುತ್ತಾಳೆ. ಈ ರೀತಿ ಯೌವ್ವನಕ್ಕೆ ಕಾಲಿಡುವವರೆಗೂ ತಾಯಿಗೆ ನೆರವಾಗುತ್ತಿದ್ದು, ಯೌವ್ವನಕ್ಕೆ ಕಾಲಿಡುತ್ತಲೇ ವಿವಿಧ ಭಾವನೆಗಳನ್ನು ಹೊತ್ತು, ವಿಶಾಲ ಪ್ರಪಂಚದೆಡೆಗೆ ಹೊಸ ನೋಟ ಬೀರಲು ಪ್ರಾರಂಭಿಸುತ್ತಾರೆ. ತಕ್ಷಣವೇ ತಂದೆ ತಾಯಿಗಳು ಜಾಗೃತರಾಗುತ್ತಾರೆ. ಹುಡುಗಿ ದೊಡ್ಡವಳಾಗುವ ಚಿಹ್ನೆ ತೋರಿದೊಡನೆ (ಕೆಲವರಲ್ಲಿ ದೊಡ್ಡವರಾದಮೇಲೆ) ಅವಳಿಗೊಂದು ವಿಧಿ ವಿಶೇಷ

ಹಾಡಿರುತ್ತದೆ. ಕೆಲವು ಜಾತಿಗಳವರು ಇಂತಹ ಅನೇಕ ಹೆಣ್ಣು ಮಕ್ಕಳಿಗೆ ಒಂದೇ ದಿನ ಈ ವಿಧಿ ನೆರವೇರಿಸುವುದೂ ಉಂಟು. ಗೊತ್ತಾದ ದಿನಕ್ಕೆ ಬಂಧುಗಳಿಗೂ ಇಷ್ಟೇಷ್ಟರಿಗೂ ಆಹ್ವಾನವು ಕಳುಹಿಸಲ್ಪಡುತ್ತದೆ. ಅವರುಗಳು ಸೋರೆ ಬುರುಡೆಯಂತಹ ಗೌರ್ಡ್‌ಗಳೆಂಬ ಬುರುಡೆಗಳಲ್ಲಿ ಹಾಲನ್ನು ತುಂಬಿಕೊಂಡು ಬಲಿ ಕೊಡಲು ಕುರಿ, ಕೋಣ ಮೊದಲಾದುವುಗಳನ್ನೂ ತೆಗೆದುಕೊಂಡು ಬರುತ್ತಾರೆ. ಶಾಸ್ತ್ರವಿಧಿ ಆಗುತ್ತಲೇ ಕೆಲವರು ಸಂಗೀತ, ನೃತ್ಯಗಳ ಸಮಾರಂಭವನ್ನಿಟ್ಟುಕೊಳ್ಳುತ್ತಾರೆ. ಇದಾಗಿ ಕೆಲವು ದಿವಸಗಳವರೆಗೆ ಅವಳೆಲ್ಲೂ ಹೊರಗೆ ಹೋಗಕೂಡದು. ಅವಧಿ ಕಳೆದಕೂಡಲೇ ಅವಳಿಗೆ ಶಾಸ್ತ್ರೋಕ್ತವಾಗಿ ಕೇಶಮುಂಡನ ಮಾಡಿ 'ಇಂದಿನಿಂದ ನೀನೂ ದೊಡ್ಡ ಹೆಂಗಸಾದೆ' ಎನ್ನುತ್ತಾರೆ. ಕೆಲವು ಜಾತಿಯವರಲ್ಲಿ ಮುಂದಿನ ಎರಡು ಹಲ್ಲುಗಳನ್ನೂ ಕೀಳುವ ವಾಡಿಕೆಯಿದೆ. ಹೀಗೆ ಹಲ್ಲು ಕೀಳುವುದು ಅವರ ಸೌಂದರ್ಯವನ್ನು ಹೆಚ್ಚಿಸುತ್ತದೆಯಂತೆ. ಮುಂದೆ ಕೆಲವು ತಿಂಗಳವರೆಗೆ ಅವಳಿಗೆ ಮುಂದೆ ಜೀವನದಲ್ಲಿ ಎದುರಿಸಬೇಕಾಗಲಿರುವ ಸುಖ, ದುಃಖಗಳ ಸಮಯದಲ್ಲಿ ನಡೆದುಕೊಳ್ಳಬೇಕಾದ ರೀತಿ ಮತ್ತು ಲೈಂಗಿಕಜ್ಞಾನ ಇವುಗಳ ಬಗ್ಗೆ ಸ್ವಲ್ಪಸ್ವಲ್ಪವಾಗಿ ಪರಿಚಯಮಾಡಿಕೊಡುತ್ತಾರೆ. ಈ ವಿಷಯಗಳನ್ನವಳು ಮತ್ತಾರ ಮುಂದೂ ಹೇಳಕೂಡದು : ಗಂಡನಿಗೂ ಸಹ.

ಬಂಟು ಜನರಲ್ಲಿ ದೊಡ್ಡವಳಾದ ಹುಡುಗಿಯನ್ನು ಕೂಡಲೇ ಬೇರೊಂದು ಕತ್ತಲು ಗುಡಿಸಲಿನಲ್ಲಿರಿಸಿ ಕುರಿಯ ಚರ್ಮದಿಂದ ಮಾಡಿದ ಬಟ್ಟೆ ತೊಡಿಸುತ್ತಾರೆ. ಅವಳ ಸ್ನೇಹಿತೆಯರು ಅವಳಿಗಾಗಿ ಸುಗಂಧ ಬೀರುವ ಎಲೆಗಳನ್ನೂ ಮರದ ತೊಗಟೆಗಳನ್ನೂ ನುಣ್ಣಗೆ ಅರೆದುಕೊಡುತ್ತಾರೆ. ಅದನ್ನವಳು ನಿತ್ಯವೂ ಮೈಗೆ ಲೇಪಿಸಿಕೊಳ್ಳುತ್ತಾಳೆ. ಅವಳು ಆ ಕತ್ತಲ ಗುಡಿಸಲಿನಿಂದ ಬರುವಂತಾಗುತ್ತಲೇ, ಅನೇಕ ಮಕ್ಕಳನ್ನು ಹಡೆದಿರುವ ವೃದ್ಧೆಯೊಬ್ಬಳು ಅವಳ ಕೈಹಿಡಿದು ಕರೆದುಕೊಂಡು ಬರುತ್ತಾಳೆ. ಆಗ ಹುಡುಗಿಯ ಮೈಗೆ ಬೆಣ್ಣೆಯನ್ನು ಲೇಪಿಸಿ ಶುದ್ಧಗೊಳಿಸುತ್ತಾರೆ. ಹೀಗೆ ಶುದ್ಧಳಾದ ಹುಡುಗಿಯೀಗ ತಂದೆತಾಯಿಯರ ಗುಡಿಸಲಿಗೆ ಹೋಗಿ ಬಂದು ನೆರೆದಿರುವ ಸ್ತ್ರೀ ವೃಂದಕ್ಕೆ ಅಡುಗೆ ಮಾಡಲು ತಯಾರಾಗುತ್ತಾಳೆ. ಆ ದಿನ ಅವಳಿಗೆ ಅಡುಗೆಮಾಡಲೂ, ಹಾಲು ಕರೆಯಲೂ ಸೌದೆ ಸಂಗ್ರಹಿಸಿ, ಗೆಡ್ಡೆಗೆಣಸುಗಳನ್ನು ತೋಟದಿಂದ ತರಲೂ ವೃದ್ಧೆಯು ಸಹಾಯ ಮಾಡುತ್ತಾಳೆ. ಹಾಲು ಹಿಂಡುವಾಗಲಂತೂ ಹುಡುಗಿಯು ಕೈ ಹಿಡಿದೇ ಹಿಂಡಿಸುವುದಲ್ಲದೇ ಆ ಹಾಲನ್ನು ವೃದ್ಧೆಯೇ ಕುಡಿಯಬೇಕಾಗುತ್ತದೆ. ಅವಳು ಅಡುಗೆಗೆ ಬೇಕಾದ ನೀರು ತರಲು ಹೋಗುವಾಗ ಹುಡುಗಿಯ ಹಿಂದೊಬ್ಬಳೂ ಮುಂದೊಬ್ಬಳೂ ವೃದ್ಧೆಯರು ಹೋಗುತ್ತಾರೆ. ನೀರಿನ ತಟಾಕ, ನದಿ ಅಥವಾ ಬಾವಿಯಬಳಿ ಹುಡುಗಿಯನ್ನು ನಿಲ್ಲಿಸಿ ಇಬ್ಬರು

ವೃದ್ಧೆಯರೂ ಒಂದು ಗಿಡದ ಟೊಂಗೆಯಿಂದ ನೀರು ಪ್ರೋಕ್ಷಿಸುತ್ತಾರೆ. ಆಮೇಲಷ್ಟೇ ಆ ಹುಡುಗಿ ನೀರು ತರಲು ಯೋಗ್ಯಳಾಗುತ್ತಾಳೆ. ಕೆಲವು ಜಾತಿಯವರಲ್ಲಿ ಅಂತಹ ಹುಡುಗಿಯನ್ನು ಗುಡುಗು ಮಿಂಚಿನಿಂದೊಡಗೂಡಿ ಭೋರನೆ ಸುರಿಯುವ ಮಳೆಯಲ್ಲಿ ನಗ್ನಳಾಗಿ ಓಡಿಸುತ್ತಾರೆ. ಅಂದೇ ಅವಳು ಶುದ್ಧಳಾದಳೆಂದು ಲೆಕ್ಕ. ಅದುವರೆಗೆ ಅವಳು ಅಶುದ್ಧಳು. ಹೀಗೆ ಹುಡುಗಿಯಾಗಿದ್ದವಳು ಶುದ್ಧಳಾಗಿ ಮುಂದೆ ಯುವತಿಯಾಗಿ ಬೆಳಗುತ್ತಾಳೆ.

ಈಗಿನ ಕಾಲದ ಗಂಡು ಹೆಣ್ಣುಗಳು ಕೈಕೈ ಹಿಡಿದು, ಮೈಕುಲುಕಿಸಿ ನಗುತ್ತಾ ಮಾತನಾಡುತ್ತಿರುವ ದೃಶ್ಯ ಸರ್ವೇ ಸಾಮಾನ್ಯವಾದರೂ, ಇವೆಲ್ಲವೂ ಕೇವಲ ಈಚೆಗೆ ಪ್ರಾರಂಭವಾದದ್ದು. ಹಿಂದೆ ಹೀಗೆ ಹುಡುಗ ಹುಡುಗಿಯರು ಮಾತನಾಡಲು ಅವಕಾಶವಿರುತ್ತಿರಲಿಲ್ಲ. ದಕ್ಷಿಣ ಆಫ್ರಿಕದಲ್ಲಿ ( Bushmen ) ವಯಸ್ಸಿಗೆ ಬಂದ ಅಣ್ಣತಂಗಿಯರು ಸಹ ಮಾತನಾಡಬಾರದು. ಹುಡುಗನೊಬ್ಬನು ಮನೆಗೆ ಬಂದಾಗ, ಮನೆಯಲ್ಲಾರೂ ಇರದೇ ಅವನ ಅಕ್ಕ ಅಥವಾ ತಂಗಿ ಇದ್ದಲ್ಲಿ ಅವನು ಹೊರಗೇ ನಿಂತು 'ನನಗೆ ಬಹಳ ಬಾಯಾರಿಕೆ. ಕುಡಿಯಲು ಏನನ್ನಾದರೂ ಮನೆಯಲ್ಲಿರುವವರು ಕೊಡುತ್ತೀರಾ'ಎಂದು ಕೇಳುತ್ತಾನೆಯೆ ವಿನಃ ಅಕ್ಕ ತಂಗಿಯರ ಹೆಸರು ಹಿಡಿದು ಕರೆಯುವುದಿಲ್ಲ ಮತ್ತು ಅವರ ಮುಖ ನೋಡಿ ಮಾತನಾಡುವುದೂ ಇಲ್ಲ. ಮತ್ತು ಇದೇ ರೀತಿ ಹೆಣ್ಣು ಕೊಟ್ಟ ಅತ್ತೆಯನ್ನು ಅಳಿಯ ಮಾತನಾಡಿಸುವುದಿಲ್ಲ ಮತ್ತು ಸಾಧ್ಯವಾದಷ್ಟು ಅವಳೆದುರಿಗೆ ಬರುವುದೇ ಇಲ್ಲ.

ನಾಗರಿಕರೆನಿಸಿದವರಲ್ಲಿ ಯುವಕ ಯುವತಿಯರು ಪರಸ್ಪರ ಮೆಚ್ಚಿ ಮದುವೆಯಾಗುವ ಸಂಭವಗಳು ಇತ್ತೀಚೆಗೆ ಇದ್ದರೂ ಸಹ ಎರಡೂ ಕುಟುಂಬದ ಹಿರಿಯರು ಒಪ್ಪಿ ಮದುವೆಯನ್ನು ನಿಶ್ಚಯಿಸುವುದೇ ಇವರಲ್ಲಿ ಸಂಪ್ರದಾಯ. ಗಂಡಿನವರೇ ಹೆಣ್ಣು ಕೇಳಲು ಹೋಗುವುದೇ ಇಲ್ಲಿಯ ಪದ್ಧತಿ. ಕೆಲವು ಜಾತಿಯವರು ಈ ರೀತಿ ಸಂಬಂಧ ಬಂದಕೂಡಲೇ ಹಳ್ಳಿಯ ಮುಖಂಡನಿಗೆ ತಿಳಿಸಿ ಅವನ ಒಪ್ಪಿಗೆ ಪಡೆದು ಮದುವೆ ನಿಶ್ಚಯಿಸುತ್ತಾರೆ. ಹುಡುಗನು ಹುಡುಗಿಗೆ ಹಸುಗಳನ್ನು ಮದುವೆಯ ದಿನದ ಔತಣಕ್ಕೆ ಕಡಿಯಲು ಬೇಕಾದ ಒಂದು ಕೋಣವನ್ನೂ ಮತ್ತು ಕುಡಿಯಲು ಬೇಕಾದಷ್ಟು ಹೆಂಡವನ್ನೂ ಕೊಡಬೇಕು. ಕೆಲವರಲ್ಲಿ ಹೊದೆಯುವ ಕಂಬಳಿಗಳನ್ನು ಕೊಡುವ ವಾಡಿಕೆ ಇದೆ. ಕೆಲವರಲ್ಲಿ ಹುಡುಗಿಯ ತಾಯಿಗೂ ಒಂದೆರಡು ಹಸುಗಳನ್ನು ಕೊಡಬೇಕಾಗುತ್ತದೆ. ಹುಡುಗಿಗೆ ಕೊಡುವ ಹಸುಗಳ ಸಂಖ್ಯೆ ಎಷ್ಟಾದರೂ ಆಗಬಹುದು. ಗೊತ್ತುಪಡಿಸಿದ ಒಂದು ದಿನ ಹುಡುಗನು ತನ್ನ ಗೆಳೆಯರೊಂದಿಗೆ ಹುಡುಗಿಯ ಹಳ್ಳಿಯ ಬಾಗಿಲಿಗೆ ಬಂದು ಅವಳನ್ನು ಕರೆಯುತ್ತಾನೆ. ಅವಳು ತನ್ನ ಗೆಳತಿಯರೊಂದಿಗೆ ಅಲ್ಲಿಗೆ ಬರುತ್ತಾಳೆ. ಗಂಡು ತಾನು ಇಂತಿಷ್ಟು

ಹಸುಗಳನ್ನು ಅವಳಿಗೆ ಕೊಡಲು ತಯಾರಿರುವುದಾಗಿ ಹೇಳುತ್ತಾನೆ. ಇದು ಸಾಧಾರಣ ಎರಡು ಮೂರರಿಂದ ಪ್ರಾರಂಭವಾಗುತ್ತದೆ, ಅದಕ್ಕೆ ಹುಡುಗಿ ಒಪ್ಪಿದರೆ ಸರಿ. ಅದಿಲ್ಲದೇ ಅವಳಿಗೇನಾದರೂ ಅದು ಸಾಲದು ಎನಿಸಿದರೆ—ಹುಡುಗ ಇನ್ನೂ ಹೆಚ್ಚು ಕೊಡಬಲ್ಲ ಎನಿಸಿದರೆ—ಹೆಚ್ಚು ಹೆಚ್ಚು ಕೇಳುತ್ತಾಳೆ. ಇದರ ಬಗ್ಗೆ ಸ್ವಲ್ಪ ವಾದ ವಿವಾದ ನಡೆಯುತ್ತದೆ. ಗಂಡು ತಾನಷ್ಟು ಕೊಡಲಾರೆ ಎನ್ನುತ್ತಾನೆ. ಹೆಣ್ಣು ಅಷ್ಟು ಕೊಟ್ಟಲ್ಲದೇ ತಾನು ಮದುವೆಯಾಗಲಾರೆ ಎಂದು ಹಠ ಹಿಡಿಯುತ್ತಾಳೆ. ಗಂಡಿನ ರೂಪಕ್ಕೆ ಮನಸೋತು ಕ್ರಮೇಣ ಅದಕ್ಕಿಂತ ಕಡಿಮೆ ಸಂಖ್ಯೆ ಗೋವುಗಳಿಗೆ ಒಪ್ಪಿದರೂ ಒಪ್ಪುತ್ತಾಳೆ. ಒಪ್ಪಿ ಹಳ್ಳಿಯ ಬಾಗಿಲನ್ನವನಿಗೆ ತೆರೆಯುತ್ತಾಳೆ. ಹೀಗೆ ಒಮ್ಮೆ ಬಾಗಿಲನ್ನು ತೆಗೆದಳೆಂದರೆ ತೀರಿತು. ಇನ್ನವಳು ವಿವಾಹಕ್ಕೆ ಒಪ್ಪದೇ ವಿಧಿಯೇ ಇಲ್ಲ. ಹಾಗೇನಾದರೂ ಹುಡುಗಿ ಕೇಳಿದಷ್ಟು ಗೋವುಗಳನ್ನು ಕೊಡಲು ಹುಡುಗನಿಗೆ ಸಾಧ್ಯವಾಗದಿದ್ದಲ್ಲಿ, ಅವನು ಹಳ್ಳಿಗೆ ಹಿಂತಿರುಗಿ ಅಷ್ಟು ಗೋವುಗಳನ್ನು ಒಟ್ಟುಮಾಡಿಕೊಂಡು (ಒಂದೆರಡು ವರ್ಷಗಳಲ್ಲಿ) ಬರುತ್ತಾನೆ.

ಕೆಲವರಲ್ಲಿ ಹುಡುಗನು ಮದುವೆಗೆ ಹಿಂದಿನ ರಾತ್ರಿ ಎರಡು ಕಡೆಯವರ ಒಪ್ಪಿಗೆ ಪಡೆದು, ಹುಡುಗಿಯನ್ನು ಅವಳೇ ಸ್ವತಃ ತಯಾರಿಸಿದ ಗುಡಿಸಲಿಗೆ ಕರೆದುಕೊಂಡು ಹೋಗುತ್ತಾನೆ. ರಾತ್ರಿ ಕಳೆದು ಬೆಳಗಾಗುತ್ತಲೇ ಹುಡುಗನು ತನ್ನ ತಂದೆಯ ಬಳಿ ಬಂದು 'ಅಪ್ಪ ನನ್ನ ಮನೆಗೆ ನಿನ್ನೆ ರಾತ್ರಿ ನೆಂಟರೊಬ್ಬರು ಬಂದಿದ್ದಾರೆ, ಅವರನ್ನಷ್ಟು ವಿಚಾರಿಸು ಬಾ' ಎನ್ನುತ್ತಾನೆ. ತಂದೆ 'ಹೌದೇನು ? ನಡೆ ನೋಡುವಾ' ಎಂದು ಮಗನ ಜೊತೆ ಹೋಗಿ ಬಾಗಿಲು ತಟ್ಟುತ್ತಾನೆ. ಬಾಗಿಲು ತೆಗೆದ ಹುಡುಗಿಯನ್ನು ಮೇಲಿಂದ ಕೆಳಗಿನವರೆಗೆ ಆಶ್ಚರ್ಯದಿಂದ ದಿಟ್ಟಿಸಿ ನೋಡಿ 'ಭಲೇ ಭೇಷ್ ಒಳ್ಳೆಯ ನೆಂಟರೇ ಬಂದಿದ್ದಾರೆ' ಎಂದು ಹೇಳಿ, ಹುಡುಗಿಯ ತಾಯಿ ತಂದೆಯರ ಬಳಿ ಹೋಗಿ 'ನೋಡಿ, ನಿಮ್ಮ ಹುಡುಗಿ ನಮ್ಮ ಹುಡುಗನ ಹಿಂದೆ ಬಿದ್ದಿದ್ದಾಳೆ. ಮದುವೆ ಮಾಡಿಕೊಡಿ' ಎನ್ನುತ್ತಾನೆ. ಇದೆಲ್ಲಾ ಶಿಷ್ಟಾಚಾರಕ್ಕೆ ಅಷ್ಟೆ. ಹುಡುಗಿಯ ಕಡೆಯವರು 'ಹೋ' ಎಂದು ಕೂಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಾರೆ. ಸರಿ ಎಲ್ಲರೂ ಒಂದೆಡೆ ಕೂಡಿ ಮದುವೆಗೆಂದೇ ಮೀಸಲಾಗಿರಿಸಿ ತಂದ ಕೋಣವನ್ನು ಕಡಿದು ಅಡಿಗೆ ಮಾಡಿ, ಕಂಠ ಪೂರ್ತಿ ತಿಂದು ತೇಗುತ್ತಾರೆ. ಕೆಲವರು ನೃತ್ಯ ಸಂಗೀತ ಸಮಾರಂಭವನ್ನು ಇಟ್ಟುಕೊಳ್ಳುತ್ತಾರೆ. ಮುಂದೆ ಹುಡುಗನೂ ಹುಡುಗಿಯೂ ತಮ್ಮದೇ ಆದ ಆ ಗುಡಿಸಲಿನಲ್ಲಿ ಜೀವನ ಪ್ರಾರಂಭಿಸುತ್ತಾರೆ. ಕೆಲವರು ವಿವಾಹಿತ ಸ್ತ್ರೀಯರು ಹುಡುಗಿಯ ಕೈ ಹಿಡಿದುಕೊಂಡು ಗಂಡಿನವರ ಮನೆಯೊಳಗೆ ಕರೆದುಕೊಂಡು ಹೋಗಿ ಇಂದಿನಿಂದ ನೀನೂ ನಮ್ಮವರಲ್ಲಿ ಒಬ್ಬಳಾದೆ ಎಂದು ಹೇಳಿ ತಮ್ಮ ಸಂತೋಷವನ್ನು ಸೂಚಿಸುತ್ತಾರೆ.

ಮತ್ತೆ ಕೆಲವರಲ್ಲಿ ವಿವಾಹ ಯೋಗ್ಯಳಾದ ಕನ್ಯೆಯನ್ನೊಂದು ಗುಡಿಸಲಿನಲ್ಲಿ ಕೂರಿಸುತ್ತಾರೆ. ಗುಡಿಸಲಿನ ಸುತ್ತ ಕೊಬ್ಬಿದ ಹಸುಗಳನ್ನು ನಿಲ್ಲಿಸಿರುತ್ತಾರೆ. ಅದರ ಸುತ್ತಲಿನ ವಲಯದಲ್ಲಿ ಬಲಿಷ್ಠರಾದ ಹತ್ತಾರು ಯುವಕರು ಮೊಳೆದುದ್ದದ ಕೋಲು ಗಳನ್ನು ಹಿಂದೂ ಮುಂದೂ ತಿರುವುತ್ತಿರುತ್ತಾರೆ. ಇಲ್ಲಿ ಬರುವ ಗಂಡು ಒಬ್ಬನಲ್ಲಿ ಆ ಕನ್ಯೆಯನ್ನು ಬಯಸುವ ಹಲವಾರು ಯುವಕರು ಕೋಲುತಿರುವುತ್ತಿರುವ ಯುವಕ ರನ್ನು ಕೊಬ್ಬಿದ ಹಸುಗಳನ್ನು ದಾಟಿ ಕನ್ಯೆಯ ಗುಡಿಸಲನ್ನು ಹೊಗಬೇಕು. ಹಾಗೆ ಯಾವನು ಮೊದಲು ಅಡಚಣೆಗಳನ್ನು ದಾಟಿ ಗುಡಿಸಲನ್ನು ತಲಪುತ್ತಾನೋ ಅವನನ್ನವಳು ಮದುವೆಯಾಗುತ್ತಾಳೆ.

ಮದುವೆ ನಿಶ್ಚಯವಾಗುತ್ತಲೇ ಹುಡುಗಿಯು ಮುಂದೆ ತನ್ನ ವಾಸಕ್ಕೆ ಬೇಕಾ ಗುವ ಗುಡಿಸಲನ್ನು ತಾನೇ ಕಟ್ಟಬೇಕು. ಬಿದಿರು ಅಥವಾ ಮರಗಳ ಸಣ್ಣ ರೆಂಬೆ ಗಳಿಂದ ಹೆಣೆಯಲ್ಪಟ್ಟ ಚೌಕಟ್ಟಿನ ಮೇಲೆ ಮಣ್ಣನ್ನು ಮೆತ್ತಿ, ಸಗಣಿ ಮತ್ತು ಗಂಜಳ ಅಥವಾ ಹಸುವಿನ ರಕ್ತದ ಮಿಶ್ರಣದಿಂದ ಸಾರಿಸಲ್ಪಟ್ಟು ಗಟ್ಟಿ ಮಾಡಿದುದಾಗಿರು ತ್ತದೆ. ಛಾವಣಿಯು ಹುಲ್ಲಿನದಾದೀತು ಅಥವಾ ಗೋಡೆಗಳಂತೆಯೇ ಬಿದಿರು ಪೌಲ್ಯ ಗಳ ಮಿಶ್ರಣವೂ ಇರಬಹುದು. ಈಗಿನ ಕಾಲದಲ್ಲಿ ತಗಡಿನದೂ ಇರುತ್ತದೆ. ಇನ್ನು ಈ ಗುಡಿಸಲೇ ಅವಳ ಸರ್ವಸ್ವ ಪ್ರಪಂಚ. ಗಂಡು ಮದುವೆಯ ಸಮಯದಲ್ಲಿ ಕೊಟ್ಟ ಹಸುಗಳನ್ನು ಇವಳಿಲ್ಲಿ ಇಟ್ಟುಕೊಂಡು ಸಾಕಿ ಆದಷ್ಟು ಈ ಸಂಪತ್ತನ್ನು ವೃದ್ಧಿಗೊಳಿಸಲು ಯತ್ನಿಸುತ್ತಾಳೆ. ಸಾಧಾರಣವಾಗಿ ಒಬ್ಬನ ಆಸ್ತಿಯು ಇಂತಿಷ್ಟು ಗೋವು ಎನ್ನುವುದರ ಮೂಲಕ ವ್ಯಕ್ತಪಡಿಸಲಾಗುತ್ತದೆ. ಗೋವುಗಳ ಸಂಖ್ಯೆ ಸ್ವಲ್ಪ ಕಡಿಮೆಯಿದ್ದರೂ, ಒಬ್ಬನು ತನ್ನ ಹಲವಾರು ಹೆಂಡಿರ ಮೂಲಕ ಅನೇಕ ಗಂಡುಮಕ್ಕಳ ತಂದೆಯಾಗಿದ್ದರೆ ಅವನೊಬ್ಬ ದೊಡ್ಡ ಮನುಷ್ಯ ಎಂದು ಪರಿ ಗಣಿಸಲಾಗುತ್ತದೆ. ಆದುದರಿಂದ ಪ್ರತಿಯೊಬ್ಬ ಸ್ತ್ರೀಯೂ ಆದಷ್ಟು ಗಂಡು ಮಕ್ಕ ಳನ್ನು ಹೆರುವ ಆಸೆಯನ್ನಿಟ್ಟುಕೊಂಡಿರುತ್ತಾಳೆ.

ಒಂದೇ ಕುಲದೇವರನ್ನು ಪೂಜಿಸುವವರೆಲ್ಲಾ ಒಂದು ವಂಶದವರೆನ್ನಿಸಿಕೊಳ್ಳು ತ್ತಾರೆ. ಹೀಗೆ ಒಂದೇ ವಂಶಕ್ಕೆ ಸೇರಿದವರಲ್ಲಿ ಪರಸ್ಪರ ವಿವಾಹಾದಿಗಳು ನಡೆಯುವು ದಿಲ್ಲ. ಪೂರಾ ಆಫ್ರಿಕಾದಲ್ಲಿ ಒಂದೇ ಒಂದು ಜಾತಿಯವರು ಮಾತ್ರ ತಮ್ಮ ವಂಶ ದವರಲ್ಲೇ ಬೇರೆ ಹಳ್ಳಿಯಿಂದ ಹೆಣ್ಣು ತಂದು ಮದುವೆಯಾಗುತ್ತಾರೆ. ಬೇರೆ ವಂಶ ದವರೆಲ್ಲರೂ ತಮಗೆ ಕೇಡೆಣಿಸಿಯಾರು ಎನ್ನುವ ಶಂಕೆ ಇವರಿಗೆ.

ಏಕ ಪತ್ನೀತ್ವವು ಇವರಲ್ಲಿ ಬಹಳ ಅಪರೂಪ. ಬಹುಪತ್ನೀತ್ವವೇ ಇವರಿಗೆ ರೂಢಿಯಲ್ಲಿ ಬಂದಿರುವುದು. ಇಥಿಯೋಪಿಯಾ ಮಾತ್ರ ಬಹಳ ವರ್ಷ

ಗಳಿಂದಲೂ ಕ್ರಿಶ್ಚಿಯನ್ ಸಂಪ್ರದಾಯಗಳನ್ನು ಬೆಳೆಸಿಕೊಂಡು ಬಂದಿದೆ. ಇಲ್ಲಿ ಕ್ರಿಶ್ಚಿಯನ್ನರ ಸಂಖ್ಯೆಯೇ ಹೆಚ್ಚು. ಆದುದರಿಂದ ಇಲ್ಲಿ ಏಕಪತ್ನಿತ್ವವು ಜಾರಿಯಲ್ಲಿದೆ. ತಂದೆಯೇ ಮನೆಗೆ ಯಜಮಾನ, ಗಂಡು ಮಗನು ಆಸ್ತಿಪಾಸ್ತಿಗೆ ಹಕ್ಕುದಾರನು. ಹೆಂಡತಿಗೆ ಆಸ್ತಿಯಲ್ಲಿ ಯಾವ ಹಕ್ಕೂ ಇಲ್ಲ. ಮದುವೆಗೆ ಮೊದಲು ಹೆಂಗಸು ಶೀಲಗೆಡುವುದು ಅಪರೂಪ. ಅಂಥವಳನ್ನಿವರು ಹೀನಾಯವಾಗಿ ಕಾಣುತ್ತಾರೆ. ಇವರ ವಿನಾ ಆಫ್ರಿಕದ ಮತ್ತೆಲ್ಲರು ಬಹುಪತ್ನಿತ್ವ ಇರುವವರೇ. ಮದುವೆಯಾಗುವಾಗಲೇ ಹೆಣ್ಣಿಗೆ ತನ್ನ ಸ್ಥಾನ ಇಂತಹುದೇ ಎಂದು ತಿಳಿದಿರುತ್ತದೆ. ಮೊದಲ ಹೆಂಡತಿ ಎನ್ನಿಸಿಕೊಂಡವಳು ಎಲ್ಲರ ಮರ್ಯಾದೆಗೆ ಪಾತ್ರಳಾಗಿ ಸರ್ವಾಧಿಕಾರಿಣಿ ಎನ್ನಿಸಿಕೊಳ್ಳುತ್ತಾಳೆ. ಕೆಲವು ಜಾತಿಯವರಲ್ಲಿ ತಂದೆಯ ಆಸ್ತಿಯು ಇವಳ ಮಕ್ಕಳಿಗೇ. ತಾಯಿಯು ತನ್ನ ಆಸ್ತಿಯನ್ನು ಕಿರಿಯ ಮಗನಿಗೆ ಕೊಡುವುದು ಪದ್ಧತಿ. ಮತ್ತು ಗಂಡ ಸತ್ತರೆ, ಅಥವಾ ಅವನೊಡನೆ ಜೀವನ ಬೇಸರವೆನಿಸಿದರೆ—ಅವನ ಯೋಗಕ್ಷೇಮವನ್ನು ಮಿಕ್ಕ ಹೆಂಡಿರು ನೋಡಿಕೊಳ್ಳುತ್ತಾರೆಂಬ ಭರವಸೆಯಿದ್ದರೆ ಅವಳು ತನ್ನ ಚಿಕ್ಕ ಮಗನೊಂದಿಗೆ ಮಿಕ್ಕ ಜೀವಮಾನದ ದಿನಗಳಲ್ಲಿ ಕಳೆಯುತ್ತಾಳೆ. ಒಬ್ಬ ಗಂಡಸು ಎಷ್ಟು ಜನರನ್ನಾದರೂ ಮದುವೆಯಾಗಬಹುದು. ಆದರೆ ಈ ಹೆಂಗಸರು ನಿತ್ಯಜೀವನದಲ್ಲಿ ಜಗಳವಾಡದಂತೆ ಜಾಗರೂಕತೆಯಿಂದ ಅವನಲ್ಲಿ ಅವರುಗಳಿಗೆ ಪ್ರತ್ಯೇಕವಾದ ಮತ್ತು ಹಗುರವಾದ ಜಾಗವನ್ನು ಹುಡುಕುತ್ತಾನೆ. ತನ್ನದೇ ಆದ ಮನೆ, ಗೋಸಂಪತ್ತು, ತನ್ನ ಅಧೀನದಲ್ಲಿರುವ ಮಕ್ಕಳು ಇವರೆಲ್ಲರ ಮಧ್ಯೆ ಪ್ರತಿಯೊಬ್ಬಳೂ ತೃಪ್ತಳಾಗಿರುತ್ತಾಳೆ. ಆದುದರಿಂದಲೇ ಕ್ರಿಶ್ಚಿಯನ್ ಮಿಷನರಿಗಳು ಏಕಪತ್ನೀತ್ವವನ್ನು ಬೋಧಿಸಲು ಬಂದಾಗ ಪಶ್ಚಿಮ ಆಫ್ರಿಕದಲ್ಲಿ ಸ್ತ್ರೀಯರು ವಿರೋಧಿಸಿ ಮಾತನಾಡಿ, ತಾವೆಲ್ಲರೂ ತೃಪ್ತಿಯಿಂದಿರುವರೆಂದೂ, ತಮ್ಮ ಜೀವನದಲ್ಲಿ ಯಾವ ವಿಧವಾದ ಬದಲಾವಣೆಯು ಅವಶ್ಯವಿಲ್ಲವೆಂದೂ ಹೇಳಿ ಅವರ ಬಾಯಿ ಮುಚ್ಚಿಸಿ ಕಳುಹಿಸಿದರಂತೆ. ಇವರ ಈ ವಾದಕ್ಕೆ ಅರ್ಥವಿಲ್ಲದಿಲ್ಲ. ಹೆಂಗಸು ತನ್ನ ಮನೆಯಲ್ಲಿ ತಾನು ಎಲ್ಲ ವಿಧದಲ್ಲೂ ಸರ್ವಾಧಿಕಾರಿಣಿ ಎನ್ನಿಸಿಕೊಂಡು ಇರುವುದು ಮಾತ್ರವಲ್ಲದೇ, ಗಂಡಸು ತನಗೆ ಇಷ್ಟಬಂದವರನ್ನು ಮದುವೆ ಮಾಡಿಕೊಳ್ಳಲು ಸ್ವಾತಂತ್ರ್ಯವಿರುವುದರಿಂದ ಪತ್ನಿ, ಪ್ರೇಯಸಿ ಎನ್ನುವ ಮಾತಿಗೆ ಅವಕಾಶವಿಲ್ಲದೇ ಎಲ್ಲರೂ ಸವತಿಯರಾಗಿಯೇ ಜೀವನ ಮಾಡುತ್ತಾರೆ.

ಹೆಂಗಸು ಗಂಡಸಿಗೆ ವಿಧೇಯಳಾಗಿರಬೇಕಾದ್ದು, ಗಂಡಸು ಹೆಂಡತಿಯನ್ನು ಕಷ್ಟಪಡಿಸದೇ ಇಟ್ಟುಕೊಳ್ಳಬೇಕಾದ್ದೂ ನ್ಯಾಯ. ಸ್ತ್ರೀಯು ಅವಿಧೇಯಳಾದಲ್ಲಿ ಅವಳಿಗೆ ಮೊದಲು ಬುದ್ಧಿ ಹೇಳಿ ಕೊನೆಗೆ ಹೊಡೆದು ಬುದ್ಧಿ ಹೇಳಲು ಹಳ್ಳಿಯ ಮುಖಂಡರಿಗೆ ಹಕ್ಕುಂಟು. ಅದೇ ರೀತಿ ಹೆಂಡತಿಯನ್ನು ಹಿಂಸಿಸುವ ಗಂಡನಿಗೂ ಹೊಡೆದು ಬುದ್ಧಿ ಕಲಿಸುತ್ತಾರೆ. ಒಬ್ಬ ಸ್ತ್ರೀಯೇನಾದರೂ ಬೇರೊಬ್ಬನೊಡನೆ

ಸ್ನೇಹ ಬೆಳೆಸಿ ಓಡಿಹೋದಲ್ಲಿ, ಮೊದಲು ಗಂಡನು ತಾನವಳಿಗೆ ಕೊಟ್ಟ ಗೋವು ಗಳನ್ನೂ ಅವುಗಳ ಸಂತಾನವನ್ನೂ ಕೇಳಿ ತಿರುಗಿ ಪಡೆಯಲು ಹಕ್ಕುಂಟು. ಕೆಲವು ವೇಳೆ ಮಕ್ಕಳನ್ನು ಕೊಟ್ಟುಬಿಡಬೇಕಾಗುತ್ತದೆ. ಎರಡು ಹಳ್ಳಿಗಳ ಮುಖಂಡರು ಗಳೂ ಒಪ್ಪಿ, ಅವಳು ಗಂಡನಿಗೆ ಗೋವುಗಳನ್ನೆಲ್ಲ ಕೊಟ್ಟುಬಿಟ್ಟಲ್ಲಿ ಅಂದಿನಿಂದಿವಳು ಸ್ವತಂತ್ರಳು. ಅವಳಿಗೇನಾದರೂ ಪ್ರಾಪ್ತವಯಸ್ಸಿನ ಗಂಡು ಮಗ ಅಥವಾ ಮಕ್ಕ ಳಿದ್ದು ಅವರಿಗೆ ಆಗಬೇಕಾದ ವಿಧಿವಿಶೇಷ (circumcision) ನಡೆದುಹೋಗಿದ್ದರೆ ಗಂಡನು ಏನನ್ನೂ ಕೇಳಿ ಪಡೆಯಲು ಹಕ್ಕಿರುವುದಿಲ್ಲ. ಆದರೆ ಅನೇಕ ಜಾತಿಯವರಲ್ಲಿ ಒಬ್ಬ ಸ್ತ್ರೀ ಒಮ್ಮೆ ಒಬ್ಬನ ಸಂಬಂಧ ಬೆಳೆಸಿ ಗರ್ಭವತಿಯಾದಲ್ಲಿ ಮತ್ತೊಬ್ಬನ ಚಿಂತೆ ಮಾಡುವಂತೆಯೇ ಇಲ್ಲ. ಲೈಂಗಿಕ ಜೀವನದಲ್ಲಿ ವಿವಾಹಿತ ಸ್ತ್ರೀ ಸ್ವತಂತ್ರಳಲ್ಲ. ಆದರೆ ತನ್ನ ಗಂಡನು ಪ್ರಾಪ್ತವಯಸ್ಕನಾದಾಗ ಅವನೊಡನೆ ಹಾಲು ಹಂಚಿ ಕುಡಿದ ಸುಮಾರು ನಲವತ್ತು ಐವತ್ತು ಮಂದಿಯಲ್ಲಿ ಯಾವನಾದರೊಬ್ಬ ಯಾವಾಗಲಾದರೂ ಬಯಸಿದರೆ ಅವನೊಡನೆ ಅವಳು ಮಲಗಬಹುದು. ಆದರೆ ಮಲಗಲೇಬೇಕೆಂಬ ನಿರ್ಬಂಧವೇನೂ ಇಲ್ಲ. ಗಂಡಸು ತನ್ನ ಹೆಂಡಿರ ಮನೆಯಲ್ಲಿ ಸರದಿಯ ಪ್ರಕಾರ ಊಟಮಾಡಿ ಮಲಗುತ್ತಾನೆ. ಹಾಗೆ ಮಾಡದೇ ಅವನು ಯಾವ ಳನ್ನಾದರೂ ಕಡೆಗಣಿಸಿದರೆ ಆ ಹೆಂಗಸು ಮಿಕ್ಕವರ ದೃಷ್ಟಿಯಲ್ಲಿ ಕೀಳೆನಿಸುತ್ತಾಳೆ. ಆದುದರಿಂದ ಅಂತಹದಕ್ಕೆ ಆಸ್ಪದ ಕೊಡದೇ ನಡೆದುಕೊಳ್ಳುವುದವನ ಕರ್ತವ್ಯ.

ಹಾಲು ಇವರಿಗೆ ಬಹು ಮುಖ್ಯವಾದ ಆಹಾರ. ಸಾಧಾರಣವಾಗಿ ಒಬ್ಬ ಗಂಡಸಿನ ಎಲ್ಲ ಹೆಂಡಿರ ಗೋವುಗಳ ಸಂಖ್ಯೆಯನ್ನೂ ಸೇರಿಸಿದರೆ ಒಬ್ಬೊಬ್ಬರಿಗೆ ಸುಮಾರು 75 ಹಸುಗಳೂ 80 ರಿಂದ 100ರ ವರೆಗೆ ಕುರಿಮೇಕೆಗಳೂ ಇರುತ್ತವೆ. ಹಾಲು ಬಹು ಪವಿತ್ರವೆಂದೂ ಪರಿಗಣಿಸಲ್ಪಡುತ್ತದೆ. ಅನೇಕ ಶಾಸ್ತ್ರಗಳ ಸಮಯ ದಲ್ಲಿ ಸ್ತ್ರೀಯರು ಹಾಲನ್ನು ಶಾಸ್ತ್ರೋಕ್ತವಾಗಿ ಸಿಂಪಡಿಸುವುದು ವಾಡಿಕೆ. ಹಾಲು ಹಿಂಡುವ ಕೆಲಸವು ಕೆಲವರಲ್ಲಿ ಕೇವಲ ಹೆಂಗಸರದೇ ಆದರೆ ಇನ್ನು ಕೆಲವರಲ್ಲಿ ಪುರುಷರೇ ಹಾಲು ಹಿಂಡುತ್ತಾರಲ್ಲದೇ, ಸ್ತ್ರೀಯರು ಈ ಹಿಂಡುವುದನ್ನು ನೋಡಲೂ ಸಹ ಬಾರದಂತೆ. ಎಷ್ಟು ಶ್ರೇಷ್ಠವೆಂದರೆ ಸಾಧಾರಣವಾದ ಮಡಕೆಗಳಲ್ಲಾಗಲೀ, ಡಬ್ಬ ಗಳಲ್ಲಾಗಲೀ ಹಿಂಡದೇ ಅದಕ್ಕೆಂದೇ ಪ್ರತ್ಯೇಕವಾಗಿ ತಯಾರಿಸಿ ಇರಿಸಿದ ಬುರುಡೆ ಗಳಲ್ಲಾಗಲೀ ಪಾತ್ರೆಗಳಲ್ಲಾಗಲೀ ಹಿಂಡುತ್ತಾರೆ.

ಮದುವೆಯಾದ ಹೆಂಗಸಿಗೆ ಎಲ್ಲೆಡೆಯಲ್ಲೂ ಮರ್ಯಾದೆ ಸಲ್ಲುತ್ತದೆ. ಮದುವೆಯ ದಿನವು ಬಹಳ ಶ್ರೇಷ್ಠವಾದ ದಿನ ಎನ್ನಿಸಿಕೊಳ್ಳುತ್ತದೆ. ಯಾವ ಹೆಂಗಸೂ ತನ್ನ ತವರಿನ ವಂಶಕ್ಕೆ ಸೇರಿದ ಗಂಡಸರೊಂದಿಗೆ ಲೈಂಗಿಕ ಸಂಬಂಧವಿಟ್ಟು ಕೊಳ್ಳುವುದಿಲ್ಲ. ಇವರೆಲ್ಲರೂ ಅವಳಿಗೆ ಅಣ್ಣ ತಮ್ಮಂದಿರಿದ್ದಂತೆ. ಎಲ್ಲೋ

ಕೆಲವು ಜಾತಿಗಳ ವಿನಃ ಮಿಕ್ಕೆಲ್ಲರಲ್ಲೂ ಮಾತೃಪ್ರಧಾನ ಪದ್ಧತಿಯೇ ಇರುವುದು. ಪ್ರತಿಯೊಬ್ಬನಿಗೂ ತಾಯಿಯ ಕಡೆಗೇ ಒಲವು ಇರುತ್ತದೆ. ಒಬ್ಬ ಸ್ತ್ರೀಯ ಮಗನ (ಮಕ್ಕಳ) ಯೋಗಕ್ಷೇಮ, ವಿವಾಹ, ವಿಧಿ ವಿಶೇಷ, ಆಸ್ತಿಪಾಸ್ತಿಗಳ ವಿಚಾರದಲ್ಲಿ (ತಾಯಿಯ ಸಹೋದರ) ಸೋದರ ಮಾವನಿಗೆ ಹಕ್ಕುಗಳೇ ವಿನಾ ಗಂಡನಾದವನಿಗೆ ಯಾವ ಹಕ್ಕೂ ಇರುವುದಿಲ್ಲ. ವಿಶೇಷ ವಿಧಿ ನೆರವೇರಿಸುವಾಗ ತಾಯಿಯು ಆ ಮಕ್ಕಳಿಗೆ ಶಾಸ್ತ್ರೋಕ್ತವಾಗಿ ಕೇಶಮುಂಡನ ಮಾಡಬೇಕು ಮತ್ತು ಹುಡುಗನಿಗೆ ವಿಧಿ ವಿಶೇಷದ ಸಮಯದಲ್ಲಿ ತಾಯಿಯು ತನ್ನ ಕೈಬಳೆ, ಉಂಗುರ ಮತ್ತು ಲೋಲಕ್ಕುಗಳನ್ನು ಕೊಡಬೇಕು. ಹೀಗೆ, ಪ್ರತಿಯೊಂದು ವಿಶೇಷ ಸಂದರ್ಭಕ್ಕೂ ತಾಯಿಗೇ ಇಲ್ಲಿ ಮರ್ಯಾದೆ. ಡಹೋಮಿ ಎಂಬಲ್ಲಿ ರಾಜನು ರಾಜ್ಯದಲ್ಲಿ ಎಲ್ಲ ಕಾರ್ಯಗಳ ನಿರ್ವಹಣೆಮಾಡುತ್ತಾನಾದರೂ ರಾಜಕೀಯದಲ್ಲಿ ಮುಖ್ಯ ವಿಷಯಗಳನ್ನು ತನ್ನ ತಾಯಿ, ಅಕ್ಕ ಮತ್ತು ಅತ್ಯಂತ ಪ್ರೀತಿಪಾತ್ರಳೆನಿಸಿದ ಹೆಂಡತಿ ಇವರೊಡನೆ ಚರ್ಚಿಸುತ್ತಾನೆ ಮತ್ತು ಅದರಂತೆ ನಡೆಯುತ್ತಾನೆ. ಕೆಲವರಲ್ಲಿ ಮಕ್ಕಳಿಗೆ ಹೆಸರಿಡುವುದೂ ತಾಯಿಯ ವಂಶದವರಂತೆಯೇ. ಮದುವೆಯಾದ ದಂಪತಿಗಳು ಹೆಣ್ಣಿನವರ ಹಳ್ಳಿಯಲ್ಲಿ ಮೂರು ನಾಲ್ಕು ವರ್ಷಗಳ ವರೆಗೆ ಜೀವನ ನಡೆಸುವುದು ಕೆಲವರಲ್ಲಿ ನಿಯಮವಿದೆ. ಹೀಗೆ ಮಾಡುವುದರಿಂದ ಆ ಗಂಡಸಿಗೆ ಸ್ವಾತಂತ್ರ್ಯವೇ ಇಲ್ಲದಂತಾಗುತ್ತದೆ. ಏಕೆಂದರೆ ಸಂಸಾರದ ಪ್ರತಿಯೊಂದು ಕಾರ್ಯವೂ ಹೆಣ್ಣಿನ ತವರಿನ ನೇತೃತ್ವದಲ್ಲಿ ಅವರ ಅಭಿಪ್ರಾಯದ ಮೇರೆಗೇ ನಡೆಯುತ್ತದೆ. ಅಲ್ಲದೇ ಅಳಿಯನು ಮಾವನಿಗೆ ಎಲ್ಲ ಕೆಲಸಗಳಲ್ಲೂ ನೆರವಾಗಬೇಕು. ತಂದೆಯ ಸಹೋದರಿ ಸೋದರತ್ತೆಗೆ ಇವರಲ್ಲಿ ವಿಶೇಷ ಮರ್ಯಾದೆ ಕೊಡಬೇಕಾಗುತ್ತದೆ. ಗಂಡಸರೂ ಹೆಣ್ಣು ಕೊಟ್ಟ ಅತ್ತೆಮಾವಂದಿರನ್ನು ಬಹಳ ಮರ್ಯಾದೆಯಿಂದ ಕಾಣುತ್ತಾರೆ. ಏಕೆಂದರೆ ಅವರು ಹೆತ್ತು ಮುದ್ದು ಮಗಳನ್ನು ಜೀವನದುದ್ದಕ್ಕೂ ಸಂಗಾತಿಯಾಗಿರಲು ಕೊಟ್ಟು ಮದುವೆ ಮಾಡಿ, ಅವನ ಸರ್ವಸ್ವ ಸಂಪತ್ತೆನಿಸಿದ ಗೋಸಂಪತ್ತನ್ನೆಲ್ಲ ವೃದ್ಧಿಪಡಿಸಿ ಗಂಡುಮಕ್ಕಳನ್ನು ಹೆತ್ತು ತನಗೆ ಗೌರವ ಸಂಪಾದಿಸಿ ಕೊಡುವ ಅನುಕೂಲವನ್ನವರು ಮಾಡಿಕೊಟ್ಟವರೆಂದು ಗೌರವಿಸುತ್ತಾನೆ. ಕೆಲವು ಕಡೆಗಳಲ್ಲಿ ಹೆಂಗಸು ಎಷ್ಟರ ಮಟ್ಟಿಗೆ ಸರ್ವಾಧಿಕಾರಿಣಿ ಎಂದರೆ, ಎತ್ತರವಾದ ಕುರ್ಚಿ ಅಥವಾ ಹುಲ್ಲು ದಿಬ್ಬದ ಮೇಲೆ ಅವಳು ಕುಳಿತು ಮಾತನಾಡುತ್ತಿದ್ದರೆ (ಮನೆಯಲ್ಲಿ) ಅವಳ ಗಂಡನೂ ಮಕ್ಕಳೂ, ಅತಿಥಿಗಳೂ ಕೆಳಗೆ ಕುಳಿತು ಅದನ್ನು ಕೇಳುತ್ತಿರುತ್ತಾರೆ.

ಆಫ್ರಿಕನ್ನರಲ್ಲಿ ಕೆಲವು ಹೆಂಗಸರು ಮಂತ್ರವಾದಿಗಳಾಗಿರುವುದೂ ಉಂಟು. ಇವರು ಮಂತ್ರತಂತ್ರಗಳನ್ನಲ್ಲದೇ ನಾರು ಬೇರುಗಳ ಔಷಧವನ್ನು ಮಾಡುವ ವೈದ್ಯರೂ ಆಗಿರುತ್ತಾರೆ. ಗಂಡಸು ಮಂತ್ರವಾದಿಯೊಬ್ಬನಿಗೆ ಸಲ್ಲುವ ಮರ್ಯಾದೆಯೇ ಮಂತ್ರವಾದಿ ಹೆಂಗಸಿಗೂ ಸಲ್ಲುತ್ತದೆ.

ಹೀಗೆ ಆಫ್ರಿಕದ ಹಳ್ಳಿಯು ಜೀವನದಲ್ಲಿ ಹೆಂಗಸು ಸರ್ವಾಧಿಕಾರಿಣಿ. ತಾನೇ ರಚಿಸಿದ ತನ್ನ ಮೇಂಡದ ಮನೆ, ಸವತಿಯರಿದ್ದರೂ ಅವರ ಯಾವ ಸಂಪರ್ಕವೂ ಇಲ್ಲದ ಪ್ರತ್ಯೇಕ ಜೀವನ, ಅತ್ತೆ ಮಾವಂದಿರ ಕಾಟವಿಲ್ಲದೇ ಹಾಯಾದ ಜೀವನ, ತನ್ನದೇ ಆದ ಗೋಸಂಪತ್ತು, ತನ್ನ ಅಧೀನದಲ್ಲಿರುವ ಮಕ್ಕಳು, ತನ್ನ ಮನಬಂದಂತೆ ನಡೆದು ಕೊಳ್ಳಬಲ್ಲಂಥಾ ಸ್ವಾತಂತ್ರ್ಯ, ತವರಿನ ಕಡೆಯಿಂದ ಬೆಂಬಲ ಇವುಗಳನ್ನನುಭವಿಸುತ್ತಾ ಸುಖ ಜೀವನವನ್ನನುಭವಿಸುವಂತೆ ತೋರುತ್ತಾಳೆ.

# ದುಡಿಯುವ ಮಹಿಳೆಗಿರುವ ಅಡಚಣೆಗಳು

**ಅನುಪಮಾ ನಿರಂಜನ**

ಅಂತರರಾಷ್ಟ್ರೀಯ ಮಹಿಳಾ ವರ್ಷದ ಸಂದರ್ಭದಲ್ಲಿ ದುಡಿಯುವ ಮಹಿಳೆಯರ ಸಮ್ಮೇಳನವೊಂದು ಇತ್ತೀಚೆಗೆ ನಗರದಲ್ಲಿ ಜರುಗಿತು.

ಆ ಸಮಯದಲ್ಲಿ ಗೃಹಿಣಿಯೊಬ್ಬರು,

"ನಾವೂ ದುಡಿಯುವ ಮಹಿಳೆಯರು ಅಲ್ವೆ? ನಮಗೂ ಹೊರಗೆ ಕೆಲಸ ಮಾಡೋವ್ರಿಗೂ ಏನು ವ್ಯತ್ಯಾಸವಿದೆ?" ಎಂದು ಪ್ರಶ್ನಿಸಿದರು.

"ವ್ಯತ್ಯಾಸವಿದೆ, ನಿಮಗೆ ದುಡಿಯೋದಕ್ಕೆ ಸಂಬಳ ಇಲ್ಲ. ಅವ್ರಿಗೆ ತಿಂಗ್ಳ ಸಂಬಳ ಬರುತ್ತೆ," ಎಂದು ನಾನು ವಿನೋದವಾಗಿ ನುಡಿದಿದ್ದೆ.

ದುಡಿಯುವ ಮಹಿಳೆ ಎಂದರೆ ಯಾರು ಎಂಬ ಬಗ್ಗೆ ನಿರ್ದಿಷ್ಟ ಕಲ್ಪನೆ ಬರಬೇಕೆಂಬ ದೃಷ್ಟಿಯಿಂದ ಮೇಲಿನ ಸಂಭಾಷಣೆ ನಮೂದಿಸಿದೆ. ಹೆಣ್ಣಾದ ಮೇಲೆ ಮನೆಗೆಲಸ ತಪ್ಪಿದ್ದಲ್ಲ. ಇದರ ಜೊತೆಗೆ, ಹೊರಗೆ ಒಂದು ಉದ್ಯೋಗವನ್ನು ಹಿಡಿದು ದುಡಿಯುವ ಹೆಂಗಸರು ಈ ವ್ಯಾಪ್ತಿಗೆ ಒಳಪಡುತ್ತಾರೆ. ದೇಶದಲ್ಲಿ ಎಷ್ಟು ಜನ ಮಹಿಳೆಯರು ಉದ್ಯೋಗಸ್ಥರಾಗಿದ್ದಾರೆ ಎಂಬುದನ್ನು ಅಧ್ಯಯನ ಮಾಡುವ ಮುಖಾಂತರ ಆಯಾ ದೇಶದ ಪ್ರಗತಿಯನ್ನು ಗುರುತಿಸಬಹುದು. ಉದಾಹರಣೆಗೆ ರಷ್ಯಾ ದೇಶದಲ್ಲಿ ಶೇಕಡಾ 92 ಜನ ಮಹಿಳೆಯರು ಉದ್ಯೋಗಸ್ಥರಾಗಿದ್ದಾರೆ. ಅಮೆರಿಕೆಯಲ್ಲಿ ಶೇಕಡಾ 45 ಮತ್ತು ಬ್ರಿಟಿಷ್‌ದೇಶದಲ್ಲಿ ಶೇಕಡಾ 32; ಭಾರತದಲ್ಲಾದರೋ ಈ ಸಂಖ್ಯೆ ಕೇವಲ 13 ಮಾತ್ರ. ದೇಶದ ಅರ್ಧದಷ್ಟು ಜನಸಂಖ್ಯೆಯುಳ್ಳ ಮಹಿಳೆಯರ ಸಾಮರ್ಥ್ಯ ಪೋಲಾಗುತ್ತಿರುವುದೇ ಭಾರತ ಆರ್ಥಿಕವಾಗಿ ಹಿಂದುಳಿದಿರುವುದಕ್ಕೆ ಮುಖ್ಯ ಕಾರಣ ಎನ್ನಬಹುದು.

ನಮ್ಮ ದೇಶದ ಮಹಿಳೆಯರ ಸಂಖ್ಯೆ ಸುಮಾರು 264 ಮಿಲಿಯನ್‌ಗಳು. ಇವರಲ್ಲಿ 28 ಮಿಲಿಯನ್ ಹೆಂಗಸರು ಹಳ್ಳಿಗಳಲ್ಲಿಯೂ 3 ಮಿಲಿಯನ್ ಸ್ತ್ರೀಯರು ಪಟ್ಟಣಗಳಲ್ಲೂ ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ.

ದುಡಿಯುವ ಮಹಿಳೆಗಿರುವ ಅಡಚಣೆಗಳು ಲೆಕ್ಕವಿಲ್ಲದಷ್ಟು. ಆದರೆ ಯಾಕೆ ಮಹಿಳೆ ಹೊರಗೆ ದುಡಿಯಬೇಕು ಎಂಬ ಪ್ರಶ್ನೆ ಏಳುತ್ತದೆ. ಸ್ತ್ರೀ ಉದ್ಯೋಗ ಅರಸುವುದು ನಾನಾ ಕಾರಣಗಳಿಂದ. ಅವುಗಳನ್ನು ಮುಖ್ಯವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸೋಣ.

1. ಬಡತನ ಮತ್ತು ಸಂಸಾರದ ಆರ್ಥಿಕ ತೊಂದರೆಗಳು.

ಏರುತ್ತಿರುವ ಸಾಮಾನುಗಳ ಬೆಲೆಯಿಂದಾಗಿ ಕೊಳ್ಳುವ ಶಕ್ತಿ ಕಡಮೆಯಾಗಿ ಸಂಸಾರದಲ್ಲಿ ಬಡತನ ತಾನೇತಾನಾಗಿದೆ. ಯಜಮಾನನೊಬ್ಬ ದುಡಿದು ಹತ್ತಾರು ಬಾಯಿಗಳನ್ನು ತುಂಬಿಸುವುದು ಈಗ ಅಸಾಧ್ಯದ ಮಾತು. ಕಾಹಿಲೆ, ಮದುವೆ, ಮುಂಜಿ, ಅತಿಥಿಗಳು, ಹಬ್ಬಗಳು ಮುಂತಾದುವುಗಳಿಂದಾಗಿ ಆದ ಸಾಲಸೋಲಗಳು, ಇವನ್ನು ಸರಿದೂಗಿಸಲು ಸ್ವಲ್ಪ ವಿದ್ಯಾವಂತಳಾದ ಗೃಹಿಣಿಯೂ ಹೊರಗೆ ಸಿಕ್ಕಿದ ಕೆಲಸವನ್ನು ಹಿಡಿಯುವ ಪ್ರಸಂಗ ಬರುತ್ತದೆ. ಕೆಳ ವರ್ಗದಲ್ಲಂತೂ ಗಂಡಸು ಹೆಂಗಸು ಇಬ್ಬರೂ ದುಡಿಯದಿದ್ದರೆ ವಿಧಿಯೇ ಇಲ್ಲ. ಕೃಷಿ, ಕಾರ್ಮಿಕ ಸ್ತ್ರೀಯರು ಈ ಗುಂಪಿನವರು. ಶೇಕಡಾ 80ರಷ್ಟು ಮಹಿಳೆಯರು ಈ ಮೊದಲನೆಯ ಗುಂಪಿಗೆ ಸೇರುತ್ತಾರೆ.

2. ವಿದ್ಯಾವಂತ ಯುವತಿಯರು ಮದುವೆಯಾಗುವವರೆಗೆ ಮನೆಯಲ್ಲಿ ಸುಮ್ಮನೆ ಕುಳಿತು ಕಾಲವ್ಯಯ ಯಾಕೆ ಮಾಡಬೇಕು ಎನ್ನುವ ದೃಷ್ಟಿಯಿಂದ ಕೆಲಸಕ್ಕೆ ಸೇರುತ್ತಾರೆ. ಯುವತಿಯ ದೃಷ್ಟಿಯಲ್ಲಿ ಸ್ವಂತ ಸಂಪಾದನೆಯಿಂದ ತನಗಿಷ್ಟವಾದುದನ್ನು ಕೊಂಡುಕೊಳ್ಳಬಹುದು ಎಂಬ ಆಶಯವಾದರೆ ತಂದೆ ತಾಯಿಯರ ದೃಷ್ಟಿಯಲ್ಲಿ ಅವಳು ಸಂಸಾರ ನಿಭಾಯಿಸಲು ಸಹಾಯಕಳು. ಅಲ್ಲದೆ ಅವಳ ಮದುವೆಗೆ ಬೇಕಾದ ಹಣ ಸಂಚಯವೂ ಅವಳಿಂದಲೇ ಆಗುತ್ತದೆ ಎಂಬ ಆಸೆಯುಳ್ಳವರು.

3. ಶ್ರೀಮಂತ ಯುವತಿಯರು ದುಡಿಯುವ ಅಗತ್ಯವಿಲ್ಲದಿದ್ದರೂ ಉದ್ಯೋಗ ಸೇರುವ ಚಟ ಉಳ್ಳವರು. ಇವರಿಗೆ ಉದ್ಯೋಗ ಖುಷಿಯಾಗಿ ಸಮಯ ಕಳೆಯುವ ಸಾಧನ.

4. ತಾಂತ್ರಿಕ ವಿಷಯಗಳಲ್ಲಿ ಉನ್ನತಿ ತರಪೇತಿ ಪಡೆದ ಹೆಂಗಸರು ತಮ್ಮ ವಿದ್ಯೆ ಪೋಲಾಗಬಾರದೆಂದು ಉದ್ಯೋಗ ಸೇರುತ್ತಾರೆ. ವಿಜ್ಞಾನಿಗಳು, ಎಂಜಿನಿಯರುಗಳು, ಡಾಕ್ಟರುಗಳು ಈ ಗುಂಪಿಗೆ ಸೇರುವಂಥವರು.

ಹೀಗೆ ಸಮಾಜದ ವಿವಿಧ ಹಂತಗಳ ಜನ ಉದ್ಯೋಗವನ್ನು ಅರಸುತ್ತಾರಲ್ಲ, ಅವರಿಗಿರುವ ಸಮಸ್ಯೆಗಳೂ ಅಡಚಣೆಗಳೂ ಅಷ್ಟೇ ವೈವಿಧ್ಯ ಪೂರ್ಣವಾಗಿರುತ್ತವಲ್ಲವೆ ?

**ಮನೆಗೆಲಸ–ಉದ್ಯೋಗಗಳ ಹೊಂದಾಣಿಕೆ**

ದುಡಿಯುವ ಮಹಿಳೆ ಎದುರಿಸಬೇಕಾದ ಮೊದಲ ಅಡಚಣೆ ಮನೆಗೆಲಸ ಮತ್ತು ಉದ್ಯೋಗಗಳ ಹೊಂದಾಣಿಕೆ. ಆಕೆ ಕೆಲಸಕ್ಕೆ ಹೋಗುವ ಮುನ್ನ ತಿಂಡಿ

ಕಾಫಿ ಆಗಬೇಕು. ಊಟ ಸಿದ್ಧವಾಗಬೇಕು. ಮಕ್ಕಳಿದ್ದರೆ ಅವರ ವ್ಯವಸ್ಥೆಯೂ ಆಗಬೇಕು. ಮನೆಯಲ್ಲಿಯೇ ಇರುವ ಹೆಂಗಸು ಈ ಕೆಲಸಗಳಿಗೆ ಇಡೀ ದಿನ ವ್ಯಯಿಸಿದರೆ, ಹೊರಗೆ ದುಡಿಯಲು ಹೋಗುವ ಹೆಂಗಸು ಈ ಕೆಲಸವನ್ನು ಬೆಳಗಿನ ಎರಡು ಮೂರು ಗಂಟೆಗಳೊಳಗೆ ಮಾಡಿ ಮುಗಿಸಬೇಕಾಗುತ್ತದೆ. ಇದಕ್ಕೆ ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯ ಎರಡೂ ಬೇಕು. ವಿಪರ್ಯಾಸದ ವಿಷಯವೆಂದರೆ ಹೆಂಗಸು ಗಂಡಸಿನಂತೆ ತಾನೂ ಹೊರಗೆ ದುಡಿದರೂ ಮನೆಗೆಲಸದಲ್ಲಿ ಮಾತ್ರ ಗಂಡಸು ಅವಳಿಗೆ ಸಹಾಯಮಾಡುವುದಿಲ್ಲ. ಇದು ನಮ್ಮ ದೇಶದಲ್ಲಿ ತಲೆತಲಾಂತರದಿಂದ ನಡೆದು ಬಂದಿರುವ ಸಂಪ್ರದಾಯ. ಕೆಲಸ ಮನೆಯದೇ ಇರಲಿ ಹೊರಗಿನದೇ ಇರಲಿ, ಎರಡಕ್ಕೂ ಏಕ ಪ್ರಕಾರ ಗೌರವ ಸಲ್ಲಬೇಕು ಎಂಬ ಭಾವನೆ ನಮ್ಮ ಹೆಂಗಸರಿಗೂ ಗಂಡಸರಿಗೂ ಬಂದರೆ ಯಾರು ಯಾವ ಕೆಲಸಮಾಡುವುದಕ್ಕೂ ನಾಚುವುದಿಲ್ಲ.

ಇಂಥ ಬೆಳಗಿನ ಕೆಲಸದ ಆತಂಕ ಆಯಾಸ ಹೆಣ್ಣು ಉದ್ಯೋಗ ಮಾಡುವಾಗ ಅನೇಕ ಅಡಚಣೆಗಳನ್ನು ತಂದೊಡ್ಡುತ್ತದೆ. ಆಯಾಸದಿಂದಾಗಿ ಆಕೆ ತನ್ನ ಉದ್ಯೋಗದ ಕಡೆ ಪೂರ್ಣ ಗಮನಕೊಡಲು ಸಾಧ್ಯವಾಗುವುದಿಲ್ಲ. ತತ್ಪರಿಣಾಮ ಕೆಲಸ ಎರಡನೆಯ ದರ್ಜೆಯದಾಗುತ್ತದೆ. ಕಾರ್ಖಾನೆಗಳಲ್ಲಾದರೋ ಆರ್ಥಿಕವಾಗಿ ಹೊಡೆತ ಬೀಳುವ ಪ್ರಸಂಗಗಳೂ ಉಂಟು.

ದುಡಿದು ಮನೆಗೆ ಬರುವ ಹೆಣ್ಣಿಗೆ ಕಾಫಿ ಬಟ್ಟಲು ಹಿಡಿದು ನಿಂತಿರುವವರು ಯಾರು ? ಅವಳು ತನಗೂ ಗಂಡನಿಗೂ ತಾನೇ ಕಾಫಿ ತಯಾರಿಸಬೇಕು. ದೈಹಿಕ ಶ್ರಮ ಅತಿಯಾದಾಗ ಗಂಡಹೆಂಡಿರಲ್ಲಿ ಸಣ್ಣ ವಿಷಯಗಳಿಗಾಗಿ ವಿರಸವಾಗುವುದೂ ಅಪರೂಪವಲ್ಲ.

ದೇಶವನ್ನು ಆರ್ಥಿಕವಾಗಿ ಮುನ್ನಡೆಸಬೇಕಾದರೆ ಹೆಚ್ಚು ಹೆಚ್ಚು ಮಹಿಳೆಯರು ಉದ್ಯೋಗಸ್ಥರಾಗಬೇಕಾದುದೇನೋ ನಿಜ. ಆದರೆ ಇದಕ್ಕೆ ಪೂರಕವಾಗುವಂತೆ ಮನೆಯಲ್ಲಿ ಪ್ರೋತ್ಸಾಹಕಾರಕ ವಾತಾವರಣ ನಿರ್ಮಾಣವಾಗಬೇಕು. ಸಮಾಜದಲ್ಲಿ ದುಡಿಯುವ ಮಹಿಳೆಯ ಬಗ್ಗೆ ಗೌರವ ಭಾವನೆ ಬೇಕು. ಸಂಸಾರದಲ್ಲಿ ಅತ್ತೆ, ಮಾವ, ನಾದಿನಿಯರು ಇದ್ದರೆ ದುಡಿಯುವ ಮಹಿಳೆಯ ಬಗ್ಗೆ ಆದರ, ಅನುಕಂಪ ತೋರಬೇಕು. ಗಂಡನೂ ಅಷ್ಟೆ. ಆದಷ್ಟು ಮಟ್ಟಿಗೆ ಹೆಂಡತಿಯನ್ನು ದಾಸಿ ಎಂದು ನಡೆಸಿಕೊಳ್ಳುವ ಬದಲು ಸಂಗಾತಿ ಎಂಬಂತೆ ನಡೆಸಿಕೊಳ್ಳಬೇಕು. ಮನೆಗೆಲಸ ಗಳಲ್ಲಿ ಅವಳಿಗೆ ನೆರವಾಗಬೇಕು. ಹೆಣ್ಣು ಮನೆಗೆಲಸವನ್ನು ಅತಿ ಸರಳಗೊಳಿಸಿ ಕೊಳ್ಳುವುದು ಒಳಿತು. ಅಡುಗೆ ಕಡಿಮೆ ಕಾಲಾವಧಿಯಲ್ಲಿ ಮುಗಿಯಲು ಗ್ಯಾಸ್ ಪ್ರೆಷರ್‌ಕುಕ್ಕರ್ ಇವನ್ನು ಬಳಸಬಹುದು. ಇವು ಕಡಮೆ ಬೆಲೆಯಲ್ಲಿ ಸಿಗುವಂತೆ ಸರಕಾರ ವ್ಯವಸ್ಥೆ ಮಾಡಬೇಕು.

## ಮಕ್ಕಳ ಸಮಸ್ಯೆ

ಅವಿಭಕ್ತ ಕುಟುಂಬಗಳಲ್ಲಿ ಸ್ತ್ರೀ ಕೆಲಸಕ್ಕೆ ಹೋದರೆ ತನ್ನ ಮಕ್ಕಳ ಪಾಲನೆಯ ಬಗ್ಗೆ ಅವಳಿಗೆ ಹೆಚ್ಚಿನ ಆತಂಕವಿರುವುದಿಲ್ಲ. ಆದರೆ ಸಣ್ಣ ಸಂಸಾರಗಳಲ್ಲಿ ಗಂಡ ಹೆಂಡತಿ ಇಬ್ಬರೂ ದುಡಿಯಲು ಹೊರಗೆ ಹೋದಾಗ ಮಕ್ಕಳ ಪಾಡು ನರಕಸದೃಶ. ಮಗುವನ್ನು ನೋಡಿಕೊಳ್ಳಲು ಗೊತ್ತುಮಾಡಿದ ಕೆಲಸದ ಹೆಂಗಸು ಅದನ್ನು ಆರೈಕೆ ಮಾಡುವುದಕ್ಕಿಂತ ಅದರ ಪಾಲಿನದೆಲ್ಲವನ್ನೂ ತಾನೇ ತಿನ್ನುವ ಪ್ರಸಂಗಗಳು ಹೆಚ್ಚು. ಎಳೆತನದಲ್ಲಿ ತಾಯಿಯ ಪ್ರೀತಿಯಿಂದ ವಂಚಿತವಾದ ಮಗು ಮುಂದೆ ಮಾನಸಿಕವಾಗಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ದುಡಿಯುವ ಮಹಿಳೆಯರ ಸಮಸ್ಯೆ ನೀಗಬೇಕಾದರೆ, ಕೆಲಸದ ವೇಳೆಯಲ್ಲಿ ಅವರ ಮಕ್ಕಳನ್ನು ಅತ್ಯಂತ ತೃಪ್ತಿಕರವಾಗಿ ನೋಡಿಕೊಳ್ಳುವ ಬಾಲವಿಹಾರಗಳು ಬೇಕು. ಇಂಥವನ್ನು ಸರ್ಕಾರ, ಸಂಘಸಂಸ್ಥೆಗಳು, ಶ್ರೀಮಂತ ಮಹಿಳೆಯರು ನಡೆಸಲು ಮುಂದೆ ಬರಬೇಕು.

ಮನೆಯಲ್ಲಿರುವ ತಾಯಿ ಅಲ್ಪಸ್ವಲ್ಪ ವಿದ್ಯಾವಂತಳಾದರೆ ತನ್ನ ಮಕ್ಕಳಿಗೆ ಮಿಡಲ್‌ಸ್ಕೂಲಿನವರೆಗೆ ಮನೆಯಲ್ಲಿ ಪಾಠ ಹೇಳಿಕೊಡಬಲ್ಲಳು. ಹೊರಗೆ ದುಡಿಯುವ ಮಹಿಳೆಗೆ ದೈಹಿಕ ಆಯಾಸದಿಂದಾಗಿ ಆ ಕೆಲಸ ಮಾಡಲು ಸಾಧ್ಯವಿಲ್ಲವಾಗುತ್ತದೆ.

## ವಿಶ್ರಾಂತಿ ರಜಾ ಖೋತಾ

ಹೆಣ್ಣಿಗೆ ಹೊಸ ಹೊಸ ಕೆಲಸದ ಅವಕಾಶಗಳು ಕಡಮೆ. ಯಾಕೆಂದರೆ ಅವಳು ಗಂಡಸಿಗಿಂತ ಹೆಚ್ಚು ದಿನ ರಜೆ ಹಾಕುತ್ತಾಳೆ. ಕೆಲವು ವೇಳೆ ವರ್ಷಗಟ್ಟಲೆ ಕೆಲಸ ಬಿಟ್ಟುಬಿಡುತ್ತಾಳೆ. ಈ ಕಾರಣಗಳಿಂದಾಗಿ ಹೆಂಗಸರನ್ನು 'ಎರಡನೆಯ ದರ್ಜೆಯ ಕೆಲಸಗಾರರು' ಎಂದು ಕರೆಯಲಾಗಿದೆ.

ತಿಂಗಳ ಮುಟ್ಟಿನ ತೊಂದರೆಗಳು, ಅವಕ್ಕೆ ಸಂಬಂಧಿಸಿದ ಕಾಹಿಲೆಗಳು ಮತ್ತು ಹೆರಿಗೆಗಳು ಇವುಗಳಿಗಾಗಿ ಹೆಣ್ಣು ಹೆಚ್ಚು ರಜಾ ಕೇಳುವುದು ಸ್ವಾಭಾವಿಕವೇ. ಈಗ ಸಾಮಾನ್ಯವಾಗಿ ಪ್ರಸವ ಪೂರ್ವ ಒಂದೂವರೆ ತಿಂಗಳು ಮತ್ತು ಅನಂತರ ಒಂದೂವರೆ ತಿಂಗಳು ಎಂದು ಹೆರಿಗೆ ರಜಾ ನೀಡುತ್ತಾರೆ. ಆದರೆ ದಿನ ತುಂಬಿದ ಬಸುರಿ ಬಸ್ ಸ್ಟಾಂಡ್‌ಗಳಲ್ಲಿ ಕ್ಯೂ ನಿಂತು ಬಸ್ಸು ಹತ್ತಿ ಕೆಲಸದ ಜಾಗ ಸೇರಿ ಕೆಲಸ ಮಾಡುವುದು ಬಹಳ ಕಷ್ಟದ ಕೆಲಸ. ಒಂದೂವರೆ ತಿಂಗಳ ಬಾಣಂತಿ ಕೆಲಸಕ್ಕೆ ಹಾಜರಾಗುವುದು ಸಾಧ್ಯವೆ ? ಈ ಮಾನವಿಕ ಕಾರಣಗಳಿಗಾಗಿ ಹೆರಿಗೆಯ ರಜಾವನ್ನು ಇನ್ನಷ್ಟು ವಿಸ್ತರಿಸಿದರೆ ಒಳಿತಾಗುವುದೇನೋ. ಬಲು ನಿಶ್ಶಕ್ತಳಾದ ಬಾಣಂತಿ ಸಂಬಳ ಖೋತಾ ಆಗುವುದೆಂದು ಕೆಲಸಕ್ಕೆ ಹೋದರೂ ದೈಹಿಕ ತ್ರಾಣವಿಲ್ಲದೆ ಬಲುಬೇಗ ಕಾಹಿಲೆಗಳಿಗೆ ಬಲಿ ಬೀಳುತ್ತಾಳೆ. ಇದರಿಂದ ಉದ್ಯೋಗ ನೀಡಿದವರಿಗೂ ಸಂಸಾರಕ್ಕೂ ಆರ್ಥಿಕವಾಗಿ

ಮತ್ತೆ ಹಾನಿ. ದುಡಿಯುವ ಮಹಿಳೆಯ ಹೆರಿಗೆಯ ಖರ್ಚು ಮತ್ತು ಅನಂತರದ ವೈದ್ಯಕೀಯ ಸೌಲಭ್ಯಗಳನ್ನೆಲ್ಲಾ ಸರ್ಕಾರ ಅಥವಾ ಆಕೆ ಕೆಲಸ ಮಾಡುವ ಸಂಸ್ಥೆ ವಹಿಸಿಕೊಳ್ಳುವಂತಾಗಬೇಕು.

**ಸಹೋದ್ಯೋಗಿಗಳ ತಾತ್ಸಾರ ಮನೋಭಾವ**

ಹೆಣ್ಣು ಎಷ್ಟೇ ಬುದ್ಧಿವಂತಳಾದರೂ ಕೆಲಸದ ಜಾಗದಲ್ಲಿ ಅವಳಿಗೆ ಸಹೋದ್ಯೋಗಿಗಳ ತಾತ್ಸಾರ ಮನೋಭಾವ ತಪ್ಪಿದ್ದಲ್ಲ. ಇದು ನಮ್ಮ ಸಂಸ್ಕೃತಿಯಲ್ಲಿ ಬೆಳೆದು ಬಂದಿರುವ ಸಂಪ್ರದಾಯ. ಹೆಣ್ಣು ಉದ್ಯೋಗದಲ್ಲಿ ತನ್ನ ಬುದ್ಧಿಶಕ್ತಿಯಿಂದ ಮೇಲಿನ ಪದವಿಗೆ ಏರಿದರೆ ಮತ್ಸರ ಇನ್ನೂ ಹೆಚ್ಚು. ಎಷ್ಟೋ ಸಾರಿ ಹಿರಿಯ ಅಧಿಕಾರಿ ಹೆಣ್ಣೆಂಬ ಕಾರಣದಿಂದ ಕೆಳಗಿನ ದರ್ಜೆಯವರು ಅವಳಿಗೆ ಕಿರುಕುಳ ಕೊಡುತ್ತಾರೆ. ಆಕೆಯ ಆಜ್ಞೆಗಳನ್ನು ಪಾಲಿಸುವುದಿಲ್ಲ. ಅವಳ ನಡತೆಯ ಬಗ್ಗೆ ಸಂಶಯ ಪಡುವವರೂ ಅನೇಕರು. ಅನೇಕ ಉದ್ಯೋಗಗಳಲ್ಲಿ ಅಭ್ಯರ್ಥಿ ಹೆಣ್ಣೆಂಬ ಕಾರಣಕ್ಕಾಗಿ ಕೆಲಸ ನೀಡದೆ ಇರುವುದೂ ಉಂಟು. ಪ್ರಮೋಷನ್ ಮುಂತಾದುವುಗಳಲ್ಲೂ ಇದೇ ತಾಪತ್ರಯ.

**ಕೃಷಿ ಕಾರ್ಮಿಕ ಕ್ಷೇತ್ರಗಳಲ್ಲಿ**

ಅವಿದ್ಯಾವಂತರಾದ ಸ್ತ್ರೀಯರೇ ಹೆಚ್ಚಾಗಿರುವ ಈ ಕ್ಷೇತ್ರಗಳಲ್ಲಿ ಮಹಿಳೆಯರ ಶೋಷಣೆ ವಿಪರೀತ. ಸಮಾನ ದುಡಿಮೆಗೆ ಸಮಾನ ವೇತನ ಇಲ್ಲ. ಹೊಲಗಳಲ್ಲಿ, ಬೀಡಿ ಕಟ್ಟುವುದರಲ್ಲಿ, ಕಾರ್ಖಾನೆಗಳಲ್ಲಿ, ಬಟ್ಟೆ ಗಿರಣಿಗಳಲ್ಲಿ, ಗಾರೆ ಮುಂತಾದ ಕೆಲಸಗಳಲ್ಲಿ ಗಂಡಸಿನಷ್ಟೇ ಅವಧಿ ಹೆಂಗಸು ದುಡಿದರೂ ಅವಳಿಗೆ ಸಿಗುವ ವೇತನ ಕಡಮೆ. ಕಾಹಿಲೆ ಕಸಾಲೆಗಳಾದಾಗ, ಹೆರಿಗೆಯ ಸಮಯದಲ್ಲಿ ಅವಳಿಗೆ ರಜೆಯೂ ಇಲ್ಲ, ವೇತನವೊದಲೇ ಇಲ್ಲ. ಎಷ್ಟೋ ಕಡೆ ಹೆಣ್ಣು ಕಾರ್ಮಿಕರಿಗೆ ಯಾವ ಕಾನೂನು ರಕ್ಷಣೆಯೂ ಇಲ್ಲ.

ಅಂತರರಾಷ್ಟ್ರೀಯ ಮಹಿಳಾ ವರ್ಷದ ಸಂದರ್ಭದಲ್ಲಿ, ಹೆಣ್ಣು ಗಂಡು ಸರಿಸಮಾನರಾಗಲು ನಾಂದಿ ಹಾಕಬೇಕು. ಸಮಾನ ದುಡಿಮೆಗೆ ಸಮಾನ ವೇತನ ಜಾರಿಗೆ ಬಂದರೆ ಮಾತ್ರ ಈ ಸಮಾನತೆಗೆ ಅರ್ಥಬರುತ್ತದೆ.

ಒಟ್ಟಿನಲ್ಲಿ ಹೆಣ್ಣು ಯಾವ ಕ್ಷೇತ್ರದಲ್ಲಿಯೇ ಕೆಲಸಮಾಡಲಿ, ಅಲ್ಲಿ ಆಕೆ ಪೂರ್ಣ ತನ್ಮಯತೆಯಿಂದ ದುಡಿಯಬೇಕು. ಹಾಗಾಗಬೇಕಾದರೆ ಆಕೆಗೆ ದುಡಿಯುವ ಅವಧಿಯಲ್ಲಿ ಮನೆಯ ಮಕ್ಕಳ ಯೋಜನೆಯಿರಬಾರದು. ಅಂಥ ಅನುಕೂಲಗಳನ್ನು ಕಲ್ಪಿಸಿಕೊಡಲು ಸರ್ಕಾರ, ಸಂಘ ಸಂಸ್ಥೆಗಳು ಮುಂದಾಗಬೇಕು. ಗಂಡೂ ಹೆಣ್ಣೂ ಒಂದಾಗಿ ದುಡಿದಾಗ ಮಾತ್ರ ದೇಶದ ಆರ್ಥಿಕ ಮುನ್ನಡೆ ಸಾಧ್ಯವಾಗುತ್ತದೆ.

ದುಡಿಯುವ ಮಹಿಳೆಯ ಬಗ್ಗೆ ಸಮಾಜದ ನಿಲುವು ಬದಲಾಗಬೇಕು. ಆಗ ಅವಳ ಎಷ್ಟೋ ಅಡಚಣೆಗಳು ತಪ್ಪುತ್ತವೆ. ಅತ್ತೆ, ಮಾವ, ಗಂಡ ಆಕೆಯ ಬಗ್ಗೆ ಸಹಾನುಭೂತಿಯಿಂದ ವರ್ತಿಸಬೇಕು. ಮನೆಗೆಲಸಗಳನ್ನು ಮಾಡುವುದರಲ್ಲಿ ಆಕೆಗೆ ಹೆಚ್ಚು ಅನುಕೂಲಗಳು ಒದಗಬೇಕು. ಮಕ್ಕಳ ಲಾಲನೆಯ ಬಗ್ಗೆ ಆಕೆಗೆ ಮತ್ತಷ್ಟು ನೆರವು ಸಿಗಬೇಕು. ಆಗ ದುಡಿಯುವ ಮಹಿಳೆಗೆ ತನ್ನ ಕೆಲಸದ ಬಗ್ಗೆ ಗೌರವ ಭಾವನೆ ಮೂಡುತ್ತದೆ. ತಾನು ದುಡಿದು ತನ್ನ ಸಂಸಾರದ ಮುನ್ನಡೆಯನ್ನು ಮಾತ್ರವಲ್ಲ ಇಡೀ ಸಮಾಜದ ಹಾಗೂ ದೇಶದ ಉನ್ನತಿಯನ್ನು ಸಾಧಿಸುತ್ತಿದ್ದೇನೆ ಎಂಬ ಹೆಮ್ಮೆ ಮಹಿಳೆಗೆ ಬಂದಾಗ ಭಾರತ ಧನ್ಯವಾಗುತ್ತದೆ.

# ಮಹಿಳೆಗೆ ವಿನಾಯಿತಿ ಬೇಡ

**ಶಮಂತಕಮಣಿ ನರೇಂದ್ರನ್**

ಅನೇಕ ಶತಮಾನಗಳಿಂದ ಸ್ತ್ರೀ ತನ್ನ ಸ್ವಾತಂತ್ರ್ಯಕ್ಕಾಗಿ, ಹಾಗೂ ಪುರುಷನೊಡನೆ ಸರಿಸಮಾನತೆಗಾಗಿ, ಹೋರಾಡುತ್ತಲೇ ಇದ್ದಾಳೆ. ಆದರೆ ಈ ಹೋರಾಟಕ್ಕೆ ನಿಜವಾದ ಅರ್ಥ, ಸ್ಥಾನ, ಬೆಲೆ ಬಂದಿರುವುದು ಇದೀಗ ಮಾತ್ರ. ಎಂದು ಮಹಿಳೆ ಬರೇ ಗೃಹಿಣಿಮಾತ್ರವಾಗಿರದೆ, ಹೊರ ಪ್ರಪಂಚಕ್ಕೂ ಕಾಲಿಟ್ಟಳೋ, ಎಂದು ಮಹಿಳೆ, ಉದ್ಯೋಗ ಮತ್ತು ವೃತ್ತಿಗೆ ಟೊಂಕಕಟ್ಟಿ ನಿಂತು, ಸಂಪಾದಿಸಿ, ಸಂಸಾರದ ಹೊರೆಯನ್ನು ಇಳಿಸಲು ಸಹಾಯಮಾಡಿ, ಆರ್ಥಿಕ ಸ್ವಾತಂತ್ರ್ಯ ಪಡೆದಳೋ, ಎಂದು ಪುರುಷನಿಗೆ ಸರಿಸಮಾನಳಾಗಿ, ಆತನು ದುಡಿಯುವ ಎಲ್ಲಾ ಕ್ಷೇತ್ರಗಳಲ್ಲೂ ಧುಮುಕಿ ತನ್ನ ಸಾಮರ್ಥ್ಯವನ್ನು ತೋರಿಸಿದಳೋ, ಅಂದಿನಿಂದ, ಅಂದರೆ ಸುಮಾರು ಐವತ್ತು ವರ್ಷಗಳಿಂದೀಚೆಗೆ 'ಮಹಿಳೆಗೆ ವಿನಾಯಿತಿ ಬೇಡ' ಎನ್ನುವುದು ಸ್ಪಷ್ಟವಾಗಿದೆ.

ಇಷ್ಟು ವರ್ಷಗಳೂ ಮನೆ ಮತ್ತು ಸಮಾಜವೆಂಬ ವೃತ್ತಕ್ಕೆ ಗಂಡಸೇ ಮಧ್ಯಬಿಂದು! ಸ್ತ್ರೀ ಈ ಪ್ರಧಾನ ಕೇಂದ್ರದ ಸುತ್ತಲೂ ಒಂದು ಉಪಗ್ರಹದಂತೆ ಮಾತ್ರ ಸುತ್ತುತ್ತಿದ್ದಳು; ದೂರದಲ್ಲೇ ಬಹುವೇಳೆ! ಎಲ್ಲಿಯೋ ಒಮ್ಮೊಮ್ಮೆ ಸಮೀಪದಲ್ಲಿ! ಆಕೆಗೇ ಮಧ್ಯಬಿಂದುವಿನ, ವಾರಸುದಾರಳ ಸ್ಥಾನ ಎಂದೂ ಇರಲಿಲ್ಲ. 'ಪತಿಯೇ ದೈವ, ಮನೆಯೇ ದೇಗುಲ' ಇದಿಷ್ಟೇ ಆಕೆಯ ಆದರ್ಶ, ತೃಪ್ತಿಗಳಾಗಿದ್ದವು.

ಹೀಗಿದ್ದಾಗಲೂ, ಕೆಲವು ಪ್ರತಿಭಾವಂತ ಮಹಿಳೆಯರು ತಮ್ಮ ಗುರಿಯು ಬೇರೆಯೂ ಇತ್ತೆಂದು ತೋರಿಸಿ, ತಮ್ಮ ಶಕ್ತಿ, ಸಾಮರ್ಥ್ಯಗಳ ಮೂಲಕ ಚರಿತ್ರೆಯಲ್ಲಿ ಅಚ್ಚಳಿಯದೆ ಉಳಿದಿದ್ದಾರೆ. ಉದಾಹರಣೆಗೆ, ಫ್ಲಾರೆನ್ಸ್ ನೈಟಿಂಗೇಲಳಿಂದ ಹಿಡಿದು ಮದರ್ ತೆರೇಸಾವರೆಗೂ, ಜೋನ್ ಆಫ್ ಆರ್ಕ್‌ಳಿಂದ ಝಾನ್ಸಿ ರಾಣಿ, ಮ್ಯಾಡಾಮ್ ಕ್ಯೂರಿಇಂದ ಹಿಡಿದು ವ್ಯಾಲಂಟೀನಳವರೆಗೂ, ಅನ್ನಪವ್‌ಲೋವಳಿಂದ ಸರೋಜಿನಿನಾಯ್ಡುವರೆಗೂ, ಹಾಗೂ ರಾಣಿ ವಿಕ್ಟೋರಿಯಳಿಂದ ಹಿಡಿದು ಇಂದಿರಾ ಗಾಂಧಿಯವರೆಗೂ, ಅನೇಕ ಮಹಿಳೆಯರು ಸ್ತ್ರೀ ಪ್ರತಿಭೆಯನ್ನು ಪ್ರಪಂಚಕ್ಕೆ ತೋರಿಸಿದ್ದಾರೆ, ತೋರಿಸುತ್ತಿದ್ದಾರೆ! ಆದರೆ ಈ ದೊಡ್ಡ ಸ್ತ್ರೀ ಸಾಗರದಲ್ಲಿ ಈ ಸಂಖ್ಯೆ ಬೆರಳೆಣಿಸುವಷ್ಟು ಮಾತ್ರ.

ಇತ್ತೀಚೆಗೆ ಹೆಚ್ಚು ಹೆಚ್ಚು ಸ್ತ್ರೀಯರು, ಸಂಘಸಂಘವಾಗಿ, ಒಟ್ಟೊಟ್ಟಿಗೆ, ಸಾರ್ವಜನಿಕ ಕಾರ್ಯಗಳಲ್ಲಿ ಭಾಗಿಯಾಗುತ್ತಿದ್ದಾರೆ. ಸಂಘಟಿತ ಹೋರಾಟ ನಡೆಸುತ್ತಿದ್ದಾರೆ ; ಎಲ್ಲ ಮಹಿಳೆಯರಲ್ಲೂ ಜಾಗೃತಿ ಕೆರಳಿಸುತ್ತಿದ್ದಾರೆ.

ಈ ರೀತಿ ಮಹಿಳೆಯರಲ್ಲಿ ಸಂಪೂರ್ಣ ಪರಿವರ್ತನೆಯಾಗುತ್ತಿರುವುದು ಅನೇಕ ಕಾರಣಗಳಿಂದಾಗಿ. ಈಗಿನ ಜನಾಂಗದ ಸ್ಥಿತಿಗತಿಗಳು, ಹೊಸ ಸಾಮಾಜಿಕ ಬೆಳವಣಿಗೆ, ಹೊಸ ಕಾನೂನು ಕಾಯ್ದೆಗಳ ನೆರವು ಮತ್ತು ಮುಖ್ಯವಾಗಿ ಆರ್ಥಿಕ ಆವಶ್ಯಕತೆ, ಸ್ತ್ರೀಯರ ಧ್ಯೇಯಗಳನ್ನು ಮಾರ್ಪಾಡುಮಾಡಿವೆ.

ಇಂದು ಜನಾಂಗದ ಸ್ಥಿತಿ (demography) ಏನಾಗಿದೆ ? ಸ್ತ್ರೀ ಪುರುಷರ ಸಂಖ್ಯೆ ಸಮಾನವಾಗುತ್ತಾ ಬರುತ್ತಿದೆ. ಮುಂಚೆ ಪುರುಷರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು, ಹಾಗೂ ಸ್ತ್ರೀ ಪುರುಷರ ಆಯುಷ್ಯ ಹೆಚ್ಚಾಗುತ್ತಿದೆ. ಕುಟುಂಬ ಯೋಜನಾ ಕ್ರಮಗಳು ಹೆಚ್ಚಿಗೆ ಆಚರಣೆಯಲ್ಲಿ ಬಂದು ಕುಟುಂಬಗಳು ಕಿರಿದಾಗುತ್ತಿವೆ.

ಇನ್ನು ಇಂದಿನ ಸಾಮಾಜಿಕ ರೀತಿ ನೀತಿಗಳನ್ನು ಪರಿಶೀಲಿಸಿದರೆ, ಹೆಚ್ಚಿನ ಸಂಖ್ಯೆಯಲ್ಲಿ ಸ್ತ್ರೀಯರು ವಿದ್ಯಾವಂತರಾಗುತ್ತಿದ್ದಾರೆ. ಸ್ತ್ರೀ ಸಾಕ್ಷರತಾ ಮಟ್ಟ 1951 ರಲ್ಲಿ 7.9% ಇತ್ತು. 1971 ರಲ್ಲಿ 18.7%ಗೆ ಏರಿತು. ನಾಲ್ಕು ಗೋಡೆಗಳ ನಡುವೆ ಮಾತ್ರ ಇದ್ದ ಸ್ತ್ರೀ ಇಂದು ಚುನಾವಣಾ ಹಕ್ಕನ್ನು ಪಡೆದಿದ್ದಾಳೆ ; ದೇಶದ ಆಗುಹೋಗುಗಳಲ್ಲಿ ಪಾಲುಗಾರಳಾಗಿದ್ದಾಳೆ.

ಮಹಿಳಾ ಚಳುವಳಿ (Lib movement) ಎಲ್ಲೆಲ್ಲಿಯೂ ಕೇಳಿಬರುತ್ತಿದೆ. ಅಬಲೆ, ಅಶಕ್ತಳು, ಅಧೀನಳು ಎನ್ನುವ ಪದಗಳು ಮಹಿಳಾ ನಿಘಂಟುಗಳಿಂದ ದೂರವಾಗುತ್ತಿವೆ.

ಈಗೀಗ ರಚಿಸಲಾಗಿರುವ ಕಾನೂನು, ಕಾಯಿದೆಗಳನ್ನು ಪರಿಶೀಲಿಸಿದರೆ, ಸ್ತ್ರೀ ಪುರುಷರ ಮಧ್ಯೆ ಇರುವ ಅಸಮಾನತೆಯನ್ನು ಹೋಗಲಾಡಿಸಲು ಎಷ್ಟು ಸಹಾಯ ಮಾಡಿವೆ ಎಂದು ತಿಳಿಯುತ್ತದೆ. ವಿವಾಹ ಮತ್ತು ವಿವಾಹವಿಚ್ಛೇದನಗಳಿಗೆ ಸಂಬಂಧಿಸಿದಂತೆ, ಸಮಾನ ಹಕ್ಕು, ಸಮಾನ ಅವಕಾಶ ಇಂದು ಸಾಧ್ಯವಿದೆ. ಪಿತ್ರಾರ್ಜಿತ ಆಸ್ತಿಗೆ ಗಂಡುಮಕ್ಕಳಿಗೆ ಸಲ್ಲುವಂತೆ, ಹೆಣ್ಣುಮಕ್ಕಳಿಗೂ ಇಂದು ಅದರಲ್ಲಿ ಸಮಾನ ಭಾಗವಿದೆ. ದತ್ತು ತೆಗೆದುಕೊಳ್ಳುವ ಹಕ್ಕಿದೆ. ಈ ರೀತಿ, ಹಿಂದಿನ ಶತಮಾನಕ್ಕೆ ಹೋಲಿಸಿದರೆ, ಮಹಿಳೆಯರು ಹೊಸ ಯುಗಕ್ಕೆ ಇಂದು ಕಾಲಿಟ್ಟಿದ್ದೇವೆ. ಈ ವೈಜ್ಞಾನಿಕ ಯುಗದಲ್ಲಿ, ತಂತ್ರಕೌಶಲ ಯುಗದಲ್ಲಿ, ಜೀವನದ ಮೌಲ್ಯಗಳು ಬೇರೆಯಾಗುತ್ತಿರುವ ಕಾಲದಲ್ಲಿ, ಸ್ತ್ರೀಗೆ ವಿನಾಯಿತಿ ಬೇಡ ಅನ್ನುವುದು ಸಹಜವಲ್ಲವೆ ? ನ್ಯಾಯವಲ್ಲವೆ ?

ಕೊನೆಯ ಬಹು ಮುಖ್ಯಕಾರಣ, ಇಂದು ಸ್ತ್ರೀ ಹೊರ ಪ್ರಪಂಚಕ್ಕೆ ಕಾಲಿಡಲು ಆರ್ಥಿಕ ಹಾಗೂ ಆಸ್ತಿಯ ಆವಶ್ಯಕತೆ. ಸ್ತ್ರೀಯೂ ದುಡಿಯದಿದ್ದರೆ ಅನೇಕ ಸಂಸಾರಗಳಲ್ಲಿ ಜೀವನ ಸಾಗಿಸುವುದು ಅಸಾಧ್ಯವಾಗಿದೆ. ಇದರ ಜೊತೆಗೆ ಉತ್ಪಾದನಾ ಸಾಧನೆಗಳು, ಉದ್ಯೋಗ ಅವಕಾಶಗಳು ಹೆಚ್ಚುತ್ತಿರುವುದರಿಂದ, ಮಹಿಳೆ ಹೊರಗೆ ಹೋಗಿ ದುಡಿದು, ಸಂಪಾದಿಸುವುದು ಇಂದು ಸರ್ವೇ ಸಾಮಾನ್ಯವಾಗಿಬಿಟ್ಟಿದೆ. ಸಮಾಜ ಕಣ್ಣರಳಿಸಿ, ಕೈಮಾಡಿ ತೋರಿಸುವ ಕಾಲ ಹಿಂದಾಗುತ್ತಿದೆ. ಕೆಲವು ಧಣಿಗಳಂತೂ, ಕೆಲವು ವೃತ್ತಿಗಳಿಗೆ ಹೆಣ್ಣುಮಕ್ಕಳೇ ಯೋಗ್ಯರೆಂದು ಅವರನ್ನೇ ಆರಿಸಿಕೊಳ್ಳುತ್ತಾರೆ. ಇಂದು ಮಹಿಳೆಯರಲ್ಲಿ ವೈದ್ಯರು, ದಾದಿಯರು, ಉಪಾಧ್ಯಾಯಿನಿಯರು, ವಿಜ್ಞಾನಿಗಳು, ಶಿಕ್ಷಣ ಶಾಸ್ತ್ರಜ್ಞರು, ರಾಯಭಾರಿಗಳು, ಅಧಿಕಾರಿಗಳು, ಶಾಸನ ಸಭೆಯ ಸದಸ್ಯರುಗಳು, ಸಮಾಜ ಸೇವಕಿಯರು, ಪುರುಷರೊಡನೆ ಸ್ಪರ್ಧಿಸುತ್ತಲೇ ಇದ್ದಾರೆ. ಅನೇಕ ವೇಳೆ ಅವರಿಗಿಂತ ಉತ್ತಮ ರೀತಿಯಲ್ಲೇ ಕೆಲಸ ಮಾಡುತ್ತಿದ್ದಾರೆ.

ಮಹಿಳೆ ವೃತ್ತಿಯ ಕೈ ಹಿಡಿಯಲು ಆರ್ಥಿಕ ಅವಶ್ಯಕತೆ ಒಂದೆಡೆಯಾದರೆ, ಅನೇಕವೇಳೆ ತನಗಿರುವ ಕಾಲಾವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂಬ ಬಯಕೆ, ಬಾಳನ್ನು ಸಾರ್ಥಕಪಡಿಸಿಕೊಳ್ಳಬೇಕೆಂಬ ಹುಮ್ಮಸ್ಸು, ಮತ್ತೊಂದೆಡೆ. ಹೆಚ್ಚಿನ ಅನುಭವ, ಶಿಕ್ಷಣಗಳು ಬೇಕಾದರೆ, ಆತ್ಮಶಕ್ತಿ ವಿಕಾಸಗೊಳ್ಳಬೇಕಾದರೆ, ಹೊರಗಿನ ಪ್ರಪಂಚದ ವ್ಯವಹಾರದಲ್ಲಿ ಭಾಗಿಯಾಗಬೇಕು. ಪ್ರತಿಭಾವಂತ ಮಹಿಳೆಯರ ಜೀವನವನ್ನು ಸೂಕ್ಷ್ಮವಾಗಿ ತಿಳಿದುಕೊಂಡರೆ ಅರ್ಥವಾಗುತ್ತದೆ. ಇವರು ಬರೇ ಹಣಕ್ಕಾಗಿ ದುಡಿದವರಲ್ಲ, ಅನೇಕ ಜನರ ಕಲ್ಯಾಣಕ್ಕಾಗಿ, ದೇಶ ಸೇವೆಗಾಗಿ ತಮ್ಮ ಜೀವವನ್ನೇ ಮುಡಿಪಾಗಿಟ್ಟರು. ಸ್ವತಂತ್ರ ಮನೋವ್ಯಕ್ತಿ ಇರುವ ಮಹಿಳೆಗೆ ದುಡಿಮೆ ಅತ್ಯಗತ್ಯ.

ಇಂದು ಪುರುಷರಿಗೆ, ಮಹಿಳೆಯರಿಗೆ ಸಮಾನತೆ ಕೊಡಲು ಏಕೆ ಕಷ್ಟವಾಗಿದೆ ? ಇಷ್ಟು ವರ್ಷಗಳೂ, ಸಮಾಜದಲ್ಲಿ, ಮನೆ ಮಠದಲ್ಲಿ ಇದ್ದ ಹಿರಿಮೆ ಸ್ಥಾನ, ಕೈಬಿಟ್ಟು ಹೋಗುತ್ತಿದೆ ಎನ್ನುವುದು ಅವರಿಗೆ ಅರಿವಾಗುತ್ತಿದೆ. ಮಹಿಳೆ ಎಲ್ಲದರಲ್ಲೂ ಮುನ್ನುಗ್ಗಿ ಬರುತ್ತಿದ್ದಾಳೆ; ಅರ್ಹತೆ ಇದೆಯೆಂದೂ ತೋರಿಸುತ್ತಿದ್ದಾಳೆ; ಇನ್ನು ತಮ್ಮ ಸಂಪಾದನೆಗೆ ಎಲ್ಲಿ ಕಲ್ಲು ಬೀಳುವುದೋ, ಸ್ಪರ್ಧೆಯಲ್ಲಿ ಇನ್ನು ಸೋಲನ್ನು ಅನುಭವಿಸಬೇಕಾಗುವುದೋ ಎಂಬ ಭಯ, ಭೀತಿ, ಆತಂಕ ಸಹಜ. ಇಷ್ಟು ಶತಮಾನಗಳು ಅನುಭವಿಸಿದ ಹಿರಿಮೆಯನ್ನು ಬಿಟ್ಟುಕೊಡಲು ಕಷ್ಟ ನಿಜ. ಆದರೆ ಇಂದು ಮಹಿಳೆ ತನಗೆ ವಿನಾಯಿತಿ ಬೇಡವೆಂದು ಕೇಳುತ್ತಿದ್ದಾಳೆಯೇ ವಿನಃ, ಹೆಂಗಸೆಂದು ತನಗೆ ಯಾವ ಅಡ್ಡಿ, ಆಕ್ಷೇಪಣೆ, ತಿರಸ್ಕಾರಗಳು ಬೇಡವೆಂದು ಬೇಡುತ್ತಿದ್ದಾಳೆಯೇ ವಿನಹ, ತನಗೆ ಬಂಧನ, ಗುಲಾಮಗಿರಿ ಬೇಡವೆನ್ನುತ್ತಿದ್ದಾಳೆಯೇ

ವಿನಹ, ಗಂಡಸರಿಗಿಂತ ಹೆಚ್ಚಿನ ಮನ್ನಣೆ, ಅನಾವಶ್ಯಕವಾಗಿ ಬೇಕೆಂದು ಬೇಡು ತ್ತಿಲ್ಲ. ಇಂದು ನಮಗೆ ಸಮಾನತೆ ಬೇಕು. ಮಹಿಳೆಯರ ಉದ್ಧಾರಕ್ಕಾಗಿ ವಿಮೋಚನೆಗಾಗಿ ಅನೇಕ ಪ್ರತಿಭಾವಂತ ಪುರುಷರು ಹೋರಾಡಿದ್ದಾರೆ. ಸ್ವಾಮಿ ವಿವೇಕಾನಂದರ ಧೀರವಾಣಿ, ಗಾಂಧೀಜೀಯವರ ಪ್ರೇರಣೆ ಇಂದೂ ನಮ್ಮ ಮಹಿಳೆ ಯರಿಗೆ ಜಾಗೃತಿಯನ್ನುಂಟುಮಾಡುತ್ತಿವೆ.

'ಮಹಿಳೆಗೆ ವಿನಾಯಿತಿ ಬೇಡ, ಅಂದರೇನು ? ಸ್ತ್ರೀ ಎಂದೂ ಪುರುಷನಿಗೆ ಎರಡನೆಯವಳೇ ಅಲ್ಲವೆ ?' ಎಂದು ಕೇಳುವ ಹೆಂಗಸರು ಇನ್ನೂ ನಮ್ಮಲ್ಲಿ ತುಂಬಿ ತುಳುಕುತ್ತಿದ್ದಾರೆ. "ತಮ್ಮ ಸ್ಥಾನ ಮನೆಯಲ್ಲಿ ಮಾತ್ರ. ಹೊರಗೆ ಹೋಗಲು ಹಕ್ಕೂ ಇಲ್ಲ, ಧೈರ್ಯವೂ ಇಲ್ಲ; ತಮ್ಮ ಧರ್ಮ, ಕರ್ತವ್ಯ, ತಮ್ಮ ಕುಟುಂಬಕ್ಕೆ ಮಾತ್ರ ಮೀಸಲು; ಸಮಾಜಕ್ಕಾಗಲೀ, ದೇಶಕ್ಕಾಗಲೀ ಅಲ್ಲ; ಪತಿಯ ಅಹಂಭಾವ ಹಾಗೂ ಸ್ವಾಭಿಮಾನವನ್ನು ಸಂತೃಪ್ತಿಪಡಿಸುವುದೇ ತಮ್ಮ ಧ್ಯೇಯ" ಎಂದು ದೃಢವಾಗಿ ನಂಬಿರುವ ಹೆಂಗಸರೂ ತುಂಬ ಮಂದಿ ಇದ್ದಾರೆ. ಪುಟ್ಟಭಾವಿಯಲ್ಲಿರುವ ಕಪ್ಪೆಗೆ ಭಾವಿಯೇ ಪ್ರಪಂಚವಾದಂತೆ, ಈ ಸ್ತ್ರೀಯರಿಗೆ ತಮ್ಮ ಕುಟುಂಬವೇ ಸರ್ವ ಜಗತ್ತು ಎಂದು ನಂಬಿಕೆ ಇದೆ. ಇದು ಅವರ ತಪ್ಪಲ್ಲ. ಅವರು ಚಿಕ್ಕ ಹುಡುಗಿ ಯರಾಗಿದ್ದಾಗ ಅವರು ಕಲಿತದ್ದು ಅಷ್ಟೆ! "ಹೆಣ್ಣು ಹುಡುಗಿ ನೀನು, ಹೀಗೆ ಮಾಡ ಬಾರದು, ಹಾಗೆ ಮಾಡಬಾರದು, ಹೆಂಗಸಿಗೆ ಇದು ತರವಲ್ಲ. ಹೊಸಲು ದಾಟಿ ಹೋಗುವುದೆಂದರೇನು ? ಪರಪುರುಷರೊಡನೆ ವಾದಿಸುವುದೆಂದರೇನು ? ನಿನ್ನ ಧರ್ಮ, ತೃಪ್ತಿ ಎಲ್ಲ ಮನೆಯಲ್ಲಿಯೇ" ಎಂದು ಹಗಲಿರುಳೂ ಬೋಧಿಸಿ, ಅವರ ಮಾತಾಪಿತೃಗಳು ಅವರನ್ನು ಅದುಮಿ ಹಿಡಿದಿದ್ದರು. ಗಂಡುಮಗುವಾದರೆ ಎಲ್ಲಿಲ್ಲದ ನಲಿವು! ಹೆಣ್ಣಾದರೆ ಸ್ವಲ್ಪ ಬೇಸರವೇ ! ಈ ಪೂರ್ವ ಕಲ್ಪಿತ ಭಾವನೆಗಳ ಜೊತೆಗೆ, ತಾಯ್ತನ, ಮಕ್ಕಳ ಪೋಷಣೆ ಹಾಗೂ ಜವಾಬ್ದಾರಿ, ಸಹಜವಾಗಿಯೇ ಪ್ರಕೃತಿ ಹೆಂಗಸಿಗೆ ಕೊಟ್ಟಿರುವ ಉಡುಗೊರೆ! ಇದರಿಂದ ಆಕೆ ಉದ್ಯೋಗವಲ್ಲಿದ್ದರೆ ಮಧ್ಯೆ ಮಧ್ಯೆ ತಡೆ! ಮನೆಯಲ್ಲಿ ಏನೇ ಸಂಕಟ, ದುಃಸ್ಥಿತಿ ಒದಗಿದರೂ ಹೆಂಗಸು ಬೇರೆಲ್ಲ ಕಾರ್ಯಗಳನ್ನು ಬಿಟ್ಟು ಓಡಿಬರಬೇಕು. ಈ ರೀತಿ ಪ್ರಕೃತಿದತ್ತವಾದ ಕೆಲವು ನಿಬಂಧನೆಗಳಿರುವುದರಿಂದ, ಹೆಂಗಸು ಗಂಡಸಿನೊಡನೆ ಸ್ಪರ್ಧಿಸಲು ಸಾಧ್ಯವೇ ಇಲ್ಲ ಎಂದು ಇವರ ವಾದ. ಅಂತಹ ಮಹಿಳೆ ಉತ್ತಮ ಸತಿ, ಆದರ್ಶ ಮಾತೆ ಯಾಗಲು ಸಾಧ್ಯವೇ ಇಲ್ಲವೆಂದು ಇವರ ತರ್ಕ. ಇದಕ್ಕೆ ಒಂದೇ ಉತ್ತರ. ಪುರುಷನು ತಂದೆಯೂ ಹೌದು, ಪತಿಯೂ ಹೌದು, ಅಲ್ಲವೇ ? ವೃತ್ತಿಯನ್ನು ಹಿಡಿದ ಮಾತ್ರಕ್ಕೆ ಆತನು ಆದರ್ಶ ಪಿತ ಹಾಗೂ ಪತಿ ಆಗಲಾರನೆಂದು ಹೇಳಿದರೆ, ತಪ್ಪಾಗುವುದಿಲ್ಲವೆ ?

ಸ್ಪರ್ಧೆ ಖಂಡಿತ ಸಾಧ್ಯ. ಆದರೆ ಈ ಸ್ಪರ್ಧೆ ಪರಿಣಾಮಕಾರಿಯಾಗಿಯೂ, ಫಲಕಾರಿಯಾಗಿಯೂ, ಹಿತಕರವಾಗಿಯೂ ಇರಬೇಕು. 'ಮಹಿಳೆಗೆ ವಿನಾಯಿತಿ ಬೇಡ' ಎಂದು ಹೇಳಿದ ಮಾತ್ರಕ್ಕೆ ಗಂಡ, ಮಕ್ಕಳು, ಮನೆ, ಪೂಜೆ, ಪುನಸ್ಕಾರ, ಅತಿಥಿಧರ್ಮ ಮುಂತಾದುವುಗಳನ್ನು ಬಿಡಬೇಕೆಂದು ಅರ್ಥ ಖಂಡಿತ ಅಲ್ಲ. ಈ ಸ್ಪರ್ಧೆಯಿಂದ ಯಾವ ದ್ವೇಷ, ಮತ್ಸರಕ್ಕೂ ಎಡೆಕೊಡಬಾರದು. ಸಮಾನತೆ ಎಂದರೆ, ಮತ್ತೂ ಉತ್ತಮ ಸಂಗಾತಿಯಾಗಿ ಕುಟುಂಬ ಜೀವನ ಸಾರ್ಥಕವಾಗುವಂತೆ ಮಾಡಬೇಕು. ಆಗ ಮಾತ್ರ ಸಮಾಜದಲ್ಲಿ, ದೇಶದಲ್ಲಿ, ಶಾಂತಿ ನೆಲಸಲು ಸಾಧ್ಯ.

5,00,000 ವರ್ಷಗಳ ಹಿಂದಿನ ಚರಿತ್ರೆಯನ್ನು ಓದಿದರೆ ವೇದಗಳ ಕಾಲದಲ್ಲಿ, ಸಮಾಜ, ಸ್ತ್ರೀಗೆ ಎಷ್ಟು ಉನ್ನತ ಸ್ಥಾನ, ಸಮಾನ ಸ್ಥಾನ, ಕೊಟ್ಟಿತ್ತು ಎಂದು ಅರ್ಥವಾಗುತ್ತದೆ. ಮಹಿಳೆಯರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಉತ್ತೇಜನ, ಉತ್ಸಾಹ ವಿತ್ತು. ಅನೇಕ ಮಹಿಳಾ ಬ್ರಹ್ಮವಾದಿನಿಗಳಿದ್ದರು. ವಿದ್ಯೆ ಮತ್ತು ವ್ಯಕ್ತಿಗೆ ಸಮಾನ ಅವಕಾಶವಿತ್ತು. ಉಪನಯನ ಹಾಗೂ ಬ್ರಹ್ಮವಿದ್ಯೆಗೆ ಮಹಿಳೆಯರೂ ಅರ್ಹರಾಗಿದ್ದರು. ದೇವರಿಗೆ 'ಅರ್ಧನಾರೀಶ್ವರ' ರೂಪನ್ನು ಕೊಟ್ಟು ಪೂಜಿಸಿದರು. ಇದರಿಂದ ಸ್ತ್ರೀ ಪುರುಷರಿಗೆ ಎಷ್ಟು ಸಮಾನ ಸ್ಥಾನವಿತ್ತು ಎಂದು ತಿಳಿಯುತ್ತದೆ. ಮುಂದಕ್ಕೆ ಉದ್ಯೋಗ, ಉತ್ಪಾದನಾ ಕ್ರಮಗಳೂ, ಸಾಧನೆಗಳೂ ಕಠಿಣವಾದಂತೆ, ಬದಲಾದಂತೆ, ಹೆಂಗಸು ಅಧೀನಕ್ಕೊಳಗಾದಳು, ಬಂಧನಕ್ಕೊಳಗಾದಳು, ಸ್ವಾತಂತ್ರ್ಯ ಕಳೆದುಕೊಂಡಳು ; ಪುರುಷನೇ, ಮನೆ ಹಾಗೂ ಸಮಾಜದ, ಉನ್ನತ ಸ್ಥಾನ ಪಡೆದನು, ಸರ್ವಾಧಿಕಾರಿಯಾದನು. ಈಗ ಮಹಿಳೆ ಮತ್ತೆ ಆ ವೇದಗಳ ಕಾಲದ ಸ್ಥಾನವನ್ನು ಪಡೆಯಲು ಹಲುಬುತ್ತಿದ್ದಾಳೆ. ಈ ಹೊಸಯುಗಕ್ಕೂ ಹೊಂದಿಸಿ ಕೊಂಡು, ಆ ಕಾಲದ ಕೆಲವು ಪದ್ಧತಿಗಳನ್ನೂ ಅನುಸರಿಸಿಕೊಂಡು ಹೋದರೆ ಖಂಡಿತ ಸ್ತ್ರೀ ಪುರುಷರಲ್ಲಿ ಹೆಚ್ಚಿನ ಗೌರವ ಉಳಿಯುತ್ತದೆ.

'ಮಹಿಳೆಗೆ ವಿನಾಯಿತಿ ಬೇಡ' ಅನ್ನುವ ಚಳುವಳಿಗೆ ನಮಗೆ ಪುರುಷರ ಸಹಾಯ ಅತ್ಯಗತ್ಯ. ಪುರುಷರಲ್ಲಿ ನಮ್ಮ ಬೇಡಿಕೆ ಇಷ್ಟೆ. 'ಹೆಂಗಸೂ ಮಾನವಳು, ಆಕೆಗೂ ಪ್ರತಿಭೆ ಇದೆ. ಅದನ್ನು ಹೊರಪಡಿಸಲು, ಪ್ರಕಾಶಕ್ಕೆ ತರಲು, ಆಕೆಗೂ ಆಸೆ ಇದೆ, ಹಕ್ಕಿದೆ. ಎಂಬುದನ್ನು ನೀವು ನಂಬಬೇಕು. ನಿಮಗೆ ಹೇಗೆ ದುಡಿಮೆ ಸಹಜ ಗುಣವೆಂದೆನ್ನಿಸುತ್ತದೆಯೋ, ಮಹಿಳೆಗೂ ಅದು ಸಹಜ ಗುಣವೆಂದು, ನೀವು ನಂಬ ಬೇಕು. ಪ್ರತಿಭೆ ಇರುವುದು ಆತ್ಮದಲ್ಲಿ; ಪ್ರತಿಭೆಗೆ ಲಿಂಗಬೇಧವಿಲ್ಲ. 'ಗಂಡ, ಮನೆ, ಮಕ್ಕಳು ಇದ್ದರೆ ಸಾಕು ಮತ್ತೇನು ಬೇಕು ಹೆಂಗಸಿಗೆ' ಎನ್ನುವ ಭಾವನೆಯನ್ನು ತೊಡೆದುಹಾಕಬೇಕು. ಸ್ತ್ರೀ ನಿಮ್ಮೊಡನೆ ಎಲ್ಲ ಹಂತಗಳಲ್ಲೂ ಸ್ಪರ್ಧಿಸಲು ತಯಾರಾ ಗುತ್ತಿದ್ದಾಳೆ. ಆಕೆಗೆ ಸಮಾನ ಅವಕಾಶ ಕೊಡಿ, ಆಕೆಯ ಕಾರ್ಯ ನೈಪುಣ್ಯತೆಗೆ, ಪ್ರತಿಭೆಗೆ, ನ್ಯಾಯಬದ್ಧವಾಗಿ, ಸಮಂಜಸವಾಗಿ ಮನ್ನಣೆ ಮಾಡಿ; ಆಕೆಯ ಶಕ್ತಿ

ಸಾಮರ್ಥ್ಯಗಳನ್ನು ಬೆಳಿಸಿಕೊಳ್ಳಲು, ವಿಕಾಸಗೊಳಿಸಿಕೊಳ್ಳಲು, ಅವಕಾಶ, ಅನುಕೂಲಗಳನ್ನು ಕೊಡಿ. ನೀವು ನಮಗೆ ಸಹಾಯ ಮಾಡಲಾಗದಿದ್ದರೆ ಚಿಂತೆಯಿಲ್ಲ—ಅಡ್ಡಿ ಬರಬೇಡಿ. ಆಕ್ಷೇಪಿಸಬೇಡಿ, ಪ್ರತಿಭಟಿಸಬೇಡಿ, ಹೆಂಗಸೆಂದು ಅಲ್ಲಗಳೆಯ ಬೇಡಿ. ಯಾವುದೇ ಕೆಲಸವಾಗಲಿ ನಮ್ಮ ಯೋಗ್ಯತೆಗೆ ಬೆಲೆ ದೊರಕಲಿ. ನಮ್ಮ ಮಹಿಳೆಯರಿಗೆ ಒಂದೆರಡು ಕಿವಿ ಮಾತುಗಳು—ನಾವು 'ವಿನಾಯಿತಿ ಬೇಡ, ಸಮಾನತೆ ಬೇಕು' ಎಂದು ಬರೇ ಕೂಗಿದರೆ ಸಾಲದು, ಇದಕ್ಕೆ ನಾವು ಅರ್ಹರು, ಸಿದ್ಧರು ಎಂಬುದನ್ನೂ ತೋರಿಸಬೇಕು.

ಪೂರ್ವ ಕಲ್ಪಿತ ಭಾವನೆಗಳನ್ನು ತೊಡೆದುಹಾಕಿ ಮುನ್ನುಗ್ಗಬೇಕು. ಈ ವೈಜ್ಞಾನಿಕ ಯುಗದಲ್ಲಿ, ಕಂದಾಚಾರದ ಕಟ್ಟುಪಾಡಿಗಳಿಗಾಗಲೀ, ಅಂದಶ್ರದ್ಧೆ, ಮೂಢ ನಂಬಿಕೆಗಳಿಗಾಗಲೀ ಎಡೆಯಿಲ್ಲ. ವರದಕ್ಷಿಣೆ, ವಿಧವಾ ಶೋಷಣೆ, ಮತ್ತು ಹೆಣ್ಣುಮಕ್ಕಳನ್ನು ಕೀಳ್ತರಗತಿಯ ವ್ಯಕ್ತಿಗೆ, ಹಾಗೂ ನೀತಿವಿರುದ್ಧವಾದ, ದುರಾಚಾರದ ವೃತ್ತಿಗೆ, ಒಯ್ಯುವುದನ್ನು ಹೇಳಹೆಸರಿಲ್ಲದಂತೆ ಮಾಡಬೇಕು.

ಸ್ತ್ರೀಯರು ಸಾಧಿಸುವುದು ಇನ್ನೂ ಬಹಳವಾಗಿದೆ. ಈಗತಾನೇ ಮೊದಲಿನ ಮೆಟ್ಟಿಲನ್ನು ಹತ್ತಲು ಆರಂಭಿಸಿದ್ದೇವೆ. ನಿಜ, ಗೋಲ್ಡ ಮಿಯರ್, ಬಂಡಾರನಾಯಕಿ, ಮತ್ತು ಇಂದಿರಾಗಾಂಧಿ–ಅಂತಹವರು ಇಂದು ಮೇಲಿನ ಅಂತಸ್ತನ್ನು ಮುಟ್ಟಿದ್ದಾರೆ. ಆದರೆ ಭಾರತದ ಬಹು ಮಂದಿ ಮಹಿಳೆಯರು ಇನ್ನೂ ತುಂಬ ಹಿಂದುಳಿದಿದ್ದಾರೆ. ಇವರೆಲ್ಲ ಮುಂದುಬರಲು ಪ್ರತಿಯೊಬ್ಬ ವ್ಯಕ್ತಿಯೂ ಶ್ರಮ ಪಡಬೇಕು.

ಪುರುಷರೊಡನೆ ನಾವು ಒಂದೇ ನೆಲದ ಮೇಲೆ, ಒಂದೇ ವೇಳೆಯಲ್ಲಿ, ಸಮ ಸಮ. ಸ್ಪರ್ಧಿಸಬೇಕಾದರೆ, ವಿನಾಯಿತಿ ಬೇಡವೆಂದು, ಎದೆ ತಟ್ಟಿ ಘೋಷಿಸಬೇಕಾದರೆ, ನಾವು ಕೆಲವು ಕ್ಷೇತ್ರಗಳಲ್ಲಿ ಇನ್ನೂ ತುಂಬ ಸುಧಾರಣೆ ಹೊಂದಬೇಕು. ಮುಖ್ಯವಾಗಿ ಗಮನಿಸಬೇಕಾದುದು, ಸ್ತ್ರೀ ವಿದ್ಯಾಭ್ಯಾಸ ಮತ್ತು ತರಬೇತಿ ಹಾಗೂ ವೃತ್ತಿ ಶಿಕ್ಷಣ.

ಭಾರತದಲ್ಲಿ ಸ್ತ್ರೀ ವಿದ್ಯಾಭ್ಯಾಸ, ಒಂದು ಬೃಹತ್ ಸಮಸ್ಯೆಯಾಗಿದೆ. ಕಾಲೇಜು ಮಟ್ಟಕ್ಕೆ ಹೋಗುವ ಹೆಣ್ಣುಮಕ್ಕಳು ತುಂಬ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಪ್ರೈಮರಿ ಶಾಲೆಯಲ್ಲಿ, ಸ್ವಲ್ಪ ಹೆಚ್ಚಿನ ಸಂಖ್ಯೆಯಿರಬಹುದು, ಅಷ್ಟೆ. ಆದರೂ ಗಂಡುಮಕ್ಕಳಿಗೆ ಹೋಲಿಸಿದರೆ, ನೂರು ವಿದ್ಯಾರ್ಥಿಗಳು ಗಂಡುಮಕ್ಕಳಾದರೆ, ನಮ್ಮವರು 66.4% ಮಾತ್ರ! ಮುಂದಿನ ಶಿಕ್ಷಣಕ್ಕೆ ಹೋದಂತೆಲ್ಲ, ಈ ಸಂಖ್ಯೆ ಮತ್ತೂ ಕಡಿಮೆಯಾಗಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಮಾಧ್ಯಮಿಕ ಶಾಲೆಗೆ ಬರುವಷ್ಟರಲ್ಲಿ, ವಿದ್ಯಾರ್ಥಿನಿಯರ ಸಂಖ್ಯೆ 43%ಗೆ ಇಳಿದಿದೆ. ಮುಂದೆ ಕಾಲೇಜಿಗೆ ಬರುವಷ್ಟರಲ್ಲಿ ಈ ಸಂಖ್ಯೆ 31%ಗೂ ಕೆಳಗಿಳಿದಿದೆ. ಎಲ್ಲ ಮಹಿಳೆಯರೂ ವಿದ್ಯಾವಂತ

ರಾಗಲು ಶ್ರಮಿಸಬೇಕು. ಸ್ತ್ರೀ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಸೌಲಭ್ಯಗಳನ್ನು ಪಡೆಯ ಬೇಕು. ನಮ್ಮ ಹೆಣ್ಣುಮಕ್ಕಳಿಗೆ ನಾವು ಕೊಡುವ ಉತ್ತಮ ಉಡುಗೊರೆ ವಿದ್ಯೆ! ಒಡವೆ ವಸ್ತು, ಆಸ್ತಿಗಳೆಲ್ಲ ಅಶಾಶ್ವತ. ಪುರುಷರ ಸಮ ಸಮ ನಾವೂ ವಿದ್ಯಾವಂತ ರಾದರೆ ತಾನೆ, 'ನಮಗೆ ವಿನಾಯಿತಿ ಬೇಡ' ಎನ್ನುವುದಕ್ಕೆ ಧೈರ್ಯ ಬರುತ್ತದೆ! "ಹೆಣ್ಣು ಬರೇ ಅಲಂಕಾರ ವಸ್ತುವಲ್ಲ, ಆಟದ ಸಾಮಾನಲ್ಲ, ಮನೆಯನ್ನು ಶೋಭಿ ಸುವ ಆಭರಣವಲ್ಲ, ದೇಹಸುಖಕ್ಕೆ ಬೇಕಾದ ಸ್ತ್ರೀ ಆಕಾರದ ಮಣ್ಣಲ್ಲ; ಆಕೆ ವಿದ್ಯಾ ವಂತೆ, ಆತ್ಮಶಕ್ತಿ ಇರುವ ಮಾನವಳು" ಎಂದು ತೋರಿಸಬೇಕು.

ಬರೇ ವಿದ್ಯಾಭ್ಯಾಸವೊಂದಿದ್ದರೆ ಸಾಲದು; ಮುಂದೆ, ಬೇಕಾದ ಉದ್ಯೋಗ ವನ್ನು ಕೈಹಿಡಿಯಲು, ತಕ್ಕ ತರಬೇತಿ ಪಡೆಯಬೇಕು. ಆಗಲೇ ಪುರುಷನೊಡನೆ ಯಾವ ಭೀತಿಯೂ ಇಲ್ಲದೆ ಸ್ಪರ್ಧಿಸಲು ಸಾಧ್ಯ.

ವಿದ್ಯಾಭ್ಯಾಸ, ವೃತ್ತಿ ಶಿಕ್ಷಣ, ಎರಡೂ ಇದ್ದು ಆರೋಗ್ಯವಿಲ್ಲದಿದ್ದರೆ ಏನು ಪ್ರಯೋಜನ? ಹೆಣ್ಣುಮಕ್ಕಳು ತಮ್ಮ ಆರೋಗ್ಯದ ಕಡೆ ಹೆಚ್ಚು ಗಮನಕೊಡ ಬೇಕು; ದೃಢಕಾಯರಾಗಿರಬೇಕು, ಅಶಕ್ತರೆಂದು (weaker sex) ಕರೆಯಲು ಯಾವ ಅವಕಾಶವನ್ನೂ ಕೊಡಬಾರದು. ಕುಟುಂಬ ಯೋಜನಾ ಕ್ರಮಗಳು, ಪ್ರತಿ ಮಹಿಳೆಗೂ ತಿಳಿದಿರಬೇಕು. ಪುನಃ ಪುನಃ ಮಕ್ಕಳನ್ನು ಹೆರುವುದರಿಂದ, ದೇಹಾರೋಗ್ಯ ಕೆಡುತ್ತದೆ. ನಮಗೆ ಎಷ್ಟು ಮಕ್ಕಳು ಬೇಕು ಎಂಬುದನ್ನು ನಾವೇ ನಿರ್ಧರಿಸಬೇಕು. ಕುಟುಂಬ ಪುಟ್ಟದಾದರೆ ನಮಗೆ ಹೆಚ್ಚಿನ ಕಾಲಾವಕಾಶ ದೊರಕು ತ್ತದೆ. ನಮ್ಮ ಆರೋಗ್ಯ ಚೆನ್ನಾಗಿರುತ್ತದೆ. ಬೇರೆ ವಿಷಯಗಳತ್ತ, ಉದ್ಯೋಗ ವೃತ್ತಿಗಳತ್ತ, ಗಮನಹರಿಸಲು ಸಾಧ್ಯವಾಗುತ್ತದೆ. ಮೈಮನಸ್ಸು ಎರಡೂ ಬಲಿಷ್ಟವಾಗಿದ್ದು, ಆರ್ಥಿಕ ಸ್ವಾತಂತ್ರ್ಯವನ್ನೂ ಪಡೆದಲ್ಲಿ, ಮಹಿಳೆ ಪುರುಷನಿಗೆ ಎಲ್ಲದರಲ್ಲೂ ಸರಿಸಮಳಾಗುವುದರಲ್ಲಿ ಸಂದೇಹವಿಲ್ಲ.

ಕೊನೆಯದಾಗಿ, ನಾವು ಯಾವ ವಿಧವಾದ ಅಭಯ ಹಸ್ತವನ್ನಾಗಲೀ, ದಯಾ ದೃಷ್ಟಿಯನ್ನಾಗಲೀ ಪುರುಷರಿಂದ ಬಯಸುವುದು ಬೇಡ. ನಮಗೆ ಸರಿಸಮಾನತೆ ಬೇಕು. ವಿನಾಯಿತಿ ಬೇಡೆಂದು ಘೋಷಿಸುತ್ತಿರುವಾಗ, ದಯೆ ದಾಕ್ಷಿಣ್ಯಕ್ಕೆ ಎಡೆಯೇ ಇಲ್ಲ.

ಯಾವ ವೇಳೆಯಲ್ಲಾಗಲೀ, ಯಾವ ಕ್ಷೇತ್ರದಲ್ಲಿಯೇ ಆಗಲಿ, ಯಾವ ವ್ಯಕ್ತಿ ಯನ್ನೇ ಆಗಲಿ, ಯಾವ ವಿನಾಯಿತಿಯೂ ಇಲ್ಲದೆ, ಇಂದು ಮಹಿಳೆ ಎದುರಿಸಲು ಸಿದ್ಧಳಾಗಿದ್ದಾಳೆ ಎಂದು ಜಗತ್ತಿಗೆ ತೋರಿಸೋಣ, ನಮ್ಮ ದೇಶದ ಉನ್ನತಿಗೆ, ಪುರುಷರೊಡನೆ ಭುಜಕ್ಕೆ ಭುಜ ಕೊಟ್ಟು ನಿಂತು ಶ್ರಮಿಸೋಣ.

# ಮಹಿಳೆಯಲ್ಲಿ ವೈಚಾರಿಕತೆ

**ವಿಜಯಾ**

ವೈಚಾರಿಕತೆ ನಮ್ಮಲ್ಲಿದೆಯೇ ಎಂಬ ಬಗ್ಗೆ ಅನುಮಾನಗಳಿರುವಾಗ ಆ ಹಣೆಪಟ್ಟಿ ಹಚ್ಚಿಕೊಂಡಿರುವ ಎಲ್ಲ ಚಟುವಟಿಕೆಗಳೂ ಹುಸಿ ಎನಿಸುವುದರಿಂದ ವೈಚಾರಿಕತೆಯ ಬಗ್ಗೆಯೇ ಮೂಲಭೂತವಾಗಿ ಆಲೋಚಿಸಬೇಕಾಗುತ್ತದೆ. ಇನ್ನು ಮಹಿಳೆಯರ ವೈಚಾರಿಕ ಚಟುವಟಿಕೆಯ ಮಾತಂತೂ ಕೇವಲ ಶಬ್ದದಲ್ಲಿ ಮಾತ್ರ ಎನ್ನದೇ ವಿಧಿಯಿಲ್ಲ.

ಯಾವುದೇ ಬರಹಗಾರ ಅಥವಾ ವಿಚಾರವಂತ ವ್ಯಕ್ತಿಗಳು ಪ್ರಥಮ ಪ್ರಯತ್ನ ವೆಂದರೆ ಸದಾ ಅರ್ಥವಂತಿಕೆಯನ್ನು (meaning) ಹುಡುಕುವುದು. ಆದರೆ ಈ ಅರ್ಥವಂತಿಕೆ ಜಗತ್ತಿಗೆ ಬಂದದ್ದೇ ಮಾನವನ ಚಟುವಟಿಕೆಗಳಿಂದ. ಹೀಗೆ ಕಾರ್ಯ-ಕಾರಣಗಳ ಸಂಬಂಧ ಒಂದರೊಡನೊಂದು ಘರ್ಷಿಸುತ್ತದೆ ಅಥವಾ practice ಅನ್ನಿಸಿಕೆಗಳನ್ನು ಮೀರಿ ನಿಲ್ಲುತ್ತದೆ.

ವ್ಯಕ್ತಿಯ ಸ್ವಾತಂತ್ರ್ಯ ಒತ್ತಾಯವಾಗಿ ಹೇರಲ್ಪಟ್ಟ ಒಂದು ವ್ಯವಸ್ಥೆಯನ್ನು ಒಪ್ಪಿಕೊಳ್ಳುವುದರಲ್ಲಿಲ್ಲ. ಅದನ್ನು ಬೇಕಾದ ಹಾಗೆ ಬದಲಾಯಿಸುವಲ್ಲಿ ಹಾಗೂ ಭವಿಷ್ಯದ ಆದರ್ಶಕ್ಕೆ ಹೊಂದಿಸುವಲ್ಲಿ ಇರುತ್ತದೆ. ಈ ಮಾತು ಮಹಿಳೆಗೆ ಹೊರತಲ್ಲ.

ಸೆಮಿನಾರುಗಳಲ್ಲಿ, ಲೇಖನಗಳಲ್ಲಿ, ರೇಡಿಯೋಗಳಲ್ಲಿ ತನಗೆ ಅವಕಾಶವಿದ್ದ ಲ್ಲೆಲ್ಲಾ ಸಮಾನತೆಗೆ, ಅವಕಾಶಕ್ಕೆ ಹೋರಾಡುತ್ತಾ ಕೊಡಿ–ಕೊಡಿ ಎನ್ನುವ ಈ ಹೆಂಗಸು–ಆತನಿಂದ ಪಡೆಯಲು ತನ್ನ ವ್ಯಕ್ತಿತ್ವವನ್ನು ಚಿಕ್ಕದು ಮಾಡಿಕೊಳ್ಳುತ್ತಲೇ ಇರುತ್ತಾಳೆ—ಈಗಿರುವುದೇ ವ್ಯವಸ್ಥೆಯನ್ನು ಒಪ್ಪಿಕೊಳ್ಳುತ್ತಾ. ಯಾವುದೇ ಸಂಸ್ಕೃತಿಯ ನಿಜಸ್ವರೂಪ ಮೂಲದಲ್ಲಿ ಇದ್ದೇ ಇರುತ್ತದೆ. ಹೋರಾಡಬೇಕಾಗಿರುವುದು ಚಾಲ್ತಿಯಲ್ಲಿರುವ ಸುಳ್ಳು ಸಂಸ್ಕೃತಿ ಹಾಗೂ ಪ್ರಭಾವಗಳ ವಿರುದ್ಧವಾಗಿ ಎಂಬುದು ಮುಖ್ಯ.

ಭಾರತೀಯ ಸಂದರ್ಭದಲ್ಲಿ ಜಾತಿಯನ್ನು ಬಿಟ್ಟು ಕೇವಲ ವರ್ಗವನ್ನೇ ಕುರಿತು ಮಾತನಾಡುವಂತಿಲ್ಲ. ಜಾತೀಯತೆ ಇಲ್ಲಿ ಅಂಥ ವಿಶಿಷ್ಟಸ್ವರೂಪವನ್ನು ಪಡೆದು ಕೊಂಡಿದೆ. ವರ್ಗ–ಜಾತಿ ಏನೇ ಇರಲಿ, ಈ ಎಲ್ಲ ಸ್ತರದಲ್ಲೂ ಮಹಿಳೆ ಶೋಷಿತ ಳಾಗಿದ್ದಾಳೆ. ಗ್ರಾಮೀಣ ಮಹಿಳೆಯಿಂದ ಹಿಡಿದು ಪಟ್ಟಣದ ಸೊಬಗಿಯವರೆಗೆ

ಎಲ್ಲರೂ ಒಂದಲ್ಲಿ ಒಂದು ಸ್ತರದಲ್ಲಿ ಪುರುಷ ಸಮಾಜದಿಂದ ಶೋಷಿತ ರೆ ಆಗಿದ್ದಾರೆ. ಬಂಡವಾಳಶಾಹಿಯು ಏಕಸ್ವಾಮ್ಯದ ಹಿಡಿತ ಎಲ್ಲಿಯವರೆಗೆ ಚಾಲ್ತಿಯಲ್ಲಿರುತ್ತದೋ ಅಲ್ಲಿಯವರೆಗೆ ಮುಂದುವರಿದ–ಹಿಂದುವರಿದ ದೇಶಗಳ ಭೇದವೇ ಇಲ್ಲದೆ, ಯಾವ ಮಹಿಳೆಯೂ ಸಮಾನಾಧಿಕಾರ ಪಡೆದುಕೊಳ್ಳಲಾರಳು.

ಸಮಾನಾಧಿಕಾರ, ಸ್ವಾತಂತ್ರ್ಯ ಕುರಿತು ಉದ್ದುದ್ದ ಮಾತಾಡುತ್ತ ತನ್ನ ಶಬ್ದ ಭಂಡಾರವನ್ನು ಅದ್ಭುತವಾಗಿ ವೆಚ್ಚಿಸುವ ಬಂಡವಾಳಶಾಹಿ ಪ್ರಭುತ್ವಗಳ ಈ. ನಾಟಕದ ಸುಳಿಯಲ್ಲಿ ಭ್ರಮಿತಳಾದ ಹೆಣ್ಣು ಕ್ಷಣಕ್ಷಣಕ್ಕೂ ಗುಲಾಮಗಿರಿಯ ಹಿಂಸೆಯಲ್ಲಿ 'ಸ್ವ'ತ್ವವನ್ನು ಕಳೆದುಕೊಳ್ಳುತ್ತಿದ್ದಾಳೆ.

ಕಾನೂನಿನಲ್ಲಿ ಕಂಡುಕೊಂಡ ಯಾವುದೇ ಸಿದ್ಧಾಂತ, ಘೋಷಣೆಗಳೂ ಆಚಾರದಲ್ಲಿಲ್ಲದ್ದು ಸುಸ್ಪಷ್ಟ. ಶೋಷಕರ ಉಚ್ಛ್ರಾಯಕ್ಕೆ ಅಂತ್ಯವಿಲ್ಲದವರೆಗೆ ಶೋಷಿತರ ಉಳಿವಿಲ್ಲ. ಇಲ್ಲಿ ಸಮಾನತೆಯು ಶಬ್ದವೇ ಕೇವಲ ವಿಡಂಬನೆಯಾಗುತ್ತದೆ. ಪುರುಷ ಸಮಾಜ ತನ್ನ ಹಕ್ಕುಗಳಲ್ಲಿ ಸ್ತ್ರೀಯ ಮೇಲಣ ಅಧಿಕಾರವನ್ನು ಒಳಗೊಂಡೇ ಇದೆ 'ಹೆಣ್ಣು' ಇಲ್ಲಿ ಕೇವಲ ಒಂದು ವಸ್ತುವಾಗಿ ಪರಿಗಣಿಸಲ್ಪಡುತ್ತಾಳೆ. ಅಂದರೆ ಆತನ ಆಸ್ತಿಯಲ್ಲಿ ಇದು ಒಂದು. ನೆಲ, ದನ, ಕರು, ನಾಯಿ ಇತ್ಯಾದಿಗಳಿದ್ದ ಹಾಗೆ. ಇಲ್ಲಿ ಅವಳ ಸ್ವಾತಂತ್ರ್ಯದ ಬಗ್ಗೆ ಮಾತಿಗೇನು ಅರ್ಥ ಹುಡುಕುತ್ತೀರಿ ?

ಮನೆಗೆಲಸದಿಂದ ಹಿಡಿದು ಕಛೇರಿಯ ಕೆಲಸದವರೆಗೆ ಆಕೆ ಕೇವಲ ಪುರುಷ ನಿರ್ಮಿತ ಸಂಹಿತೆಗಳಿಗೆ ಬದ್ಧಳಾಗಿ, ಕೇವಲ ಗುಲಾಮಳಾಗಿ ಮಾತ್ರ ಬದುಕುತ್ತಿರುತ್ತಾಳೆ. ಖುಷಿಗಾಗಿ ಸರಪಣಿ ಕಳಚಿದ ನಾಯಿಯನ್ನು ಮೈದಾನದಲ್ಲಿ ಬಿಟ್ಟು ಓಡಾಡಿಸಿದ ಹಾಗೆ. ಅದರ ಕೊರಳಲ್ಲಿ ಯಜಮಾನ ಕಟ್ಟಿದ ಪಟ್ಟಿ ಎಂದೂ ಬಿಚ್ಚುವ ಹಾಗಿಲ್ಲ. ಇಂದಿನ ರಾಜಕೀಯ ಹಾಗೂ ಕಛೇರಿ ಇತ್ಯಾದಿಗಳಲ್ಲಿ ಮಹಿಳೆಗಿರುವ ಅವಕಾಶ ಇದಕ್ಕಿಂತಾ ಖಿನ್ನವಾಗಿಲ್ಲ.

"ನಮ್ಮಲ್ಲಿ ವಿಚಾರ ಇಲ್ಲವೆ? ನಮಗೆ ಯೋಗ್ಯತೆ ಇಲ್ಲದೇ ? ನಾವೂ ನಿಮ್ಮ ಹಾಗೆ ಇರಬಲ್ಲೆವು" ಎಂದೆಲ್ಲ ಕಿರುಚಾಡಿ, ಗಂಡಿನ ಉಡುಗೆ ತೊಟ್ಟು, ಆತನನ್ನೇ ಅನುಕರಿಸ ಹೋಗುವ ಹೆಣ್ಣುಗಳ ಪ್ರವೃತ್ತಿ ಕೇವಲ ಹಾಸ್ಯಾಸ್ಪದವೇ ವಿನಃ ವೈಚಾರಿಕವಾಗದು. ವೈದಿಕ ಸಂಪ್ರದಾಯಗಳ, ಧರ್ಮಶಾಸ್ತ್ರಗಳ ಚೌಕಟ್ಟಿನಲ್ಲಿ ಆಕೆಗೆ ಪುರುಷನ ಕಟ್ಟುಪಾಡುಗಳಿವೆ. ಇವಕ್ಕೆಲ್ಲ ಆಕೆ ಹೇಗೆ ಒಗ್ಗಿಕೊಂಡಿದ್ದಾಳೆಂದರೆ ಏನೇ ಮಾತು, ಕೃತಿ ಇರುವಾಗಲೂ ಈ ಎಲ್ಲವನ್ನೂ ಒಪ್ಪಿಕೊಂಡು ಪುರುಷ ಸೃಷ್ಟಿತ 'ಸಾಧ್ವಿ'ತನಕ್ಕೆ ವಿರೋಧವಾಗದ ಹಾಗೆ, ಎಚ್ಚರಿಕೆಯಿಂದ ವರ್ತಿಸಿ ಶಹಬಾಸ್‌ಗಿರಿ ಪಡೆಯಲೆತ್ನಿಸುತ್ತಾಳೆ. ಅವೆಲ್ಲ ಮೀರಿದರೆ ತಾನು ಬದುಕುತ್ತಿರುವ ಸಮಾಜದಲ್ಲಿ, ಕಟ್ಟುಪಾಡೆಲ್ಲ ಒಪ್ಪಿಬಾಳುವ ಮಹಾಸಾಧ್ವಿಯರ ನೆರೆಯಲ್ಲಿ ತನ್ನ ಸ್ಥಿತಿ ಏನಾಗಬಹು

ದೆಂಬ ಬಗ್ಗೆ ಆಕೆಯ ಅಂತರಂಗದ ವಿವೇಚನೆ ಅವಳನ್ನು ಸದಾ ಅಪರೋಕ್ಷವಾಗಿಯೇ ಜಾಗೃತಿಗೊಳಿಸುತ್ತಿರುತ್ತದೆ. ಇನ್ನೂ ಅವರು ವಿಚಾರಪರರಾಗಿ ಕಟ್ಟುಕಿತ್ತೆದ್ದು ಬರುವುದೆಲ್ಲಿಂದ ?

ಹೆಣ್ಣಿನ ವಿಚಾರದಲ್ಲಿ ಕೇವಲ ಒಬ್ಬ ಗ್ರಾಹಕನಿಗಿರುವ ಮನೋಭಾವವನ್ನು ಮಾತ್ರ ಹೊಂದಿರುವ ಪುರುಷ ಆಕೆಯ ಲೈಂಗಿಕ ಸ್ವಾತಂತ್ರ್ಯವನ್ನು ಕಿತ್ತುಕೊಂಡು ತನ್ನ ಸ್ವಾರ್ಥದ ನಿಬಂಧನೆಗಳನ್ನು ಧರ್ಮದ, ಪಾಪದ ಹೆಸರಿನಲ್ಲಿ ಭಯ ಹುಟ್ಟಿಸು ವಂತೆ ಅವಳ ಮನಸ್ಸಿನಾಳಕ್ಕೆ ಬೇರೂರಿಸಿಬಿಡುತ್ತಾನೆ.

ಲೈಂಗಿಕ ಸ್ವಾತಂತ್ರ್ಯದ ಬಗ್ಗೆ ಮಾತನಾಡುವಾಗ ಇಲ್ಲಿ ಬಳಸುವ ಸ್ವಾತಂತ್ರ್ಯ ಶಬ್ದ 'ಸ್ವೈರ'–'ಸ್ವಚ್ಛಂದ' ಶಬ್ದಗಳ ಮತ್ತೊಂದು ರೂಪವಲ್ಲ ಎಂಬುದನ್ನು ಗಮನದಲ್ಲಿಡಬೇಕು. ಲೈಂಗಿಕತೆಯ ವಿಚಾರದಲ್ಲಿರುವ ಕಟ್ಟುಪಾಡುಗಳು ಮಹಿಳೆಯ ವಿಚಾರದಲ್ಲಿರುವಷ್ಟು ಬಿಗಿಯಾಗಿಲ್ಲ ಪುರುಷನ ಬಗ್ಗೆ. ಇಲ್ಲಿ ಪುರುಷನಿಂದಲೇ ಏರ್ಪಡುವ ಅಪರಾಧಕ್ಕೂ ಆಕೆಯೇ ಶಿಕ್ಷಿಸಲ್ಪಡುತ್ತಾಳೆ. ದೈಹಿಕ ಹಾಗೂ ಮಾನಸಿಕವಾಗಿ ಮಾತ್ರವಲ್ಲದೆ ಸಾಮಾಜಿಕ ನಡಾವಳಿಯಲ್ಲೂ. ಯಾವುದಕ್ಕೆ ನಾವು ಅತ್ಯಂತ ಪವಿತ್ರವೆಂಬ ಪಟ್ಟ ಕೊಟ್ಟಿದ್ದೇವೋ ಆ 'ಶೀಲ'ವನ್ನು ಅಸಹ್ಯ ಬರುವಂಥ ಆಚಾರಗಳ ಚೌಕಟ್ಟಿನಲ್ಲಿರಿಸಿರುವುದರಿಂದ ಎಲ್ಲೆ ಮೀರುವ, ಇಣುಕಿ ನೋಡುವ ಹವ್ಯಾಸ ಹೆಚ್ಚುತ್ತದೆ. ಬದುಕಿನ ಎಲ್ಲ ಅಗತ್ಯಗಳಂತೆ ಇದೂ ಒಂದು ಅಗತ್ಯ ವೆಂದಷ್ಟೇ ಪರಿಭಾವಿಸಿದಾಗ ಇಂಥ ವಿಚಿತ್ರ ವಾತಾವರಣ ಏರ್ಪಡಲಾರದೇನೊ !

ಸ್ತ್ರೀಯೊಬ್ಬಳು ಲೈಂಗಿಕತೆಯನ್ನು ಕುರಿತು ತನ್ನ ಅಭಿಪ್ರಾಯವನ್ನು ಸ್ಪಷ್ಟ ವಾಗಿ ಹೇಳಿದರೆ ವೈಯಕ್ತಿಕವಾಗಿ ಆಪಾದನೆಗಳನ್ನು ಹೊರಿಸಿ–ಕ್ಷುಲ್ಲಕವಾಗಿ ಮಾತ ನ್ನಾಡಿ ಬೆರಳು ತೋರುವ ವಿಚಿತ್ರ ವಾತಾವರಣವಿದೆ ನಮ್ಮಲ್ಲಿ. ಇಂಥ ಸಂದರ್ಭದಲ್ಲಿ ಹೆಣ್ಣಿನ ಅಂತರಂಗವನ್ನು ಓದಬಲ್ಲ ಯಾವ ಗಂಡೂ ಇಲ್ಲವೆನ್ನುವುದು ಅನಿವಾರ್ಯ- ಗಂಡನಿಂದ ಹಿಡಿದು ಮಕ್ಕಳು–ಹೆತ್ತವರವರೆಗೂ.

ಹೆಣ್ಣೊಬ್ಬಳ ಅನಿಸಿಕೆ ನೇರವಾಗುವ ಹಾಗಿಲ್ಲ. ಅದು ಸ್ಪಷ್ಟವಾಗಕೂಡದು. ಅಂಥ ವಿಚಾರ ಕೇವಲ ಅನಿಸಿಕೆಯಾಗಿ ಸಹ ಅವಳಲ್ಲಿ ಮೂಡುವುದು ಧರ್ಮದ್ರೋಹ ಎಂಬ ಪಾಪ ಪ್ರಜ್ಞೆಗೆ ಅವಳನ್ನು ಸಂಪ್ರದಾಯಿಗಳು, ಆಚಾರ ಸಂಹಿತೆಗಳು ತಳ್ಳಿಬಿಟ್ಟಿವೆ. ಈ ಕಾರಣಕ್ಕಾಗೇ ಯಾವ ಹೆಣ್ಣಿಗೂ ಅಂತರಂಗದ ಸ್ನೇಹಿತರು ಇರುವ ಸಾಧ್ಯತೆಯಿಲ್ಲ. ಆಕೆಯ ಅಂತಸ್ಥ ಭಾವನೆಗಳು ಹುಟ್ಟುತ್ತಲೇ ನರಳಿ ಸಾಯುತ್ತವೆ.

ಬಹುಪಾಲು ಮಹಿಳೆಯರಿಗೆ ಶಿಕ್ಷಣದ ಸೌಲಭ್ಯವಂತೂ ಸೊನ್ನೆ. ಈ ವಿಚಾರ ದಲ್ಲಿ ಕೆಲವರ್ಗದ ಮಹಿಳೆಯರಿಗಾಗಿರುವ ವಂಚನೆಯಂತೂ ಎಣಿಕೆಗೆ ಮೀರಿದ್ದು.

ಮನೆಗೆಲಸದ 'ಚೆನ್ನಿ' ಅಕ್ಷರ ಕಲಿತರೆ ಮುಸುರೆ ತಿಕ್ಕುವ, ಬಟ್ಟೆ ಮಡಿ ಮಾಡುವ ಕೆಲಸ ಯಾರು ಮಾಡಬೇಕು ? ವೇದಿಕೆಯ ಮೇಲೆ ಮೇಜುಕುಟ್ಟಿ-ಸಾಕ್ಷರತೆಯ ಪ್ರಚಾರ ಮಾಡಲು ತೆರಳುವ ಸಮಾಜ ಸುಧಾರಕಿ ಕಷ್ಟಪಟ್ಟು ಹೆತ್ತ ಮಗುವಿನ ಲಾಲನೆ-ಪಾಲನೆ ಮಾಡುವ 'ದಾದಿ' ಅಕ್ಷರ ಕಲಿತರೆ ಮುಂದೇನುಗತಿ ? ಇನ್ನು ಅಷ್ಟೋ-ಇಷ್ಟೋ ಕಲಿತವರಿಗೆ ಏನನ್ನು ಕಲಿಸಲಾಗುತ್ತಿದೆ ? ಸಾಧ್ವೀಮಣಿಯರ ಪತಿಭಕ್ತಿಯನ್ನು-ಅಗ್ನಿ ಪ್ರವೇಶಗಳನ್ನು-ತ್ಯಾಗಶೀಲತೆಯನ್ನು ಹೇಳುವ ಏನೆಂಥ ವಿಚಾರಗಳು, ಪುರಾಣಗಳು, ಪವಾಡಗಳು, ನಮ್ಮಲ್ಲಿವೆ. ಇಲ್ಲಿಯೂ ಅಡಿಗಡಿಗೆ ನೀನು ರಕ್ಷಿಸಲ್ಪಡಬೇಕಾದವಳು, ಗುಲಾಮಗಿರಿಯೊಂದೇ ನಿನ್ನ ಪಾಲಿಗೆ. ನಿನ್ನನ್ನಾಳುವ ಪುರುಷವರ್ಗದ ಸುಖಕ್ಕಾಗಿ ನಿನ್ನ ತ್ಯಾಗಬೇಕು-ಸೇವೆಬೇಕು ಇತ್ಯಾದಿಗಳನ್ನು ಹೇಳಿ ಹೇಳಿ ಅವಳ ನಾಲಿಗೆಯನ್ನು ಆಲೋಚನೆಯ ಶಕ್ತಿಯನ್ನು ಕಳೆದಿದ್ದಾರೆ. ಮಾತು ಕಲಿತ ಹೆಂಗೆಳೆಯರ ಈ ಮುಂಚಿಯೇ ಸತ್ತ ವಿವೇಚನೆಗೆ ನೆರೆಹೊರೆಯ ಜಗಳ–ಅಸೂಯೆ-ಅಡಿಗೆ-ಅಲಂಕಾರದ ವಿನಃ ಬೇರೇನು ಉಳಿದಿದೆ ಮಾತಾಡಲು ? ಇವರ ವೈಚಾರಿಕ ಚಟುವಟಿಕೆ ಮನೆಯಿಂದ ಸಮಾಜಗಳಿಗೆ ಹಾರಿದೆ–ಕೋಸಂಬರಿ, ಹಪ್ಪಳ ತಯಾರಿಕೆ ಸಲುವಾಗಿ.

ಪುರುಷರ ಬಲಾತ್ಕಾರ ಪ್ರವೃತ್ತಿಯನ್ನು ಕುರಿತು ಒಂದು ಮಾತು ಹೇಳಲೇ ಬೇಕು. ವಯಸ್ಸಿಗೂ ಬಂದಿರದ ಎಳೆ ಹುಡಿಗಿಯರೊಂದಿಗೆ ಬಲಾತ್ಕಾರ, ತರುಣಿಯ ಅಪಹರಣ–ಬಲಾತ್ಕಾರ-ಇತ್ಯಾದಿ. ಕೆಲವರು 'ಮಡಿವಂತರು' ಮುಚ್ಚಿಟ್ಟರೆ, ಮತ್ತೆ ಕೆಲವು ಈಚೆ ಬರುತ್ತವೆ ಪತ್ರಿಕೆಯ ಸುದ್ದಿಗಳಾಗಿ. ನಂತರ ಅಪಗಾಧಿಗೆ ಸಿಗುವ ಶಿಕ್ಷೆ, ಅದು ಅತ್ಯಂತ ಕಡಿಮೆಯದು. ಕೆಲವು ಬಾರಿ ಪುರುಷನ ಪರವಾಗಿ ತೀರ್ಪು ಇರುತ್ತದೆ. ಆರೋಪಿ ಶಿಕ್ಷಿಸಲ್ಪಡಲಿ, ಬಿಡಲಿ, ಹೆಣ್ಣು ಮಾತ್ರ ಈ ಸಂದರ್ಭದಲ್ಲಿ ಸಾಮಾಜಿಕವಾಗಿ, ದೈಹಿಕವಾಗಿ, ನೈತಿಕವಾಗಿ ಸಹಾ ಶಿಕ್ಷಿಸಲ್ಪಡುತ್ತಾಳೆ. ಅಪರಾಧ ವಿಲ್ಲದೆಯೂ ಶಿಕ್ಷೆ ! ಅವಿಚಾರಿ ಗಂಡಸಿನದೇ ಮೇಲುಗೈ ಆಗಿರುವ, ಈ ಸಮಾಜದಲ್ಲಿ ಹೆಣ್ಣಿನ ವೈಚಾರಿಕತೆಯ ಬಗ್ಗೆ ಏನು ಹೇಳಬೇಕೆನ್ನುತ್ತೀರಿ ?

'ಅಕ್ರಮವಾಗಿ' ಹುಟ್ಟಿದ ಮಕ್ಕಳ ಸ್ಥಾನಮಾನ, ವೇಶ್ಯೆಯರ ಬದುಕು ಈ ಎಲ್ಲ ವಿಚಾರಗಳತ್ತ ನಿಜವಾದ ಅರ್ಥದಲ್ಲಿ ನಮ್ಮ ಜನ ಗಮನ ಹರಿಸಿದ್ದಾರೆಯೇ, ಸಮಾಜದಲ್ಲಿ ವೈಚಾರಿಕತೆ ಮೂಡಿದೆಯೆ ಎಂದು ಚಿಂತಿಸಿದಾಗ ಹೀಗನ್ನಿಸುತ್ತದೆ :

ಇಂದು ಅತ್ಯಂತ ಆಕರ್ಷಕವೆನಿಸುವಂತೆ ಸಂಭ್ರಮಿಸುತ್ತ ಬೆಳೆದ ಮೇಲ್ರಚನೆಗಳು ರಚನೆಯನ್ನು ಮರೆಯಾಗಿಸಿವೆ. ವೈಚಾರಿಕತೆ 'ರಚನೆ'ಯಲ್ಲಿದೆ. ಆ ರಚನೆಯ ಮೇಲೆ ಕಟ್ಟಿರುವ ಮೇಲುರಚನೆಯ ಗದ್ದಲದಲ್ಲಿ ವಸ್ತುಸ್ಥಿತಿ ಮರೆಯಾಗಿ ಹೋಗಿದೆ. ಮಹಿಳೆಯ ವೈಚಾರಿಕತೆ-ಸ್ಥಾನ-ಮಾನ ಕುರಿತ ವಿಚಾರದಲ್ಲಿ ಆಲೋಚಿಸಲು ಒಂದು ವರ್ಷವನ್ನು ಉದಾರವಾಗಿ ಮಾನ್ಯ ಮಾಡುವ ವ್ಯವಸ್ಥೆಯಲ್ಲೇ ಯಾವುದೇ ಕೊಡುವ ಪುರುಷ, ತೆಗೆದುಕೊಳ್ಳುವ ದೈನ್ಯಾವಸ್ಥೆಯ ಸ್ತ್ರೀ ಮುಖಕ್ಕೆ ರಾಚಿದಂತೆ

ಕಾಣುತ್ತಾರೆ. ಇದು ಕೊಡುವ–ಕೊಳ್ಳುವ ವಿಷಯವೇ ಅಲ್ಲ ಎಂಬುದರ ಪರಿವೆಯೇ ನಮಗಿಲ್ಲವಾಗಿದೆ. ಮೇಲ್ರಚನೆಯೇ ಸೃಷ್ಟಿಸಿರುವ ಅನೇಕ ಭ್ರಾಮಕ ಕಲ್ಪನೆಗಳಲ್ಲಿ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾ ಕೇವಲ Pose ಮಾಡುವ ಮಹಿಳೆಯ ವೈಚಾರಿಕ ನೆಲೆಗಟ್ಟು ಎಲ್ಲಿದೆ ಎಂಬುದನ್ನು ಪುರುಷನೇ ಹುಡುಕಿಕೊಡಬೇಕಾಗಿದೆ.

ಉದ್ಯೋಗದ ಸಲುವಾಗಿ ಸಮಾನತೆ, ವಿದ್ಯೆಗೆ ಸಮಾನತೆ ಹೀಗೆ ನೂರೆಂಟು ಸಮಾನತೆಗಳ ಸಲುವಾಗಿ ಹೋರಾಡ ಹೊರಟ ಸ್ತ್ರೀ ಮತ್ತೆ ತಾನು ಪುರುಷ ಸಮಾಜ ಸೃಷ್ಟಿಸಿರುವ ವ್ಯವಸ್ಥೆಯನ್ನು ಒಪ್ಪಿಕೊಂಡೇ ಅಲ್ಲೊಂದು ಸ್ಥಾನವನ್ನು ಬೇಡಿ ಹೊರಡುತ್ತಿರುವ ವಿರೋಧಾಭಾಸದ ಬಗ್ಗೆ ಆಲೋಚಿಸುವುದೇ ಇಲ್ಲ. ಆಕೆಗೆ ಅವಳದೇ ಆದ ಆಲೋಚನೆಗಳಿರುತ್ತವೆ.

ಆಕೆಯ ಅಂತರಂಗದ ಆಲೋಚನೆಗಳನ್ನು-ಭಾವನೆಗಳನ್ನು ಸಹಾ ಅದುಮಿಟ್ಟಿರುವ ಈ ಸಮಾಜ ಅವಳನ್ನು ಆತ್ಮವಂಚಕಿಯನ್ನಾಗಿಸಿದೆ.

ವಿವಾಹಕ್ಕೆ ಸ್ವತಂತ್ರಳಲ್ಲ-ವಿಚ್ಛೇದನಕ್ಕೆ ಅವಕಾಶವಿಲ್ಲ. ಪಾಪದ ಮಕ್ಕಳಾದರೆ ಸಮಾಜದಲ್ಲಿ ಗೌರವವಾಗಿ ಬಾಳುವಂತಿಲ್ಲ. ಇಂಥ ನೂರಾರು ಅಡಚಣೆಗಳು ಹಿಂಸೆಗಳು ಇರುವ ಭಯಂಕರ ಸಮಾಜಕ್ಕೆ ಹೆದರಿ ಹೆಣ್ಣು ಸೋಲುತ್ತಿದ್ದಾಳೆ.

ಈ ಎಲ್ಲ ಸಮಸ್ಯೆಗಳ ಸುಲಭೀಕರಣ ಕೇವಲ ಕಾನೂನಿನಲ್ಲಿದೆ. ಶ್ರೀಮಂತ ವರ್ಗಕ್ಕೆ ಇವೆಲ್ಲ ಗೌಣ. ಆದರೆ ಉಳಿದವರ ಗತಿ? ಎಲ್ಲಿ ಹೆಣ್ಣಿನ ಅಂತರಂಗ, ತನ್ನದಾಗಿಲ್ಲದ, ತನಗೆ ಬೇಕಾದ ಮತ್ತೇನನ್ನೋ ಬಯಸುತ್ತಿರಬಹುದು. ಆದರೆ ಎಷ್ಟು ಜನ ತಾಯಿಯರ, ತಂಗಿಯರ, ಕಡೆಗೆ ಹೆಂಡತಿಯ ಅಂತರಂಗದ ಆಲೋಚನೆಯನ್ನು-ಭಾವನೆಯನ್ನು ಸಮಿಾಪಿಸಬಲ್ಲರು ?

ವೈದಿಕ ಸಂಪ್ರದಾಯದ ಪೊಳ್ಳು ಸಿದ್ಧಾಂತಗಳನ್ನು ಹೇರುತ್ತಾ, ಧರ್ಮದ ಹೆಸರಿನಲ್ಲಿ ಹೆಣ್ಣಿನ ಶೋಷಣೆ ಮಾಡುತ್ತ, ಸಮಾನತೆ ಸ್ತ್ರೀ ಸ್ವಾತಂತ್ರ್ಯ ಕುರಿತು ಮಾತಾಡುವ ಮಂದಿ ಕುರಿಯ ಚರ್ಮ ಹೊದ್ದ ತೋಳಗಳು. ಶೋಷಣೆಯೊಂದೇ ಇವರ ಗುರಿ. ಮಹಿಳೆಯ ಶೀಲ, ಸೇವೆ (labour), ಎರಡೂ ಇವರ ಶೋಷಣೆಯ ಪ್ರಮುಖ ಸಾಧನೆ.

ಜಾತಿ ಪದ್ಧತಿಯಂಥ ಅಸಂಸ್ಕೃತ ಸಂಪ್ರದಾಯಕ್ಕಿಂತ ಯಾವ ರೀತಿಯಲ್ಲೂ ಭಿನ್ನವಲ್ಲದ ಪರಿಸ್ಥಿತಿಯಲ್ಲಿ ಹೆಣ್ಣನ್ನಿರಿಸಿಸುವ ಈ ಜನ ಲೋಕದ ಕಣ್ಣಿಗೆ ಅವಳನ್ನೂ ದೇವಿ, ಶಕ್ತಿ ಸ್ವರೂಪಿಣಿ ಇತ್ಯಾದಿ ಸುಳ್ಳು ಸ್ಥಾನಗಳಲ್ಲಿ ನಿಲ್ಲಿಸಿ, ಹೊಗಳುತ್ತಾ ದಿಗ್ಬಂಧನ ಮಾಡುತ್ತಾರೆ.

ಗಂಡನಿಗೊಲ್ಲದ ಅಥವಾ ಗಂಡನನ್ನೊಲ್ಲದ ಹೆಣ್ಣು ಸ್ವಾವಲಂಬಿಯಾಗಿಯೂ ಬದುಕಲಾಗದ ಈ ಸಮಾಜದಲ್ಲಿ ತನ್ನ ಮಕ್ಕಳ ಶಾಲೆಯ ಕೆಲಸದ ಪ್ರತಿ ಕ್ಷಣದಲ್ಲೂ

ತಂದೆ ಅಥವಾ ಪೋಷಕನನ್ನು ಮಾತ್ರ ಅಪೇಕ್ಷಿಸುವ ಸಂಹಿತೆಗಳು ಹೆಣ್ಣು, ತಾಯಿ ಸಹಾ ಪೋಷಕಿಯಾಗಬಲ್ಲಳೆಂಬುದನ್ನು ತನ್ನ ಪರಿಸ್ಥಿತಿಯನ್ನು ವಿವರಿಸಿ ಹೇಳುವ ವರೆಗೂ ಒಪ್ಪಿಕೊಳ್ಳುವುದಿಲ್ಲ. ನಂತರವೂ ಪ್ರತಿಕಣ್ಣೂ ಅನುಮಾನದ್ದೇ ಆಗಿರುತ್ತದೆ. ಹೆಣ್ಣು ಮತ್ತೊಬ್ಬನಿಂದ ರಕ್ಷಿಸಲ್ಪಡಬೇಕಾದವಳೆಂಬ ಭ್ರಮೆ ತುಂಬಿದ ಸಮಾಜದಲ್ಲಿ ಕಾನೂನು ಕೇವಲ ದಪ್ಪ ಪುಸ್ತಕದ ಕೆಲವು ಪುಟಗಳನ್ನು ತುಂಬಲು ಮಾತ್ರ. ಕಾನೂನುಗಳನ್ನು ಮಾಡುವಾತನೂ ಪುರುಷನೇ.

ಭಾರತದ ಪ್ರಧಾನಿ ಹೆಣ್ಣೆಂಬ ಕಾರಣದಿಂದಷ್ಟೇ ಮಹಿಳೆ ಸ್ವತಂತ್ರಳು–ಸಮಾನಳು ಎಂಬ ಮಾತು ಪೂರಾ ಅಬದ್ಧವಾಗುತ್ತದೆ. ಗುಡಿಯಲ್ಲಿ ಚಂದದ ವಿಗ್ರಹ ವಿಟ್ಟು ಅಲಂಕರಿಸಿ-ಹೊಗಳಿ ಅರ್ಚಿಸುವ ಮಹಾಭಕ್ತ ಗಣದಂತೆ, ತನ್ನ ನಿರ್ಮಿತಿಯ ಚೌಕದಲ್ಲಿ ಆಗಾಗ ಹೆಣ್ಣನ್ನು ಕೂರಿಸಿ ಚಂದ ನೋಡುವ ವಾತಾವರಣವನ್ನು ನಾವು ಸ್ವತಂತ್ರ, ಸಮಾನ ಎಂಬ ವಿಚಿತ್ರ ಶಬ್ದಗಳಿಂದ ಇನ್ನಷ್ಟು ರಂಗುಗೊಳಿಸಿ ಮಾತಾಡಿದ್ದೆ–ಮಾತಾಡಿದ್ದು.

ಸಾಮಾಜಿಕವಾದ ಭಾಗವಹಿಸುವಿಕೆಯಿಂದ ದೂರ ನಿಂತು ಕೇವಲ ಕೋಲೆ ಬಸವನಂತೆ ತಲೆಯಾಡಿಸುತ್ತಾ, ಮೂಲವನ್ನು ಅಲ್ಲೇ ಮರೆತು ಮೇಲ್ರಚನೆಗಳು ಕಲ್ಪಿಸಿರುವ ಭ್ರಾಮಕ ವಾತಾವರಣವನ್ನೇ ನಂಬಿಕೊಂಡು ಅಲ್ಲೇ ನನಗೊಂದು ಸ್ಥಾನ ಕೊಡಿ ಎಂದು ಬೇಡುವ ಹೆಣ್ಣಿನ ಹೋರಾಟ ಅವಳಿರುವ ವಾತಾವರಣದಷ್ಟೇ ಕೃತಕವಾಗುತ್ತದೆ.

ಈ ಕಾರಣಕ್ಕಾಗಿ ನಮ್ಮಲ್ಲಿ ವೈಚಾರಿಕ ಎಂದು ಹೇಳಿಕೊಳ್ಳುವ ಸೆಮಿನಾರುಗಳು, ಸಭೆಗಳು, ಶಿಕ್ಷಣ ಕ್ರಮಗಳು, ನಾಟಕಗಳು, ರಾಜಕೀಯ ಸಂಹಿತೆಗಳು ಎಲ್ಲವೂ ಒಂದು ಸುಖೀವರ್ಗದ ವೈಭವಕ್ಕೆ ಮೆರವಣಿಗೆಗೆ ಸಿದ್ಧವಾದ ರಂಜನೆಯಾಗಿ ಮಾತ್ರ ಉಳಿದಿದೆ.

ಇದಾವುದೂ ಅರ್ಥಪೂರ್ಣವಲ್ಲದ್ದರಿಂದಲೇ ಅಂತರ ರಾಷ್ಟ್ರೀಯ ಮಹಿಳಾ ವರ್ಷವೂ ಸಹ ಇಂದು ಕೇವಲ ಹಾಸ್ಯಾಸ್ಪದವಾಗಿದೆ ಅನೇಕರಲ್ಲಿ. ಇಂಥ ಹಾಸ್ಯ ಪ್ರಸಂಗವು ನಿತ್ಯದ ಮಾರು ನೋಟ.

ಸಾಗುತ್ತಿರುವ ಹಾದಿಯು ಪೊಳ್ಳುತನದ ಬಗ್ಗೆ ಸ್ಪಷ್ಟ ಅರಿವಿದ್ದರೂ ಕ್ರಿಯಾತ್ಮಕ ವಾಗಿ ತೊಡಗಲು ನೂರೆಂಟು ಸಮಸ್ಯೆಗಳಿರುವ ಹಾದಿಕಾಣದ (?) ಅಥವಾ ಗಂಡು–ಹೆಣ್ಣು ಇಬ್ಬರೂ ಒಟ್ಟಾಗಿ ಆಲೋಚಿಸಿ ನಿರ್ಮಿಸಿದ ಸಮಾಜದಲ್ಲಿ ಮಾತ್ರ ವೈಚಾರಿ ಕತೆಯು ಹೊಳಪು ಕಂಡೀತೆಂಬ ಮಾತನ್ನು ಅನೇಕರು ಗೊತ್ತಿದ್ದೂ ಹೇಳಲಾಗದ ಹಾಗೆ ವರ್ತಿಸುತ್ತಾರೆ. ಇನ್ನೂ ಬದಲಾವಣೆಗೆ ಅವಕಾಶವೇ ಇಲ್ಲದಂಥ ಭ್ರಾಮಕ ವಾತಾವರಣದಲ್ಲಿರುವ ನಾವು ಇದ್ದುದನ್ನು ಬರೆಯಲಾಗದೆ-ಬೇಕಾದ ಆದರೆ ಇಲ್ಲದ

ವಾತಾವರಣವನ್ನು ತರಲಾಗದೆ, ಬರೀ ಮಾತಿನಲ್ಲಿ ಕಾಲ ಹಾಕುತ್ತೇವೆ. ಇನ್ನಾವುದರ ಅರಿವಿಲ್ಲದ ಬಡ ಹೆಂಗಸು ಶ್ರೀಮಂತರ ವೇಶ್ಯೆಯರಾಗಿ, ಕೆಲಸದ ಆಳಾಗಿ, ಅಡಿಗೆ ಮನೆಯ ದಾಸಿಯಾಗಿ, ಇಷ್ಟು ಇದ್ದೋ–ಇಲ್ಲದೆಯೋ ಗಂಡನ ಹಾಸಿಗೆಗೆ ನೇವೇದ್ಯ ವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಕ್ಷಣಕ್ಷಣದಲ್ಲೂ ಪುರುಷ, ಜಾತಿ, ಅಧಿಕಾರ ಶಾಹಿ, ಧರ್ಮದ ಸಾಮಾನುಗಳ ಮೂಲಕ ಶೋಷಿಸಲ್ಪಡುತ್ತಲೇ ಇದ್ದಾಳೆ. ಎಂದ ಮೇಲೆ ವೈಚಾರಿಕತೆ ಎಲ್ಲಿದೆ ?

# ಮಹಿಳೆಯ ಮುನ್ನಡೆ; ಸಂಕೀರ್ಣ ಸವಾಲು

**ಕೆ. ರಾಜೇಶ್ವರಿ**

ಈಗ ಮಹಿಳಾವರ್ಷ. ಮಹಿಳೆ ಪುರುಷನೊಡನೆ ತನ್ನ ಸಮಾನ ಹಕ್ಕು ಬಾಧ್ಯತೆ ಪಡೆಯಲು ವಿಶೇಷವಾಗಿ ಹೋರಾಡುವ ಕಾಲ. ಪ್ರಸ್ತುತದಲ್ಲಿ ಸ್ತ್ರೀಯ ಜಾಗ್ರತಾವಸ್ಥೆ ಈ ಚಳುವಳಿಯ ಮುಖ್ಯ ಲಕ್ಷಣ.

"ಪುರುಷ ಪ್ರಪಂಚದಲ್ಲಿ ಸ್ತ್ರೀಶೋಷಣೆ" ಅನಾದಿಕಾಲದ ಸಮಸ್ಯೆ. ಇದಕ್ಕಾಗಿ ಅನೇಕ ಕಡೆಗಳಲ್ಲಿ ಪ್ರತಿಭಟನೆ ತೋರಿದ ಉಲ್ಲೇಖಗಳು ಸಿಗುತ್ತವೆ. ಉದಾ:— 18ನೇ ಶತಮಾನದ ಪೂರ್ವಾರ್ಧದಲ್ಲಿ ಪುರುಷನ ದಬ್ಬಾಳಿಕೆಯನ್ನು ಪ್ರತಿಭಟಿಸುವ 'ಸ್ತ್ರೀ ವಿಮೋಚನಾ ಚಳುವಳಿ' ನಡೆದಿತ್ತು. ಇದರ ಮೂಲಾರ್ಥ ಪ್ರತಿಪಾದನೆ ಇಬ್ಸನ್‌ನ 'ಡಾಲ್ಸ್ ಹೌಸ್' ನಾಟಕದ ಸಾರಾಂಶ; ಕ್ರಿ.ಪೂ. 8ನೇ ಶತಮಾನದ ಹೊತ್ತಿಗೇ ಗ್ರೀಕ್ ಶ್ರೇಷ್ಠನಾಟಕಕಾರನಾದ ಯುರಿಪಿಡಿಸನ 'ಮೀಡಿಯ' ನಾಟಕದಲ್ಲಿ ಪತಿಯ ಸ್ವಾರ್ಥೋದಿತ ಪತಿತ ನಡವಳಿಕೆಗಾಗಿ ಕ್ರೋಧಗೊಂಡ ಹೆಣ್ಣು ಮೂಲಭೂತವಾಗಿ ಏನೆಲ್ಲಾ ಹಿಂಸಾ ಪ್ರವೃತ್ತಿಯಿಂದ ಸೇಡನ್ನು ತೀರಿಸಿಕೊಳ್ಳಬೇಕೋ ಅಂಥದನ್ನು ರೌದ್ರಶೈಲಿಯಲ್ಲೇ ಚಿತ್ರಿಸಿದ್ದಾನೆ.

ಇದೆಲ್ಲಾ ಪರದೇಶದ ಮಾತಾಯಿತು. ಭಾರತದಲ್ಲಿ ಸ್ತ್ರೀ ಚಳುವಳಿಗೆ ಇತಿಹಾಸಿಕ ದಾಖಲೆಗಳಿವೆಯೋ ಎಂದರೆ ಎಲ್ಲೂ ಕಾಣಲಾರದು. ವೇದಗಳ ಕಾಲದಲ್ಲಿ ಸ್ತ್ರೀ ಸ್ವಾತಂತ್ರದ ಪ್ರಶ್ನೆಯೇ ಕಾಣಬಂದಂತಿಲ್ಲ. ಗಾರ್ಗಿ, ಮೈತ್ರೇಯಿ ಈ ಮಹಿಳೆಯರೆಲ್ಲಾ ತೀರಾ ಪ್ರಗತಿಪಥದತ್ತ ಮುನ್ನಡೆದಿದ್ದುದೇ ಈ ಮಾತಿಗೆ ಸಾಕ್ಷಿ. ನಮ್ಮಲ್ಲಿ ಸ್ತ್ರೀಗೆ ಸ್ವಾತಂತ್ರ್ಯ ಅನಾವಶ್ಯಕ ಎಂಬ ಭಾವನೆಯಿದೆ. ಏಕೆಂದರೆ ಮಹಿಳೆಯನ್ನು ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಗಂಡ, ಮುಪ್ಪಿನಲ್ಲಿ ಮಗ ನೋಡಿಕೊಳ್ಳುತ್ತಾರೆ ಎಂಬುದರಿಂದ. [ಆದರೆ ಸಮಕಾಲೀನ ಮೌಲ್ಯಕ್ಕೆ ಇದು ತೀರ ವಿರೋಧಿಯಾದುದು ಎಂಬ ಮಾತು ಸತ್ಯನಿಷ್ಠ,] ಅನಾದಿಕಾಲದಿಂದ ಭಾರತೀಯ ಹೆಣ್ಣು ತನ್ನ ವ್ಯಕ್ತಿ ವಿಕಸನ ಸ್ವತಂತ್ರತೆಗೆ ಬಂಧನ ತಗುಲಿಸಿಕೊಂಡಿದ್ದಾಳೆ—ಸಾಮಾಜಿಕ ಹಾಗೂ ಧಾರ್ಮಿಕ ವಿಧಿಗಳಿಂದ. ಹೀಗೆಂದ ಮಾತ್ರಕ್ಕೆ ಹಿಂದೆ ಹೆಣ್ಣುಮಕ್ಕಳು ಮುಂದುವರಿದಿರಲಿಲ್ಲ ಎಂದಲ್ಲ. ಹೆಸರು ಪಡೆದ ಮಹಿಳೆಯರನೇಕರಿದ್ದರು. ಆದರೆ ಅವರಾರೂ ಸಾಮಾನ್ಯ ವರ್ಗದವರಲ್ಲ; ಪ್ರತಿಷ್ಠಿತ, ರಾಜಕುಟುಂಬದವರಾಗಿರುತ್ತಿದ್ದರು. ವರ್ಗವರ್ಣ ಶೋಷಣೆಯೂ ಸ್ತ್ರೀ ಶೋಷಣೆಗೆ ಮತ್ತಷ್ಟು ಪ್ರಚೋದಕವಾಗಿದೆ. ಮೇಲು

ವರ್ಗದ ಗಂಡು ಕೆಳವರ್ಗದ ಹೆಣ್ಣನ್ನು ಮೋಹಿಸುತ್ತದೆ; ಆ ಹೆಣ್ಣು ಇವನನ್ನು ಪ್ರೇಮಿಸುತ್ತದೆ; 'ಮೋಹ' 'ಪ್ರೇಮ'ಗಳಿಗೆ ಅಂತರವುಂಟು; ಈ ಅಂತರ ಆ ಹೆಣ್ಣಿಗೆ ಗೊತ್ತಾಗುವುದು ಆಕೆಗೆ ತನ್ನ ಮೋಹಿತನಿಂದ ಜಾರಿ ಶೋಷಿತಗೊಂಡಾಗಲೇ. ಜೀತ ಪದ್ಧತಿಯ ಮರೆಯಲ್ಲಿ ಯಜಮಾನನಿಂದ ಜೀತದ ಹುಡುಗಿ ಎಲ್ಲ ವಿಧದಲ್ಲೂ ಶೋಷಿತಳೇ. ಈ ಎಲ್ಲಾ ವಿಷವರ್ತುಲದಿಂದ ಹೊರಬರಬೇಕೆಂಬ ಸ್ತ್ರೀ ಸಹಜ ತೀವ್ರತೆ ಚಳುವಳಿಯ ರೂಪದಲ್ಲಿ ಜ್ವಾಲಾಮುಖಿಯಾಗಿದೆಯೇ ಎಂದು ಪ್ರಶ್ನಿಸಿ ಕೊಂಡರೆ ಉತ್ತರ ಮಾತ್ರ ವಿಪರ್ಯಾಸ; ಚಳುವಳಿಯ ಮುಂದಾಳುಗಳೆನಿಸಿ ಕೊಂಡವರೆಲ್ಲರೂ ಬಹುತೇಕ ಪ್ರತಿಷ್ಠಿತ ಮಹಿಳೆಯರೇ. ಇವರೆಲ್ಲರ ಕೂಗು ಆ ಗ್ರಾಮೀಣ ಮಹಿಳೆಗೆ ಕೇಳುವುದೇ ? ಈ ಪ್ರಶ್ನೆಗೆ ಫಲಿತಾಂಶ ತೃಪ್ತಿಕರವಾಗಿಲ್ಲ. ಚಳುವಳಿಯ ಧೋರಣೆಗಳು ಸಾಮೂಹಿಕವಾಗಿ ಒಳಗೊಳ್ಳಬೇಕಾದರೆ ಆ ಮುಂದಾ ಳುಗಳ ಮಾತು, ಕ್ರಿಯೆ, ಅಭಿವ್ಯಕ್ತಿಯಲ್ಲಿ ಸರಳವಾಗಿ ಜನರಿಗೆ ಅದರಲ್ಲೂ ಸ್ತ್ರೀಗೆ ಅಂತರ್ಯ ಮುಟ್ಟುವಂತೆ ಹೇಳುವ ಸಂವಹನ ಕಲೆ ಅಗತ್ಯ.

ಮಹಿಳಾವರ್ಷ ಸ್ತ್ರೀಗೆ ವಿಮೋಚನಾ ಸವಾಲಾಗಿರುವಂತೆಯೇ ಪುರುಷನಿಗೂ ಸಹ ಅದು ಸಮಸ್ಯಾತ್ಮಕ ಸವಾಲಾಗಿದೆ. ಏನೆಂದರೆ ಪುರುಷ ಪ್ರವೇಶಿಸಬಹುದಾದ ಸ್ಥಳಗಳನ್ನೆಲ್ಲಾ ಸ್ತ್ರೀ ಆಕ್ರಮಿಸುತ್ತಿದ್ದಾಳೆಂಬುದು. ಈ ಮಾತು ಸತ್ಯಸ್ಯಸತ್ಯ ಅಲ್ಲ. ಸ್ತ್ರೀಯ ಆಕ್ರಮಣ ಗುಣಾತ್ಮಕವಾಗಿರುತ್ತದೆಯೇ ಹೊರತು ಸಂಖ್ಯಾತ್ಮಕವಾಗಿ ಅಲ್ಲ. ಉದಾ :— ವಿದ್ಯಾಭ್ಯಾಸ ಮಟ್ಟದಲ್ಲಿ ಪುರುಷನೊಡನೆ ಹೋಲಿಸಿದಾಗ ಸ್ತ್ರೀಯ ಸಂಖ್ಯೆ ಶೇ. 6.5, ಉದ್ಯೋಗದಲ್ಲಿ ಶೇ. 6 ಹೀಗಿದೆ ಅಂದಾಜು. ಇಷ್ಟು ಅಲ್ಪ ಸಂಖ್ಯೆಯ ಸ್ತ್ರೀ ಆಕ್ರಮಣ ಪುರುಷನಿಗೆ ಸಮಸ್ಯೆ ಆಗಬೇಕಾದ್ದಿಲ್ಲ.

ಮಹಿಳೆ ಪುರುಷನನ್ನು ಎಲ್ಲ ರಂಗಗಳಲ್ಲಿಯೂ ಆಕ್ರಮಿಸಬಲ್ಲಳು. ಆದರೆ ಆಕೆಯ ದೈಹಿಕ ಹಾಗೂ ಮಾನಸಿಕ ದಾರ್ಢ್ಯತೆ ಪುರುಷನ ಸಮ ಬರಲಾರದೆಂಬುದು ನಿಜ. ಈ ಎರಡು ಅಂಶಗಳಲ್ಲಿ ಆಕೆ ಬಹುತೇಕ ಗಂಡಿಗಿಂತ ದುರ್ಬಲಳೆಂಬುದು ವೈಜ್ಞಾನಿಕ ಸತ್ಯ. ಹಿಂದೆ ಮಹಿಳೆಯರು ರಾಜ್ಯವಾಳುವುದರಿಂದ ಹಿಡಿದು ಕತ್ತಿ ಹಿಡಿದು ಕಾದಾಡಿದ್ದರು. ರಾಣಿ ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮೀಬಾಯಿ, ಕೆಳದಿ ಚೆನ್ನಮ್ಮ ಮುಂತಾದವರು ಈ ಮಾತಿಗೆ ಉಜ್ವಲ ಸಾಕ್ಷಿಗಳು. ಇಲ್ಲಿ ವಿದಿತವಾಗುವ ಒಂದಂಶವೆಂದರೆ ಇವರೆಲ್ಲಾ ರಾಜಮನೆತನದವರು. ಬಾಲ್ಯದಿಂದಲೇ ವಿಶೇಷ ವಿದ್ಯಾಭ್ಯಾಸ ಪಡೆದವರು. ಸಾಮಾಜಿಕ, ರಾಜಕೀಯ ರಂಗಗಳಲ್ಲಿ ಸೂಕ್ಷ್ಮ ಪರಿಚಯ ವಿದ್ದವರು.

ಸಾಮಾನ್ಯ ಸ್ತ್ರೀಯರು ದೈಹಿಕ ಮಾನಸಿಕ ಸ್ಥೈರ್ಯ ಸಬಲೆಯಾಗಿದ್ದರು; ಆ ದಿಸೆಯಲ್ಲಿ ದಿಟ್ಟ ಹೆಜ್ಜೆಯಿಟ್ಟು ಹೋರಾಡಬಲ್ಲಂಥವರಾಗಿದ್ದರೆಂಬುದೂ ವ್ಯಕ್ತ ಗೊಳ್ಳುತ್ತದೆ. ಇದಕ್ಕೆ ಜೀವಂತ ಸಾಕ್ಷಿ ಎಂದರೆ ಒನಕೆ ಓಬವ್ವ. 'ಮಾಸ್ತಿಗಲ್ಲು'

ಗಳಂತೂ ಸ್ತ್ರೀಯರ ಅತಿಶಯವಾದ ಹಿರಿಮೆಯ ಮಹಾಸತಿ ಗುಣವನ್ನು, ಅದರ ಹಿಂದಿರುವ ಧೈರ್ಯವನ್ನು ಹೇಳುತ್ತದೆಯಾದರೂ ಸಹಗಮನ ಪದ್ಧತಿ ಸ್ತ್ರೀ ಸ್ವಾತಂತ್ರ್ಯವನ್ನು ಕಡೆಗೆ ಗಂಡ ಸತ್ತನಂತರ ಅವನ ಹೆಣ್ಣು ಜೀವಿಸಲಾಗದೆಂದು ಆಕೆಯ ಜೀವಿತ ಸ್ವಾತಂತ್ರ್ಯವನ್ನೂ ಕಿತ್ತುಕೊಂಡ ಅತಿ ಭಯಾನಕವಾದ ಧಾರ್ಮಿಕ ಮರೆಸು ತೊಟ್ಟ ಶೋಷಿತ ಕ್ರಿಯೆಯೇ ಹೌದು. ಇದನ್ನು ತೀವ್ರವಾಗಿ ವಿರೋಧಿಸಿದ ಗಾಂಧೀಜಿಯವರು ತುಂಬ ಅಭಿನಂದನಾರ್ಹರು. ಮಹಿಳೆಯ ಕೈ ಖಡ್ಗ ಹಿಡಿಯುವು ದಲ್ಲದೆ, ಆ ಖಡ್ಗಕ್ಕೆ ಬಲಿಯಾಗಿಸಿಕೊಂಡುದರ ಅಪೂರ್ವ ಅನುಭವಗಳನ್ನೂ ಲೇಖಣಿ ಯಿಂದ ಹಿಡಿದಿಡುತ್ತಿತ್ತು ಎಂಬುದರ ಪ್ರತೀಕದಂತಿದೆ – ಗಂಗಾಂಬಿಕೆಯ ವೀರಕಂಪಣ ರಾಯ ಚರಿತೆ.

ಸಾಮೂಹಿಕವಾಗಿ ದೇಶರಕ್ಷಣೆಯಲ್ಲಿ ಪಾಲ್ಗೊಂಡು ಇತಿಹಾಸ ಪುಟದಲ್ಲಿ ವರ್ಣ ರಂಜಿತ ಸ್ಥಾನವನ್ನೂ ಸ್ತ್ರೀ ಸಮುದಾಯ ಪಡೆದಿದೆ ಎಂಬುದು ಶ್ಲಾಘನೀಯ ವಿಷಯ. ಈ ಅಂಶದಲ್ಲಿ ರಷ್ಯಕ್ಕೆ ಪ್ರಥಮ ಸ್ಥಾನ; ಸಂದರ್ಭ – ಹಿಟ್ಲರ್ ಲೆನಿನ್‌ಗ್ರಾಡನ್ನು ಮುತ್ತಿದಾಗ ನಿದ್ರಾಹಾರ ತೊರೆದು ಹೋರಾಡಿದ ವಿರೋಚಿತ ಕರುಣಾದ್ರ ಕತೆ; ನಂತರ ಭಾರತೀಯ ಸ್ತ್ರೀಗೆ; ಸನ್ನಿವೇಶ – ಬ್ರಿಟಿಷರ ವಿರುದ್ಧ ನಡೆದ ಸ್ವಾತಂತ್ರ್ಯ ಸಂಗ್ರಾಮದಲ್ಲಿ. ಇಂಥ ಉದಾಹರಣೆಗಳು ವಿರಳವಾದರೂ ಅಮೂಲ್ಯವಾದವು. ಇಂಥಲ್ಲೆಲ್ಲಾ ಮಹಿಳೆ ಸಾಮಾಜಿಕ ಕಟ್ಟು ಬಂಧನದಿಂದಾಚೆ ಧುಮುಕಿದವಳು; ಅವಳಿಟ್ಟ ಹೆಜ್ಜೆ ಅವಳ ಒಂದೊಂದೂ ಪ್ರಗತಿ ಸೂಚಕವಾದುದು. ಆದರೂ ಪಿತೃಪ್ರಧಾನ ಭಾರತೀಯ ಸಮಾಜದಲ್ಲಿ ಸ್ತ್ರೀ "ಮಾತೃದೇವೋ ಭವ". "ಯತ್ರ ನಾರ್ಯಸ್ತು ಪೂಜ್ಯಂತೇ..." ಮುಂತಾದ ಪೂಜ್ಯಭಾವನಾ ಸೂಚಕವಾದ ಸುಂದರ ಪದಗಳ ಮರೆಯಲ್ಲಿ ವ್ಯಕ್ತಿ ವಿಶಿಷ್ಟತೆ ಇಲ್ಲದೆ ಹುದುಗಿಹೋಗಿದ್ದಾಳೆ; ಇಂಥ ಸಪುರ ನಾಗರಿಕ ಭಾವನೆಗಳೂ ಸ್ತ್ರೀ ಸ್ವತಂತ್ರತೆಗೆ ಸವಾಲಾಗಿವೆ.

ಇಂದಿನ ರಾಜಕೀಯದಲ್ಲಿ ಪ್ರಧಾನ ಪಾತ್ರವನ್ನು ಸ್ತ್ರೀಯರು ವಹಿಸಿದ್ದಾರೆ. ಆದರೆ ಇವರೂ ಸಹ ರಾಜಕೀಯ, ಆರ್ಥಿಕ, ಸಾಮಾಜಿಕ ವಲಯಗಳಲ್ಲಿ ಉನ್ನತ ವರ್ಗದಿಂದ ಬಂದಂಥವರು. ಇಂದು ಹಿಂದುಳಿದ ಜನಾಂಗಗಳಿಗೆ ಅದರಲ್ಲೂ ಸ್ತ್ರೀಯರಿಗೆ ಪ್ರಗತಿ ಹೊಂದಲು, ಮುಂಬರಲು ಉತ್ತೇಜಕಾರಿ ಸವಲತ್ತುಗಳು ಕಾದುಕೊಂಡಿವೆ; ಆ ಸವಲತ್ತುಗಳನ್ನು ಸ್ತ್ರೀಯರನೇಕರು ತೃಪ್ತಿಕರವಾಗಿ ಸದುಪ ಯೋಗಪಡಿಸಿಕೊಂಡಿಲ್ಲ. ಅನೇಕ ಕುಟುಂಬಗಳಲ್ಲಿ ಒಂದು ಗಂಡು ಸಂಪಾದಿಸಿದರೆ, ಹತ್ತು ಹೆಣ್ಣು ಕುಳಿತುಣ್ಣುತ್ತವೆ; ದಿನವಿಡೀ ಈ ಹೆಣ್ಣು ಶಕ್ತಿ ವ್ಯಯವಾಗುತ್ತದೆ. ಇದಕ್ಕೆ ಅಪವಾದವೆಂದರೆ ತೀರ ಹಿಂದುಳಿದ ಹಾಗೂ ತೀರ ಮುಂದುವರಿದ ವರ್ಗ ದವರು. ಮಧ್ಯಮ ವರ್ಗದವರು ಸದುಪಯೋಗಿಯಾಗಿ ಕಾಲ ಕಳೆಯದಿರಲು ಕಾರಣ – ಸಮಾಜ ಎಂಬುದಕ್ಕಿಂತಲೂ ಬಹುತೇಕ ರೂಢಿಗತವಾದ ಆಲಸಿಕೆ ಎನ್ನ

ಬಹುದೇನೋ ... ಇವರು ಅಕ್ಷರಸ್ಥರಿರುತ್ತಾರೆ ... ದೈಹಿಕ ಶಕ್ತಿಯನ್ನು ವ್ಯಯ ಮಾಡುತ್ತಾರೆ...

ಗ್ರಾಮೀಣ ಮಹಿಳೆಯರು ದೈಹಿಕ ಶಕ್ತಿಯನ್ನು ಉಪಯೋಗಿಸಿಕೊಳ್ಳುತ್ತಾರೆ. ಆದರೆ ಅಕ್ಷರಸ್ಥರಾಗಿರುವುದಿಲ್ಲ. ಈ ಎರಡೂ ಗುಂಪಿನವರಿಗೆ ಚಿಂತನೆಯೂ ಮುಖ್ಯ; ಕ್ರಿಯೆಯೂ ಅಗತ್ಯ. ಅಂದರೆ ತಾವು ಮಾಡುವ ಪ್ರತಿಯೊಂದು ಕೆಲಸದ ಬಗ್ಗೆ, ತಮ್ಮ ಬಗ್ಗೆ ತಾವೇ ಯೋಚಿಸಿ ನಿರ್ಣಯ ತೆಗೆದುಕೊಳ್ಳುವಂಥವರಾಗಬೇಕು. ಹೀಗಾಗಬೇಕಾದಾಗ ಮೊದಲು ಅರ್ಥ ಶೂನ್ಯವಾದ ಮೂಢ ನಂಬಿಕೆಗಳನ್ನು ಬಿಡಬೇಕು. ಸ್ವಯಂ ಆಲೋಚನೆಯಿಂದ ಕಾರ್ಯ ಪ್ರವೃತ್ತರಾಗುವುದನ್ನು, ತಿಳುವಳಿಕೆಯನ್ನು ಪಡೆಯಬೇಕು. ನಾಲ್ಕು ಗೋಡೆಯ ನಡುವಿನ ಒಣ ಹವೆಗಿಂತ ಹಸಿರು ಬಯಲ ಹಿತಕರ ಗಾಳಿಗೆ ಮೈಯೊಡ್ಡುವುದು ಆರೋಗ್ಯಕರ ಲಕ್ಷಣ. ಈ ಪ್ರವೃತ್ತಿ ಸ್ತ್ರೀಯರದಾಗಬೇಕು. ಮಹಿಳಾ ವರ್ಷದಲ್ಲಿ ಮೊದಲು ಆಗಬೇಕಾದುದೇ ಇದು. ಮಹಿಳೆಗೆ ತಮ್ಮ ಇರವಿನ ಅರಿವಾಗಬೇಕು. ನಂತರ ಉಳಿದವು. ಏಕೆಂದರೆ ಅರಿವೇ ಗುರು. ಮಹಿಳಾವರ್ಷ ಎಂದು ಕೂಗಾಡುವ ಪ್ರತಿಷ್ಠಿತ ಹೆಣ್ಣು ಮಕ್ಕಳ ಕೂಗು ಅರ್ಥಪೂರ್ಣವಾಗಬೇಕು. ವಿದ್ಯಾವಂತ ಉನ್ನತ ವರ್ಗದ ಮಹಿಳೆಯರು ಪ್ರಗತಿ ಹೊಂದಿದರೆ ಸಾಲದು; ಅವರುಗಳು ಯಾವಾಗಲೋ ಪ್ರಗತಿ ಪಥದತ್ತ ನಡೆದುಬಿಟ್ಟಿರುತ್ತಾರೆ. ಅದಕ್ಕೆ ಮಹಿಳಾವರ್ಷವೇ ಆಗಬೇಕಿಲ್ಲ. ಈ ಚಳುವಳಿಯ ನಿಜವಾದ ಆಂತರ್ಯವಾಗಬೇಕಾದ್ದೆಂದರೆ, ಮಧ್ಯಮ, ಹಿಂದುಳಿದ, ಗ್ರಾಮೀಣ ಸ್ತ್ರೀಯರನ್ನು ಅವರವರ ಸಮಸ್ಯೆಗಳಿಗೆ ಅನುವಾಗಿ ಸವಾಲಿನ ಮೂಲಕ ಆ ತೊಡಕುಗಳನ್ನೆಲ್ಲಾ ನಿವಾರಿಸಿ ಸಾಮೂಹಿಕವಾಗಿ ಸ್ತ್ರೀ, ಜನಾಂಗದ ಜಾಗೃತಾವಸ್ಥೆ.

ಮಹಿಳೆಗೆ ತಾನು ಪುರುಷನ ಸಮಳಾಗಲಾರೆನೆಂಬ ಸ್ವೇಚ್ಛಾನುಸಂಧಾನತೆ ತಪ್ಪಬೇಕು; ಹೀಗಾಗಬೇಕಾದಾಗ ಆತ್ಮ ವಿಶ್ವಾಸ ಮುಖ್ಯವಾಗುತ್ತದೆ. ಪುರುಷನಿಗೂ ಸ್ತ್ರೀ ತನ್ನನ್ನು ಎಲ್ಲ ವಿಧದಿಂದ ಆಕ್ರಮಿಸುತ್ತಿದ್ದಾಳೆಂಬ ಸಾತ್ವಿಕ ಮತ್ಸರಕೂಡದು. ಇದರ ನಿವಾರಣೆಯ ಮೂಲ ಕೂಡ ಆತ್ಮವಿಶ್ವಾಸ; ಇದೊಂದೇ ಗಂಡು. ಹೆಣ್ಣನ್ನು ತಾನು ಏನು, ತನ್ನ ಸ್ಥಾನಮಾನ ಏನು ? ಕೊರತೆಗಳೇನು ತನ್ನ ಕುಂದುಗಳಿಗೆ ಹೀಗೆ ಕಿವಿಗೊಡಬೇಕು..., ಇತ್ಯಾದಿ ಇತ್ಯಾದಿಗಳ ಮನಗಾಣಿಸುತ್ತದೆ; ತಂತಾನೇ ಸ್ಥಾನಮಾನ ದೊರಕಿಸುತ್ತದೆ. ಒಟ್ಟಾರೆ ಇಬ್ಬರೂ ಕಾರ್ಯ ಸಾಧನೆಯಲ್ಲಿ ಕುರಿಯುವಂತೆ ಮಾಡುತ್ತದೆ. ಬುದ್ಧಿ ಜೀವಿಗಳಾರೂ ಸ್ವತಂತ್ರತೆ ಸಮಸ್ಯೆಯಾಗಿಸಿಕೊಂಡವರಲ್ಲ. ವಿಪರ್ಯಾಸವೆಂದರೆ ಯಾಂತ್ರಿಕ ಯುಗದಲ್ಲಿ ಎಷ್ಟು ಮಂದಿ ಬುದ್ಧಿಜೀವಿಗಳಾದರೆಂಬುದು ? ಇದು ಪುರುಷನಿಗೆ ಸವಾಲಾಗಿರುವಂತೆ ಸ್ತ್ರೀಗೂ ಸವಾಲಾಗಿದೆ. ಸ್ತ್ರೀ ಇದನ್ನು ಎದುರಿಸಬಲ್ಲಳೇ ಎಂಬುದನ್ನು ಕಾದು ನೋಡಬೇಕಾಗಿದೆ.

# ಸಂಪಾದಕೀಯ

'ಸಾಧನೆ' ತನ್ನ ಯಶಸ್ವಿಯಾದ ನಾಲ್ಕು ವರ್ಷಗಳನ್ನು ಮುಗಿಸಿ, ಐದನೆಯ ವರ್ಷಕ್ಕೆ ಹೆಜ್ಜೆಯಿಡುವ ಈ ಸಂದರ್ಭದಲ್ಲಿ, ನಾಲ್ಕನೆಯ ವರ್ಷದ ಕಡೆಯ ಸಂಚಿಕೆ 'ಅಂತರ್ ರಾಷ್ಟ್ರೀಯ ಮಹಿಳಾ ವರ್ಷದ ನೆನಪಿನ ವಿಶೇಷ ಸಂಚಿಕೆ'ಯಾಗಿ ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ. ಈ ಸಂಚಿಕೆ ಮುಖ್ಯವಾಗಿ ಬಹು ಮಂದಿ ಮಹಿಳೆಯರ ಲೇಖನಗಳಿಂದ ಕೂಡಿರುವುದಲ್ಲದೆ, ಈ ಹಲವು ಲೇಖನಗಳಲ್ಲಿ ಕಂಡು ಬರುವ ವೈಚಾರಿಕ ನಿಲುವು ವಿಶೇಷ ರೀತಿಯ ಎಚ್ಚರದ ಪ್ರತೀಕವೂ ಆಗಿದೆ ಎನ್ನುವುದು ಗಮನಿಸಬೇಕಾದ ಸಂಗತಿಯಾಗಿದೆ.

'ಸಾಧನೆ' ಯಾವತ್ತೂ, ಎಲ್ಲ ರೀತಿಯ ನಿಜವಾದ ಲೇಖನಗಳ ಪ್ರಕಟಣೆಗೆ ಒಂದು ಮುಕ್ತವೇದಿಕೆಯಂತೆ ಕೆಲಸ ಮಾಡುತ್ತ ಬಂದಿದೆ. ಕೇವಲ ನಾಲ್ಕು ವರ್ಷಗಳಲ್ಲಿ ಈ ತ್ರೈಮಾಸಿಕವು, ತನ್ನ ಅಂತರಂಗದ ಹುರುಳಿನಿಂದ ಮತ್ತು ಬಹಿರಂಗದ ಸೊಗಸಿನಿಂದ ಕನ್ನಡ ವಿಚಾರವಂತರ ಗಮನವನ್ನು ಗೌರವವನ್ನು ಗೆದ್ದುಕೊಂಡು, ಬಹು ಸಂಖ್ಯೆಯ ಚಂದಾದಾರರ ಕೈ ಸೇರಿ, ತನ್ನ ಸ್ಥಾನವನ್ನು ಸುಭದ್ರಗೊಳಿಸಿಕೊಂಡಿದೆ. ಆದರೆ ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಅರಿವಿನ ಅನೇಕ ಮುಖಗಳ ಅಭಿವ್ಯಕ್ತಿ ಸಮರ್ಥರಾದವರಿಂದ ಇದರ ಮೂಲಕ ಇನ್ನೂ ಆಗಬೇಕಾಗಿದೆ ಎಂಬ ಅಂಶವನ್ನು ನಾವು ಮರೆತಿಲ್ಲ. 'ಸಾಧನೆ' ವಾಸ್ತವವಾಗಿ ಬೆಂಗಳೂರು ವಿಶ್ವವಿದ್ಯಾಲಯದ ಸಾಧನೆಯ ಸಂಕೇತವೂ ಆಗಬೇಕಾಗಿದೆ. ಈ ದಿಕ್ಕಿನಲ್ಲಿ ಎಲ್ಲರ ನೆರವನ್ನೂ, ಸಹಕಾರವನ್ನೂ ನಾವು ಕೋರುತ್ತೇವೆ.

**ಸಂತಾಪ**

ಇದೇ ಸಂದರ್ಭದಲ್ಲಿ ಕನ್ನಡ ಸಾರಸ್ವತ ಲೋಕದ ಮಹಾ ವಿದ್ವಾಂಸರುಗಳಾದ ಡಾ. ಡಿ. ವಿ. ಗುಂಡಪ್ಪ, ಡಾ. ಎ. ಎನ್. ಉಪಾಧ್ಯೆ ಮತ್ತು ಡಾ. ಎಸ್. ಸಿ. ನಂದೀಮಠ ಇವರ ನಿಧನಕ್ಕಾಗಿ 'ಸಾಧನೆ' ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಡಾ. ಡಿ. ವಿ. ಜಿ. ಯವರು ಕನ್ನಡ ನಾಡಿನ ರಾಜಕೀಯ, ಶೈಕ್ಷಣಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅಮೋಘವಾದ ಕೆಲಸವನ್ನು ಮಾಡಿದವರು. ಡಾ. ಆದಿನಾಥ ನೇಮಿನಾಥ ಉಪಾಧ್ಯೆಯವರು ಅಂತರ ರಾಷ್ಟ್ರೀಯ ಖ್ಯಾತಿಯನ್ನು ಪಡೆದ ಘನ ವಿದ್ವಾಂಸರು. ಸಂಸ್ಕೃತ-ಪ್ರಾಕೃತ ಮತ್ತು ಕನ್ನಡ ಭಾಷೆಗಳಲ್ಲಿ ಅವರು ನಡೆಯಿಸಿದ

ಕೃಷಿ ಬೆರಗುಗೊಳಿಸುವಂಥದು. ಡಾ. ಎಸ್. ಸಿ. ನಂದೀಮಠ ಅವರು ಸಾಹಿತ್ಯ, ಧರ್ಮ, ಭಾಷಾ ವಿಜ್ಞಾನ, ಇತಿಹಾಸ, ಶಾಸನ ಶಾಸ್ತ್ರ, ಗ್ರಂಥ ಸಂಪಾದನೆ ಇತ್ಯಾದಿ ವಿವಿಧ ವಿಷಯಗಳಲ್ಲಿ ಮಾಡಿರುವ ಕೆಲಸ ಅಮೂಲ್ಯವಾದುದು. ಈ ಮೂವರು ಮಹನೀಯರ ನಿಧನದಿಂದ ಕರ್ನಾಟಕಕ್ಕೆ ಅಪಾರ ನಷ್ಟವಾಗಿದೆ. ಇವರುಗಳ ನಿಧನಕ್ಕಾಗಿ 'ಸಾಧನೆ' ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

**ಅಭಿನಂದನೆ**

ಕನ್ನಡದ ಪ್ರಮುಖ ಕಾದಂಬರಿಕಾರರಾದ ಡಾ. ಎಸ್. ಎಲ್. ಭೈರಪ್ಪನವರ 'ದಾಟು' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕ್ಯಾಡೆಮಿ ಪ್ರಶಸ್ತಿ ಲಭಿಸಿದ ಈ ಸಂದರ್ಭದಲ್ಲಿ, 'ಸಾಧನೆ' ಡಾ॥ ಭೈರಪ್ಪನವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

ಸಂಪಾದಕರು

**ಈ ಸಂಚಿಕೆಯ ಲೇಖಕರು**


| | |
|---|---|
| ಆರ್. ಪೂರ್ಣಿಮಾ | ಕನ್ನಡ ಅಧ್ಯಯನ ಕೇಂದ್ರ,<br>ಬೆಂಗಳೂರು ವಿಶ್ವವಿದ್ಯಾಲಯ,<br>ಜ್ಞಾನಭಾರತಿ, ಬೆಂಗಳೂರು 550056 |
| ಎಂ. ಎಸ್. ಶ್ರೀನಿವಾಸ್ | ಸಾಮಾಜಿಕ ಮತ್ತು ಆರ್ಥಿಕ ಬದಲಾಣೆಯ<br>ಅಧ್ಯಯನ ಸಂಸ್ಥೆ,<br>ಬೆಂಗಳೂರು 560009 |
| ಟಿ. ಆರ್. ಶ್ಯಾಮಭಟ್ಟ | ಆಚಾರ್ಯ ಪಾಠಶಾಲಾ ಕಾಲೇಜು,<br>ಬೆಂಗಳೂರು 560019 |
| ಬಿ. ಶಶಿಧರ | ಸಹಾಯಕ ಸಂಶೋಧಕ, ಶಿಕ್ಷಣ ವಿಭಾಗ,<br>ಬೆಂಗಳೂರು ವಿಶ್ವವಿದ್ಯಾಲಯ,<br>ಬೆಂಗಳೂರು 560056 |
| ಜಗದ್ಗುರು ಮಾತೆ ಮಹಾದೇವಿ | ವಿಶ್ವಕಲ್ಯಾಣಿ ಮಿಷನ್ ನಂ. 24, ಕಾರ್ಡ್<br>ರೋಡ್, 2ನೇ ಬ್ಲಾಕ್ ರಾಜಾಜಿನಗರ<br>ಬೆಂಗಳೂರು 560010 |
| ಹು. ಕಾ. ಜಯದೇವ್ | ರೀಡರ್, ಕನ್ನಡ ಅಧ್ಯಯನ ಕೇಂದ್ರ,<br>ಬೆಂಗಳೂರು ವಿಶ್ವವಿದ್ಯಾಲಯ<br>ಬೆಂಗಳೂರು 560056 |
| ಯು. ಎಸ್. ಕೃಷ್ಣರಾವ್ | 'ಮಹಾಮಾಯಾ' 7–2ಎ ಪ್ಯಾಲೆಸ್<br>ಅಡ್ಡರಸ್ತೆ, ಬೆಂಗಳೂರು 560020 |
| ಆರ್. ಜಿ. ವಿಜಯಸಾರಥಿ | 675, 3ನೇ ಬ್ಲಾಕ್,<br>ರಾಜಾಜಿನಗರ, ಬೆಂಗಳೂರು 560010 |
| ಕಮಲಾ ಹಂಪನಾ | ಕನ್ನಡ ವಿಭಾಗ, ಮಹಾರಾಣಿಯವರ<br>ಕಾಲೇಜು, ಬೆಂಗಳೂರು 560001 |

| | |
|---|---|
| ಎಸ್. ಶಿವಣ್ಣ | ಕನ್ನಡ ಅಧ್ಯಯನ ಕೇಂದ್ರ,<br>ಬೆಂಗಳೂರು ವಿಶ್ವವಿದ್ಯಾಲಯ |
| ಬಿ. ಎಸ್. ವೆಂಕಟಲಕ್ಷ್ಮಿ | 43ನೇ ವೆಸ್ಟ್‌ಪಾರ್ಕ್ ರಸ್ತೆ,ಮಲ್ಲೇಶ್ವರಂ<br>ಬೆಂಗಳೂರು 560003 |
| ಎನ್. ವಿ. ವಿಮಲ | ಕನ್ನಡ ಅಧ್ಯಯನ ಕೇಂದ್ರ,<br>ಬೆಂಗಳೂರು ವಿಶ್ವವಿದ್ಯಾಲಯ 560056 |
| ವೈ. ಕೆ. ಸಂಧ್ಯಾ | 365 11ನೇ ಕ್ರಾಸ್, 2ನೇ ಬ್ಲಾಕ್,<br>ಜಯನಗರ, ಬೆಂಗಳೂರು 560011 |
| ಚಿ. ನ. ಮಂಗಳಾ | ಪ್ರಿನ್ಸಿಪಾಲ್,<br>ಎನ್. ಎಂ. ಕೆ. ಆರ್. ವಿ. ಕಾಲೇಜು,<br>ಜಯನಗರ, ಬೆಂಗಳೂರು 560011 |
| ಆರ್ಯಾಂಬ ಪಟ್ಟಾಭಿ | 1239, ಕೃಷ್ಣಮೂರ್ತಿಪುರಂ,<br>ಮೈಸೂರು 4 |
| ವಸಂತ ವೆಂಕಟರಂಗನ್ | 163, ಮಹಡಿ 3ನೇ ಕ್ರಾಸ್,<br>ಹನುಮಂತನಗರ, ಬೆಂಗಳೂರು 560019 |
| ಡಾ॥ ಅನುಪಮಾ ನಿರಂಜನ | 515, 49ನೇ ಕ್ರಾಸ್ 7ನೇ ಮೈನ್,<br>5ನೇ ಬ್ಲಾಕ್, ಜಯನಗರ<br>ಬೆಂಗಳೂರು 560011 |
| ಡಾ॥ ಶಮಂತಕಮಣಿ ನರೇಂದ್ರನ್ | 1-1 ಬಸಪ್ಪ ಲೇ ಔಟ್ ಗವೀಪುರಂ<br>ವಿಸ್ತರಣ, ಬೆಂಗಳೂರು 19 |
| ವಿಜಯಾ | ಪತ್ರಕರ್ತೆ, 537, 7ನೇ ಮೈನ್,<br>ಹನುಮಂತರ ನಗರ,<br>ಬೆಂಗಳೂರು 560019 |
| ಕೆ. ರಾಜೇಶ್ವರಿ | 36, 2ನೇ ಮಹಡಿ,<br>ಸಂಜೀವನಾಯಕನಗಲ್ಲಿ,<br>ಬೆಂಗಳೂರು 560002 |
| ಶೈಲಜಾ ಉಡಚಣ | ರೀಡರ್ ಮತ್ತು ವಿಭಾಗದ ಮುಖ್ಯಸ್ಥರು,<br>ಕನ್ನಡ ವಿಭಾಗ, ಮಹಾರಾಣಿ ಕಾಲೇಜು<br>ಮೈಸೂರು |

ಎನ್. ವಿ. ಭಾಗ್ಯಲಕ್ಷ್ಮಿ
ಸಂಶೋಧನಾಧಿಕಾರಿ,
ಭಾಷಾ ನಿರ್ದೇಶನಾಲಯ,
63, ಅರಮನೆ ರಸ್ತೆ,
ಬೆಂಗಳೂರು 560052

ಪಿ. ವಿ. ಅಜಿತಾ
1031, 'ಶ್ರೀಹರಿನಿವಾಸ',
ಬನಶಂಕರಿ 1ನೇ ಘಟ್ಟ, ಶ್ರೀನಗರ,
ಬೆಂಗಳೂರು 560050

## ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ

| | | | |
|---|---|---|---|
| ಸಂಪುಟ 1 | ಕನ್ನಡ ಸಾಹಿತ್ಯ ಸಮೀಕ್ಷೆ | ... | ಜಿ. ಎಸ್. ಶಿವರುದ್ರಪ್ಪ |
| ಸಂಪುಟ 2 | ಶಾಸನ ಮತ್ತು ಗದ್ಯ | ... | ಹು. ಕಾ. ಜಯದೇವ್ |
| ಸಂಪುಟ 3 | ಶಾಸ್ತ್ರ ಸಾಹಿತ್ಯ | ... | ಎಂ. ವಿ. ಸೀತಾರಾಮಯ್ಯ |
| ಸಂಪುಟ 4 | ಚಂಪೂ ಕವಿಗಳು | ... | ಟಿ. ವಿ. ನಾರಾಯಣ |
| ಸಂಪುಟ 5 | ವಚನ ಸಾಹಿತ್ಯ | ... | ಎಂ. ಚಿದಾನಂದ ಮೂರ್ತಿ |
| ಸಂಪುಟ 6 | ಷಟ್ಪದಿ ಸಾಹಿತ್ಯ | ... | ಕೆ. ಮರುಳಸಿದ್ದಪ್ಪ |
| ಸಂಪುಟ 7 | ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ | ... | ಕಾಳೇಗೌಡ ನಾಗವಾರ |
| ಸಂಪುಟ 8 | ಕೀರ್ತನಕಾರರು | ... | ಎಚ್. ಎಸ್. ವೆಂಕಟೇಶ ಮೂರ್ತಿ |
| ಸಂಪುಟ 9 | ಸಾಂಗತ್ಯ ಕವಿಗಳು | ... | ಹಂಪ. ನಾಗರಾಜಯ್ಯ |
| ಸಂಪುಟ 10 | ಹೊಸಗನ್ನಡ ಸಾಹಿತ್ಯ | ... | ಎಲ್. ಎಸ್. ಶೇಷಗಿರಿ ರಾವ್ |

ಪ್ರತಿ ಸಂಪುಟದ ಬೆಲೆ: ರೂ. 4-00

14-1-1976 ರೊಳಗಾಗಿ ಎಲ್ಲ ಸಂಪುಟಗಳನ್ನೂ ಒಟ್ಟಿಗೆ ಕೊಳ್ಳುವವರಿಗೆ ಶೇ. 25 ರಷ್ಟು ವಿಶೇಷ ರಿಯಾಯಿತಿ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು